JJ-51
GSS
(B) 252298(1)

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೨ನೇ ಅಧಿವೇಶನ
2ND SESSION

ಸಂಪುಟ – ೪ (ಕ್ರಮಾಂಕ – ೧ ಮತ್ತು ೩)
Volume - 4 (No. 1 & 3)

(೧೯, ೨೦ ಮತ್ತು ೨೪ನೇ ಫೆಬ್ರವರಿ ೨೦೦೯)
(19th, 20th and 24th February 2009)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 25229-1

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೨ನೇ ಅಧಿವೇಶನ

2ND SESSION

ಸಂಪುಟ - ೪ (ಕ್ರಮಾಂಕ - ೧ ಮತ್ತು ೩)

Volume - 4 (No. 1 & 3)

(೧೯, ೨೦ ಮತ್ತು ೨೪ನೇ ಫೆಬ್ರವರಿ ೨೦೦೯)

(19th, 20th and 24th February 2009)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಹದಿಮೂರನೇ ವಿಧಾನ ಸಭೆ
ಎರಡನೇ ಅಧಿವೇಶನ
ಶ್ರೀ ಜಗದೀಶ್ ಶೆಟ್ಟರ್
ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನ)
ಗುರುವಾರ 19ನೇ ಫೆಬ್ರವರಿ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 12 ಗಂಟೆ 55 ನಿಮಿಷಗಳಿಗೆ ಸಮಾವೇಶಗೊಂಡಿತು

ಅಧ್ಯಕ್ಷರಾದ **ಶ್ರೀ ಜಗದೀಶ್ ಶೆಟ್ಟರ್** ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

ವಿಷಯಾನುಕ್ರಮಾಣಿಕೆ – 19-02-2009

ಸರದಿ ಸಂಖ್ಯೆ

ಸಂತಾಪ ಸೂಚನೆ: 01-09

ವಿಷಯ: ಶ್ರೀ ಆರ್.ವೆಂಕಟರಾಮನ್, ಮಾಜಿ ರಾಷ್ಟ್ರಪತಿಗಳು ಹಾಗೂ ಇತರರು ನಿಧನ ಕುರಿತು:

ಶ್ರೀ ಸಿ.ಎಂ.ಉದಾಸಿ(ಮಾನ್ಯ ಲೋಕೋಪಯೋಗಿ ಸಚಿವರು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

ಪ್ರಶ್ನೋತ್ತರಗಳು: 09-97

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು:

ಶ್ರೀ ಸಿದ್ದು ಸವದಿ

ಶ್ರೀ ಧ್ರುವನಾರಾಯಣ್.ಆರ್

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಶ್ರೀ ರೋಷನ್ ಬೇಗ್.ಆರ್

ಶ್ರೀ ಟಿ.ಬಿ.ಜಯಚಂದ್ರ

ಶ್ರೀ ಹೆಚ್.ಗೋಪಾಲ ಭಂಡಾರಿ

ಶ್ರೀ ಎ.ಎಸ್.ಪಾಟೀಲ್

ಶ್ರೀ ವೈ.ಎಸ್.ರುದ್ರೇಶ್‌ಗೌಡ

ಶ್ರೀ ಹೆಚ್.ಸಿ.ಬಾಲಕೃಷ್ಣ

ಶ್ರೀ ಕೆ.ಎಂ.ಶಿವಲಿಂಗೇಗೌಡ

ಶ್ರೀ ಯು.ಟಿ.ಖಾದರ್

ಆ) ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು: 97-98

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚಿ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳ ವರದಿ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ 98-109

1. ವಿಷಯ:ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ

ಸಭಾಧ್ಯಕ್ಷರ ತೀರ್ಪು: 109–110
ವಿಷಯ: ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆಯ ಬಗ್ಗೆ ನೀಡಿದ್ದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅನುಮತಿ ನೀಡಿರುವ ಬಗ್ಗೆ.

ನಿಯಮ 69ರ ಅಡಿಯಲ್ಲಿ ಅಲ್ಪಕಾಲಾವಧಿ ಚರ್ಚೆ: 110–112
ವಿಷಯ: ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ
ಶ್ರೀ ಮಲ್ಲಿಕಾರ್ಜುನ ಖರ್ಗೆ
ಶ್ರೀ ಟಿ.ಬಿ.ಜಯಚಂದ್ರ
ಶ್ರೀ ಡಿ.ಕೆ.ಶಿವಕುಮಾರ್
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು
ಶ್ರೀ ಬಸವರಾಜ ಬೊಮ್ಮಾಯಿ

2. **ಅನುಬಂಧ** 182–384

ದಿನಾಂಕ:20.02.2009

ವಿಷಯಾನುಕ್ರಮಣಿಕೆ

1. 2009–2010ನೇ ಸಾಲಿನ ಆಯವ್ಯಯ ಮಂಡನೆ. 385–480
– ಶ್ರೀ.ಬಿ.ಎಸ್.ಯಡಿಯೂರಪ್ಪ
(ಮುಖ್ಯಮಂತ್ರಿಗಳು)

2. **English version of the Budget Speech.** 480-569
(ಅನುಬಂಧ–1)

3. ಮಧ್ಯಾಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 569–612
(2009–2013)
(ಅನುಬಂಧ–2)

12-30 pm

ಆಯವ್ಯಯ ಮಂಡನೆ

ಕರ್ನಾಟಕ ವಿಧಾನ ಸಭೆ
ವಿಷಯಾನುಕ್ರಮಣಿಕೆ
ಮಂಗಳವಾರ 24-02-2009

ಕ್ರಮ
ಸಂಖ್ಯೆ 613-613

1.ಸಂತಾಪ ಸೂಚನೆ:
ವಿಷಯ: ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ಎಸ್.ಕರ್ಜಗಿ ಅವರ ನಿಧನದ ಕುರಿತು.
ಮಾನ್ಯ ಸಭಾಧ್ಯಕ್ಷರು 613-616

2. ಪ್ರಕಟಣೆ:
(i) ವಿಷಯ: ಬೀದರ್ ವಿಧಾನಸಭಾ ಕ್ಷೇತ್ರದಿಂದ 13ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ವಿಧಾನಸಭೆ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿರುವ ಬಗ್ಗೆ.
(ii) ವಿಧಾನಸಭಾ ಸದಸ್ಯರಾದ ಶ್ರೀ ತಸ್ವೀರ್ ಸೇಠ್ ಅವರ ದಸ್ತಗಿರಿ ಬಗ್ಗೆ. 616-688

3. ಪ್ರಶ್ನೋತ್ತರಗಳು:
ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು
ಶ್ರೀ ಹೆಚ್.ಗೋಪಾಲ ಭಂಡಾರಿ
(ಪ್ರಶ್ನೆ ಸಂಖ್ಯೆ 13 (251))
ಶ್ರೀ ಎನ್.ಯೋಗೀಶ್ ಭಟ್.
ಶ್ರೀ ಸುನಿಲ್ ವಿ.ಹೆಗಡೆ 15 (268)
ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್ (157)
ಶ್ರೀ ಎಸ್.ಆರ್.ವಿಶ್ವನಾಥ್ 14 (260)
ಶ್ರೀ ಎನ್.ಸಂಪಂಗಿ
(ಶ್ರೀ ಶಿವಶಂಕರ್ ರೆಡ್ಡಿಯವರ ಪರವಾಗಿ) 22 (237)
ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್
ಶ್ರೀ ಎ.ಎಸ್..ಪಾಟೀಲ್ 23 (61)
ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
ಶ್ರೀ ಟಿ.ಬಿ.ಜಯಚಂದ್ರ
ಶ್ರೀ ಹೆಚ್.ಡಿ.ರೇವಣ್ಣ

ಶ್ರೀ ಪ್ರಕಾಶ್ ಹೆಚ್.ಎಸ್. 24 (263)
ಶ್ರೀ ಹೆಚ್.ಕೆ.ಕುಮಾರಸ್ವಾಮಿ
ಶ್ರೀ ಸುನಿಲ್ ವಿ.ಹೆಗಡೆ
(ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡರವರ ಪರವಾಗಿ) 25 (234)
ಶ್ರೀ ಹೆಚ್.ಡಿ.ರೇವಣ್ಣ
ಶ್ರೀ ಸಿದ್ದು ಸವದಿ
ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು
ಶ್ರೀ ಎಸ್.ಸುರೇಶ್ ಕುಮಾರ್
(ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)
ಮಂಡನೆ (ಅನುಬಂಧ-1)

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು: **688–689**

ಅ) ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ (ಸಿವಿಲ್) ವರದಿ.
ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)
ಆ) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ (ವಾಣಿಜ್ಯ) ವರದಿ
(ಮಂಡಿಸಲಾಯಿತು)

5. ಗಮನ ಸೆಳೆಯುವ ಸೂಚನೆಗಳು: **689–689**

ಅ) ರಾಯಚೂರು ನಗರದಲ್ಲಿರುವ ಓಪೆಕ್ ಆಸ್ಪತ್ರೆಯನ್ನು ಅಪೊಲೊ ಆಸ್ಪತ್ರೆಗೆ ಗುತ್ತಿಗೆ ನೀಡಿದ್ದು, ಸರಿಯಾಗಿ ಕೆಲಸ ನಿರ್ವಹಿಸದೇ ಇರುವುದರಿಂದ ಬಡ ರೋಗಿಗಳಿಗೆ ತೊಂದರೆಯಾಗಿರುವ ಬಗ್ಗೆ.
ಶ್ರೀ ವೆಂಕಟರಾವ್ ನಾಡಗೌಡ
ಶ್ರೀ ಬಿ.ಶ್ರೀರಾಮುಲು
(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಆ) ಬಿಜಾಪುರ, ಬಾಗಲಕೋಟೆ, ಜಮಖಂಡಿ, ಅಥಣಿ ಹಾಗೂ ರಬಕವಿ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಿರುವುದರಿಂದ ಕೊಯಿನಾ ಜಲಾಶಯದಿಂದ ಮೂರು ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ

ಶ್ರೀ ಬಸವರಾಜ ಬೊಮ್ಮಾಯಿ

(ಮಾನ್ಯ ಜಲಸಂಪನ್ಮೂಲ ಸಚಿವರು)

ಇ) ರಾಮನಗರ ಜಿಲ್ಲೆ ಕನಕಪುರ ಪೇಟೆಯಲ್ಲಿ ಹಾದುಹೋಗುವ ಕನಕಪುರ– ಎಂ.ಜಿ.ರಸ್ತೆಯನ್ನು ಅಗಲಗೊಳಿಸಿ ಮೂಲಭೂತ ಸೌಲಭ್ಯವನ್ನು ಒದಿಗಸುವ ಬಗ್ಗೆ.

ಶ್ರೀ ಟಿ.ಬಿ.ಜಯಚಂದ್ರ

(ಮಾನ್ಯ ಡಿ.ಕೆ.ಶಿವಕುಮಾರ್‌ರವರ ಪರವಾಗಿ)

ಶ್ರೀ ಸಿ.ಎಂ.ಉದಾಸಿ

(ಮಾನ್ಯ ಲೋಕೋಪಯೋಗಿ ಸಚಿವರು)

6. **ಗಮನ ಸೆಳೆಯುವ ಸೂಚನೆಗಳು:** 689–722

ಅ) ರಾಯಚೂರು ನಗರದಲ್ಲಿರುವ ಓಪೆಕ್ ಆಸ್ಪತ್ರೆಯನ್ನು ಅಪೋಲೊ ಆಸ್ಪತ್ರೆಗೆ ಗುತ್ತಿಗೆ ನೀಡಿದ್ದು, ಸರಿಯಾಗಿ ಕೆಲಸ ನಿರ್ವಹಿಸದೇ ಇರುವುದರಿಂದ ಬಡ ರೋಗಿಗಳಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ

ಶ್ರೀ ಬಿ.ಶ್ರೀರಾಮುಲು

(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಆ) ಬಿಜಾಪುರ, ಬಾಗಲಕೋಟೆ, ಜಮಖಂಡಿ, ಅಥಣಿ ಹಾಗೂ ರಬಕವಿ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಿರುವುದರಿಂದ ಕೊಯಿನಾ ಜಲಾಶಯದಿಂದ ಮೂರು ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ

ಶ್ರೀ ಬಸವರಾಜ ಬೊಮ್ಮಾಯಿ

(ಮಾನ್ಯ ಜಲಸಂಪನ್ಮೂಲ ಸಚಿವರು)

ಇ) ರಾಮನಗರ ಜಿಲ್ಲೆ ಕನಕಪುರ ಪೇಟೆಯಲ್ಲಿ ಹಾದುಹೋಗುವ ಕನಕಪುರ- ಎಂ.ಜಿ.ರಸ್ತೆಯನ್ನು ಅಗಲಗೊಳಿಸಿ ಮೂಲಭೂತ ಸೌಲಭ್ಯವನ್ನು ಒದಿಗಸುವ ಬಗ್ಗೆ.
ಶ್ರೀ ಟಿ.ಬಿ.ಜಯಚಂದ್ರ
(ಮಾನ್ಯ ಡಿ.ಕೆ.ಶಿವಕುಮಾರ್‌ರವರ ಪರವಾಗಿ)
ಶ್ರೀ ಸಿ.ಎಂ.ಉದಾಸಿ
(ಮಾನ್ಯ ಲೋಕೋಪಯೋಗಿ ಸಚಿವರು)

7. **ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ:** **722–798**
ವಿಷಯ: ಕಾನೂನು ಸುವ್ಯವಸ್ಥೆಯ ಬಗ್ಗೆ
ಶ್ರೀ ದಿನೇಶ್ ಆರ್.ಗುಂಡೂರಾವ್
ಶ್ರೀ ಕೆ.ಎಂ.ಶಿವಲಿಂಗೇಗೌಡ
ಶ್ರೀ ಯು.ಟಿ.ಖಾದರ್
ಶ್ರೀ ಆರ್.ಧ್ರುವನಾರಾಯಣ್
ಶ್ರೀ ವೆಂಕಟರಾವ್ ನಾಡಗೌಡ
ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್
ಶ್ರೀ ಹೆಚ್.ಕೆ.ಕುಮಾರಸ್ವಾಮಿ
ಶ್ರೀ ಕಿಮ್ಮನೆ ರತ್ನಾಕರ್
ಶ್ರೀ ಎ.ಎಸ್.ಪಾಟೀಲ್
ಶ್ರೀ ಬಿ.ಎಸ್.ಯಡಿಯೂರಪ್ಪ
ಶ್ರೀ ಮಲ್ಲಿಕಾರ್ಜುನ ಖರ್ಗೆ
ಶ್ರೀ ಹೆಚ್.ಸಿ.ಬಾಲಕೃಷ್ಣ

8. **ಪ್ರಕಟಣೆ:** **798–798**
ವಿಷಯ: ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ

9. **ಅನುಬಂಧ:** **798–1154**

1. ಸಂತಾಪ ಅಸೂಚನೆ

ವಿಷಯ: ಶ್ರೀ ಆರ್.ವೆಂಕಟರಾಮನ್, ಮಾಜಿ ರಾಷ್ಟ್ರಪತಿಗಳು ಹಾಗೂ ಇತರರ ನಿಧನದ ಕುರಿತು.

ಮಾನ್ಯ ಸಭಾಧ್ಯಕ್ಷರು:

ಸ್ವಾತಂತ್ರ್ಯ ಹೋರಾಟಗಾರರು, ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ರಾಮಸ್ವಾಮಿ ವೆಂಕಟರಾಮನ್, ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಬಿ.ಎನ್.ಕೆಂಗೇಗೌಡ ಹಾಗೂ ಶ್ರೀ ಎಂ.ಜಿ.ಸತ್ಯನಾರಾಯಣ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಆರ್. ವೆಂಕಟರಾಮನ್

1910ನೇ ಡಿಸೆಂಬರ್ 4ರಂದು ತಮಿಳುನಾಡಿನ ತಂಜಾವೂರು ಜಿಲ್ಲೆಯ ರಾಜಮಾಡಮ್ ಗ್ರಾಮದಲ್ಲಿ ಜನಿಸಿದ್ದ ಶ್ರೀ ವೆಂಕಟರಾಮನ್ ಅವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಹಾಗೂ ಕಾನೂನು ಪದವಿಯನ್ನು ಪಡೆದಿದ್ದರು. ವಕೀಲ ವೃತ್ತಿಯನ್ನು ಮಾಡುತ್ತಿದ್ದ ಶ್ರೀಯುತರು 1942ರಲ್ಲಿ ನಡೆದ 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಪಾಲ್ಗೊಂಡು ಎರಡು ವರ್ಷಗಳ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಕಾನೂನು ವಿಷಯದಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರನ್ನು ಭಾರತ ಸರ್ಕಾರವು 1946ರಲ್ಲಿ ಆಂಗ್ಲರಿಂದ ಅಧಿಕಾರ ಹಸ್ತಾಂತರ ವಿಚಾರದಲ್ಲಿ ರಚಿಸಲಾಗಿದ್ದ ಕಾನೂನು ಸಲಹೆಗಾರರ ಪಟ್ಟಿಯಲ್ಲಿ ಸೇರಿಸಿದ್ದು, ಮಲಯ ಹಾಗೂ ಸಿಂಗಪೂರ್ ರಾಷ್ಟ್ರಗಳಿಗೆ ಅಧ್ಯಯನಕ್ಕಾಗಿ ಕಳುಹಿಸಲಾಗಿತ್ತು. 1947 ರಿಂದ 1950 ರವರೆಗೆ ಮದ್ರಾಸ್ ಪ್ರಾದೇಶಿಕ ಬಾರ್ ಫೆಡರೇಷನ್ನಿನ ಕಾರ್ಯದರ್ಶಿಯಾಗಿದ್ದರು.

ಕಾನೂನಿನ ಅದರಲ್ಲೂ ಕಾರ್ಮಿಕ ವಿಚಾರಗಳಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ತಮಿಳುನಾಡಿನಲ್ಲಿ ಕಾರ್ಮಿಕರ ಏಳಿಗೆಗಾಗಿ ಸಂಘಟನೆಯನ್ನು ಮಾಡಿದ್ದರು. 1950ರಲ್ಲಿ ಭಾರತದ ಪ್ರಾಂತೀಯ ಸಂಸತ್ತಿಗೆ ಚುನಾಯಿತರಾಗಿ ನಂತರ 1952ರಲ್ಲಿ ಮೊದಲ ಸಂಸತ್ತಿನ ಸದಸ್ಯರಾಗಿದ್ದರು. 1957ರಲ್ಲಿ ಮರುಚುನಾಯಿತರಾಗಿ ನಂತರ ರಾಜೀನಾಮೆಯನ್ನು ನೀಡಿ ಅಂದಿನ ಮದ್ರಾಸ್ ಸರ್ಕಾರದಲ್ಲಿ ಮಂತ್ರಿಯಾಗಿ ನೇಮಕಗೊಂಡಿದ್ದರು ಹಾಗೂ ಮದ್ರಾಸ್ ಮೇಲ್ಮನೆಯ ನಾಯಕರಾಗಿದ್ದರು. 1967ರಲ್ಲಿ ಕೇಂದ್ರ ಯೋಜನಾ ಮಂಡಳಿಯ ಸದಸ್ಯರಾಗಿ, ಕೈಗಾರಿಕೆ, ಕಾರ್ಮಿಕ, ಇಂಧನ, ಸಾರಿಗೆ, ಸಂಪರ್ಕ ಮತ್ತು ರೈಲ್ವೆಗೆ ಸಂಬಂಧಿಸಿದ ವಿಷಯಗಳ ಹೊಣೆಯನ್ನು ಹೊಂದಿದ್ದರು. 1977 ಹಾಗೂ 1980ರಲ್ಲಿ ಮದ್ರಾಸ್(ದಕ್ಷಿಣ)

ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಶ್ರೀಮತಿ ಇಂದಿರಾಗಾಂಧಿಯವರ ಸಂಪುಟದಲ್ಲಿ ಆರ್ಥಿಕ ಹಾಗೂ ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಹಲವಾರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀ ವೆಂಕಟರಾಮನ್ ರವರು ಹಲವಾರು ಪದವಿಗಳನ್ನು ಪಡೆದಿದ್ದರು. 1984ರಲ್ಲಿ ದೇಶದ ಉಪರಾಷ್ಟ್ರಪತಿಯಾಗಿ, ರಾಜ್ಯಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. 1987ರ ಜುಲೈ 25ರಂದು ಭಾರತದ ಎಂಟನೇ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿ 1992ರ ಜುಲೈ 25ರವರೆಗೂ ಅಧಿಕಾರದಲ್ಲಿದ್ದರು. ಭಾರತ ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀ ವೆಂಕಟರಾಮನ್ ಅವರು ರಾಷ್ಟ್ರದ ಹೆಮ್ಮೆಯ ಪುತ್ರರಲ್ಲೊಬ್ಬರು.

ಶ್ರೀಯುತರು ದಿನಾಂಕ: 27-01-2009 ರಂದು ನಿಧನ ಹೊಂದಿದರು.

2. ಶ್ರೀ ಬಿ.ಎನ್.ಕೆಂಗೇಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎನ್.ಕೆಂಗೇಗೌಡ ಅವರು 1920ನೇ ನವೆಂಬರ್‌ನಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಗ್ರಾಮದಲ್ಲಿ ಜನಿಸಿದ್ದು, ಬಿ.ಎ. ಹಾಗೂ ಬಿ.ಎಲ್. ಪದವೀಧರರು. 1942ರಲ್ಲಿ ಲಾಹೋರಿನಲ್ಲಿ ನಡೆದ ಅಖಿಲ ಭಾರತ ಒಲಿಂಪಿಕ್ ಕ್ರೀಡಾಕೂಟದಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದರು. ಮೈಸೂರು ಪುರಸಭೆಯ ಸದಸ್ಯರಾಗಿ, ಅಧ್ಯಕ್ಷರಾಗಿ, ಮೈಸೂರು ಜಿಲ್ಲಾ ಸಹಕಾರಿ ಬ್ಯಾಂಕ್, ಮೈಸೂರು ನಗರ ಸಹಕಾರಿ ಬ್ಯಾಂಕ್, ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಶ್ರೀಯುತರು 1978ರಲ್ಲಿ ಚಾಮರಾಜ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಚುನಾಯಿತರಾಗಿ ಆರನೇ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ:29.01.2009 ರಂದು ನಿಧನ ಹೊಂದಿದರು.

3. ಶ್ರೀ ಎಂ.ಜಿ.ಸತ್ಯನಾರಾಯಣ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಜಿ.ಸತ್ಯನಾರಾಯಣ ಅವರು 1929ರ ಮೇ 16ರಂದು ಬೆಂಗಳೂರಿನಲ್ಲಿ ಜನಿಸಿದ್ದರು. ವಿದ್ಯಾರ್ಥಿ ಸಂಘಟಕರಾಗಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ನೆಲಮಂಗಲ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ: 30.01.2009 ರಂದು ನಿಧನ ಹೊಂದಿದರು.

* * * * * * * * *

ಶ್ರೀ. ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ,

ಶ್ರೀ ಆರ್.ವೆಂಕಟರಾಮನ್ ರವರು ಭಾರತದ ಘನವೆತ್ತ ರಾಷ್ಟ್ರಾಧ್ಯಕ್ಷರಾಗಿ ಜುಲೈ 25, 1987ರಿಂದ ಜುಲೈ 25, 1992ರವರೆಗೆ ಕಾರ್ಯ ನಿರ್ವಹಿಸಿದ್ದಾರೆ.

ಶ್ರೀಯುತರು ದಿನಾಂಕ: 27.1.2009ರಂದು ನಿಧನ ಹೊಂದಿರುವುದು ರಾಷ್ಟ್ರಕ್ಕೆ ಅಪಾರವಾದ ನಷ್ಟವನ್ನುಂಟು ಮಾಡಿದೆ. ಶ್ರೀ ಆರ್.ವೆಂಕಟರಾಮನ್ ರವರ ನಿಧನದಿಂದ ಗಾಂಧಿಯುಗದ ಮಹತ್ವದ ಅಧ್ಯಾಯವೊಂದು ಅಂತ್ಯವಾದಂತಾಗಿದೆ. ಗಾಂಧಿಯುಗದ ಕೊನೆಯ ಕೊಂಡಿ ಕಳಚಿ ಹೋಗಿದೆ.

ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಜನಸಿದ ವೆಂಕಟರಾಮನ್ ರವರು ತಮ್ಮ ಬುದ್ಧಿಮತ್ತೆ, ಕಾನೂನು ಮತ್ತು ಆರ್ಥಿಕ ವಿಷಯಗಳಲ್ಲಿಯ ಆಸಕ್ತಿ, ಮೌಲಿಕ ಬದುಕಿನಿಂದ ರಾಷ್ಟ್ರಕ್ಕೆ ದಿಕ್ಸೂಚಿಯಾಗಿ ಬದುಕಿದರೆಂಬುದು ಎಲ್ಲರಿಗೂ ತಿಳಿದ ಅಂಶವಾಗಿದೆ. ಅವರು ಮೂಲತಃ ಗಾಂಧೀಜಿಯ ಅನುಯಾಯಿಯಾಗಿದ್ದರು. ಸ್ವಾತಂತ್ರ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಹೋರಾಟದ ಭಾಗವಾಗಿ ಜೈಲುವಾಸ ಅನುಭವಿಸಿದರು. ತಮ್ಮ ಜೀವನದ ಕೊನೆಯ ದಿನದವರೆಗೂ ಗಾಂಧೀಜಿಯ ತತ್ವಗಳನ್ನು ಶಬ್ದಶಃ ಪಾಲಿಸಿದರು.

ಶ್ರೀ ವೆಂಕಟರಾಮನ್ ರವರು ತಮ್ಮ ಅಧಿಕಾರಾವಧಿಯಲ್ಲಿ ರಾಷ್ಟ್ರಪತಿ ಭವನವನ್ನು ಶಬ್ದಶಃ ಶಾಂತಿಧಾಮವನ್ನಾಗಿ ಮಾಡಿದರೇ ಹೊರತಾಗಿ ಗೊಂದಲದ ಗೂಡನ್ನಾಗಿ, ವಿವಾದದ ಸ್ಥಾನವನ್ನಾಗಿ ಮಾಡಲಿಲ್ಲ ಎನ್ನುವುದು ಇತಿಹಾಸಕಾರರು ದಾಖಲಿಸಲೇಬೇಕಾದ ಅಂಶವಾಗಿದೆ. ಅವರ ಅಧಿಕಾರಾವಧಿಯಲ್ಲಿ ಬಂದಷ್ಟು ಸಮಸ್ಯೆಗಳನ್ನು ಯಾವ ರಾಷ್ಟ್ರಾಧ್ಯಕ್ಷರೂ ಎದುರಿಸಿಲ್ಲ. ಆಗಿನ ಪರಿಸ್ಥಿತಿ ಉಕ್ಕುವ ಕಡಲಿನಂತಿತ್ತು. ರಾಜಕೀಯ ಬಿರುಗಾಳಿಗಳ ಕಾಲವಾಗಿತ್ತು. ಅವರು ನಾಲ್ಕು ಜನ ಪ್ರಧಾನ ಮಂತ್ರಿಗಳ ಜೊತೆ ಕಾರ್ಯ ನಿರ್ವಹಿಸಿದರು. ವ್ಹಿ.ಪಿ.ಸಿಂಗ್, ಚಂದ್ರಶೇಖರ್, ಪಿ.ವಿ.ನರಸಿಂಹರಾವ್ ಹಾಗು ರಾಜೀವ ಗಾಂಧಿಯವರ ಜೊತೆ ಕೆಲಸ ಮಾಡಿದರು. ಕೆಲವು ಪ್ರಧಾನ ಮಂತ್ರಿಗಳು ಕೆಲವೇ ತಿಂಗಳುಗಳ ಕಾಲ ಇದ್ದರು. ಭಾರತದ ಸಂವಿಧಾನ ಕೂಡ ಅಗ್ನಿ ಪರೀಕ್ಷೆಗೆ ಒಳಗಾಗುವ ಕಾಲ ಅದಾಗಿತ್ತು. ಶ್ರೀಲಂಕಾದ ಬಿಕ್ಕಟ್ಟು, ಬೊಫರ್ಸ್ ಸಮಸ್ಯೆ, ರಾಜೀವಗಾಂಧಿ ಹತ್ಯೆ, ಷೇರು ಮಾರುಕಟ್ಟೆಯ ಹಗರಣ, ಡಿಫೆಮೇಶನ್ ಬಿಲ್ – ಇವೆಲ್ಲಾ ಆ ಕಾಲದಲ್ಲಿ ಅಪ್ಪಳಿಸಿದ ಮುಖ್ಯ ಘಟನೆಗಳು.

ಆರ್ ವೆಂಕಟರಾಮನ್ ರವರ ದೊಡ್ಡಗುಣ ಅವರಿಗಿದ್ದ ರಾಷ್ಟ್ರದ ಸಂವಿಧಾನದ ಪರಿಪೂರ್ಣ ತಿಳುವಳಿಕೆ ಹಾಗು ಸಂವಿಧಾನದಂತೆ ಅಧಿಕಾರ ಚಲಾಯಿಸುವಾಗ ಇರಬೇಕಾದ ಸಂಯಮ ಗುಣ. ಅವರು ಭಾರತದ

ರಾಷ್ಟ್ರಾಧ್ಯಕ್ಷರನ್ನು Emergency Light ಎಂದು ಕರೆಯುತ್ತಿದ್ದರು. ಕರಂಟ್ ಹೋದಾಗ ಎಮರ್ಜೆನ್ಸಿ ಲೈಟ್ ತನ್ನಷ್ಟಕ್ಕೇ ತಾನೇ ಹೊತ್ತಿಕೊಳ್ಳುತ್ತದೆ. ಕರಂಟ್ ಬಂದಾಗ ತನ್ನಷ್ಟಕ್ಕೇ ತಾನೇ ಆರಿಕೊಳ್ಳುತ್ತದೆ. ಇದು ರಾಷ್ಟ್ರಾಧ್ಯಕ್ಷನಿಗಿರಬೇಕಾದ ಗುಣ ಎಂದು ಅವರು ಸ್ಪಷ್ಟವಾಗಿ ಪದೇ ಪದೇ ಹೇಳುತ್ತಿದ್ದರು. ಅವರು ತಮ್ಮನ್ನು ತಾವು Text Book President ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆಪಡುತ್ತಿದ್ದರು. ಸಂವಿಧಾನದಲ್ಲಿಯ ಅಧಿಕಾರ ವ್ಯಾಪ್ತಿಯನ್ನು ಎಂದೂ ಮೀರದಂತೆ ಪ್ರಜಾಪ್ರಭುತ್ವದ ಉಳಿದ ಅಂಗಗಳಿಗೆ ಧಕ್ಕೆಯುಂಟಾಗದಂತೆ, ತಾಳ್ಮೆಯ ಮೂರ್ತಿಯಾಗಿ ರಾಷ್ಟ್ರಾಧ್ಯಕ್ಷರು ವರ್ತಿಸಬೇಕೆಂಬುದನ್ನು ಅವರು ತಮ್ಮ ನಿರ್ಣಯಗಳ ಮುಖಾಂರ, ಕ್ರಿಯೆಗಳ ಮುಖಾಂತರ ತೋರಿಸಿಕೊಟ್ಟರು.

- ಆರ್.ವೆಂಕಟರಾಮನ್ ರವರ ಇನ್ನೊಂದು ವಿಶೇಷ ಗುಣವೆಂದರೆ ಅವರಿಗಿದ್ದ Trade Union ಹಾಗೂ ಲೇಬರ್ ಲಾ ಗಳಲ್ಲಿ ಇದ್ದ ಆಸಕ್ತಿ. ಇದು ಅವರ ಸಮಾಜವಾದಿ ಮನೋಭಾವನೆಯನ್ನು ಹಾಗು ತುಳಿತಕ್ಕೊಳಗಾದವರ ಬಗೆಗಿನ ಅನುಕಂಪ ಹಾಗೂ ಆಸಕ್ತಿಯನ್ನು ತೋರಿಸಿಕೊಡುತ್ತದೆ.
- ವೆಂಕಟರಾಮನ್ ರವರು ಮದ್ರಾಸ್ ರಾಜ್ಯದಲ್ಲಿ ಭಾರತ ಸರ್ಕಾರದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಆರ್ಥಿಕ ಇಲಾಖೆ, ರಕ್ಷಣಾ ಇಲಾಖೆಗಳಲ್ಲಿಯ ಅವರ ಹಲವಾರು ನಿರ್ಣಯಗಳು ಮೈಲುಗಲ್ಲುಗಳಾಗಿವೆ. ಅವರ ರಕ್ಷಣಾ ಸಚಿವರಾಗಿದಿಗ ಮಿಸೈಲ್ ಪ್ರೊಜೆಕ್ಟ್ ಜಾರಿಗೆ ತಂದರು. ಅದರ ಮಹತ್ವವನ್ನು ದೇಶ ಈಗ ಅರ್ಥ ಮಾಡಿಕೊಳ್ಳುತ್ತಿದೆ. 1981ರಲ್ಲಿ ಆರ್ಥಿಕ ಸಚಿವರಾಗಿದ್ದಾಗ IMF ನಿಂದ ಅತ್ಯಂತ ಹೆಚ್ಚಿನ ಅಂದರೆ 5.8. ಬಿಲಿಯನ್ ಡಾಲರುಗಳ ಸಾಲವನ್ನು ದೇಶಕ್ಕೆ ದೊರಕಿಸಿಕೊಟ್ಟರು. ಚನ್ನೈನ ಗಿಂಡಿಯಲ್ಲಿ ಔದ್ಯೋಗಿಕ ಕೇಂದ್ರ ಅವರ ದರ್ಶನದ ಸಂಕೇತವಾಗಿ ಕಾಣುತ್ತಿದೆ.
- ಭಾರತ ದೇಶ ಯಾವುದೇ ಕ್ಲಿಷ್ಟಕರವಾದ ಸಂವಿಧಾನಿಕ ಬಿಕ್ಕಟ್ಟು ಎದುರಿಸುವಾಗ ರಾಮಸ್ವಾಮಿ ವೆಂಕಟರಾಮನ್ ಅದಕ್ಕೆ ಪರಿಹಾರ ಒದಗಿಸಿಕೊಡುತ್ತಿದ್ದರು. ಅಂತಹ ಕಾನೂನು ಹಾಗೂ ನೈತಿಕ ಶಕ್ತಿ ಅವರಿಗಿತ್ತು.
- ಇತ್ತೀಚಿನ ರಾಜಕೀಯ ಅವರ ಅಂತಿಮ ದಿನಗಳಲ್ಲಿ ಅವರಿಗೆ ಬಹಳ ಬೇಸರವನ್ನುಂಟು ಮಾಡಿತ್ತು. ಅವರು ಒಂದು ಸಂದರ್ಶನದಲ್ಲಿ ಈ ರೀತಿ ಹೇಳಿದ್ದಾರೆ.

"Now a days the motive in politics is self interest. The days when people jumped into the freedom movement, sacrificing their career, properties, family are all over. Today Politics is like any

other profession. And everybody wants to come up in politics like everybody wants to come up in law, medicine, education, engineering etc."

ಈ ಬಗ್ಗೆ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಅದರ ಅವಶ್ಯಕತೆ ಇದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

- ನನಗೆ ವೆಂಕಟರಾಮನ ರವರ ಮತ್ತೊಂದು ವಿಚಾರ ವೈಯಕ್ತಿಕ ಬಹಳ ಹಿಡಿಸಿದೆ. ಅದೆಂದರೆ ದೇಶದಲ್ಲಿ ಎರಡೇ ರಾಷ್ಟ್ರೀಯ ಪಕ್ಷಗಳಿದ್ದರೆ ಸುಭದ್ರವಾದ ದೇಶ ಕಟ್ಟಲು ಸಾಧ್ಯ ಎಂದು ಅವರು ಯಾವಾಗಲೂ ವಾದಿಸುತ್ತಿದ್ದರು. ಪ್ರಾದೇಶಿಕ ಪಕ್ಷಗಳ ಪಿಡುಗು ದೇಶದ ಆರ್ಥಿಕ ಸ್ಥಿತಿಯನ್ನು ಅಭದ್ರಗೊಳಿಸುತ್ತದೆ ಹಾಗು ಪ್ರಜಾಪ್ರಭುತ್ವದ ಒಳ ಅಂಗಗಳನ್ನು ತಿಂದು ಹಾಕುತ್ತವೆ ಎನ್ನುವುದು ಅವರ ಪ್ರಮುಖ ವಿಚಾರವಾಗಿತ್ತು. ಈ ಬಗ್ಗೆ ಕೂಡ ಪೂರ್ಣ ದೇಶವೇ ಇಂದು ಆತ್ಮಾವಲೋಕನ ಮಾಡಿಕೊಳ್ಳುವ ಕಾಲ ಕೂಡಿ ಬಂದಿದೆ. ದೇಶ ಸರ್ಕಸ್ ಆಗುವ ಬದಲು ಮೌಲಿಕ ಸಂಘಟನೆಯಾಗಿ ಹೊರಹೊಮ್ಮಿ ಬರಬೇಕೆನ್ನುವುದು ಅವರ ಆಶಯನಿವಾಗಿತ್ತು. ಈ ಬಗ್ಗೆ ಹಲವರಿಗೆ ಭಿನ್ನಾಭಿಪ್ರಾಯಗಳಿದ್ದರೂ ಕೂಡ, ಇದು ಖಂಡಿತವಾಗಿ ಚರ್ಚಿಸಬೇಕಾದ, ಒಪ್ಪಬೇಕಾದ ಸಂಗತಿಯಾಗಿದೆ.
- ಕೊನೆಯದಾಗಿ ರಾಮಸ್ವಾಮಿ ವೆಂಕಟರಾಮನ್ ರವರು ಭಾರತೀಯ ಮತದಾರರ ಬಗ್ಗೆ ಭ್ರಮನಿರಸನಗೊಂಡಿದ್ದರು. ಆ ಬಗ್ಗೆ ಹೇಳಿದ ಅವರು ಮಾತುಗಳನ್ನೇ ಕೋಟ್ ಮಾಡುತ್ತಿದ್ದೇನೆ. "Today, the electorate does not realize that at a general election, they are electing a Government for themselves. They look upon it as an occasion to exercise patronage in favour of a particular caste, co-religionist, a neighbour and so on. If an electorate refuses to elect a criminal, if an electorate refuses to elect a person with a bad reputation, a corrupt man or a bad man, then politics will be cleansed. But the electorate continues to elect a person who is a criminal, continues to elect a person who has the reputation as a corrupt man. So what is really required is the education of the electorate." ಈ ಮಾತುಗಳು ಎಷ್ಟು ಸತ್ಯವಾಗಿದೆ ಎನ್ನುವುದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ.

- ವೆಂಕಟರಾಮನ್ ರವರ ನಿಧನ ನಿಜವಾಗಿಯೂ ಅಘಾತಕಾರಿಯಾಗಿದೆ. ಅವರು 98 ವರ್ಷಗಳ ತುಂಬ ಜೀವನ ನಡೆಸಿದ್ದರೂ ಕೂಡ ಅವರು ನಮ್ಮ ಮಧ್ಯದಲ್ಲಿ ಇರಬೇಕಾಗಿತ್ತೆನ್ನುವುದು ಪ್ರತಿಯೊಬ್ಬ ಭಾರತೀಯನ ಆಶಯವಾಗಿದೆ.
- ಅವರ ನಿಧನದ ದಿನ ಅಂತರ್ಜಾಲದಲ್ಲಿ (Internet) ಒಬ್ಬ ಭಾರತೀಯ ಈ ರೀತಿ ಬರೆದಿದ್ದಾನೆ.

  "Today India has really lost a jewel, let his soul rest in peace" My presidential years. ಎನ್ನುವ ಪುಸ್ತಕ ನಮ್ಮೆಲ್ಲರಿಗೂ ಮಾರ್ಗದರ್ಶಕ.
- ನಾವೆಲ್ಲರು ಕೂಡ ಈ ದಿನ ಅವರ ಆತ್ಮಕ್ಕೆ ಶಾಂತಿ ಕೋರೋಣ ಹಾಗು ಅವರ ಕುಟುಂಬದ ಸದಸ್ಯರಿಗೆ ಸಂತಾಪ ಸೂಚಕವನ್ನು ವ್ಯಕ್ತ ಮಾಡೋಣವೆಂದು ಕೋರುತ್ತೇನೆ.
- ಈ ವರ್ಷದ ಕೊನೆಯೊಳಗಾಗಿ ಅವರ ವಿಚಾರಗಳ ವಿಚಾರ ಸಂಕಿರಣವೊಂದನ್ನು ಗೌರವಾನ್ವಿತ ಸಭಾಪತಿಗಳು ನಡೆಸುವ ಬಗ್ಗೆ ವಿಚಾರ ಮಾಡಬೇಕಾಗಿ ಕೂಡ ಈ ಸಂದರ್ಭದಲ್ಲಿ ವಿನಮ್ರಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಶ್ರೀ ಬಿ.ಎನ್.ಕೆಂಗೇಗೌಡರು, ಮಾಜಿ ವಿಧಾನಸಭಾ ಸದಸ್ಯರು ಹಾಗೂ ನನ್ನ ಜೊತೆಗೆ ಕೆಲಸ ಮಾಡಿದ ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಎಂ.ಜಿ.ಸತ್ಯನಾರಾಯಣ ಇವರುಗಳು ನಿಧನರಾಗಿದ್ದು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧಪಕ್ಷದ ನಾಯಕರು]: ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಮಂಡಿಸಿದ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಈಗ ಸೂಚಿಸುತ್ತಾ ಮಾನ್ಯ ಉದಾಸಿಯವರು ಸದನದ ಮುಂದೆ ಏನು ಸಂತಾಪ ಸೂಚನೆಯ ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾನು ಅನುಮೋದಿಸುತ್ತೇನೆ. ಜೊತೆಗೆ ಇಬ್ಬರು ಮಾಜಿ ಶಾಸಕರಾದ ಶ್ರೀ ಎಂ.ಜಿ.ಸತ್ಯನಾರಾಯಣ ಮತ್ತು ಶ್ರೀ ಬಿ.ಎನ್.ಕೆಂಗೇಗೌಡರು ನಿಧನರಾಗಿದ್ದಾರೆ. ಶ್ರೀ ಬಿ.ಎನ್., ಕೆಂಗೇಗೌಡರ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು. ಅವರು ಒಳ್ಳೆಯ ಕುಸ್ತಿ ಪಟುಗಳು, ಅವರು ಕುಸ್ತಿ ಆಡುತ್ತಿದ್ದರು, ಅಂಥ ವ್ಯಕ್ತಿ ಇವತ್ತು ನಮ್ಮಿಂದ ಆಗಲಿ ಹೋಗಿದ್ದಾರೆ. ಆದರೆ ಶ್ರೀ ಆರ್.ವೆಂಕಟರಾಮನ್ ಅವರ ಜೊತೆಯಲ್ಲಿ ಒಂದೆರಡು ಸಲ ನಾನು ಕೆಲಸ ಮಾಡುವ ಸಂದರ್ಭ ಬಂತು. ಅವರು ಕೇಂದ್ರದ ಹಣಕಾಸಿನ ಸಚಿವರಾಗಿ ಕೆಲಸ ಮಾಡುತ್ತಿದ್ದರು, ಆಗ ನಾನು ರಾಜ್ಯದಲ್ಲಿ ಕಂದಾಯ ಸಚಿವನಾಗಿದ್ದೆ, ದಿವಂಗತ

ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ನಾವು ಒಂದು ಮೆಮೊರ್ಯಾಂಡಂ ಅನ್ನು ಸಲ್ಲಿಸಿದ್ದೆವು. ಅವರು ಇಲ್ಲಿಗೆ ಒಂದು ಟೀಂ ಅನ್ನು ಕಳುಹಿಸಿದ್ದರು. ಅಲ್ಲಿ ಬಂದಂಥ ತಂಡವನ್ನು ಸ್ಥಳೀಯ ಜಿಲ್ಲಾಧಿಕಾರಿಗಳು ಸರಿಯಾಗಿ ನೋಡಿಕೊಳ್ಳಲಿಲ್ಲ ಎನ್ನುವ ಕೋಪದಿಂದ ಅವರು ಅಲ್ಲಿಗೆ ಹೋಗಿ ನಮಗೆ ಬಿಡುಗಡೆಯಾಗುವ ಹಣ ಸರಿಯಾದ ರೀತಿಯಲ್ಲಿ ಬಿಡುಗಡೆಯಾಗಲಿಲ್ಲ, ಅದನ್ನು ರಿಜೆಕ್ಟ್ ಮಾಡಿದರು. ಕೊನೆಗೆ ದಿವಂಗತ ಗುಂಡೂರಾವ್‌ರವರನ್ನು ಕರೆದುಕೊಂಡು ನೇರವಾಗಿ ಅವರ ಛೇಂಬರ್‌ಗೆ ಹೋದೆವು. ಆಗ ಗುಂಡೂರಾವ್‌ರವರು ಹೇಳಿದರು, ನಿಮ್ಮ ಅಧಿಕಾರಿಗಳು ಬಂದಿದ್ದರು ಅವರಿಗೆ ನಾವು ಸರಿಯಾಗಿ ನೋಡಿಕೊಳ್ಳಲಿಲ್ಲ, ಅದಕ್ಕೆ ಈ ರಿಪೋರ್ಟ್‌ಅನ್ನು ನಮ್ಮ ವಿರುದ್ಧ ಕೊಟ್ಟು ನಮಗೆ ಒಂದು ನಯಾಪೈಸೆ ಕೂಡ ಸ್ಕೇರ್‌ಸಿಟಿಯಲ್ಲಿ ರಿಲೀಸ್ ಮಾಡಲಿಲ್ಲ. ಇದು ಸರಿಯಲ್ಲ. ಅವರು ಯಾರು ಇಲ್ಲಿ ಕರೆಸಿ ಎಂದು ಕೇಳಿದಾಗ ಅವರು ಹೇಳಿದರು. ನಿಮಗೆ ಏನು ಬೇಕು ಕೇಳಿ ಅದನ್ನು ನಾನು ಮಾಡಿ ಕೊಡುತ್ತೇನೆ ಅವರ ಮೇಲೆ ಏಕೆ ದೂರುತ್ತೀರಿ ಎಂದು ಹೇಳಿದರು. ಆಗ ತಕ್ಷಣ ಅವರ ಆಫೀಸ್‌ನಲ್ಲಿ ಒಂದು ಕಾಗದದ ಮೇಲೆ ಟೈಪ್ ಮಾಡಿ ಒಂದು ಪತ್ರವನ್ನು ಸರ್ಕಾರದ ವತಿಯಿಂದ ಕೊಟ್ಟೆ, ಅವರು ಅಡ್‌ಹಕ್ ಆಗಿ ಆ ಪೇಪರ್ ಮೇಲೆ ಸುಮಾರು 15 ಕೋಟಿ ರೂ. ಬಿಡುಗಡೆ ಮಾಡಬೇಕೆಂದು ಬರೆದರು. 1981ರಲ್ಲಿ ನಡೆದಂತಹ ಘಟನೆಯನ್ನು ನಾನು ಹೇಳುತ್ತಿದ್ದೇನೆ. ಅವರು ತಕ್ಷಣ ಪೇಪರ್ ಮೇಲೆ ಬರೆದು ಈಗ ಸದ್ಯಕ್ಕೆ 15 ಕೋಟಿ ರೂಪಾಯಿ ತೆಗೆದುಕೊಂಡು ಹೋಗಿ, ಆ ಮೇಲೆ ಮೆಮೋರಂಡಂ ಬಂದ ಮೇಲೆ ಅದನ್ನು ಪರಿಶೀಲನೆ ಮಾಡಿ ಅದಕ್ಕೆ ಸಂಬಂಧಪಟ್ಟಂತಹವರನ್ನು ಕರೆಸಿ ಅದರ ಬಗ್ಗೆ ಹೇಳುತ್ತೇನೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಅವರು ತಕ್ಷಣ ಒಬ್ಬ action oriented ವ್ಯಕ್ತಿ, ಒಬ್ಬ ಮಂತ್ರಿ ಆಗಿ ಕೆಲಸ ಮಾಡುತ್ತಿದ್ದರು ಎನ್ನತಕ್ಕಂಥದ್ದಕ್ಕೆ ಇದು ಒಂದು ನಿದರ್ಶನ. ಎರಡನೆಯದಾಗಿ ಟ್ರೇಡ್ ಯೂನಿಯನ್ ಲೀಡರ್ ಆಗಿ ಒಬ್ಬ ಲೇಬರ್ ಮುಖಂಡನಾಗಿ ಸಾಕಷ್ಟು ಕೆಲಸವನ್ನು ತಮಿಳುನಾಡಿನಲ್ಲಿ ಮಾಡಿದ್ದರು. ಈ ರಾಷ್ಟ್ರದ ರಾಜ್ಯ ಸಚಿವರಾಗಿ, ಕೇಂದ್ರ ಸಚಿವರಾಗಿ ಮತ್ತು ರಾಷ್ಟ್ರಪತಿಗಳಾಗಿ ಇಂತಹ ಉನ್ನತ ಸ್ಥಾನಗಳನ್ನು ಅವರು ವಹಿಸಿಕೊಂಡಿದ್ದರು. ನಿಜವಾಗಿಯೂ ನಾವೆಲ್ಲರೂ ಮೆಚ್ಚತಕ್ಕಂತಹ ರೀತಿಯಲ್ಲಿ ಪ್ರಜಾಪ್ರಭುತ್ವದಲ್ಲಿ ಅವರು ನಡೆದುಕೊಂಡರು. ಇನ್ನೊಂದು ಮಾತನ್ನು ನಾವು ಹೇಳತಕ್ಕಂಥದ್ದು, ಮಾನ್ಯ ಉದಾಸಿಯವರು ಏನೋ ಕೋಟ್ ಮಾಡಿ ಹೇಳಿದರು. ಇತ್ತೀಚೆಗೆ ಕರಪ್ಟ್ ಜನರನ್ನೇ ಆರಿಸುತ್ತಿದ್ದಾರೆ, ವಿಶೇಷವಾಗಿ ಕೆಲಸ ಮಾಡತಕ್ಕಂತಹ ವ್ಯಕ್ತಿಗಳಿಗೆ ಪ್ರಾದಾನ್ಯತೆ ಇಲ್ಲ ಎನ್ನತಕ್ಕಂತಹ ರೀತಿಯಲ್ಲಿ ಹೇಳಿದರು. ಅದೇ ಒಂದು ಮಾತನ್ನು ಅವರು ಹೇಳುತ್ತಾರೆ, ಅವರು

ಚುನಾವಣೆಯಲ್ಲಿ ಸೋತ ಮೇಲೆ ನಾನು ಏಕೆ ಸೋತೆ ಎಂದು, ಒಂದು ಕಮಿಟಿ ಮಾಡುತ್ತಾರೆ. ಯಾವ ಊರಿನಲ್ಲಿ ಅವರಿಗೆ ಸತತವಾಗಿ ನೂರಕ್ಕೆ ನೂರು ಓಟುಗಳು ಬರುತ್ತಿದ್ದವೋ ಆ ಊರಿಗೆ ಅವರು ಸ್ವತಃ ಭೇಟಿ ಕೊಟ್ಟು ನನ್ನನ್ನು ಏಕೆ ಸೋಲಿಸಿದಿರಿ ಎಂದು ಅಲ್ಲಿನ ಪ್ರಮುಖರಿಗೆ ಎಲ್ಲರಿಗೂ ಕರೆದು ಕೇಳಿದರು. ಅಲ್ಲಿನ ಜನ ಏನು ಹೇಳಿದರು ಎಂದರೆ, ಕೆಲವು ಮುಖಂಡರು ಎದ್ದು ಏಕೆ ಏನು ಎಂದು ಹೇಳುವುದಕ್ಕೆ ನಾಚಿಕೊಳ್ಳುತ್ತಿದ್ದರು. ಕೊನೆಗೆ ಭಯ ಪಡತಕ್ಕಂತಹ ಅವಶ್ಯಕತೆ ಇಲ್ಲ ನಿಮಗೆ ತಿಳಿದದ್ದು ಹೇಳಿ ನಾನು ಮುಂದೆ ತಿದ್ದಿಕೊಳ್ಳುತ್ತೇನೆಂದು ಹೇಳಿದರು. ಅಲ್ಲಿನ ಜನ ಹೇಳಿದರು, ನಮ್ಮ ಊರಿಗೆ ಲೈಟ್ ಕೊಟ್ಟಿದ್ದೀರಿ, ರಸ್ತೆ ಮಾಡಿದ್ದೀರಿ, ಸ್ಕೂಲ್ ಮಾಡಿದ್ದೀರಿ, ಆಸ್ಪತ್ರೆ ಮಾಡಿದ್ದೀರಿ, ಇಷ್ಟು ವರ್ಷ ನಮಗೆ ಏನು ಬೇಕಾಗಿತ್ತು ಎಲ್ಲಾ ಕೂಡ ಸಿಕ್ಕಿದೆ. ಈ ಸಾರಿ ನೋಡೋಣ ಪ್ರತಿ ಸಾರಿ ಅವರಿಗೇ ಓಟು ಕೊಡುತ್ತಿದ್ದೇವೆ, ಈ ಸಾರಿ ಬದಲಾವಣೆ ಮಾಡಿ ನೋಡೋಣ, ಏಕೆಂದರೆ ಬದಲಾವಣೆ ಬಯಸತಕ್ಕಂತಹವರು ನಾನು ಇದಕ್ಕಿಂತ ಹೆಚ್ಚಿಗೆ ಮಾಡುತ್ತೇನೆ, ಅದು ಮಾಡುತ್ತೇನೆಂದು ಹೇಳುತ್ತಿದ್ದಾರೆ. ಬದಲಾವಣೆ ಬೇಕಾಗಿತ್ತು ಎಂದು ಹೇಳಿ ನಮ್ಮ ಜನ ನಿಮ್ಮ ವಿರುದ್ಧ ಮತ ಕೊಟ್ಟಿದ್ದಾರೆಂದು ಹೇಳಿದರು. ಕೆಲಸ ಮಾಡಿದರೂ ಓಟು ಸಿಗುವುದಿಲ್ಲ ಎನ್ನುವುದಕ್ಕೆ ಅವರು ಪ್ರಸ್ತಾಪ ಮಾಡಿದಂತಹ ಈ ವಿಚಾರಗಳು. ಅದಕ್ಕಾಗಿ ಅವರು ಕೊನೆಗೆ ಹೇಳಿದರಂತೆ, ಕೆಲಸ ಮಾಡುವುದೇ ತಪ್ಪೇನೋ ಎನ್ನತಕ್ಕಂತಹ ರೀತಿಯಲ್ಲಿ ಅವರು ಹೇಳಿದರು. ಅಂತಿಮವಾಗಿ ಕೆಲವು ಸಲ ಜನ ಕೆಲಸ ಮಾಡಿದರೂ ಮತ ಕೊಡುವುದಿಲ್ಲ. ಆದರೆ Erratic ಆಗಿ ಕೆಲವು ಸಲ ಯೋಚನೆ ಮಾಡಿದಾಗ ತಪ್ಪು ಮಾಡಿದ ಜನರಿಗೂ ಓಟು ಕೊಡುತ್ತಾರೆ ಎನ್ನತಕ್ಕಂತಹ ಮಾತನ್ನು ಅವರು ಹೇಳಿದರು. ಹೀಗೆ ಅನೇಕ ವಿಚಾರಗಳು ಅವರ ಜೀವನದಲ್ಲಿ ಬಂದಂತಹವು ಇವೆ. ಅವರ ಅಟೋಬಯಾಗ್ರಫಿಯಲ್ಲಿ ಕೂಡ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವೆಲ್ಲವೂ ಕೂಡ ಅವರ ಅನುಭವದ ಆಧಾರದ ಮೇಲೆ ಪ್ರಸ್ತಾಪ ಮಾಡಿದಂತಹ ವಿಚಾರಗಳು. ಅವರು ಕೆಲವು ವಿಷಯಗಳಲ್ಲಿ ತಮ್ಮ ಜೀವನದಲ್ಲಿ ಬಹಳ ರಿಜಿಡ್ ಆಗಿದ್ದರು ಎನ್ನುವುದು ಕೂಡ ನಾವು ಒಪ್ಪಲೇಬೇಕು. ಕರ್ನಾಟಕ ರಾಜ್ಯದ ಕಾವೇರಿ ಸಮಸ್ಯೆ ಬಗ್ಗೆ ನಾವು ಮಾತನಾಡಬೇಕಾಗಿದ್ದರೆ, ಟೀಕೆ ಎಂದು ಅಲ್ಲ, ಅವರು ತನ್ನದೇ ಆದ ನಿಲುವನ್ನು ತಾಳಿಕೊಂಡು ಮಾನ್ಯ ವಿ.ಪಿ.ಸಿಂಗ್‌ರವರ ಮೇಲೆ ಪ್ರಭಾವ ಬೀರತಕ್ಕಂತಹ ಕೆಲಸವನ್ನು ಕೂಡ ಕೆಲಸವು ಸಲ ಮಾಡಿದಂತಹ ಉದಾಹರಣೆಗಳು ಇವೆ. ಆದರೆ ಈಗ ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಂದರೆ ತಮ್ಮ ರಾಜ್ಯಕ್ಕೆ ಏನು ಬೇಕು, ರಾಜ್ಯದ ಹಿತ ಹಾಗೂ ಜನರ ಹಿತ ಕಾಪಾಡುವುದಕ್ಕೋಸ್ಕರ

ಕೆಲವು ಸಲ ಲಕ್ಷ್ಮಣ ರೇಖೆ ಎಂದು ಏನು ಹೇಳುತ್ತೀರಿ, ಆ ರೇಖೆಯನ್ನು ಮೀರಿ ವರ್ತಿಸತಕ್ಕಂಥದ್ದು ಕೆಲವು ಸಲ ದೊಡ್ಡವರು ಮಾಡುತ್ತಾರೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಏನೇ ಇರಲಿ, ಒಬ್ಬ ಮೇಧಾವಿ ಇವತ್ತು ನಮ್ಮಿಂದ ಆಗಲಿ ಹೋಗಿದ್ದಾರೆ. ಅವರಿಗೆ ತುಂಬು ಹೃದಯದ ಶ್ರದ್ಧಾಂಜಲಿಯನ್ನು ನನ್ನ ಪರವಾಗಿ ಹಾಗೂ ಸದನದ ಪರವಾಗಿ ಅರ್ಪಿಸುತ್ತೇನೆ.

ಅಧ್ಯಕ್ಷರು: ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈಗ ಪ್ರಶ್ನೋತ್ತರ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳಿಗೆ ಪುರುಸೊತ್ತಿಲ್ಲವೋ ಹೇಗೆ ಎಂದು ಸ್ಪಷ್ಟವಾಗಿ ಹೇಳಿ.

ಅಧ್ಯಕ್ಷರು: ಸ್ವಲ್ಪ ತಡವಾಗಿ ಬರುತ್ತೇನೆಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಅವರನ್ನು consult ಮಾಡಿಯೇ ಸಮಯ ನಿಗದಿ ಮಾಡುತ್ತೀರಿ. ಇದು ಏನಾಗುತ್ತದೆ ಅಂದರೆ ನಿಮ್ಮ ಕಾಲದಲ್ಲಿ ಟ್ರೆಡಿಷನ್ಸ್ ಇಲ್ಲ, ರೂಲ್ಸ್ ಇಲ್ಲ, ಏನೂ ಇಲ್ಲ. ಒಂದು ರೀತಿ ಬುಲ್ಡೋಜ್ ಮಾಡಿಕೊಂಡು ಹೋದಂತೆ ಆಗುತ್ತದೆ. ಏನೋ ಸರ್ಕಾರ ಇದೆ, ಇದು ಡೆಮಾಕ್ರಟಿಕ್ ಗವರ್ನಮೆಂಟ್? ಅಥವಾ ಫ್ಯಾಸಿಸ್ಟ್ ಗವರ್ನಮೆಂಟೇ ಅಥವಾ ಡಿಕ್ಟೇಟರ್‌ಶಿಪ್ಪೋ ನನಗೇನೂ ಅರ್ಥವಾಗುವುದಿಲ್ಲ. ಸದನ ಪ್ರಾರಂಭದ ದಿವಸವೇ ಇಲ್ಲವೆಂದರೆ ಹೇಗೆ? ಅವರಿಗೆ ಕೇಳಿ ನೀವು ಸಮಯ ನಿಗದಿ ಮಾಡುತ್ತೀರಿ, ಡೇಟ್ ನಿಗಧಿ ಮಾಡುತ್ತೀರಿ, ಕ್ಯಾಬಿನೆಟ್‌ನಲ್ಲಿ ಏನು ಡೇಟ್ ಫಿಕ್ಸ್ ಮಾಡುತ್ತಾರೆ ಅದನ್ನೇ ನೀವು ಒಪ್ಪಿಕೊಳ್ಳುತ್ತೀರಿ, ತಾವೂ ನಮ್ಮ ರಕ್ಷಣೆಗೆ ಬರುವುದಿಲ್ಲ, ಅವರಿಗಂತೂ ಪ್ರಜಾಪ್ರಭುತ್ವ ಇದೆ ಎನ್ನುವ ನೆನಪು ಇಲ್ಲ, I am very sorry for this. ನಾವು ಪದೇ ಪದೇ ಎಷ್ಟು ಸಾರಿ ಹೇಳುವುದಕ್ಕಾಗುತ್ತದೆ? ಪ್ರಜಾಪ್ರಭುತ್ವದಲ್ಲಿ ಸಮಸ್ಯೆಗಳನ್ನು ಚರ್ಚೆಯಿಂದ ಬಗೆಹರಿಸಿಕೊಳ್ಳಬಹುದು. ಸೂಚನೆ ಕೊಡಬಹುದು, ಕೇಳಿಕೊಳ್ಳಬಹುದು, ಇಲ್ಲ, ನೀವು ಮಾಡಿದ್ದೇ ಮಾಡಿ ನಾವು ಹೇಳಿದ್ದೇ ಹೇಳುತ್ತೇವೆಂದರೆ ಅದಕ್ಕೆ ಏನು ಅರ್ಥ ಇದೆ?

ಅಧ್ಯಕ್ಷರು: ಸ್ವಲ್ಪ ತಡವಾಗಿ ಬರುತ್ತೇನೆಂದು ಹೇಳಿ ಅನುಮತಿ ತೆಗೆದುಕೊಂಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಡವಾಗಿಯಾದರೂ ಬರಲಿ, ಬಂದರೆ ನಿಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳಿ. ಸದನಕ್ಕೆ ಗೌರವ ಕೊಡಬೇಕು. ಸದನದಲ್ಲಿ ಅವರಿಂದ ಬೇರೆಯರು ಕಲಿಯಬೇಕು..... ಅಧ್ಯಕ್ಷರೆ, ರೂಲ್ 60 ರ ಕೆಳಗೆ,

ಅಧ್ಯಕ್ಷರು: ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಏನು ಹೇಳುತ್ತೇನೆಂದು ಕೇಳಿ. ನಿಯಮ 60ರ ಕೆಳಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆ ನಿಲುವಳಿ ಸೂಚನೆಯಲ್ಲಿ ಕೇವಲ ರಾಜ್ಯದಲ್ಲಿ ಹದಗೆಡುತ್ತಿರತಕ್ಕಂತಹ ಕಾನೂನು ವ್ಯವಸ್ಥೆ ಬಗ್ಗೆ ಪ್ರಸ್ತಾಪ ಮಾಡಬೇಕು, ಮೊದಲು ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ, ತದ ನಂತರ ಈ ಚರ್ಚೆ ಮುಗಿದ ಮೇಲೆ ಬೇಕಾದರೆ ಪ್ರಶ್ನೋತ್ತರ ತೆಗೆದುಕೊಳ್ಳಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ಮನವಿ, ಈ ವಿಷಯವನ್ನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಹಳ ಮುಖ್ಯವಾದ ವಿಚಾರ ಇದೆ. ಬಳ್ಳಾರಿಯಲ್ಲಿ ಗಲಾಟೆ, ಮೈಸೂರಿನಲ್ಲಿ ಗಲಾಟೆ, ಮೈಸೂರಿನಲ್ಲಿ ಮೇಯರ್ ಎಲೆಕ್ಷನ್‌ಲ್ಲಿಯೂ ಗಲಾಟೆ, ಮಂಗಳೂರಿನಲ್ಲಿ ಗಲಾಟೆ, ಕರಾವಳಿಯಲ್ಲಿ ಗಲಾಟೆ, ಜರ್ನಲಿಸ್ಟ್ ಮೇಲೆ ಗಲಾಟೆ, ರೈತರ ಮೇಲೆ ಗಲಾಟೆ, ಒಂದೆರಡು ಇಶ್ಯೂ ಅಲ್ಲ, ಒಂಬತ್ತು ತಿಂಗಳು ಬಿಡಿ, ಇತ್ತೀಚೆಗೆ ಈ ಎರಡು ತಿಂಗಳುಗಳಲ್ಲಿ ಕಾನೂನಿಗೆ ಸಂಬಂಧಪಟ್ಟ ಸಾಕಷ್ಟು ವಿಷಯಗಳನ್ನು ಮತ್ತು ಲಾ ಅಂಡ್ ಆರ್ಡರ್ ಸಮಸ್ಯೆ ಇಲ್ಲಿ ಉದ್ಭವವಾಗಿದೆ. ಅದರಲ್ಲಿ ನಮ್ಮ ಗೃಹಸಚಿವರು ಅವರು ಏಕೆ ಇಷ್ಟು ಲೈಟಾಗಿ ತೆಗೆದುಕೊಳ್ಳುತ್ತಾರೆ ನನಗೆ ಗೊತ್ತಿಲ್ಲ, ನಿಜವಾಗಿ ಹೇಳುತ್ತೇನೆ ಅವರು ಈ ಜಾಗದಲ್ಲಿ ಇರುವುದಕ್ಕೆ ಲಾಯಕ್ಕೆ ಇಲ್ಲ. ನಾನು ಖಂಡಿತವಾಗಿ ಹೇಳುತ್ತೇನೆ. ಅವರ ಕಾಲದಲ್ಲಿ ಆದಷ್ಟು ಇಂತಹ ಘಟನಾವಳಿಗಳು ಮತ್ತೊಂದು....

ಶ್ರೀ ಕೆ.ಎಸ್. ಈಶ್ವರಪ್ಪ: ಕಾನೂನು ಬಗ್ಗೆ ಮಾತನಾಡುವವರು ತಾವು ಕಾನೂನು ಕೈ ಬಿಟ್ಟು ಹೋಗುತ್ತಿದ್ದೀರಿ. ನಾನು ಅದನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, Law & Order ಬಗ್ಗೆ ಅವರು ಪ್ರಸ್ತಾಪ ಮಾಡುವುದಕ್ಕೆ ನನ್ನ ಅಭ್ಯಂತರ್ಯವೇನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಮಾತನಾಡುತ್ತಿದ್ದೇನೆ. ತಾವು ಆಮೇಲೆ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಇದನ್ನು ಆಮೇಲೆ ಹೇಳುವುದಲ್ಲ ಸಾರ್. ನೀವು ಇದ್ದಕ್ಕಿದ್ದ ಹಾಗೆ ಕಾನೂನಿನ ಬಗ್ಗೆ ಮಾತನಾಡುತ್ತಿರುವವರು, ಈಗ ತಾವು ಕಾನೂನು

ಬಿಟ್ಟು ಹೋಗುತ್ತಿದ್ದೀರಿ. ಆ ಬಗ್ಗೆ ನಾನು ಹೇಳುತ್ತಿರುವುದು. ಮಾನ್ಯ ಅಧ್ಯಕ್ಷರೆ, ಇವರು ಕಾನೂನು ಬಗ್ಗೆ ಮಾತನಾಡುತ್ತಿರುವುದು. ಆದರೆ ಅವರು ಕಾನೂನು ಬಿಟ್ಟೇ ಹೋಗುತ್ತಿದ್ದಾರೆ. ಯಾವ ಸೆಕ್ಷನ್ ಅಡಿಯಲ್ಲಿ ಮಾತನಾಡುತ್ತಿದ್ದಾರೆ ಎಂಬುದನ್ನು ಅವರು ಹೇಳಬೇಕಲ್ಲವೆ.?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಏನು, ತಾವು ವಾದ ವಿವಾದ ಮಾಡುತ್ತಿದ್ದೀರಿ? ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈಗ ತಾವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ ಅಥವಾ ಅವರು ಹೇಳುವುದನ್ನು ಕೇಳಿದ ಮೇಲೆ ನೀವು ಹೇಳಿ ಎಂದು ನನಗೆ ಹೇಳಿದರೆ ನಾನು ಹೇಳುತ್ತೇನೆ. ಎರಡರಲ್ಲಿ ಒಂದು ಆಗಲಿ. ಅದನ್ನು ಬಿಟ್ಟು ಇಲ್ಲಿ ಕುಸ್ತಿ ಆಡುವ ರೀತಿಯಲ್ಲಿ ಬಂದರೆ.

ಶ್ರೀ ಟಿ.ಬಿ. ಜಯಚಂದ್ರ:– ಪ್ರಿಲಿಮನರಿ ಸಬ್‌ಮಿಶನ್‌ಗೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಮೇಲೆ ಮಾನ್ಯ ಸಚಿವರು ಹೀಗೇಕೆ ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಈಶ್ವರಪ್ಪನವರೆ,

ಶ್ರೀ ಕೆ.ಎಸ್.ಈಶ್ವರಪ್ಪ:– ನಿಮ್ಮಗಳ ಕುಸ್ತಿ ಮಧ್ಯೆ ನಾನು ಬರುವುದಿಲ್ಲ. ಖಂಡಿತ ಇಲ್ಲಿ ಕುಸ್ತಿ ಮಾಡಲು ನಾವು ಬಂದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಬಗ್ಗೆ ನಾನು ಓದುತ್ತೇನೆ. ನೀವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಿ, ನಿಮ್ಮ ನಿರ್ಣಯಕ್ಕೆ ನಾವು ತಲೆಬಾಗುತ್ತೇವೆ.

ಶ್ರೀ ಸಿದ್ದು ಸವದಿ:– ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:– ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ ಓದುತ್ತಾರೆ. ಅದು ಆದನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ನಾನು ರೂಲ್ 60 ರ ಮೇಲೆ ದಿನಾಂಕ: 19–02–2009 ರಂದು ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತಿದ್ದೇನೆ. Moral Policing ನೆಪದಲ್ಲಿ ಸಂಘಟನೆಗಳು ಕಾರ್ಯಕರ್ತರು ಕಾನೂನು ಕೈಗೆತ್ತಿಕೊಂಡು ಮಂಗಳೂರು ನಗರದಲ್ಲಿ ಅಮಾಯಕ ಹೆಣ್ಣು ಮಕ್ಕಳ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ. ಬಸ್‌ನಲ್ಲಿ ಸಂಚರಿಸುತ್ತಿದ್ದ ಮಂಜೇಶ್ವರ್ ಶಾಸಕರ ಮಗಳ ಮೇಲೆ ದೈಹಿಕ ಹಲ್ಲೆ ನಡೆಸಿದ್ದಾರೆ. ಬೆಂಗಳೂರು ನಗರದಲ್ಲಿ ಕೊಲೆ, ಸುಲಿಗೆ ಪ್ರಸಂಗಗಳು

ಸತತವಾಗಿ ನಡೆಯುತ್ತಿದ್ದು ನಾಗರೀಕರು ಭಯಭೀತಿಯ ವಾತಾವರಣದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಬಳ್ಳಾರಿಯಲ್ಲಿ ಮೆರವಣಿಗೆ ನಡೆಸುತ್ತಿದ್ದ ರೈತರ ಮೇಲೆ ವಿನಾಕಾರಣ ಗೋಲಿಬಾರ್, ಮೈಸೂರಿನಲ್ಲಿ ಪರಿವಾರ ಜನಾಂಗದವರ ಮೇಲೆ ಲಾಠಿ ಛಾರ್ಜ್ ಹಾಗೂ ಅಶ್ರುವಾಯು ಪ್ರಯೋಗ, ಭಯೋತ್ಪಾದನೆ ವಿರೋಧಿ ಅಭಿಯಾನ ಹೆಸರಿನಲ್ಲಿ ಸರ್ಕಾರಿ ಖರ್ಚಿನಲ್ಲಿ ಸಂಘ ಪರಿವಾರದ ಪ್ರಚಾರ ನಡೆಸುತ್ತಿರುವ ಸರ್ಕಾರದ ಕ್ರಮವನ್ನು ವಿರೋಧಿಸಿದ್ದ ವಿದ್ಯಾರ್ಥಿ ಸಂಘಟನೆಗಳ ಮತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿ ಬಂಧಿಸಿ ಮೊಕದ್ದಮೆಗಳನ್ನು ಹಾಕಲಾಗಿದೆ. ಹೀಗೆ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದು Rule of Law ಇಲ್ಲವಾಗಿದೆ. ಈ ಬಗ್ಗೆ ಚರ್ಚಿಸಲು ಅವಕಾಶವನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ವಿರೋಧಿ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಪ್ರಶ್ನೋತ್ತರ ಅವಧಿಯ ಕಲಾಪ ಮುಗಿದ ಮೇಲೆ ನೀವು ಇದರ ಬಗ್ಗೆ ಪ್ರಿಲಿಮನರಿ ಸಬ್‌ಮಿಶನ್ ಮಾಡಿ. ಆಮೇಲೆ ಅದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ ಅದನ್ನು ಕೇಳೋಣ. ಏಕೆಂದರೆ ಈಗ ಪ್ರಶ್ನೋತ್ತರ ಅವಧಿಯಲ್ಲಿ ಬಹಳ ಜನ ಶಾಸಕರು ಭಾಗವಹಿಸಬೇಕೆಂದಿದ್ದಾರೆ. ಆದುದರಿಂದ ಪ್ರಶ್ನೋತ್ತರ ಆದಮೇಲೆ ನಿಮ್ಮದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಆಮೇಲೆ ತೆಗೆದುಕೊಳ್ಳಿ. ನಿಮಗೆ ಇದರ ಬಗ್ಗೆ ಮನವರಿಕೆಯಂತೂ ಆಗಿದೆಯಲ್ಲವೆ. ಗೋಲಿಬಾರ್, ಬಳ್ಳಾರಿಯಲ್ಲಿ ನಡೆದಂಥ ಘಟನೆ, ಮಂಗಳೂರಿನಲ್ಲಿ ನಡೆದಂಥ ಘಟನೆ, ಬೆಂಗಳೂರಿನಲ್ಲಿ ನಡೆದಂಥ ದರೋಡೆ, ಸುಲಿಗೆ, ಕೊಲೆ, ಇವೆಲ್ಲದರ ಬಗ್ಗೆ ನಿಮಗೆ ಈಗಾಗಲೇ ಮನವರಿಕೆಯಾಗಿದೆಯೆಂದರೆ ಇದನ್ನು ಬೇಕಾದರೆ ಆಮೇಲೆಯೇ ತೆಗೆದುಕೊಳ್ಳೋಣ.

ಅಧ್ಯಕ್ಷರು:- ಈ ನಿಲುವಳಿ ಸೂಚನೆ ಮೇಲೆ ತಾವೇನು ಪ್ರಿಲಿಮನರಿ ಸಬ್‌ಮಿಶನ್ ಮಾಡಬೇಕೋ ಅದನ್ನು ಪ್ರಶ್ನೋತ್ತರ ಅವಧಿ ಆದಮೇಲೆ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವು ಯಾವಾಗಲಾದರೂ ತೆಗೆದುಕೊಳ್ಳಿ. ಆದರೆ ನಿಮಗೆ ಮನವರಿಕೆಯಾದರೆ ಸಾಕು. ಪರಿವಾರ ಜನಾಂಗದವರ ಮೇಲೆ ಲಾಠಿ ಛಾರ್ಜ್, ಈಗ ನೋಡಿ ಮೇಯರ್ ಎಲೆಕ್ಷನ್‌ನಲ್ಲಿಯೂ ಕೂಡ ಗಲಾಟೆಯಾಗಿದೆ.

ಅಧ್ಯಕ್ಷರು:- ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ಇವೆಲ್ಲದರ ಬಗ್ಗೆ ತಾವು ಹೇಳುವಿರಂತೆ. ದಯವಿಟ್ಟು ಈಗ ಸಹಕರಿಸಿ. ಈಗ ಪ್ರಶ್ನೋತ್ತರ. ಮೊದಲನೆಯ ಪ್ರಶ್ನೆ ಮಾನ್ಯ ಸಿದ್ದು ಸವದಿಯವರದ್ದು.

2. ಪ್ರಶ್ನೋತ್ತರಗಳು:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದಲ್ಲಿರುವ ಮಾರಾರ್ಜಿದೇಸಾಯಿ ವಸತಿ ಶಾಲೆಗಳ ಮಂಜೂರಾತಿಯಲ್ಲಿ ಆದ ತಾರತಮ್ಯದ ಬಗ್ಗೆ.

02 ಶ್ರೀ ಸಿದ್ದು ಸವದಿ (ತೇರದಾಳ)

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಂಜೂರಾತಿ (ಸಮಾಜ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿರುವ ಒಟ್ಟು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು?

385

ಆ 01–04–2004 ರಿಂದ ಇಲ್ಲಿಯ ವರೆಗೆ ಮಂಜೂರು ಮಾಡಿರುವ ಈ ಶಾಲೆಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)

ದಿನಾಂಕ:1–4–2004ರ ನಂತರ ರಾಜ್ಯದಲ್ಲಿ ಒಟ್ಟು 272 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಮಂಜೂರು ಮಾಡಲಾಗಿದ್ದು ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ ಈ ಶಾಲೆಗಳ ಮಂಜೂರಾತಿ ಯಲ್ಲಿ ತಾರತಮ್ಯ ಆಗಿರುವುದು ನಿಜವೇ, ಇದಕ್ಕೆ ಹೊಣೆ ಯಾರು?

ಯಾವುದೇ ರೀತಿಯ ತಾರತಮ್ಯ ಉಂಟಾಗಿರುವುದಿಲ್ಲ

ಈ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಇರುವ ನಿಯಮಾವಳಿಗಳು ಯಾವುವು?

ಗ್ರಾಮೀಣ ಭಾಗದ ಪ್ರತಿಭಾವಂತ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದ್ದು ಯಾವುದೇ ಸ್ಥಳದಲ್ಲಿ ಅಂತಹ ಶಾಲೆ ಅಗತ್ಯವಿರುವುದಾಗಿ ಕಂಡುಬಂದಲ್ಲಿ ಲಭ್ಯವಾಗುವ ಅನುದಾನದ ಮೇರೆಗೆ ಪರಿಶೀಲಿಸಿ ಮಂಜೂರಾತಿ ನೀಡಲಾಗುತ್ತಿದೆ.

ಉ ಹಾಗಿದ್ದಲ್ಲಿ ಈ ತಾರತಮ್ಯವನ್ನು ಸರಿಪಡಿಸಿ ತೆರದಾಳ್ ಕ್ಷೇತ್ರಕ್ಕೆ ವಸತಿ ಶಾಲೆಯನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದೇ?

ಪರಿಶೀಲಿಸಲಾಗುವುದು

ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2 ಕ್ಕೆ ಅನುಬಂಧ

ಕ್ರ ಸಂ	ಜಿಲ್ಲೆಗಳು	ವಿಧಾನಸಭಾ ಕ್ಷೇತ್ರಗಳು	ಕ್ರ ಸಂ.	ವಸತಿ ಶಾಲೆ ಮಂಜೂರಾಗಿರುವ ಸ್ಥಳದ ವಿವರ	ವರ್ಗ	ವರ್ಷ
1	ಬೆಂಗಳೂರು (ನ)	ಯಲಹಂಕ	1	ಬೆಂಗಳೂರು ಉತ್ತರ	ಅ.ಸಂ	2006-07 (A)
2	ಬೆಂಗಳೂರು (ಗ್ರಾ)	ದೇವನಹಳ್ಳಿ	2	ಕುಂದಾಣ	ಪ. ವರ್ಗ	2005-06
		ದೊಡ್ಡಬಳ್ಳಾಪುರ	3	ದೊಡ್ಡಬಳ್ಳಾಪುರ	ಪ. ಜಾತಿ	2008-09
3	ರಾಮನಗರ	ಮಾಗಡಿ	4	ಹುಲಿಕಟ್ಟೆ (ಚಕ್ರಬಾವಿ)	ಹಿಂ. ವರ್ಗ	2006-07
			5	ಮಾಗಡಿ	ಅ.ಸಂ	2004-05
		ರಾಮನಗರ	6	ರಾಮನಗರ	ಪ. ಜಾತಿ	2007-08
			7	ರಾಮನಗರ	ಪ. ವರ್ಗ	2006-07
			8	ಬೈರಮಂಗಲ	ಹಿಂ. ವರ್ಗ	2006-07
			9	ರಾಮನಗರ	ಹಿಂ. ವರ್ಗ	2007-08
		ಚೆನ್ನಪಟ್ಟಣ	10	ಚೆನ್ನಪಟ್ಟಣ	ಹಿಂ. ವರ್ಗ	2007-08
			11	ಚೆನ್ನಪಟ್ಟಣ	ಅ.ಸಂ	2007-08
		ಕನಕಪುರ	12	ಮುಳ್ಳಹಳ್ಳಿ	ಹಿಂ. ವರ್ಗ	2004-05
			13	ಕನಕಪುರ ಟೌನ್	ಹಿಂ.	2004-

					ವರ್ಗ	05
			14	ಸಾತನೂರು (ಬೋರೆಗೌಡನದೆ ಾಡ್ಡಿ)	ಹಿಂ. ವರ್ಗ	2005-06
			15	ದೊಡ್ಡಮರಳ ವಾಡಿ	ಹಿಂ. ವರ್ಗ	2005-06
4	ಚಿತ್ರದುರ್ಗ	ಚಳ್ಳಕೆರೆ	16	ಚಳ್ಳಕೆರೆ	ಪ. ಜಾತಿ	2004-05
		ಹಿರಿಯೂರು	17	ಹಿರಿಯೂರು	ಪ. ಜಾತಿ	2008-09
			18	ಹಿರಿಯೂರು	ಪ. ವರ್ಗ	2008-09
			19	ಹಿರಿಯೂರು	ಹಿಂ. ವರ್ಗ	2008-09
			20	ಹಿರಿಯೂರು	ಅ.ಸಂ	2008-09
		ಚಿತ್ರದುರ್ಗ	21	ಭರಮಸಾಗರ ಟೌನ್	ಪ. ಜಾತಿ	2006-07
			22	ಭರಮಸಾಗರ (ಕೊಗುಂಡೆ)	ಪ. ಜಾತಿ	2007-08
			23	ಚಿತ್ರದುರ್ಗ	ಅ.ಸಂ	2005-06
		ಹೊಸದುರ್ಗ	24	ಹೊಸದುರ್ಗ	ಹಿಂ. ವರ್ಗ	2005-06
		ಹೊಳಲ್ಕೆರೆ	25	ಹೊಳಲ್ಕೆರೆ	ಪ. ವರ್ಗ	2005-06
			26	ಹೊಳಲ್ಕೆರೆ	ಹಿಂ. ವರ್ಗ	2008-09
		ಮೊಳಕಾಲ್ಮೂರು	27	ಮೊಳಕಾಲ್ಮೂರು	ಪ. ವರ್ಗ	2005-06

5	ಕೋಲಾರ	ಕೋಲಾರ	28	ವೇಮಗಲ್ (ಪಾರ್ಶ್ವಗಾನಹಳ್ಳಿ)	ಹಿಂ. ವರ್ಗ	2005-06
			29	ಕೋಲಾರ	ಅ.ಸಂ	2005-06
		ಮಾಲೂರು	30	ಮಾಲೂರು	ಹಿಂ. ವರ್ಗ	2008-09
		ಮುಳಬಾಗಿಲು	31	ಮುಳಬಾಗಿಲು	ಅ.ಸಂ	2008-09
			32	ಮುಳಬಾಗಿಲು	ಪ. ಜಾತಿ	2008-09
			33	ಮುಳಬಾಗಿಲು	ಹಿಂ. ವರ್ಗ	2004-05
			34	ಮುಳಬಾಗಿಲು (ಗಟ್ಟ ವೆಂಕಟ ರಮಣ)	ಹಿಂ. ವರ್ಗ	2008-09
		ಬಂಗಾರ ಪೇಟೆ	35	ಬೇತಮಂಗಲ (ಕಾಮಸಮುದ್ರ)	ಪ. ಜಾತಿ	2006-07
6	ಚಿಕ್ಕ ಬಳ್ಳಾಪುರ	ಶಿಡ್ಲಘಟ್ಟ	36	ಶಿಡ್ಲಘಟ್ಟ (ಗಂಜಿಗುಂಟೆ)	ಪ. ವರ್ಗ	2005-06
		ಬಾಗೇಪಲ್ಲಿ	37	ಬಾಗೇಪಲ್ಲಿ (ಎಡಗಟ್ಟಪಲ್ಲಿ)	ಪ. ಜಾತಿ	2006-07
		ಗೌರಿ ಬಿದನೂರು	38	ಗೌರಿಬಿದನೂರು (ವಿದ್ಯಾನಗರ)	ಪ. ಜಾತಿ	2005-06
		ಚಿಕ್ಕಬಳ್ಳಾ ಪುರ	39	ಚಿಕ್ಕಬಳ್ಳಾಪುರ	ಹಿಂ. ವರ್ಗ	2008-09
			40	ಚಿಕ್ಕಬಳ್ಳಾಪುರ	ಅ.ಸಂ	2008-09
			41	ಚಿಕ್ಕಬಳ್ಳಾಪುರ	ಪ. ಜಾತಿ	2008-09
7	ಶಿವಮೊಗ್ಗ	ಶಿಕಾರಿಪುರ	42	ಶಿಕಾರಿಪುರ	ಪ. ಜಾತಿ	2007-

				(ಮಳೂರು)		08
			43	ಹೊಸೂರು	ಹಿಂ. ವರ್ಗ	2004-05
			44	ಶಿಕಾರಿಪುರ ಟೌನ್	ಹಿಂ. ವರ್ಗ	2006-07
			45	ಶಿರಾಳಿಕೊಪ್ಪ	ಅ.ಸಂ	2008-09
			46	ಶಿರಾಳಿಕೊಪ್ಪ	ಹಿಂ. ವರ್ಗ	2008-09
		ಭದ್ರಾವತಿ	47	ಹೊಳೆ ಹೊನ್ನೂರು (ಹಂಚಿನಸಿದ್ದಾಪುರ)	ಪ. ಜಾತಿ	2006-07
			48	ಭದ್ರಾವತಿ	ಪ. ಜಾತಿ	2008-09
		ಸಾಗರ	49	ಸಾಗರ	ಹಿಂ. ವರ್ಗ	2008-09
		ಸೊರಬ	50	ಸೊರಬ	ಪ. ಜಾತಿ	2008-09
		ತೀರ್ಥಹಳ್ಳಿ	51	ತೀರ್ಥಹಳ್ಳಿ	ಪ. ಜಾತಿ	2008-09
			52	ತೀರ್ಥಹಳ್ಳಿ ಟೌನ್	ಹಿಂ. ವರ್ಗ	2006-07
8	ತುಮಕೂರು	ಕೊರಟಗೆರೆ	53	ಕೊರಟಗೆರೆ (ಹೊಳವನಹಳ್ಳಿ)	ಪ. ವರ್ಗ	2005-06
		ತುಮಕೂರು ಗ್ರಾ	54	ತುಮಕೂರು ಗ್ರಾ	ಪ. ಜಾತಿ	2008-09
		ಪಾವಗಡ	55	ಪಾವಗಡ (ದೊಡ್ಡಹಳ್ಳಿ)	ಪ. ಜಾತಿ	2004-05
			56	ಪಾವಗಡ	ಪ. ವರ್ಗ	2007-

						08
			57	ಪಾವಗಡ	ಹಿಂ. ವರ್ಗ	2008-09
		ಶಿರಾ	58	ಚಿಕ್ಕನಹಳ್ಳಿ	ಪ. ಜಾತಿ	2006-07 (A)
			59	ಶಿರಾ	ಪ. ಜಾತಿ	2006-07 (A)
			60	ಬೆಳ್ಳಾವಿ (ಹೂವಿನಕಟ್ಟೆ)	ಪ. ಜಾತಿ	2008-09
			61	ಬಡವನಹಳ್ಳಿ	ಹಿಂ. ವರ್ಗ	2006-07
			62	ಶಿರಾ	ಅ.ಸಂ	2006-07 (A)
		ಚಿಕ್ಕನಾಯಕನ ಹಳ್ಳಿ	63	ಚಿಕ್ಕನಾಯಕನ ಹಳ್ಳಿ	ಹಿಂ. ವರ್ಗ	2006-07
		ಗುಬ್ಬಿ	64	ಗುಬ್ಬಿ	ಪ. ಜಾತಿ	2008-09
		ಕುಣಿಗಲ್	65	ಹುಲಿಯೂರು ದುರ್ಗ	ಪ. ಜಾತಿ	2005-06
			66	ಹುಲಿಯೂರು ದುರ್ಗ	ಹಿಂ. ವರ್ಗ	2006-07
			67	ಕುಣಿಗಲ್	ಅ.ಸಂ	2008-09
		ತಿಪಟೂರು	68	ತಿಪಟೂರು	ಹಿಂ. ವರ್ಗ	2008-09
		ತುರುವೇಕೆರೆ	69	ತುರುವೇಕೆರೆ	ಹಿಂ. ವರ್ಗ	2006-07
9	ದಾವಣಗೆರೆ	ಹರಪ್ಪನಹಳ್ಳಿ	70	ಹರಪ್ಪನಹಳ್ಳಿ (ನಜೀರ್‌ನಗರ)	ಹಿಂ. ವರ್ಗ	2005-06
			71	ಹರಪ್ಪನಹಳ್ಳಿ	ಪ. ವರ್ಗ	2008-

						09
		ಹರಿಹರ	72	ಹರಿಹರ (ಹಳೆ ಹರ್ಲಾಪುರ)	ಅ.ಸಂ	2006-07
		ದಾವಣಗೆರೆ ಉತ್ತರ	73	ದಾವಣಗೆರೆ ಉತ್ತರ	ಪ. ಜಾತಿ	2008-09
			74	ದಾವಣಗೆರೆ (ಅವರಗೆರೆ)	ಪ. ವರ್ಗ	2004-05
			75	ದಾವಣಗೆರೆ (ಕೆರೆಬಿಳಚಿ)	ಅ.ಸಂ	2005-06
			76	ದಾವಣಗೆರೆ	ಅ.ಸಂ	2006-07 (A)
		ಜಗಳೂರು	77	ಜಗಳೂರು (ಬಿಳಿಚೋಡು)	ಹಿಂ. ವರ್ಗ	2006-07 (A)
		ಹೊನ್ನಾಳಿ	78	ಹೊನ್ನಾಳಿ	ಹಿಂ. ವರ್ಗ	2006-07 (A)
10	ಮೈಸೂರು	ನಂಜನ ಗೂಡು	79	ನಂಜನಗೂಡು (ಮುಳ್ಳೇಗೌಡ)	ಪ. ಜಾತಿ	2006-07
		ಟಿ. ನರಸೀಪುರ	80	ಬನ್ನೂರು (ಸೋಸಲೆ)	ಪ. ಜಾತಿ	2007-08
			81	ಬನ್ನೂರು	ಹಿಂ. ವರ್ಗ	2006-07 (A)
		ವರುಣ	82	ಮೈಸೂರು (ವರಕೋಡು)	ಪ. ಜಾತಿ	2006-07
			83	ಮೈಸೂರು	ಅ.ಸಂ	2005-06
		ಹುಣಸೂರು	84	ಹುಣಸೂರು (ಬಿಳಿಕೆರೆ)	ಪ. ಜಾತಿ	2007-08
			85	ಹುಣಸೂರು (ಅವರಗೆರೆ)	ಪ. ವರ್ಗ	2004-05
		ಪಿರಿಯ ಪಟ್ಟಣ	86	ಪಿರಿಯಾಪಟ್ಟಣ	ಪ. ವರ್ಗ	2004-

						05
			87	ಹಲಗನಹಳ್ಳಿ (ಪಿರಿಯಾ ಪಟ್ಟಣ)	ಅ.ಸಂ	2007-08
		ಹೆಗ್ಗಡದೇವನ ಕೋಟೆ	88	ಹೆಗ್ಗಡದೇವನ ಕೋಟೆ (ಅಂತರಸಂತೆ)	ಪ. ಜಾತಿ	2006-07
			89	ಹೆಚ್.ಡಿ.ಕೋಟೆ (ಕೆ.ಬೆಳತ್ತೂರು)	ಪ. ವರ್ಗ	2007-08
		ಕೃಷ್ಣರಾಜ ನಗರ	90	ಕೃಷ್ಣರಾಜನಗರ	ಪ. ಜಾತಿ	2008-09
			91	ಕೆ.ಆರ್.ನಗರ-ಸಾಲಿಗ್ರಾಮ	ಹಿಂ. ವರ್ಗ	2007-08
11	ಚಿಕ್ಕಮಗಳೂರು	ಕಡೂರು	92	ಜಜೋಡಿ ಹೋಚಿಹಳ್ಳಿ	ಪ. ಜಾತಿ	2005-06
			93	ಬೀರೂರು (ನಂದಿ ಬಟ್ಟಲು)	ಪ. ಜಾತಿ	2006-07
			94	ಬೀರೂರು (ಬಳಿಕಲ್ಲಹಳ್ಳಿ)	ಪ. ಜಾತಿ	2007-08
			95	ಬೀರೂರು (ಸಿಂದಿಗೆರೆ,)	ಪ. ವರ್ಗ	2005-06
			96	ಬೀರೂರು (ಸರಪನಹಳ್ಳಿ)	ಹಿಂ. ವರ್ಗ	2006-07
			97	ಬೀರೂರು (ಜೋಡಿಲಿಂಗದ ಹಳ್ಳಿ)	ಹಿಂ. ವರ್ಗ	2007-08
		ಚಿಕ್ಕಮಗಳೂರು	98	ಚಿಕ್ಕಮಗಳೂರು	ಅ.ಸಂ	2004-05
		ಮೂಡಿಗೆರೆ	99	ಮೂಡಿಗೆರೆ (ಬಿದರಹಳ್ಳಿ	ಪ. ಜಾತಿ	2006-07

			100	ಮೂಡಿಗೆರೆ	ಹಿಂ. ವರ್ಗ	2008-09
		ಶೃಂಗೇರಿ	101	ಶೃಂಗೇರಿ (ಬೇಗಾರು)	ಪ. ಜಾತಿ	2007-08
			102	ನರಸಿಂಹರಾಜ ಪುರ	ಹಿಂ. ವರ್ಗ	2006-07 (A)
		ತರೀಕೆರೆ	103	ತರೀಕೆರೆ (ಬಾವಿಕೆರೆ)	ಹಿಂ. ವರ್ಗ	2005-06
12	ದಕ್ಷಿಣಕನ್ನಡ	ಮಂಗಳೂರು ನಗರ ದಕ್ಷಿಣ	104	ಉಳ್ಳಾಲ	ಅ.ಸಂ	2006-07 (A)
		ಮಂಗಳೂರು ನಗರ ಉತ್ತರ	105	ಮಂಗಳೂರು ನಗರ ಉತ್ತರ	ಹಿಂ. ವರ್ಗ	2008-09
		ಬಂಟ್ವಾಳ	106	ಬಂಟ್ವಾಳ(ವಗ್ಗ)	ಹಿಂ. ವರ್ಗ	2006-07
		ಸುಳ್ಯ	107	ಸುಳ್ಯ	ಹಿಂ. ವರ್ಗ	2008-09
		ಪುತ್ತೂರು	108	ಪುತ್ತೂರು (ಸಾವಿಮರ)	ಪ. ಜಾತಿ	2007-08
13	ಹಾಸನ	ಬೇಲೂರು	109	ಬೇಲೂರು ಟೌನ್	ಪ. ಜಾತಿ	2006-07
			110	ಬೇಲೂರು	ಹಿಂ. ವರ್ಗ	2008-09
		ಚೆನ್ನರಾಯ ಪಟ್ಟಣ	111	ನುಗ್ಗೇನಹಳ್ಳಿ	ಹಿಂ. ವರ್ಗ	2008-09
			112	ಕುಂದೂರು ಮಠ	ಹಿಂ. ವರ್ಗ	2007-08
		ಸಕಲೇಶ ಪುರ	113	ಸಕಲೇಶಪುರ	ಪ. ಜಾತಿ	2008-09
			114	ಆಲೂರು	ಹಿಂ. ವರ್ಗ	2007-08

			115	ಹೆತ್ತೂರು	ಹಿಂ. ವರ್ಗ	2007–08
		ಅರಸೀಕೆರೆ	116	ರಂಗಾಪುರ	ಹಿಂ. ವರ್ಗ	2006–07 (A)
		ಹಾಸನ	117	ಹಾಸನ	ಅ.ಸಂ	2005–06
			118	ಮೊಸಲೆಹೊಸ ಹಳ್ಳಿ	ಹಿಂ. ವರ್ಗ	2004–05
		ಹೊಳೆನರಸೀ ಪುರ	119	ಹೊಳೆನರಸೀ ಪುರ	ಪ. ಜಾತಿ	2007–08
			120	ತಟ್ಟೆಕೆರೆಬಾರೆ	ಹಿಂ. ವರ್ಗ	2006–07
			121	ಹೊಳೆನರಸೀಪುರ, ಹರದನಹಳ್ಳಿ, ಹಳೇಕೋಟೆ ಹೋಬಳಿ	ಹಿಂ. ವರ್ಗ	2007–08
			122	ಹೊಳೆನರಸೀ ಪುರ	ಅ.ಸಂ	2006–07
		ಅರಕಲಗೂಡು	123	ಅರಕಲಗೂಡು (ಮಲ್ಲಿಪಟ್ನ)	ಪ. ಜಾತಿ	2007–08
			124	ಅರಕಲಗೂಡು (ಬರಗೂರು)	ಹಿಂ. ವರ್ಗ	2006–07
			125	ಅರಕಲಗೂಡು ಟೌನ್	ಅ.ಸಂ	2007–08
14	ಮಂಡ್ಯ	ಮಳ್ಳವಳ್ಳಿ	126	ಮಳವಳ್ಳಿ (ಹಲಗೂರು)	ಪ. ಜಾತಿ	2007–08
		ಮಂಡ್ಯ	127	ಮಂಡ್ಯ (ತುಂಬಿನಕೆರೆ)	ಪ. ಜಾತಿ	2007–08
		ಮದ್ದೂರು	128	ಮದ್ದೂರು (ಕೆ.ಹೊನ್ನಲಗೆರ)	ಪ. ಜಾತಿ	2004–05

			129	ಗೆಜ್ಜಲಗೆರೆ	ಹಿಂ. ವರ್ಗ	2006-07 (A)
		ಪಾಂಡವ ಪುರ	130	ಮೇಲುಕೋಟೆ	ಹಿಂ. ವರ್ಗ	2007-08
			131	ಬೇಬಿಬೆಟ್ಟ	ಹಿಂ. ವರ್ಗ	2006-07
		ಶ್ರೀರಂಗ ಪಟ್ಟಣ	132	ಶ್ರೀರಂಗಪಟ್ಟಣ	ಹಿಂ. ವರ್ಗ	2007-08
		ನಾಗಮಂಗಲ	133	ನಾಗಮಂಗಲ (ಸೋಮನಹಳ್ಳಿ)	ಹಿಂ. ವರ್ಗ	2006-07
			134	ನಾಗಮಂಗಲ (ಕಂಬದಹಳ್ಳಿ)	ಹಿಂ. ವರ್ಗ	2007-08
			135	ನಾಗಮಂಗಲ	ಅ.ಸಂ	2006-07 (A)
		ಕೆ.ಆರ್.ಪೇಟೆ	136	ಕೆ.ಆರ್.ಪೇಟೆ (ಹೊಸಹೊಳಲು)	ಹಿಂ. ವರ್ಗ	2005-06
			137	ಕೆ.ಆರ್. ಪೇಟೆ	ಹಿಂ. ವರ್ಗ	2007-08
15.	ಚಾಮರಾಜನಗರ	ಕೊಳ್ಳೇಗಾಲ	138	ಕೊಳ್ಳೇಗಾಲ	ಪ. ವರ್ಗ	2006-07 (A)
			139	ಕೊಳ್ಳೇಗಾಲ (ಹನೂರು)	ಹಿಂ. ವರ್ಗ	2007-08
			140	ಕೊಳ್ಳೇಗಾಲ	ಪ. ಜಾತಿ	2007-08
		ಗುಂಡ್ಲು ಪೇಟೆ	141	ಗುಂಡ್ಲುಪೇಟೆ (ಹಂಗಳ)	ಪ. ವರ್ಗ	2007-08
			142	ಗುಂಡ್ಲುಪೇಟೆ (ತೆರೆಕಣಾಂಬಿ)	ಹಿಂ. ವರ್ಗ	2007-08
			143	ಗುಂಡ್ಲುಪೇಟೆ	ಅ.ಸಂ	2005-06

		ಚಾಮರಾಜ ನಗರ	144	ಸಂತೇಮರಳ್ಳಿ	ಪ. ಜಾತಿ	2004-05
			145	ಚಾಮರಾಜ ನಗರ	ಪ. ವರ್ಗ	2004-05
16	ಉಡುಪಿ	ಉಡುಪಿ	146	ಬ್ರಹ್ಮಾವರ	ಅ.ಸಂ	2006-07 (A)
		ಕಾಪು	147	ಕಾಪು	ಹಿಂ. ವರ್ಗ	2008-09
		ಕಾರ್ಕಳ	148	ಕಾರ್ಕಳ	ಹಿಂ. ವರ್ಗ	2006-07
		ಕುಂದಾಪುರ	149	ಕುಂದಾಪುರ	ಹಿಂ. ವರ್ಗ	2007-08
			150	ಬೈಂದೂರು	ಹಿಂ. ವರ್ಗ	2008-09
17	ಕೊಡಗು	ಮಡಿಕೇರಿ	151	ಆಲೂರು ಸಿದ್ದಾಪುರ	ಹಿಂ. ವರ್ಗ	2006-07
			152	ಕೊಡಿಗೆ	ಹಿಂ. ವರ್ಗ	2007-08
			153	ಕೊಡ್ಲಿಪೇಟೆ	ಅ.ಸಂ	2008-09
		ವೀರಾಜ ಪೇಟೆ	154	ವೀರಾಜಪೇಟೆ	ಅ.ಸಂ	2006-07 (A)
18	ಬೆಳಗಾಂ	ಕುಡಚಿ	155	ಕುಡಚಿ	ಪ. ಜಾತಿ	2008-09
		ಕಾಗವಾಡ	156	ಕಾಗವಾಡ	ಹಿಂ. ವರ್ಗ	2008-09
		ಗೋಕಾಕ್	157	ಕೌಜಲಗಿ	ಪ. ಜಾತಿ	2006-07
			158	ರಾಜನಕಟ್ಟೆ	ಪ. ವರ್ಗ	2006-07

			159	ಪಿ.ಜೆ.ಮಲ್ಲಾ ಪುರ	ಹಿಂ. ವರ್ಗ	2006-07
			160	ಹೀರೆನಂದಿ	ಹಿಂ. ವರ್ಗ	2007-08
			161	ಯಾದವಾಡ	ಹಿಂ. ವರ್ಗ	2006-07 (A)
		ಅರಬಾವಿ	162	ಅರಬಾವಿ (ನಾಗನೂರು)	ಪ. ಜಾತಿ	2007-08
			163	ಕಲ್ಲೊಳ್ಳಿ	ಹಿಂ. ವರ್ಗ	2007-08
		ರಾಯಬಾಗ್	164	ಹಾರೋಗೇರಿ	ಪ. ಜಾತಿ	2006-07 (A)
		ಹುಕ್ಕೇರಿ	165	ಹೊಸೂರು	ಹಿಂ. ವರ್ಗ	2006-07 (A)
		ಯಮಕನ ಮರಡಿ	166	ಯಮಕನಮರಡಿ	ಪ. ವರ್ಗ	2008-09
		ಬೈಲ ಹೊಂಗಲ	167	ಬೈಲಹೊಂಗಲ	ಹಿಂ. ವರ್ಗ	2008-09
		ಬೆಳಗಾವಿ ಗ್ರಾಮಾಂತರ	168	ಬೆಳಗಾವಿ ಗ್ರಾಮಾಂತರ	ಪ. ಜಾತಿ	2008-09
		ಚಿಕ್ಕೋಡಿ ಸದಲಗಾ	169	ಮಜಲಹಟ್ಟಿ	ಪ. ಜಾತಿ	2006-07
			170	ಸದಲಗಾ (ಯಕ್ಸಾಂಬ)	ಹಿಂ. ವರ್ಗ	2004-05
			171	ಸದಲಗಾ	ಹಿಂ. ವರ್ಗ	2005-06
		ನಿಪ್ಪಾಣಿ	172	ನಿಪ್ಪಾಣಿ	ಹಿಂ. ವರ್ಗ	2008-09
		ರಾಮದುರ್ಗ	173	ಕಟಕೋಳ	ಪ. ಜಾತಿ	2006-07 (A)

19	ಬಿಜಾಪುರ	ಇಂಡಿ	174	ಬಳ್ಳೊಳ್ಳಿ (ಲಚ್ಯಾಣ)	ಪ. ಜಾತಿ	2004–05
			175	ಚಡಚಣ	ಅ.ಸಂ	2007–08
		ಬಿಜಾಪುರ ನಗರ	176	ಬಿಜಾಪುರ	ಅ.ಸಂ	2006–07 (A)
			177	ತಿಕೋಟ	ಪ. ಜಾತಿ	2005–06
		ಬಸವನ ಬಾಗೇವಾಡಿ	178	ಬಸವನ ಬಾಗೇವಾಡಿ	ಪ. ಜಾತಿ	2006–07 (A)
		ಸಿಂದಗಿ	179	ದೇವರಹಿಪ್ಪರಗಿ	ಹಿಂ. ವರ್ಗ	2008–09
			180	ಗುಬ್ಬೇಆಡ	ಪ. ಜಾತಿ	2006–07 (A)
20	ಧಾರವಾಡ	ಧಾರವಾಡ	181	ಹುಬ್ಬಳ್ಳಿ	ಅ.ಸಂ	2004–05
		ಕಲಘಟ್ಟಗಿ	182	ಕಲಘಟ್ಟಗಿ	ಪ. ಜಾತಿ	2008–09
		ಕುಂದ ಗೋಳ	183	ಕುಂದಗೋಳ	ಪ. ಜಾತಿ	2008–09
			184	ಕುಂದಗೋಳ	ಹಿಂ. ವರ್ಗ	2008–09
		ನವಲಗುಂದ	185	ನವಲಗುಂದ	ಹಿಂ. ವರ್ಗ	2008–09
21	ಉತ್ತರ ಕನ್ನಡ	ಕುಮಟ	186	ಕುಮಟ	ಪ. ಜಾತಿ	2005–06
		ಭಟ್ಕಳ	187	ಭಟ್ಕಳ	ಹಿಂ. ವರ್ಗ	2006–07
		ಹಳಿಯಾಳ	188	ಜೋಯಿಡಾ	ಪ. ವರ್ಗ	2006–07 (A)

			189	ಬಾಣಸಗೇರಿ	ಹಿಂ. ವರ್ಗ	2004-05
			190	ದಾಂಡೇಲಿ	ಅ.ಸಂ	2005-06
22	ಬಾಗಲ ಕೋಟೆ	ಬಾಗಲಕೊಟೆ	191	ಬಾಗಲಕೋಟೆ (ನವನಗರ)	ಅ.ಸಂ	2005-06
		ಮುಧೋಳ	192	ಮುಧೋಳ್ (ಬೆಳಗಲಿ)	ಪ. ಜಾತಿ	2007-08
			193	ಮೆಳ್ಳಗೇರಿ	ಪ. ಜಾತಿ	2006-07 (A)
		ಬಾದಾಮಿ	194	ಚಿಕ್ಕಮುಚ್ಚಲಗುಡ್ಡ	ಪ. ಜಾತಿ	2006-07 (A)
		ಬಿಳಗಿ	195	ಬೀಳಗಿ ಟೌನ್	ಪ. ಜಾತಿ	2006-07
			196	ಕಲಾದಗಿ ಗ್ರಾಮ	ಹಿಂ. ವರ್ಗ	2008-09
		ಹುನಗುಂದ	197	ಹುನಗುಂದ	ಪ. ಜಾತಿ	2008-09
23	ಗದಗ	ರೋಣ	198	ಮುಂಡರಗಿ (ಹಿರೆವಡ್ಡರಹಟ್ಟಿ)	ಪ. ಜಾತಿ	2005-06
		ಗದಗ	199	ಗದಗ ಟೌನ್	ಪ. ಜಾತಿ	2005-06
			200	ಗದಗ	ಅ.ಸಂ	2005-06
		ನರಗುಂದ	201	ನರಗುಂದ	ಹಿಂ. ವರ್ಗ	2006-07
24	ಹಾವೇರಿ	ಹಾನಗಲ್	202	ಯಳವಟ್ಟಿ (ಬೊಮ್ಮನಹಳ್ಳಿ)	ಹಿಂ. ವರ್ಗ	2006-07 (A)
			203	ಹಾನಗಲ್ (ಮಾರನಬೀಡು)	ಪ. ಜಾತಿ	2007-08

		ಹಾವೇರಿ	204	ಹಾವೇರಿ	ಅ.ಸಂ	2006-07
		ರಾಣಿಬೆನ್ನೂರು	205	ರಾಣಿಬೆನ್ನೂರು (ಹನುಮನಹಟ್ಟಿ)	ಹಿ. ವರ್ಗ	2004-05
		ಶಿಗ್ಗಾಂವ್ (ಸವಣೂರು)	206	ಶಿಗ್ಗಾಂವ್ (ಗಂಜಿಗಟ್ಟಿ)	ಹಿ. ವರ್ಗ	2005-06
			207	ಶಿಗ್ಗಾಂವ್	ಪ. ಜಾತಿ	2008-09
		ಹಿರೇಕೆರೂರು	208	ಹಿರೇಕೆರೂರು	ಪ. ವರ್ಗ	2007-08
			209	ಹಿರೇಕೆರೂರು (ಚಿಕ್ಕೆರೂರು)	ಹಿ. ವರ್ಗ	2006-07
		ಬ್ಯಾಡಗಿ	210	ಬ್ಯಾಡಗಿ (ಶಿಡೇನೂರು)	ಪ. ಜಾತಿ	2006-07
25	ಗುಲ್ಬರ್ಗ	ಅಫ್‌ಜಲ್ ಪುರ	211	ಅಫ್‌ಜಲ್‌ಪುರ (ಕರಜಗಿ)	ಪ. ಜಾತಿ	2006-07 (A)
		ಯಾದಗಿರಿ	212	ಮೋಟನಹಳ್ಳಿ ಗ್ರಾಮ (ಅಂದರಗಿಕ್ರಾಸ್)	ಹಿ. ವರ್ಗ	2004-05
			213	ಯಾದಗಿರಿ (ಸಂಗಂ, ಶಹಪುರ ತಾ:)	ಪ. ಜಾತಿ	2006-07 (A)
		ಗುರುಮಿಠ ಕಲ್	214	ಗುರುಮಿಠಕಲ್ (ಕೊಂಕಲ್)	ಪ. ಜಾತಿ	2006-07
			215	ಗುರುಮಿಠಕಲ್ (ಕಾಲೇಬೆಳಗುಂದಿ)	ಪ. ಜಾತಿ	2007-08
		ಸುರಪುರ	216	ಸುರಪುರ (ಕೊಡೆಕಲ್)	ಪ. ಜಾತಿ	2006-07
			217	ಸುರಪುರ	ಪ. ಜಾತಿ	2007-

				(ಹುಣಸಗಿ)		08
		ಚಿತ್ತಾಪುರ	218	ಚಿತ್ತಾಪುರ (ಗುಂಡಗುರ್ತಿ)	ಪ. ಜಾತಿ	2004–05
			219	ಚಿತ್ತಾಪುರ	ಪ. ಜಾತಿ	2007–08
			220	ಹೆಬ್ಬಾಳ	ಹಿ. ವರ್ಗ	2005–06
			221	ಚಿತ್ತಾಪುರ (ರೇವಗಿ)	ಹಿ. ವರ್ಗ	2006–07
			222	ದಂಡೋತ್ತಿ ಗ್ರಾಮ	ಅ.ಸಂ	2007–08
		ಶಹಾಪುರ	223	ಶಹಾಪುರ (ದರಿಗುಡ್ಡ, ಉಕ್ಕೇನಾಳ)	ಪ. ಜಾತಿ	2007–08
		ಜೇವರ್ಗಿ	224	ಜೇವರ್ಗಿ (ನೆಲೋಗಿ)	ಪ. ಜಾತಿ	2007–08
			225	ಜೇವರ್ಗಿ	ಅ.ಸಂ	2004–05
		ಚಿಂಚೋಳಿ	226	ಚಿಂಚೋಳಿ (ನಿಡಗುಂದ)	ಪ. ಜಾತಿ	2004–05
		ಗುಲ್ಬರ್ಗ ಗ್ರಾಮಾಂತರ	227	ಗುಲ್ಬರ್ಗ ಗ್ರಾಮಾಂತರ	ಹಿ. ವರ್ಗ	2008–09
			228	ಕಲ್ಮೂಡ ಗ್ರಾಮ (ಕಮಲಪುರ)	ಪ. ಜಾತಿ	2006–07
26	ಬಳ್ಳಾರಿ	ಹೂವಿನ ಹಡಗಲಿ	229	ಹೂವಿನಹಡಗಲಿ (ಮೀರಕೋರಹಳ್ಳಿ)	ಪ. ಜಾತಿ	2007–08
			230	ಗಿರಿಯಾಪುರ ಮಠ	ಪ. ವರ್ಗ	2006–07 (A)
			231	ಇಟಗಿ	ಹಿ. ವರ್ಗ	2005–

						06
		ಕೊಡ್ಲಗಿ	232	ಕುರುಗೋಡು (ಸಿರಗೇರಿ, ಕೆಂಚನಗುಡ್ಡ)	ಪ. ವರ್ಗ	2006-07
			233	ಕೊಟ್ಟೂರು (ಕಂದಗಲ್ಲು)	ಪ. ಜಾತಿ	2004-05
			234	ಕುರುಗೋಡು (ಯರ್ರಗುಡಿ)	ಹಿ. ವರ್ಗ	2007-08
			235	ಕೊಡ್ಲಗಿ	ಅ.ಸಂ	2008-09
		ಸಂಡೂರು	236	ಸಂಡೂರು (ಬಂಡ್ರಿ)	ಪ. ವರ್ಗ	2006-07 (A)
			237	ಸಂಡೂರು (ಚೋರನೂರು)	ಪ. ವರ್ಗ	2006-07
			238	ಸಂಡೂರು (ಬನ್ನಿಹಟ್ಟಿ)	ಪ. ವರ್ಗ	2007-08
			239	ಸಂಡೂರು (ಮೆಟ್ರಿಕಿ)	ಹಿ. ವರ್ಗ	2004-05
		ಬಳ್ಳಾರಿ ಗ್ರಾ	240	ಬಳ್ಳಾರಿ ಗ್ರಾ	ಹಿ. ವರ್ಗ	2008-09
		ಸಿರಗುಪ್ಪ	241	ಸಿರಗುಪ್ಪ (ಕೆಂಚನಗುಡ್ಡ)	ಪ. ವರ್ಗ	2006-07
27	ಬೀದರ್	ಬೀದರ್	242	ಬೀದರ್	ಪ. ಜಾತಿ	2007-08
			243	ಬೊಮ್ಮಳಗಿ	ಅ.ಸಂ	2004-05
		ಬಸವ ಕಲ್ಯಾಣ	244	ಬಸವಕಲ್ಯಾಣ	ಪ. ಜಾತಿ	2005-06
			245	ಬಸವಕಲ್ಯಾಣ	ಹಿ. ವರ್ಗ	2008-09

			246	ಹುಲಸೂರು	ಪ. ಜಾತಿ	2006-07
		ಹುಮನ ಬಾದ್	247	ಹುಮನಬಾದ್	ಪ. ಜಾತಿ	2005-06
		ಭಾಲ್ಕಿ	248	ಭಾಲ್ಕಿ	ಪ. ಜಾತಿ	2008-09
28	ರಾಯಚೂರು	ಲಿಂಗಸಗೂರು	249	ಲಿಂಗಸಗೂರು (ದೇವರಭೂಪರ)	ಹಿ. ವರ್ಗ	2005-06
		ರಾಯಚೂರು (ನ)	250	ಕಲ್ಮಲ (ಯರಗೇರ)	ಪ. ಜಾತಿ	2004-05
			251	ರಾಯಚೂರು (ಸಿಂಗನೋಡಿ)	ಪ. ಜಾತಿ	2006-07
			252	ರಾಯಚೂರು	ಅ. ಸಂ	2005-06
			253	ರಾಯಚೂರು (ಗಿಲ್ಲೇಸಗೂರು)	ಅ. ಸಂ	2006-07
		ದೇವದುರ್ಗ	254	ದೇವದುರ್ಗ (ಮೊಸರಕಲ್ಲು)	ಪ. ಜಾತಿ	2005-06
			255	ದೇವದುರ್ಗ (ಗಬ್ಬೂರು)	ಪ. ಜಾತಿ	2006-07
			256	ದೇವದುರ್ಗ (ಆಲ್ಕೋಡು)	ಪ. ಜಾತಿ	2007-08
		ಮಾನ್ವಿ	257	ಕವಿತಾಳ	ಪ. ವರ್ಗ	2005-06
			258	ಮಾನ್ವಿ	ಅ.ಸಂ	2005-06
			259	ಮಾನ್ವಿ	ಹಿ. ವರ್ಗ	2004-05
		ಸಿಂಧನೂರು	260	ಸಿಂಧನೂರು	ಪ. ವರ್ಗ	2005-06

		ಮಸ್ಕಿ	261	ಮಸ್ಕಿ	ಪ. ವರ್ಗ	2008-09
			262	ಮಸ್ಕಿ	ಹಿ. ವರ್ಗ	2007-08
29	ಕೊಪ್ಪಳ	ಗಂಗಾವತಿ	263	ಗಂಗಾವತಿ	ಅ.ಸಂ	2006-07 (A)
		ಕನಕಗಿರಿ	264	ಕನಕಗಿರಿ	ಪ. ಜಾತಿ	2006-07 (A)
		ಕುಷ್ಟಗಿ	265	ಕಾಟಾಪುರ	ಹಿ. ವರ್ಗ	2006-07 (A)
		ಯಲಬುರ್ಗಾ	266	ಯಲಬುರ್ಗಾ	ಪ. ಜಾತಿ	2004-05
			267	ಬೇವೂರು	ಹಿ. ವರ್ಗ	2005-06
			268	ಕೂಕನೂರು	ಅ.ಸಂ	2005-06
			269	ಹೀರೆವೆಂಕಲ ಕುಂಟ	ಪ. ವರ್ಗ	2006-07
			270	ತಳಕಲ್	ಅ.ಸಂ	2006-07 (A)
		ಕೊಪ್ಪಳ	271	ಕೊಪ್ಪಳ	ಹಿ. ವರ್ಗ	2005-06
			272	ಕೊಪ್ಪಳ	ಅ.ಸಂ	2005-06

ಶ್ರೀ ಸಿದ್ದು ಸವದಿ:- ಮಾನ್ಯ ಅಧ್ಯಕ್ಷರೆ, ನಾನು ಮೊರಾರ್ಜಿದೇಸಾಯಿ ವಸತಿ ಶಾಲೆಗಳ ಬಗ್ಗೆ ಕೇಳಿರುವ ಎರಡನೆಯ ಪ್ರಶ್ನೆಗೆ ದಿನಾಂಕ:01-04-2004 ರಿಂದೀಚೆಗೆ 272 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದ ತಾಲ್ಲೂಕಿಗೆ ಒಂದೇ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಂಜೂರು ಮಾಡಿಲ್ಲ. ನಾನು ನನ್ನ ಮೂರನೆಯ ಪ್ರಶ್ನೆಯಲ್ಲಿ ಈ ಶಾಲೆಗಳ ಮಂಜೂರಾತಿಯಲ್ಲಿ ತಾರತಮ್ಯ ಆಗಿರುವುದು ನಿಜವೇ ಎಂದು ಕೇಳಿರುವುದಕ್ಕೆ ಯಾವುದೇ ರೀತಿಯ ತಾರತಮ್ಯವಾಗಿಲ್ಲೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸಚಿವರನ್ನು ಕೇಳಿತ್ತೇನೆ, ವಸತಿ ಶಾಲೆಗಳ ಬಗ್ಗೆ ನನ್ನ ಬಳಿ ಇರುವ ಅಂಕಿಸಂಖ್ಯೆಗಳನ್ನು ನೋಡಿಯೇ ಹೇಳುತ್ತಿದ್ದೇನೆ. ಮೂರು ಕ್ಷೇತ್ರಗಳಿಗೆ, ಆರು ವಸತಿ ಶಾಲೆಗಳನ್ನು ಕೊಟ್ಟಿದ್ದಾರೆ. ಐದು ಕ್ಷೇತ್ರಗಳಿಗೆ ಐದ್ಯೆದು ವಸತಿ ಶಾಲೆಗಳನ್ನು ಕೊಟ್ಟಿದ್ದಾರೆ. ಹದಿನಾರು ಕ್ಷೇತ್ರಗಳಿಗೆ ಮೂರು, ಮೂರು ವಸತಿ ಶಾಲೆಗಳನ್ನು ಕೊಟ್ಟಿದ್ದಾರೆ. ಉತ್ತರ ಕರ್ನಾಟಕದಲ್ಲಿರುವ ನಮ್ಮಂಥ ಹಿಂದುಳಿದ ಕ್ಷೇತ್ರಗಳಿಗೆ ಒಂದೇ ಒಂದು ವಸತಿ ಶಾಲೆ ಮಂಜೂರು ಮಾಡಿಲ್ಲವೆಂದರೆ ಇದು ತಾರತಮ್ಯವಾಗುವುದಿಲ್ಲವೆ? ಅದರ ಬಗ್ಗೆ ಸ್ಪಷ್ಟೀಕರಣವನ್ನು ಮಾನ್ಯ ಸಚಿವರು ಕೊಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ. ಏಕೆಂದರೆ ಉತ್ತರದಲ್ಲಿ ಅವರು ಏನು ಹೇಳಿದ್ದಾರೆಂದರೆ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದ್ದು ಯಾವುದೇ ಸ್ಥಳದಲ್ಲಿ ಅಂಥ ಶಾಲೆ ಅಗತ್ಯವಿರುವುದಾಗಿ ಕಂಡುಬಂದಲ್ಲಿ ಲಭ್ಯವಾಗುವ ಅನುದಾನ ಮೇರೆಗೆ ಪರಿಶೀಲಿಸಿ ಮಂಜೂರಾತಿ ನೀಡಲಾಗುತ್ತಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಕೇಳುವುದೇನೆಂದರೆ, ಹೆಚ್ಚು ಹಿಂದುಳಿದ ಪ್ರದೇಶಗಳಿರುವ ಉತ್ತರ ಕರ್ನಾಟಕದಲ್ಲಿ ಅಂಥ ಅವಶ್ಯಕತೆ ನಿಮಗೆ ಕಂಡುಬರಲಿಲ್ಲವೆ? ಕೇವಲ ಹನ್ನೊಂದು ಕ್ಷೇತ್ರಗಳಿಗೆ ಆರು, ಆರು, ಐದು, ಐದು ವಸತಿ ಶಾಲೆಗಳನ್ನು ಕೊಟ್ಟಿದ್ದೀರಿ. ಯಾರು ಬಲಾಢ್ಯರು ಇದ್ದಾರೋ ಅಂಥವರ ಕ್ಷೇತ್ರಗಳಿಗೆ ಮಾತ್ರ ಈ ಸರ್ಕಾರದ ಯೋಜನೆಗಳನ್ನು ಕೊಡುವಂಥ ಕಾನೂನು ಇದೆಯೇ? ಮಾನ್ಯ ಅಧ್ಯಕ್ಷರೆ, ಅದಕ್ಕಾಗಿಯೇ ನಾನು ನಾಲ್ಕು ವರ್ಷದಿಂದ ಕೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಬಡವರು, ಕೂಲಿಕಾರರು ಹೆಚ್ಚು ಹೆಚ್ಚು ಜನರು ಇದ್ದರೂ ಸಹಿತ ಒಂದೇ ಒಂದು ಮೊರಾರ್ಜಿ ಶಾಲೆಯನ್ನು ಮಂಜೂರು ಮಾಡಿಲ್ಲ.

ಅಧ್ಯಕ್ಷರು:- ಸಿದ್ದು ಸವದಿಯವರೆ, ಭಾಷಣ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಮೂಲ ಪ್ರಶ್ನೆಗೆ ಏನಾದರೂ ಇದ್ದರೆ ಕೇವಲ ಸ್ಪಷ್ಟೀಕರಣವನ್ನು ಕೇಳಿ. ಅದನ್ನು ಬಿಟ್ಟು ಭಾಷಣ ಮಾಡುವುದಕ್ಕೆ ಶುರು ಮಾಡಿಬಿಡುತ್ತೀರಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಪಾಪ, ಅವರು ಅವರ ಹೊಟ್ಟೆನೋವು, ಹೊಟ್ಟೆ ಉರಿ ಬಗ್ಗೆ ಹೇಳುವಾಗ ನೀವು ಕೇಳುವುದಕ್ಕೆ ತಯಾರಿಲ್ಲ ಎಂದರೆ ಹೇಗೆ? ಸಿದ್ದು ಸವದಿಯವರೆ, ತಾರತಮ್ಯ ನಿಮಗೇ ಆಗಿದೆಯೆಂದರೆ ಇನ್ನು ನಮ್ಮ ಗತಿ ಹೇಗೆ ಹೇಳಿ? ಮಾನ್ಯ ಅಧ್ಯಕ್ಷರೆ, ಈ ಸರ್ಕಾರದಲ್ಲಿ ತಾರತಮ್ಯ ಸಿದ್ದು ಸವದಿಯವರ ಕ್ಷೇತ್ರಕ್ಕೇ ಆಗಿದೆಯೆಂದರೆ ಬೇರೆಯವರ ಗತಿಯೇನು ನೋಡಿ.

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದು ಸವದಿಯವರ ಪ್ರಶ್ನೆಗೆ ಈಗಾಗಲೇ ಉತ್ತರಿಸಿರುವಂತೆ ರಾಜ್ಯದಲ್ಲಿ 285 ಮೊರಾರ್ಜಿ ದೇಸಾಯಿವಸತಿ ಶಾಲೆಗಳಿವೆ. ಸಾಧ್ಯವಾದಷ್ಟು ತಾಲ್ಲೂಕುವಾರು ಈ ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. 2008-09 ರಲ್ಲಿ ಯಾವ ತಾಲ್ಲೂಕಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಇರಲಿಲ್ಲವೋ ಅಲ್ಲಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟು ಶಾಲೆಯನ್ನು ಮಂಜೂರು ಮಾಡಿದ್ದೇವೆ. ಆದರೆ ಸಿದ್ದು ಸವದಿಯವರ ಕ್ಷೇತ್ರ ಪುನರ್ವಿಂಗಡಣೆಯಿಂದ ಅವರ ತಾಲ್ಲೋಕಿನಲ್ಲಿ ಶಾಲೆ ಇದ್ದರೂ ಅದು ಅವರ ಕ್ಷೇತ್ರಕ್ಕೆ ಬಂದಿಲ್ಲ. ಮುಂದೆ ಬರಲಿರುವ 2009-10 ನೇ ಸಾಲಿನಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಿ ಮಂಜೂರು ಮಾಡುತ್ತೇನೆಂದು ತಮ್ಮ ಮುಖಾಂತರ ಅವರಿಗೆ ಹೇಳಬಯಸುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ:- ಮಾನ್ಯ ಅಧ್ಯಕ್ಷರೆ, ನನಗೆ ಉಪ ಪ್ರಶ್ನೆ ಕೇಳಲು ಅವಕಾಶ ಕೊಡಬೇಕು. ಮಾನ್ಯ ಮಂತ್ರಿಗಳು ಕೇಳಿಸಿಕೊಳ್ಳಬೇಕು. ಕೆರೆಗಾವಲು ವಿಧಾನಸಭಾ ಕ್ಷೇತ್ರದಲ್ಲಿ ಹಿಪ್ಪರಗಿಯಲ್ಲಿ ವಸತಿ ಶಾಲೆಯೊಂದು ಇದೆ. ಅಲ್ಲಿ ಜಮಖಂಡಿ ಒಂದು ಹೊಸ ಕ್ಷೇತ್ರವಾಗಿದ್ದಕ್ಕೆ ಒಂದೂ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಂಜೂರು ಮಾಡಿಲ್ಲ. 272 ರಲ್ಲಿ ನಮ್ಮ ಕ್ಷೇತ್ರ ಬಿಟ್ಟಿದೆ, ಅದೇ ರೀತಿ ಕೆಲವು ಕ್ಷೇತ್ರಗಳು ಬಿಟ್ಟುಹೋಗಿವೆ. ಇಲ್ಲಿ ಹಿಂದುಳಿದ ವರ್ಗದ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಜಮಖಂಡಿಯಲ್ಲಿ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಂಜೂರು ಮಾಡುತ್ತಾರೆಯೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್:- ಈ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸ್ಥಾಪನೆಯ ಬಗ್ಗೆ ಇರುವ concept ಏನಿದೆ ಅದು ಒಳ್ಳೆಯ concept ಆಗಿದೆ.

ಆದರೆ ಸರ್ಕಾರಕ್ಕೆ ಹಲವಾರು ಕಡೆಗಳಲ್ಲಿ ಜಾಗವೇ ಸಿಗದೇ ವಸತಿ ಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಈ ಪ್ರಾಜೆಕ್ಟ್ ಸರ್ಕಾರದಲ್ಲಿ ಏನು ಇದೆ ಈ ವಸತಿ ಶಾಲೆಗಳನ್ನು ಕಟ್ಟಲು ಅಗತ್ಯವಾದ ಲ್ಯಾಂಡ್‌ನ್ನು ಪರ್ಚೇಸ್ ಮಾಡುವುದಕ್ಕೆ ಸರ್ಕಾರವೇನಾದರೂ ಅವಕಾಶವನ್ನು ಮಾಡಿಕೊಡುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಹೇಳಬೇಕು. ಏಕೆಂದರೆ ಊರು ಪಕ್ಕದಲ್ಲಿಯೇ ಈ ಮೊರಾರ್ಜಿ ದೇಸಾಯದ ಶಾಲೆಗಳು ಸರ್ಕಾರದ concept ಪ್ರಕಾರ ಇರಬೇಕು. ಬಹಳ ದೂರದಲ್ಲಿ, ಗುಡ್ಡಗಳಲ್ಲಿ, ಸರ್ಕಾರದ ಭೂಮಿ, ಗೋಮಾಳದಲ್ಲಿ ಈ ವಸತಿ ಶಾಲೆಗಳನ್ನು ತೆರೆಯಲು ಸಾಧ್ಯವಾಗುವುದಿಲ್ಲ. ಆದುದರಿಂದ ಶಾಲೆಯನ್ನು ಸರ್ಕಾರ ಸ್ಯಾಂಕ್ಷನ್ ಮಾಡಬೇಕಾದರೆ ಜಮೀನನ್ನು ಪರ್ಚೇಸ್ ಮಾಡುವುದಕ್ಕೆ ಹತ್ತು, ಹದಿನೈದು ಲಕ್ಷ ರೂಪಾಯಿಗಳ ಹಣವನ್ನು ಸರ್ಕಾರದವರು ಇಟ್ಟರೆ ಒಳ್ಳೆಯದು. ಒಟ್ಟಾರೆ, 3 ರಿಂದ 8 ಕೋಟಿ ವರೆಗೂ ಹಣವನ್ನು ನೀವು ಕೊಡುತ್ತಿದ್ದೀರಿ. ಒಂದು ಹತ್ತು, ಹದಿನೈದು ಲಕ್ಷ ರೂಪಾಯಿಗಳನ್ನು ಜಮೀನು ಪರ್ಚೇಸ್ ಮಾಡುವುದಕ್ಕೆ ನೀವು ಇಟ್ಟರೆ ಊರು ಪಕ್ಕದಲ್ಲಿಯೇ ಎಲ್ಲಾದರೂ ಒಂದು ಕಡೆ ಜಮೀನು ಪರ್ಚೇಸ್ ಮಾಡುವುದಕ್ಕೆ ಒಂದು ಅವಕಾಶವಾದಂತಾಗುತ್ತದೆ. ಅದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದಲ್ಲಿ ಚಿಂತನೆ ಏನಾದರೂ ಇದೆಯೆ?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಡಿ.ಕೆ. ಶಿವಕುಮಾರ್‌ರವರು ಕೇಳಿದ ಪ್ರಶ್ನೆಗೆ ಈಗಾಗಲೇ ನಾವು ಸಾಧ್ಯವಾದಷ್ಟು ಸರ್ಕಾರಿ ಜಾಗದಲ್ಲಿಯೇ ವಸತಿ ಶಾಲೆಯನ್ನು ಕಟ್ಟಲು ಪ್ರಯತ್ನ ಮಾಡುವುದರ ಜೊತೆಯಲ್ಲಿಯೇ ಎಲ್ಲಿ ಸರ್ಕಾರಿ ಜಾಗ ಸಿಗುವುದಿಲ್ಲವೋ ಅಂಥ ಕಡೆ ಪ್ರೈವೇಟ್ ಲ್ಯಾಂಡ್‌ನ್ನು ಪರ್ಚೇಸ್ ಮಾಡುವುದಕ್ಕೂ ಸಹ ಈಗಾಗಲೇ ತೀರ್ಮಾನವನ್ನು ಮಾಡಿದ್ದೇವೆ. ಎಲ್ಲಿ ಸರ್ಕಾರಿ ಜಾಗ ಸಿಗುವುದಿಲ್ಲವೋ ಅಂಥ ಕಡೆ ಪ್ರೈವೇಟ್‌ನವರಿಂದ ಲ್ಯಾಂಡ್ ಸರ್ಕಾರ ಪರ್ಚೇಸ್ ಮಾಡುತ್ತದೆಯೆಂದು ಹೇಳಬಯಸುತ್ತೇನೆ.

ಶ್ರೀ ಸಿದ್ದು ಸವದಿ:- ಮಾನ್ಯ ಅಧ್ಯಕ್ಷರೆ, ಚಿಮ್ಮಡು ಮತ್ತು ತೇರದಾಳ್‌ದಲ್ಲಿ ವಸತಿ ಶಾಲೆಗಳ ಅವಶ್ಯಕತೆ ಬಹಳ ಇದೆ. ಇಲ್ಲಿ ವಸತಿ ಶಾಲೆಗಳನ್ನು ತೆರೆಯುತ್ತಾರೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಡಿ.ಸುಧಾಕರ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರದಲ್ಲಿ ಹೇಳಿರುವಂತೆ 2009-10ನೇ ಸಾಲಿನಲ್ಲಿ ಪರಿಶೀಲನೆ ಮಾಡಿ ಮಂಜೂರು ಮಾಡುತ್ತೇವೆ.

ಶ್ರೀ ಶ್ರೀಕಾಂತ್ ಕುಲಕರ್ಣಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ನಮ್ಮ ಕಡೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬೇಕೆಂದು ಬೇಡಿಕೆ ಇದೆ. ಅದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸಬೇಕು.

ಅಧ್ಯಕ್ಷರು: ನೀವು specific ಆಗಿ ಒದೊಂದು ತಾಲ್ಲೂಕಿನ ಬಗ್ಗೆ ಕೇಳಿಕೊಂಡು ಹೋದರೆ ಆಗುವುದಿಲ್ಲ.

ಶ್ರೀ ಶ್ರೀಕಾಂತ್ ಕುಲಕರ್ಣಿ: ಜಮಖಂಡಿ ಕ್ಷೇತ್ರದಲ್ಲಿ ಒಂದು ಶಾಲೆ ಕೂಡ ಮಂಜೂರಾಗಿಲ್ಲ. ದಯವಿಟ್ಟು ಇದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ. ಸುಧಾಕರ್: ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ವಿಚಾರವಾಗಿ ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಕೊಳ್ಳೆಗಾಲ ಮತ್ತು ಯಳಂದೂರು ಆಸ್ಪತೆಗಳಲ್ಲಿ ಸಿಬ್ಬಂದಿ ಭರ್ತಿ ಬಗ್ಗೆ.

22 ಶ್ರೀ ಧ್ರುವನಾರಾಯಣ್.ಆರ್ (ಕೊಳ್ಳೇಗಾಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅ . ಕೊಳ್ಳೆಗಾಲ ಮತ್ತು ಯಳಂದೂರು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯರು, ಶುಶ್ರೋಷಕಿಯವರು ಮತ್ತಿತರ ಹುದ್ದೆಗಳ ಸಂಖ್ಯೆ ಎಷ್ಟು; ಕೊಳ್ಳೆಗಾಲ ಮತ್ತು ಯಳಂದೂರು ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಹುದ್ದೆವಾರು ವಿವರಗಳು ಈ ಕೆಳಕಂಡಂತಿವೆ:-

ಕ್ರ ಸಂ	ಪದ ನಾಮ	ಮಂಜೂರು	ಕಾರ್ಯ ನಿರತ	ಖಾಲಿ	ಮಂಜೂರು	ಕಾರ್ಯ ನಿರತ	ಖಾಲಿ
1	ವೈದ್ಯರು	14	6	8	5	4	1
2	ಶುಶ್ರೋಷಕರು	12	8	4	5	4	1
3	ಇತರೆ ಹುದ್ದೆಗಳು	76	37	39	31	17	14
	ಒಟ್ಟು	**102**	**51**	**51**	**41**	**25**	**16**

ಆ ಈ ಹುದ್ದೆಗಳಲ್ಲಿ ಭರ್ತಿಯಾದ ಹುದ್ದೆಗಳು ಎಷ್ಟು (ವಿವರ ನೀಡುವುದು);

ಇ ಉಳಿದ ಹುದ್ದೆಗಳನ್ನು ಎಂದು ಭರ್ತಿ ಮಾಡ ಲಾಗುವುದು?

ಸಾರ್ವಜನಿಕ ಆಸ್ಪತ್ರೆ ಕೊಳ್ಳೇಗಾಲದಲ್ಲಿ 8 ತಜ್ಞ ವೈದ್ಯರು ಮತ್ತು ಯಳಂದೂರಿನಲ್ಲಿ 1 ತಜ್ಞ ವೈದ್ಯರ ಹುದ್ದೆ ಖಾಲಿ ಇರುತ್ತವೆ. ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 2021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಮುಖಾಂತರ ಭರ್ತಿಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ:7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ನಾವು ತಿರುಪತಿಗೆ ಹೋಗಿ ದೇವಸ್ಥಾನದಲ್ಲಿ ಸ್ವಾಮಿ ದರ್ಶನ ಮಾಡಬಹುದು. ಆದರೆ ಇದುವರೆಗೂ ಆರೋಗ್ಯ ಸಚಿವರ ದರ್ಶನವಾಗಲಿಲ್ಲ, ಮಾನ್ಯ ಆರೋಗ್ಯ ಸಚಿವರು ಸದನಕ್ಕೆ ಬಂದರೆ ಒಳ್ಳೆಯದು. ಈಗ ಆರೋಗ್ಯ ಸಚಿವರ ಪರವಾಗಿ ಮಾನ್ಯ ಸಚಿವರಾದ ವಿಶ್ವೇಶ್ವರ ಹೆಗಡೆಯವರು ಉತ್ತರ ಕೊಟ್ಟಿದ್ದಾರೆ. ನನ್ನ ಮತಕ್ಷೇತ್ರಕ್ಕೆ ಎರಡು ತಾಲ್ಲೂಕುಗಳು ಬರುತ್ತವೆ. ಅವು ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳು. ಕೊಳ್ಳೇಗಾಲ ಬಹಳ ದೊಡ್ಡ ತಾಲ್ಲೂಕು. ಸುಮಾರು 120 ಚದರ ಕಿಲೋಮೀಟರ್ ವಿಸ್ತೀರ್ಣ ಇದೆ, 154 ಹಳ್ಳಿಗಳಿವೆ, 2,50,000 ಜನಸಂಖ್ಯೆ ಇದೆ. ಒಂದು ವರ್ಷಕ್ಕೆ 8,000ದಿಂದ 9,000 ಒಳರೋಗಿಗಳು ದಾಖಲಾಗಿದ್ದಾರೆ. 1,200ರಿಂದ 1,500ದವರೆಗೆ ಹೆರಿಗೆ ಪ್ರಕರಣ ದಾಖಲಾಗಿದೆ. ಅದು ಬಹಳ ದೊಡ್ಡ ಆಸ್ಪತ್ರೆ, ಆದರೆ ಅಲ್ಲಿಗೆ ಮಂಜೂರಾಗಿರುವ ವೈದ್ಯರ ಸಂಖ್ಯೆ 14. ಈಗ ಅಲ್ಲಿ ಇರುವಂತಹ ವೈದ್ಯರ ಸಂಖ್ಯೆ 6 ಮಾತ್ರ, ಇನ್ನು ಎಂಟು ವೈದ್ಯರ ಹುದ್ದೆಗಳು ಭರ್ತಿಯಾಗಬೇಕಾಗಿದೆ. ಅದು ಬಹಳ ಮುಖ್ಯವಾಗಿ ENT ತಜ್ಞರು, general surgeon, skin specialist ಮತ್ತು ಕಣ್ಣಿನ ತಜ್ಞರು, ಈ ರೀತಿಯಾಗಿ ಬಹಳ ಮುಖ್ಯವಾದಂತಹ doctorಗಳೇ ಆಸ್ಪತ್ರೆಯಲ್ಲಿ ಇಲ್ಲದಿದ್ದಾಗ ಯಾವ ರೀತಿ ಜನರಿಗೆ ಅನುಕೂಲ ಇದೆಯೆನ್ನುವುದನ್ನು ತಾವು ಯೋಚನೆ ಮಾಡಬೇಕು. ಜೊತೆಗೆ ವೈದ್ಯರು, ಶುಶ್ರೂಶಕರು, ಗ್ರೂಪ್ ಡಿ ಎಲ್ಲಾ

ಸೇರಿ 102 ಹುದ್ದೆಗಳು ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆಗೆ ಮಂಜೂರಾಗಿದೆ. ಅದರಲ್ಲಿ ಕಾರ್ಯನಿರತರಾಗಿರುವುದು 51 ಜನ ಮಾತ್ರ, ಇನ್ನೂ 50% ಖಾಲಿ ಇದೆ. ದಯವಿಟ್ಟು ಅದನ್ನು ಭರ್ತಿ ಮಾಡಬೇಕು. ಅದಲ್ಲದೆ ಯಳಂದೂರು ತಾಲ್ಲೂಕು ಆಸ್ಪತ್ರೆ ಸರ್ಕಾರಿ ಆದೇಶ 2007ರಲ್ಲಿ ತಾಲ್ಲೂಕು ಆಸ್ಪತ್ರೆಯಾಗಿ ಮಂಜೂರಾಗಿದೆ. ಆದರೆ ಇದುವರೆಗೂ ಕೂಡ ತಾಲ್ಲೂಕು ಆಸ್ಪತ್ರೆಗೆ ಏನು ಅನುಕೂಲತೆ ಒದಗಿಸಿಕೊಡಬೇಕು, ಆ ಅನುಕೂಲತೆ ಒಂದು ಕೂಡ ಆಗಿಲ್ಲ. ತಾಲ್ಲೂಕು ಆಸ್ಪತ್ರೆಗೆ 10 ಜನ ವೈದ್ಯರ ಭರ್ತಿ ಮಾಡಬೇಕಾಗಿದೆ. ಆದರೆ ಅಲ್ಲಿ ಕೇವಲ 4 ಜನ ವೈದ್ಯರು ಮಾತ್ರ ಇದ್ದಾರೆ. ಇನ್ನು ಯಳಂದೂರು ತಾಲ್ಲೂಕು ಆಸ್ಪತ್ರೆಗೆ 82 ಹುದ್ದೆಗಳು ಮಂಜೂರಾತಿಯಾಗಬೇಕಾಗಿರುವುದರಲ್ಲಿ, ಕೇವಲ 29 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಇನ್ನೂ 70% ಹುದ್ದೆಗಳು ಭರ್ತಿಯಾಗಬೇಕಾಗಿದೆ. ಇದಕ್ಕೆ ದಯವಿಟ್ಟು ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕು. ತಾವು ಕೊಟ್ಟಿರುವಂತಹ ಉತ್ತರದಲ್ಲಿ, ಈ ರಾಜ್ಯದಲ್ಲಿ ಸುಮಾರು 5,002 ಅರೆ ವೈದ್ಯಕೀಯ ಹುದ್ದೆಗಳ ನೇಮಕಾತಿ ಬಗ್ಗೆ ತಿಳಿಸಿದ್ದೀರಿ. ಆದರೆ ಕೊಳ್ಳೇಗಾಲ ತಾಲ್ಲೂಕು ಆಸ್ಪತ್ರೆ ಮತ್ತು ಯಳಂದೂರು ತಾಲ್ಲೂಕು ಆಸ್ಪತ್ರೆಗಳಾಗಿದ್ದು, ಕೊಳ್ಳೇಗಾಲದಲ್ಲಿ ಪ್ರಮುಖವಾಗಿ ಇರುವಂತಹ ಹುದ್ದೆಗಳು ಖಾಲಿ ಇದೆ. ಯಳಂದೂರಿನಲ್ಲಿ ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ 2007ರಲ್ಲಿ ಆದೇಶವಾಗಿದ್ದರೂ ಕೂಡ ಯಾವ ರೀತಿಯಾಗಿ ತಾಲ್ಲೂಕು ಆಸ್ಪತ್ರೆಗೆ ಅನುಕೂಲವಾಗುವುದಕ್ಕೆ ಹುದ್ದೆಗಳ ಮಂಜೂರಾತಿ ಯಾಗಬೇಕು, ಆ ರೀತಿಯಾಗಿಲ್ಲ. ಅದರ ಬಗ್ಗೆ ದಯವಿಟ್ಟು ತಾವು ಉತ್ತರದಲ್ಲಿ ತಿಳಿಸಿಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಧ್ರುವನಾರಾಯಣ್‌ರವರ ಕ್ಷೇತ್ರದಲ್ಲಿ ಇರುವಂತಹ ವೈದ್ಯರ, ಶುಶ್ರೂಶಕರ ಹಾಗೂ ಇತರ ಹುದ್ದೆಗಳ ಕೊರತೆ ಬಗ್ಗೆ ಉಲ್ಲೇಖ ಮಾಡಿರುವುದು ಸತ್ಯವಿದೆ. ನಿಜವಾಗಿ ಕೊಳ್ಳೇಗಾಲ ಆಸ್ಪತ್ರೆ 150 ಹಾಸಿಗೆಯುಳ್ಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿದ ನಂತರ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವಂತಹ ಮಾಹಿತಿ ಇದೆ. ಸಾಕಷ್ಟು ಸೌಲಭ್ಯಗಳನ್ನು ಬೇರೆ ರೀತಿಯಲ್ಲಿ ಕೊಟ್ಟರೂ ಕೂಡ ವೈದ್ಯರ ಕೊರತೆಯಿಂದ ಜನತೆಗೆ ತೊಂದರೆ ಆಗುತ್ತಿರುವಂತಾದ್ದು ಸತ್ಯವಿದೆ. ಇದು ರಾಜ್ಯದ ಅನೇಕ ಆಸ್ಪತ್ರೆಗಳ ಸ್ಥಿತಿಗತಿಯಾಗಿದೆ. ತಮಗೆ ಈಗಾಗಲೇ ವಿವರವನ್ನು ಕೊಟ್ಟಹಾಗೆ ಇಲ್ಲಿ 51 ಹುದ್ದೆಗಳು ಖಾಲಿ ಇದೆ. ಅದು ಎಲ್ಲಕ್ಕಿಂತ ವೈದ್ಯರ ಎಂಟು ಹುದ್ದೆಗಳು ಖಾಲಿಯಿರುವುದರಿಂದ ವಿಶೇಷವಾದಂತಹ ತೊಂದರೆಯಾಗುತ್ತಿದೆ ಎನ್ನುವ ವಿಚಾರವಿದೆ. ಅದೇರೀತಿ ಯಳಂದೂರಿನಲ್ಲಿ ಕೂಡ ಒಂದು ವೈದ್ಯರ ಹುದ್ದೆ ಖಾಲಿ ಇದೆ.

ಶ್ರೀ ಆರ್. ಧ್ರುವನಾರಾಯಣ್: 2007ರಲ್ಲಿ ತಾಲ್ಲೂಕು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ. ಮೇಲ್ದರ್ಜೇಗೇರಿದ ಮೇಲೆ ಅಲ್ಲಿ ಹತ್ತು ಹುದ್ದೆ ಮಂಜೂರಾಗಿದೆ. ಆದರೆ ಅಲ್ಲಿ ನಾಲ್ಕು ಜನ ಮಾತ್ರ ಇದ್ದಾರೆ. ಇನ್ನು 6 ವೈದ್ಯರ ಹುದ್ದೆಗಳು ಭರ್ತಿಯಾಗಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸರಿ ಇದೆ, ಮೇಲ್ದರ್ಜೆಗೇರಿದ ನಂತರ ಆ ಹುದ್ದೆಗಳು ಮಂಜೂರಾತಿಯಾಗಿದ್ದು, ಇಡೀ ರಾಜ್ಯದಲ್ಲಿ ಆ ರೀತಿ 11,000 ಹುದ್ದೆಗಳು ಇದ್ದು, ಅವುಗಳನ್ನೂ ಸಹ ತುಂಬಬೇಕಾಗಿರುವುದು ಇದೆ. ಆದರೆ ಇಡೀ ರಾಜ್ಯದಲ್ಲಿ ವೈದ್ಯರ ಕೊರತೆ ಅನುಭವಿಸುತಿರುವುದನ್ನು ಶಾಸಕರಾಗಿ ನಾವು ನೋಡಿದ್ದೇವೆ. ಆದರೆ ಇಂತಹ ಒಂದು ತಜ್ಞ ವೈದ್ಯರ ಹುದ್ದೆಗೆ ನಿವೃತ್ತಿಯಾದಂತಹ ವೈದ್ಯರಿದ್ದರೂ ಕೂಡ ಅವರನ್ನು ತುಂಬಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನಾವು ಅಧಿಕಾರವನ್ನು ಕೊಟ್ಟು ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಮತ್ತು ಇಲಾಖೆಯಲ್ಲಿ ಯಾರು ಸೇವಾನಿರತ ವೈದ್ಯರಿದ್ದಾರೆ, ಅವರು ಸ್ನಾತಕೋತ್ತರ ಪದವಿ ಪಡೆದ ನಂತರದಲ್ಲಿ ಈ ರೀತಿ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಬೇಕಾಗಿರುವಂತಹ ಪ್ರಯತ್ನವನ್ನು ಆದ್ಯತೆಯ ಮೇಲೆ ಮಾಡುತ್ತಿದ್ದೇವೆ. ತಜ್ಞವೈದ್ಯರ ಹುದ್ದೆಗಳು ಕುರಿತಂತೆ ನಿಜವಾದ ಸಮಸ್ಯೆ ಇದೆ. ಇನ್ನು ಎರಡನೆಯದಾಗಿ ಆರೋಗ್ಯ ಇಲಾಖೆಯಲ್ಲಿ 5,021 ಅರೆ ವೈದ್ಯಕೀಯ ಹುದ್ದೆಗಳಿಗೆ ಹಣಕಾಸು ಇಲಾಖೆಯಿಂದ ಮಂಜೂರಾತಿ ಸಿಕ್ಕಿದ್ದು, ಅದಕ್ಕೆ ಆಕ್ಷೇಪಣೆಯನ್ನು ಪಡೆಯುವುದಕ್ಕೆ ದಿನಾಂಕ: 07.02.09ರಿಂದ 15 ದಿವಸಗಳ ಕಾಲಾವಕಾಶವನ್ನು ಕೊಟ್ಟು, ಆ ಹುದ್ದೆಗೆ ಈಗಾಗಲೇ call for ಮಾಡಿದ್ದೇವೆ. ಆಕ್ಷೇಪಣೆ ಪಡೆಯುವುದು ದಿನಾಂಕ 22ರಂದು ಮುಗಿಯುತ್ತದೆ. 23ನೇ ತಾರೀಖಿನ ನಂತರ 5,021 ಹುದ್ದೆಗಳನ್ನು ತುಂಬುವುದಕ್ಕೆ ಪ್ರಕ್ರಿಯೆ ಪ್ರಾರಂಭಿಸುತ್ತೇವೆ. ಮುಂದಿನ ಮೂರು ತಿಂಗಳಲ್ಲಿ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರದಲ್ಲಿ ನಿರ್ಧಾರ ಮಾಡಿದ್ದೇವೆ. ಈ ಹುದ್ದೆಗಳನ್ನು ತುಂಬಿದಾಗ ಉಳಿದ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶವಾಗುತ್ತದೆ. ನಿಜವಾಗಿ ತಜ್ಞವೈದ್ಯರ ಸಮಸ್ಯೆ ಇದೆ. ಈ ಸಮಸ್ಯೆಗೆ ಸರ್ಕಾರದಲ್ಲಿ ನಾವು ಪರಿಹಾರವನ್ನು ಕಂಡುಕೊಳ್ಳುತ್ತಿದ್ದೇವೆ. ನಿಮಗೆ ಗೊತ್ತಿದ್ದ ಹಾಗೆ ಸುಮಾರು 815 ವೈದ್ಯರನ್ನು ತುಂಬುವುದಕ್ಕೆ ಈಗಾಗಲೇ ಪ್ರಕ್ರಿಯೆಯನ್ನು ಪ್ರಾರಂಭಿಸಿ KPSCಯಿಂದ ನೇಮಕಾತಿ ಆದೇಶವನ್ನು ಕೊಟ್ಟಿದ್ದೇವೆ. ಆ ಹುದ್ದೆಗಳನ್ನು ತುಂಬಿಕೊಳ್ಳುವಂತಹ ಪ್ರಕ್ರಿಯೆ ಮಾಡಿದ್ದೇವೆ.

ಅಧ್ಯಕ್ಷರು: ಕೊಳ್ಳೇಗಾಲ ಮತ್ತು ಯಳಂದೂರು ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ, ಅದರ ಬಗ್ಗೆ specific ಆಗಿ ಹೇಳಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೊಳ್ಳೇಗಾಲ ಮತ್ತು ಯಳಂದೂರಿಗೆ ಇದೇ ಅನ್ವಯವಾಗುತ್ತದೆ.

ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾಗಿ ಮಾನ್ಯ ಸದಸ್ಯರಿಗೆ ಸಹಾಯ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. ಅವರ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ. ಮಾನ್ಯ ಸಚಿವರು 815 ವೈದ್ಯರನ್ನು ನೇಮಕ ಮಾಡಿಕೊಂಡಿದ್ದೇವೆಂದು ಹೇಳಿದರು. ಅದರಲ್ಲಿ ಆಯ್ಕೆಯಾಗಿರುವವರಲ್ಲಿ 490 ಜನ contract basisನಲ್ಲಿ ಕೆಲಸ ಮಾಡುತ್ತಿರುವವರು. ಇನ್ನು 325 ಜನ ಆಯ್ಕೆಯಾದ ಹಾಗೆ ಆಯಿತು. ನಮ್ಮ ಹಾಸನ ಜಿಲ್ಲೆಯ ಬಗ್ಗೆ ಹೇಳುವುದಾದರೆ 120 ವೈದ್ಯರ ಹುದ್ದೆ ಖಾಲಿ ಇದೆ. ಅದರಲ್ಲಿ 68 ಹುದ್ದೆಗೆ ನೇಮಕಾತಿ ಮಾಡಿದ್ದು, report ಮಾಡಿಕೊಂಡಿದ್ದು 39 ಜನ. ಅದರಲ್ಲಿ 29 ಜನ ವಾಪಸ್ಸು ಮಾರ್ಪಾಟು ಆದೇಶ ಮಾಡಿಸಿಕೊಂಡು ಹೋಗಿದ್ದಾರೆ. ಉಳಿದಂತಹ 39ರಲ್ಲಿ ಹಾಜರಾಗಿರುವುದು ಕೇವಲ ಇಬ್ಬರೇ ಇಬ್ಬರು. ಸರ್ಕಾರಕ್ಕೆ ನಮ್ಮ ಒತ್ತಾಯ ಏನೆಂದರೆ ಈ ರೀತಿ ಗೈರು ಹಾಜರಾಗಿ ಸರ್ಕಾರದ ಆದೇಶಕ್ಕೆ ಅನುಗುಣವಾಗಿ ಬರದೇ ಇರುವವರಿಗೆ ಏನು ಕ್ರಮ ಕೈಗೊಳ್ಳುತ್ತೀರಿ. ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ಅಲ್ಲಿ ಅವರು ಹಾಜರಾಗಬೇಕಲ್ಲ, ಅದಕ್ಕೆ ಏನು ಮಾಡುತ್ತೀರಿ? ಇಲ್ಲದಿದ್ದರೆ ನೇಮಕಾತಿ ಸಂದರ್ಭದಲ್ಲಿ ಏನಾದರೂ ಷರತುಗಳನ್ನು ಹಾಕಿ ಅವರು ಹಾಜರಾಗಬೇಕೆಂದು ಹೇಳುತ್ತೀರೋ? ಅಥವಾ ಇದನ್ನು ಹೀಗೇ ಮುಂದುವರೆಸಿಕೊಂಡು ಹೋಗುತ್ತೀರೋ ಎಂದು ಹೇಳಬೇಕು. ಇದನ್ನು ಉನ್ನತೀಕರಣಗೊಳಿಸುವುದು ದೊಡ್ಡದಲ್ಲ. ಒಂದೊಂದು ಆಸ್ಪತ್ರೆಯಲ್ಲಿ ಮಾನ್ಯ ಧ್ರುವನಾರಾಯಣ್‌ರವರು ಹೇಳಿದ ಹಾಗೆ 8 ರಿಂದ 10 ಹುದ್ದೆಗಳು ಖಾಲಿ ಇವೆ. ಅಲ್ಲಿ ಇಬ್ಬಿಬ್ಬರು ವೈದ್ಯರಿದ್ದಾರೆ. ಇಡೀ ಸಕಲೇಶಪುರಕ್ಕೆ ಮೂರು ತಾಲ್ಲೂಕು ಬರುತ್ತದೆ. ಆಸ್ಪತ್ರೆಯಲ್ಲಿ 9 ವೈದ್ಯರ ಹುದ್ದೆಗಳು ಖಾಲಿ ಇವೆ. ಏನು ಮಾಡಬೇಕು?

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಡೀ ರಾಜ್ಯದ ಸಮಸ್ಯೆ ಬಗ್ಗೆ ಹೇಳಿದರು. Specific ಆಗಿ ಅವರು ಕೊಳ್ಳೇಗಾಲದ ವಿಚಾರಾಗಿ ತಿಳಿಸಿಕೊಡಬೇಕು. ಇನ್ನೊಂದು ವಿಚಾರ 2007ರಲ್ಲಿ ಯಳಂದೂರಿನಲ್ಲಿ 30 ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ್ದಾರೆ.

ಅಧ್ಯಕ್ಷರು: ಯಳಂದೂರು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿರುವುದನ್ನು ಹೇಳಿದಿರಿ. ಎರಡು ಮೂರು ಬಾರಿ ಹೇಳಿದಿರಿ. ಮತ್ತೆ ಅದನ್ನು repeat ಮಾಡುವುದಕ್ಕೆ ಹೋಗಬೇಡಿ.

ಶ್ರೀ ಆರ್. ಧ್ರುವನಾರಾಯಣ್: ಅಲ್ಲಿ up-gradation ಆಗಿರುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯಾದಂತಹ ಬದಲಾವಣೆಯನ್ನು ತಂದಿಲ್ಲ. 100 bed ಇರುವ hospitalಗೆ ಏನೇನು ಸೌಕರ್ಯಗಳು ಆಗಬೇಕು ಅದನ್ನು ಇನ್ನು ಮಾಡಿಲ್ಲ. ಅದನ್ನು ಯಾವಾಗ ಮಾಡುತ್ತೀರಿ? ತಕ್ಷಣ ಮಾಡಿ ಎನ್ನುವ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ತಜ್ಞ ವೈದ್ಯರ ಮತ್ತು ವೈದ್ಯರ ಕೊರತೆಗಳನ್ನು ನಿಜವಾಗಿಯೂ ರಾಜ್ಯದಲ್ಲಿ ಈ ಕಷ್ಟವನ್ನು ಹಿಂದಿನಿಂದಲೂ ನಾವು ಅನುಭವಿಸುತ್ತಿದ್ದೇವೆ. ಅದನ್ನು ಈಗಲೂ ಅನುಭವಿಸುತ್ತಿದ್ದೇವೆ. ಇದು ಏನು ಇದ್ದಕ್ಕಿದ್ದ ಹಾಗೆ ಈಗ ಉದ್ಭವವಾಗಿರುವುದಲ್ಲ. ನಾವು ಈ ಸಮಸ್ಯೆಯನ್ನು ಹಿಂದಿನಿಂದಲೂ ಅನುಭವಿಸುತ್ತಿದ್ದೇವೆ. ಆದರೆ ಬರುವ ದಿವಸಗಳಲ್ಲಿ ಕೊಳ್ಳೇಗಾಲ ಮತ್ತು ಯಳಂದೂರು ಆಸ್ಪತ್ರೆಗಳಿಗೆ ಆದ್ಯತೆಯ ಮೇಲೆ, ನಾವು ಈಗ ಬೇರೆ ಬೇರೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದೇವೆ, ಆದ್ಯತೆಯ ಮೇಲೆ ಈ ಆಸ್ಪತ್ರೆಗಳಿಗೆ ಹುದ್ದೆಗಳನ್ನು ತುಂಬಿಕೊಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆಯನ್ನು ಖಂಡಿತವಾಗಿ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ನೀವು ನಿಮ್ಮ ಉತ್ತರದಲ್ಲಿ ಹಿಂದೆಯು ಈ ಸಮಸ್ಯೆ ಇತು, ಮುಂದೆಯೂ ಇರುತ್ತದೆಂದು ಹೇಳಿದರೆ, ಅರ್ಥವಿಲ್ಲ. ತಾವು ತಜ್ಞರು ಏಕೆ ಬರುತ್ತಿಲ್ಲವೆಂಬ ವಿಚಾರವನ್ನು ಹೇಳಿ. ಇವತ್ತು ನೀವು ಕೊಡುತ್ತಿರುವ ಸಂಬಳಕ್ಕೆ PG ಮಾಡಿರುವವರು ಯಾರು ತಾಲ್ಲೂಕು ಆಸ್ಪತ್ರೆಗಳಿಗೆ ಬರುವುದಕ್ಕೆ ತಯಾರಿಲ್ಲ. ಆದರೆ ಬಗ್ಗೆ ತಾವು ಗಮನ ಹರಿಸಬೇಕೇ ವಿನಃ, ಅದು ಬಿಟ್ಟು ನೀವು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆಂದರೆ ಇಲ್ಲಿಗೆ ಯಾರು ವೈದ್ಯರುಗಳು ಬರುವುದಕ್ಕೆ ತಯಾರಿಲ್ಲ. ಒಬ್ಬರೂ ಬರುವುದಿಲ್ಲ, ಈ 815 ಜನ ವೈದ್ಯರುಗಳು ಇದ್ದಾರಲ್ಲಾ ಅದರಲ್ಲಿ ಅರ್ಧ ಜನರು report ಮಾಡಿಕೊಳ್ಳುವುದಿಲ್ಲ. ದಯಮಾಡಿ ಅದನ್ನು ತಾವು ತಿಳಿದುಕೊಳ್ಳಿ. ತಾವು ಅದಕ್ಕೆ ಪರಿಹಾರವನ್ನು ಕಂಡು ಹಿಡಿಯಿರಿ.

ಶ್ರೀ ವಿಶ್ವೇಸ್ವರ ಹೆಗಡೆ ಕಾಗೇರಿ: ರಿಪೋರ್ಟ್ ಮಾಡಿಕೊಂಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ರಿಪೋರ್ಟ್ ಮಾಡಿದ್ದಾರೆ, ಅವರಲ್ಲಿ ಡ್ಯೂಟಿಗೆ ಎಷ್ಟು ಜನರು ಬರುತ್ತಾರೆಂಬುದನ್ನು ನೋಡಿಕೊಳ್ಳಿ, ಗೊತ್ತಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗಾಗಲೇ 70% ಗಿಂತಲೂ ಹೆಚ್ಚು ಜನರು ರಿಪೋರ್ಟ್ ಮಾಡಿಕೊಂಡಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ರಿಪೋರ್ಟ್ ಮಾಡಿಕೊಳ್ಳುತ್ತಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರು ಡ್ಯೂಟಿಗೆ ಬರುವುದಿಲ್ಲ. ಅವರು ಒಂದು ದಿವಸ ಬಂದು ರಿಪೋರ್ಟ್ ಮಾಡಿಕೊಂಡು ಹೊರಟು ಹೋಗುತ್ತಾರೆ. ಅವರು 6 ತಿಂಗಳುಗಳಾದರೂ ಬರುವುದಿಲ್ಲ, ಇದು ಇರುವ ಸಮಸ್ಯೆ. ಇವರು ಹಳ್ಳಿಗಳಲ್ಲಿ ಕೆಲಸ ಮಾಡುವುದಕ್ಕೆ ಯಾರು ತಯಾರಿಲ್ಲ. ಆ ಸಮಸ್ಯೆಗೆ ನೀವು ಪರಿಹಾರ ಕಂಡು ಹಿಡಿಯುವುದನ್ನು ಬಿಟ್ಟು, ನೀವು ಇಲ್ಲಿ ಕೊಡುವ ಉತ್ತರದಿಂದ ಖಂಡಿತವಾಗಿ ಸಮಾಧಾನವಾಗುವುದಿಲ್ಲ, ಪರಿಸ್ಥಿತಿ ಬದಲಾಗುವುದಿಲ್ಲ.

ಅಧ್ಯಕ್ಷರು: Ok. ಜಯಚಂದ್ರರವರೆ, ಮಾನ್ಯ ಈಶ್ವರ ಭೀಮಣ್ಣ ಖಂಡ್ರೆಯವರೆ, ಪ್ರಶ್ನೆಯನ್ನು ಕೇಳಿ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಆರೋಗ್ಯ ಮಂತ್ರಿಗಳೇ ಇಲ್ಲವಲ್ಲ. ಅವರು ಕಳೆದ ಅಧಿವೇಶನದಲ್ಲೂ ಇರಲಿಲ್ಲ. ಈ ಅಧಿವೇಶನದಲ್ಲೂ ಇಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಸಮಸ್ಯೆಗಳಿಗೆ ಪರಿಹಾರ ಕೊಡುವವರು ಯಾರು?

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಆರೋಗ್ಯ ಮಂತ್ರಿಗಳು ಆರೋಗ್ಯವಾಗಿ ಇದ್ದಾರೆಯೇ, ಇಲ್ಲವೇ? ದಯಮಾಡಿ ತಿಳಿಸಿ.

(ಗೊಂದಲ)

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಸದನಕ್ಕೆ ಬರುವುದಕ್ಕಾಗುವುದಿಲ್ಲವೆಂದರೆ ಅವರನ್ನು change ಮಾಡಿ, ಬೇರೆಯವರನ್ನು ಮಂತ್ರಿಗಳನ್ನಾಗಿ ಮಾಡಿ. ಇಲ್ಲಿ ಎಷ್ಟೋ ಜನರು ಕಾದು ಕುಳಿತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಆರೋಗ್ಯ ಮಂತ್ರಿಯವರು, ಇವತ್ತು ಒಂದು ದಿವಸ ಗೈರು ಹಾಜರೆಂದು ನನ್ನ permission ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಏಕೆ ಗೈರು ಹಾಜರಾಗಿದ್ದಾರೆಂಬುದನ್ನು ಸಭೆಗೆ ಹೇಳಬೇಕು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಇವತ್ತು ಅವರ ಜಿಲ್ಲೆಯಲ್ಲಿ ಒಂದು ಅಪಘಾತವಾಗಿ 15 ಜನರು ಮರಣ ಹೊಂದಿದ್ದಾರೆ. ಅದಕ್ಕಾಗಿ ಅವರು ಅರ್ಜೆಂಟಾಗಿ ಅಲ್ಲಿಗೆ ಹೋಗಬೇಕಾಗಿದ್ದರಿಂದ ಹೋಗಿದ್ದಾರೆ. ಇಂಥ ಒಂದು

ಆಕಸ್ಮಿಕ ಘಟನೆ ನಡೆದಿದ್ದರಿಂದ ಅಲ್ಲಿಗೆ ಅವರು ಹೋಗಬೇಕಾದ ಅವಶ್ಯಕತೆ ಇದ್ದುದ್ದರಿಂದ ಹೋಗಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಅಲ್ಲಿಗೆ ಜಿಲ್ಲಾ ಮಂತ್ರಿಯವರು ಹೋಗಿರಬಹುದು. ಎಲ್ಲಾ ಮಂತ್ರಿಗಳು ಎಂದರೆ ಇಲ್ಲಿ ಸ್ಪಷ್ಟಿಕರಣ ಕೊಡಬೇಕು. ಅವರಿಗೆ ಏನಾದರೂ ಸಮಸ್ಯೆನಾ.....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳು ಅನಾರೋಗ್ಯದಿಂದ ಬಳಲುತ್ತಿದ್ದಾರೆಯೇ?

Dr. Sharana Prakash Rudrappa Patil: Government has become un-responsive to the public problems.

ಅಧ್ಯಕ್ಷರು: ಮಾನ್ಯ ಶರಣ ಪ್ರಕಾಶ ರುದ್ರಪ್ಪ ಪಾಟೀಲ್‌ರವರೆ ಕುಳಿತುಕೊಳ್ಳಿ. ಮಾನ್ಯ ಈಶ್ವರ್ ಭೀಮಣ್ಣ ಖಂಡ್ರೆಯವರು ಪ್ರಶ್ನೆಯನ್ನು ಕೇಳಬೇಕು.

ಅಧ್ಯಕ್ಷರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಮಾನ್ಯ ಶ್ರೀರಾಮುಲುರವರು ನಾನು ಇವತ್ತು ಒಂದು ದಿವಸ ಗೈರು ಹಾಜರಾಗುತ್ತಿದ್ದೇನೆಂದು permission ತೆಗೆದುಕೊಂಡು ಹೋಗಿದ್ದಾರೆ. ಇನ್ನು ಮಾನ್ಯ ಈಶ್ವರ್ ಭೀಮಣ್ಣ ಖಂಡ್ರೆಯವರೆ ಪ್ರಶ್ನೆಯನ್ನು ಕೇಳಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾಳೆ ಮಾನ್ಯ ಆರೋಗ್ಯ ಮಂತ್ರಿಯವರು ಸದನಕ್ಕೆ ಬಂದ ಮೇಲೆ ಅವರಿಂದ ಒಂದು statement ಕೊಡಿಸಿ.

ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಹಾಸ್ಟಲ್‌ಗಳ ಅವ್ಯವಸ್ಥೆಯ ಬಗ್ಗೆ.

29 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಸಮಾಜ ಕಲ್ಯಾಣ ಸಚಿವರು

ಅ ಬೀದರ್ ಜಿಲ್ಲೆಯ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವರ್ಗಗಳ ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯಗಳ ಸಂಖ್ಯೆ ಎಷ್ಟು;

ವರ್ಗ	ಬಾಲಕರ ವಿದ್ಯಾರ್ಥಿನಿಲಯ	ಬಾಲಕೀಯರ ವಿದ್ಯಾರ್ಥಿ ನಿಲಯ	ಒಟ್ಟು
ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	07	02	09
ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	01	–	01
ಒಟ್ಟು	**08**	**02**	**10**

ಆ ಇವು ಯಾವ ಯಾವ ಗ್ರಾಮಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಭಾಲ್ಕಿ ವಿಧಾನಸಭಾ ಕ್ಷೇರದಲ್ಲಿ ಕಾರ್ಯನಿರ್ವ ಸುತ್ತಿರುವ ವಿದ್ಯಾರ್ಥಿ ನಿಲಯಗಳ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ವರ್ಗ	ಮಂಜೂ ರಾತಿ ಸಂಖ್ಯೆ	2005–06	2006–07	2007–08	2008–09 (ಡಿಸೆಂಬರ್ 08 ರ ಅಂತ್ಯದವರೆಗೆ)
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಭಾಲ್ಕಿ	200	12.31	12.31	12.31	12.91
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಿಟ್ಟೂರ (ಬಿ)	50	3.16	3.16	3.16	3.31
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಖಟಕೆ ಚಿಂಚೊಳ್ಳಿ	50	3.16	3.16	3.16	3.31

4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮೇದಕರ	60	3.77	3.77	3.77	3.95
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಲೆಖನ ಗಾಂವ್	50	3.16	3.16	3.16	3.31
6	ಮೆಟ್ರಿಕ್ ಪೂರ್ವ ಬಾಲಕರ, ವಿದ್ಯಾರ್ಥಿ ನಿಲಯ, ವರವಪಟ್ಟಿ (ಬಿ)	35	2.245	2.245	2.245	2.36
7	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹಲಬರ್ಗಾ	50	3.16	3.16	3.16	3.31
8	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯರ್ಥಿನಿಲಯ, ಭಾಲ್ಕಿ	85	5.2525	5.2525	5.2525	5.5075
9	ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ನಿಟ್ಟೂರ (ಬಿ)	50	3.135	3.135	3.135	3.31
10	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಭಾಲ್ಕಿ	100	5.00	5.00	5.00	5.20
	ಒಟ್ಟು	**730**	**44.3525**	**44.3525**	**44.3525**	**46.4675**

ಇ) ಕಳೆದ ಮೂರು ವರ್ಷಗಳ ಅವಧಿಯಿಂದ ಇಲ್ಲಿಯವರೆವಿಗೆ ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಗಳಿಗೆ ಮತ್ತು ಊಟೋಪಚಾರಗಳಿಗೆ ಪ್ರತಿ ವರ್ಷ

ವೆಚ್ಚ ಮಾಡಲಾಗಿರುವ ಹಣದ ಮೊತ್ತ ವೆಷ್ಟು (ಹಾಸ್ಟೆಲ್‌ವಾರು ವಿವರಗಳನ್ನು ಒದಗಿಸುವುದು);

ಈ) ಸರ್ಕಾರವು ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದರೂ ಸಹ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲ ಸೌಲಭ್ಯಗಳ ಕೊರತೆ ಹಾಗೂ ಕಳಪೆ ದರ್ಜೆಯ ಆಹಾರ ಪೂರೈಕೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಹೌದು

ಉ) ಹಾಗಿದ್ದಲ್ಲಿ, ಇದನು ನಿವಾರಿಸುವ ಸಲುವಾಗಿ ಸರ್ಕಾರದ ಮುಂದಿರುವ ಕ್ರಮಗಳೇನು;

ಜಿಲ್ಲಾ ಮಟ್ಟದ ಟೆಂಡರ್ ವ್ಯವಸ್ಥೆಯ ಬದಲು ವಿದ್ಯಾರ್ಥಿನಿಲಯದ ಆಹಾರ ಸಾಮಗ್ರಿಗಳ ಖರೀದಿಯ ವ್ಯವಸ್ಥೆಯ ಮೇಲ್ವಿಚಾರಕರ ಜವಾಬ್ದಾರಿ ವಹಿಸಿ ಆಹಾರ ಸಾಮಗ್ರಿಗಳ ಖರೀದಿ ಪದ್ಧತಿಯನ್ನು ಸರಳೀಕರಣಗೊಳಿಸಿ ಆದೇಶ ಸಂಖ್ಯೆ :ಸಕಿಕಇ 123 ಸಮನ್ವಯ 2008 ದಿನಾಂಕ :16.07.2008 ರಲ್ಲಿ ಸೂಚಿಸಲಾಗಿದೆ. ಅದಲ್ಲದೆ ಲಭ್ಯತೆ ಹಾಗೂ ಅವಶ್ಯಕತೆ ಅನುಸರಿಸಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಕ್ರೋಢೀಕೃತ ಅನುದಾನದಲ್ಲಿ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ಕಿಟಕಿ ಬಾಗಿಲು, ಸ್ನಾನದ ಕೊಠಡಿಗಳ ರಿಪೇರಿ, ವಿದ್ಯುತ್, ನೀರು ಸೌಲಭ್ಯ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ರಾಜ್ಯಾದ್ಯಂತ ಬಹುತೇಕ ವಿದ್ಯಾರ್ಥಿ ನಿಲಯಗಳಲ್ಲಿ ಇದೇ ಪರಿಸ್ಥಿತಿ ಇರುವುದರಿಂದ ಇದನ್ನು ತಡೆಗಟ್ಟುವ ಸಲುವಾಗಿ ಇಲಾಖೆಯಲ್ಲಿ ಜಾಗೃತ ದಳವನ್ನು ರಚನೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಆದರೆ ವಸತಿ ನಿಲಯಗಳಲ್ಲಿ ಗುಣಮಟ್ಟ ಕಾಪಾಡಲು ಈ ಕೆಳಗಿನ ಕ್ರಮ ಕೈಗೊಳ್ಳಲಾಗಿದೆ.

- ಆಯಾ ತಾಲ್ಲೂಕಿನ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಸಂದರ್ಶಕ ಸಮಿತಿ ರಚಿಸಲಾಗಿದೆ.
- ಪ್ರತಿ ವಿದ್ಯಾರ್ಥಿನಿಲಯಕ್ಕೆ ಪೋಷಕರು, ಮುಖ್ಯೋಪಧ್ಯಾಯರು, ಮೇಲ್ವಿಚಾರಕರು, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಇವರನ್ನೊಳಗೊಂಡ ಸಲಹಾ ಸಮಿತಿ ರಚಿಸಲಾಗಿದೆ.

ಇಲಾಖೆಯಿಂದ ನೋಡೆಲ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದ ಪ್ರಶ್ನೆಯೇನೆಂದರೆ, ನಮ್ಮ ಬೀದರ್ ಜಿಲ್ಲೆಯ ಭಾಲ್ಕಿ ಮತ ಕ್ಷೇತ್ರದಲ್ಲಿ ಸರ್ಕಾರ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದರೂ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲ ಸೌಲಭ್ಯಗಳ ಕೊರತೆ ಹಾಗೂ ಕಳಪೆ ದರ್ಜೆಯ ಆಹಾರ ಪೂರೈಕೆಯಾಗುತ್ತಿರುವ ಬಗ್ಗೆ ಕೇಳಿದ್ದೆ. ಅದನ್ನು ಸಚಿವರು ಒಪ್ಪಿದ್ದಾರೆ. ಆದರೆ ಇದನ್ನು ತಡೆಗಟ್ಟುವುದಕ್ಕೆ ಏನು ಕ್ರಮವನ್ನು ಕೈಗೊಂಡಿದ್ದಾರೆಂಬ ಬಗ್ಗೆ ಸಚಿವರು ನಿಖರವಾದ ಉತ್ತರವನ್ನು ಕೊಟ್ಟಿಲ್ಲ. ನಮ್ಮ ಜಿಲ್ಲೆಯಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆಯೆಂಬ ಬಗ್ಗೆ ಒಂದು ನಿದರ್ಶನವನ್ನು ನಾನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಲಿಚ್ಛಿಸುತ್ತೇನೆ. ಪ್ರತಿ ವರ್ಷ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡುವ ವಿಚಾರದಲ್ಲಿ ಟೆಂಡರ್ ಮುಖಾಂತರ ಈ ಒಂದು ಯೋಜನೆ ಅನುಷ್ಠಾನವಾಗುತ್ತಿದೆ. ಈ ಟೆಂಡರ್‌ನಲ್ಲಿ ಯಾವ ರೀತಿಯಾಗಿ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಶಾಮೀಲಾಗಿ, ಟೆಂಡರ್ ಪ್ರಕ್ರಿಯೆಯನ್ನು ವಿಫಲ ಮಾಡುತ್ತಿದ್ದಾರೆಂದರೆ, ಇವರು ಕಡಿಮೆ ದರದ ಆಧಾರದ ಮೇಲೆ ಟೆಂಡರ್ ಅನ್ನು ತಾವೇ ತೆಗೆದುಕೊಳ್ಳಬೇಕೆಂದು ಹೇಳಿ, ಅನೇಕ ಬಾರಿ ಆಹಾರ ಸಾಮಾಗ್ರಿಗಳನ್ನು ಇವರು ಏನು ವಿತರಣೆ ಮಾಡುತ್ತಿದ್ದಾರೆ. ಆ ಬಗ್ಗೆ ಉದಾಹರಣೆಗೆ ಹೇಳುವುದಾದರೆ ಹಾಲನ್ನು ಲೀಟರ್‌ಗೆ 2 ರೂ.ಗಳಂತೆ ಕೊಡುತ್ತೇವೆಂದು ಟೆಂಡರ್ ಅನ್ನು ಹಾಕಿದ್ದಾರೆ, ಒಂದು ಕೆ.ಜಿ. ಸಾಸಿವೆಯನ್ನು 15ರೂ. ಗಳಿಗೆ ಕೊಡುತ್ತೇವೆಂದು ಟೆಂಡರ್ ಹಾಕಿದ್ದಾರೆ. ಇದರ ಬೆಲೆ ಮಾರುಕಟ್ಟೆಯಲ್ಲಿ 100 ರೂಪಾಯಿಗಳಿಗೂ ಹೆಚ್ಚು ಇದೆ. ಮೈಸೂರು ಸ್ಯಾಂಡಲ್ ಸೋಪನ್ನು 10 ರೂ.ಗಳಿಗೆ ಕೊಡುತ್ತೇವೆಂದು ಟೆಂಡರ್ ಹಾಕಿದ್ದಾರೆ. ಇದರ ಬೆಲೆ ಮಾರುಕಟ್ಟೆಯಲ್ಲಿ 18ರೂ. ಗಳಿಂದ 22 ರೂ.ಗಳವರೆಗೆ ಇದೆ. ಅಂದರೆ ಇಲ್ಲಿ ಏನಾಗುತ್ತಿದೆಯೆಂದರೆ ಟೆಂಡರ್ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಕೂಡಿ ಇದನ್ನು ಕಡಿಮೆ ದರದಲ್ಲಿ ತೆಗೆದುಕೊಳ್ಳಬೇಕೆಂಬ ನಿಟ್ಟಿನಲ್ಲಿ, ಆ ಟೆಂಡರ್ ಅನ್ನು ಅಂಥವರಿಗೆ ಕೊಟ್ಟ ಮೇಲೆ, ಅವರು ಈ ಆಹಾರ ಸಾಮಗ್ರಿಗಳನ್ನು ಹಿಂದುಳಿದ ವರ್ಗದ ಹಾಸ್ಟೆಲ್‌ಗಳಿಗೆ, ಸರಬರಾಜು ಮಾಡುತ್ತಿಲ್ಲ. ಅವರು ಈ ಕಳಪೆ ಮಟ್ಟದ ಆಹಾರ ಸಾಮಾಗ್ರಿಗಳನ್ನು ಪೂರ್ತಿಯಾಗಿ ಕೊಡುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದರೂ ಇದರ ಬಗ್ಗೆ ಏನು ಕ್ರಮವಾಗಿದೆಯೆನ್ನುವ ಬಗ್ಗೆ ಅಥವಾ ಇಂಥಾದ್ದನ್ನು ತಡೆಗಟ್ಟುವುದಕ್ಕೆ ಕನಿಷ್ಟ ಪಕ್ಷ ಎ.ಪಿ.ಎಂ.ಸಿ.ದರದ ಆಧಾರದ ಮೇಲೆ ಆದರೂ ಟೆಂಡರ್ ಮುಖಾಂತರ ಕೊಡಬೇಕೆಂಬುದರ ಬಗ್ಗೆ ಸರ್ಕಾರ ಏನು ವಿಚಾರ ಮಾಡಿದೆಯೆಂಬದನ್ನು ತಿಳಿಸಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಸುಧಾಕರ್: (ಮಾನ್ಯ ಸಮಾಜ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯುವುದನ್ನು ರದ್ದು ಮಾಡಿದ್ದೇವೆ. ಇದನ್ನು ರದ್ದು ಮಾಡಿ ಆಯಾ ಹಾಸ್ಟೆಲ್‌ನ ಮೇಲ್ವಿಚಾರಣೆಯ ಸಮಿತಿಯನ್ನು ಮಾಡಿ, ಈ ಸಮಿತಿಯಲ್ಲಿ ಪೋಷಕರನ್ನೊಳಗೊಂಡ ಸಮಿತಿಯನ್ನು ಮಾಡಿದ್ದೇವೆ. ಸ್ಥಳೀಯ ದರಗಳ ಮೇಲೆ ಖರೀದಿ ಮಾಡಬೇಕೆಂದು ಹೇಳಿ ಈ ವರ್ಷ 150 ರೂ.ಗಳನ್ನು ಹೆಚ್ಚಿಗೆ ಮಾಡಿ ಕೊಟ್ಟಿದ್ದೇವೆ. ಈ ಪ್ರಕಾರ 6 ಜಿಲ್ಲೆಗಳಲ್ಲಿ ನಡೆಯುತ್ತಿದೆ. ಸರ್ಕಾರ ಬರುವುದಕ್ಕೆ ಮೊದಲೆ ಇನ್ನು ಉಳಿದ ಜಿಲ್ಲೆಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿದು ಹೋಗಿದ್ದರಿಂದ ಈ 6 ಜಿಲ್ಲೆಗಳಲ್ಲಿ ಮಾತ್ರ ಹೊಸ ಪದ್ಧತಿ ಜಾರಿಗೆ ಬಂದಿದೆ. ಈ ಹೊಸ ಪದ್ಧತಿ ಬರುವ ಜೂನ್ ತಿಂಗಳಿನಿಂದ ಜಾರಿಗೆ ಬಂದಿದೆ. ಈ 6 ಜಿಲ್ಲೆಗಳಲ್ಲಿ ಟೆಂಡರ್‌ಗಳನ್ನು ಏನು ಹಿಂದಕ್ಕೆ ಪಡೆದಿದ್ದೇವೆ, ಅಲ್ಲಿ ಉತ್ತಮ ಗುಣಮಟ್ಟದ ಆಹಾರ ದೊರೆಯುತ್ತಿದೆಯೆಂದು ನಾನು ತಮ್ಮ ಮೂಲಕ ಹೇಳಲಿಚ್ಛಿಸುತ್ತೇನೆ. ಭಾಲ್ಕಿ ಕ್ಷೇತ್ರದಲ್ಲೂ ಕೂಡ ಬರುವ ಜೂನ್ ತಿಂಗಳಿನಿಂದ ಇದೇ ಪದ್ಧತಿಯನ್ನು ಅಳವಡಿಸುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ಮಾತನಾಡುವಾಗ ಏನು ಹೇಳಿದ್ದಾರೆಂದರೆ, ಟೆಂಡರ್‌ಗಳು ಆಗಿರುವಂಥಾದ್ದರಲ್ಲಿ ಲೋಪದೋಷಗಳಾಗಿವೆಯೆಂದು ಹೇಳಿದರು. ಅದರ ಬಗ್ಗೆ ಹೇಳಿ.

ಶ್ರೀ ಡಿ.ಸುಧಾಕರ್: ಮಾನ್ಯ ಅಧ್ಯಕ್ಷರೆ, ಲೋಪದೋಷಗಳ ಬಗ್ಗೆ ಈಗಾಗಲೇ ತಮಗೆ ತಿಳಿಸಿದ ಹಾಗೆ ಪೋಷಕರ ನೇತೃತ್ವದಲ್ಲಿ ಸಮಿತಿಯನ್ನು ಮಾಡಿದ್ದೇವೆ. ಅವರ ಮೇಲ್ವಿಚಾರಣೆಯಲ್ಲಿ ಊಟದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಇದರ ಜೊತೆಗೆ ಆಯಾ ಜಿಲ್ಲೆಗಳಿಗೆ ನೋಡಲ್ ಆಫೀಸರ್ಸ್‌ಗಳನ್ನು ನೇಮಕ ಮಾಡಿದ್ದೇವೆ, ಅಲ್ಲಿ frequent ಆಗಿ visit ಮಾಡಿ ಸರಿಪಡಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಇದುವರೆಗೂ ಇದು ಅನುಷ್ಠಾನಕ್ಕೆ ಬಂದಿಲ್ಲ. ಇಲ್ಲಿ ಅದೇ ರೀತಿಯಲ್ಲಿ ಮುಂದುವರೆದುಕೊಂಡು ಹೋಗುತ್ತಿದೆ. ನಮ್ಮ ಬಳಿ ಒಂದು ವಿದ್ಯಾರ್ಥಿಗಳು ಹಾಳಾದದ್ದು, ಕಳಪೆ ಮಟ್ಟದ ಆಹಾರ ಸಾಮಾಗ್ರಿಗಳನ್ನು ನಮ್ಮ ಎದುರುಗಡೆ ಪ್ರದರ್ಶನ ಮಾಡುತ್ತಿದ್ದಾರೆ. ಇದಕ್ಕೆ ನಾವು ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಂಥ ಒಂದು ಪರಿಸ್ಥಿತಿಯಲ್ಲಿ ಇನ್ನು ಮೂರು ದಿವಸಗಳಲ್ಲಿ ತಕ್ಷಣವೇ ಆ ರೀತಿಯ ಟೆಂಡರ್‌ಗಳನ್ನು ರದ್ದು ಮಾಡಿ, ಅವರನ್ನು blacklist ಮಾಡಿ, ಇದಕ್ಕೆ ಬೇರೆ ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಮಾಡುವ ಬಗ್ಗೆ ಮಾಡುತ್ತೀರಾ?

ಶ್ರೀ ಡಿ.ಸುಧಾಕರ್: ಪರಿಶೀಲನೆ ಮಾಡುತ್ತೇವೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕನ್ನು ಅತ್ಯಂತ ಹಿಂದುಳಿದ ತಾಲ್ಲೂಕೆಂದು ಡಾ:ನಂಜುಂಡಪ್ಪನವರ ವರದಿಯ ಅಡಿಯಲ್ಲಿ ಆಗಿದೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಹಿಡಿದು ಎಲ್ಲರೂ ಪ್ರಭಾರದಲ್ಲೇ ಕೆಲಸ ಮಾಡುತ್ತಿದ್ದಾರೆ. ಇಲ್ಲಿ 80 ಪ್ರತಿಶತ ಹುದ್ದೆಗಳು ಖಾಲಿ ಇವೆ. ನಾನು ಇದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಸುಮಾರು 60% ಕ್ಕಿಂತಲೂ ಹೆಚ್ಚು ಹುದ್ದೆಗಳು ಖಾಲಿ ಇದ್ದರೂ, ಈಗಾಗಲೇ 20 ದಿವಸಗಳ ಕೆಳಗೆ ತಹಶೀಲ್ದಾರರು ಹೊಸಬರು ಬಂದರು.

ಅಧ್ಯಕ್ಷರು: ಮಾನ್ಯ ಈಶ್ವರ ಭೀಮಣ್ಣ ಖಂಡ್ರೆಯವರೆ, ಈಗ ವಿಷಯಾಂತರವಾಗುವುದು ಬೇಡ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಇಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಸಮಾಜ ಕಲ್ಯಾಣ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಸುಧಾಕರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಖಾಲಿ ಇರುವಂಥ ಹುದ್ದೆಗಳಿಗೆ ಪ್ರಕ್ರಿಯೆ ನಡೆದಿದೆ. ಕೆ.ಪಿ.ಎಸ್.ಸಿ.ಗೆ ಸೂಚನೆಯನ್ನು ಕೊಡಲಾಗಿದ್ದು, ಅದು ಚಾಲುವಾಗಿದೆ, ಮತ್ತೆ ಅಡಿಗೆ ಸಹಾಯಕರನ್ನು ಸಹ ಹೊರ ಸಂಪನ್ಮೂಲದಿಂದ ತೆಗೆದುಕೊಳ್ಳುವುದಕ್ಕೆ ಜಿಲ್ಲೆಯ ಅಧಿಕಾರಿಗಳಿಗೆ ಸೂಚನೆ ಹೋಗಿದೆ. ಮುಂದಿನ ವರ್ಷದಲ್ಲಿ ಸಾಧ್ಯವಾದಷ್ಟು ಪೂರ್ಣಮಟ್ಟದಲ್ಲಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಕೊಟ್ಟಿರುವ ಉತ್ತರದಲ್ಲಿ ತಪ್ಪಿದೆ. ಇವರು ಕೊಟ್ಟಿರುವ ಉತ್ತರದಲ್ಲಿ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಸಂದರ್ಶಕ ಸಮಿತಿಯನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ. ಇದನ್ನು ಎಲ್ಲಿ ಮಾಡಿದ್ದಾರೆ? ಯಾವ ವಿಧಾನ ಸಭಾ ಕ್ಷೇತ್ರದಲ್ಲಿದೆ? ಎಲ್ಲಿ ಮೀಟಿಂಗ್ ನಡೆಯುತ್ತಿದೆ? ದಯವಿಟ್ಟು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಡಿ.ಸುಧಾಕರ್: ಸನ್ಮಾನ್ಯ ಸಭಾಧ್ಯಕ್ಷರೇ, ವಿಧಾನಸಭೆಯ ಸದಸ್ಯರ ಅಧ್ಯಕ್ಷತೆಯಲ್ಲಿ ಈಗಾಗಲೇ ಸಮಿತಿಗಳಿವೆ. 2001ರಲ್ಲೇ ಈ ಬಗ್ಗೆ ಆರ್ಡರ್ ಆಗಿದೆ. ಅದು ಬಹಳಷ್ಟು ಜನರಿಗೆ ಗೊತ್ತಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್: ಸಮಿತಿಗಳನ್ನು ಮಾಡಿಯೇ ಇಲ್ಲ.

ಶ್ರೀ ಡಿ.ಸುಧಾಕರ್: ಅದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಹೆಚ್.ಎಂ.ವಿಶ್ವನಾಥ್: ಯಾವ ಸಮಿತಿಯೂ ಆಗಿಲ್ಲ, ಒಂದು ಸಭೆಯೂ ನಡೆದಿಲ್ಲ.

ಅಧ್ಯಕ್ಷರು: ಈ ಪ್ರಶ್ನೆ ಮುಗಿದಿದೆ. ಮುಂದಿನ ಪ್ರಶ್ನೆಗೆ ಹೋಗೋಣ. ಮುಂದಿನ ಪ್ರಶ್ನೆ, ರೋಷನ್ ಬೇಗ್‌ರವರು ಕೇಳಬೇಕು.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್: ಕಳುಹಿಸುತ್ತೇವೆ, ಮಾಡುತ್ತೇವೆ ಎನ್ನುವ ಉತ್ತರವನ್ನಾದರೂ ಕೊಡಲಿ.

ಶ್ರೀ ಡಿ.ಸುಧಾಕರ್: ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ತಕ್ಷಣ ಅಧಿಕಾರಿಗಳನ್ನು ಕಳುಹಿಸಿ, ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ನೀರಿನ ಕೊರತೆ ಬಗ್ಗೆ.

41 ಶ್ರೀ ರೋಷನ್ ಬೇಗ್.ಆರ್ (ಶಿವಾಜಿನಗರ)

ಶ್ರೀ ಬಿ.ಸಿ. ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಲ್ಲಿ ನೀರಿನ ಕೊರತೆಯಿದೆಯೇ?

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅಡಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಆ) ಹಾಗಿದ್ದಲ್ಲಿ, ಸರ್ಕಾರ ನೀರಿನ ಕೊರತೆಯನ್ನು ನೀಗಿಸಲು ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಶ್ರೀ ಆರ್. ರೋಷನ್‌ಬೇಗ್: ಮಾನ್ಯ ಸಭಾಧ್ಯಕ್ಷರೇ, ಸರ್ಕಾರಿ ಆಸ್ಪತ್ರೆಗಳಲ್ಲಿ water scarcity ಇದೆ, ಅಲ್ಲಿ ನೀರು ಸಿಗುತ್ತಿಲ್ಲ, ಅದರ ಕೊರತೆಯನ್ನು ನೀಗಿಸಲು ಏನು ಕ್ರಮ ಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಇವರು, for Hospitals coming under the Healh and Family Welfare ನಾವು ನೀರನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಎಂಥ ಬೇಜವಾಬ್ದಾರಿಯ ಕೆಲಸ ನೋಡಿ. ಅಧಿಕಾರಿಗಳನ್ನು ನೋಡಿದರೆ ನನಗೆ ಅಯ್ಯೋ ಎನಿಸುತ್ತದೆ. ಇವರಿಗೆ ರಾಜ್ಯೋತ್ಸವ ಅವಾರ್ಡ್‌ಗೆ ರೆಕಮಂಡ್ ಮಾಡಬೇಕು. ಮಂತ್ರಿಗಳು ಯುವಕರಿದ್ದಾರೆ.

ನೀವಾದರೂ ಏನು ಉತ್ತರ ಬರೆದು ಕೊಟ್ಟಿದ್ದಾರೆ ಎನ್ನುವುದನ್ನು ಓದಬಾರದೇ? ಅಧಿಕಾರಿಗಳು ಏನೋ ಬರೆದು ಕೊಟ್ಟುಬಿಟ್ಟರೆ ಅದನ್ನು ನೀವು ಓದಿಬಿಡುವುದಾ? I feel sorry. ಉದಾಹಣೆಗಾಗಿ ಹೇಳುತ್ತೇನೆ, ಬೆಂಗಳೂರು ನಗರದಲ್ಲಿ Victoria Hospital, Bowring Hospital, Isolation Hospital, Minto Hospital, Vani Vilas Hospital ಈ ಎಲ್ಲಾ ಆಸ್ಪತ್ರೆಗಳಲ್ಲಿ ಒಂದೊಂದು ಸಾರಿ ನೀರು ಸಿಕ್ಕುವುದಿಲ್ಲ. ಕುಡಿಯುವ ನೀರು ಬಿಡಿ, ಬಾತ್ ರೂಮ್‌ಗೆ ಹೋಗುವುದಕ್ಕೆ ಕೂಡ ನೀರಿಲ್ಲ. ರಾಮನಗರ, ಬಿಜಾಪುರ, ಬೀದರ್, ಗುಲ್ಬರ್ಗಾ ಇಂಥ ಕಡೆಗಳಿಂದ ಮೆಸೇಜ್‌ಗಳನ್ನು ತೆಗೆದುಕೊಂಡರೂ, ಅಲ್ಲೂ ಕೂಡ ಆಸ್ಪತ್ರೆಗಳಲ್ಲಿ ನೀರು ಸರಿಯಾಗಿ ಸಿಗುತ್ತಿಲ್ಲ. ನಾನು ನಿಮಗೆ ಕೇಳುವ ಪ್ರಶ್ನೆ ಇಷ್ಟೇ, medicinesಗೆ ನೀವು funds ಇಡುವ ಹಾಗೆ, ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳ water bill ಕಟ್ಟುವುದಕ್ಕೆಂದೇ ದುಡ್ಡನ್ನೇನಾದರೂ ಇಟ್ಟಿದ್ದೀರಾ? ಎರಡನೆಯದಾಗಿ, ಆಸ್ಪತ್ರೆಗಳಿಗೆ commercial rates charge ಮಾಡುತ್ತಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯವರು ಹೋದ ತಿಂಗಳು 40 ಲಕ್ಷ ರೂಪಾಯಿಗಳ water bill ಕಟ್ಟಿದ್ದಾರೆ. ಬೌರಿಂಗ್ ಆಸ್ಪತ್ರೆಯವರು 38 ಲಕ್ಷ ರೂಪಾಯಿಗಳನ್ನು ಕಟ್ಟಿದ್ದಾರೆ. ಇವರು ಜನವರಿಯಲ್ಲಿ 35 ಲಕ್ಷ ರೂಪಾಯಿಗಳನ್ನು ಕಟ್ಟಿದ್ದಾರೆ. ನಮಗೆ commercial rate charge ಮಾಡುವುದು ಬೇಡ, residential rateನಲ್ಲಿ ನೀರು ಕೊಡಿ ಎಂದು ಆಸ್ಪತ್ರೆಗಳವರು ಕೇಳುತ್ತಿದ್ದಾರೆ. Mallya Hospital, Manipal Hospital, Apollo Hospital, ಈಗ ಬಂದಿರುವ ಹೊಸ Five Star Hospital ಇಂಥ ಆಸ್ಪತ್ರೆಗಳಿಗೆ ನೀವು commercial rate charge ಮಾಡಿದರೆ ಒಪ್ಪಬಹುದು. ಆದರೆ ಸರ್ಕಾರಿ ಆಸ್ಪತ್ರೆಗಳಿಗೂ commercial rate charge ಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಯಾರಾದರೂ toiletಗೆ ಹೋಗಬೇಕೆಂದರೆ ನೀರಿಲ್ಲ. ಆರೋಗ್ಯ ಮಂತ್ರಿಗಳ relativeಗಳಲ್ಲಿ ಯಾರಾದರೂ ಈ ಆಸ್ಪತ್ರೆಗಳಿಗೆ ಹೋದರೆ ಗೊತ್ತಾಗುತ್ತದೆ. ಅದರೆ ಅವರ್ಯಾರೂ ಈ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ನೀವೆಲ್ಲ ಬಳ್ಳಾರಿಯಲ್ಲಿ ಬರೀ miningನಲ್ಲಿ busy ಯಾಗಿದ್ದೀರಿ. ಸರ್ಕಾರಿ ಆಸ್ಪತ್ರೆಗಳಲ್ಲಿ medicines ಸಿಗಲಿಲ್ಲ ಎಂದರೆ, ಬಾತ್ ರೂಂಗೆ ಹೋದರೆ ನೀರು ಸಿಗಲಿಲ್ಲ ಎಂದರೆ, ನೀವು ಇನ್ನೇನು ಮಾಡುತ್ತೀರಿ? ನೀವು ಬರೀ ಗಂಗಾಜಲ, ಲಡ್ಡು, election ಗಿಮಿಕ್ಸ್ ಮಾಡುತ್ತಾ ಹೋದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ರೋಷನ್ ಬೇಗ್‌ರವರು ಕೇಳಿದ ಪ್ರಶ್ನೆಗೆ ಸರ್ಕಾರ ಜವಾಬ್ದಾರಿಯುತವಾದಂಥ ಉತ್ತರವನ್ನು ಕೊಟ್ಟಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವಂಥ ಆಸ್ಪತ್ರೆಗಳಿಗೆ ನೀರಿನ ಕೊರತೆ ಇಲ್ಲದೇ ಇರುವಂತೆ, ಬೋರ್‌ವೆಲ್ ಮೂಲಕ ಮತ್ತು ಬೇರೆಬೇರೆ

ನೀರಾವರಿ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ನೀರಿನ ಕೊರತೆಯನ್ನು ತುಂಬಿಕೊಂಡಿದ್ದೇವೆ. ಆದರೆ ನೀವು ಹೇಳುತ್ತಿರುವ ಬೌರಿಂಗ್ ಆಸ್ಪತ್ರೆ ವಾಣಿವಿಲಾಸ್ ಆಸ್ಪತ್ರೆ ಇತ್ಯಾದಿ ಆಸ್ಪತ್ರೆಗಳು ವ್ಯದ್ಯಕಿಯ ಶಿಕ್ಷಣ ಇಲಾಖೆಯಡಿಯಲ್ಲಿ ಬರುವಂಥ ಆಸ್ಪತ್ರೆಗಳು. ನೀವೂ ಸರ್ಕಾರ ನಡೆಸಿದಂಥವರು. ನೀವೂ ಸರ್ಕಾರದಲ್ಲಿದ್ದಂಥವರು. ನೀವು ಈ ರೀತಿ ಹೇಳಬಾರದು. ನಾವು ಈ ಪ್ರಶ್ನೆಯನ್ನು Medical Educationಗೆ ವರ್ಗಾಯಿಸುತ್ತೇವೆ. ವರ್ಗಾಯಿಸುವುದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ನಾನು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ಅದು ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಾದರೂ ಬರಲಿ ಅಥವಾ ನಿಮ್ಮ ಇಲಾಖೆಯಲ್ಲಾದರೂ ಬರಲಿ, ಇದು ಸರ್ಕಾರಿ ಆಸ್ಪತ್ರೆಗಳ ವಿಚಾರ, ಸರ್ಕಾರ ಸರಿಯಾದ ರೀತಿಯಲ್ಲಿ ಉತ್ತರ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಅದು Medical Education Departmentನಲ್ಲಿ ಬಂದರೂ ಸಹ, ಈಗ ಅವರು ಸರ್ಕಾರದ ಗಮನಕ್ಕೆ ಏನು ವಿಷಯವನ್ನು ತಂದಿದ್ದಾರೆ, ಅದನ್ನು ಪರಿಹರಿಸಬೇಕು.

(ಈ ಹಂತದಲ್ಲಿ ಮುಜರಾಯಿ ಮತ್ತು ವಸತಿ ಇಲಾಖೆಯ ಸಚಿವರಾದ ಶ್ರೀ.ಎನ್. ಕೃಷ್ಣಯ್ಯ ಶೆಟ್ಟಿಯವರು, ಗಂಗಾಜಲದ ಬಗ್ಗೆ ಪ್ರಸ್ತಾಪಿಸಿರುವುದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶವನ್ನು ಕೇಳಿದರು)

ಅಧ್ಯಕ್ಷರು: ಕೃಷ್ಣಯ್ಯ ಶೆಟ್ಟಿಯವರೇ, ಅವರ ಉತ್ತರ ಮುಗಿಯಲಿ, ನೀವು ಕುಳಿತುಕೊಳ್ಳಿ.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ಈಗ ತಾವು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ ಹಾಗೆ, ರೋಷನ್ ಬೇಗ್‌ರವರ ಭಾವನೆ ಮತ್ತು ಈ ಸದನದ ಸದಸ್ಯರ ಭಾವನೆ ಈ ಸರ್ಕಾರಕ್ಕೆ ನಿಶ್ಚಿತವಾಗಿ ಅರ್ಥವಾಗುತ್ತದೆ. ಯಾವುದೇ ಸರ್ಕಾರಿ ಆಸ್ಪತ್ರೆಗಳಿಗೆ ನೀರು, ಔಷಧಿ, ವೈದ್ಯರು, ಯಾವುದೇ ಇತರ ಸೌಲಭ್ಯದ ಕೊರತೆಯಾಗದಂತೆ ನೋಡಿಕೊಳ್ಳುವುದು ನಮ್ಮ ಸರ್ಕಾರದ ಜವಾಬ್ದಾರಿ. ಅದನ್ನು ನಾವು ನೋಡಿಕೊಳ್ಳುತ್ತೇವೆ. ಆದರೆ ನೀವು ಬೇರೆ ಶಬ್ದಗಳನ್ನು ಬಳಸಿ ಮಾತನಾಡಿದರೆ, ಆಗ ನಿಮ್ಮ ಪ್ರಶ್ನೆಯ ಉದ್ದೇಶವನ್ನೇ ನಾನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಹಾಗಾಗಿ, ನಿಮ್ಮ ಪ್ರಾಮಾಣಿಕವಾದಂಥ, ಸದುದ್ದೇಶದ ಭಾವನೆಗಳಿಗೆ ಸರ್ಕಾರ ಸ್ಪಂದಿಸುವುದಕ್ಕೆ ಸಿದ್ಧವಿದೆ. ಆದರೆ. ಈ ವಿಷಯವನ್ನು ನೀವು ಬೇರೆ ರೀತಿ ಅರ್ಥೈಸುವುದಾದರೆ, ಅದನ್ನು ಎದುರಿಸುವುದಕ್ಕೂ ನಾವು ಸಿದ್ಧರಿದ್ದೇವೆ.

ಹಾಗಾಗಿ, ನಿಶ್ಚಿತವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವಂಥ ಆಸ್ಪತ್ರೆಗಳಲ್ಲಿ ನೀರಿನ ಕೊರತೆ ಇರದಂತೆ ನಾವು ನೋಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಪ್ರಶ್ನೆಗೆ ಈ ರೀತಿಯೇ ಉತ್ತರ ಕೊಡುವುದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಆಸ್ಪತ್ರೆಗಳಲ್ಲಿ ನೀರಿನ ಕೊರತೆ ಇಲ್ಲದೇ ಇರುವಂತೆ ಎಲ್ಲ ರೀತಿಯ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಅಗತ್ಯವಾದಂಥ ಕ್ರಮಗಳನ್ನು ತೆಗೆದು ಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು: ಕೃಷ್ಣಯ್ಯ ಶೆಟ್ಟಿಯವರೇ, ಈಗ ಅದನ್ನು ವಿಷಯಾಂತರ ಮಾಡಲಿಕ್ಕೆ ನಾನು ತಯಾರಿಲ್ಲ. ಇದು ಪ್ರಶ್ನೋತ್ತರ ವೇಳೆ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ರೋಷನ್ ಬೇಗ್‌ರವರು ಈ ರಾಜ್ಯದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿ ಅಪಾರ ಅನುಭವವನ್ನು ಹೊಂದಿರುವಂವರು. ಪ್ರಶ್ನೋತ್ತರವನ್ನು ಯಾವ ರೀತಿ ಕೇಳಬೇಕು ಎನ್ನುವುದನ್ನು ಅವರು ಅರ್ಥ ಮಾಡಿಕೊಂಡು ಕೇಳಬೇಕು. ಅವರು ಗಣಿ, ಗಂಗಾಜಲ ಎಂದೆಲ್ಲಾ ಹೇಳಿದರು. ಅವರೇನು ಕೇಳಬೇಕಾಗಿತ್ತು,....

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ: ನಾನು ಹೇಳುವುದನ್ನು ಕೇಳಿ. ನೀವು ಯಾವ ರೀತಿ ಉತ್ತರ ಬಯಸಿದರೆ ಅದೇ ರೀತಿ ನಾವು ಉತ್ತರ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು: ಈ ಪ್ರಶ್ನೆ ಮುಗಿಯಿತು. ಈಗ ವಿಷಯಾಂತರ ಮಾಡುವುದು ಬೇಡ. ಈಗ ಮುಂದಿನ ಪ್ರಶ್ನೆ ಜಯಚಂದ್ರರವರದ್ದು.

ಶ್ರೀ ಗೋವಿಂದ ಎಂ ಕಾರಜೋಳ: ಅವರು ಬಳಸುವ ಭಾಷೆ ಸರಿಯಾಗಿರಬೇಕು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಇದರಲ್ಲಿ ಗಣಿ ವಿಚಾರದಲ್ಲಿ ಏಕೆ mix ಮಾಡಿದಿರಿ?

ಅಧ್ಯಕ್ಷರು: ಜಯಚಂದ್ರರವರು ಪ್ರಶ್ನೆಯನ್ನು ಕೇಳಬೇಕು. ವಿಷಯಾಂತರ ಮಾಡುವುದು ಬೇಡ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಅವರೂ ಹೇಳಿದರು, ನೀವೂ ಹೇಳಿದಿರಲ್ಲ, ಆ ವಿಷಯ ಮುಗಿಯಿತು. That question is closed.

ಶ್ರೀ ಗೋವಿಂದ ಎಂ ಕಾರಜೋಳ: ನೀವು ಸುತ್ತಿ ಬಳಸಿ ಮಾತನಾಡಿದರೆ, ನಾವೂ ಸುತ್ತಿ ಬಳಸಿ ಉತ್ತರ ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಸಾಕು. ಈಗ ನಾನು ಮುಂದಿನ ಪ್ರಶ್ನೆಗಾಗಿ, ಜಯಚಂದ್ರರವರನ್ನು ಕರೆದಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಗಂಗಾಜಲ ಬರುತ್ತಿದೆಯಂತೆ. ಅದು ಹೇಗೆ ಹರಿಯುತ್ತದೆ ಎಂದು ಸ್ವಲ್ಪ ನೋಡೋಣ.

ಅಧ್ಯಕ್ಷರು: ಅದು ಬೇಡ. ಅದಕ್ಕೆ ಗೋವಿಂದ ಕಾರಜೋಳರವರು ಉತ್ತರ ಕೊಟ್ಟಿದ್ದಾರೆ. ಮತ್ತೆ ಅದು ಬೇಡ. ಮತ್ತೆ ಅದನ್ನು ಪ್ರಸ್ತಾಪಿಸಿದರೆ ವಿಷಯಾಂತರವಾಗುತ್ತದೆ. I don't allow further discussion in this regard. ಈ ವಿಷಯ ಇಲ್ಲಿಗೆ ಮುಗಿಯಿತು. ಮುಂದಿನ ಪ್ರಶ್ನೆಯನ್ನು ಜಯಚಂದ್ರರವರು ಕೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ: ಅಲ್ಲಿ ಮಿನಿಸ್ಟರುಗಳೇ ನಿಂತಿದ್ದರೆ ನಾನು ಏನು ಪ್ರಶ್ನೆ ಕೇಳಬೇಕು?

ಅಧ್ಯಕ್ಷರು: ವಿಷಯಾಂತರವಾಗುತ್ತದೆ. ಅದು ಬೇಡ, I do not allow. ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಬೇರೆ ವಿಷಯಗಳನ್ನು ಚರ್ಚೆ ಮಾಡಲು ನಾನು ಅವಕಾಶ ಕೊಡುವುದಿಲ್ಲ.

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ: ಗಂಗಾಜಲದ ಬಗ್ಗೆ ಮಾತನಾಡುವುದಕ್ಕೆ ಶ್ರೀ ಕೃಷ್ಣಯ್ಯ ಶೆಟ್ಟಿಯವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಬೇರೆ ವಿಷಯಗಳಿಗೆ ನಾನು ಅವಕಾಶ ಕೊಡುವುದಿಲ್ಲ. ಜಯಚಂದ್ರರವರೇ ನೀವು ಪ್ರಶ್ನೆಯನ್ನು ಕೇಳುವಿರೋ, ಇಲ್ಲವೆಂದರೆ ನಾನು ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳ ಮಂಜೂರಾತಿ ಬಗ್ಗೆ.

5(40) ಶ್ರೀ ಜಯಚಂದ್ರ ಟಿ.ಬಿ (ಶಿರಾ)

ಶ್ರೀ ಕೆ.ವಿಶ್ವೇಶ್ವರ ಹೆಗಡೆ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

ಅ) ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಮದಲೂರು ಮತ್ತು ಗುಳಿಗೇನಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ಕಾರದ ಆದೇಶದ ಸಂಖ್ಯೆ:ಅಕುಕ. 443 ಸಿಜಿಎಂ 2007 ದಿನಾಂಕ:4-10-2007ರಲ್ಲಿ ರಾಜ್ಯದಲ್ಲಿನ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವಿಲೀನಗೊಂಡಿದ್ದ 152 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅವಶ್ಯವಿರುವ ಸ್ಥಳಗಳಿಗೆ ಸ್ಥಳಾಂತರಿಸಲು ಹಾಗೂ 48 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಮದಲೂರು ಮತ್ತು ಗುಳಿಗೇನಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಹ ಸೇರಿವೆ.

ಆ) ಹಾಗಿದ್ದಲ್ಲಿ, ಈ ಆಸ್ಪತ್ರೆಗಳಿಗೆ ಹುದ್ದೆಗಳ ಮಂಜೂಆತಿ ಮತ್ತು ಅನುದಾನ ಬಿಡುಗಡೆ ಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಆರೋಗ್ಯ ಕೇಂದ್ರಗಳಿಗೆ ಅಧಿಕೃತ ಮಂಜೂರಾತಿ ಹಾಗೂ ಹುದ್ದೆಗಳ ಮಂಜೂರಾತಿ ನೀಡಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಸದರಿ ಆಸ್ಪತ್ರೆಗಳಿಗೆ ಮಾರ್ಗಸೂಚಿಗಳ ಅನ್ವಯ ಹುದ್ದೆಗಳು ಮಂಜೂರಾಗಿರುತ್ತವೆ. ಪೂರ್ಣ ಪ್ರಮಾಣದ ಕಟ್ಟಡ ಲಭ್ಯತೆ ಆದ ನಂತರ, ಔಷಧಿ ಪೂರೈಕೆ ಹಾಗೂ . ಹುದ್ದೆಗಳನ್ನು ತುಂಬಿ ಆಸ್ಪತ್ರೆಯನ್ನು ಅಧಿಕೃತವಾಗಿ ಪ್ರಾರಂಭಿಸಬೇಕಾಗುತ್ತದೆ. ಸದರಿ 2 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಉಚಿತ ಬಾಡಿಗೆರಹಿತ ಕಟ್ಟಡ ನೀಡಿರುವ ಕಾರಣ ಅಲ್ಲಿ ಆಸ್ಪತ್ರೆ ನಡೆಸಲು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಟಿ.ಬಿ.ಜಯಚಂದ್ರ:- ನನ್ನ ಪ್ರಶ್ನೆಯನ್ನು ಮಂತ್ರಿಗಳು ಅರ್ಥಮಾಡಿಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ಸಮಾಧಾನದ ಸಂಗತಿ ಎಂದರೆ, ಆಸ್ಪತ್ರೆ ಮಂಜೂರಾಗಿದೆಯೇ ಎನ್ನುವ ಪ್ರಶ್ನೆಗೆ, ಈಗಾಗಲೇ ಎರಡು ಆಸ್ಪತ್ರೆಗಳು ಮಂಜೂರಾಗಿವೆ ಎನ್ನುವ ಮಾತನ್ನು ಹೇಳಿದ್ದೀರಿ, ಸಂತೋಷ ಮತ್ತು ಅದಕ್ಕಾಗಿ ಧನ್ಯವಾದ. ಅವು ಯಾವತ್ತು ಮಂಜೂರಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಏಕೆಂದರೆ, ನಿನ್ನೆ ಮೊನ್ನೆಯವರೆಗೂ

ಮಂಜೂರಾಗಿರಲಿಲ್ಲ. ಇವತ್ತೇನಾದರೂ ಮಂಜೂರಾಗಿದೆಯೋ, ಏನೋ, ನನಗೆ ಗೊತ್ತಿಲ್ಲ. ದಯಮಾಡಿ ಅದರ ಕಾಪಿಯನ್ನು ಕಳುಹಿಸಿಕೊಡಿ.

2–00 PM

ಹಿಂದೆ ಮಂಜೂರಾದ ಆಸ್ಪತ್ರೆಗಳಿಗೆ ಅನುದಾನ ಬಿಡುಗಡೆಯಾಗಿಲ್ಲವೆಂದು ನಾನು ಎರಡನೇ ಪ್ರಶ್ನೆ ಕೇಳಿದ್ದೆ. ಆದರೆ, ತಮ್ಮ ಉತ್ತರದಲ್ಲಿ, ಸದರಿ ಆಸ್ಪತ್ರೆಗಳಿಗೆ ಮಾರ್ಗಸೂಚಿ ಅನ್ವಯ ಹುದ್ದೆಗಳು ಮಂಜೂರಾಗಿರುತ್ತವೆ. ಪೂರ್ಣ ಪ್ರಮಾಣದ ಕಟ್ಟಡದ ಲಭ್ಯತೆ ಆದ ನಂತರ ಔಷಧಿ ಪೂರೈಕೆ ಮತ್ತು ಹುದ್ದೆಗಳನ್ನು ತುಂಬಿ ಆಸ್ಪತ್ರೆಯನ್ನು ಅಧಿಕೃತವಾಗಿ ಪ್ರಾರಂಭಿಸಬೇಕಾಗುತ್ತದೆ, ಸದರಿ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಉಚಿತ, ಬಾಡಿಗೆ ರಹಿತ ಕಟ್ಟಡ ನೀಡಿರುವ ಕಾರಣ ಅಲ್ಲಿ ಆಸ್ಪತ್ರೆಯನ್ನು ನಡೆಸಲು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ತಾವು ಆರೋಗ್ಯ ಸಚಿವರು ಆಗಿಲ್ಲದಿದ್ದರೂ ಅವರ ಪರವಾಗಿ ಉತ್ತರ ಕೊಡುತ್ತಿದ್ದೀರಿ. ಕಟ್ಟಡದ ಕೆಲಸ ಮುಕ್ಕಾಲು ಭಾಗ ಮುಗಿದಾಗ ಮಾತ್ರ ಹುದ್ದೆಗಳನ್ನು ತುಂಬುವ ಪದ್ಧತಿ ನಿಮ್ಮ ಇಲಾಖೆಯಲ್ಲಿ ಈಗ ಇದೆ. ಆದರೆ, ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಈಗಾಗಲೇ ಅಲ್ಲಿ ಆಸ್ಪತ್ರೆ ಪ್ರಾರಂಭವಾಗಿದೆ. ಅದೂ ಕೂಡ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿಲ್ಲ. ಆಸ್ಪತ್ರೆಗೋಸ್ಕರವೇ Border Area Development ನಲ್ಲಿ ಕಟ್ಟಿದಂಥ ಕಟ್ಟಡದಲ್ಲಿ ಆಸ್ಪತ್ರೆ ನಡೆಯುತ್ತಿದೆ. ಹಾಗಾಗಿ immediate ಆಗಿ posts sanction ಮಾಡುವುದು ಮತ್ತು ತಕ್ಷಣ ಔಷಧಿಯನ್ನು ಕೊಡುವ ಬಗ್ಗೆ ಸ್ಪಷ್ಟವಾದ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಆರೋಗ್ಯ ಸಚಿವರ ಪರವಾಗಿ): ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಮದಲೂರು ಮತ್ತು ಗುಳಿಗೇನಹಳ್ಳಿಯಲ್ಲಿ ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಾವು ಪ್ರಾರಂಭಿಸಿದ್ದೇವೆ. ತಮಗೆ ಗೊತ್ತಿರುವಂತೆ, ಗುಳಿಗೇನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರವು ದಿ:30–03–2008ರಿಂದಲೇ ಪ್ರಾರಂಭವಾಯಿತು. ಅದೇ ರೀತಿ, ಮದಲೂರು ಪ್ರಾಥಮಿಕ ಆರೋಗ್ಯ ಕೇಂದ್ರವು ದಿ:25–10–2008ಕ್ಕ ಪ್ರಾರಂಭವಾಯಿತು. ಇದು ತಾತ್ಕಾಲಿಕವಾಗಿ ಪ್ರಾರಂಭಿಸಿರುವುದು. ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಿದಾಗ ಎರಡು ಎಕರೆ ಭೂಮಿ ಮತ್ತು ಒಂದು ಲಕ್ಷ ರೂಪಾಯಿಗಳನ್ನು ಸ್ಥಳೀಯರು ಕೊಡಬೇಕೆನ್ನುವ ಕಂಡೀಷನ್ ಏನಿತ್ತು, ಅದರ ಪ್ರಕಾರ ನಿಮ್ಮ ಈ ಎರಡೂ ಆಸ್ಪತ್ರೆಯವರು ಜಮೀನನ್ನು ಕೊಟ್ಟಿದ್ದಾರೆ ಮತ್ತು ಹಣವನ್ನೂ ತುಂಬಿದ್ದಾರೆ. ಹಾಗಾಗಿ, ನಾವು ಅದನ್ನು ಪ್ರಾರಂಭಿಸುವುದಕ್ಕೆ ಅವಕಾಶವನ್ನೂ ಮಾಡಿಕೊಟ್ಟಿದ್ದೇವೆ. ಬಾಡಿಗೆ ಬಿಲ್ಡಿಂಗ್‌ನಲ್ಲಿ ಅದು ನಡೆಯುತ್ತಿದೆ.

ತಾವು ಹೇಳಿದಂತೆ, ವೈದ್ಯರ ಮತ್ತು ಉಳಿದ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯನ್ನು ನಾವು ಮಾಡಬೇಕಾಗಿದೆ. ಕಟ್ಟಡಗಳು ಮತ್ತು ಉಳಿದ ಎಲ್ಲಾ ಸೌಲಭ್ಯಗಳೂ ಬರುತ್ತಿದ್ದಹಾಗೆ, ಈ ಎಲ್ಲಾ ಪೂರ್ಣ ಸೌಲಭ್ಯಗಳನ್ನೂ ನಾವು ಈ ಆಸ್ಪತ್ರೆಗಳಿಗೆ ಮಾಡಿಕೊಡುತ್ತೇವೆ. ಮಾಡಿಕೊಡುವುದಕ್ಕೆ ನಾವು ಎಲ್ಲಾ ಪ್ರಕ್ರಿಯೆಗಳನ್ನು ಪ್ರಾರಂಭಿಸಿದ್ದೇವೆ. ಹಾಗಾಗಿ, ಈಗೇನು ತಾತ್ಕಾಲಿಕವಾಗಿ ಎರಡೂ ಕಡೆಗಳಲ್ಲಿ ಆಸ್ಪತ್ರೆ ನಡೆಯುತ್ತಿದೆ, ಅಲ್ಲಿ ಪೂರ್ಣ ಪ್ರಮಾಣದ ವ್ಯವಸ್ಥೆಗಳು, ಬಿಲ್ಡಿಂಗ್, ಇತ್ಯಾದಿಗಳು ಬರುತ್ತಿದ್ದಹಾಗೆ, ಔಷಧಿ, ವೈದ್ಯರು, ಇತ್ಯಾದಿ ಎಲ್ಲವನ್ನೂ ಕೊಡುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಪೂರ್ಣ ಪ್ರಮಾಣವಾಗಿ ಆ ಆಸ್ಪತ್ರೆಗಳು ನಡೆಯುತ್ತಿವೆ. ಕಟ್ಟಡವಿದೆ, ಔಷಧಿಗಳಿಲ್ಲ. ಔಷಧಿ ಇಲ್ಲವೆಂದರೆ ಏನು ಮಾಡುವುದು? Health Department ಗೆ ಸಂಬಂಧಪಟ್ಟಂತೆ ಒಂದು Government order ಇದ್ದು, ಅದರಲ್ಲಿ ಕಟ್ಟಡದ ಮುಕ್ಕಾಲು ಭಾಗ ಕೆಲಸ ಮುಗಿಯುವವರೆಗೂ ಕೂಡ posts fill up ಮಾಡುವುದಿಲ್ಲವೆಂದಿದೆ. Already, ಅಲ್ಲಿ ತಾತ್ಕಾಲಿಕವಾಗಿ ಸ್ವಂತ ಕಟ್ಟಡದಲ್ಲಿ ಆಸ್ಪತ್ರೆ ನಡೆಯುತ್ತಿರುವಾಗ ವೈದ್ಯರನ್ನು posting ಮಾಡುವುದಿಲ್ಲವೆಂದರೆ, ಆಸ್ಪತ್ರೆ ಪ್ರಾರಂಭ ಮಾಡಿ ಏನು ಪ್ರಯೋಜನವಾಗುತ್ತದೆ? National Rural Health Mission ಅಡಿಯಲ್ಲಿ ಈ ಎರಡೂ ಆಸ್ಪತ್ರೆಗಳಿಗೆ ಕಟ್ಟಡ ಮಂಜೂರಾಗಿ, ಟೆಂಡರ್ ಆಗುವ ಹಂತದಲ್ಲಿ ಆಸ್ಪತ್ರೆಗೆ ಮಂಜೂರಾಗಿಲ್ಲವೆನ್ನುವ ಕಾರಣಕ್ಕಾಗಿ ಇವತ್ತು ಸ್ಥಗಿತಗೊಳಿಸಲಾಗಿದೆ. ಈಗ ಮಂಜೂರಾಗಿರುವುದರಿಂದ ಟೆಂಡರ್ ಅನ್ನು ಕರೆದು ಎರಡೂ ಜಾಗಗಳಿಗೂ ಆಸ್ಪತ್ರೆ ಕಟ್ಟಡವನ್ನು ಆದಷ್ಟುಬೇಗ ಮಾಡಿಸಿಕೊಡುವಂಥ ಆಶ್ವಾಸನೆಯನ್ನು ಸ್ಪಷ್ಟವಾಗಿ ಕೊಡುತ್ತೀರಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಔಷಧಿ ಕೊರತೆಯಾಗದಿರುವಂತೆ ನಾವು ನಮ್ಮ ಜಿಲ್ಲಾ ವೈದ್ಯಾಧಿಕಾರಿಗಳಿಗೆ, DHO, District Surgeon ರವರಿಗೆ ತಿಳಿಸುತ್ತೇವೆ. ಬೇರೆ ಬೇರೆ ಆರೋಗ್ಯ ಕೇಂದ್ರಗಳಲ್ಲಿ ತಮಗೆ ಗೊತ್ತಿದ್ದಂತೆ, excess ಆಗಿರುವುದೂ ಇರುತ್ತದೆ. ಆದರೆ, ಅಲ್ಲಿ ಔಷಧಿಗಳು ಕೊರತೆಯಾಗದಿರುವುದಕ್ಕೆ ಏನು ಪ್ರಾಮುಖ್ಯತೆಯನ್ನು ಕೊಟ್ಟು ಔಷಧಿಯನ್ನು ಸರಬರಾಜು ಮಾಡಬೇಕೋ ಅದನ್ನು ತಕ್ಷಣದಲ್ಲಿ ಮಾಡುವುದಕ್ಕೆ ಸೂಚಿಸುತ್ತೇವೆ. ತಾವು ಹೇಳಿದಂತೆ, NRHM ಯೋಜನೆಯಡಿಯಲ್ಲಿ ತಾವು ಸ್ಥಳ ಕೊಟ್ಟಿರುವುದರಿಂದಾಗಿ ಅಲ್ಲಿ ಕಟ್ಟಡ ಕಟ್ಟುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದು ತಾವೇನು ಹೇಳಿದಿರಿ, ಅದನ್ನು ತಕ್ಷಣದಲ್ಲಿ ಕಟ್ಟುವುದಕ್ಕೆ ಬೇಕಾಗಿರತಕ್ಕಂಥ ಪ್ರಯತ್ನವನ್ನು ಇಲಾಖೆಯಿಂದ ತಕ್ಷಣ ಚಾಲನೆಗೊಳಿಸುತೇವೆ.

ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ಒದಗಿಸುವ ಬಗ್ಗೆ.

6(34) ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ)

ಶ್ರೀ ಬಿ.ಸಿ. ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಆರೋಗ್ಯ ಕೇಂದ್ರಗಳಿಗೆ ವರ್ಷಕ್ಕೆ ಒದಗಿಸಲಾಗುವ ಔಷಧಿಗಳ ಮೊತ್ತ ಎಷ್ಟು;

ರಾಜ್ಯದ ಪ್ರತಿ ಆರೋಗ್ಯ ಕೇಂದ್ರಗಳಿಗೆ ವಾರ್ಷಿಕವಾಗಿ ಒದಗಿಸಲಾಗುವ ಔಷಧಿಗಳ ಮೊತ್ತ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಆರೋಗ್ಯ ಕೇಂದ್ರಗಳ ವಿವರ	ನಿಗಧಿಯಾಗಿರುವ ಅನುದಾನ (ಶೇ.100 ರಷ್ಟು) ರೂ.ಗಳಲ್ಲಿ
1	ಪ್ರಾಥಮಿಕ ಆರೋಗ್ಯ ಕೇಂದ್ರ	1 ಲಕ್ಷ
2	ಸಮುದಾಯ ಆರೋಗ್ಯ ಕೇಂದ್ರ (30 ಹಾಸಿಗೆ)	4 ಲಕ್ಷ
3	ಸಮುದಾಯ ಆರೋಗ್ಯ ಕೇಂದ್ರ (50 ಹಾಸಿಗೆ)	6 ಲಕ್ಷ

ಆ) ಔಷಧಿಯನ್ನು ಯಾವ ರೀತಿಯಲ್ಲಿ ವಿತರಿಸಲಾಗುವುದು; ಯಾವ ಸಂಸ್ಥೆಯಿಂದ ವಿತರಿಸಲಾಗುವುದು;

ಆಯಾ ಆರೋಗ್ಯ ಕೇಂದ್ರದ ಬೇಡಿಕೆ ಪಟ್ಟಿಯ ಅನುಗುಣವಾಗಿ ಆರೋಗ್ಯ ಕೇಂದ್ರಕ್ಕೆ ನಿಗದಿಯಾದ ಅನುದಾನದ ಮಿತಿಯಲ್ಲಿ ಔಷಧಿಗಳನ್ನು 2 ಜಿಲ್ಲೆಗೆ ಒಂದರಂತೆ ಸ್ಥಾಪಿಸಲಾಗಿರುವ ಒಟ್ಟು 14 ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ವಿತರಿಸಲಾಗುವುದು. ಈ ಔಷಧಿಗಳನ್ನು ದರಗುತ್ತಿಗೆಯನ್ನು ನಿಗದಿಗೊಳಿಸಲಾದ ಮೂಲ ಉತ್ಪಾದಕರಿಂದ ಖರೀದಿಸಿ, ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ವಿತರಿಸಲಾಗುವುದು.

ಇ) ಆರೋಗ್ಯ ಕೇಂದ್ರದ ಬೇಡಿಕೆ ಪಟ್ಟಿಯಂತೆ ವಿತರಿಸಲಾಗುತ್ತಿಲ್ಲದಿರುವ ಬಗ್ಗೆ ಕಾರಣಗಳೇನು;

ಬಹುತೇಕ ಔಷಧಿಗಳನ್ನು ಆಯಾ ಆರೋಗ್ಯ ಕೇಂದ್ರಗಳ ಬೇಡಿಕೆ ಪಟ್ಟಿಯಂತೆ ಸರಬರಾಜು ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಆದರೆ, ಕೆಲವು ದರಗುತ್ತಿಗೆದಾರರು ಟೆಂಡರ್ ಪ್ರಮಾಣ ಮೀರಿ ಸರಬರಾಜು ಮಾಡಿದ ಮೇಲೆ ಅಂತಹ ಔಷಧಿಗಳಿಗೆ ಖರೀದಿ ಸರಬರಾಜು ಮಾಡಿದ ಮೇಲೆ ಅಂತಹ ಔಷಧಿಗಳಿಗೆ ಖರೀದಿ ಆದೇಶ ನೀಡಿದರೂ ಹೆಚ್ಚುವರಿಯಾಗಿ ಪೂರೈಕೆ ಮಾಡಲು ದರಗುತ್ತಿಗೆದಾರರು ಬದ್ದರಾಗಿರುವುದಿಲ್ಲ. ಇಂತಹ ಔಷಧಿಗಳಿಗೆ ಹೊಸದಾಗಿ

ದರಗುತ್ತಿಗೆ ನಿಗದಿಪಡಿಸಬೇಕಾಗಿರುವುದರಿಂದ ಈ ಔಷಧಿಗಳನ್ನು ಪೂರೈಸಲು ಸ್ವಲ್ಪ ವಿಳಂಬವಾಗುವ ಸಾಧ್ಯತೆ ಇರುತ್ತದೆ.

ಈ) ಔಷಧಿ ವಿತರಣೆಯನ್ನು ಆಯಾ ಆರೋಗ್ಯ ಕೇಂದ್ರಕ್ಕೆ ತಲುಪಿಸಲಾಗುವುದೆ ಅಥವಾ ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಬೇಕೆ ಎಂಬ ವಿವರವನ್ನು ನೀಡುವುದು?

ಔಷಧಿಗಳನ್ನು ರಾಜ್ಯದ ವಿವಿಧ ಆರೋಗ್ಯ ಕೇಂದ್ರಗಳಾಗಿ ಹೊಂದಿಕೊಂಡಿರುವ ಆಯಾ ಜಿಲ್ಲಾ ಔಷಧ ಉಗ್ರಾಣಗಳಿಂದ ಸರಬರಾಜು ಮಾಡಲಾಗುತ್ತಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಹಾಗೂ ರಾಮನಗರ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಆರೋಗ್ಯ ಕೇಂದ್ರಗಳಿಗೆ ಮಾತ್ರ ಜಿಲ್ಲಾ ಔಷಧ ಉಗ್ರಾಣ, ಬೆಂಗಳೂರು ಇಲ್ಲಿಂದ ಔಷಧಿಗಳನ್ನು ವಿತರಿಸಲಾಗುತ್ತಿದೆ.

ಶ್ರೀ ಹೆಚ್.ಗೋಪಾಲಭಂಡಾರಿ: ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ ಮತ್ತು ತಾಲ್ಲೂಕು ಆರೋಗ್ಯ ಆಸ್ಪತ್ರೆಗಳಿಗೆ ಎಷ್ಟು ಔಷಧಿಗಳನು ವಿತರಣೆ ಮಾಡುತ್ತಾರೆನ್ನುವ ಪ್ರಶ್ನೆ ಕೇಳಿದ್ದೆ. ಅದಕ್ಕೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಎರಡನೆ ಪ್ರಶ್ನೆಯಲ್ಲಿ, ಅವರ ಬೇಡಿಕೆ ಪಟ್ಟಿಗನುಸಾರವಾಗಿ ಔಷಧಿ ವಿತರಣೆ ಮಾಡುತ್ತೀರಾ ಎನ್ನುವುದನ್ನು ಕೇಳಿದ್ದೆ. ಆದರೆ, ಸ್ಥಳೀಯ ಬೇಡಿಕೆ ಪಟ್ಟಿಗೆ ಸರಿಯಾಗಿ ನಾವು ವಿತರಣೆ ಮಾಡುತ್ತೇವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ, ನನ್ನ ಮತ ಕ್ಷೇತ್ರದಲ್ಲಿ ನಾನು ಅನೇಕ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೇನೆ. ಆದರೆ, ಅಲ್ಲಿ ಅವರ ಬೇಡಿಕೆ ಪಟ್ಟಿಗೆ ಸರಿಯಾಗಿ ಔಷಧಿ ವಿತರಣೆ ಏನು GMS ನಿಂದ ಆಗಬೇಕಾಗಿತ್ತೋ ಅದು ಆಗುತ್ತಿಲ್ಲ. ಬೆಂಗಳೂರಿನಿಂದ ನಾವು ಔಷಧಿ ಕೊಡುತ್ತಿಲ್ಲ, ಅಲ್ಲಿ ಸ್ಥಳೀಯವಾಗಿ ಎರಡು ಜಿಲ್ಲೆಗಳಿಗೆ ಅಲ್ಲಲ್ಲಿ ಕೊಡುತ್ತೇವೆಂದು ಹೇಳುತ್ತಾರೆ. ಅಲ್ಲಿ ಕೊಡುತ್ತಿಲ್ಲ. ನಿಜವಾಗಿ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು ಅಲ್ಲಿಗೆ ಹೋಗಿ ಔಷಧಿಗಳು ತೆಗೆದುಕೊಂಡು ಬರಬೇಕಾಗುತ್ತದೆ. ಅಲ್ಲಿ ಕೊಡುವಾಗ ಅವರ ಹತ್ತಿರ ಯಾವ ಔಷಧಿ ಲಭ್ಯವಿದೆಯೋ ಅದನ್ನು ಕೊಡುತ್ತಾರೆಯೇ ವಿನಃ ಇವರ ಬೇಡಿಕೆ ಪಟ್ಟಿಗೆ ಸರಿಯಾಗಿ ಔಷಧಿ ವಿತರಣೆಯಾಗಿಲ್ಲ. ಇದಕ್ಕೆ ಉದಾಹರಣೆಯಾಗಿ, ನಮ್ಮಲ್ಲಿ anti rabies ಔಷಧಿ ಇಲ್ಲ. ಹುಚ್ಚು ನಾಯಿ ಕಡಿತದ ಔಷಧಿ ಸರಿಯಾಗಿ ವಿತರಣೆಯಾಗುತ್ತಿಲ್ಲ. ನನಗೆ ತಿಳಿದು ಬಂದ ಪ್ರಕಾರ, ಈ ಔಷಧಿ ಉತ್ಪಾದನೆ ಯಾವುದೋ ಒಂದು ಘಟಕದಿಂದ ಮಾತ್ರ ಆಗುತ್ತಿದೆ. ಇವತ್ತು NDDB ಯವರು 180 ರೂಪಾಯಿಗಳಿಗೆ ಈ ಔಷಧಿಯನ್ನು ವಿತರಣೆ ಮಾಡುತ್ತಾರೆನ್ನುವ ಪ್ರಸ್ತಾಪವಿದ್ದರೂ ಕೂಡ ಇದನ್ನು purchase ಮಾಡದೇ

ಬಹುಶಃ ಇಲ್ಲಿ ಬಹಳ ಹೆಚ್ಚು ದರಕ್ಕೆ ಬೇರೆ ಬೇರೆ ಮೂಲಗಳಿಂದ 300 ರೂಪಾಯಿಗಳಿಗೆ ಆ ಔಷಧಿಯನ್ನು ವಿತರಣೆ ಮಾಡತಕ್ಕಂಥ ವ್ಯವಸ್ಥೆಯಾಗಿದೆ. ಬೇಡಿಕೆಗೆ ಸರಿಯಾಗಿ ಔಷಧಿಯ ಲಭ್ಯವಿಲ್ಲ. ಇದೊಂದು ಭಾಗವಾದರೆ, ತೀವ್ರ ರಕ್ತಸ್ರಾವವಾದಾಗ ಅದನ್ನು ನಿಲ್ಲಿಸುವುದಕ್ಕೆ ಹಿಮೋಫೀಲಿಯಾ ಎನ್ನುವ ಒಂದು ಔಷಧಿ ಇದೆ. ಈ ಕಾಯಿಲೆಯಿಂದ ನರಳುವ ರೋಗಿಗಳ ದೊಡ್ಡ ಸಂಘವೇ ನಮ್ಮ ರಾಜ್ಯದಲ್ಲಿದೆ. ಅದಕ್ಕೆ ಬೇಕಾದ ಔಷಧಿಯನ್ನು ನಮ್ಮ ರಾಜ್ಯದಲ್ಲಿ ವಿತರಣೆ ಮಾಡದೆ 6 ತಿಂಗಳಾಯಿತು. ಬಹಳಷ್ಟು ಜನ ಇದರಿಂದ ಮೃತರಾದಂಥ ಪಟ್ಟಿಯನ್ನು ಆ ಸಂಘದವರು ಕೂಡ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದಾರೆ. ಈ ರೀತಿಯಲ್ಲಿ ವಿಶೇಷವಾದ ಈ ಎರಡು ಔಷಧಿಗಳ ಕೊರತೆಯಾದರೆ ಹೇಗೆ? ನಾನು ನೋಡಿರುವ ಹಾಗೆ, ಬಹಳಷ್ಟು ನಿರುಪಯುಕ್ತ ಔಷಧಿಗಳನ್ನು ಅಲ್ಲಿಗೆ ಒದಗಿಸುತ್ತಿದ್ದಾರೆ. ಅಲ್ಲಿಗೆ ಅಗತ್ಯವಿದ್ದುದ್ದನ್ನು ಕಳುಹಿಸದೇ, ನಿರುಪಯುಕ್ತ ಔಷಧಿಗಳನ್ನು ಕಳೂಹಿಸುತ್ತಾರೆ. ನಾನೊಂದು ಆರೋಗ್ಯ ಘಟಕಕ್ಕೆ ಭೇಟಿ ನೀಡಿದ್ದೆ. ಅಲ್ಲಿ Operation Theatre ನಲ್ಲಿ ಯಾವ ಔಷಧಿಯ ಅಗ್ಯವಿದೆಯೋ ಆ ಔಷಧಿ ಆ ಆರೋಗ್ಯ ಘಟಕ, ಕೇಂದ್ರದಲ್ಲಿದೆ. ಅವರಲ್ಲಿ ಇದನ್ನೇನು ಮಾಡುತ್ತೀರಿ ಎಂದು ಕೇಳಿದಾಗ ಎನು ಮಾಡುವುದೆಂದೇ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಈ ರೀತಿಯಲ್ಲಿ ಔಷಧಿ ಯಾವುದು ಅಲ್ಲಿ ಸಿಗುತ್ತದೆಯೋ ಅದನ್ನು ಕೊಡುತ್ತಾರೆಯೇ ವಿನಃ, ಜನರಿಗೆ ಅಗತ್ಯವಿರುವ ಔಷಧಿಗಳನ್ನು ವಿತರಣೆ ಮಾಡುವ ವ್ಯವಸ್ಥೆ ಇಲ್ಲ. ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ನಮಗೆ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಆರೋಗ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಲಕ್ಷ ರೂಪಾಯಿ, 30 ಹಾಸಿಗೆಗಳಿರುವ ಸಮುದಾಯ ಆರೋಗ್ಯ ಕೇಂದ್ರಕ್ಕೆ 4 ಲಕ್ಷ ರೂಪಾಯಿ, 50 ಹಾಸಿಗೆಗಳಿರುವ ಸಮುದಾಯ ಆರೋಗ್ಯ ಕೇಂದ್ರಕ್ಕೆ 6 ಲಕ್ಷ ರೂಪಾಯಿ ಕೊಡುವುದರ ಜೊತೆಯಲ್ಲಿ ಪ್ರಾಥಮಿಕ ಆರೋಗ್ಯ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ವಾರ್ಷಿಕವಾಗಿ 75,000 ಮತ್ತು ಒಂದೂವರೆ ಲಕ್ಷ ರೂಪಾಯಿಗಳನ್ನು ಮುಕ್ತನಿಧಿ ನಿರ್ವಹಣಾ ವೆಚ್ಚಕ್ಕಾಗಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ ನಾವು ಔಷಧಿಗಳಿಗೆ ಬೇಡಿಕೆ ಸಲ್ಲಿಸುವಂಥ, ಸಾಕಷ್ಟು ಸರಬರಾಜು ಮಾಡುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ತಮಗೆ ಗೊತ್ತಿದ್ದಂತೆ, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಮಂಗಳೂರಿನಲ್ಲಿ ನಮ್ಮ ಔಷಧ ಉಗ್ರಾಣವಿದೆ. ಕಾರ್ಕಳದವರು ಮಂಗಳೂರಿಗೆ ಹೋಗಿ ಔಷಧಿ ತಂದರಾಯಿತು, ಮೊದಲು ಬೇರೆ ಬೇರೆ ರೀತಿಯ ವ್ಯವಸ್ಥೆ ಇತ್ತು.

ಈಗ ಎರಡು ಜಿಲ್ಲೆಗಳಿಗೆ ಸಂಬಂಧಪಟ್ಟ ಒಂದು ಉಗ್ರಾಣವನ್ನು ಮಾಡಿದೆ. ಇಡೀ ರಾಜ್ಯದಲ್ಲಿ ಈ ರೀತಿಯ 14 ಉಗ್ರಾಣ ಕೇಂದ್ರಗಳನ್ನು ಮಾಡಲಾಗಿದೆ. ಹಾಗಾಗಿ, ಅಕ್ಕಪಕ್ಕದ ಜಿಲ್ಲೆಯವರು ಅಲ್ಲಿಗೆ ಹೋಗಿ ಔಷಧಿಯನ್ನು ತಂದರಾಯಿತು. ತುರ್ತಾಗಿ ಬೇಕಾಗಿರುವ ಕೆಲವು ಔಷಧಿಗಳು ಸಿಗುವುದಿಲ್ಲವೆಂದು ಇಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರು. ನಾವು ಸಾಕಷ್ಟು ಔಷಧಿಗಳನ್ನು ಪೂರೈಸುತ್ತೇವೆ. ಆದರೂ ಕೆಲವು ಸಂದರ್ಭಗಳಲ್ಲಿ ಯಾವುದೋ ಒಂದು ರೀತಿಯ ವಿಶೇಷವಾದ ರೋಗಗಳಿಗೆ ತಕ್ಷಣದಲ್ಲಿ ಔಷಧಿ ಇಲ್ಲದೇ ಇದ್ದರೆ Users Charge amount ಪ್ರತಿ ಆಸ್ಪತ್ರೆಯಲ್ಲಿಯೂ ಇರುತ್ತದೆ, ಆ ಹಣದಿಂದ ತಕ್ಷಣ ಆ ರೀತಿಯ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ಅಲ್ಲಿಯ ವೈದ್ಯಾಧಿಕಾರಿಗಳಿಗೆ ಅಧಿಕಾರವನ್ನು ಕಟ್ಟಿದ್ದೇವೆ. ಹಾಗಾಗಿ, ಔಷಧಿ ಕೊರತೆಯಾಗದೇ ಇರುವಂತೆ, ಆ Users Charge ಹಣದಿಂದ ಅಲ್ಲಿ ನಮಗೆ ಲಭ್ಯವಿಲ್ಲದಿರುವಂಥ ಆ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೇವೆ. ಬೇಡದೇ ಇರುವ ಔಷಧಿಗಳು ಬರುತ್ತಿವೆ ಎಂದು ಮಾನ್ಯ ಸದಸ್ಯರು ಹೇಳಿದರು. ಆ ರೀತಿ ಇದ್ದರೆ, ಹೆಚ್ಚಿನ ಮಾಹಿತಿಗಳನ್ನು ಪಡೆದು, ಹೆಚ್ಚಿನ ಔಷಧಿಗಳು ಇದ್ದರೆ, ಬೇರೆ ಕಡೆಗೆ ಅದು ಬೇಕಾಗಬಹುದು. ಬೇರೆ ಕಡೆಯಲ್ಲಿ ಕೆಲವು ರೋಗಗಳಿಗೆ ಹೆಚ್ಚಿನ ಔಷಧಿಗಳು ಬೇಕಾಗುತ್ತವೆ. ಆ ರೀತಿಯ ತಾರತಮ್ಯಗಳನ್ನು ಸರಿಪಡಿಸಬೇಕಾದಂಥ ಅಗತ್ಯತೆ ಇದ್ದರೆ, ನಿಶ್ಚಿತವಾಗಿ ಸರ್ಕಾರದಲ್ಲಿ ಇದನ್ನು ಪರಿಶೀಲಿಸಿ, ಎಲ್ಲಿ ಹೆಚ್ಚು ಔಷಧಿಗಳು ಬೇಕೋ ಅದನ್ನು ಕೊಡುವುದಕ್ಕೆ ನಾವು ಗಮನ ಕೊಡುತ್ತೇವೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ಗಮನಹರಿಸಬೇಕು. ಈ ಪ್ರಶ್ನೆಗೆ ಕೊಟ್ಟ ಉತ್ತರ ಅಷ್ಟು ಸಮಂಜಸವಾಗಿಲ್ಲವೆಂದು ಏಕೆ ಹೇಳುತ್ತಿದ್ದೇನೆಂದರೆ, ಬಹುಶಃ ನಮ್ಮ ಸದಸ್ಯರು ಕೇಳುವ ಉದ್ದೇಶವೇನೆಮದರೆ, ನೀವು ಯಾವ ರೀತಿ Procurement ಮಾಡುತ್ತಿದ್ದೀರಿ, ಆ Procurement ಸರಿಯಾಗಿಲ್ಲವೆಂದರೆ, distribution through Warehouses ಎಂದು ಹೇಳಿದ್ದೀರಿ. ನಮ್ಮ ರಾಜ್ಯದಲ್ಲಿ Drugs Logistics Society ಎಂದು ಪ್ರತ್ಯೇಕವಾದ ಸಂಸ್ಥೆ ಇದೆ. ಈ ಸೊಸೈಟಿಯಿಂದ ನೀವು ರಾಜ್ಯಾದ್ಯಂತ ಟೆಂಡರ್ ಮಾಡಿ ಆ ಟೆಂಡರ್ ಮುಖಾಂತರ ನೀವು ರೇಟ್ ಫಿಕ್ಸ್ ಮಾಡಿ supply ಮಾಡುತ್ತೀರಿ. ಆದರೆ, ನಮ್ಮ ರಾಜ್ಯದಲ್ಲಿ drugs supply ಮಾಡುವ ಒಂದು cartel ಇದೆ. ಇವರೆಲ್ಲ ಏನು ಮಾಡುತ್ತಿದ್ದಾರೆಂದರೆ Drugs Logistics Society ಯವರು ಟೆಂಡರ್ ಕರೆದಾಗ ಇವರು indents ಏನು ಕೊಡುತ್ತಾರೆ ಅವರು produce ಮಾಡತಕ್ಕಂಥದ್ದನ್ನೇ ಇವರು procure ಮಾಡಬೇಕೆಂದು ಕರೆಯುತ್ತಿದ್ದಾರೆ. ಆರೋಗ್ಯ ಸಚಿವರು ಮತ್ತು

ಆರೋಗ್ಯ ಕಾರ್ಯದರ್ಶಿಯವರು ಈ ಕಡೆ ಗಮನಹರಿಸಿ ಅವಶ್ಯಕತೆ ಇರುವಂಥ drugs ಬಿಟ್ಟು, ಅವಶ್ಯಕತೆ ಇರದಿರುವ drugs ಅನ್ನು ನೀವು ಟೆಂಡರ್ ಲಿಸ್ಟ್‌ನಲ್ಲಿ ಹಾಕಿದಾಗ ಈ ಸಮಸ್ಯೆ ಆಗುತ್ತದೆ. ನಮ್ಮ ರಾಜ್ಯದಲ್ಲಿ ಕೆಲವು bogus Company ಗಳಿವೆ, Rajasthan Antibiotics, Uttar Pradesh Antibiotics ಬೇರೆ ಬೇರೆ ಹೆಸರಿನ ಕೆಲವು bogus Companyಗಳಿವೆ, ಈ ಕಂಪನಿಗಳು produce ಮಾಡುವುದಿಲ್ಲ, ಕೇವಲ ಅವರ ಹತ್ತಿರ Licence ಇದೆ.

ಅಧ್ಯಕ್ಷರು: ತಾವು specific ಆಗಿ ಪ್ರಶ್ನೆ ಕೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಕಾರ್ಯದರ್ಶಿಗಳು ಇಲ್ಲಿರಬಹುದು. ಅವರಿಗೆ ಅರ್ಥವಾಗಲಿ ಎಂದು ಹೇಳುತ್ತಿದ್ದೇನೆ. ಅವರು ಟೆಂಡರ್ ಪ್ರಕ್ರಿಯೆ ಮಾಡುವಾಗ ಯಾರು ನೇರವಾಗಿ drugs produce ಮಾಡುತ್ತಾರೆ ಅವರು ಮಾತ್ರ ಟೆಂಡರ್‌ನಲ್ಲಿ participate ಮಾಡಿ ಎಂದು ಹೇಳಿ. ಇವರು ಈ ದೇಶದಲ್ಲಿ, ಈ ರಾಜ್ಯದಲ್ಲಿ tender ನಲ್ಲಿ participate ಮಾಡುವುದಿಲ್ಲ. ಒಳ್ಳೆಯ quality drugs ಯಾವುದಿದೆ, ಆ ಕಂಪನಿಗಳವರು ಯಾರೂ participate ಮಾಡುತ್ತಿಲ್ಲ ಏಕೆಂದರೆ ನಿಮ್ಮ Government system ನಲ್ಲಿ, payment ಮಾಡುವಾಗ ಬಹಳಷ್ಟು corruption ಇದೆ.

ಅಧ್ಯಕ್ಷರು: ತಾವು specific ಆಗಿ ಪ್ರಶ್ನೆ ಕೇಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: Drugs Logistics Society ಮೂಲಕ ಏನು ಟೆಂಡರ್ ಕರೆಯುತ್ತೀರಿ ಅದರಲ್ಲಿ ಯಾರು drugs produce ಮಾಡುತ್ತಾರೆ ಅವರನ್ನು ನೀವು invite ಮಾಡಿ, ಅವರು tender ನಲ್ಲಿ participate ಮಾಡುವುದಿಲ್ಲವೆಂದರೆ, ನಾವು timely payment ಮಾಡುತ್ತೇವೆಂದು ಹೇಳಿ ಆ drug name ಅಂದರೆ generic name ನಲ್ಲಿ ನೀವು supply ಮಾಡಿದರೆ ಬಹಳಷ್ಟು ಪಾರದರ್ಶಕತೆ ಬರುತ್ತದೆ.

ಡಾ: ಸಾತಗೌಡ ಸಾರ್ವಭೌಮ ಬಗಲಿ: ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧಿ ಪೂರೈಸುವಾಗ ಔಷಧ ಪಟ್ಟಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆದುಕೊಂಡೇ ಸರ್ಕಾರ ಆದೇಶ ನೀಡುತ್ತಿದೆ. ಬೇಡಿಕೆಗೆ ಅನುಗುಣವಾಗಿ ಔಷಧ supply ಆಗುತ್ತಿಲ್ಲವೆಂದು ಹೇಳುವುದು ಸಂಪೂರ್ಣ ಸುಳ್ಳು. ಬಹುತೇಕವಾಗಿ ಮಾನ್ಯ ಸದಸ್ಯರು ಇದನ್ನು verify ಮಾಡಿರುವುದಿಲ್ಲ.

ಅಧ್ಯಕ್ಷರು: specific ಆಗಿ ಪ್ರಶ್ನೆ ಕೇಳುವುದಿದ್ದರೆ ಕೇಳಿ. ಸರ್ಕಾರದವರು ಉತ್ತರ ಕೊಡುತ್ತಾರೆ.

ಡಾ: ಸಾತಗೌಡ ಸಾರ್ವಭೌಮ ಬಗಲಿ: ಯಾವುದೇ bogus companyಗಳಿಂದ ನಮ್ಮ ಸರ್ಕಾರ ಯಾವುದೇ ಔಷಧಿ ಖರೀದಿ ಮಾಡಿಲ್ಲ. ಅವರು ಹೇಳುವುದರಲ್ಲಿ ಸಂಪೂರ್ಣ ತಪ್ಪು ಇದೆ.

ಅಧ್ಯಕ್ಷರು: ಬಗಲಿಯವರೆ, ಸಾಕು. ಅವರು ಉತ್ತರ ಕೊಡುತ್ತಾರೆ.

ಡಾ: ಸಾತಗೌಡ ಸಾರ್ವಭೌಮ ಬಗಲಿ: Anti-rabies vaccine ಅನುಪಯುಕ್ತ ಔಷಧಿ ಖರೀದಿ ಮಾಡಿದ್ದಾರೆನ್ನುವುದೂ ಸುಳ್ಳು.

ಅಧ್ಯಕ್ಷರು: ತಾವು ಕುಳಿತುಕೊಳ್ಳಿ, ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ: ಸಮಸ್ಯೆ ಏನಿದೆ ಎನ್ನುವುದು ಅವರಿಗೆ ಗೊತ್ತಿಲ್ಲ.

ಅಧ್ಯಕ್ಷರು: ಆರ್. ಧ್ರುವನಾರಾಯಣರವರೆ, ತಾವು last sub question ಕೇಳಿ. ತಾವು ಏನಾದರೂ specific ಆದ ಉಪ ಪ್ರಶ್ನೆ ಇದ್ದರೆ ಕೇಳಿ.

ಶ್ರೀ ಆರ್. ಧ್ರುವನಾರಾಯಣ್: Users charge ಬಗ್ಗೆ ಮಂತ್ರಿಗಳು ಹೇಳಿದರು. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 1 ಲಕ್ಷ ರೂಪಾಯಿ user charge ಎಂದು ಇದೆ. ಆದರೆ, ಅದು ಸಾಲುವುದಿಲ್ಲ. Anti rabies vaccine ರಾಜ್ಯಕ್ಕೆ ಒಂದೇ ಕಂಪನಿಯಿಂದ ಸರಬರಾಜು ಆಗುತ್ತಿದೆ. ಸರಿಯಾದ ರೀತಿಯಲ್ಲಿ ಅದರ ಸರಬರಾಜು ಆಗುತ್ತಿಲ್ಲ. ಪ್ರತಿಯೊಂದು ಆರೋಗ್ಯ ಕೇಂದ್ರಕ್ಕೂ ಕೂಡ anti rabies vaccine ಬೇಕು.

ಅಧ್ಯಕ್ಷರು: ಎಲ್ಲರೂ ಭಾಷಣ ಮಾಡುತ್ತಿದ್ದರೆ ಹೇಗೆ? Specific ಆಗಿ ಉಪಪ್ರಶ್ನೆ ಇದ್ದರೆ ಕೇಳಿ. ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಾಗ Specific ಆದ ಪ್ರಶ್ನೆ ಇದ್ದರೆ ಕೇಳಬೇಕು.

ಶ್ರೀ ನೆ.ಲ. ನರೇಂದ್ರ ಬಾಬು: ನಾಯಿಗಳ ಕಾಟ ಜಾಸ್ತಿ ಆಗಿದೆ.

(ಗೊಂದಲ)

ಅಧ್ಯಕ್ಷರು: Specific ಪ್ರಶ್ನೆ ಕೇಳಿ. ಅದು ಬಿಟ್ಟು ಎಲ್ಲರೂ ಎದ್ದು ನಿಂತು ಕೇಳಿದರೆ ಆಗುವುದಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು: ಎಲ್ಲಿಂದ Purchase ಮಾಡುತ್ತಿದ್ದಾರೆಂಬ ಬಗ್ಗೆ ಮಾಹಿತಿ ತರಿಸಿ.

ಅಧ್ಯಕ್ಷರು: ಗೋಪಾಲ ಭಂಡಾರಿಯವರು ಉಪ ಪ್ರಶ್ನೆ ಕೇಳಿದ ನಂತರ ಒಟ್ಟಿಗೆ ಉತ್ತರ ಕೊಡಿ.

ಶ್ರೀ ಎನ್.ಸಂಪಂಗಿ: ನಾಯಿಗಳ ಕಾಟ ಜಾಸ್ತಿ ಆಗಿದೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ಬೇಡಿಕೆ ಪಟ್ಟಿಗೆ ಅನುಗುಣವಾಗಿ ಔಷಧಿಯನ್ನು ಸರಬರಾಜು ಮಾಡುತ್ತಿಲ್ಲವೆಂದು ನಾನು ಹೇಳಿದ್ದಕ್ಕೆ, ಮಾನ್ಯ ಶಾಸಕರು ಅದು ಸುಳ್ಳು ಎಂದು ಹೇಳಿದರು. ಅದಕ್ಕೆ ದಯವಿಟ್ಟು, ನನ್ನ ಕ್ಷೇತ್ರದಲ್ಲಿ ಒಂದು ಸಲ ಸಮೀಕ್ಷೆ ಮಾಡಲಿಕ್ಕೆ ಹೇಳಿ. ನಾನು ಇದನ್ನು ಸಾಬೀತು ಮಾಡಿ ತೋರಿಸಲಿಕ್ಕೆ ತಯಾರಿದ್ದೇನೆ. ಮಾನ್ಯ ಸಚಿವರು user fund ನಿಂದ ಕೊಡಲಿಕ್ಕೆ ಅವಕಾಶ ಕೊಡುತ್ತೇವೆಂದು ಹೇಳಿದರು. ಆದರೆ, ಆ ಮೊತ್ತ ಸೀಮಿತವಾಗಿದೆ. User fund ನಿಂದ ಎಲ್ಲಾ ಔಷಧಿಗಳನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಅದರಲ್ಲಿ antibiotics ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನು ವಿತರಣೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಬೇರೆ ಬೇರೆ ಸಮಸ್ಯೆಗಳು ಕೂಡ ಇವೆ.

ಅಧ್ಯಕ್ಷರು: ಉಪ ಪ್ರಶ್ನೆ ಮಾತ್ರ ಕೇಳಿ.

ಶ್ರೀ ಹೆಚ್. ಗೋಪಾಲ ಭಂಡಾರಿ: ನಿರುಪಯುಕ್ತ ಔಷಧಿಗಳು ಬರುತ್ತಿವೆ ಎಂದು ನಾನು ಹೇಳಿದೆ. ಅದಕ್ಕೆ ಅವರು ಅದನ್ನು ಬೇರೆ ಕಡೆಗೆ ಕಳುಹಿಸುತ್ತೇವೆಂದು ಹೇಳಿದರು. ಎಲ್ಲಿಯವರೆಗೆ ಎಂದರೆ ಮಾರ್ಚ್ ಕೊನೆಗೆ ಔಷಧ ಬರುವಾಗ ಅದೂ ಕೂಡ ಕೊನೇ ಹಂತಕ್ಕೆ ಅಂದರೆ expiry date ಹತ್ತಿರಕ್ಕೆ ಬಂದಿರುತ್ತದೆ, time bar ಆಗಿರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸದನದಲ್ಲಿ ಸದಸ್ಯರು ವ್ಯಕ್ತಪಡಿಸಿರುವ ಭಾವನೆಗಳ ಹಿನ್ನೆಲೆಯಲ್ಲಿ ಒಂದು ಮಾತನ್ನು ಸರ್ಕಾರದ ಪರವಾಗಿ ನಾವು ನಂಬಿಕೆಯಿಂದ ಮತ್ತು ಆ ದಿಕ್ಕಿನಲ್ಲಿ ಆ ಕೆಲಸ ಮಾಡುತ್ತಿರುವುದರಿಂದ ಬಲವಾಗಿ ಹೇಳುತ್ತೇನೆ. ಆರೋಗ್ಯ ಕ್ಷೇತ್ರಕ್ಕೆ ವಿಶೇಷವಾಗಿ ಔಷಧಿಗಳ ಪೂರೈಕೆಗೆ ಯಾವುದೇ ರೀತಿ ತೊಂದರೆಯಾಗದಂತೆ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ. ಈಗಾಗಲೇ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಉದಾಹರಣೆಗೆ, anti rabies vaccine ಬಗ್ಗೆ ಹೇಳಿದಿರಿ. ನಮ್ಮಲ್ಲಿ 93 ಸಾವಿರ anti rabies vaccine ಈಗಾಗಲೇ stock ಇದೆ. ಕೊರತೆಯಾಗದಂತೆ ನಾವೆಲ್ಲ ಎಚ್ಚರಿಕೆ ವಹಿಸಿದ್ದೇವೆ.

ಶ್ರೀ ಹೆಚ್.ಗೋಪಾಲ ಭಂಡಾರಿ: ಅದು Godown ನಲ್ಲಿರಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆ ರೀತಿ specific ಆಗಿ ಕಾರ್ಕಳದಲ್ಲಿ anti rabies vaccine ಕೊರತೆ ಇದೆ ಎಂದು ತಾವು ಈಗ ಉಲ್ಲೇಖ ಮಾಡಿದ್ದೀರಿ ಮತ್ತು ಗಮನಕ್ಕೆ ತಂದಿದ್ದೀರಿ. ಇವತ್ತೇ ಅದನ್ನು ಸರಿಪಡಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮ ಅಧಿಕಾರಿಗಳು ಇಲ್ಲಿ ಇದ್ದಾರೆ. ಅವರು ಇದನ್ನೆಲ್ಲವನ್ನು

ಗಮನಿಸುತ್ತಿದ್ದಾರೆ. ಸರ್ಕಾರದಲ್ಲಿ ನಾವು ಆರೋಗ್ಯದ ಸುರಕ್ಷತೆಗೋಸ್ಕರ ಇಷ್ಟು ಪ್ರಯತ್ನ ಮಾಡುತ್ತಿರುವುದರಿಂದ ಯಾವುದೇ ರೀತಿ ಕೊರತೆ ಆಗದಂತೆ ನೋಡಿಕೊಳ್ಳುತ್ತೇವೆ. ನಾವು ಯಾವುದೇ ರೀತಿಯ ಔಷಧಿಗಳ ಖರೀದಿ ಮಾಡುವುದಕ್ಕೆ ಸಹ ನಿಮಗೆ ಗೊತ್ತಿರುವ ಹಾಗೆ e-tendering ಮೂಲಕ ಮಾಡುತ್ತಿದ್ದೇವೆ. ಈ ಬಗ್ಗೆ ಮುಂದೆ ಒಂದು ಪ್ರಶ್ನೆ ಇದ್ದು ಆ ಪ್ರಶ್ನೆ ಬಂದಾಗ ತಾವು ಹೇಳಿರುವ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆ. ಆದರೆ, ನಾವು ಈ ರೀತಿ ಔಷಧಿಗಳ ಕೊರತೆಯಾಗದಿರುವುದಕ್ಕೆ ಬೇಕಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆಕಸ್ಮಿಕವಾಗಿ ಕೊರೆ ಉಂಟಾದರೂ ಸಹ user charge ನಿಂದ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಬಿಜಾಪುರ ಜಿಲ್ಲೆಯಲ್ಲಿ ವಸತಿ ನಿಲಯಗಳ ಅನುದಾನ ಕುರಿತು

44 ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ)
ಶ್ರೀ ಡಿ. ಸುಧಾಕರ, (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ) ವಿಜಾಪುರ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್-ಪೂರ್ವ ಮೆಟ್ರಿಕ್- ನಂತರದ ಪ್ರತಿ ವಸತಿನಿಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನ ಹೆಚ್ಚು; (ತಾಲ್ಲೂಕುವಾರು, ವಸತಿನಿಲಯವಾರು ವಿವರ ನೀಡುವುದು);

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಬಿಜಾಪುರ ಜಿಲ್ಲೆಯಲ್ಲಿ ನಡೆಯುತ್ತಿರುವ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಿಗೆ ಕಳೆದ 3 ವರ್ಷಗಳಲ್ಲಿ ರೂ.577.54 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ವಸತಿನಿಲಯವಾರು ವಿವರ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿದ್ಯಾರ್ಥಿನಿಲಯಗಳ ಹೆಸರು	ಬಿಡುಗಡೆ ಮಾಡಲಾಗಿದ್ದ ಹಣ		
		2005-06	**2006-07**	**2007-08**
	ಬಿಜಾಪೂರ ತಾಲ್ಲೂಕು			
1	ಮೆ.ಪೂ. ಬಾಲಕರ ವ.ನಿ.	2,76,650	2,82,442	3,44,119

	ಅರ್ಜುಣಗಿ			
2	ಮೆ.ಪೂ. ಬಾಲಕರ ವ.ನಿ. ಮಮದಾಪೂರ	3,31,070	3,12,436	3,23,244
3	ಮೆ.ಸಂ (ವೃತ್ತಿಪರ) ಬಾಲಕಿಯರ ವ.ನಿ ವಿಜಾಪೂರ	1,44,880	4,04,650	3,01,501
4	ಮೆ.ಪೂ. ಬಾಲಕರ ವ.ನಿ. ತಿಕೋಟಾ	1,28,000	3,25,570	3,35,650
5	ಮೆ.ಪೂ. ಬಾಲಕರ ವ.ನಿ. ಬೊಮ್ಮನಳ್ಳಿ	82,500	4,36,505	3,38,750
6	ಮೆ.ಪೂ. ಬಾಲಕರ ವ.ನಿ. ವಿಜಾಪೂರ	6,75,000	6,71,975	8,49,075
7	ಮೆ.ಪೂ. ಬಾಲಕರ ವ.ನಿ. ಬುರಾಣಪೂರ	3,02,180	3,06,340	3,48,515
8	ಮೆ.ಪೂ. ಬಾಲಕರ ವ.ನಿ. ನಾಗಠಾಣ	2,82,100	2,64,350	3,07,050
9	ಮೆ.ಪೂ. ಬಾಲಕರ ವ.ನಿ. ಕನ್ನೂರ	2,79,100	2,64,350	3,07,050
10	ಮೆ.ಪೂ. ಬಾಲಕರ ವ.ನಿ. ಬಿಜ್ಜರಗಿ	3,15,100	2,94,350	3,61,050
11	ಮೆ.ಪೂ. ಬಾಲಕರ ವ.ನಿ. ವಿಜಾಪೂರ	2,91,600	2,64,350	3,07,550
12	ಮೆ.ಪೂ. ಬಾಲಕರ ವ.ನಿ. ಹೊನಬಾಡ	2,81,100	2,64,350	3,07,050
13	ಮೆ.ಪೂ. ಬಾಲಕರ ವ.ನಿ. ಶಿವಣಗಿ	2,83,100	2,64,350	3,07,050
14	ಮೆ.ಪೂ. ಬಾಲಕರ ವ.ನಿ. ನಿಡೋಣಿ	3,09,760	2,95,050	3,37,890
15	ಮೆ.ಪೂ. ಬಾಲಕರ ವ.ನಿ. ತಿಕೋಟಾ	3,16,000	3,01,250	3,43,950

16	ಮೆ.ಪೂ. ಬಾಲಕರ ವ.ನಿ. ಲೋಗಾಂಗ	2,00,100	2,64,350	5,07,060
17	ಮೆ.ಪೂ. ಬಾಲಕರ ವ.ನಿ. ವಿಜಾಪೂರ	5,93,900	5,72,174	5,76,706
18	ಮೆ.ಪೂ. ಬಾಲಕಿಯರ ವ.ನಿ. ವಿಜಾಪೂರ	3,38,500	2,77,250	2,69,500
19	ಮೆ.ಪೂ. ಬಾಲಕರ ವ.ನಿ. ಕಳ್ಳಕವಟಗಿ	–	2,34,200	5,25,000
	ಒಟ್ಟು	**5430640**	**6394292**	**7057750**
	ಬಾಗೇವಾಡಿ ತಾಲ್ಲೂಕು			
1	ಮೆ.ಪೂ. ಬಾಲಕರ ವ.ನಿ. ಬೈರಾಡಗಿ	82,500	5,35,000	3,27,310
2	ಮೆ.ಪೂ. ಬಾಲಕಿಯರ ವ.ನಿ. ಕೋಲಾರ	84,500	4,53,070	3,60,210
3	ಮೆ.ಪೂ. ಬಾಲಕರ ವ.ನಿ. ಗಣಿ	82,500	3,25,570	0,73,350
4	ಮೆ.ಪೂ. ಬಾಲಕರ ವ.ನಿ. ಬಾಗೇವಾಡಿ	2,84,100	2,64,350	3,07,050
5	ಮೆ.ಪೂ. ಬಾಲಕರ ವ.ನಿ. ನಿಡಗುಂದಿ	2,83,100	2,64,350	3,27,802
6	ಮೆ.ಪೂ. ಬಾಲಕರ ವ.ನಿ. ಡಗುಂಡಿ	3,32,850	2,04,350	3,38,064
7	ಮೆ.ಪೂ. ಬಾಲಕರ ವ.ನಿ. ಮನಗೂಳಿ	3,36,340	3,11,990	3,45,210
8	ಮೆ.ಪೂ. ಬಾಲಕರ ವ.ನಿ. ಕೂಡಗಿ	2,84,100	2,64,350	3,07,060
9	ಮೆ.ಪೂ. ಬಾಲಕರ ವ.ನಿ. ಸಾಸನೂರ	3,07,500	3,31,550	3,51,810
10	ಮೆ.ಪೂ. ಬಾಲಕರ ವ.ನಿ.	2,81,100	2,64,350	3,07,050

	ನರಸಲಗಿ			
11	ಮೆ.ಪೂ. ಬಾಲಕರ ವ.ನಿ. ಹೂ. ಹಿಪ್ಪರಗಿ	2,99,706	2,82,125	3,34,950
12	ಮೆ.ಪೂ. ಬಾಲಕರ ವ.ನಿ. ಕೂಡಗಿ	3,00,978	3,07,250	2,67,111
13	ಮೆ.ಪೂ. ಬಾಲಕರ ವ.ನಿ. ಯರನಾಳ	–	2,35,500	5,65,000
	ಒಟ್ಟು	**2969274**	**41,13,805**	**44,78,077**
	ಸಿಂದಗಿ ತಾಲ್ಲೂಕು			
1	ಮೆ.ಪೂ. ಬಾಲಕರ ವ.ನಿ. ದೇ. ಹಿಪ್ಪರಗಿ	3,07,250	3,70,242	3,92,719
2	ಮೆ.ಪೂ. ಬಾಲಕಿಯರ ವ.ನಿ. ಆಲಮೇಲ	2,63,535	2,53,042	3,13,629
3	ಮೆ.ಪೂ. ಬಾಲಕರ ವ.ನಿ. ಬಿಂಜಲಬಾವಿ	2,66,565	2,73,262	3,45,184
4	ಮೆ.ಪೂ. ಬಾಲಕಿಯರ ವ.ನಿ. ಚಾಲವಾದ	86,500	3,25,570	2,91,250
5	ಮೆ.ಪೂ. ಬಾಲಕಿಯರ ವ.ನಿ. ಸಿಂದಗಿ	2,89,070	4,95,570	4,41,250
6	ಮೆ.ಪೂ. ಬಾಲಕರ ವ.ನಿ. ದೇವಣಗಾಂವ	1,06,270	3,77,435	3,89,290
7	ಮೆ.ಪೂ. ಬಾಲಕರ ವ.ನಿ. ಸಿಂದಗಿ	2,85,100	2,64,359	3,32,350
8	ಮೆ.ಪೂ. ಬಾಲಕರ ವ.ನಿ. ಸಿಂದಗಿ(ಡಿ.ಟಿ)	2,85,100	2,64,350	3,32,050
9	ಮೆ.ಪೂ. ಬಾಲಕರ ವ.ನಿ. ಕಡಣಿ	2,45,100	2,64,350	3,34,150
10	ಮೆ.ಪೂ. ಬಾಲಕರ ವ.ನಿ.	2,90,124	2,74,370	3,54,390

	ಗಬ್ಬೆವಾಡ			
11	ಮೆ.ಪೂ. ಬಾಲಕರ ವ.ನಿ. ಗೊಲಗೇರಿ	2,46,100	2,64,350	3,34,350
12	ಮೆ.ಪೂ. ಬಾಲಕರ ವ.ನಿ. ಆಲಮೇಲ	2,84,100	2,64,350	3,34,350
13	ಮೆ.ಪೂ. ಬಾಲಕರ ವ.ನಿ. ಸುಂಗಠಾಣ	2,73,506	2,64,350	3,85,030
14	ಮೆ.ಪೂ. ಬಾಲಕರ ವ.ನಿ. ಯಂಕಂಚಿ	2,46,100	2,64,350	3,34,350
15	ಮೆ.ಪೂ. ಬಾಲಕರ ವ.ನಿ. ಬಗಲೂರ	2,93,100	2,76,850	3,64,385
	ಒಟ್ಟು	**3717520**	**44,91,491**	**52,29,027**
	ಇಂಡಿ ತಾಲ್ಲೂಕು			
1	ಮೆ.ಪೂ. ಬಾಲಕರ ವ.ನಿ. ಅಥರ್ಗಾ	2,83,652	2,47,676	3,07,150
2	ಮೆ.ಪೂ. ಬಾಲಕರ ವ.ನಿ. ಝಳಕಿ	82,500	3,45,570	3,09,758
3	ಮೆ.ಪೂ. ಬಾಲಕಿಯರ ವ.ನಿ. ಗೊಳಸಾರ	85,500	3,25,570	2,91,250
4	ಮೆ.ಪೂ. ಬಾಲಕರ ವ.ನಿ. ಇಂಡಿ	2,89,100	2,64,350	3,07,050
5	ಮೆ.ಪೂ. ಬಾಲಕರ ವ.ನಿ. ಬರಡೋಲೆ	2,80,100	2,64,350	3,07,050
6	ಮೆ.ಪೂ. ಬಾಲಕರ ವ.ನಿ. ಹಿರೇಮಸಳಿ	3,05,100	2,80,472	3,25,050
7	ಮೆ.ಪೂ. ಬಾಲಕರ ವ.ನಿ. ತಾಂಬಾ	2,83,100	2,64,350	3,07,050
8	ಮೆ.ಪೂ. ಬಾಲಕರ ವ.ನಿ. ಚಡಚಣ	3,98,840	4,18,460	4,59,710
9	ಮೆ.ಪೂ. ಬಾಲಕರ ವ.ನಿ.	1,77,200	1,88,750	1,95,540

	ಇಂಡಿ(ಡಿ.ಟಿ)			
10	ಮೆ.ಪೂ. ಬಾಲಕರ ವ.ನಿ. ತದ್ದೇವಾಡಿ	3,34,500	–	2,72,000
11	ಮೆ.ನಂ. ಬಾಲಕರ ವ.ನಿ. ಇಂಡಿ	–	3,77,343	3,10,500
	ಒಟ್ಟು	**2519592**	**2,97,689**	**3392108**
	ಮುದ್ದೇಬಿಹಾಳ ತಾಲ್ಲೂಕು			
1	ಮೆ.ಪೂ. ಬಾಲಕರ ವ.ನಿ. ಮುದ್ದೇಬಿಹಾಳ	2,87,100	2,64,350	3,07,050
2	ಮೆ.ಪೂ. ಬಾಲಕರ ವ.ನಿ. ತಾಳಿಕೋಟೆ	2,97,716	2,70,440	3,24,102
3	ಮೆ.ಪೂ. ಬಾಲಕರ ವ.ನಿ. ತುಂಬಗಿ	2,81,100	2,64,350	3,07,050
4	ಮೆ.ಪೂ. ಬಾಲಕರ ವ.ನಿ. ನಾಲವತವಾಡ	2,03,100	2,66,786	3,07,050
5	ಮೆ.ಪೂ. ಬಾಲಕರ ವ.ನಿ. ಇಂಗಳಗೇರಿ	2,87,100	2,64,350	3,07,050
6	ಮೆ.ಪೂ. ಬಾಲಕಿಯರರ ವ.ನಿ. ಮುದ್ದೇಬಿಹಾಳ	1,59,850	1,38,725	1,75,175
7	ಮೆ.ಪೂ. ಬಾಲಕಿಯರ ವ.ನಿ. ಮುದ್ದೇಬಿಹಾಳ	1,34,780	4,54,650	3,69,351
	ಒಟ್ಟು	**16,50,746**	**19,23,651**	**20,96,828**
	ಒಟ್ಟು 1+2+3+4+5	**162,87,772**	**195,22,787**	**219,43,290**

3	ಸಾದಿಲ್ವಾರು ವೆಚ್ಚ ಪ್ರತಿ ವಿದ್ಯಾಥಿ ನಿಲಯಕ್ಕೆ ರೂ.100/– ರಂತೆ 10 ತಿಂಗಳಿಗೆ
4	ವಿದ್ಯುತ್ ಮತ್ತು ನೀರು ಸರಬರಾಜು ವೆಚ್ಚ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ರೂ.2000/– ವಾರ್ಷಿಕ ವೆಚ್ಚ ಅಥವಾ ವಾಸ್ತವಿಕ ವೆಚ್ಚ
5	ಖಲಾಯಿ ವೆಚ್ಚ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ ರೂ.600/–
6	ಶೌಚಾಲಯದ ಸ್ವಚ್ಚತೆ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕವಾಗಿ ರೂ.1000/–

7	ಎರಡು ದಿನಪತ್ರಿಕೆ ಖರೀದಿ ವಾರ್ಷಿಕವಾಗಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ರೂ.1500/- ರಂತೆ (ಕನ್ನಡ ಮತ್ತು ಇಂಗ್ಲೀಷ್)

ಈ) ಈ ವಸತಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಆಹಾರ ಒದಗಿಸಲು ನೀಡುತ್ತಿರುವ ಮೊತ್ತವು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?
ಬಂದಿದೆ.

ಊಟದ ವೆಚ್ಚಕ್ಕಾಗಿ ಪ್ರತಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗೆ ಮಾಹೆಯಾನ ರೂ.450/- ರಿಂದ 600/-ಕ್ಕೆ ಹಾಗೂ ಪ್ರತಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗೆ 500/- ರಿಂದ ರೂ. 650/- ಕ್ಕೆ ಸಪ್ಟಂಬರ್ 2008 ರಿಂದ ಹೆಚ್ಚಿಸಲಾಗಿದೆ.

ಈಗಾಗಲೇ ಖಂಡ್ರೆಯವರು ಪ್ರಶ್ನೆ ಕೇಳಿದ ಸಂದರ್ಭದಲ್ಲಿ ಸಂಪೂರ್ಣವಾದ ವಿವರಗಳನ್ನು ಮಾನ್ಯ ಸಚಿವರಿಗೆ ಕೇಳಿದ್ದೆ. ಆದರೆ, ಇದರಲ್ಲಿ ಮಾನ್ಯ ಸಚಿವರು ಗಮನಿಸಬೇಕಾದ ವಾಸ್ತವಾಂಶ ಒಂದಿದೆ. ನಾನು ಆಹಾರ ಪದಾರ್ಥದ ಮೊತ್ತದ ವಿವರಗಳನ್ನು ಕೊಡಿ ಎಂದು ಕೇಳಿದ್ದೆ. ಆದರೆ, ಅವರು ಊಟ ಏನು ಕೊಡುತ್ತೇವೆ, ತಿಂಡಿಗೆ ಎಷ್ಟು ರೇಟ್ ಇದೆಯೆಂದು ಹೇಳಿದ್ದಾರೆ. ಆದರೆ, ಆ ಪ್ರಶ್ನೆಯನ್ನು ಏಕೆ ಕೇಳಿದ್ದೇನೆಂದರೆ, ಇವತ್ತಿನ ವಾಸ್ತವಿಕ ದರಕ್ಕೆ ನಿಮ್ಮ ಇಲಾಖೆಯಿಂದ ಕೊಡುವ ದರಕ್ಕೂ ಎಷ್ಟು ವ್ಯತ್ಯಾಸವಿದೆ ಎನ್ನುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಅಥವಾ ಸರ್ಕಾರದ ಗಮನಕ್ಕೆ ಬಂದಿದೆಯೋ, ಇಲ್ಲವೋ ಎನ್ನುವುದಕ್ಕೆ ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಎರಡನೆಯದಾಗಿ, ಇಲ್ಲಿ ತಾವು ಕೊಟ್ಟಿರುವ ವಿವರಗಳಲ್ಲಿ ತಾವು ಗಮನಿಸಬೇಕು, Metric ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಅದರಲ್ಲಿ ಶೌಚಾಲಯ ವೆಚ್ಚ ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೇಯಾನ ರೂಪಾಯಿ 300 ರಂತೆ 10 ತಿಂಗಳಿಗೆ ಎಂದು ಒಂದು ಕಡೆ ಕೊಟ್ಟಿದ್ದೀರಿ. ಇನ್ನೊಂದು ಕಡೆಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಶೌಚಾಲಯ ವೆಚ್ಚಕ್ಕೆ ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ವೆಚ್ಚವಾಗಿ 1 ಸಾವಿರ ರೂಪಾಯಿ ಎಂದು ಕೊಟ್ಟಿದ್ದೀರಿ. ಇದರಲ್ಲಿ ಯಾವುದು ಸರಿ? ಎನ್ನುವುದರ ಬಗ್ಗೆ ದಯಮಾಡಿ ಸಚಿವರು ಉತ್ತರ ಕೊಡಬೇಕು. ಇದರ ಜೊತೆಯಲ್ಲಿ, ಕ್ಷೌರ ಮಾಡುವುದಕ್ಕೆ ಒಂದು ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ 50 ರೂಪಾಯಿಗಳಂತೆ ಕೊಟ್ಟಿದ್ದೀರಿ. ಅದು ಕೇವಲ ಬಾಲಕರಿಗೆ ಮಾತ್ರ ಎಂದು ಕೊಟ್ಟಿದ್ದೀರಿ. ಬಾಲಕಿಯರು ಇವತ್ತು ತಮ್ಮ ಹೇರ್ ಕಟಿಂಗ್ ಮಾಡಿಸಿಕೊಳ್ಳುವುದನ್ನು

ತಾವು ಎಲ್ಲ ಕಡೆ ನೋಡಿದ್ದೀರಿ. ಬಾಲಕರಿಗೆ ಆ ಮೊತ್ತ ಎಷ್ಟು ಅವಶ್ಯಕತೆ ಇದೆಯೋ ಅದೇ ರೀತಿ ಬಾಲಕಿಯರಿಗೂ ಆ ಮೊತ್ತ ಅಷ್ಟೇ ಅವಶ್ಯಕತೆ ಇದೆ. ದಯಮಾಡಿ, ಸಚಿವರು ಅದನ್ನು ಅರ್ಥ ಮಾಡಿಕೊಳ್ಳಬೇಕು. ಕೇವಲ ಅದು ಬಾಲಕರಿಗಾಗಿ ಮಾತ್ರ ಎಂದೇನು ತಾವು ಹೇಳಿದ್ದೀರಿ, ಅದಕ್ಕೆ ವಿವರಣೆ ಕೊಡಬೇಕು. ಇದರ ಜೊತೆಯಲ್ಲಿ, ಓಬೀರಾಯನ ಕಾಲದ ರೇಟ್‌ಗಳನ್ನು ಇವತ್ತಿಗೂ ತಾವು ಪಾಲನೆ ಮಾಡಿಕೊಂಡು ಬರುತ್ತಿದ್ದೀರಿ. ವಾಸ್ತವಿಕವಾಗಿ ಶೌಚಾಲಯವನ್ನು ಸ್ವಚ್ಚಮಾಡುವುದಕ್ಕೆ ಒಂದು ತಿಂಗಳಿಗೆ ಎಷ್ಟು ಖರ್ಚು ಬರುತ್ತದೆಂದು ಸರ್ಕಾರದ ಗಮನಕ್ಕೆ ಇಲ್ಲಿಯವರೆಗೆ ಬಂದಿಲ್ಲವೇ? ಇದು ಬಹಳ ಮಹತ್ವದ ವಿಚಾರ. ಇದು ಕೇವಲ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ. ರಾಜ್ಯದ ಎಲ್ಲಾ ವಿದ್ಯಾರ್ಥಿ ನಿಲಯಗಳಿಗೆ ಸಂಬಂಧಪಟ್ಟಂಥ ವಿಚಾರ. ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ನಾನು ನನ್ನ ಮತಕ್ಷೇತ್ರದಲ್ಲಿ ಹಲವಾರು ಹಾಸ್ಟೆಲ್‌ಗಳಿಗೆ ವಿಸಿಟ್ ಮಾಡಿ ಪರೀಕ್ಷೆ ಮಾಡಿದ್ದೇನೆ. ಅಲ್ಲಿ ಸ್ವಚ್ಚತೆಯ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇವತ್ತು ದನದ ಕೊಟ್ಟಿಗೆಯ ರೀತಿ ವಾಸನೆ ಬರುವಂಥ ಶೌಚಾಲಯಗಳು ಮತ್ತು ಹಾಸ್ಟೆಲ್‌ಗಳು ಇವೆ. ಅದಕ್ಕೆ ಸ್ವಚ್ಚತೆಗೆ ಬಹಳ ಮಹತ್ವ ಕೊಡಬೇಕಾಗಿದ್ದರೆ ನೀವು ಇವತ್ತೇನು ದರವನ್ನು ಫಿಕ್ಸ್ ಮಾಡಿದ್ದೀರಿ, ಅದರ ಮೂರು ಪಟ್ಟು ಹೆಚ್ಚಿಗೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ತಾವು ಈಗಾಗಲೇ ಮಾನ್ಯ ಖಂಡ್ರೆಯವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಆಹಾರ ಪದಾರ್ಥಗಳನ್ನು ಹಾಸ್ಟೆಲ್‌ಗಳಿಗೆ ಕೊಡುವಾಗ ಸರಿಯಾದ ಕ್ರಮವನ್ನು ಅನುಸರಿಸಬೇಕು. ಕಳಪೆ ಮಟ್ಟದ ಆಹಾರ ಪದಾರ್ಥಗಳನ್ನು ನೀಡಿದರೆ ಅಲ್ಲಿ ಇರುವಂಥ ಬಡವರ ಮಕ್ಕಳು ಅಪೌಷ್ಟಿಕತೆಯಿಂದ ಬಳಲುವಂಥ ಪರಿಸ್ಥಿತಿ ಬರುತ್ತದೆ. ಹೀಗಾಗಿ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥಗಳನ್ನು ಒದಗಿಸುವಾಗ ಗುಣಮಟ್ಟದಿಂದ ಕೂಡಿರತಕ್ಕಂಥ ಆಹಾರ ಪದಾರ್ಥಗಳನ್ನು ಒದಗಿಸಬೇಕಾಗುತ್ತದೆ. ಜೊತೆಗೆ ಇವತ್ತು ನೀವು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಮಕ್ಕಳಿಗೆ ತಿಂಗಳಿಗೆ ಊಟದ ವೆಚ್ಚಕ್ಕಾಗಿ 450/- ನಿಂದ 650/- ರೂಪಾಯಿವರೆಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಮಕ್ಕಳಿಗೆ 500/- ನಿಂದ 650/- ರೂಪಾಯಿವರೆಗೆ ಹೆಚ್ಚು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಅದರ ಜೊತೆಗೆ ಶೌಚಾಲಯದ ಸ್ವಚ್ಚತೆಗಾಗಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕವಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಡಲಾಗುತ್ತದೆ ಎಂದು ಹೇಳಿದ್ದೀರಿ. ಇದು ಇವತ್ತಿನ ದಿವಸ ಎಷ್ಟರ ಮಟ್ಟಿಗೆ ಸರಿ ಇದೆ? ಎಂಬುದನ್ನು ಮಾನ್ಯ ಸಚಿವರು ಗಮನಿಸಬೇಕಾಗುತ್ತದೆ. ಏಕೆಂದರೆ, ವಾಸ್ತವದಲ್ಲಿ ದುಬಾರಿ ಕಾಲದಲ್ಲಿ ಇದು ಸರಿಯೇ ಎಂಬುದನ್ನು ನೋಡಬೇಕಾಗುತ್ತದೆ. ಜೊತೆಗೆ ಹಾಸಿಗೆ ಮತ್ತು ಹೊದಿಕೆಯನ್ನು ಪ್ರತಿ ಮೂರು

ವರ್ಷಕ್ಕೊಮ್ಮೆ ಒಬ್ಬ ವಿದ್ಯಾರ್ಥಿಗೆ 400 ರೂಪಾಯಿಗಳವರೆಗೆ ವೆಚ್ಚ ಮಾಡಲಾಗುವುದು ಎಂದು ಹೇಳಿದ್ದೀರಿ. 400 ರೂಪಾಯಿಗೆ ಇವತ್ತಿನ ದಿವಸ ಹಾಸಿಗೆ ಮತ್ತು ಹೊದಿಕೆ ಬರುತ್ತದೆಯೆ? ಅದು ಮೂರು ವರ್ಷಗಳವರೆಗೆ ಇರಬೇಕಾದರೆ ಅದು ಎಂಥ ಗುಣಮಟ್ಟದಿಂದ ಕೂಡಿರಬೇಕು? ಈ ಬಗ್ಗೆ ಮಾನ್ಯ ಸಚಿವರು ಗಮನಿಸಬೇಕಾಗುತ್ತದೆ.

ಶ್ರೀ ಡಿ.ಸುಧಾಕರ (ಮಾನ್ಯ ಸಮಾಜ ಕಲ್ಯಾಣ ಸಚಿವರು): ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಹುಡುಗರಿಗೆ ಮಾತ್ರ ಹೇರ್ ಕಟ್ಟಿಂಗ್ ಮಾಡುವುದಕ್ಕೆ ದುಡ್ಡು ಕೊಡುತ್ತಾರೆ, ಈ ಯೋಜನೆಯನ್ನು ಬಾಲಕಿಯರಿಗೂ ವಿಸ್ತರಿಸಬೇಕೆಂದು ಕೇಳಿಕೊಂಡಿದ್ದಾರೆ. ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮುಂಬರುವ ದಿನಗಳಲ್ಲಿ ಎಲ್ಲಿ ಅಗತ್ಯವಿದೆ ಅಂಥ ಕಡೆ ಈ ಯೋಜನೆ ಜಾರಿಗೆ ತರಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಜೊತೆಗೆ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡುವಾಗ ಗುಣಮಟ್ಟದಿಂದ ಕೂಡಿರಬೇಕೆಂದು ಸಲಹೆ ಕೊಟ್ಟಿದ್ದಾರೆ. ಹೊಸ ಪದ್ಧತಿಯ ಮೂಲಕ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡುವ ವ್ಯವಸ್ಥೆ ಬಂದಿದ್ದು, ಮುಂಬರುವ ದಿನಗಳಲ್ಲಿ ಬಿಜಾಪುರಕ್ಕೆ ಈ ವ್ಯವಸ್ಥೆಯನ್ನು ಕಲ್ಪಿಸಿದ ನಂತರ ಈಗ ಆಗಿರುವ ತೊಂದರೆ ತಪ್ಪಬಹುದು ಎನ್ನುವ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ):- ನಾನು ಐದು ಉಪ ಪ್ರಶ್ನೆಗಳನ್ನು ಕೇಳಿದ್ದೇನೆ. ಮೊದಲನೆಯದಾಗಿ ಹೇರ್ ಕಟ್ಟಿಂಗ್ ಬಗ್ಗೆ, ಎರಡನೇಯದಾಗಿ ಆಹಾರ ಪದಾರ್ಥಗಳ ಬಗ್ಗೆ ಮೂರನೇಯದಾಗಿ ಶೌಚಾಲಯದ ಸರಿಯಾದ ವ್ಯವಸ್ಥೆಗಾಗಿ,

ಅಧ್ಯಕ್ಷರು: ಸಾಕು ಬಿಡಿ ಮಾನ್ಯ ಮಂತ್ರಿಗಳೇ ಉತ್ತರ ಕೊಡಿ.

ಶ್ರೀ ಡಿ.ಸುಧಾಕರ: ಮಾನ್ಯ ಸದಸ್ಯರೇನು ಸಲಹೆ ಕೊಟ್ಟಿದಾರೆ. ಈ ಬಗ್ಗೆ ಮುಂಬರುವ ದಿನಗಳಲ್ಲಿ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಲಾಗುವುದು.

ಬೇಲೂರು ಕ್ಷೇತ್ರ ವ್ಯಾಪ್ತಿಯ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಹಾಸ್ಟೆಲ್‌ಗಳ ಬಗ್ಗೆ.

(06) 8 ಶ್ರೀ ರುದ್ರೇಶಗೌಡ.ವೈ.ಎನ್ (ಬೇಲೂರು)
ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಹಾಸ್ಟೆಲ್‌ಗಳು
ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು)

ಅ ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು?

ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆಳಕಂಡಂತೆ ಒಟ್ಟು 7 ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು ಇರುತ್ತದೆ.

ಕ್ರ ಸಂ	ವಿದ್ಯಾರ್ಥಿನಿಲಯದ ಹೆಸರು	ವಿದ್ಯರ್ಥಿ ನಿಲಯಗಳ ಸಂಖ್ಯೆ	ಮಂಜೂರಾತಿ ಸಂಖ್ಯೆ
1	ಮೆಟ್ರಿಕ್–ಪೂರ್ವ	6	325
2	ಮೆಟ್ರಿಕ್–ನಂತರ	1	100
	ಒಟ್ಟು	**7**	**425**

ಆ ಈ ಹಾಸ್ಟೆಲ್‌ಗಳ ಕಾರ್ಯ ನಿರ್ವಹಿಸುತಿರುವ ವಾರ್ಡನ್‌ಗಳ ಸಂಖ್ಯೆ ಎಷ್ಟು?

03 ನಿಲಯ ಮೇಲ್ವಿಚಾರಕರು ವಿದ್ಯಾರ್ಥಿನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

01 ನಿಲಯ ಮೇಲ್ವಿಚಾರಕ ನಿಯೋಜನೆ ಮೇಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇ ಖಾಲಿಯಿರುವ ಹುದ್ದೆಗಳೆಷ್ಟು; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಖಾಲಿ ಹುದ್ದೆಗಳು:

ಕ್ರ. ಸಂ.	ಹುದ್ದೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ
1	ನಿಲಯ ಮೇಲ್ವಿಚಾರಕರು	05
2	ನಿಲಯ ಪಾಲಕರು	01
3	ಪ್ರಾಂಶುಪಾಲರು	01
4	ಸಹಶಿಕ್ಷಕರು	04
5	ಸ್ಟಾಫ್ ನರ್ಸ್	01
6	ಅಡುಗೆಯವರು	01
7	ಅಡುಗೆ ಸಹಾಯಕರು	01
8	ರಾತ್ರಿ ಕಾವಲುಗಾರರು	01
	ಒಟ್ಟು	**15**

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಸೇವೆಯಿಂದ ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ.

* ಸರ್ಕಾರದ ಪತ್ರ ದಿನಾಂಕ:08.07.2008ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ದಿನಾಂಕ:30.04.2008ರಂದು ಖಾಲಿ ಇದ್ದ 88 ನಿಲಯ ಪಾಲಕರು ಹಾಗೂ 454 ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿದ್ದು, 542 ಅಡುಗೆಯವರು 800 ಅಡುಗೆ ಸಹಾಯಕರು, 293 ಕಾವಲುಗಾರರು, 86 ಜವಾನರು, 158 ಸ್ವಚ್ಛತಾ ಸಿಬ್ಬಂದಿಯನ್ನು ನೇರ ನೇಮಕಾತಿ, ಬದಲಿಗೆ ಹೊರಮೂಲದಿಂದ ಪಡೆಯಲು ಅನುಮತಿ ನೀಡಿರುತ್ತದೆ.
* ಈ ಕುರಿತು ಕರ್ನಾಟಕ ಲೋಕ ಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ನಿಲಯ ಮೇಲ್ವಿಚಾರಕರ 337 ಹುದ್ದೆಗಳು ಹಾಗೂ ನಿಲಯ ಪಾಲಕರ 45 ಹಾಗೂ 34 ಆಶ್ರಮ ಶಾಲಾ ಶಿಕ್ಷಕರು, ಗ್ರೂಪ್-ಸಿ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:02-08-2008 ಮತ್ತು 24.06.2008ರ ಪತ್ರದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ತಿಳಿಸಲಾಗಿದೆ.

ಗ್ರೂಪ್-ಡಿ ವೃಂದದ ಡಿ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಜವಾನರು ಮತ್ತು ಸ್ವಚ್ಛತಾ ಸಿಬ್ಬಂದಿ ಹುದ್ದೆಗಳನ್ನು ಹೊರ ಮೂಲದಿಂದ ಭರ್ತಿ ಮಾಡಲು ಕಛೇರಿಯ ಪತ್ರ ಸಂಖ್ಯೆ: ಹಿಂವಕನಿ/ಸಿಬ್ಬಂದಿ-4/ಸಿಆರ್-26/2008-09, ದಿನಾಂಕ:11.11.2008ರಲ್ಲಿ ಸೂಚನೆ ನೀಡಿದ್ದು, ಅದರಂತೆ ಜಿಲ್ಲೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಹಾಸನ ಜಿಲ್ಲೆ ಬೇಲೂರಿನಲ್ಲಿ ಮೆಟ್ರಿಕ್ ಪೂರ್ವ 6 ಮತ್ತು ಮೆಟ್ರಿಕ್ ನಂತರದ್ದು 1, ಹೀಗೆ ಒಟ್ಟಾರೆಯಾಗಿ 7 ಹಾಸ್ಟೆಲ್‌ಗಳಿವೆ ಎಂದು ಹೇಳಿದ್ದಾರೆ. ನಾನು ಏಕೆ ಹೇಳುತ್ತೇನೆಂದರೆ, ಬೇಲೂರು ತಾಲ್ಲೂಕಿನಲ್ಲಿ 16 ಪ್ರೌಢ ಶಾಲೆಗಳು ಇದ್ದು ಇಲ್ಲಿಯವರೆಗೆ ಇಲ್ಲಿಗೆ ಕೇವಲ 7 ಹಾಸ್ಟೆಲ್‌ಗಳನ್ನು ಕೊಟ್ಟಿದ್ದಾರೆ. ಅಂದರೆ, ಹಾಸ್ಟೆಲ್‌ಗಳ ಸಂಖ್ಯೆ ಕಡಿಮೆ. ಯಾವ ಶಾಸಕರು ಒತ್ತಡ ಹಾಕುತ್ತಾರೋ ಅಂತಹ ಕಡೆ ಹಾಸ್ಟೆಲ್ಸ್ ಕೊಡುವುದು, ಯಾವ ಶಾಸಕರು ಕೇಳುವುದಿಲ್ಲವೋ ಅಂತಹ ಕಡೆ ಹಾಸ್ಟೆಲ್‌ಗಳು ಇಲ್ಲವೇ ಇಲ್ಲ. ಜಿಲ್ಲೆಯ ಮೂಲಕ ಹಾಸ್ಟೆಲ್ ಬೇಕು ಎಂದು ವರದಿ ಕಳುಹಿಸಿದರೆ ಅದಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ. ಅದಕ್ಕಾಗಿ ನಾನು ಸಮಾಜ ಕಲ್ಯಾಣ ಇಲಾಖೆಯ ಸಚಿವರಲ್ಲಿ ಕೇಳುವುದೇನೆಂದರೆ, ಬೇಲೂರು ನಗರದಲ್ಲಿ ಮೆಟ್ರಿಕ್ ನಂತರದ ಒಂದು ಮಹಿಳಾ ಹಾಸ್ಟೆಲ್ ಇದೆ. ಬಾಯ್ಸ್ ಹಾಸ್ಟೆಲ್ ಇಲ್ಲವೇ ಇಲ್ಲ. ಬೇಲೂರು ತಾಲ್ಲೂಕಿಗೆ ಒಂದು ಬಾಯ್ಸ್ ಹಾಸ್ಟೆಲ್ ಇಲ್ಲವೆಂದರೆ ಹೇಗೆ? ಈ ವಿಚಾರವಾಗಿ ಮಾನ್ಯ ಮಂತ್ರಿಗಳಿಗೆ ಹಿಂದೆಯೂ ಕೂಡ ಎರಡು ಮೂರು ಸಾರಿ ಹೇಳಿದ್ದೇನೆ. ಅದಕ್ಕೆ ಅವರು ಮುಂದಿನ ಸಾರಿ ಕೊಡುತ್ತೇನೆಂದು ಹೇಳಿದ್ದಾರೆ. ಇದರ ಜೊತೆಗೆ ಹಾಸ್ಟೆಲ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾರ್ಡನ್‌ಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮೂರು ನಿಲಯ ಮೇಲ್ವಿಚಾರಕರು ವಿದ್ಯಾರ್ಥಿನಿಲಯದಲ್ಲಿ ಕಾರ್ಯ

ನಿರ್ವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇರುವಂಥ ಏಳು ಹಾಸ್ಟೆಲ್‌ಗಳಲ್ಲಿ ಮೂರು ಜನ ಎಂದರೆ, ಒಬ್ಬೊಬ್ಬರು ಎರಡೆರೆಡು ಹಾಸ್ಟೆಲ್‌ಗಳನ್ನು ನೋಡಿ ಕೊಳ್ಳಬೇಕಾಗುತ್ತದೆ. ಒಂದು ಹಾಸ್ಟೆಲ್ ಬೇರೆ ಹೋಬಳಿಯಲ್ಲಿ ಇದ್ದರೆ ಈ ಹೋಬಳಿಯಿಂದ ಆ ಹೋಬಳಿಗೆ ಹೋಗಿ ಅಲ್ಲಿರುವಂಥ ಹಾಸ್ಟೆಲ್‌ನ್ನು ಒಬ್ಬನೇ ಮೇಲ್ವಿಚಾರಕರು ನೋಡುವುದು ಕಷ್ಟವಾಗುತ್ತದೆ. ಒಬ್ಬಬ್ಬ ಮೇಲ್ವಿಚಾರಕರು ಎರಡೆರಡು ಹಾಸ್ಟೇಲ್‌ಗಳನ್ನು ನೋಡಬೇಕು. 15 ಜನ ಸಿಬ್ಬಂದಿಗಳ ಕೊರತೆ ಇದೆ ಎಂದು ಒಂದು ಕಡೆ ಹೇಳಿದ್ದಾರೆ. ಇದರಲ್ಲಿ ನಿಲಯ ಮೇಲ್ವಿಚಾರಕರು, ನಿಲಯ ಪಾಲಕರು, ಪ್ರಾಂಶುಪಾಲು, ಸಹ ಶಿಕ್ಷರು, ಎಷ್ಟೆಷ್ಟು ಖಾಲಿ ಇದೆ ಎನ್ನುವ ಬಗ್ಗೆ ವಿವರವಾದ ಮಾಹಿತಿ ಕೊಟ್ಟಿದ್ದಾರೆ. ಈ ಸಿಬ್ಬಂದಿಯ ಕೊರತೆಯನ್ನು ಆದಷ್ಟು ಬೇಗ ನೀಗಿಸಬೇಕೆಂದು ಮನವಿ ಮಾಡುತ್ತೇನೆ. ಇನ್ನೊಂದು ಬಹಳ ದೊಡ್ಡದಾದ ವಿಚಾರ ಎಂದರೆ, ಬೇಲೂರು ನಗರದಲ್ಲಿ ನಿರ್ಮಿತಿ ಕೇಂದ್ರದ ಬಗ್ಗೆ ಸನ್ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ. ನಿರ್ಮಿತ ಕೇಂದ್ರದವರು 46 ಲಕ್ಷ ರೂಪಾಯಿ ಅಂದಾಜಿನ ಮೆಟ್ರಿಕ್ ಪೂರ್ವ ಹಾಸ್ಟೆಲ್ ಕಟ್ಟುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದಾರೆ. ಇವರು ವಹಿಸಿಕೊಂಡು ನಾಲ್ಕು ವರ್ಷಗಳಾಗಿವೆ. ಇವರು ಅರ್ಧ ಕಟ್ಟಡ ಕಟ್ಟಿ ಪೂರ್ತಿ ದುಡ್ಡನ್ನು ಡ್ರಾ ಮಾಡಿದ್ದಾರೆ. 23 ಲಕ್ಷ ರೂಪಾಯಿ ವರ್ಕ್ ಆಗಿದ್ದರೆ ಇವರು 46 ಲಕ್ಷ ರೂಪಾಯಿ ಹಣ ತೆಗೆದುಕೊಂಡು ಜಾಗ ಖಾಲಿ ಮಾಡಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ. ಅವರು ಪೂರ್ತಿ ದುಡ್ಡು ಡ್ರಾ ಮಾಡಿ ಅಲ್ಲಿ ಕೇವಲ ಬುನಾದಿ ಮತ್ತು ಗೋಡೆಗಳನ್ನು ಮಾತ್ರ ಕಟ್ಟಿದ್ದಾರೆ. ಅಲ್ಲಿ ಆರ್.ಸಿ.ಸಿ. ಹಾಕಿಲ್ಲ, ಯಾವ ಕೆಲಸವೂ ಪೂರ್ತಿಯಾಗಿಲ್ಲ. ಈಗಾಗಲೇ ಸುಮಾರು ಐದು ವರ್ಷಗಳಾಗಿವೆ. ಹೀಗಾಗಿ ಕಟ್ಟಡ ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರುಗಳು ನಿರ್ಮಿಸಿ ಕೇಂದ್ರಕ್ಕೆ ಕೊಟ್ಟಿರುವ ಬಗ್ಗೆ ಗಮನ ಹರಿಸಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಸುಧಾಕರ: ಮಾನ್ಯ ಸದಸ್ಯರು ನಿರ್ಮಿತ ಕೇಂದ್ರದವರು ಹಾಸ್ಟೆಲ್ ಕಟ್ಟಡವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆಂದು ಹೇಳಿದ್ದಾರೆ. ನಾನು ಈ ಬಗ್ಗೆ ನಾಳೆಯೇ ವರದಿ ತರಿಸಿ, ಸಂಬಂಧಪಟ್ಟ ನಿರ್ಮಿತಿ ಕೇಂದ್ರದವರನ್ನು ಕರೆಸಿ ತಕ್ಷಣ ಅರ್ಧಕ್ಕೆ ನಿಲ್ಲಿಸಿರುವ ಕೆಲಸವನ್ನು ಪ್ರಾರಂಭಿಸುವುದಕ್ಕೆ ಪ್ರಯತ್ನಿಸುತ್ತೇನೆ. ಅದೇ ರೀತಿಯಾಗಿ ಖಾಲಿ ಇರುವ ಹುದ್ದೆಗಳ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಆ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಯಿಂದ ಕಾಲ್ ಮಾಡಿದ್ದು ಬಹುಶಃ ಬರುವ ಜೂನ್ ತಿಂಗಳಲ್ಲಿ ಎಲ್ಲೆಲ್ಲಿ ಖಾಲಿ ಇದೆ, ಅಲ್ಲಿ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರುದ್ರೇಶಗೌಡ ವೈ.ಎನ್:- ಬೇಲೂರು ನಲ್ಲಿ ಇಲ್ಲಿಯವರೆಗೆ ಎರಡು ಲಕ್ಷ ರೂಪಾಯಿಗಳನ್ನು ಈ 7 ಹಾಸ್ಟೆಲ್‌ಗೆ ಬಾಡಿಗೆಯಾಗಿ ಕಟ್ಟುತ್ತಿದ್ದೇವೆ. ದಯವಿಟ್ಟು ತಾವು ಜಾಗ

ಖರೀದಿಸಿ ಹೊಸದಾಗಿ ಹಾಸ್ಟೆಲ್‌ಗಳನ್ನು ಕಟ್ಟಬೇಕು. ಸುಮಾರು ಎಂಟು ಹತ್ತು ವರ್ಷಗಳಿಂದ ಬಾಡಿಗೆಯನ್ನು ಕಟ್ಟುತ್ತಿದ್ದೇವೆ. ಎರಡು ಲಕ್ಷ ರೂಪಾಯಿ ಸರ್ಕಾರದ ಹಣ ಬಾಡಿಗೆಗೆ ಹೋಗುವುದಾದರೆ ಹೇಗೆ? ಜೊತೆಗೆ ಮಕ್ಕಳು ಚಿಕ್ಕದಾದ ಜಾಗದಲ್ಲಿ ಇರುವುದಾದರೂ ಹೇಗೆ? ಹೊಸ ಜಾಗವನ್ನು ದುಡ್ಡು ಕೊಟ್ಟು ಖರೀದಿಸಿ ಹೊಸ ಹಾಸ್ಟೆಲ್ ಕಟ್ಟಡ ಬೇಗ ಕಟ್ಟಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಡಿ.ಸುಧಾಕರ: ಬರುವಂಥ ಆರ್ಥಿಕ ವರ್ಷದಲ್ಲಿ ಅನುದಾನ ಲಭ್ಯತೆ ನೋಡಿಕೊಂಡು ಮಂಜೂರು ಮಾಡಲಾಗುವುದು.

ರಾಜ್ಯದ ವಿವಿಧ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯಕೀಯ ಸಿಬ್ಬಂದಿ ಕೊರತೆ ಬಗ್ಗೆ

9 (17) ಶ್ರೀ/ಶ್ರೀಮತಿ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಶ್ರೀ ಬಿ.ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ರಾಜ್ಯದ ವಿವಿಧ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯಕೀಯ ಸಿಬ್ಬಂದಿಯ ಕೊರತೆ ಎಷ್ಟು (ವಿವರ ನೀಡುವುದು)

ರಾಜ್ಯದ ವಿವಿಧ ಆರೋಗ್ಯ ಕೇಂದ್ರಗಳಲ್ಲಿರುವ 17,800 ವೈದ್ಯಕೀಯ ಸಿಬ್ಬಂದಿಯ ಕೊರತೆಯಿರುತ್ತದೆ (ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ)

ಆ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯಕೀಯ ಹಾಗೂ ಅರೆವೈದ್ಯಕೀಯ ಸಿಬ್ಬಂದಿಯ ಕೊರತೆ ಎಷ್ಟು ಹುದ್ದೆವಾರು ಹಾಗೂ ಆರೋಗ್ಯ ಕೇಂದ್ರವಾರು ವಿವರಣೆ ನೀಡುವುದು)

ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಆರೋಗ್ಯ ಕೇಂದ್ರಗಳಲ್ಲಿ 4 ತಜ್ಞ ವೈದ್ಯರ ಹಾಗೂ 80 ಅರೆವೈದ್ಯಕೀಯ ಸಿಬ್ಬಂದಿಯ ಕೊರತೆ ಇರುತ್ತದೆ. (ಹುದ್ದೆವಾರು ಹಾಗೂ ಆರೋಗ್ಯ ಕೇಂದ್ರವಾರು ವಿವರಣೆಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ)

ಇ 2008ನೇ ಸಾಲಿನಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಎಷ್ಟು ದಿನದಲ್ಲಿ ಈ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ. ತಜ್ಞ ವೈದ್ಯರುಗಳನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇಲಾಖೆಯಲ್ಲಿ ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ

ಪದವಿ ಪಡೆದು ಬಂದ ನಂತರ ತಜ್ಞ ವೈದ್ಯರುಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಸಹ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ /ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ:7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

DEPARTMENT OF HEALTH AND FAMILY WELFARE
STAFF POSITION OF GROUPA,B.C AND D CADRES

ಅನುಬಂಧ – 1

ABSTRACT

SL. NO.	Cadres	PAY SCALE	SANCTIONED		WORKING	VACANT	REMARKS
	GROUP'A'TOTAL		5,432	1,270	6,702	4,708	1,994
	GROUP'B'TOTAL		469	109	578	213	365
	GROUP'C'TOTAL		38,733	5,706	44,439	33,045	11,394
	GROUP'D'TOTAL		9,918	4,047	13,965	9,918	4,047
	GRAND TOTAL		**54,552**	**11,132**	**65,684**	**47,884**	**17,800**

ಅನುಬಂಧ – 2

ಕ್ರ ಸಂ.	ತಾಲ್ಲೂಕು ವಾರು ಸಂಕ್ಯೆಯ ಹೆಸರು	ಉದ್ದೇಶ ಹೆಸರು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರತ ಸಂಖ್ಯೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	ಸಾ.ಆ.ಮಾಗಡಿ	ಡಿ.ಸಿ.ಎಂ.ಬಿ	1	0	1
2		ಮಕ್ಕಳ ತಜ್ಞರು	1	0	1
3		ಶಸ್ತ್ರ ಚಿಕಿತ್ಸರು	1	1	0
4		ನೇತ್ರ ತಜ್ಞರು	1	1	3
5		ಮೂಳೆ ತಜ್ಞರು	1	1	0
6		ರೇಡಿಯೋ ಗೆಸ್ಟ್	1	1	0
7		ದಂತ ವೈದ್ಯರು	2	2	0
8		ಇಎನ್‌ಟಿ ತಜ್ಞರು	1	0	1
9		ಪ್ರಸೂತಿ ತಜ್ಞರು	1	1	0
10		ಜನರಲ್ ಮೆಡಿಸನ್	1	0	1
11		ಅರವಳಿಕೆ ತಜ್ಞರು	1	1	0
12		ಕಛೇರಿ ಅಧೀಕ್ಷಕರು	1	1	0
13		ಪ್ರ.ದ.ಸ	1	0	1
14		ದ್ವಿ.ದ.ಸ	2	1	1
15		ಹಿರಿಯ ಡಿ.ವಿ.	1	1	0
16		ಫಾರ್ಮಸಿಸ್ಟ್	1	1	0
17		ಕ್ಷ–ಕಿರಣ ತಂ	3	2	1
18		ಕಿ.ಪ್ರ.ಶಾ.ತಂ.	1	1	0
19		ನೇತ್ರ ಸಹಾಯಕರು	1	1	0
20		ವಾಹನೆ	2	1	1

		ಚಾಲಕರು			
21		ಹಿ.ಮ.ಆ.ಸ	1	0	1
22		ಶೂಶ್ರುಷದಾದಿ	15	4	11
23		ಕಿ.ಮ.ಆ.ಸ	2	2	0
24		ಗ್ರೂಪ್.ಡಿ	29	6	23
		ಒಟ್ಟು	**72**	**29**	**43**
1	ತಾಲ್ಲೂಕು ಕಛೇರಿ ಮಾಗಡಿ	ತಾಲ್ಲೂಕು ಆರೋಗ್ಯಾಧಿಕಾರಿ	1	0	1
2	ತಾಲ್ಲೂಕು ಕಛೇರಿ ಮಾಗಡಿ	ಪ್ರ.ದ.ಸ	1	0	1
3	ತಾಕಛೇರಿ ಮಾಗಡಿ	ಹಿ.ಮ.ಅ.ಸ	1	0	1
4	ತಾಆಅ. ಮಾಗಡಿ	ಕಿ.ವೈ.ಮಲ್ವಿಚಾರಕರು	1	0	1
5	ತಾ.ಆ.ಅ. ಮಾಗಡಿ	ಹಿ.ಮ.ಅ.ಸ	1	0	1
6	ತಾಆಅ ಮಾಗಡಿ	ಸಿ.ಸಿ.ಟಿ	1	0	1
7	ತಾಆಅರ ಮಾಗಡಿ	ವಾ.ಚಾಲಕರು	1	0	1
8	ತಾಆಅ ಕಛೇರಿ	ಗ್ರೂಪ್.ಡಿ	1	1	0
		ಒಟ್ಟು	**8**	**1**	**7**
1	ಪ್ರಾ.ಆ.ಕೇ ಸಂಕೀಘಟ್ಟ	ಸಾಕವ್ಯೆ	1	1	0
2		ಶುಶ್ರೂಷದಾದಿ	1	0	1
3		ಪ್ರ.ದ.ಸ	1	0	1
4		ಫಾರ್ಮಸಿಸ್ಟ್	1	1	0
5		ಕಿ.ಪ್ರ.ಶಾ.ತಂ.	1	0	1
6		ನೇತ್ರ ಸಹಾಯಕರು	1	1	0
7		ಹಿ.ಮ.ಅ.ಸ	1	1	0

8		ಹಿ.ಮ.ಅ.ಸ	1	1	0
9		ಕಿ.ಮ.ಅ.ಸ	7	4	3
10		ಕಿ.ಮ.ಅ.ಸ	3	2	1
11		ಗ್ರೂಪ್.ಡಿ	1	1	0
		ಒಟ್ಟು	**19**	**12**	**7**
1	ಪ್ರಾ.ಆ.ಕು. ಎ.ಜಿ.ದೊಡ್ಡಿ	ಸಾಕವ್ಯೆ	1	1	0
2		ಪ್ರ.ದಸ	1	1	0
3		ಶುಶ್ರೂಷದಾದಿ	1	0	1
4		ಕ್ಷೇ. ಆ. ಶಿ	1	1	0
5		ಹಿ.ಪು.ಆ.ಸ	1	0	1
6		ಫಾರ್ಮಸಿಸ್ಟ್	1	1	0
7		ಕಿ.ಪ್ರ.ಶಾ.ತಂ.	1	1	0
8		ಕಿ.ಪು.ಆ.ಸ	8	8	0
9		ಕಿ.ಮ.ಆ.ಸ	10	7	9
10		ಗ್ರೂಪ್.ಡಿ	2	2	0
		ಒಟ್ಟು	**27**	**22**	**5**
1	ಪ್ರಾ.ಆ.ಕೇ ಕುದೂರು	ಸಾಕವ್ಯೆ	2	2	0
2		ಶುಶ್ರೂದಾದಿ	2	2	0
3		ಹಿ.ಪು.ಅ.ಸ	1	0	1
4		ಹಿ.ಮ.ಆ.ಸ	1	1	0
5		ಫಾರ್ಮಸಿಸ್ಟ್	1	1	0
6		ಕಿ.ಪ್ರ.ಶಾ.ತಂ.	1	1	0
7		ನೇತ್ರ ಸಹಾಯಕರು	1	1	0
8		ಕಿ.ಮ.ಆ.ಸ	5	5	0
9		ಕಿ.ಪು.ಆ.ಸ	3	3	0
10		ಸಿ.ಸಿ.ಟಿ	1	1	0
11		ವಾ.ಚಾಲಕರು	1	1	0
12		ಗ್ರೂಪ್.ಡಿ	3	3	0

		ಒಟ್ಟು	22	21	1
1	ಪ್ರಾ.ಆ.ಕೇ.ಚಕ್ರಬಾವಿ	ಸಾಕವ್ಯೆ	1	1	0
2		ಶೂಶ್ರುಷದಾದಿ	1	0	1
3		ಹಿ.ಪು.ಅ.ಸ	1	1	0
4		ಹಿ.ಮ.ಆ.ಸ	1	1	0
5		ಪ್ರ.ದ.ಸ	1	1	0
6		ಫಾರ್ಮಸಿಸ್ಟ್	1	1	0
7		ಕಿ.ಪ್ರ. ಶಾ.ಶಂ.	1	1	0
8		ಕಿ.ಪು.ಆ.ಸ	5	5	0
9		ಕಿ.ಮ.ಆ.ಸ	7	8	2
10	.	ಗ್ರೂಪ್.ಡಿ	3	2	1
		ಒಟ್ಟು	. 22	18	4
1	ಪ್ರಾ.ಆ.ಕೇ. ಬಾಣವಾಡಿ	ಸಾಕವ್ಯೆ	1	1	0
5		ಹಿ.ಮ.ಆ.ಸ	1	0	1
2		ಪ್ರ.ದ.ಸ	1	0	1
3		ಫಾರ್ಮಸಿಸ್ಟ್	1	1	0
4		ಕಿ.ಪ್ರ.ಶಾ.ತಂ.	1	1	0
7		ಕಿ.ಮ.ಆ.ಸ	6	8	0
8		ಕಿ.ಪು.ಆ.ಸ	2	2	0
6		ಗ್ರೂಪ್.ಡಿ	1	1	0
		ಒಟ್ಟು .	14	12	2
1	ಪ್ರಾ.ಆ.ಕೇ.ಮರೂರು	ಸಾಕವ್ಯೆ	1	1	0
2		ಫಾರ್ಮಸಿಸ್ಟ್	1	1	0
3		ಕಿ.ಮ.ಆ.ಸ	2	2	0
4		ಗ್ರೂಪ್.ಡಿ	2	2	0
		ಒಟ್ಟು	6	6	0
1	ಪ್ರಾ.ಆ.ಕೇ. ಮಣೀಗಾನಹಳ್ಳಿ	ಸಾಕವ್ಯೆ	1	1	0
2		ಹಿ.ಪು.ಅ.ಸ	1	0	1

3		ಕ್ಷೇ.ಆ.ಶಿ	1	1	0
4		ಫಾರ್ಮಸಿಸ್ಟ್	1	1	0
5		ಕಿ.ಪ್ರ.ಶಾ.ತಂ.	1	1	0
6		ಪ್ರ.ದ.ಸ	1	0	1
7		ಕಿ.ಮ.ಅ.ಸ	5	5	0
8		ಕಿ.ಪು.ಅ.ಸ	4	4	0
9		ಗ್ರೂಪ್.ಡಿ	1	1	0
1	ಪ್ರಾಆಕೇ ಗೆಜ್ಜಗಾರಗುಪ್ಪೆ	ಸಾಕವೈ	1	1	0
2		ಫಾರ್ಮಸಿಸ್ಟ್	1	1	0
3		ಕಿ.ಮ.ಅ.ಸ	3	1	2
4		ಕಿ.ಮ.ಆ.ಸ	2	2	0
5		ಗ್ರೂಪ್.ಡಿ	3	3.	0
		ಒಟ್ಟು	**26**	**22**	**4**
1	ಪ್ರಾ.ಆ.ಕೇ. ತಗ್ಗೀಕುಪ್ಪೆ	ಸಾಕವೈ	1	1	0
2		ಪ್ರ.ದ.ಸ	1	0	1
3		ಕಿ.ಪ್ರ.ಶಾ.ತಂ.	1	1	0
4		ಫಾರ್ಮಸಿಸ್ಟ್	1	1	0
5		ಕಿ.ಮ.ಅ.ಸ	4	4	0
6		ಕಿ.ಪು.ಅ.ಸ	4	4	0
7		ಗ್ರೂಪ್.ಡಿ	1	1	0
		ಒಟ್ಟು	**13**	**12**	**1**
1	ಪ್ರಾ.ಆ.ಕೇ. ಗುಡೇಮಾರನಹಳ್ಳಿ	ಸಾಕವೈ	1	1	0
2		ಫಾರ್ಮಸಿಸ್ಟ್	1	1	0
3		ಕಿ.ಪು.ಆ.ಸ	2	2	0
4		ಕಿ.ಮ.ಆ.ಸ	4	4	0
5		ಗ್ರೂಪ್.ಡಿ	2	2	0
		ಒಟ್ಟು	**10**	**10**	**0**
1	ತಿಪ್ಪಸಂದ್ರ	ಸಾಕವೈ	1	1	0
2		ಫಾರ್ಮಸಿಸ್ಟ್	1	0	1

3		ಸಿ.ಸಿ.ಟಿ	1	0	1
4		ಕಿ.ಪ್ರ.ಶಾ.ತಂ.	1	1	0
5		ಕಿ.ಪು.ಆ.ಸ	1	1	0
6		ಗ್ರೂಪ್.ಡಿ	1	1	0
		ಒಟ್ಟು	**6**	**4**	**2**
1	ಪ್ರಾ.ಆ.ಕೇಸೋಲೂರು	ಸಾಕವೈ	1	1	0
2		ಶುಶ್ರೂಷದಾದಿ	1	1	0
3		ಪ್ರ.ದ.ಸ	1	0	1
		ದ್ವಿದ.ಸ	1	1	0
4		ಫಾರ್ಮಸಿಸ್ಟ್	1	1	0
5		ಕಿ.ಪ್ರ.ಶಾ.ತಂ.	1	1	0
6		ನೇತ್ರ ಸಹಾಯಕರು	1	1	0
7		ಹಿ.ಪು.ಆ.ಸ	1	1	0
8		ಹಿ.ಮ.ಆ.ಸ	1	1	0
9		ಕಿ.ಮ.ಆ.ಸ	5	5	0
10		ಕಿ.ಪು.ಅ.ಸ	3	3	0
11		ವಾಹನ ಚಾಲಕ	1	0	1
12		ಗ್ರೂಪ್.ಡಿ	3	1	2
		ಒಟ್ಟು	**21**	**17**	**4**
		All Total	266	186	80

ಅಜ್ಜನಹಳ್ಳಿ ಹಾಗೂ ಹೊಸಪಾಳ್ಯ ಹೊಸದಾಗಿ ಪ್ರಾಆಕೇಂದ್ರ ಮಂಜೂರಾಗಿದ್ದು ಸರ್ಕಾರದ ಷರತ್ತುಗಳನ್ನೂ ಪೂರೈಸಿರುವುದಿಲ್ಲ

2–30 PM

ನನ್ನ ಕ್ಷೇತ್ರದ ವ್ಯಾಪ್ತಿಯ ಆರೋಗ್ಯ ಕೇಂದ್ರಗಳಲ್ಲಿ 4 ತಜ್ಞ ವೈದ್ಯರು ಹಾಗೂ 80 ಅರೆವೈದ್ಯಕೀಯ ಸಿಬ್ಬಂದಿಗಳು ಖಾಲಿ ಇದೆ ಎನ್ನುವ ಉತರವನ್ನು ಕೊಟ್ಟಿದ್ದಾರೆ. ತಜ್ಞ ವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ನಿವೃತ್ತ ತಜ್ಞ ವೈದ್ಯರುಗಳನ್ನು ಸಂದರ್ಶಕ ತಜ್ಞ ವೈದ್ಯರುಗಳನ್ನಾಗಿ ಜಿಲ್ಲಾ ಜಿಲ್ಲಾಧಿಕಾರಿಗಳ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಇದರ ಜೊತೆಗೆ ಬಾಕಿ ಇರುವ ಅರೆವೈದ್ಯಕೀಯ ಹುದ್ದೆಗಳನ್ನು ಸ್ವಲ್ಪ ದಿವಸಗಳಲ್ಲಿ ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡುತ್ತೇವೆಂದು ಹೇಳಿದ್ದೀರಿ ಇದು ಸ್ವಾಗತಾರ್ಹ. ನೀವು ನಿವೃತ್ತ ತಜ್ಞ ವೈದ್ಯರಗಳನ್ನು ನೇಮಕ ಮಾಡುವುದಾದರೆ ಅವರು ನಗರ ಪ್ರದೇಶಗಳಲ್ಲಿ ಮಾತ್ರ ಸಿಗುತ್ತಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಇವರು ಸಿಗುವುದಿಲ್ಲ. ಇದಕ್ಕೆ ತಾವು ಸ್ಪಷ್ಟವಾಗಿ ಯಾವ ರೀತಿ ನೇಮಕ ಮಾಡುತ್ತೀರಿ ಎನ್ನುವುದರ ಬಗ್ಗೆ ನಮಗೆ ಉತ್ತರವನ್ನು ಕೊಡಬೇಕು. ಜೊತೆಗೆ ಅದು ಟೈಂ ಬಾಂಡ್ ಪ್ರೋಗ್ರಾಂ ಆಗಬೇಕು. ಸದನದಲ್ಲಿ ನಮ್ಮ ಉಪ ನಾಯಕರು ಈಗಾಗಲೇ ಹೇಳಿದರು. ಸರಿಯಾದ ಸಂಬಳ ಕೊಡದೇ ಹೋದರೆ ಹಳ್ಳಿಯಲ್ಲಿ ಯಾರೂ ಕೂಡ ವೈದ್ಯರು ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ತಾವು ಗಮನಹರಿಸಬೇಕು. ಜೊತೆಗೆ ಖಾಲಿ ಇರುವ ಹುದ್ದೆಗಳನ್ನು ಎಷ್ಟು ದಿವಸದಲ್ಲಿ ನೇಮಕಾತಿ ಮಾಡುತ್ತೀರಿ? ನೇಮಕಾತಿ ಮಾಡಿದ ಮೇಲೆ ಅವರಿಗೆ ಅಲ್ಲಿಯೇ ಕೆಲಸ ಮಾಡಬೇಕೆಂದು ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು. ಅವರು ಅಲ್ಲಿಗೆ ಬಂದು ಡ್ಯೂಟಿ ರಿಪೋರ್ಟ್ ಮಾಡಿಕೊಂಡು ರಜೆ ಹಾಕಿ ಹೋಗುತ್ತಾರೆ. ಇದು ತಪ್ಪ ಬೇಕಾದರೆ ತಾವು ದಯಮಾಡಿ ಆ ಕೆಲಸವನ್ನು ಮಾಡಬೇಕು. ಕಳೆದ ಬಾರಿ ಮಂಜೂರಾಗಿರುವ ಹೊಸ ಆಸ್ಪತ್ರೆಗಳಿಗೆ ಸರ್ಕಾರದ ಷರತ್ತುಗಳನ್ನು ಪೂರೈಸಿರುವುದಿಲ್ಲವೆಂದು ಇಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಸರ್ಕಾರದ ಷರತ್ತು ಏನೆಂದರೆ, ಆಸ್ಪತ್ರೆಗೆ ಜಾಗ ಕೊಡತಕ್ಕಂಥದ್ದು ಮತ್ತು ಕಾಂಟ್ರಿಬ್ಯೂಷನ್ ಬಗ್ಗೆ ಇದೆ. ಶಾಸಕರ ನಿಧಿಯಿಂದ ಕಾಂಟ್ರಿಬ್ಯೂಷನ್ ಮಾಡಲು ಅನುಮತಿ ನೀಡುತ್ತೇವೆಂದು ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದರು. ಆದ್ದರಿಂದ, ಇದು ಏನಾಗಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಜಾಗ ಕೊಡುವುದರ ಬಗ್ಗೆ ನಾನು ಹೇಳುವುದೇನೆಂದರೆ, ಬಹಳ ಹಿಂದುಳಿದ ಪ್ರದೇಶಗಳಿಗೆ ನಾವು ಆಸ್ಪತ್ರೆಯನ್ನು ಕೊಡುತ್ತೇವೆ. ಆದರೆ, ಇಂಥ ಕಡೆ ರೈತರು ಅರ್ಧ ಅಥವಾ ಒಂದು ಎಕರೆ ಜಮೀನನ್ನು ಇಟ್ಟುಕೊಂಡಿರುತ್ತಾರೆ. ಇವತ್ತು ನಮ್ಮ ರಾಮನಗರ ಜಿಲ್ಲೆಯಲ್ಲಿ ಒಂದು ಎಕರೆ ಜಮೀನಿನ ಬೆಲೆ ಸುಮಾರು 15 ರಿಂದ 20 ಲಕ್ಷ ರೂಪಾಯಿ ಇದೆ. ಆದ್ದರಿಂದ, ಜಾಗ ಕೊಡುವುದಕ್ಕೆ ಯಾರೂ ಕೂಡ ಮುಂದೆ ಬರುವುದಿಲ್ಲ. ಆದ್ದರಿಂದ, ಸರ್ಕಾರ ದಯಮಾಡಿ ಭೂಸ್ವಾಧೀನ ಮಾಡುವಂಥ ಕೆಲಸ

ಮಾಡಬೇಕಾಗುತ್ತದೆ. ಆದರೆ, ಇದೇ ಒಂದು ಕಾರಣ ಕೊಟ್ಟು ಅದನ್ನು ಶಿಫ್ಟ್ ಮಾಡುವುದಕ್ಕೆ ಹೋದರೆ ಆ ಭಾಗದ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ದಯಮಾಡಿ ಸರಿಯಾದ ಉತ್ತರವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ವಿಸ್ತಾರವಾಗಿ ಹೇಳಿದಂತೆ ನಮಗೆ ತಜ್ಞ ವೈದ್ಯರು ಹಾಗೂ ವೈದ್ಯರ ಕೊರತೆ ಎಲ್ಲಾ ಕಡೆ ಇದೆ. ಈ ಹುದ್ದೆಗಳನ್ನು ತುಂಬಿಕೊಳ್ಳುವಂಥ ಪ್ರಕ್ರಿಯೆಗಳನ್ನು ಮಾಡುತ್ತಿದ್ದೇವೆಂದು ಈಗಾಗಲೇ ನಾನು ಹೇಳಿದ್ದೇನೆ. ಆದರೆ, ತಾವು ಹೇಳಿದಂತೆ ಗ್ರಾಮೀಣ ಪ್ರದೇಶದಲ್ಲಿ ನಿವೃತ್ತರಾದಂಥ ವೈದ್ಯರು ಸಿಗುವುದು ಕಷ್ಟವಿದೆ. ತಜ್ಞ ವೈದ್ಯರ ಕೊರತೆಯಾಗಬಾರದೆಂಬ ದೃಷ್ಟಿಯಿಂದ ನಿವೃತ್ತ ತಜ್ಞ ವೈದ್ಯರಿಗೆ ಒಂದು ತಿಂಗಳಿಗೆ 50 ಸಾವಿರ ರೂಪಾಯಿವರೆಗೆ ಸಂಬಳ ಕೊಟ್ಟು ಅವರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳ ಮೂಲಕ ಪ್ರಯತ್ನ ನಡೆಯುತ್ತಿದೆ. ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಳ್ಳುವುದಕ್ಕೆ ಈ ರೀತಿಯಾದ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಬೇರೆ ಬೇರೆ ಸಿಬ್ಬಂದಿಗಳ ಬಗ್ಗೆ ತಾವು ಹೇಳಿದ್ದೀರಿ. ಈಗಾಗಲೇ ಹೇಳಿರುವಂತೆ 5200 ಸಿಬ್ಬಂದಿಗಳನ್ನು ತುಂಬಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆಂದು ಬೇರೆ ಬೇರೆ ಸಂದರ್ಭದಲ್ಲಿ ನಾನು ಉತ್ತರ ಕೊಡುವಂಥ ವೇಳೆಯಲ್ಲಿ ಹೇಳಿದ್ದೇನೆ. ಇನ್ನು 3 ತಿಂಗಳಲ್ಲಿ ಈ ಎಲ್ಲಾ ಹುದ್ದೆಗಳನ್ನು ತುಂಬುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ತಮ್ಮ ಮಾಗಡಿ ಕ್ಷೇತ್ರದಲ್ಲಿ 4 ತಜ್ಞ ವೈದ್ಯರು ಮತ್ತು 80 ಅರೆವೈದ್ಯಕೀಯ ಸಿಬ್ಬಂದಿಗಳ ಕೊರತೆ ಇದೆ. ಆದ್ದರಿಂದ, 4 ತಜ್ಞ ವೈದ್ಯರು ಮತ್ತು 80 ಅರೆವೈದ್ಯಕೀಯ ಸಿಬ್ಬಂದಿಗಳನ್ನು ಆದ್ಯತೆ ಮೇಲೆ ತುಂಬುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಈಗಾಗಲೇ ಹೇಳಿದಂತೆ 5221 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. 23ನೇ ತಾರೀಖಿನಿಂದ ನೇಮಕಾತಿ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಅರ್ಜಿಗಳನ್ನು ಆಹ್ವಾನ ಮಾಡುತ್ತೇವೆ. ಹಣ ಮತ್ತು ಭೂಮಿಯ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಕೇಳಿದರು. ನಮಗೆಲ್ಲಾ ಗೊತ್ತಿರುವಂತೆ 53 ಗ್ರಾಮಗಳಲ್ಲಿ ಈ ರೀತಿಯಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭ ಮಾಡುವುದಕ್ಕೆ 1 ಲಕ್ಷ ರೂಪಾಯಿ ಮತ್ತು ಎರಡು ಎಕರೆ ಭೂಮಿಯನ್ನು ಕೊಟ್ಟರು. ಮತ್ತೆ 53 ಗ್ರಾಮಗಳಲ್ಲಿ ಜಮೀನನ್ನು ಕೊಟ್ಟಿದ್ದಾರೆ. ಆದರೆ, ಇನ್ನು 94 ಆಸ್ಪತ್ರೆಗಳಿಗೆ 1

ಲಕ್ಷ ರೂಪಾಯಿ ಮತ್ತು ಜಮೀನನ್ನು ಸಹ ಕೊಟ್ಟಿಲ್ಲ. ಆದ್ದರಿಂದ, ಇವುಗಳಿಗೆ ಶಾಸಕರ ನಿಧಿಯಿಂದ ಜಮೀನನ್ನು ತೆಗೆದುಕೊಂಡು ಅದಕ್ಕೆ ಒಂದು ಲಕ್ಷ ರೂಪಾಯಿ ವಂತಿಗೆಯನ್ನು ಕೊಟ್ಟು ಅಲ್ಲಿ ಆಸ್ಪತ್ರೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದಲ್ಲಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:- ಕೆಲವು ಕಡೆ ಜಾಗ ಸಿಗುವುದಿಲ್ಲ. ಆದ್ದರಿಂದ, ಅಂಥ ಕಡೆ ಸರ್ಕಾರ ಭೂಮಿಯನ್ನು ಸ್ವಾಧೀನ ಮಾಡುವಂಥ ಕೆಲಸ ಮಾಡಬೇಕು. ದಯಮಾಡಿ ಇದರ ಬಗ್ಗೆ ಉತ್ತರ ಕೊಡಬೇಕು. ಇವತ್ತಿನ ದಿವಸ ಇದೇ ಒಂದು ಕಾರಣ ಕೊಟ್ಟು ಅಲ್ಲಿರತಕ್ಕಂಥ ಆಸ್ಪತ್ರೆಯನ್ನು ಸ್ಥಳಾಂತರ ಮಾಡಿದರೆ ಆ ಭಾಗದ ಜನರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಆದ್ದರಿಂದ, ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು. ಈಗ ಕೊಟ್ಟಿರುವ ಆಸ್ಪತ್ರೆಗಳನ್ನು ಅಲ್ಲಿಯೇ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಶಾಸಕರ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಬಗ್ಗೆ.

10 (37) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)

ಶ್ರೀ ಬಿ.ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಿರುವ ಔಷಧಿಗಳು ಸರಬರಾಜಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಿರುವ ಔಷಧಿಗಳನ್ನು ಆಯಾ ಆಸ್ಪತ್ರೆಗಳ ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾಡಲಾಗುತ್ತಿದೆ.

ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ ವಾರ್ಷಿಕ ಕ್ರಮವಾಗಿ ರೂ.75,000/-, ರೂ. 1,50,000/-, ರೂ. 2,00,000/- ಹಾಗೂ ರೂ. 5,00,000/- ಗಳನ್ನು ಮುಕ್ತ ನಿಧಿ /ನಿರ್ವಹಣೆ ವೆಚ್ಚಕ್ಕಾಗಿ ಅನುದಾನ

ನೀಡಲಾಗುತ್ತಿದೆ. ಸದರಿ ನಿಧಿ /ನಿರ್ವಹಣಾ ವೆಚ್ಚದಿಂದ ಕೊರತೆ ಬರುವ ಅವಶ್ಯಕ ಔಷಧಿಗಳನ್ನು ಸಹ ಆರೋಗ್ಯ ರಕ್ಷಾ ಸಮಿತಿ ಅನುಮೋದನೆ ಪಡೆದು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

ಆ ಸರಬರಾಜಾಗುತ್ತಿರುವ ಕೆಲವೇ ಔಷಧಿಗಳಲ್ಲಿ ಗುಣಮಟ್ಟವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಸರಬರಾಜು ಆಗುತ್ತಿರುವ ಕೆಲವೊಂದು ಔಷಧಿಗಳಲ್ಲಿ ಗುಣಮಟ್ಟವಿಲ್ಲದಿರುವುದ ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ ದರಗುತ್ತಿಗೆದಾರರ ವಿರುದ್ಧ ಔಷಧಿ ಹಾಗೂ ಕಾಂತಿವರ್ಧಕ ನಿಯಮಾನುಸಾರ ಔಷಧಿ ನಿಯಂತ್ರಕರು ಕಾನೂನು ಕ್ರಮ ಜರುಗಿಸುತ್ತಿದ್ದಾರೆ ಹಾಗೂ ನಿಯಮಾನುಸಾರ ಬದಲಿ ಪೂರೈಕೆ ಪಡೆಯಲು ಹಾಗೂ ಸದರಿ ಸಂಸ್ಥೆ ಔಷಧಿಗಳನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ ಗ್ರಾಮೀಣ ಪ್ರದೇಶದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧಿಗಳನ್ನು ನೀಡದೇ ಹೊರಗಡೆ ಕೊಂಡುಕೊಳ್ಳಲು ವೈದ್ಯರು ಚೀಟಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಅಂತಹ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯರು ಹೊರಗಡೆ ಔಷಧಿ ಕೊಂಡುಕೊಳ್ಳಲು ಚೀಟಿ ಬರೆಯುವುದನ್ನು ನಿಷೇಧಿಸಲಾಗಿದೆ. ಹಾಗೂ ಆಸ್ಪತ್ರೆಯಲ್ಲಿ ದಾಸ್ತಾನು ಇರುವ ಔಷಧಿಗಳನ್ನು ಆಸ್ಪತ್ರೆಯ ಮುಂಭಾಗದ ನಾಮಫಲಕದಲ್ಲಿ ಔಷಧಿಗಳ ಲಭ್ಯತೆಯನ್ನು ನಮೂದಿಸಲಾಗಿರುತ್ತದೆ. ಯಾವುದಾದರೂ ಔಷಧಿಯು ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಪಕ್ಷದಲ್ಲಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಯವರಿಂದ ಒಪ್ಪಿಗೆ ಪಡೆದು ಆರೋಗ್ಯ ರಕ್ಷಾ ಸಮಿತಿಯ ಬಳಕೆದಾರರ ನಿಧಿ (Users fund) ನಲ್ಲಿ ಖರೀದಿಸಲಾಗುತ್ತಿದೆ.

ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಸದಸ್ಯರು ಈ ವಿಚಾರದ ಬಗ್ಗೆ ಮಾತನಾಡಿದ್ದಾರೆ. ಹುಚ್ಚುನಾಯಿ ಮತ್ತು ನಾಯಿ ಕಡಿತಕ್ಕೆ ನೀಡುವ ಔಷಧಿಗೆ ತೀವ್ರತರವಾದ ಅಭಾವ ಉಂಟಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಸದರಿ ಔಷಧಿಯ ಅಭಾವ ಉಂಟಾಗಿದೆ. ಸಾಮಾನ್ಯ ಜನರು ಈ ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ವಿಷಯವಾಗಿದೆ. ಇಮ್ಯೋ ಲಾಜಿಕಲ್ ಎನ್ನುವ ಒಂದು ಔಷಧಿಗೆ 197 ರೂಪಾಯಿ

ಕೊಟ್ಟರೆ ಕೊಡುತ್ತಾರೆ. ಬೇರೆ ಬೇರೆ ಕಂಪನಿಗಳು ತಯಾರು ಮಾಡುವ ಈ ಔಷಧಿಯನ್ನು 370 ರಿಂದ 400 ರೂಪಾಯಿಗೆ ಮಾರಾಟ ಮಾಡುತ್ತಾರೆ. 197 ರೂಪಾಯಿ ತೆಗೆದುಕೊಳ್ಳುವ ಈ ಔಷಧಿ ಸರ್ಕಾರದಿಂದ ಸರಬರಾಜು ಆಗುತ್ತದೆ. ತಾವು ಈಗ ರಕ್ಷಾ ಸಮಿತಿಯನ್ನು ರಚನೆ ಮಾಡಿದ್ದೀರಿ. ಒಂದು ದಿನಕ್ಕೆ 2 ವಯಲ್ ಔಷಧಿ ಬೇಕೆಂಬ ಬೇಡಿಕೆಯನ್ನು ನಾವು ಅಲ್ಲಿಗೆ ಹೋಗಿ ಸಭೆ ಮಾಡಿದಂಥ ಸಂದರ್ಭದಲ್ಲಿ ಡಾಕ್ಟರ್‌ರವರು ನಮಗೆ ಹೇಳಿದ್ದಾರೆ. ಆದರೆ, ಸರ್ಕಾರದಿಂದ ತಿಂಗಳಿಗೆ 2 ವಯಲ್‌ನ್ನು ಸರಬರಾಜು ಮಾಡುವುದಾದರೆ ಇದು ಎಷ್ಟರಮಟ್ಟಿಗೆ ಸಾಕಾಗುತ್ತದೆ? ಒಂದು ಕಂಪನಿ 197 ರೂಪಾಯಿಗೆ ಸರಬರಾಜು ಮಾಡುವಾಗ ಬೇರೆ ಕಂಪನಿಗಳು 400 ರೂಪಾಯಿಗೆ ಏಕೆ ಮಾರಾಟ ಮಾಡುತ್ತಿವೆ? ಈ ಕಂಪನಿಗಳು ತಯಾರು ಮಾಡುತ್ತಿರುವ ಔಷಧಿಯಲ್ಲಿರತಕ್ಕಂಥ ವ್ಯತ್ಯಾಸವಾದರು ಏನು? ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಈ ಔಷಧಿಗಳು ಮಾರುಕಟ್ಟೆಯಲ್ಲಿ ಜನರಲ್ ಆಗಿ ಕಡಿಮೆ ದರದಲ್ಲಿ ಎಲ್ಲರಿಗೂ ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕು. ಆದ್ದರಿಂದ, ಸದರಿ ಔಷಧಿಯ ದರವನ್ನು ಕಡಿಮೆ ಮಾಡುವ ಬಗ್ಗೆ ಮಾನ್ಯ ಸಚಿವರು ಗಮನಹರಿಸಿ ಇದರ ಬಗ್ಗೆ ಉತ್ತರ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ತಾಲ್ಲೂಕು ಕೇಂದ್ರಗಳಿಗೆ ವರ್ಷದಲ್ಲಿ 10 ಲಕ್ಷ ರೂಪಾಯಿಗಳಷ್ಟು ಔಷಧಿಯನ್ನು ಕೊಡುತ್ತಾರೆ. ಆದರೆ, ಈ 10 ಲಕ್ಷ ರೂಪಾಯಿಗಳ ಔಷಧಿಯನ್ನು ಯಾವ ಮಾನದಂಡದ ಮೇಲೆ ಕೊಡುತ್ತಿದ್ದೀರಿ? ಜನಸಂಖ್ಯೆಯ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ 50 ಪೈಸೆ ನಿಗದಿ ಮಾಡಿ ಆ ಪ್ರಕಾರ ಔಷಧಿಯನ್ನು ಕಳುಹಿಸಿಕೊಡುತ್ತಿದ್ದಾರೆಂದು ಡಾಕ್ಟರ್‌ರವರು ಹೇಳುತ್ತಿದ್ದಾರೆ. ಈಗ ಜನಸಂಖ್ಯೆ ಹೆಚ್ಚಳವಾಗಿದೆ. ಆದ್ದರಿಂದ, ಇದನ್ನು ಮತ್ತೆ ರಿವೈಸ್ ಮಾಡಬೇಕಾಗುತ್ತದೆ. ನೀವು ಕೊಡುವ 10 ಲಕ್ಷ ರೂಪಾಯಿ ಔಷಧಿಗಳು ಸುಮಾರು 3 ರಿಂದ 4 ತಿಂಗಳಲ್ಲಿ ಮುಗಿದು ಹೋಗುತ್ತದೆ. ನಾಲ್ಕು ತಿಂಗಳಲ್ಲಿ ಔಷಧಿ ಮುಗಿದು ಹೋದ ಮೇಲೆ ಔಷಧಿಯನ್ನು ರಕ್ಷಾ ಸಮಿತಿಯವರು ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಆದರೆ, ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಅಲ್ಲಿ ಹಣ ಎಲ್ಲಿದೆ? ನೀವು ಹೇಳುವ ಪ್ರಕಾರ ರಕ್ಷಾ ಸಮಿತಿ ಔಷಧಿಯನ್ನು ಖರೀದಿ ಮಾಡಿದರೆ ಅವರಲ್ಲಿರುವ ಹಣ ಒಂದು ತಿಂಗಳಿಗೆ ಸಾಕಾಗುವುದಿಲ್ಲ. ಮತ್ತೆ ಅಲ್ಲಿ ಆಗುವಂಥ ಪ್ರತಿಯೊಂದು ವೆಚ್ಚಗಳಿಗೆ ಹಣ ಸಾಕಾಗುವುದಿಲ್ಲ. ಆದ್ದರಿಂದ, ನಿಗದಿ ಮಾಡಿರುವ 10 ಲಕ್ಷ ರೂಪಾಯಿ ಹಣವನ್ನು ದಯಮಾಡಿ ಹೆಚ್ಚು ಮಾಡಬೇಕೆಂಬ ಸಲಹೆಯನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮತ್ತೆ ಅರಸೀಕೆರೆಯಲ್ಲಿ 150 ಹಾಸಿಗೆಯ ಆಸ್ಪತ್ರೆಗೆ ಮಂಜೂರಾತಿ ಕೊಟ್ಟಿದ್ದೀರಿ. ಆದರೆ, 100 ಹಾಸಿಗೆ ಆಸ್ಪತ್ರೆಗೆ ಏನು ಸವಲತ್ತುಗಳನ್ನು

ಕೊಡಲಾಗುತ್ತಿತ್ತೋ ಅದನ್ನೆ ಇವತ್ತಿಗೂ ಕೂಡ ಇಲ್ಲಿಗೆ ಕೊಡುತ್ತಿದ್ದೀರಿ. ಡಾಕ್ಟರ್‌ಗಳನ್ನು ಕೊಡುವಂಥದ್ದರಿಂದ ಹಿಡಿದು ಔಷಧಿಗಳನ್ನು ಸರಬರಾಜು ಮಾಡುವುದರಿಂದ ಯಾವುದೇ ಮೂಲಭೂತವಾದಂಥ ಸೌಲಭ್ಯಗಳನ್ನು ಕೊಡುವಂಥದ್ದರಲ್ಲಿ ಏನಾಗಿದೆ ಎಂದರೆ ಇವತ್ತಿನದಿವಸ 100 ಹಾಸಿಗೆ ಆಸ್ಪತ್ರೆಗೆ ಏನು ಮೂಲಭೂತಸೌಲಭ್ಯಗಳನ್ನು ಕೊಡಲಾಗುತ್ತದೆಯೋ ಅದನ್ನೆ ಇಲ್ಲಿಯೂ ಕೊಡುತ್ತಿದ್ದೀರಿ. ಈ ಸದನದಲ್ಲಿ ಮಾನ್ಯ ಆರೋಗ್ಯ ಸಚಿವರು ಇಲ್ಲ. ಇಲಾಖೆಯ ಕಾರ್ಯದರ್ಶಿಯವರು ಈ ಸದನದಲ್ಲಿ ಇದ್ದರೆ ಇದರ ಬಗ್ಗೆ ಗಮನಹರಿಸಿ ಅರಸೀಕೆರೆಯಲ್ಲಿರುವ ಆಸ್ಪತ್ರೆಗೆ ಹೆಚ್ಚಿನ ರೀತಿಯಲ್ಲಿ ಸಹಕಾರ ಮಾಡಿ ಅದಕ್ಕೆ ಆದ್ಯತೆ ಕೊಟ್ಟು 150 ಹಾಸಿಗೆಯ ಆಸ್ಪತ್ರೆಗೆ ಸಿಗುವ ಸವಲತ್ತು ಸಿಗುವಂತೆ ಈಗಲೇ ಅದೇಶವನ್ನು ಕಳುಹಿಸಬೇಕೆಂದು ಕೋರುತ್ತೇನೆ. ಮೂರು ಉಪ ಪ್ರಶ್ನೆಗಳನ್ನು ನಾನು ಕೇಳಿದ್ದೇನೆ.

ಅಧ್ಯಕ್ಷರು:- ಮೊದಲು ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ಔಷಧಿಗಳ ಸರಬರಾಜಿನ ಬಗ್ಗೆ ನನ್ನ ಮೊದಲ ಪ್ರಶ್ನೆಯಾಗಿದೆ. ಎರಡನೇ ಪ್ರಶ್ನೆ ಏನೆಂದರೆ, ಸರಬರಾಜಾಗುತ್ತಿರುವ ಕೆಲವೇ ಔಷಧಿಗಳಲ್ಲಿ ಗುಣಮಟ್ಟವಿಲ್ಲದಿರುವ ಬಗ್ಗೆ ಕೇಳಿದ್ದೇನೆ. ಇವತ್ತಿನ ದಿವಸ ಜನರಲ್ಲಿ ಒಂದು ವಾಡಿಕೆ ಇದೆ. ಅದೇನೆಂದರೆ, ಸರ್ಕಾರಿ ಆಸ್ಪತ್ರೆಯಲ್ಲಿ ಇಂಜಕ್ಷನ್ ಮತ್ತು ಮಾತ್ರೆಯನ್ನು ತೆಗೆದುಕೊಂಡರೆ ಕಾಯಿಲೆ ಹುಷಾರಾಗುವುದಿಲ್ಲವೆಂಬ ನಂಬಿಕೆ ಇದೆ.

ಅಧ್ಯಕ್ಷರು:- ಮಾನ್ಯ ಶಿವಲಿಂಗೇಗೌಡರೆ, ಇದು ಪ್ರಶ್ನೋತ್ತರ ವೇಳೆ. ನೀವು ಈಗಾಗಲೇ ಪ್ರಶ್ನೆಯನ್ನು ಕೇಳಿದ್ದೀರಿ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ಮತ್ತೆ ನೀವು ಉಪ ಪ್ರಶ್ನೆಯನ್ನು ಕೇಳಬಹುದು.

ಶ್ರೀ ಕೆ.ಎಂ.ಶಿವಲಿಂಗೇಗೌಡ:- ನಾನು ಕೇಳಿರುವ ಮೊದಲು ಪ್ರಶ್ನೆಗೆ ಅವರು ಉತ್ತರ ಕೊಡಲಿ. ಉಳಿದ ಪ್ರಶ್ನೆಗಳನ್ನು ಆನಂತರ ಕೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಲಿಂಗೇಗೌಡರು ಕೆಲವು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗಳಿಗೆ ಉತ್ತರ ಕೊಡುವಂಥ ಸಂದರ್ಭದಲ್ಲಿಯೂ ಕೂಡ ಈ ವಿಷಯದ ಬಗ್ಗೆ ಸ್ಪಷ್ಟಪಡಿಸಿದ್ದೇನೆ. ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಿಯನ್ನು ಕೊಡುವುದಕ್ಕೆ ಯಾವುದೇ ಕಾರಣಕ್ಕೂ ಹಣಕಾಸಿನ ತೊಂದರೆಯಾಗುವುದಿಲ್ಲ. ಈಗಾಗಲೇ ರಾಜ್ಯ ಸರ್ಕಾರದ ವತಿಯಿಂದ ಮತ್ತು ಕೇಂದ್ರ ಸರ್ಕಾರದ....

ಶ್ರೀ ಕೆ.ಎಂ.ಶಿವಲಿಂಗೇಗೌಡ:- ರಕ್ಷಾ ಸಮಿತಿಯಿಂದ ಔಷಧಿಯನ್ನು ತೆಗೆದುಕೊಳ್ಳುವುದಕ್ಕೆ ಅವರಲ್ಲಿ ಹೆಚ್ಚಿನ ಹಣ ಇಲ್ಲವೆಂದು ಡಾಕ್ಟರ್‌ರವರು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಮಾನ್ಯ ಶಿವಲಿಂಗೇಗೌಡರೆ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ತಾವು ಉಪ ಪ್ರಶ್ನೆಯನ್ನು ಕೇಳಿ. ಮೊದಲು ಅವರು ಉತ್ತರ ಕೊಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಔಷಧಿಗೆ ನಾವು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಆದ್ದರಿಂದ, ಇದಕ್ಕೆ ಏನು ತೊಂದರೆಯಾಗುವುದಿಲ್ಲ. ಮತ್ತೆ User charges ನಿಂದ ಕೂಡ ತೆಗೆದುಕೊಳ್ಳುವುದಕ್ಕೆ ನಾವು ಹೇಳಿದ್ದೇವೆ. ಅರಸೀಕೆರೆಯಲ್ಲಿ ಔಷಧಿಗಳ ಕೊರತೆ ಯಾಗುತ್ತಿದೆ ಎಂದು ಮಾನ್ಯ ಶಾಸಕರು ಗಮನಕ್ಕೆ ತಂದಿದ್ದಾರೆ. ಇವತ್ತೇ ನಾನು ಅಧಿಕಾರಿಗಳಿಗೆ ಸೂಚಿಸಿ ಅಲ್ಲಿಗೆ ಯಾವ್ಯಾವ ರೀತಿಯ ಔಷಧಿಗಳು ಪೂರೈಕೆಯಾಗ ಬೇಕಾಗಿದೆಯೋ ಆ ಔಷಧಿಗಳನ್ನು ಆದ್ಯತೆ ಮೇಲೆ ಸರಬರಾಜು ಮಾಡುವುದಕ್ಕೆ ಸೂಚನೆ ನೀಡುತ್ತೇನೆ. ಉದಾಹರಣೆಗೆ ಕೆಲವು ಸಂದರ್ಭಗಳಲ್ಲಿ ನಾವು ಔಷಧಿಗಳ ಸಂಗ್ರಹಣ ನಮ್ಮ ಉಗ್ರಾಣದಲ್ಲಿರುತ್ತದೆ. ಅದನ್ನು ಅಲ್ಲಿಂದ ತರುವುದಕ್ಕೆ ಒಂದೆರಡು ದಿವಸಗಳು ಆಗಬಹುದು. ಆ ರೀತಿ ಆದಾಗ ಈ ರೀತಿಯ ಘಟನೆಗಳು ಎಲ್ಲಿಯಾದರೂ ಕಾಣಬಹುದು. ಈಗಾಗಲೇ ನಾನು ಹೇಳಿದಂತೆ, anti rabies vaccines ನಮ್ಮ ಹತ್ತಿರ 93,000 ಸ್ಟಾಕ್ ಇದೆ. ಇಲ್ಲವೆಂದು ಹೇಳಿದರೆ ಆ ಕಡೆ ಅದನ್ನು ವಿಶೇಷವಾಗಿ ಗುರುತಿಸಿ ತಕ್ಷಣಕ್ಕೆ ಬೇಕಾದಂಥ ಕಡೆ ಕೊಡುವ ಸೂಚನೆಯನ್ನು ಸರ್ಕಾರದಿಂದ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ನೀಡುತ್ತೇವೆ ಮತ್ತು ಆ ಪೂರೈಕೆಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಆ ರೀತಿ ಕೊರತೆಯಾಗುವುದಿಲ್ಲ. ಎರಡನೆಯದಾಗಿ ಮಾನ್ಯ ಶಾಸಕರು ಕೇಳಿರುವುದು ಕೆಲವು ಔಷಧಿಗಳ ಗುಣಮಟ್ಟ ಸರಿಯಾಗಿಲ್ಲವೆನ್ನುವುದನ್ನು ಹೇಳಿದ್ದಾರೆ. ನಿಜ, ನಮಗೆ ಈಗಾಗಲೇ ಪೂರೈಕೆಯಾಗಿರುವಂಥ ಕೆಲವು ಕಂಪನಿಗಳ ಔಷಧಿಗಳ ಗುಣಮಟ್ಟ ಸರಿ ಇಲ್ಲವೆನ್ನುವಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅಂತಹ ಕಂಪನಿಗಳನ್ನು ಈಗಾಗಲೇ ನಾವು ಪಟ್ಟಿಮಾಡಿ ಅವರನ್ನು ಕಪ್ಪುಪಟ್ಟಿಯ ಲಿಸ್ಟ್‌ಗೆ ಸೇರಿಸಿರುತ್ತೇವೆ. ಹಾಗಾಗಿ ಅವರು ಮುಂದಿನ ಮೂರು ವರ್ಷಗಳಿಗೆ ಔಷಧಿಗಳನ್ನು ಸರಬರಾಜು ಮಾಡದೇ ಇರುವಂಥ ಕಠಿಣವಾದಂಥ ಕ್ರಮಗಳನ್ನು ನಾವು ತೆಗೆದುಕೊಂಡಿರುತ್ತೇವೆ. ಈ ರೀತಿಯಾದಂಥ ಕೆಲವು ಆಕಸ್ಮಿಕವಾದಂಥ ಪ್ರಕರಣಗಳು ಸರ್ಕಾರದ ಗಮನಕ್ಕೆ ಬರುತ್ತವೆ ಈ ಬಗ್ಗೆ ನಿಶ್ಚಿತವಾಗಿ ಸರ್ಕಾರ ನಿರ್ಭಿಡೆಯಿಂದ ನಿರ್ಧಾಕ್ಷಿಣ್ಯವಾದಂಥ ಕ್ರಮಗಳನ್ನು ಈ ರೀತಿ ಗುಣಮಟ್ಟ ಇಲ್ಲದೇ

ಇರುವಂಥ ಔಷಧಿಯನ್ನು ಪೂರೈಸಿದವರ ಮೇಲೆ ನಾವು ತೆಗೆದುಕೊಳ್ಳುತ್ತಿದ್ದೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ರೋಷನ್ ಬೇಗ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೋದ ತಿಂಗಳು ಒಂದು functionನಲ್ಲಿ ಹೇಳಿಕೆಯನ್ನು ಕೊಡುತ್ತಾರೆ. ಸರ್ಕಾರದ ವತಿಯಿಂದ ನಾವು ಆಸ್ಪತ್ರೆಗಳಿಗೆ ಏನು ಮೆಡಿಸನ್‌ನ್ನು supply ಮಾಡುತ್ತಿದ್ದೇವೆಂದರೆ ಅದು ಆಸ್ಪತ್ರೆಯಿಂದ ಸೀದಾ ಮೆಡಿಕಲ್ ಸ್ಟೋರ್ಸ್‌ಗೆ ಹೋಗುತ್ತಿದೆ ಎಂದು ಬಹಿರಂಗವಾಗಿ open functionನಲ್ಲಿ ಸನ್ಮಾನ್ಯ ರಾಮಚಂದ್ರೇಗೌಡರು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರದ ವತಿಯಿಂದಲೇ ಸೀದಾ ಅದು ಮೆಡಿಕಲ್ ಸ್ಟೋರ್ಸ್‌ಗೆ ಹೋಗುತ್ತಿದೆ ಎಂದು ಹೇಳಿದರೆ, ಈಗ ಇವರು black list ಮಾಡಿದ್ದೇವೆ ಇಷ್ಟು ಅಮೌಂಟ್ ಇದ್ದರೆ, ಯೂಸರ್ಸ್ ಫೀ.....

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಾವು last ಪ್ರಶ್ನೆಯನ್ನು ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಔಷಧಿಗಳ ಗುಣಮಟ್ಟದಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಕೆಲವು ಕಂಪನಿಗಳಿಂದ ತಪ್ಪುಗಳು ಆಗಿದೆ. ನಾವು ಶಿಕ್ಷಯನ್ನು ಕೊಡುತ್ತೇವೆಂದು ಹೇಳಿದರು. ಬಹುಶಃ ಸಾಮಾನ್ಯವಾಗಿ ಹಳ್ಳಿಯ ಕಡೆ ಜನರು ಮಾತನಾಡಿಕೊಳ್ಳುತ್ತಾರೆಂದರೆ, ಗೌರ್ನಮೆಂಟ್ ಆಸ್ಪತ್ರೆಯ ಮಾತ್ರೆ ನುಂಗಿದರೆ ಮತ್ತು ಇಂಜಕ್ಷನ್ ಉಪಯೋಗಿಸಿದರೆ ಕಾಯಿಲೆಯು ಹುಷಾರಾಗುವುದಿಲ್ಲ. ಮೂರು-ನಾಲ್ಕು ಮಾತ್ರೆಗಳನ್ನು ನುಂಗಬೇಕಾಗುತ್ತದೆ. ಅದೇ private ಶಾಪ್‌ಗೆ ಹೋಗಿ ಒಂದು ಮಾತ್ರೆಯನ್ನು ತಂದು ನುಂಗಿದರೆ ಹುಷಾರಾಗುತ್ತದೆ. ಇದು ಸಾಮಾನ್ಯ ಜನರ ವಾಡಿಕೆಯಾಗಿದೆ. ಅದಕ್ಕೋಸ್ಕರ ದಯಮಾಡಿ ಇಂಥ ಸಾಮಾನ್ಯ ಜನರಿಗೆ ದ್ರೋಹ ಮಾಡುವಂತಹ ಕಂಪನಿಗಳು ಇವೆ, ಯಾರು ಈ ರಾಜ್ಯದಲ್ಲಿ ಜನತೆಗೆ ಮೋಸವನ್ನು ಮಾಡುತ್ತಿದ್ದಾರೆ ಅವರಿಗೆ ಬಹಳ ಉಗ್ರವಾದಂತಹ, ಕಠಿಣವಾದ ಶಿಕ್ಷೆಯನ್ನು ಕಒಡುವಂತಹ ಕಾನೂನನ್ನು ಜಾರಿಗೆ ತರಬೇಕು. ಔಷಧಿಗಳ ಗುಣಮಟ್ಟವನ್ನು ಹಾಳು ಮಾಡುವಂತಹವರನ್ನು ಕೂಡಲೇ ಆ ಡ್ರಗ್ಸ್ ಕಂಪನಿಯವರನ್ನು ಹಿಡಿದು ಜೈಲಿಗೆ ಹಾಕುವಂತಹ ಕಾನೂನನ್ನು ಜಾರಿಗೆ ತನ್ನಿ. ಶುದ್ಧ ಕುಡಿಯುವ ನೀರಿಗೆ ಹಾಲೋಜಿನ್ ಎಂಬ ಮಾತ್ರೆಯನ್ನು ಹಾಕಿ ಟೆಸ್ಟ್ ಮಾಡಿ ತೋರಿಸಿದರು. ಅದು ಏನು ಕೆಲಸವನ್ನು ಮಾಡುವುದಿಲ್ಲ. ಆ ಮಾತ್ರೆಯು ಅದರ ಗುಣಮಟ್ಟವನ್ನು ಕಳೆದುಕೊಂಡಿದೆ. ಆ ತರಹದ ಔಷಧಿಯನ್ನು supply ಮಾಡಿ ಈ ದೇಶದ ಹಾಗೂ ಈ ರಾಜ್ಯದ ಹಣವೆಲ್ಲಾ ಹಾಳಾಗುವುದಾದರೆ ಮತ್ತೆ ಸರ್ಕಾರದಲ್ಲಿ ತಪ್ಪಿತಸ್ಥರು ಯಾರು ಆಗಿದ್ದಾರೆ ಅವರಿಗೆ ಶಿಕ್ಷೆಯನ್ನು ಕೊಡಿಸಿ. ಮಾತ್ರೆ ಮತ್ತು ಔಷಧಿಯಲ್ಲೂ ಕೂಡ ರಾಜಿಯೇ? ಈ ವಿಷಯದಲ್ಲಿ ರಾಜೀ

ಆಗುವುದು ಬೇಡ. ಈ ಬಗ್ಗೆ ತಾವು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ದಯಮಾಡಿ ಮಾಡಬೇಕು. ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಮಗೆ 2 ಅಥವಾ 3 ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಿದೆ. ಈಗಾಗಲೇ ಮೊದಲು ಎರಡು ಉಪಪ್ರಶ್ನೆಗಳನ್ನು ತಾವು ಕೇಳಿದ್ದೀರಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಗ್ರಾಮೀಣ ಪ್ರದೇಶದ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಔಷಧಿಯನ್ನು ಕೊಡದೆ ಡಾಕ್ಟರ್‌ಗಳು ಅವರು ಚೀಟಿಯನ್ನು ಬರೆದುಕೊಡುತ್ತಿದ್ದಾರೆ. ಏತಕ್ಕೆ ಎಂದರೆ, ಅವರುಗಳು private shopನ್ನು ಇಟ್ಟುಕೊಂಡಿರುತ್ತಾರೆ. ಅಲ್ಲಿರುವಂತಹ ಮೆಡಿಕಲ್ ಶಾಪ್‌ನವರಿಗೂ ಮತ್ತು ಅವರಿಗೂ ಸಂಬಂಧ ಇರುತ್ತದೆ.

ಅಧ್ಯಕ್ಷರು: ಅವರು ಏನು ಮಾಡಬೇಕೆನ್ನುವ ಬಗ್ಗೆ ನೀವು suggestion ಕೊಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಅದೇ suggestion. ನೀವು ಹೆಚ್ಚಿಗೆ ಔಷಧಿಗಳನ್ನು supply ಮಾಡಿಬಿಟ್ಟರೆ ಈ ಸಮಸ್ಯೆ ಎಲ್ಲಾ ಬಗೆಹರಿಯುತ್ತದೆ. ದಯಮಾಡಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಗುಣಮಟ್ಟದ ಔಷಧಿಗಳನ್ನು ಸರಬರಾಜು ಮಾಡಬೇಕು. ನಾಯಿ ಕಡಿತ ಔಷಧಿಯನ್ನು ಸರಳವಾಗಿ ಎಲ್ಲಾ ಕಡೆ ಸಿಗುವಂಥ ವ್ಯವಸ್ಥೆಯಾಗಬೇಕು. ಸಾಮಾನ್ಯ ಜನ 1200 ರೂ.ಗಳನ್ನು ಕೊಟ್ಟು ಮೂರು ಇಂಜೆಕ್ಷನ್ ಎಲ್ಲಿ ತೆಗೆದುಕೊಳ್ಳುತ್ತಾನೆ. ನಮ್ಮ constituency ನಲ್ಲಿ ಅದು ಇಲ್ಲ ಆದುದರಿಂದ ಅದನ್ನು ನಾವು ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ ಔಷಧಿಗಳ ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆ. ಕಳಪೆ ಔಷಧಿಯ ಪೂರೈಕೆ ಮಾಡಿದವರ ಮೇಲೆ ಕಠಿಣವಾದ ಕ್ರಮ ಕೈಗೊಳ್ಳುತ್ತಿದ್ದೇವೆ. ಮುರನೆಯದಾಗಿ ಗ್ರಾಮೀಣ ಭಾಗದಲ್ಲಿ ಕೆಲವು ವೈದ್ಯರು ಚೀಟಿ ಕೊಡುತ್ತಾರೆನ್ನುವುದನ್ನು ತಾವು ಉಲ್ಲೇಖ ಮಾಡಿದ್ದೀರಿ. ಚೀಟಿಯನ್ನು ಬರೆದು ಕೊಡಬಾರದು ಎನ್ನುವ ಎಚ್ಚರಿಕೆಯನ್ನು ಅಧಿಕಾರಿಗಳಿಗೆ ನಾವು ನೀಡಿದ್ದೇವೆ. ಆದರೆ ನೀವು ನಿಶ್ಚಿತವಾದ ಪ್ರಕರಣವನ್ನು ಸರ್ಕಾರಕ್ಕೆ ತಿಳಿಸಿದರೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬದ್ಧರಾಗಿದ್ದೇವೆ. ನಾವು ಈ ರೀತಿ ಆರೋಗ್ಯ ಇಲಾಖೆಯ ವತಿಯಿಂದ ಸರ್ಕಾರದ ವತಿಯಿಂದ ನಮ್ಮ ಜನರ ಆರೋಗ್ಯ ರಕ್ಷಣೆಗೆ ಬೇಕಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಎಲ್ಲಾ ಔಷಧಿ ಇಲ್ಲ. ದಯಮಾಡಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಆಯಿತು.

ಅಧ್ಯಕ್ಷರು: ಮಾನ್ಯ ಯು.ಟಿ.ಖಾದರ್ ಇಲ್ಲ. ಅವರ ಪ್ರಶ್ನೆಯನ್ನು ಗೋಪಾಲ ಭಂಡಾರಿಯವರು ನೀವು ಕೇಳುತ್ತೀರಾ? ಕೇಳಿ.

ಮಂಗಳೂರು ಕ್ಷೇತ್ರವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮತ್ತು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.

11 (30) ಶ್ರೀ ಖಾದರ್. ಯು.ಟಿ (ಮಂಗಳೂರು)

ಶ್ರೀ ಬಿ.ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು (ವಿವರಗಳನ್ನು ನೀಡುವುದು);

ರಾಜ್ಯದಲ್ಲಿನ ಎಲ್ಲಾ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

1. ಉಳ್ಳಾಲ
2. ಬೋಳಿಯಾರ್
3. ಅಂಬ್ಲಮೊಗರು
4. ನಾಟೆಕಲ್
5. ಕೋಟೆಕಾರ್

ಆ) ಈ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿಯ ಕೊರತೆಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 6 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಎಲ್ಲ ಹುದ್ದೆಗಳು ಭರ್ತಿಯಾಗಿವೆ.

ವಿವಿಧ ವೃಂದದ ಒಟ್ಟು 26 ಅರೆವೈದ್ಯಕೀಯ ಸಿಬ್ಬಂದಿಯ ಹುದ್ದೆಗಳ ಕೊರತೆ ಇರುತ್ತದೆ.

ಇ) ಹಾಗಿದ್ದಲ್ಲಿ, ಈ ಸಿಬ್ಬಂದಿಗಳನ್ನು ನೇಮಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಮುಖಾಂತರ ಭರ್ತಿಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ:7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಶ್ರೀ ಗೋಪಾಲ ಭಂಡಾರಿ (ಶ್ರೀ ಯು.ಟಿ.ಖಾದರ್ ಪರವಾಗಿ): ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಪ್ರಶ್ನೆ ಇಷ್ಟೆ, ಮಂಗಳೂರು ವಿಧಾನಸಭೆ ಕ್ಷೇತ್ರದಲ್ಲಿ ಆರೋಗ್ಯ ಅಧಿಕಾರಿಗಳ ಮತ್ತು ವೈದ್ಯರ ಹುದ್ದೆ ಎಷ್ಟು ಭರ್ತಿಯಾಗಿದೆ ಎನ್ನತಕ್ಕಂಥ ಪ್ರಶ್ನೆ. ವೈದ್ಯರ 6 ಹುದ್ದೆಗೆ 6 ಹುದ್ದೆಗಳು ಭರ್ತಿಯಾಗಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಅರೆವೈದ್ಯಕೀಯ ಹುದ್ದೆಗಳನ್ನು ಹೆಚ್ಚು-ಕಡಿಮೆ 5021ರಷ್ಟು ಹುದ್ದೆಗಳು ತೆರವಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದರಲ್ಲಿಯೂ ಕೂಡ ವಿಶೇಷವಾಗಿ ನಮ್ಮ ಕರಾವಳಿ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ತಾವೆಲ್ಲಾ ನೋಡಿದ್ದೀರಿ ಚಿಕುನ್ ಗುನ್ಯಾ ಬಹಳ ದೊಡ್ಡ ಪ್ರಮಾಣದಲ್ಲಿ ಬಂದಿದ್ದು ಜನರಲ್ಲಿ ಒಂದು ಭಯದ ವಾತಾವರಣವನ್ನು ಸೃಷ್ಟಿ ಮಾಡಿತ್ತು. ಕೆಲವು ವರ್ಷಗಳ ಹಿಂದೆ ಮಲೇರಿಯಾ ರೋಗ ಸಂಪೂರ್ಣ ನಿರ್ಮೂಲನೆಯಾಗಿದೆ ಎಂದರೂ ಕೂಡ ನಮ್ಮ ಜಿಲ್ಲೆಯಲ್ಲಿ ಇದೆ. ಅರೆವೈದ್ಯಕೀಯ ಸಿಬ್ಬಂದಿಯವರ ಅವಶ್ಯಕತೆ ಬಹಳ ಇದೆ. ಇಲ್ಲಿ ಆರೋಗ್ಯದ ಬಗ್ಗೆ ವೈದ್ಯರು ಚಿಕಿತ್ಸೆಯನ್ನು ಕೊಟ್ಟರೂ ಸಹ ಖಾಯಿಲೆ ಬಾರದೆ ಇರತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಆ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ಇವರ ಜವಾಬ್ದಾರಿ ಬಹಳ ಇದೆ. ಆದರೆ ಉತ್ತರದಲ್ಲಿ ನೇರ ನೇಮಕಾತಿ ಬಗ್ಗೆ ಒಂದು ಕರಡು ನಿಯಮವನ್ನು ಮಾಡಿದ್ದೇವೆ. ಅದಕ್ಕೆ ನಾವು ಆಕ್ಷೇಪಣೆಗಳನ್ನು ಕೇಳಿದ್ದೇವೆ. ಅದೆಲ್ಲಾ ಆದ ನಂತರ ನಾವು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಇದಕ್ಕೆ ಎಷ್ಟು ಸಮಯ ಆಗುತ್ತದೆ. ಸದ್ಯಕ್ಕೆ ಆಗುವಂಥ ಪರಿಸ್ಥಿತಿ ಕಾಣುತ್ತಿಲ್ಲ. ಆದುದರಿಂದ ಎಷ್ಟು ಸಮಯದಲ್ಲಿ ಭರ್ತಿ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟರೆ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಆರೋಗ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಆರು ವೈದ್ಯಾಧಿಕಾರಿಗಳ ಹುದ್ದೆಗಳನ್ನು ನಾವು ತುಂಬಿದ್ದೇವೆ. ಆದರೆ ಇನ್ನು 26 ಅರೆವೈದ್ಯಕೀಯ ಹುದ್ದೆಗಳು ಅಲ್ಲಿ ಖಾಲಿ ಇವೆ, ಅದನ್ನು ತುಂಬುವ ಪ್ರಕ್ರಿಯೆಯನ್ನು ಈಗಾಗಲೇ ನಾವು ಪ್ರಾರಂಭಿಸಿದ್ದೇವೆ. 22ನೇ ತಾರೀಖು objection call for ಮಾಡಿದ್ದೇವೆ. ಅದು ಮುಕ್ತಾಯವಾಗುತ್ತದೆ. 23ನೇ ತಾರೀಖಿನಿಂದ 5,021 ಹುದ್ದೆಗಳಿಗೆ ಅರ್ಜಿಗಳನ್ನು ನಾವು ಆಹ್ವಾನ ಮಾಡುತ್ತೇವೆ. ನಂತರ ಮೂರು ತಿಂಗಳಲ್ಲಿ ಅವರ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಬೇಕೆಂದು ನಾವು ಕಾರ್ಯಯೋಜನೆಯನ್ನು ಹಾಕಿಕೊಂಡಿರುತ್ತೇವೆ. ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಲಿಯಾಗುವ ಆ 26 ಹುದ್ದೆಗಳನ್ನು ಆ ಸಂದರ್ಭದಲ್ಲಿ ತುಂಬುವುದಕ್ಕೆ ಸಹಾ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 19.2.2009ರ ಒಂದನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 25 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು: ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ) ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)ಅವರು:-

ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಆ) ಶ್ರೀ ಬಿ.ಎಸ್.ಯಡಿಯುರಪ್ಪ (ಮುಖ್ಯಮಂತ್ರಿಗಳು)ಅವರು:-

ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ರಾಜಸ್ವ ಸ್ವೀಕೃತಿ) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.15 ಗಂಟೆಗೆ ಮುಕ್ತಾಯಗೊಂಡು ಪುನಃ 4.00 ಗಂಟೆಗೆ ಸೇರಲು ನಿಶ್ಚಯಿಸಿತು)

4–00 PM

ಸದನವು ಪುನಃ ಮಧ್ಯಾಹ್ನ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

4. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ.

ವಿಷಯ: ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ನಾನು ನಿಲುವಳಿಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಏಕೆ ಇದನ್ನು ಚರ್ಚೆಗೆ ತೆಗೆದುಕೊಳ್ಳವಂತಹ ಅಶ್ಯಕತೆ ಇದೆ ಎಂದರೆ, ಇತ್ತೀಚೆಗೆ ಅನೇಕ ಘಟನೆಗಳು ರಾಜ್ಯದಲ್ಲಿ ನಡೆದಿವೆ. ಇದರಿಂದ ಇವತ್ತು ಕುಸಿಯುತ್ತಿರುವ ಕಾನೂನಿನ ವ್ಯವಸ್ಥೆ, ಈ ರಾಜ್ಯದ ಆಡಳಿತ ಇವೆಲ್ಲವನ್ನೂ ನೋಡಿದಾಗ ಎಲ್ಲೋ ಒಂದು ಕಡೆ ನಮ್ಮ ಲಕ್ಷ್ಯ ಕಾನೂನು ವ್ಯವಸ್ಥೆ ಮೇಲೆ ಇಲ್ಲವೆನ್ನುವುದು ಸಹಜವಾಗಿ ಕಾಣುತ್ತದೆ. ಆದರೆ, ಬಿ.ಜೆ.ಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಹಳ ಬಿಗುವಾಗಿ ನಡೆದುಕೊಳ್ಳುತ್ತಾರೆ. ಸಮ್ಮಿಶ್ರ ಸರ್ಕಾರ ಇದ್ದಾಗ ಅವರಿಗೆ ತೊಂದರೆಯಿತ್ತು. ಈಗ ಸ್ವತಂತ್ರವಾಗಿ ಸರ್ಕಾರ ರಚನೆ ಮಾಡಿಕೊಂಡು ಅವರು ಈ ಒಂದು ಆಡಳಿತದಲ್ಲಿ ಕಾನೂನು ವ್ಯವಸ್ಥೆಯನ್ನು ಚೆನ್ನಾಗಿ ತರುತ್ತಾರೆಂದು ನಾವು ನಂಬಿದ್ದೆವು. ಆದರೆ, ಇವತ್ತು ರಾಜ್ಯದ ಉದ್ದಗಲಕ್ಕೂ ನೀವು ಎಲ್ಲಾದರೂ ಹೋಗಿ, ಗಲಾಟೆ, ಗದ್ದಲ, firing, ಲಾಟಿ ಚಾರ್ಜ್ ಅಷ್ಟೇ ಅಲ್ಲ, ಅಮಾಯಕರ ಮೇಲೆ, ರೈತರ ಮೇಲೆ ಕೈ ಎತ್ತುವ ಪ್ರವೃತ್ತಿ ಪೊಲೀಸರಿಗೆ ಬಂದಿದೆ. ವಿಶೇಷವಾಗಿ ಉಡುಪಿ, ಶಿವಮೊಗ್ಗ ಹಾಗೂ ಧಾರವಾಡದಲ್ಲೂ ಕೂಡ ಈ ಒಂದು ಮತೀಯ ಭಾವನೆ ಕೆರಳಿಸತಕ್ಕಂಥದ್ದು, ಜನರನ್ನು ಎತ್ತಿ ಕಟ್ಟುವಂತಥದ್ದು ಮತ್ತು ಅದರ ವಿರುದ್ಧವಾಗಿ ಜನರನ್ನು ಪ್ರಚೋದಿಸಿ ಉತ್ತೇಜಿಸುವ ವ್ಯವಸ್ಥೆ ಕೂಡ ಸರ್ಕಾರ ಮತ್ತು ಸರ್ಕಾರದಲ್ಲಿ ಯಾವ ಪಕ್ಷವಿದೆ, ಅವರೂ ಕೂಡ ಇದನ್ನೇ ಮಾಡುತ್ತಿದ್ದಾರೆ. ಅದರ ಜೊತೆಯಲ್ಲಿ ವ್ಯವಸ್ಥಿತವಾಗಿ ಕಾನೂನನ್ನು ಹದಿಗೆಡಿಸುವುದಕ್ಕೆ ಏನೇನು ಪಿತೂರಿ ಮಾಡಬೇಕು ಅದೆಲ್ಲವನ್ನೂ ಬಿ.ಜೆ.ಪಿ ಸರ್ಕಾರ ಮಾಡುತ್ತಿದೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೋ ಒಂದು ಕಾರಣದಿಂದ

ಹಿಂದೆ ಬಲತ್ಕಾರದ ಮತಾಂತರವಾಯಿತು, ಇದು ಆಯಿತು, ಅದು ಆಯಿತು ಎಂದು ಹೇಳಿ, ಆ ನೆಪದಲ್ಲಿ ಚರ್ಚ್ ಮೇಲೆ ಕೆಲವು ಜನ ದಾಳಿ ಮಾಡಿದರು. ಇಲ್ಲಿಯವರೆಗೆ ಯಾವ ರೀತಿಯಾಗಿ ಅವರು ಬಂಧನಕ್ಕೆ ಒಳಪಡಿಸಬೇಕಾಗಿತ್ತು, ಅವರನ್ನು arrest ಮಾಡಿ ಇಡಬೇಕಾಗಿತ್ತು. ಅದನ್ನು ಬಿಟ್ಟು ಅವರಿಗೆ ಸಡಿಲವಾದ ಕಾನೂನಿನ ವ್ಯವಸ್ಥೆಯಲ್ಲಿ ತಂದು, ಹೋದ ಕೂಡಲೇ ಅವರಿಗೆ ಬೇಲ್ ಸಿಗುವ ರೀತಿಯಲ್ಲಿ ಮತ್ತು ಅವರು ಸುರಕ್ಷಿತವಾಗಿ ಮನೆಗೆ ಬರುವ ರೀತಿಯಲ್ಲಿ ಸರ್ಕಾರ, ಪೊಲೀಸ್ ವರ್ತನೆ ಮಾಡಿಕೊಂಡಿದೆ. ಭಜರಂಗ ದಳ ಆಗಲಿ, ರಾಮ ಸೇನೆ ಆಗಲಿ ಮತ್ತು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನವರು ಕೂಡ ಹಲವಾರು ಕಡೆ ಕಾನೂನನ್ನು ಕೈಗೆತ್ತಿಕೊಂಡು, ಇವತ್ತಿನ ದಿವಸ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಮಾಡುತ್ತಿರುವುದನ್ನು ಇಡೀ ದೇಶದ ಜನರು ನೋಡಿದ್ದಾರೆ. ನಾವು ಹೇಳಬೇಕಾಗಿಲ್ಲ. ಆದರೆ, ಮಾತೆತ್ತಿದರೆ ಕಾಂಗ್ರೆಸ್ಸಿನವರು ಪ್ರಚೋದನೆ ಮಾಡುತ್ತಾರೆ, ನಮ್ಮ ಕೆಲಸ ಮಾಡಿಕೊಡುವುದಿಲ್ಲ ಎಂದು ಹೇಳುತ್ತಾರೆ. ಅಧಿಕಾರ ಅವರ ಕೈಯಲ್ಲಿ, ಆಡಳಿತ ಅವರ ಕೈಯಲ್ಲಿ, ಪೊಲೀಸ್ ಅವರ ಕೈಯಲ್ಲಿ, ಅಭಿವೃದ್ಧಿ ಕೆಲಸಕ್ಕೆ ತಾರತಮ್ಯ ಮಾಡುತ್ತಿದ್ದಾರೆಂದು ನಾನು ಈ ಹಿಂದಿನ ಅಧಿವೇಶನದಲ್ಲಿ ಅಂಕಿ-ಅಂಶಗಳ ಸಮೇತ ಹೇಳಿದ್ದೇನೆ. ಆದರೆ, ಕನಿಷ್ಠಪಕ್ಷ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳಬೇಕು. ಶಾಂತಿ ಇದ್ದಾಗ ಮಾತ್ರ ಕೈಗಾರಿಕೆಗಳು ಬರುತ್ತವೆ. ಆನಂತರ ವ್ಯವಹಾರ ನಡೆಯುತ್ತದೆ. ಆರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ. ಇವೆಲ್ಲವೂ ಕೂಡ ಒಂದು ರಾಜ್ಯದ ಆಗು-ಹೋಗುಗಳು, law and order situation ಮೇಲೆ ಪ್ರಗತಿ ಮತ್ತು ಆರ್ಥಿಕ ಬೆಳವಣಿಗೆಯಾಗಲು ಸಾಧ್ಯವಾಗುತ್ತದೆ. ಆದರೆ, ಇವತ್ತು ಇಲ್ಲಿ ಪ್ರತಿ ಸಲವೂ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟು ಸುರಕ್ಷಿತವಿಲ್ಲದ ರೀತಿಯಲ್ಲಿ ಅನೇಕ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಅದಕ್ಕೋಸ್ಕರ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಕೊಡುವುದಕ್ಕಿಂತಲೂ ತಮ್ಮನ್ನು ಬಿಟ್ಟು ಕೇಂದ್ರ ಸರ್ಕಾರದ ಮೇಲೆ ದೂರುವುದು, ಅನಂತರ, ತಮಗೆ ಗೊತ್ತಿದೆ. ನಾವೆಲ್ಲರೂ ಕೂಡ ರಾಷ್ಟ್ರೀಯ ಐಕ್ಯತೆಗಾಗಿ ಹೋರಾಟ ಮಾಡಿರುವವರೇ. ನಮ್ಮ ಪಕ್ಷದ ನಾಯಕರಂತೂ ಈ ರಾಷ್ಟ್ರದ ಐಕ್ಯತೆಗಾಗಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಯಾವ ಆಸ್ತಿಗೋಸ್ಕರ, ಯಾರ ಮನೆಯನ್ನಾದರೂ ಒಡೆದು ಅಥವಾ ಯಾರದಾದರೂ ಆಸ್ತಿ ಕಬಳಿಸಿ ಅಥವಾ ಜಗಳ ಮಾಡಿಕೊಂಡು, ಕಚ್ಚಾಡಿ ಅದಕ್ಕೋಸ್ಕರ ತಮ್ಮ ಪ್ರಾಣ ಕೊಟ್ಟರು ಎಂದಲ್ಲ. ತಮಗೆ ಗೊತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಗುಂಡಿನ ಏಟಿಗೆ ಒಳಗಾಗಬೇಕಿದ್ದರೆ ಖಲಿಸ್ತಾನ್ ಸಮಸ್ಯೆಯಿಂದ ಮತ್ತು ಖಲಿಸ್ತಾನ್

ಸ್ವತಂತ್ರವಾಗಬೇಕೆಂದು ಕೆಲವು ಸಮಾಜದವರು ನಡೆಸಿದ ಕ್ರೂರ ಹಲ್ಲೆಗೊಳಗಾಗಿ ತೀರಿಕೊಂಡರು, ಅವರ ಮರ್ಡರ್ ಆಯಿತು.

ಅದೇ ರೀತಿಯಾಗಿ ರಾಜೀವ್‌ಗಾಂಧಿಯವರು ಎಲ್‌ಟಿಟಿಇ ಇವತ್ತು ಏನು ಅಶಾಂತಿಯುಂಟು ಮಾಡುತ್ತಿದೆ, ಅದು ನಮ್ಮ ರಾಜ್ಯಕ್ಕೆ, ದೇಶಕ್ಕೆ ಹಬ್ಬಬಾರದು ಮತ್ತು ವಿಶೇಷವಾಗಿ ತಮಿಳುನಾಡಿನಲ್ಲಿ ಜನರು ಶಾಂತಿಯುತವಾಗಿ ಬದುಕಬೇಕೆಂದು ಅಲ್ಲಿರುವ ತಮಿಳರೆಲ್ಲರ ರಕ್ಷಣೆಗೋಸ್ಕರ ಸಿಲೋನ್‌ನಲ್ಲಿ ಮತ್ತು ಈ ರಾಷ್ಟ್ರದಲ್ಲೂ ತಮಿಳುನಾಡಿನವರು ಶಾಂತ ರೀತಿಯಿಂದಿರಬೇಕೆಂದು ಅವರು ಪ್ರಯತ್ನಿಸಿದರೆ ಅವರನ್ನೂ ಬಲಿ ತೆಗೆದುಕೊಂಡರು. ಅಂತಹ ಪಕ್ಷ ಮತ್ತು ಅಂತಹ ಮುಖಂಡರನ್ನು ನಾವು ಕಳೆದುಕೊಂಡಿದ್ದೇವೆ. ಆದರೆ, ಇವರು ಪದೇ ಪದೇ ಕೇಂದ್ರ ಸರ್ಕಾರದ ಮೇಲೆ ದೂರುವುದು. ಮೊನ್ನೆ ರಾಷ್ಟ್ರೀಯ ಐಕ್ಯತಾ ಸಭೆಯಲ್ಲೂ ಪ್ರಸ್ತಾಪಿಸಿದರು. ಅವರು ಹೇಳಿದ್ದು ಏನೆಂದರೆ, ಅಲ್ಲೆಲ್ಲಾ ಬಲಾತ್ಕಾರವಾಗಿ conversion ನಡೆದಿದೆ. ಅದಕ್ಕೋಸ್ಕರ ನಮ್ಮ ರಾಮಸೇನೆ ಅಥವಾ ನಮ್ಮ ಆರ್‌ಎಸ್‌ಎಸ್ ಅಥವಾ ಎಬಿವಿಪಿ, ಭಜರಂಗ ದಳ, ಇವರೆಲ್ಲರೂ ಹೋರಾಟ ಮಾಡಿದರೆ ತಪ್ಪೇನು? ಎನ್ನುವ ರೀತಿಯಲ್ಲಿ ಅವರು ಭಾಷಣ ಮಾಡಿದರು. ಮತಾಂತರ ಮಾಡಿಸಿದ ಮೇಲೆ ನಾವು ಮಾಡಿದಂತಹ ದೌರ್ಜನ್ಯಗಳು ಏನೂ ಅಲ್ಲ. ಅಲ್ಲಿ ಒತ್ತಾಯ ಮಾಡಿ ಮತಾಂತರ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಇವತ್ತು ಅವರು ಕಾನೂನನ್ನು ಕೈಗೆ ತೆಗೆದುಕೊಂಡು ರಾಜಾರೋಷವಾಗಿ ಅಡ್ಡಾಡುತ್ತಿದ್ದಾರೆ. ಅವರುಗಳಿಗೆ ಶಹಭಾಷ್‌ಗಿರಿ ಕೊಡುವ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದರು.

ಆದರೆ, ಯಾರು ಕಾನೂನನ್ನು ಕೈಗೆ ತೆಗೆದುಕೊಂಡು ಬೇರೆಯವರ ಮೇಲೆ ದೌರ್ಜನ್ಯವೆಸಗಿದ್ದಾರೋ, ಅವರ ಬಗ್ಗೆ ಕಠಿಣ ಕ್ರಮ ಜರುಗಿಸುವ ಕೆಲಸ ಮಾಡಲಿಲ್ಲ. ಅದಕ್ಕೋಸ್ಕರ, ಅವರಿಗೆ ಏನು ಅನಿಸಿತೆಂದರೆ, ಸರ್ಕಾರ ನಮ್ಮ ಬೆಂಬಲಕ್ಕಿದೆ, ಸರ್ಕಾರ ನಮ್ಮ ಜೊತೆಯಲ್ಲಿರುವಾಗ ಬಾರಾ ಖೂನ್ ಮಾಫ್ ಎಂಬಂತೆ ನಾವು ಏನೇ ಮಾಡಿದರೂ ನಡೆಯುತ್ತದೆಂದು ಅವರ ಕಾರ್ಯಕರ್ತರು, ಮುಖಂಡರೆಲ್ಲವರೂ ಇವತ್ತು open ಆಗಿ ಹೇಳುತ್ತಿದ್ದಾರೆ. ಚರ್ಚ್ ಮೇಲೆ ದಾಳಿಯಾದಾಗ ಮಹೇಂದ್ರಕುಮಾರ್ ಅವರು open ಆಗಿ ಹೇಳಿದರು. ಚರ್ಚ್ ಮೇಲಿನ ದಾಳಿಯನ್ನು ನಾನೇ ಮಾಡಿಸಿದ್ದು. ಅದರ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುತ್ತೇನೆ. ನಾನೇ ಗಲಾಟೆ ಮಾಡಿಸಿದ್ದು ಎಂದು open ಆಗಿ ಟಿ.ವಿ.ಯಲ್ಲಿ ಹೇಳಿದ್ದನ್ನು ಕೇಳಿದ್ದೇವೆ. ನಾವು ಇದನ್ನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ಅಂದರೆ, ಇಷ್ಟು ಧೈರ್ಯ ಭಜರಂಗ ದಳದ ಒಬ್ಬ ಮುಖಂಡರಿಗೆ ಬರಬೇಕಾದರೆ ಖಂಡಿತವಾಗಿಯೂ ಸರ್ಕಾರದ ಬೆಂಬಲವಿಲ್ಲದೆ ಇಂತಹ ಮಾತುಗಳು ಅವರ

ಬಾಯಿಂದ ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ತಿಂಗಳುಗಟ್ಟಲೇ ಚರ್ಚೆ ನಡೆದ ಮೇಲೆ, ಒತ್ತಾಯ ತಂದ ನಂತರ ಏನೋ ಒಂದು ನಾಮ್‌ಕಾವಾಸ್ತೆ ಕೇಸ್ ಹಾಕಿ ಕೊನೆಗೆ ಅವರನ್ನು ಬಿಡುಗಡೆ ಮಾಡಿಸಿದ್ದೂ ಆಯಿತು.

ಅದೇ ರೀತಿ ರಾಮಸೇನೆಯವರೂ ಮಾಡಿದರು. ಈ ರಾಮಸೇನೆಯವರ ಗಲಾಟೆ ಒಂದು ಕಡೆಯಲ್ಲ. ಇದಕ್ಕೆ 500 ಜನರೋ, 1,000 ಜನರೋ ಬೆಂಬಲಿಸಿದ್ದರು. ಆದರೆ, ಅವರು ಅಲ್ಲಿನ ಪಬ್‌ಗೆ ತೆರಳಿ ದಾಳಿ ಮಾಡಿ ಕಾನೂನು ಕೈಗೆ ತೆಗೆದುಕೊಂಡು ಹೆಣ್ಣು ಮಕ್ಕಳನ್ನು ಹೊಡೆದು, ಬಡಿಯುವ ಮೂಲಕ ಇವತ್ತು ಅದು all India news ಆಗಿ ಕರ್ನಾಟಕವು ಸುರಕ್ಷಿತ ಸ್ಥಳವಲ್ಲ. ಇಲ್ಲಿ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲ ಮತ್ತು ಸಾಮಾನ್ಯ ಜನರು ಯಾರಾದರೂ ಹೊರಗಿನವರು ಓದುವುದಕ್ಕೆ ಬರಲಿ, industrialist ಬರಲಿ, ಅವರೆಲ್ಲರೂ ಭಯಭೀತರಾಗಿ ಇವತ್ತಿನ ದಿವಸ ನಿಜವಾಗಿಯೂ ಕರ್ನಾಟಕ ಎಂದರೆ, ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ನಾವು ಅಲ್ಲಿಗೆ ಹೋಗುವುದು ಸುರಕ್ಷಿತವಲ್ಲವೆಂಬ ಭಾವನೆ ಇವತ್ತು industrialistಗಳಿಗೆ, ವಿದ್ಯಾರ್ಥಿಗಳಿಗೆ, ಹೆಣ್ಣು ಮಕ್ಕಳಿಗೆ ಬಂದಿದೆ. ಆದರೂ Home Minister ಎಲ್ಲಿಗೆ ಹೋದರೋ ಗೊತ್ತಿಲ್ಲ. ಅವರಿಗೂ ಪುರುಸೊತ್ತು ಇಲ್ಲವೆಂದು ಅನಿಸುತ್ತದೆ.

ಅಧ್ಯಕ್ಷರು: ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಅವರು ಅಲ್ಲಿನ ಸಭಾ ನಾಯಕರಾಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಅಲ್ಲಿಯೇ 24 ತಾಸು ಕುಳಿತುಕೊಳ್ಳುತ್ತಾರೆ, ಕುಳಿತುಕೊಳ್ಳಲಿ. ಈಗ ಅವರು, ಮಕ್ಕಳ ರಕ್ಷಣೆ ಮಾಡಿಕೊಳ್ಳುವುದು ತಂದೆ-ತಾಯಿಗಳ ಜವಾಬ್ದಾರಿಯಾಗಿದೆ. ಪ್ರತಿಯೊಂದನ್ನೂ ನಾವು ಜವಾಬ್ದಾರಿ ವಹಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದುದರಿಂದ, ತಂದೆ-ತಾಯಿಗಳೇ ನೋಡಿಕೊಳ್ಳಬೇಕೆಂದು ಹೇಳಿದರು. ಹಾಗಾದರೆ, ಸರ್ಕಾರ ಇರುವುದು ಏತಕ್ಕೆ? ತಂದೆ-ತಾಯಿಗಳು 'ಮನೆಯಲ್ಲಿ ಊಟ ಮಾಡಿಸಬಹುದು, ಒಳ್ಳೆಯ ಸಂಸ್ಕೃತಿ-ಸಂಸ್ಕಾರ ಕೊಡಬಹುದು, ಒಳ್ಳೆಯ ರೀತಿಯಿಂದ ಹೇಳಬಹುದು ಮತ್ತು ಶಾಲೆಗೆ ಕಳುಹಿಸುವುದಕ್ಕೆ ರಾಜ್ಯದಲ್ಲಿ ಸುರಕ್ಷತೆ ಇಲ್ಲವೆಂದರೆ ಅಥವಾ ಯಾವುದೋ ಒಂದು public placeಗಳಲ್ಲಿ ಹೋಟೆಲ್‌ಗಳಿರಬಹುದು, ರೆಸ್ಟೋರೆಂಟ್ ಇರಬಹುದು, ಲಾಡ್ಜ್ ಇರಬಹುದು, ಬೋರ್ಡಿಂಗ್ ಇರಬಹುದು, ಸ್ಕೂಲುಗಳಿರಬಹುದು, ಅಲ್ಲಿ ತಂದೆ-ತಾಯಿಗಳು ತಮ್ಮ ಮಕ್ಕಳಿಗೆ ನೋಡಿಕೊಂಡು ಹೋಗಬೇಕೆಂದರೆ ಸರ್ಕಾರದವರಾದ ನೀವೇನು ಮಾಡುತ್ತೀರಿ? ಎಂಬುದನ್ನು ನಾನು ಕೇಳಬೇಕಾಗುತ್ತದೆ. ಅದು ಬಿಟ್ಟು ಎಲ್ಲಾ ತಂದೆ-ತಾಯಿಗಳ ಮೇಲೆ ಹಾಕಿ Home

Minister ಸುಮ್ಮನಾದರು. ಅದಕ್ಕೇಕೆ Home Minister ಮೇಲೆ ನಮ್ಮ ಮುಖ್ಯಮಂತ್ರಿಗಳಿಗೆ ಇಷ್ಟು ಪ್ರೀತಿ? ಎಂಬುದು ಗೊತ್ತಿಲ್ಲ. ಅವರನ್ನು Advisor ಆಗಿ ನೇಮಿಸಿಕೊಂಡಿದ್ದಾರೇನೋ। ಅಥವಾ ಇವರು ಏನು ಅಟ್ಯಾಕ್‌ಗಳನ್ನು ಮಾಡುತ್ತಿದ್ದಾರೆ, ಅದು ನಡೆಯಲಿ, ನಾನು ನೋಡಿಕೊಂಡು ಕುಳಿತುಕೊಳ್ಳುತ್ತೇನೆ, ನೀನು ಮಾಡಿಕೊಂಡಿರು ಎಂದು ಅವರಿಗೆ ಏನಾದರೂ ಮಂತ್ರ ಹಾಕಿದ್ದಾರೋ ಗೊತ್ತಿಲ್ಲ. ಅವರು ಬಾಯಿಗೆ ಬಂದಂತೆ ಹೇಳುವುದು. ಜರ್ನಲಿಸ್ಟ್ ಏನಾದರೂ ಬರೆದರೆ, ಓಂಬುಡ್ಸ್‌ಮನ್ appoint ಮಾಡುತ್ತೇನೆ, ಅನಂತರ, ನ್ಯೂಸ್ ಅನ್ನು ಸೆನ್ಸಾರ್ ಮಾಡಿ ಹಾಕಬೇಕು, ಆ ಕುರಿತು ಕಾನೂನು ತರುತ್ತೇನೆಂದು ಹೇಳಿದರು. ಇದರ ಬಗ್ಗೆ ಯಾರಾದರೂ ಹೇಳಿ ಎಂದು ಹೇಳಿದ್ದರೇ? ಇದು ನಿಮ್ಮ ಕ್ಯಾಬಿನೆಟ್ ಡಿಸಿಷನ್ನೇ?

ಅನಂತರ, ನಾನು ಈಗ ಹೇಳಲಿಲ್ಲ. ಅದನ್ನು ಯಾವುದೋ ರೆಫರೆನ್ಸ್‌ನಲ್ಲಿ ಹೇಳಿದೆನೆಂದು, ಅಂದರೆ, ಈ ಎಲ್ಲಾ ಘಟನೆಗಳು ಅಲ್ಲಿಯೇ ನಡೆದಿವೆ, ಪ್ರಚೋದನೆ ಕೊಡುವ ಮಾತುಗಳಲ್ಲವೂ Home Minister ಯಾವ ಜಾಗದಿಂದ ಬಂದಿದ್ದಾರೋ, ಆ ಜಾಗದಲ್ಲಿಯೇ ನಡೆದಿದೆ. ಜರ್ನಲಿಸ್ಟ್ ಮೇಲೆ ಅಟ್ಯಾಕ್ ಇರಬಹುದು, ಪಬ್‌ಗಳ ಮೇಲಿನ ದಾಳಿ ಮಾಡುವುದಾಗಿರಬಹುದು, ಎಂಎಲ್‌ಎ ಮಗಳನ್ನು ಕಿಡ್ನ್ಯಾಪ್ ಮಾಡಿ ಕರೆದುಕೊಂಡು ಹೋಗಿ harassment ಮಾಡುವುದಾಗಿರಬಹುದು. ಇವೆಲ್ಲವೂ ಅಥವಾ ಹಿಂದೂ-ಮುಸಲ್ಮಾನರಿಗೆ ಜಗಳ ಹಚ್ಚುವುದಾಗಿರಬಹುದು, ಎಲ್ಲವೂ ಅವರ ಮೂಗಿನ ಎದುರೇ ನಡೆಯುತ್ತಿದೆ. ಮತ್ತೆ ಅವರು ಮಲಗುತ್ತಾರೆಯೇ? ಅವರಿಗೆ ನಿಜವಾಗಿಯೂ ಹೇಳುತ್ತೇನೆ. ಆ ಜಾಗದಲ್ಲಿ ಒಂದು ಸಲ ಒಂದು ಇನ್ಸಿಡೆಂಟ್, ಎರಡು ಇನ್ಸಿಡೆಂಡ್, ಮೂರು ಇನ್ಸಿಡೆಂಡ್‌ಗಳಾದರೆ tolerate ಮಾಡಬಹುದು. ಆದರೆ, continuous ಆಗಿ ಒಂದೇ ರೀತಿಯ ಇನ್ಸಿಡೆಂಡ್‌ಗಳು ನಡೆದು, ಅಲ್ಲಿನ law and order ಹದಗೆಡಿಸುವ ರೀತಿಯಲ್ಲಿ ಅವರ ವರ್ತನೆ ಇದ್ದರೆ, ಅವರು ಕ್ಯಾಬಿನೆಟ್‌ನಲ್ಲಿ ಏಕಿರಬೇಕು? ನಿಮ್ಮಲ್ಲಿ ಜನರಿಲ್ಲವೇ? ಅವರು inevitable ಆಗಿದ್ದಾರೆಯೇ? ನೀವು ಅವರನ್ನು ತೆಗೆದು ಹಾಕಿ ಇಲ್ಲವೇ ಡಿಸ್‌ಮಿಸ್ ಮಾಡಿ.

ನಾನಂತೂ ಡಿಮ್ಯಾಂಡ್ ಮಾಡುತ್ತೇನೆ. ಅವರು Home Minister port folio ಇಟ್ಟುಕೊಂಡು ಇವತ್ತು ಅವರೊಬ್ಬ ಅಸಹಾಯಕರಂತೆ ಮಾತನಾಡುತ್ತಾರೆಂದರೆ, ಅಂತಹವರಿಂದ ಈ ರಾಜ್ಯದ ರಕ್ಷಣೆಯಾಗುವುದಿಲ್ಲ. ಹೆಣ್ಣುಮಕ್ಕಳ ರಕ್ಷಣೆಯಾಗುವುದಿಲ್ಲ. ರೈತರ ರಕ್ಷಣೆಯಾಗುವುದಿಲ್ಲ, ಬಡವರಿಗೆ ರಕ್ಷಣೆಯೂ ಸಿಗುವುದಿಲ್ಲ. ಅವರು ಓಪನ್ ಆಗಿ ಈ ರೀತಿ ಮಾತನಾಡಿಕೊಂಡು

ಹೋಗುತ್ತಿರುವುದನ್ನು ನೋಡಿದರೆ ನನಗಂತೂ ನಿಜವಾಗಿಯೂ ಇಂತಹ ಕೆಟ್ಟ ಆಡಳಿತವನ್ನು ನಾನು ನೋಡಿಲ್ಲ. ಆದುದರಿಂದ, ದಯವಿಟ್ಟು......

ಶ್ರೀ ಕೆ.ಎಸ್.ಈಶ್ವರಪ್ಪ: Point of order. ಮಾನ್ಯ ಅಧ್ಯಕ್ಷರೆ, ಈಗ ತಾವು ನಿಲುವಳಿ ಸೂಚನೆ ಮೇಲೆ ಪ್ರಸ್ತಾಪಿಸುವುದಕ್ಕೆ ಹೇಳುತ್ತಿದ್ದೀರಿ. ಈಗಾಗಲೇ ಅವರು ರಾಜೀನಾಮೆ ತನಕವೂ ಹೊರಟು ಹೋದರು. ಎರಡನೆಯದಾಗಿ, Law and Order ಸಮಸ್ಯೆ ಬಗ್ಗೆ ನಿಲುವಳಿ ಸೂಚನೆ ಮೇಲೆ ಚರ್ಚಿಸುವುದ್ಕೆ ಅವಕಾಶವಿದೆಯೇ? ಇಲ್ಲವೇ? ದಯವಿಟ್ಟು ಅದಕ್ಕೆ ತಾವು ರೂಲಿಂಗ್ ಕೊಡಬೇಕಾಗುತ್ತದೆ. ಏಕೆಂದರೆ, ಇವರು ಪ್ರಸ್ತಾಪ ಮಾಡುತ್ತಿರುವುದು ಒಂದು ಕಡೆ ಶ್ರೀರಾಮಸೇನೆಯನ್ನೂ ಸೇರಿಸುತ್ತಾರೆ, ಜೊತೆಗೆ, ಆರ್‌ಎಸ್‌ಎಸ್, ವಿದ್ಯಾರ್ಥಿ ಪರಿಷತ್ ಅನ್ನೂ ಸೇರಿಸುತ್ತಾರೆ. ಅವರು ಹಿರಿಯ ರಾಜಕಾರಣಿಗಳು. ಇವರಿಗೆ ಆರ್‌ಎಸ್‌ಎಸ್, ವಿದ್ಯಾರ್ಥಿ ಪರಿಷತ್ ಬಗ್ಗೆ ಈ ರಾಜ್ಯದಲ್ಲಿ ಏನು ನಡೆಯುತ್ತಿದೆ, ಈ ರಾಜ್ಯದಲ್ಲಿ, ದೇಶದಲ್ಲಿ ಎಷ್ಟರಮಟ್ಟಿಗೆ ರಾಷ್ಟ್ರಪ್ರೇಮ ನಿರ್ಮಾಣ ಮಾಡುತ್ತಿದ್ದಾರೆ, ಇಷ್ಟೆಲ್ಲಾ ಗೊತ್ತಿದ್ದೂ ಕೂಡ ಶ್ರೀರಾಮಸೇನೆ ಜೊತೆಗೆ ಆರ್‌ಎಸ್‌ಎಸ್, ವಿದ್ಯಾರ್ಥಿ ಪರಿಷತ್‌ನ್ನೂ ಸೇರಿಸುವುದು ನಿಜವಾಗಿಯು ಒಳ್ಳೆಯದಲ್ಲ.

4–30 PM

ಅದಕ್ಕೋಸ್ಕರ ಪೂರ್ಣ ತಿಳಿದುಕೊಂಡು ಮಾತನಾಡುವುದು ಸೂಕ್ತ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಇವರು Preliminary Submission ಮಾಡುತ್ತಾ ಎಲ್ಲಾ ಸಂಘಸಂಸ್ಥೆಗಳ ಬಗ್ಗೆ ಟೀಕೆ ಮತ್ತು ರಾಜಿನಾಮೆ ಕೊಡುವುದಕ್ಕೆ demand ಮಾಡುತ್ತಿದ್ದಾರೆ. ಇದಕ್ಕೆ ಎಷ್ಟರ ಮಟ್ಟಿಗೆ ಅವಕಾಶವಿದೆ ಎನ್ನುವುದು ಒಂದು. ನಾನು ನಿಮಗೆ point of order ಮೂಲಕ ಕೇಳುತ್ತಿರುವುದು ಇಷ್ಟೇ, law and order ಸಮಸ್ಯೆ ಬಗ್ಗೆ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ತಾವು ಇಲ್ಲಿ ಕುಳಿತಿದ್ದಿರಲ್ಲಾ. ಆಗ ಯಾವಾಗಲೂ ಕೂಡ ನಿಲುವಳಿ ಸೂಚನೆಯಲ್ಲಿ law and order ವಿಷಯ ಚರ್ಚೆಮಾಡಲಿಲ್ಲವೇ? ತಮ್ಮ ನಾಯಕರು present ಮಾಡಲಿಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಆಗ ಪ್ರಸ್ತಾಪ ಮಾಡಿದಾಗ ಇದೇ point of order ನೀವು ಎತ್ತಲಿಲ್ಲವೇ? ಅದಕ್ಕೆ ಅವರು Ruling ಕೊಡಲಿಲ್ಲವೇ? ಅದಕ್ಕೋಸ್ಕರ ಕಾನೂನು, rules ಇರುವುದು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ನೀವು treasury bench ನಲ್ಲಿದ್ದೀರಿ. ತಾಳ್ಮೆಯಿಂದ ಕೇಳಿ. ಸಿ.ಎಂ. ತಮ್ಮ ಪಕ್ಕದಲ್ಲಿ ಇದ್ದಾರೆಂಬ port polio extra ಸಿಗುವುದಿಲ್ಲ. ಈಗ ನಿಮಗೆ ಕೊಟ್ಟಿರುವುದೇ ದೊಡ್ಡದಾಗಿದೆ. ತಲೆಕೆಡಿಸಿಕೊಳ್ಳುವುದಕ್ಕೆ ಹೋಗ ಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ತಾವು ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಬಡಿದಾಡಿ ಸಾಯುತ್ತಿದ್ದೀರಿ. ನನಗೆ ಒಳ್ಳೆಯ ಸ್ಥಾನ ಸಿಕ್ಕಿದೆ.

ಶ್ರೀ ಡಿ.ಕೆ. ಶಿವಕುಮಾರ್: Election ಆದ ಮೇಲೆ ಚೇರ್ ಅನ್ನು ಎಳೆದಾಡುತ್ತೀರಲ್ಲಾ, ಆಗ ನಾನು ನೋಡುತ್ತಿರುತ್ತೇನೆ. I am watching that. ಯಾವ ವಿಚಾರವೆಂದು ಆಮೇಲೆ watch ಮಾಡಿ ಹೇಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಯಾವುದು ಎಂದು ಸ್ಪಷ್ಟವಾಗಿ ಹೇಳಬೇಕಲ್ಲವೇ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಏನು ಮಾಡುತ್ತಿದ್ದೀರಿ, ಏನು ನಡೆಯುತ್ತಿದೆ ಎಂಬುದು ಗೊತ್ತಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಯಾವ ಚೇರ್ ಎಳೆದದ್ದು.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅವರು ಸ್ಪಷ್ಟವಾಗಿ ಹೇಳಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಕರ್ನಾಟಕ ರಾಜ್ಯದಲ್ಲಿ ಎಲ್ಲಿಯವರೆಗೆ ಯಡಿಯೂರಪ್ಪನವರು ನಮಗೆ ಮಾರ್ಗದರ್ಶನ ಮಾಡುತ್ತಾರೋ ಅಲ್ಲಿಯವರೆಗೆ ಕೂಡ ಈ ರಾಜ್ಯದಲ್ಲಿ ಅವರೇ ಮುಖ್ಯಮಂತ್ರಿ. 116 ಸದಸ್ಯರ ಸಂಖ್ಯೆ ಇದೆ ಉಳಿದ ನಾಲ್ಕೂವರೆ ವರ್ಷಗಳನ್ನು ಪೂರ್ಣ ಮಾಡುತ್ತೇವೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ಇದರಲ್ಲಿ ಒಂದು ಗುಲಗಂಜಿಯೂ ವ್ಯತ್ಯಾಸವಾಗುವುದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಚರಿತ್ರೆಯಲ್ಲಿ ನಿಮ್ಮ ಮಾತು ದಾಖಲೆಯಲ್ಲಿ ಇರುತ್ತದೆ. ಕಾಲ ಬದಲಾಗುತ್ತದೆ. ಕಾಲ ಹೀಗೆ ಇರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಇದು ಕಾಂಗ್ರೆಸ್ ಅನುಭವ. ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಎಳೆದು ಹಾಕುವುದೇ ನಿಮ್ಮ ಹಣೆಬರಹವಾಗಿದೆ. ಬಿಜೆಪಿಯಲ್ಲೂ ಅದೇ ರೀತಿ ಬರುತ್ತದೆ ಎಂದುಕೊಂಡಿದ್ದೀರಿ. ಅದು ಖಂಡಿತಾ ಬರುವುದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: Election ಆಗಲಿ, ನೋಡೋಣ.

ಅಧ್ಯಕ್ಷರು: ವಿಷಯಕ್ಕೆ ಬನ್ನಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ತಾವೇಕೆ ಈ ತರಹ ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳುತ್ತೀರಿ? ಏಕೆ ಹಗಲು ಕನಸು ಕಾಣುತ್ತೀರಿ? ತಮಗೆ ಏಕೆ ಇವೆಲ್ಲ?

(ಗೊಂದಲ)

ಅಧ್ಯಕ್ಷರು: ನಾಯ್ಡು ರವರೆ, ಸಾಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಎಲ್ಲ ಸತ್ಯವೂ ನಿಮಗೆ ಗೊತ್ತಿದೆ. ನಿಮ್ಮ ಸ್ಥಿತಿಗತಿ ಏನು ಎನ್ನುವುದು ನಿಮಗೆ ಗೊತ್ತಿದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, point of order.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆ ಪ್ರಶ್ನೆ ಬರುವುದಿಲ್ಲ. ಏಕೆಂದರೆ, ನಾನು ನಿಮ್ಮ ಅನುಮತಿ ಪಡೆದೇ ಇಲ್ಲಿ ಮಾತನಾಡುತ್ತಿದ್ದೇನೆ. ಎರಡನೆಯದು, Question hour ಆದ ಮೇಲೆ ತಾವೇ ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೆ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ಅದಕ್ಕೆ ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು: Preliminary submission ಗೆ permission ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: Preliminary ಸಬ್‌ಮಿಷನ್ನೇ ಸಾರ್.

ಶ್ರೀ ಕೆ.ಎಸ್. ಈಶ್ವರಪ್ಪ: --ಅದಕ್ಕೋಸ್ಕರವೇ ನಾನು ನಿಮ್ಮಲ್ಲಿ ಮನವಿ ಮಾಡುತ್ತಿರುವುದು. Law and order ಪರಿಸ್ಥಿತಿಯನ್ನು ನಿಲುವಳಿ ಸೂಚನೆಯಲ್ಲಿ ತರುವುದಕ್ಕೆ ಅವಕಾಶವಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದನ್ನು ಅವರು ಹೇಳುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಾನು ಅವರಿಗೇ ಹೇಳುತ್ತಿರುವುದು. ನಿಮಗೆ ಹೇಳುತ್ತಿಲ್ಲ. ನೀವು ಬೇಕಾದ್ದು ಹೇಳಿಕೊಳ್ಳೀ. ನಿಮಗೆ ಅಧಿಕಾರವಿದೆ. ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಹೇಳುತ್ತಿದ್ದೇನೆ. Adjournment motion ಅನ್ನು Law and order ಬಗ್ಗೆ ತರುವುದಕ್ಕೆ ಅವಕಾಶವಿಲ್ಲ. ಇದನ್ನು ಬೇರೆ ಯಾವುದಾದರೂ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಇವರು ಆಗಲೇ ಎಲ್ಲಿಂದಲೋ ಪ್ರಾರಂಭ ಮಾಡಿ ಇನ್ನೆಲ್ಲಿಗೋ ಹೋದರು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೇ, ಅವರು ನಿಯಮ 60ರ ಅಡಿಯಲ್ಲಿ ತಂದಿದ್ದಾರೆ ನಿಯಮ 62ರಲ್ಲಿ ಏನು ಹೇಳುತ್ತಾರೆಂದರೆ, ಸಾರ್ವಜನಿಕ ಮಹತ್ವ ಜರೂರು ವಿಷಯದ ಮೇಲೆ ಚರ್ಚೆ ನಡೆಸುವಾಗ ನಿಲುವಳಿ ಸೂಚನೆಯನ್ನು ತರುವಂಥದ್ದು. ಇದರ ನೋಟೀಸ್‌ನಲ್ಲಿ specific ಆಗಿ ಹೇಳಿಲ್ಲ. 3–4 ವಿಷಯಗಳನ್ನು ತಂದು preliminary submission ನಲ್ಲಿ ಈಗ ಇರುವುದನ್ನೂ

ಹೇಳುತ್ತಿದ್ದಾರೆ. ಅದಕ್ಕಾಗಿ ನನ್ನ objection ಇದೆ. ತಾವು ಈ ಬಗ್ಗೆ ರೂಲಿಂಗ್ ಕೊಡಬೇಕು. Preliminary submission ಮಾಡುವುದಕ್ಕೇ ಅವಕಾಶವಿಲ್ಲ. ನಿಯಮ 62ರಲ್ಲಿ specific ಆಗಿ ಇದೆ. ಅವರು specific issue ಅನ್ನೇ raise ಮಾಡಬೇಕು. ಇದರಲ್ಲಿ law and order ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ತಮ್ಮಿಂದ point of order ಬಗ್ಗೆ ruling ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ. ಆಗ ನೀವು adjournment motion ಎಂದು ಹೇಳಿ allow ಮಾಡಲಿಲ್ಲ.

ಅಧ್ಯಕ್ಷರು: Adjournment motion ಗೆ preliminary submission ಮಾಡುತ್ತೇವೆಂದು ಹೇಳಿದಿರಿ. ಈಗ ವಿಷಯವನ್ನು ತಾವು ಮಂಡನೆ ಮಾಡುತ್ತಿದ್ದೀರಿ preliminary submission ಮಾಡಿ. ಈ ಮೊದಲು ಪ್ರಶ್ನೋತ್ತರವಾದ ನಂತರ ತಾವು preliminary submission ಮಾಡಿ ಎಂದು ನಾನು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪ್ರಶ್ನೋತ್ತರಕ್ಕಿಂತಲೂ ಮುಂಚೆ......

ಶ್ರೀ ಬಸವರಾಜ ಬೊಮ್ಮಾಯಿ: preliminary submission ಗೆ ಅವಕಾಶವಿಲ್ಲವೆಂಬುದೇ ನಮ್ಮ ವಾದ. ಇವರು ಕೊಟ್ಟಿರುವ ನೋಟೀಸ್ ಅನ್ನು ಓದಿದ ಮೇಲೆ ಇದು preliminary submission ಗೂ ಬರುವುದಿಲ್ಲವೆಂಬುದು ನಮ್ಮ ವಾದ. ನಿಯಮ 62ರಲ್ಲಿ specific issue raise ಮಾಡಬಹುದು ಎಂದು ಇದೆ. ಇವರು more than one issue raise ಮಾಡಿದ್ದಾರೆ. ಆಮೇಲೆ, law and order ಕೂಡ ಬರುವುದಿಲ್ಲ. ಬೇಕಾದಷ್ಟು ರೂಲಿಂಗ್ಸ್ ಇವೆ. ಈ ಎರಡು ಆಧಾರದ ಮೇಲೆ ನನ್ನ point of order ಗೆ ತಾವು ರೂಲಿಂಗ್ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: Automatically ಚರ್ಚೆಗೆ ತೆಗೆದು ಕೊಂಡಿದ್ದೀರಿ. ಏಕೆಂದರೆ, adjournment motion ಗೆ preliminary submission before question hour ಮಾಡಿ, ನಾವು adjournment motion ಗೆ ಹಠ ಹಿಡಿದು ಮಾಡಿದ್ದರೆ ಆಗ, ಅದು adjournment motion ಆಗುತ್ತದೆ. ಈಗ adjournment motion ಗೆ ಚರ್ಚೆಗೆ ತೆಗೆದುಕೊಳ್ಳಲು ನೀವು ಮಾತನಾಡಿ ಎಂದು ಹೇಳಿದಿರಿ. ಅದಕ್ಕೆ ನಾನು ಮಾತನಾಡುತ್ತಿದ್ದೇನೆ, ನಾನು ಸಬ್‌ಮಿಟ್ ಮಾಡುತ್ತೇನೆ. ನಮಗೆ ಸಬ್‌ಮಿಷನ್‌ಗಾದರೂ ಅವಕಾಶ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ: ಇದು ಯಾವ ರೂಲ್‌ನಡಿಯಲ್ಲಿ ಚರ್ಚೆಯಾಗುತ್ತಿದೆ?

ಅಧ್ಯಕ್ಷರು: Confusion ಮಾಡುವುದು ಬೇಡ. ನೀವು ಪ್ರಶ್ನೋತ್ತರಕ್ಕೆ ಮುಂಚೆ ಈ ಒಂದು ವಿಷಯವನ್ನು ನಿಲುವಳಿ ಸೂಚನೆಯಲ್ಲಿ ತರಲು ಪ್ರಸ್ತಾಪ ಮಾಡುತ್ತೇವೆಂದು ಹೇಳಿದಿರಿ. ಆಗ ನಾನು, ನಿಮ್ಮದೇನಾದರೂ ಸಬ್‌ಮಿಷನ್ ಮಾಡುವುದಿದ್ದರೆ ಈ ನಿಲುವಳಿ ಸೂಚನೆ ಬಗ್ಗೆ ಪ್ರಾಸ್ತಾವಿಕವಾಗಿ ಏನಾದರೂ ಸಬ್‌ಮಿಷನ್ ಮಾಡುವುದಿದ್ದರೆ ಪ್ರಶ್ನೋತ್ತರ ವೇಳೆ ಮುಗಿಯಲಿ, ಆನಂತರ ಅದನ್ನು consider ಮಾಡೋಣ ಎನ್ನುವ ಮಾತನ್ನು ಆ ಸಂದರ್ಭದಲ್ಲಿ ನಾನು ಹೇಳಿದ್ದೆ. ಆ ಸಂದರ್ಭದಲ್ಲಿ ಪ್ರಶ್ನೋತ್ತರ ವೇಳೆ ಆದಮೇಲೆ ಈಗ ನೀವು ನಿಮ್ಮ ಒಂದು ಸಬ್‌ಮಿಷನ್ ಮಾಡುತ್ತಿದ್ದೀರಿ. ಈಗ ಈಶ್ವರಪ್ಪನವರು, ಬಸವರಾಜ ಬೊಮ್ಮಾಯಿಯವರು point of order ಎತ್ತಿದ್ದಾರೆ. ಏನೆಂದರೆ, ಈ ನಿಲುವಳಿ ಸೂಚನೆಯಡಿಯಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ತಾವೇನು ಪ್ರಸ್ತಾಪ ಮಾಡುತ್ತಿದ್ದೀರಿ ಇದು ನಿಲುವಳಿ ಸೂಚನೆಯಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲವೆನ್ನುವ ವಿಷಯವನ್ನು ಹೇಳಿದ್ದಾರೆ. ಅದರ ಬಗ್ಗೆ ನಿಮ್ಮದೇನಾದರೂ ಸ್ಪಷ್ಟೀಕರಣವಿದ್ದರೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ಪಷ್ಟೀಕರಣ ಇಷ್ಟೇ, ಅವರು ಈಗ ಕೇಳತಕ್ಕಂಥ ಅವಶ್ಯಕತೆ ಇಲ್ಲ. point of order raise ಮಾಡುವ ಅವಶ್ಯಕತೆ ಇಲ್ಲ. once Speaker ಚರ್ಚೆಗೆ consent ಕೊಟ್ಟಮೇಲೆ ಆ ಪ್ರಶ್ನೆ ಬರುವುದಿಲ್ಲ. Preliminary submission ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು: ಈಗ ನಾನು point of order ಬಗ್ಗೆ ruling ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ನನಗೆ ಪರ್ಮಿಷನ್ ಕೊಟ್ಟಿದ್ದು, Preliminary submission ಮಾಡುವುದಕ್ಕೆ. ಅದನ್ನೇ ನಾನು ಕೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಅದಕ್ಕೇ ನಾವು point of order ಎತ್ತಿದ್ದು. ಈಗ ಅವರೇನು Subject move ಮಾಡುತ್ತಿದ್ದಾರೆ, ಅದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲವೆಂದೇ ನಾವು point of order ಎತ್ತಿದ್ದು.

ಅಧ್ಯಕ್ಷರು: Preliminary submission ಎಂದರೆ, ನಿಲುವಳಿ ಸೂಚನೆಯಲ್ಲಿ ಬರುತ್ತದೆಯೋ, ಇಲ್ಲವೋ ಎನ್ನುವುದಕ್ಕಷ್ಟೇ ಸೀಮಿತ. Note entire facts. ಈಗ ನಿವೇನು ನಿಲುವಳಿ ಸೂಚನೆಯಲ್ಲಿ ವಿಷಯ ಪ್ರಸ್ತಾಪ ಮಾಡಿದ್ದೀರಿ ಅದರಲ್ಲಿ ಎಲ್ಲಾ ವಿಷಯವನ್ನೂ ಪ್ರಸ್ತಾಪ ಮಾಡಬೇಕೆಂದಿಲ್ಲ. ಆ ನಿಲುವಳಿ ಸೂಚನೆಯಲ್ಲಿ ಈ ವಿಷಯ ಬರುತ್ತದೆಯೋ, ಇಲ್ಲೋ ಎನ್ನುವುದಕ್ಕೆ preliminary submission. ಅಷ್ಟೇ.

ಶ್ರೀ ಕೆ.ಎಸ್. ಈಶ್ವರಪ್ಪ: ಖರ್ಗೆಯವರು, ಹಿರಿಯ ರಾಜಕಾರಣಿಗಳೂ. ಇಲ್ಲಿ ಬಹಳ ಜನ ಹೊಸಬರು ಬಂದಿದ್ದಾರೆ. ಅವರು ಯಾವ ರೀತಿ ಮಾತನಾಡಬೇಕು, ಯಾವ ರೀತಿ motion Move ಮಾಡಬೇಕೆನ್ನುವ ಬಗ್ಗೆ ತಿಳಿದುಕೊಳ್ಳುತ್ತಿರುತ್ತಾರೆ. ಅದಕ್ಕೋಸ್ಕರ ಅವರು ಮಾತನಾಡುತ್ತಾ ಹೋದರೆ, ನೀವು ತಿಳಿದುಕೊಳ್ಳುತ್ತಾ ಹೋದರೆ ಇದು ಖಂಡಿತಾ ಅಲ್ಲ. ಅದಕ್ಕೋಸ್ಕರ law and order ನಿಲುವಳಿ ಸೂಚನೆ ಅಡಿಯಲ್ಲಿ ಬರುವುದಿಲ್ಲ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ. ದಯವಿಟ್ಟು ರೂಲಿಂಗ್ ಕೊಡಿ. ಏಕೆಂದರೆ, ಪ್ರಾರಂಭದಿಂದ ಶುರು ಮಾಡಿ, ರಾಜೀನಾಮೆತನಕ ಹೋದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ: Yes. ನಾವು ಡಿಮಾಂಡ್ ಮಾಡುವವರೆ.

ಅಧ್ಯಕ್ಷರು: ನೀವು ಚರ್ಚೆ ಮಾಡಿ ಅದಕ್ಕೇನಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಅದನ್ನು ಹೇಳುವ ಪ್ರಶ್ನೆಯೇ ಇಲ್ಲ. ಏಕೆಂದರೆ, question hour ಆದಮೇಲೆ ನಿಮಗೆ preliminary submission ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದಿರಿ. ಈಗ ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಅಧ್ಯಕ್ಷರು: ನಾನೀಗಾಗಲೇ ಸ್ಪಷ್ಟೀಕರಣ ಮಾಡಿದ್ದೇನೆ. ಮತ್ತೊಮ್ಮೆ ಸ್ಪಷ್ಟೀಕರಣ ಮಾಡುತ್ತೇನೆ ಏನೆಂದರೆ, ಬೆಳಗ್ಗೆ ನಾವು ಮತ್ತು ಇನ್ನಿತರ ಸದಸ್ಯರು ಸೇರಿ ಕಾನೂನು ಸುವ್ಯವಸ್ಥೆ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದೀರಿ. ಅದೇ ರೀತಿ JD(S) ನ Floor Leader ಆದ ಕುಮಾರಸ್ವಾಮಿಯವರು ಮತ್ತು ಇನ್ನಿತರ ಸದಸ್ಯರು ಸೇರಿ ಈ ಕಾನೂನು ಸುವ್ಯವಸ್ಥೆ ಬಗ್ಗೆ ಅವರೂ ಒಂದು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಆದರೆ, ಒಂದೇ ದಿವಸದಲ್ಲಿ ಎರಡು ನಿಲುವಳಿ ಸೂಚನೆಗಳ ಚರ್ಚೆಗೆ ಅವಕಾಶ ಕೊಡುವುದಿಲ್ಲ ಮತು ಅವರು ನೀವು ಕೊಟ್ಟ ನಂತರ ಅವರೂ ಕೊಟ್ಟಿದ್ದಾರೆ. ಇದರ ಜೊತೆಗೆ, ನಾನು Speaker ಆಗಿ ಹಿಂದಿನ ಅಧಿವೇಶನದಲ್ಲಿಯೂ ಸಹ ಈ ಕಾನೂನು ಸುವ್ಯವಸ್ಥೆ ಬಗ್ಗೆ ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ನಾನೇ ಇದೇ ಸದನದಲ್ಲಿ Ruling ಕೊಟ್ಟಿದ್ದೇನೆ. ಇವತ್ತು ತಾವು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಮಂಗಳೂರು ಘಟನೆ, ಬೇರೆ ಬೇರೆ ಊರಿನ ಘಟನೆ ಈ ರೀತಿ ಹಲವಾರು ವಿಷಯಗಳನ್ನು mix ಮಾಡಿ ನೀವು ಕಾನೂನು ಸುವ್ಯವಸ್ಥೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಹೀಗಾಗಿ, ನಿಲುವಳಿ ಸೂಚನೆಯಡಿಯಲ್ಲಿ ಪ್ರಾಸ್ತಾವಿಕವಾದ submission ಏನು ಮಾಡಿದ್ದೀರಿ, ಅದನ್ನು ತಾವು ಮಾಡಿದ್ದೀರಿ. ಅದಕ್ಕೆ point of order ಅನ್ನು ಆಡಳಿತ ಪಕ್ಷದಿಂದ

ಈಶ್ವರಪ್ಪನವರೂ ಎತ್ತಿದ್ದಾರೆ. ಹೀಗಾಗಿ, ನಾನು ಇಲ್ಲಿ ಹೇಳುವುದೇನೆಂದರೆ, ಇವತ್ತೇನು ತಾವು ಈ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಡಿ.ಕೆ. ಶಿವಕುಮಾರ್: 10-15 ನಿಮಿಷ ಅವಕಾಶ ಕೊಡಿ. ಅವರೂ convince ಮಾಡುತ್ತಾರೆ, ನಾವೂ convince ಮಾಡುತ್ತೇವೆ. ತಾವು ಆಮೇಲೆ ಒಂದು ತೀರ್ಮಾನಕ್ಕೆ ಬನ್ನಿ.

ಅಧ್ಯಕ್ಷರು: Preliminary submission ಗೆ ಇಷ್ಟು ಚರ್ಚೆ ಬೇಕಾಗಿಲ್ಲ. ಈ ನಿಲುವಳಿ ಸೂಚನೆಯ ವ್ಯಾಪ್ತಿಯೊಳಗೆ ಯಾವುದು ಇರಬೇಕೆನ್ನುವುದಷ್ಟೇ ಇರುವುದು. ಇದರೊಳಗೆ ಎಲ್ಲಾ ವಿಷಯಗಳನ್ನೂ ಪ್ರಸ್ತಾಪಿಸಿ convince ಮಾಡುವುದಲ್ಲ. ನಿಲುವಳಿ ಸೂಚನೆಯಲ್ಲಿ ಈ ವಿಷಯ ಬರುತ್ತದೆಯೋ, ಇಲ್ಲವೋ ಎನ್ನುವುದು ಅಷ್ಟೇ ಇರುವುದು. ಹಾಗಾಗಿ ನಾನು ಇಲ್ಲಿ ರೂಲಿಂಗ್ ಕೊಡುವುದೇನೆಂದರೆ......

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಸದನದ ಸಮಯ ಕಳೆಯಬಾರದು ಎಂದು ಬಹಳ ತಾಳ್ಮೆಯಿಂದ ನಿಮ್ಮ ಛೇಂಬರ್‌ಗೆ ಬಂದು ಹೇಳಿ, ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೆ. Question Hour ನಂತರ ತೆಗೆದುಕೊಳ್ಳೋಣವೆಂದು ನೀವು ಹೇಳಿದ್ದರಿಂದ, ಈಗ ನಾನು ಚರ್ಚೆ ಪ್ರಾರಂಭ ಮಾಡಿದ್ದೇನೆ. ನಿಲುವಳಿ ಸೂಚನೆ ಅಡಿಯಲ್ಲಿ ಇದು ಬರುವುದಿಲ್ಲ ಎಂಬ ತಮ್ಮ ಮಾತನ್ನು ನಾನು ಒಪ್ಪಿದರೂ ಕೂಡ, ತಾವು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ ಮೇಲೆ, point of order ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಆ point of order ಅನ್ನು over rule ಮಾಡಿ ಚರ್ಚಿಸಲು ಅನುಮತಿ ಕೊಟ್ಟಿದ್ದೀರಿ ಎಂದು ನಾವು ಭಾವಿಸಿದ್ದೆವು.....

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಸ್ಪೀಕರ್‌ರವರು point of order ಬಗ್ಗೆ ತಮ್ಮ ruling ಕೊಡಲಿ.

(ಗೊಂದಲ)

5. ಸಭಾಧ್ಯಕ್ಷರ ತೀರ್ಪು.

ವಿಷಯ: ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅನುಮತಿ ನೀಡಿರುವ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ನಿಡಿರುವ ನಿಲುವಳಿ ಸೂಚನೆಯನ್ನು ನಾನು ಪರಿಶೀಲಿಸಿರುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾಸ್ತಾವಿಕವಾಗಿ ವಿಷಯವನ್ನು ಮಂಡಿಸಿರುತ್ತಾರೆ ಹಾಗೂ ಸರ್ಕಾರದ ವತಿಯಿಂದ ಉತ್ತರವನ್ನು ನೀಡಲಾಗಿರುತ್ತದೆ. ನಿಲುವಳಿ ಸೂಚನೆಯಲ್ಲಿ ಕಾನೂನು ಸುವ್ಯವಸ್ಥೆ ಸೇರಿದಂತೆ 3-4 ವಿಷಯಗಳು ಒಳಗೊಂಡಿವೆ. ಕರ್ನಾಟಕ

ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳು ನಿಯಮಾವಳಿಗಳ ನಿಯಮ 62(11)ರಲ್ಲಿ ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಚರ್ಚಿಸಕೂಡದೆಂದು ಉಲ್ಲೇಖಿಸಲಾಗಿದೆ. ಆದ್ದರಿಂದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕಾನೂನು ಸುವ್ಯವಸ್ಥೆ ವಿಷಯ ಸಾರ್ವಜನಿಕ ಮಹತ್ವದ್ದು ಎಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕಾಂಗ್ರೆಸ್ ಪಕ್ಷದಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ. (ಎಸ್) ಪಕ್ಷದಿಂದ ಮಾನ್ಯ ಕುಮಾರಸ್ವಾಮಿಯವರು ಮತ್ತು ಇತರ ಶಾಸಕರೇನು ಎರಡು ನಿಲುವಳಿ ಸೂಚನೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ತಿರಸ್ಕಾರ ಮಾಡಿ, ಅವುಗಳನ್ನು ಚರ್ಚೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ನಿಯಮ 69ರ ಅಡಿಯಲ್ಲಿ ಚರ್ಚಿಸಲು ನಾನು ಅನುಮತಿಯನ್ನು ನೀಡಿದ್ದೇನೆ. ಚರ್ಚೆಯನ್ನು ಮಾನ್ಯ ವಿರೊಧ ಪಕ್ಷದ ನಾಯಕರು ಮುಂದುವರೆಸಬಹುದು.

6. ನಿಯಮ 69ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿ ಕುಸಿಯುತ್ತಿರುವ ಕಾನೂನು ಸುವ್ಯವಸ್ಥೆ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಇಡೀ ಸದನದಲ್ಲಿರುವ ಬಹಳಷ್ಟು ಹೊಸ ಶಾಸಕರು ಮಾನ್ಯ ಖರ್ಗೆಯವರ ಮಾತನ್ನು ಕೇಳಬೇಕೆಂದಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರು ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದರಿಂದ ಇಲ್ಲಿ open debate ಮಾಡಲಿಕ್ಕೆ ಅವಕಾಶ ಸಿಕ್ಕಿದೆ. ನೀವೂ ಹೇಳಬಹುದು, ಈ ಕಡೆ ಸದಸ್ಯರೂ ಸಹ ಚರ್ಚೆಯಲ್ಲಿ ಪಾಲ್ಗೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವೂ ಮಾತನಾಡಿ, ಯಾರು ಬೇಡವೆಂದರು? ಯಾರೂ ನಿಮ್ಮ ಕೈಕಟ್ಟಿ ಹಾಕಿಲ್ಲ. ನಿಮ್ಮ ಬಾಯಿಯಂತೂ 24 hours ಖುಲ್ಲಾನೇ ಇದೆ. ಅದನ್ನು ಖುಲ್ಲಾನೇ ಇಟ್ಟುಕೊಳ್ಳಿ, ಯಾರು ಬೇಡವೆಂದಿದ್ದಾರೆ?

ಶ್ರೀ ಬಸವರಾಜ ಬೊಮ್ಮಾಯಿ:- ನೀವು ಯಾವಾಗ ಬಾಯಿ ತೆಗೆಯುತ್ತೀರಿ ಯಾವಾಗ ಮುಚ್ಚುತ್ತೀರಿ ಎನ್ನುವುದು ಜನರಿಗೆಲ್ಲಾ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಗೊತ್ತಿರುವುದರಿಂದಲೇ ನಾವು ಇಲ್ಲಿದ್ದೇವೆ.

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಖರ್ಗೆ ಸಾಹೇಬರೆ, ದೆಹಲಿಯ ಸಿಟ್ಟನ್ನು ತಂದು ತಾವು ಬೆಂಗಳೂರಿನಲ್ಲಿ ಏಕೆ ವ್ಯಕ್ತಪಡಿಸುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನನಗೆ ದೆಹಲಿಯ ಸಿಟ್ಟೂ ಇಲ್ಲ, ನಿಮ್ಮ ಮೇಲೆ ಸಿಟ್ಟೂ ಇಲ್ಲ. ನಿಮಗೆ ಅಧಿಕಾರ ಸಿಕ್ಕಿದ್ದರೂ ನಡೆಸಲಿಕ್ಕೆ ಬರುತ್ತಿಲ್ಲವಲ್ಲ ಎಂಬ ಸಿಟ್ಟು ನನಗಿದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಅಧಿಕಾರ ಇನ್ನೂ ಐದು ವರ್ಷ ನಿಮಗೆ ಸಿಗುವುದಿಲ್ಲ ಎಂಬ ಸಿಟ್ಟು ನಿಮಗಿದೆ. ಇವರು ಇಷ್ಟು ಒಟ್ಟಾಗಿದ್ದಾರೆ, ಇನ್ನು ಐದು ವರ್ಷ ಏನು ಮಾಡಿದರೂ ಇವರನ್ನು ಅಲ್ಲಾಡಿಸಲು ಅಗುವುದಿಲ್ಲವಲ್ಲ ಎಂಬ ಸಿಟ್ಟು ನಿಮಗಿದೆ. ಏಕೆಂದರೆ, ನಿಮ್ಮ ಪರಿಸ್ಥಿತಿ ನಿಮಗೆ ಗೊತ್ತೇ ಇದೆ. ನಿಮಗೆ ದೆಹಲಿಯಲ್ಲೊಂದು ಪರಿಸ್ಥಿತಿ ಇದೆ, ಇಲ್ಲೊಂದು ಪರಿಸ್ಥಿತಿ ಇದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಮ್ಮ ಮೇಲೆ ತಮಗೇ ನಂಬಿಕೆ ಇಲ್ಲ. ಪ್ರಜಾಪ್ರಭುತ್ವದಲ್ಲಿ ಜನ ನಿಮಗೆ 110 ಸೀಟುಗಳನ್ನು ಕೊಟ್ಟಿದ್ದಾರೆ, ನಮಗೆ 80 ಸೀಟುಗಳನ್ನು ಕೊಟ್ಟಿದ್ದಾರೆ. ನಾವು 36% vote ತೆಗೆದುಕೊಂಡಿದ್ದೇವೆ....

ಶ್ರೀ ಬಸವರಾಜ ಬೊಮ್ಮಾಯಿ:- ನಮಗೊಂದು ಸಿಟ್ಟಿದೆ. ವಿರೋಧ ಪಕ್ಷದ ನಾಯಕರಾಗಿ ಮಾನ್ಯ ಖರ್ಗೆಯವರು ಐದು ವರ್ಷಗಳ ಕಾಲ ಇರಬೇಕೆಂದು ನಮ್ಮ ಆಸೆಯಾಗಿದೆ. ಆದರೆ ಅದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲವಲ್ಲ ಎಂಬ ಸಾತ್ವಿಕ ಸಿಟ್ಟು ನಮಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಐದು ವರ್ಷಗಳ ಕಾಲವೂ ಇಲ್ಲಿಯೇ ಇರಬೇಕೆಂದು ಅಂದುಕೊಂಡಿಲ್ಲ. ನಾನು ಆದಷ್ಟು ಬೇಗನೇ ಆ ಕಡೆಗೆ ಬರಬೇಕೆಂದು ಅಂದುಕೊಂಡಿದ್ದೇನೆ. ಅದಕ್ಕಾಗಿ ನಾನು ಕಾಯುತ್ತಿದ್ದೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಅದು ಕೇವಲ ನಿಮ್ಮ ಆಸೆಯಾಗಿಯೇ ಉಳಿಯುತ್ತದೆ. ನಿಮ್ಮ ನಾಯಕರು ನಿಮ್ಮನ್ನು ದೆಹಲಿಗೆ ಕಳುಹಿಸಬೇಕೆಂದು ಹೊರಟಿದ್ದಾರೆ. ನಿಮ್ಮ ಆಸೆ ಈಡೇರುವುದಿಲ್ಲ ಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೋಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ:- ನೀವು ಅಲ್ಲೂ ಇಲ್ಲ, ಇಲ್ಲೂ ಇಲ್ಲ ಎನ್ನುವಂತಾಗುತ್ತೀರಿ. ನೀವು ಆ ಕಡೆಗೆ Parliament Member ಸಹಾ ಆಗುವುದಿಲ್ಲ, ಈ ಕಡೆಗೆ ವಿರೋಧ ಪಕ್ಷದ ನಾಯಕರೂ ಸಹಾ ಆಗುವುದಿಲ್ಲ. ಆ ಸ್ಥಿತಿಗೆ ನೀವು ಬಂದು ಬಿಡುತ್ತೀರಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು:- ಅವರಿಗೆ ಯಾರ ಮೇಲೆ ಸಿಟ್ಟು ಇದೆ ಎಂಬುದನ್ನು ಅವರು ಹೇಳಿಬಿಟ್ಟರೆ ನಾವು ಸ್ವಲ್ಪ ಸಮಾಧಾನವಾಗಿ ಇರುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನನಗೆ ನಿಮ್ಮ ಮೇಲೆ ಸಿಟ್ಟಿಲ್ಲ.

ಡಾ: ಬಿ.ಎಸ್.ಯಡಿಯೂರಪ್ಪ:- ಅವರು ಎಷ್ಟು ಪ್ರೀತಿಯಿಂದ ನಿಮ್ಮ ಪರವಾಗಿ ವಕಾಲತ್ತು ವಹಿಸುತ್ತಿದ್ದಾರೆ. ಆದರೆ ನಿಮ್ಮ ಪರವಾಗಿ ನಿಮ್ಮಲ್ಲಿ ಯಾರೊಬ್ಬರೂ ಸಹಾ ಮಾತನಾಡುತ್ತಿಲ್ಲ. ಏನು ಅನ್ಯಾಯ ಇದು?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವೊಂದು ರೀತಿಯಿಂದ ಅಣಕದ ಮಾತುಗಳನ್ನು ಅಡಿ, ನಮಗೆ ಏನೋ ಆಗುತ್ತಿದೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದೀರಿ, ಇದು ಸರಿಯಲ್ಲ. ನನಗೇನು ವ್ಯಥೆ ಎಂದರೆ, ನೀವು ಪ್ರಜಾಪ್ರಭುತ್ವದಲ್ಲಿ ಇದ್ದು, ನಾವು ಇಲ್ಲಿ ಉಳಿಯುತ್ತೇವೆ ಎನ್ನುವಂತಹ ಖಾತ್ರಿಯೇ ನಿಮಗಿಲ್ಲವಲ್ಲಾ? ಅದರ ಬಗ್ಗೆ ನನಗೆ ನೋವಿದೆ, ಬಾಕಿ ಏನೂ ಇಲ್ಲ. ನಾವು ಐದು ವರ್ಷ ಇರುತ್ತೇವೆಂದು ನೀವೇ ಹೇಳಿಕೊಳ್ಳುತ್ತಿದ್ದೀರಿ. ಆ ಬಗ್ಗೆ ನಿಮ್ಮನ್ನು ಯಾರಾದರೂ question ಮಾಡಿದರೇ? ಇದು ಇರಲಿ. ಮಾನ್ಯ ಅಧ್ಯಕ್ಷರೆ, ಈ ಘಟನಾವಳಿಗಳೇನು ನಡೆದಿವೆ, ಇದು ಒಂದು ಜಾತಿಯ ಜನರ ಮೇಲೆ ಇನ್ನೊಬ್ಬರನ್ನು ಎತ್ತಿ ಕಟ್ಟುವಂತಾದ್ದು ಮತ್ತು ಒಂದು ವರ್ಗದ ಜನತೆಯ ಮೇಲೆ ಬಲಾತ್ಕಾರ ಮಾಡತಕ್ಕದ್ದಾಗಿದೆ. ರಾಜ್ಯದ ಯಾವುದೇ ಪೋಲೀಸ್ ಠಾಣೆಗೆ ತಾವು ಹೋದರೂ ಕೂಡ ಕೇಸ್‌ಗಳು ಸರಿಯಾಗಿ ರಿಜಿಸ್ಟರ್ ಆಗುತ್ತಿಲ್ಲ. ನೀವೂ ಇಂತಹ ಕೇಸ್ ಅನ್ನು ರಿಜಿಸ್ಟರ್ ಮಾಡಬೇಕು, ಇಂತಹ ಕೇಸ್ ಅನ್ನು ರಿಜಿಸ್ಟರ್ ಮಾಡಬಾರದು ಎನ್ನತಕ್ಕಂಥ ಒತ್ತಡ ಕೂಡ ಇವತ್ತು ಪೋಲೀಸ್ ಸ್ಟೇಷನ್‌ಗಳ ಮೇಲೆ ಬೀಳತಕ್ಕಂಥ ಸ್ಥಿತಿಯಲ್ಲಿ ನಾವಿದ್ದೇವೆ. ಚರ್ಚ್‌ಗಳ ಮೇಲಿನ ದಾಳಿಯಾಗಲಿ, ಪಬ್ ಮೇಲಿನ ದಾಳಿಯಾಗಲಿ, ರೈತರ ಮೇಲೆ ನಡೆದ ದಾಳಿಯಾಗಲಿ, ನಾಯಕ ಸಮಾಜದವರ ಮೇಲೆ ಮೈಸೂರಿನಲ್ಲಿ ನಡೆದಂತಹ ದಾಳಿಯಾಗಲಿ, ಇವೆಲ್ಲವನ್ನೂ ನೋಡಿದಾಗ, ನಿಜವಾಗಿಯೂ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನತಕ್ಕಂಥ ಮಾತನ್ನು ಇವತ್ತು ಹೇಳಬೇಕಾಗಿದೆ. ಇದರ ಜೊತೆಗೆ ವಿದ್ಯಾರ್ಥಿಗಳ ನಡುವೆ division ಮಾಡುವ ಮಟ್ಟಕ್ಕೆ ಈ ಸರ್ಕಾರ ಹೋಗಿದೆ. ವಿರೋಧ ಪಕ್ಷದವರಿಗೆ ವಿವೇಕಾನಂದರ ಬಗ್ಗೆ ಪ್ರೀತಿ ಇಲ್ಲ, ಸುಭಾಷ್ ಚಂದ್ರ ಬೋಸ್‌ರವರ ಬಗ್ಗೆ ಪ್ರೀತಿ ಇಲ್ಲವೆಂದು ನೀವು ಹೇಳಿಕೊಳ್ಳುತ್ತಿದ್ದೀರಿ. ಈ ವಿಷಯವನ್ನು ನೀವೆ ಗುತ್ತಿಗೆ ಹಿಡಿದವರಂತೆ ವರ್ತಿಸುತ್ತಿದ್ದೀರಿ. ನಾವೇ ಚಾಂಪಿಯನ್ಸ್, ಈ ರಾಷ್ಟ್ರದ ಜನರ ಐಕ್ಯತೆ ಅಥವಾ ರಾಷ್ಟ್ರದ ಸ್ವಾತಂತ್ರ್ಯ ಕಾಪಾಡುವುದಕ್ಕೆ ನಾವೇ ಇರುತ್ತೇವೆ, ಬೇರೆ ಯಾರೂ ಕೂಡ ಇಲ್ಲ ಎನ್ನತಕ್ಕಂಥ ಭಾವನೆಯನ್ನು ಮೂಡಿಸುತ್ತಿದ್ದಾರೆ. ಅದಲ್ಲದೆ, ಈ ವಿದ್ಯಾರ್ಥಿಗಳಲ್ಲಿ 2-3 ಗುಂಪುಗಳನ್ನು ಮಾಡಿಸತಕ್ಕ ಸ್ಥಿತಿಗೆ ಇವತ್ತು ಇವರು ಹೊರಟಿದ್ದಾರೆ. ಹೊರಗಡೆ ನೂರೆಂಟು ಹೇಳಿಕೊಳ್ಳಲಿ, ಅದು ಬೇರೆ. ಆದರೆ ಇವತ್ತು ನೀವು ನೇರವಾಗಿ ರಾಜಕಿಯ

ಉದ್ದೇಶದಿಂದಲೇ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿದ್ದೀರಿ ನಿಮ್ಮ ಕಾರ್ಯಕ್ರಮ politically motivated ಆಗಿದೆಯೇ ಹೊರತು ಬೇರೇನೂ ಅಲ್ಲ. ಅಲ್ಲಿ ಮಾಡಿದ ಭಾಷಣಗಳನ್ನು ನಾನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದನ್ನು, ಮಾನ್ಯ Home Minister ಮಾತನಾಡಿದ್ದನ್ನು ಮತ್ತು ಅನೇಕ ಕೆಲವು ನಾಯಕರು ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ನಾವು anti-terrorism ಬಗ್ಗೆ ಜನರನ್ನು conscious ಮಾಡುವುದಕ್ಕೆ ಅವರನ್ನು ಹುರಿದುಂಬಿಸುವುದಕ್ಕೆ, ಅವರನ್ನು ಜಾಗೃತಿ ಮಾಡುವುದಕ್ಕೆ ಈ ಕಾರ್ಯಕ್ರಮ ಆಡುತ್ತಿದ್ದೇವೆಂದು ನೀವು ಹೇಳಿಕೊಳ್ಳುತ್ತಿದ್ದೀರಿ. ನೀವು ಈ ಕಾರ್ಯಕ್ರಮವನ್ನು ನಿಮ್ಮ ಪಾರ್ಟಿಯಿಂದ ಅಥವಾ ನಿಮ್ಮ ಸಂಘ ಸಂಘಟನೆಗಳಿಂದ ಮಾಡಿ, ನಿಮಗೆ ಯಾರೂ ಬೇಡ ಎನ್ನುವುದಿಲ್ಲ. ಸರ್ಕಾರದ ದುಡ್ಡು ಬಳಸಿ ಇದನ್ನು ಮಾಡಬೇಡಿ. ನಿಮ್ಮ spokespersons, ನಿಮಗೆ ಬೇಕಾದವರೇ ಆ ಕಮಿಟಿಯಲ್ಲಿ members ಆಗಿದ್ದಾರೆ. ನಮ್ಮ ಶಾಸಕರು ಅಲ್ಲಿಗೆ ಹೋಗಿ spectators ಆಗಿ ಅಲ್ಲಿ ನಿಂತಿರಬೇಕು. ಯಾವ ರೀತಿಯಾಗಿ ನೀವು ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸುತ್ತಿದ್ದೀರಿ ಅಥವಾ ವಿದ್ಯಾರ್ಥಿಗಳ ನಡುವೆ ವಿವಾದ ಹುಟ್ಟು ಹಾಕುತ್ತಿದ್ದೀರಿ, ಅವರಲ್ಲಿ division ಮಾಡುತ್ತಿದ್ದೀರಿ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಇದು ಸೂಕ್ಷ್ಮವಾದಂತಹ ವಿಷಯವಾಗಿದೆ. ಇವರ್ಯಾರಿಗೂ ದೇಶಪ್ರೇಮವಿಲ್ಲ, ನಾವು ದೇಶಪ್ರೇಮವನ್ನು ಜಾಗೃತ ಮಾಡಿಸುವ ಸಲುವಾಗಿ ಇವತ್ತು ಅಭಿಯಾನವನ್ನು ಪ್ರಾರಂಭ ಮಾಡಿದ್ದರೆ, ಇವರೆಲ್ಲಾ ವಿರೋಧಿಸುತ್ತಿದ್ದಾರೆ ಎಂದು ಹೇಳುತ್ತೀರಿ. ಆದರೆ ಅದರ ಒಳ ಗುಟ್ಟು ಬೇರೆಯೇ ಇದೆ. ಎಲ್ಲೆಲ್ಲಿ ನೀವು ಹೋಗುತ್ತೀರೋ, ಅಲ್ಲಿ ನಿಮ್ಮದೇ ಕಮಿಟಿ ಇದೆ, ನಿಮಗೆ ಬೇಕಾದವರೇ ಅದರಲ್ಲಿದ್ದಾರೆ, ಅಲ್ಲಿ ನಿಮ್ಮ ಜನರೇ ಮಾತನಾಡುತ್ತಾರೆ. ಈ ಎಲ್ಲಾ ಭೂಮಿಕೆಯನ್ನು ರೆಡಿ ಮಾಡಿಕೊಂಡೇ ನೀವು ಹೋಗುತ್ತಿದ್ದೀರಿ. ಅದಕ್ಕೆ ಸರ್ಕಾರದ ದುಡ್ಡು ಖರ್ಚು ಮಾಡುತ್ತಿದ್ದೀರಿ. ನಿಮ್ಮ ಪಾರ್ಟಿಯಿಂದ ಅದಕ್ಕೆ ದುಡ್ಡು ಖರ್ಚು ಮಾಡಿ, ನೀವು organize ಮಾಡಿಕೊಳ್ಳುತ್ತಾ ಹೋಗಿ, ನಾವೇನೂ ಬೇಡ ಎನ್ನುವುದಿಲ್ಲ. ಆದರೆ, ಸರ್ಕಾರದ ಹಣದಲ್ಲಿ ಇದನ್ನು ಮಾಡಬೇಡಿ. ನಮ್ಮ ಸಂವಿಧಾನದಲ್ಲಿ ಇರುವಂತಹ ಯಾವೊಂದು ತತ್ವಗಳನ್ನು ನೀವು ರಕ್ಷಣೆ ಮಾಡಬೇಕಾಗಿತ್ತೋ, ಆ ತತ್ವಗಳಿಗೆ ಇವತ್ತಿನ ದಿವಸ ತಿಲಾಂಜಲಿ ಕೊಟ್ಟು, ನಿಮ್ಮದೇ ಆದಂತಹ hidden agenda ವನ್ನು ಇವತ್ತು ತೆಗೆದುಕೊಂಡು ಬರುತ್ತಿದ್ದೀರಲ್ಲಾ, ಇದನ್ನು ನಾವು condemn ಮಾಡುತ್ತೇವೆ, ಇದನ್ನು ನಾವು ಸರಿಯಲ್ಲವೆಂದು ಹೇಳುತ್ತಿದ್ದೇವೆ. ಆದರೆ ದುರ್ದೈವದಿಂದ ಅದಕ್ಕೆ ಪ್ರಚಾರ ಏನು ಕೊಡುತ್ತಿದ್ದಾರೆಂದರೆ, ಕಾಂಗ್ರೆಸ್‌ನವರು ಮತ್ತು ವಿರೋಧ ಪಕ್ಷದವರಿಗೆ ದೇಶಪ್ರೇಮದ ಬಗ್ಗೆ ಏನೂ ಚಿಂತನೆ ಇಲ್ಲ, ದೇಶಪ್ರೇಮದ ಬಗ್ಗೆ ಕಾಳಜಿ ಇಲ್ಲ, ನಾವು

ಮಾಡತಕ್ಕಂಥ ಕಾರ್ಯಕ್ರಮಕ್ಕೆ ಅವರು ವಿರೋಧಿಗಳು ಎನ್ನತಕ್ಕಂಥ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತಿದ್ದಾರೆ, ಸಾಮಾನ್ಯ ಜನರ ಮನಸ್ಸಿನಲ್ಲಿ ಮೂಡಿಸುತ್ತಿದ್ದಾರೆ, ಇದೊಂದು ಕುತಂತ್ರ, ಇದೊಂದು conspiracy. ವಿರೋಧ ಪಕ್ಷದವರ ಮೇಲೆ ಇಂತಹ ಮಾತುಗಳನ್ನು ಹೇಳಿ, ಆಪಾದನೆಗಳನ್ನು ಮಾಡಿ, ನಾವೇ Heroಗಳು, ನಾವೇ champions ಎಂದು ಇವರು ತಿಳಿದುಕೊಂಡಿದ್ದಾರೆ. ಅದಕ್ಕಾಗಿಯೇ ಕೆಲವು ಕಡೆ ಘರ್ಷಣೆಗಳು, ವಾದ ವಿವಾದಗಳು ನಡೆದಿದೆ. ನೀವು ಸ್ವಚ್ಛ ಮನಸ್ಸಿನಿಂದ ಮಾಡಿದ್ದರೆ, ಅದನ್ನು ನಾವು ಸ್ವಾಗತಿಸುತ್ತಿದ್ದೆವು. ನಮ್ಮ ಸಿಲಬಸ್‌ನಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೆ ಅನೇಕ ವಿಚರಗಳನ್ನು ನಿಗದಿಪಡಿಸಲಾಗಿದೆ. ಅದನ್ನು ಬಿಟ್ಟು ಕೇಸರೀಕರಣ ಮಾಡುವುದಕ್ಕೆ ಹೊರಟು, ಎಲ್ಲಾ ಪ್ರಿನ್ಸಿಪಾಲರುಗಳಿಗೆ ಎಲ್ಲಾ ಹೆಡ್ ಮಾಸ್ಟರ್‌ಗಳಿಗೆ ಇವತ್ತಿನ ದಿವಸ ಪ್ರತಿಯೊಂದು ಕಾಲೇಜು, ಯುನಿವರ್ಸಿಟಿಗಳಿಗೆ ಹೋಗಿ ನೀವು ಮಾಡುತ್ತಿರುವುದು ರಾಜಕೀಯ ದುರುದ್ದೇಶ ಹೊರತಾಗಿ, ಇದನ್ನು ರಾಜ್ಯದ, ರಾಷ್ಟ್ರದ ಹಿತದೃಷ್ಟಿಯಿಂದ ಮಾಡತಕ್ಕಂಥದ್ದಲ್ಲ. ರಾಜ್ಯ, ರಾಷ್ಟ್ರದ ಹಿತದೃಷ್ಟಿಯಿಂದ ಮಾಡುವವರು, ನಿಮ್ಮ ಪಕ್ಷದ ವತಿಯಿಂದಲೇ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ತಿರುಗಾಡಿ ಹೇಳಬಹುದಾಗಿತ್ತು. ಆದರೆ ಸರ್ಕಾರದ ವೇದಿಕೆಯನ್ನು ಮತ್ತು ಹಣವನ್ನು ಬಳಸಿಕೊಂಡು, ನಿಮ್ಮ ಬಿಜೆಪಿ ತತ್ವ, ಆರ್ ಎಸ್ ಎಸ್ ತತ್ವಗಳನ್ನು ಎಬಿವಿಪಿ ತತ್ವಗಳನ್ನು ಅಲ್ಲಿ ನೀವು ಪ್ರಚಾರ ಮಾಡುತ್ತೀರಾ? ಅದಕ್ಕಾಗಿ ಜನರು ನಿಮ್ಮನ್ನು ಆರಿಸಿ ಕಳುಹಿಸಿದ್ದಾರೆಯೇ? ನೀವು ಅದಕ್ಕಾಗಿಯೇ ಸರ್ಕಾರದ ಹಣವನ್ನು ಈ ರೀತಿಯಾಗಿ ಪೋಲು ಮಾಡುತ್ತೀರಾ? ಈ ರೀತಿ ಇವತ್ತು ನಡೆದುಕೊಂಡು ಎಲ್ಲಾ ಕಡೆ, ವಿದ್ಯಾರ್ಥಿಗಳಲ್ಲಿ ಗೊಂದಲ, ಗಲಾಟೆ ಇಂಥ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದಾರೆ. ಇದೆ ರೀತಿಯಾಗಿ ಎಲ್ಲಾ ಕಡೆ ನೀವು ಮಾಡಿ, ಬಿಜೆಪಿಯನ್ನು ಮಜಬೂತು ಮಾಡಬಹುದೆಂದು ಅವರು ತಿಳಿದುಕೊಂಡಿದ್ದಾರೆ. ಅವರು ಮಾತನಾಡುವುದನ್ನು ನಾನು ನೋಡಿದ್ದೇನೆ, ವಿಧಾನ ಸಭೆ ಉಪ ಚುನಾವಣೆಯಲ್ಲಿ 9ರಲ್ಲಿ ನಾವು 5 ಸ್ಥಾನದಲ್ಲಿ ಗೆದ್ದಿದ್ದೇವೆ, ನಮಗೆ ಹೆಚ್ಚಿನ ಬಹುಮತವಿದೆ, ನಾವು ಮುಂದೆಯು ಕೂಡ ಇದನ್ನು ಮಾಡುತ್ತೇವೆ ಎಂದು ಹೊರಟಿದ್ದಾರೆ. ಈ ರೀತಿಯಾಗಿ ಇವರು ಹೊರಟಿರುವ ಧಾಟಿಯನ್ನು ನೋಡಿದರೆ, ಒಂದು, ಇಲ್ಲ, ದುರಾಂಕಾರದಿಂದ ಈ ಮಾತನ್ನು ಹೇಳುತ್ತಿರಬಹುದು, ಇಲ್ಲ ಇಗೋ, ನಮಗೆ ಶಕ್ತಿ ಇದೆ ನಮಗೆ ಬೇಕಾದ್ದನ್ನು ನಾವು ಮಾಡೋಣವೆನ್ನುವುದು, ಯಾರೂ ಕೇಳುವಂತಿಲ್ಲ, ಪ್ರಜಾಪ್ರಭುತ್ವವಿಲ್ಲ, ನಮಗೆ ಯಾರೂ ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲವೆಂದು ತಿಳಿದುಕೊಂಡು ಚಾಲೆಂಜ್ ಮಾತುಗಳನ್ನಾಡುತ್ತಾರೆ. ಪ್ರೈಮರಿ ಮತ್ತು ಸೆಕೆಂಡರಿ

ಎಜ್ಯುಕೇಷನ್ ಮಿನಿಸ್ಟರ್ ಆದ ಹೆಗಡೆಯವರು, ಇದೇನು ನಿಲ್ಲುವಂತಿಲ್ಲ, ನಾವು ಎಲ್ಲಾ ಕಡೆ ನಡೆಸುತ್ತೇವೆ ಎಂದು ಹೇಳುತ್ತಾರೆ. ಇಷ್ಟು ಸ್ವಾಭಿಮಾನವಿರುವವರು, ಈಗ ನಿಮಗೆಲ್ಲಾ ಅವಕಾಶ ಸಿಕ್ಕಿತಲ್ಲ, ಟೆರರಿಸಂ ಇವತ್ತೆ ನಡೆದಿದೆಯಾ? ಟೆರರಿಸ್ಟ್ ಬಗ್ಗೆ ಮಾತನಾಡುವವರು, ರಾಜೀವ್ ಗಾಂಧಿಯವರನ್ನು ಕೊಂದಾಗ ಎಲ್ಲಿ ಇದ್ದೀರಿ? ಇಂದಿರಾ ಗಾಂಧಿಯನ್ನು ಕೊಂದಾಗ ನೀವು ಎಲ್ಲಿ ಇದ್ದೀರಿ? ಅನೇಕ ಜನರು ಬಲಿಯಾದರಲ್ಲ, ಆವಾಗ ನೀವು ಎಲ್ಲಿ ಇದ್ದೀರಿ? ಈಗ ಸರ್ಕಾರ ಬಂದಾಗ ನಿಮಗೆ ನೆನಪು ಬಂತೆ? ಅಂದರೆ ಇಲ್ಲಿಯವರೆಗೆ ಜನಜಾಗೃತಿ ಮಾಡಬೇಕು, ಜನರಲ್ಲಿ ಸ್ವಾಭಿಮಾನವನ್ನು ಮೂಡಿಸಬೇಕು, ದೇಶ ಪ್ರೇಮದ ಜಾಗ್ರತೆ ಅವರಲ್ಲಿ ಎಬ್ಬಿಸಬೇಕು ಎನ್ನುವ ಭಾವನೆ ನಿಮಗಿರಲಿಲ್ಲವೇ? ಇದು ಏತಕ್ಕೆಂದರೆ, ರಾಜಕೀಯ ದುರುದ್ದೇಶದಿಂದ ಏನೋ ಮಾಡಿ ಯುವಕರನ್ನು ಕಲೆ ಹಾಕಬೇಕು ಮತ್ತು ಯುವಕರಿಗೆ ನಮ್ಮ ತತ್ವಗಳನ್ನು ಕೊಟ್ಟರೆ, ಅವರು ವಿಶೇಷಾಗಿ ಪಾರ್ಲಿಮೆಂಟ್ ಚುನಾವಣೆಯಲ್ಲಿ ನಮಗೆ ಅನುಕೂಲವಾಗುತ್ತದೆ ಎಂದು ತಿಳಿದುಕೊಂಡು ಇದನ್ನು 5 ಅಥವಾ 7 ಕೋಟಿ ರೂಪಾಯಿಗಳನ್ನು ಕೊಟ್ಟು ಇವತ್ತು ಈ ಪ್ರಚಾರವನ್ನು ಮಾಡಿಸಿದ್ದಾರೆ. ಅದು ಎಷ್ಟರ ಮಟ್ಟಿಗೆ ಸರಿ ಎನ್ನುವ ಪ್ರಶ್ನೆಯನ್ನು ಇವತ್ತು ನಾನು ಕೇಳಬೇಕಾಗಿದೆ. ಸರ್ಕಾರದ ಖಜಾನೆಯಲ್ಲಿರುವ ದುಡ್ಡು ನಿಮ್ಮ ಪಕ್ಷದ ಅಭಿವೃದ್ಧಿಗಾಗಿ, ದೇಶದ ಅಭಿವೃದ್ಧಿಗಾಗಿಯಲ್ಲ, ದೇಶದ ಅಭಿವೃದ್ಧಿಗಾಗಿ ಮಾಡುವವರು ಅಧಿಕಾರದಲ್ಲಿದ್ದರೂ ಮಾಡುತ್ತಾರೆ, ಇಲ್ಲದಿದ್ದರೂ ಮಾಡುತ್ತಾರೆ, ಅಂಥ ಅನೇಕ ಸಂಘಟನೆಗಳಿದ್ದಾವೆ, ಆದರೆ ಇವತ್ತು ಆ ಕೆಲಸವನ್ನು ಮಾಡುತ್ತಿದ್ದೀರಿ? ನಿಜವಾಗಿಯು ಇದೊಂದು ದುಃಖಕರವಾದ ಸಂಗತಿ. ಯುವಕರಲ್ಲಿ ದೇಶದ ಹಿತದೃಷ್ಟಿಯಿಂದ ನಾವು ಒಗ್ಗಟ್ಟನ್ನು ತರಬೇಕು, ಎಲ್ಲಿ ಐಕ್ಯತೆಯನ್ನು ತರಬೇಕು ಅಲ್ಲೇ ನೀವು ಡಿವಿಷನ್ ಮಾಡಿದರೆ ಖಂಡಿತವಾಗಿ ಇದು ದೇಶಕ್ಕೆ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಒಳ್ಳೆಯದಾಗಬೇಕೆಂದರೆ ಎಲ್ಲರನ್ನು ಪಕ್ಷಾತೀತವಾಗಿ ಸೇರಿಸಿಕೊಂಡು ಯಾರು ಪರಿಣಿತರಿದ್ದಾರೊ, ಸಂವಿಧಾನದ ಬಗ್ಗೆ ಮಾತನಾಡುವ ಪ್ರೊಫೆಸರ್ಸ್, ಪ್ರಿನ್ಸಿಪಾಲ್ಸ್, ರಾಷ್ಟ್ರದ ಐಕ್ಯತೆಯ ಬಗ್ಗೆ ಗೌರವವಿರುವವರು ಅನೇಕ ಜನರು ಎಲ್ಲಾ ಪಕ್ಷದಲ್ಲೂ ಇದ್ದಾರೆ. ಇವರಿಗೆ ಬೇಕಾದವರು ಮಾತ್ರ ದೇಶಪ್ರೇಮಿಗಳು, ಅವರು ದೇಶದ ಬಗ್ಗೆ ಮಾತನಾಡುತ್ತಾರೆ, ಇವರ ವಿಚಾರಧಾರೆ ಅಥವಾ ಐಡಿಯಾಲಜಿಯ ವಿರುದ್ಧವಿರುವವರು ದೇಶಭಕ್ತರಲ್ಲ, ನಾವೆಲ್ಲಾ ದೇಶಭಕ್ತರಲ್ಲ, ಇವರೇ ದೇಶಭಕ್ತರು, ಕಾಂಟ್ರಾಕ್ಟ್ ತೆಗೆದುಕೊಂಡಿದ್ದಾರೆ. ಎಲ್ಲಿ ಹೋದಲ್ಲಿ ನಾವೇ ಎಂದು ಹೇಳಿಕೊಳ್ಳುವ ಕಾಂಟ್ರಾಕ್ಟ್ ತೆಗೆದುಕೊಂಡು ಇವತ್ತು ಮಾತನಾಡುತ್ತಿದ್ದಾರೆ. ಈ ರಾಜ್ಯದಲ್ಲಿ ನಿಮಗೆ 34% ಓಟು ಕೊಟ್ಟರೆ ನಮಗೆ 36%

ಓಟು ಕೊಟ್ಟಿದ್ದಾರೆ, ಅಂದರೆ ಜನ ಬೆಂಬಲ ನಮಗಿದೆ ಎಂಬುದನ್ನು ನೀವು ಮರೆಯಬೇಡಿ. ಏನೋ ಆಕಸ್ಮಿಕವಾಗಿ ನಿಮಗೆ ಸಿಕ್ಕಿದೆ, ಅದನ್ನು ನಿಯತ್ತಾಗಿ ಉಳಿಸಿಕೊಂಡು ಕೆಲಸ ಮಾಡುವುದನ್ನು ಕಲಿಯಬೇಕೊ ಹೊರತು ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟಿ ಅಶಾಂತಿಯನ್ನು ಮೂಡಿಸುವ ಕೆಲಸವನ್ನು ಮಾಡಬೇಡಿ. ಇನ್ನು ಕೆಲವು ಕಾಲೇಜುಗಳಲ್ಲಿ ಡ್ರೆಸ್ ಕೋಡ್ ಅನ್ನು ಏತಕ್ಕೆ ಜಾರಿಗೆ ತರಬಾರದೆಂಬುದು, ನಿಮ್ಮ ಮಂತ್ರಿಗಳು ಹೇಳಿಕೆಗಳನ್ನು ಕೊಡುವುದು, ವ್ಯಾಲಂಟೈನ್ ಡೇಗೆ ಈ ರಾಜ್ಯದಲ್ಲಿ ವಿಶೇಷವಾಗಿ ವಿರೋಧ ಮಾಡುವ ರಾಮಸೇನೆಯ ಅಧ್ಯಕ್ಷರಾದ ಪ್ರಮೋದ್ ಮುತಾಲಿಕ್ ಅವರು ಓಪನ್ ಆಗಿ ಹೇಳಿದ್ದೆ ಹೇಳಿದ್ದು. ಯಾರೋ ಒಬ್ಬ NGO ಪಿಂಕ್ ಚಡ್ಡಿ ಕಳುಹಿಸುತ್ತೇವೆಂದು ಪ್ರಸ್ ನೋಟ್ ಮತ್ತು ಟಿವಿಯಲ್ಲಿ ಹೇಳಿದರೆ, ನಾನು ಪಿಂಕ್ ಸ್ಯಾರಿ ಕಳುಹಿಸುತ್ತೇನೆಂದು ಹೇಳುತ್ತಾರೆ. ಇಂಥ ತಲೆಕೆಟ್ಟ ಜನರಿಗೆ ನೀವು ಬೆಂಬಲ ಮಾಡಿದರೆ ನಿಜವಾಗಿಯು ಈ ರಾಜ್ಯ ಉಳಿಯುವುದಿಲ್ಲ. ಈ ರಾಜ್ಯಕ್ಕೆ ಯಾವ ಕೈಗಾರಿಕೋದ್ಯಮಿಯೂ ಬರುವುದಿಲ್ಲ, ಯಾವ ಜನರೂ ಬರುವುದಿಲ್ಲ, ನಮಗಿರುವ ಗೌರವವನ್ನು ದಿನೇ ದಿನೇ ಕಳೆದುಕೊಳ್ಳುತ್ತಿದ್ದೇವೆಯೇ ಹೊರತು, ಇಂಥವರ ನಡವಳಿಕೆಯಿಂದ ಇನ್ನು ಗೌರವವನ್ನು ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಅವರನ್ನೇನೊ ಆ 14ನೇ ತಾರೀಖಿನಂದು ಸರೆಂಡರ್ ಮಾಡಿ ಒಳಗಿ ಹಾಕಿದರು, ಆದರೆ ಎಲ್ಲಾ ಕಡೆ ಅವರ ಬಾಯಿ ಓಪನ್, ಬೇಕಾದ್ದನ್ನು ಹೇಳಿಕೊಳ್ಳುತ್ತಾ ಇವತ್ತು ಹೋಗಿದ್ದಾರೆ. ಕೆಲವು ಸಲ ಅವರಿಗೆ ಬೈದಂತೆ ಮಾಡುತ್ತಾರೆ, ಕೆಲವು ಸಲ ಪ್ರೀತಿನೂ ಮಾಡುತ್ತಾರೆ. ಕೆಲವು ಸಾರಿ ಬಿಜೆಪಿ ಸರ್ಕಾರ ನಮ್ಮನ್ನು ಒಳಗೆ ಹಾಕಿದೆ ಎನ್ನುತ್ತಾರೆ, ಇನ್ನೊಂದು ಕಡೆ ಅದೇ ಮುತಾಲಿಕ್, ಬಿಜೆಪಿ ಸರ್ಕಾರವನ್ನು ಉರಳಿಸಬೇಕೆಂದು ಇದನ್ನು ಕಾಂಗ್ರೆಸ್‌ನವರ ಸಂಚು ಎಂದು ಹೇಳುತ್ತಾರೆ. ಯಾವ ವ್ಯಕ್ತಿ ಒಂದು ಕಡೆ ಬಿಜೆಪಿಯನ್ನು ಬೈದಂತೆ ಮಾಡುತ್ತಾನೆ, ಕಾಂಗ್ರೆಸ್‌ನವರಿಗೆ ನೀವೇ ಕಾರಣಕರ್ತರೆಂದು ಬೈಯುತ್ತಾರೆ, ಇನ್ನೊಂದು ಕಡೆ ಅವರಿಗೆ ಬೈದಂತೆ ಮಾಡಿ, ಕೊನೆಗೆ ಅವರು ಇವರು ಒಂದಾಗಿ ನೀವು ನಡೆಸಬೇಕಾಗುತ್ತದೆ. ನಾನು ಬೈದಂತೆ ಮಾಡುತ್ತೇನೆ, ನಾನು ಹೊಡೆದಂತೆ ಮಾಡುತ್ತೇನೆ, ನೀನು ಅತ್ತಂತೆ ಮಾಡು ಎಂದು, ಈ ಪ್ರಾಕ್ಟಿಸ್ ನಡೆದಿದೆ. ಅದಕ್ಕೆ ಇವತ್ತು ನಿಮ್ಮನ್ನು ನೋಡಿದರೆ ನಿಜವಾಗಿಯೂ ಯುವಕರು ಒಂದು ನಿಶ್ಚಲ ಮನಸ್ಸಿನಿಂದ ತಿರುಗುವಂತಿಲ್ಲ, ಅಂದರೆ ಇಲ್ಲಿ freedom of movement ಇಲ್ಲ, freedom of speech ಇಲ್ಲ, ಇವತ್ತು ಜರ್ನಲಿಸ್ಟ್ಸ್ ಪಾಪ, ಅನೇಕ ಜನ ಜರ್ನಲಿಸ್ಟ್ಸ್ ಈ ಸರ್ಕಾರದ ವಿರುದ್ಧ ಬರೆದಿದ್ದಾರೆಂದು ತಿಳಿದುಕೊಂಡು ಅಥವಾ ಗೃಹಸಚಿವರ ವಿರುದ್ಧ ಲೇಖನಗಳನ್ನು ಬರೆದಿದ್ದಾರೆಂದು ತಿಳಿದುಕೊಂಡು, ಸೀತಾರಂ

ಎಂಬುವರನ್ನು ಹೊಯ್ದು ಒಂದು ತಿಂಗಳ ಜೈಲಿನಲ್ಲಿ ಹಾಕಿದರು. ಇದನ್ನು ಏತಕ್ಕೆ ನೀವು ಮಾಡುವುದಕ್ಕೆ ಹೋದಿರೆಂದರೆ, ಅವರ ಆಂಟಿಸಿಡೆಂಟ್ ನಿಮಗೆ ಗೊತ್ತಾ? ಅವನು ಏನು ಮಾಡಿದ್ದಾನೆ ಗೊತ್ತಾ ಎನ್ನುತ್ತಾರೆ. ಅಂದರೆ, ಇಂಥ ಪ್ರಿಜ್ಯುಡಿಸ್ ಇಟ್ಟುಕೊಂಡು ನೀವು ಜರ್ನಲಿಸ್ಟ್ಸ್ ಬಾಯಿ ಮುಚ್ಚಿಸುವುದು ಅಥವಾ ಅವರು ಬರೆಯುವ ಪೆನ್ನನ್ನು ನಿಲ್ಲಿಸತಕ್ಕಂಥದ್ದನ್ನು ಮಾಡಿದರೆ, ಈ ಕರ್ನಾಟಕ ಜನತೆ ಎಂದೂ ಕೂಡ ಸಹಿಸುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ, ನೀವು ಇದಕ್ಕೆ ದೊಡ್ಡ ಬೆಲೆಯನ್ನು ತರಬೇಕಾಗುತ್ತದೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಯಾರು ನಿಮ್ಮನ್ನು ಹೊಗಳಿ ಹಾಡಿ, ಅನೇಕ ತಪ್ಪುಗಳನ್ನು ಮಾಡಿದರು ಕೂಡ, ಇವತ್ತಿನ ದಿವಸ ನಿಮ್ಮ ಜೊತೆಯಲ್ಲಿದ್ದರೋ ಅಂಥ ಪತ್ರಿಕೆಗಳನ್ನೂ ಕೂಡ ನೀವು ವಿರೋಧಿಸುತ್ತಿದ್ದೀರಿ ಮತ್ತು ನಿಮ್ಮ ಪರವಾಗಿ ಬರೆಯಲಿಲ್ಲವೆಂದರೆ, ಅವನ್ಯಾರು ಎಂದು ಸಿಂಗ್ಯುಲರ್ ನಲ್ಲಿ ಮಾತನಾಡುವುದು. ಇವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ, ombudsman ಕಾನೂನನ್ನು ನಾವು ಏತಕ್ಕೆ ಜಾರಿಗೆ ತರಬಾರದು ಎಂದು ಹೇಳುತ್ತಾರೆಂದರೆ ಇವರ ವಿಚಾರ ಎಲ್ಲಿಯವರೆಗೆ ಹೋಗಿದೆ? ಇವರ ಪರ ಪ್ರಚಾರದಲ್ಲಿದ್ದರೆ ಅದರ ಬಗ್ಗೆ ಇದುವರೆಗೆ ಇವರು ಚಿಂತನೆ ಮಾಡಲಿಲ್ಲ, ಎಲ್ಲಿ ಒಂದೆರಡು ಆರ್ಟಿಕಲ್ಸ್ ಇವರ ವಿರುದ್ಧವಾಗಿ ಬಂತೋ ಅಂಥ ಕಡೆ ಮಾತ್ರ ಇದನ್ನು ಉಪಯೋಗ ಮಾಡುವ ಮಾತನ್ನಾಡಿದರು. ತಕ್ಷಣ ಮುಖ್ಯಮಂತ್ರಿಗಳು, ಅವರು ಹೇಳಿರಬಹುದು, ನಾನು ಇದಕ್ಕೆ ಒಪ್ಪುವುದಿಲ್ಲ, ಮಾಡಿಕೊಡಿಸುವುದಿಲ್ಲವೆಂದು ಹೇಳಿದರು. ಏಕೆ? ಆವಾಗ ಕೆಲವು ಜನ ಬಂದು, ಏನ್ ಸ್ವಾಮಿ ನಾವಲ್ಲವೇ ನಿಮ್ಮ ಪರ ಆರ್ಟಿಕಲ್ಸ್ ಬರೆದು ನಿಮ್ಮನ್ನು ತಂದಿದ್ದು, ನೀವೇ ಈ ರೀತಿ ಮಾಡಿದರೆ ಹೇಗೆ ಎಂದು ಬಹುಶಃ ಹೇಳಿರಬಹುದು.

5-00 PM

ನಿಮ್ಮ ಮೈಂಡ್ ಸೆಟ್ ನಿಮ್ಮ ವಿಚಾರಧಾರೆ ಹೇಗೆ ಇದೆ ಎಂದು ಇದರಿಂದ ಗೊತ್ತಾಗುತ್ತದೆ. ಅವರಿಗೆ ಗೊತ್ತಾಗುತ್ತದೆ. ಅವರಿಗೆ ಹ್ಯಾಂಡ್ ಕಪ್ ಹಾಕಿ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಒಂದು ತಿಂಗಳು ಜೈಲಿನಲ್ಲಿ ಇಟ್ಟು ಅವರಿಗೆ ಬೇಲ್ ಸಿಗದೇ ಇರುವ ರೀತಿಯಲ್ಲಿ ನಡೆದುಕೊಂಡರು. ಇಷ್ಟೊಂದು ಕೆಲಸ ಹೋಮ್ ಮಿನಿಸ್ಟರ್ ಮಾಡುತ್ತಿದ್ದಾರೆ. ಅವರ ಮೇಲೆ ಮಾನ್ಯ ಮುಖ್ಯ ಮಂತ್ರಿಗಳ ಅಭಯ ಹಸ್ತ ಇರುವುದರಿಂದ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಅವರಿಗೆ ಒಳ್ಳೆಯ ಪೋರ್ಟ್ ಫೋಲಿಯೋ ಕೊಟ್ಟು ನನಗೆ ಸಹಾಯಕನಾಗಲಿ ಎಂದು ಇಟ್ಟಿದ್ದೀರಿ. ಆದರೆ ದಿನಾ ಒಂದು ಪ್ರಾಬ್ಲಮ್ ಬರುತ್ತಿದೆ. ಪಬ್ ಗಲಾಟೆ ಆಗಿದ್ದು ಇಲ್ಲಿಯೆ, MLA ಮಗಳಿಗೆ ಹೆರಾಸ್‌ಮೆಂಟ್ ಆಗಿದ್ದು ಇಲ್ಲಿಯೇ,

ಮಂಗಳೂರಿನಲ್ಲಿಯೇ ಸೀತಾರಾಮ್ ರವರಿಗೆ ಜೈಲಿಗೆ ಕಳುಹಿಸಿದ್ದು, ಪದ್ಮಪ್ರಿಯ ಕೇಸ್ ಮಂಗಳೂರಿನಲ್ಲಿಯೇ ಆಗಿದ್ದು, ಹಿಂದು ಮುಸಲ್ಮಾನರಲ್ಲಿ ಒಂದು ಕೋಮಿನ ಜನ ಇನ್ನೊಂದು ಕೋಮಿನ ಜನರಿಗೆ ಎತ್ತಿ ಕಟ್ಟಿರುವುದು ಅಲ್ಲಿಯೇ, ಜಾನುವಾರುಗಳಿಗೆ ಹಿಡಿದು ನಿಲ್ಲಿಸಿದ್ದೂ ಅಲ್ಲಿಯೇ, ಲಾರಿಯಲ್ಲಿ ಹೋಗತಕ್ಕಂತಹ ಜಾನುವಾರುಗಳಿಗೆ ನಿಲ್ಲಿಸಿ ಅಟ್ಯಾಕ್ ಮಾಡಿದ್ದು ಅಲ್ಲಿಯೇ. ಒಬ್ಬ ಜರ್ನಲಿಸ್ಟ್‌ಗೆ ತೊಂದರೆ ಕೊಟ್ಟು ಒಳಗಡೆ ಹಾಕಿದ್ದು ಅಲ್ಲಿಯೇ. 17ನೇ ಆಗಸ್ಟ್‌ಗೆ ಚರ್ಚ್ ಮೇಲೆ ದಾಳಿ ನಡೆದದ್ದು ಅಲ್ಲಿಯೇ, ಎಲ್ಲಾ ನಿಮ್ಮ ಊರಿನಲ್ಲಿಯೇ ಆಗುವಾಗ ಏಕೆ ಅವರ ಬಗ್ಗೆ ಇಷ್ಟೊಂದು ಪ್ರೀತಿ ನಿಮಗೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತಿದೆ. ಅವರನ್ನು ಡಿಸ್‌ಮಿಸ್ ಮಾಡಿ. ನೀವು ಎಷ್ಟು ಜೋರಾಗಿದ್ದೀರಿ ಮುಖ್ಯ ಮಂತ್ರಿಗಳಾದ ಮೇಲೆ ಏಕೆ ಹೀಗೆ ಆದಿರಿ ಎಂಬುದು ಗೊತ್ತಿಲ್ಲ? ಅವರ ಆರ್ಭಟ ಹೇಗಿತ್ತು ಎಂದು ತಾವು ನೋಡಿದ್ದೀರಿ. ಅವರ ಜೊತೆಯಲ್ಲಿಯೇ ಇದ್ದಿರಿ. ಇಂಥದ್ದು ಏನಾದರೂ ಆಗಿದ್ದರೆ ಇಲ್ಲಿಯವರೆಗೆ 20 ರಿಂದ ನೂರಾರು ಕಾಗದ ಇಲ್ಲಿಂದ ಆ ಕಡೆ, ಆ ಕಡೆಯಿಂದ ಈ ಕಡೆ ಹಾರಾಡುತ್ತಿದ್ದವು. ನಮಗೆಲ್ಲಾ ಏನೇನು ಹೇಳುತ್ತಿದ್ದರೋ ಗೊತ್ತಿಲ್ಲ. ಆದರೆ ಈಗ ಬಾಯಿಯೂ ಮುಚ್ಚಿಕೊಂಡಿದ್ದಾರೆ, ಅವರ ಕೈಯೂ ಬಡಿಯುತ್ತಿಲ್ಲ. ಎರಡೂ ಕೂಡ ಇಲ್ಲ. ಬರೀ ಕೇಳುವುದು ಮಾತ್ರ ಇಟ್ಟಿದ್ದೀರಿ. ಮಾತನಾಡುವುದು ಕಡಿಮೆ ಮಾಡಿದ್ದೀರಿ. ಇದು ಮುಗಿದರೆ ಸಾಕು ಎನ್ನುವ ಪರಿಸ್ಥಿತಿಗೆ ಬಂದಿದ್ದಾರೆ. ಆಚಾರ್ಯ ಏನು ಮಾಡುತ್ತಾರೆ, ಆಚಾರ್ಯ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ನೀನು in efficient ಇದ್ದೀಯಾ, ಇದು ಸರಿಯಲ್ಲ ನಾನು ಒಂಬತ್ತು ತಿಂಗಳು ನೋಡಿದ್ದೇನೆ. ಒಂಬತ್ತು ತಿಂಗಳಲ್ಲಿ ಡೆಲಿವರಿ ಮಾಡುವುದಕ್ಕಾಗಲಿಲ್ಲ. ಈಗಲಾದರೂ ನೀನು ಮನೆಗೆ ಹೋಗು ಎಂದು ಹೇಳಿ. ಇನ್ನೊಬ್ಬರಿಗೆ ಸಚಿವರನ್ನಾಗಿ ಮಾಡಿ. ಅದು ಬಿಟ್ಟು ನೀವು ಅವರು ಹೇಳಿದ್ದನ್ನೆಲ್ಲಾ ಸಮರ್ಥನೆ ಮಾಡಿಕೊಂಡು ಬಂದರೆ ಖಂಡಿತವಾಗಿ ಇದು ರಾಜ್ಯಕ್ಕೆ ಅಪಾಯಕಾರಿ. ರಾಜ್ಯದಲ್ಲಿ ದಿನೇ ದಿನೇ ಲಾ ಅಂಡ್ ಆರ್ಡರ್ ಕೆಡುತ್ತಿದೆ. ಈಗ ಪುನಃ ಕೆಡಿಸುತ್ತಿದ್ದಾರೆ ಎನ್ನತಕ್ಕಂತಹ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಧೈರ್ಯ ಮಾಡಿ ಕೈ ಬಿಡಿ. ಇನ್ನೊಬ್ಬರಿಗೆ ಬೇಕಾದರೆ ಕೊಡಿ, ಇಲ್ಲ ನಿಮ್ಮಲ್ಲಿಯೇ ಇಟ್ಟುಕೊಳ್ಳಿ ನಾವು ಅಸೂಯೆಯಿಂದ ಹೇಳುತ್ತಿಲ್ಲ. ಅಪ್ರತ್ಯಕ್ಷವಾಗಿ ಬೇರೆಯವರ ಹತ್ತಿರ ಮಾತನಾಡಿ ಸರಿ ಎಂದು ಹೇಳಿದರೆ ನಾನು ಒಪ್ಪುತ್ತೇನೆ. ಮಾತಿಗೆ ಮಾತು ಬರುತ್ತದೆ ಎಂದು ತಿಳಿದುಕೊಂಡು ಏನಾದರೂ ಒಂದು ತಪ್ಪಿಸಿಕೊಳ್ಳತಕ್ಕಂತಹ ಸ್ಥಿತಿಯಲ್ಲಿದ್ದರೆ. ತನ್ನ ಜಿಲ್ಲೆಯನ್ನೇ ತಾನು ನಿರ್ವಹಿಸಲು ಆಗುವುದಿಲ್ಲ. ತನ್ನ ಪಕ್ಕದ ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ನೋಡುವುದಕ್ಕಾಗುವುದಿಲ್ಲ ಎಂದರೆ ಇವರು ಏತಕ್ಕೋಸ್ಕರ

ಇರಬೇಕು? ಇದರ ಜೊತೆಯಲ್ಲಿ ಆಚಾರ್ಯ ಅವರ ಅಸೋಸಿಯೇಷನ್‌ಗೆ ಸಂಬಂಧಪಟ್ಟವರು ಅಥವಾ ಅವರ ಪಕ್ಷದ ಘಟಕಗಳು ಏನಿವೆ, ಅದಕ್ಕೆ ಸಂಬಂಧಪಟ್ಟವರು, ಶ್ರೀಮತಿ ರೇಣುಕಾಚೌಧರಿ Minister for women and hild welfare ಅವರು ಅಲ್ಲಿ ಪಬ್ ಕಲ್ಚರ್ ಆಗುವುದು ಬೇಡ. ತಾಲಿಬಾನ್ ಸಂಸ್ಕೃತಿ ತರುವುದು ಬೇಡವೆಂದು ಹೇಳಿದರು ಎಂದು ಅವರ ಮೇಲೆ ಅಟ್ಯಾಕ್, ಅವರ ಮೇಲೆ FIR ಯಾರು ನ್ಯಾಯವಾಗಿ ಹೇಳುತ್ತಾರೆ, ಆ ಮಂತ್ರಿಗಳ ಮೇಲೆ ತಕ್ಷಣ FIR. ಇಲ್ಲಿ ಎದೆ ಬಡಿದುಕೊಂಡು ನಾವೇ ತಪ್ಪು ಮಾಡಿದ್ದೇವೆಂದು ಹೇಳುವ ಪ್ರಮೋದ್ ಮುತಾಲಿಕ್‌ಗೆ ಕನ್‌ಸೇಷನ್, ಭಜರಂಗದಳದ ಅಧ್ಯಕ್ಷನಾದಂತಹ ಮಹೇಂದ್ರಕುಮಾರ್‌ಗೆ ಕನ್‌ವಿನಿಷನ್ ಅವರಿಗೆ ಏಕೆ ಅರೆಸ್ಟ್ ಮಾಡಲಿಲ್ಲ ಎಂದು ಈ ಸದನದಲ್ಲಿ ಕೇಳಿದೆವು. ಆಗ ಇವತ್ತು ಮಾಡುತ್ತೇವೆ, ನಾಳೆ ಮಾಡುತ್ತೇವೆಂದು ಹೇಳಿದರು, ಅವರಿಗೆ ಮಾಡಬೇಕಾದ ತಿಂಗಳಾನುಗಟ್ಟಲೆ ಹುಡುಕಬೇಕು. ಆದರೆ ಇಲ್ಲಿ ಒಬ್ಬ ಕೇಂದ್ರ ಸಚಿವೆಗೆ ತಕ್ಷಣ ಅವರ ಮೇಲೆ FIR ಮಾಡುವುದಕ್ಕೆ ಒಬ್ಬ Sub Inspector ಅಥವಾ Inspector in charge of the station ಮುಂದೆ ಬರುತ್ತಾರೆಂದರೆ ಎಷ್ಟರ ಮಟ್ಟಿಗೆ ಇವರು ಹೋಗಿದ್ದಾರೆ ಹೆದರಿಸತಕ್ಕಂಥದ್ದು ಮಾಡುತ್ತಿದ್ದಾರೆ. ಕಾನೂನು ಕೈಯಲ್ಲಿ ತೆಗೆದುಕೊಂಡು ಅಥವಾ ಆಡಳಿತದ ಚುಕ್ಕಾಣಿ ಹಿಡಿದವರು ಕಾನೂನು ವಿರುದ್ಧವಾದ ಚಟುವಟಿಕೆಗಳು ಮಾಡಿ ಈ ರೀತಿಯಾದ ಧೈರ್ಯವನ್ನು ಪೊಲೀಸ್‌ನವರಿಗೆ ಕೊಡುತ್ತಿದ್ದಾರೆ. ಅದಕ್ಕೆ ನಾನು ಇವತ್ತು ಈ ಮಾತನ್ನು ಕೇಳಬೇಕಾಗಿದೆ. ಯಾರಾದರೂ ಬುದ್ದಿ ಮಾತು ಹೇಳುವುದು, ಟೀಕೆ ಟಿಪ್ಪಣಿ ಪ್ರಜಾಪ್ರಭುತ್ವದಲ್ಲಿ ಮಾಡತಕ್ಕಂಥದ್ದು ಇದಕ್ಕೆ ಈ ಸರ್ಕಾರದಲ್ಲಿ ಆಸ್ಪದ ಇಲ್ಲ ಎಂದರೆ ಸಂವಿಧಾನದಲ್ಲಿ ಕೊಟ್ಟಂತಹ fundamental rights freedom of speech ತೆಗೆದು ಹಾಕಬೇಕು. ಏಕೆಂದರೆ ಎಲ್ಲರೂ ಮೂಕರ ಹಾಗೆ ಓಡಾಡಬಹುದು. ಅವರಿಂದ ದೇಶದಲ್ಲಿ ಅನಾಹುತ ಆಯಿತಾ, ರಾಜ್ಯದಲ್ಲಿ ದಂಗೆಗಳಾಗಿದ್ದವಾ? ಅಮಾಯಕ ಹೆಣ್ಣು ಮಕ್ಕಳ ಮೇಲೆ ನೀವು ಮಾಡಿದ್ದು ಸರಿಯಲ್ಲವೆಂದು ಕಂಡಂ ಮಾಡಿದರೆ ಕೇಸ್ ಹಾಕುತ್ತೀರಿ. ಇಂತಹ ಘಟನೆಗಳು ಒಂದಲ್ಲ ಹತ್ತಾರು ಇವೆ. ಕೆಲವು ಜನರಿಗೆ ಏಕೆ ಕುಮ್ಮಕ್ಕು ಬಂದಿತ್ತು ಎಂದರೆ ನೀವು ಏನು ಹಿಂದೆ ಇಂತಹ ಘಟನೆಗಳಲ್ಲಿ ಯಾರು ಇದ್ದರು, ವಿಶೇಷವಾಗಿ ನಮ್ಮ ಭಜರಂಗದಳದವರು ದತ್ತಪೀಠ ಅಭಿಯಾನ ನಡೆದಾಗ ಅನೇಕ ಜನ ಕ್ರಿಮಿನಲ್ ಕೇಸಸ್‌ನಲ್ಲಿ involve ಆಗಿದ್ದರು. ಯಾರು ಕಲ್ಲು ಹೊಡೆದಿದ್ದರು, ಅಶಾಂತಿಯನ್ನು ಉಂಟು ಮಾಡಿದ್ದರು ಅವೆಲ್ಲಾ 15 ಕೇಸಸ್ ಕ್ಯಾಬಿನೆಟ್‌ನಲ್ಲಿ ಇಟ್ಟು ವಿತ್‌ಡ್ರಾ ಮಾಡಿದರು. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುವುದು ಬಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಂಡರೆ ಯಾವ ರೀತಿಯ ಮೆಸೇಜ್

ನೀವು ಕೊಡುತ್ತಿದ್ದೀರಿ ಎಂದರೆ, ಏನು ಮೆಸೇಜ್ ಹೋಯಿತು, ನಾವು ಏನು ಮಾಡಿದರೂ ಕೂಡ ಈ ರಾಜ್ಯದಲ್ಲಿ BJP ಸರ್ಕಾರ ನಮಗೆ ಉಳಿಸಿಕೊಳ್ಳುತ್ತದೆ, ನಮ್ಮ ಮೇಲೆ ಕೇಸ್ ಹಾಕುವುದಿಲ್ಲ, ನಾವು ಬೇಕಾದ್ದು ಮಾಡಬಹುದು. ಅವರೆಲ್ಲರಿಗೂ ಮಾಫ್ ಅಂದ ಹಾಗೆ ಈ ರಾಮಸೇನೆ, ಭಜರಂಗದಳ ABVP ಇವರೆಲ್ಲರೂ ಏನು ಮಾಡಿದರೂ ನಡೆದು ಹೋಗುತ್ತದೆ ಎನ್ನುವುದಕ್ಕೆ ಒಂದು ಸೂಚನೆ ಕೊಟ್ಟಿದ್ದೀರಿ. ಅಪ್ರತ್ಯಕ್ಷವಾಗಿ ನಿಮ್ಮಿಂದ ಬೆಂಬಲ ಸಿಕ್ಕಿದೆ ಎನ್ನುವುದು ಸ್ಪಷ್ಟ ಜೊತೆಯಲ್ಲಿ ಇನ್ನು ಈಗಾಗಲೇ ನಾನು ಹೇಳಿದೆ, ಈ ಕೇಸಸ್ ವಿತ್‌ಡ್ರಾ ಮಾಡಿಕೊಳ್ಳತಕ್ಕಂತಹ ಅವಶ್ಯಕತೆ ಇರಲಿಲ್ಲ. ನೀವು ಅಲ್ಲಿ ಏನಾದರೂ ಯಾರಾದರೂ ಹಿಂದಿನ ಸರ್ಕಾರಗಳ ದ್ವೇಷದಿಂದ ಅಥವಾ ಪೊಲೀಸರು ದ್ವೇಷದಿಂದ ಅವರ ಮೇಲೆ ಕೇಸ್ ಹಾಕಿದ್ದರೆ, ಸರಿ ಉದ್ದೇಶ ಪೂರ್ವಕವಾಗಿ ಈ ಕೇಸ್‌ಗಳನ್ನು ಹಾಕಿದ್ದರು ಅದಕ್ಕಾಗಿ ನಾವು ವಾಪಸ್ ತೆಗೆದುಕೊಂಡಿದ್ದೇವೆ ಎಂದರೆ ಯಾರಾದರೂ ಒಪ್ಪುತ್ತಿದ್ದರು. ಇದು ಏನೂ ಇಲ್ಲ. ಯಥಾ ಪ್ರಕಾರ ಕಾನೂನು ಮುರಿದಂತಹವರಿಗೆ ಕಾನೂನು ಅಡಿಯಲ್ಲಿ ಶಿಕ್ಷೆ ಆಗಬೇಕೆಂದು ಕೇಸ್ ಇದ್ದುದು ಎಲ್ಲಾ ಕೂಡ ಇವತ್ತು ವಿತ್‌ಡ್ರಾ ಆಗುತ್ತಿವೆ. ಇದರಿಂದ BJP ಸರ್ಕಾರ RSSಗೆ ABVPಗೆ ರಾಮಸೇನೆಗೆ ಮತ್ತು ಭಜರಂಗದಳಕ್ಕೆ ಪ್ರೋತ್ಸಾಹ ನೀಡುತ್ತಿದ್ದೀರಿ. ಇದು ನನ್ನ ಛಾರ್ಜ್. ಇವತ್ತು ನೀವೇ ನಿಂತು ಕುಮ್ಮಕ್ಕು ಕೊಟ್ಟು ಕಾನೂನು ಕೈಯಲ್ಲಿ ತೆಗೆದುಕೊಳ್ಳಿ ಎನ್ನುವಂತಹ ರೀತಿಯಲ್ಲಿ ನಿಮ್ಮ ಉಪದೇಶ ಆಗಿದೆ. ನಿಮ್ಮ ಆಡಳಿತ ಈ ರೀತಿಯಾಗಿ ನಡೆದಿದೆ. ಅದಲ್ಲದೆ ಇನ್ನೊಂದು ವಿಶೇಷ ಎಂದರೆ, ಕೆಲವು ಕಡೆ ಘಟನೆಗಳು ನಡೆಯುತ್ತವೆ. ವಿದ್ಯಾರ್ಥಿಗಳು, ದತ್ತಪೀಠ, ಅನೇಕ ಕಡೆ ಪಬ್ ಮೇಲೆ ಅಟ್ಯಾಕ್ ಮಾಡಿದವರ ಮೇಲೆ ಯಾವ ಕಾನೂನು ಕೇಸೂ ಹಾಕುವ ಹಾಗಿಲ್ಲ. ಎಲ್ಲೋ ಸ್ವಲ್ಪ ಗಲಾಟೆ ಮಾಡುತ್ತಾರೆಂದು ಹೇಳಿ ಸಿಂಪಲ್ ಕೇಸ್. ಬೇಲ್‌ಬಲ್ ಅಫೆನ್ಸ್ ಅಲ್ಲಿಯೇ ಸೆಲ್ಫ್ ಬಾಂಡ್ ಬರೆದುಕೊಟ್ಟು ಮನೆಗೆ ಕಳುಹಿಸಿ ಕೊಡುವುದು. ಅಂದರೆ ಅವರಿಗೆ ಹೆದರಿಕೆ ಹುಟ್ಟುತ್ತದೆಯಾ? ಅಥವಾ ಕಾನೂನು ವ್ಯವಸ್ಥೆ ಇದೆಯೇ ಎಂದು. ಆದರೆ ಅದೇ ವಿರೋಧ ಪಕ್ಷದವರು ಮಾಡಿದರೆ ತಕ್ಷಣ ಅವರ ಮೇಲೆ ಕ್ರಮ ಜರುಗಿಸುವುದು. ಪ್ರೊಟೆಸ್ಟ್ ಮಾಡಿದವರ ಮೇಲೆ ಕೇಸ್‌ಗಳು ಹಾಕುವುದು. ಇವತ್ತಿನ ದಿವಸ ನೂರಾರು ಕೇಸ್‌ಗಳು ನ್ಯಾಯವಾಗಿ ಪ್ರೊಟೆಸ್ಟ್ ಮಾಡಿದಂತಹ ಜನರ ಮೇಲೆ ಬಿದ್ದಿವೆ. ಅದು ಬಳ್ಳಾರಿಯಲ್ಲಿರಬಹುದು, ಮೈಸೂರಿನಲ್ಲಿರಬಹುದು, ಮಂಗಳೂರಿನಲ್ಲಿರಬಹುದು, ಬೆಂಗಳೂರಿನಲ್ಲಿರಬಹುದು, ಅಥವಾ ಅನೇಕ ಕಡೆ ಎಲ್ಲಿ ಪ್ರಜಾಪ್ರಭುತ್ವದ ತತ್ವದ ಪ್ರಕಾರ ಇವತ್ತಿನ ದಿವಸ ಹೋರಾಟ ಮಾಡುತ್ತಾರೆ, ಆ ಹೋರಾಟವನ್ನು ಹತ್ತಿಕ್ಕುವುದಕ್ಕೋಸ್ಕರ ಅದನ್ನು ತಡೆಹಿಡಿಯುವುದಕ್ಕೋಸ್ಕರ ಇವತ್ತು BJP ಸರ್ಕಾರ

ಒಂದು ಕಡೆ ವಿರೋಧ ಪಕ್ಷದವರ ಮೇಲೆ ಕೇಸ್ ಹಾಕುವುದು, ಇನ್ನೊಂದು ಕಡೆ ಅವರು ಮಾಡಿದಂತಹ ತಪ್ಪುಗಳನ್ನು ಮುಚ್ಚಿಟ್ಟುಕೊಂಡು ಅವರ ಕೇಸಸ್ ವಿತ್‌ಡ್ರಾ ಮಾಡಿ, ನೀವು ಮಾಡಿಕೊಂಡು ಹೋಗಿ ಎಂದು ಶಹಬಾಸ್‌ಗಿರಿ ಕೊಡುವುದು ಒಂದು ಕಡೆ. ಆ ಹೋರಾಟವನ್ನು ಹತ್ತಿಕ್ಕುವುದಕ್ಕೋಸ್ಕರ, ಅದನ್ನು ತಡೆಹಿಡಿಯುವುದಕ್ಕೋಸ್ಕರ ಇವೊತ್ತು ಬಿ.ಜೆ.ಪಿ. ಸರ್ಕಾರ ಒಂದು ಕಡೆ ಕೇಸ್ ಗಳನ್ನು ವಿರೋಧ ಪಕ್ಷದವರ ಮೇಲೆ ಹಾಕುವುದು, ಇನ್ನೊಂದು ಕಡೆ ಅವರು ಮಾಡಿದಂಥ ತಪ್ಪುಗಳನ್ನು ಮುಚ್ಚಿಟ್ಟುಕೊಂಡು ಅವರ ಕೇಸ್‌ಗಳನ್ನು ವಿತ್‌ಡ್ರಾ ಮಾಡಿ ನೀವು ಹೀಗೆಯೇ ಮಾಡಿಕೊಂಡು ಹೋಗಿ ಎಂದು ಶಹಭಾಸ್‌ಗಿರಿ ಕೊಟ್ಟುಕೊಂಡು ಹೋಗತಕ್ಕಂಥ ಕೆಲಸವನ್ನು ಇವರು ಇನ್ನೊಂದು ಕಡೆ ಮಾಡುತ್ತಿದ್ದಾರೆ. ಇದನ್ನು ನೋಡಿದಾಗ ನಾವು ಏನು ಹೇಳಬೇಕು ಎನ್ನತಕ್ಕಂಥದ್ದನ್ನು ಅವರೇ ಹೇಳಬೇಕು. ಅದರ ಜೊತೆಯಲ್ಲಿ ಇನ್ನೂ ವಿಶೇಷವಾದಂಥದ್ದು ಈ ಮೈಸೂರು ಘಟನೆ ಬಗ್ಗೆ ತಮಗೆ ಗೊತ್ತಿದೆ. ಅಲ್ಲಿ ಒಂದು ಮೆರವಣಿಗೆ ನಡೆಯಿತು. ನಮ್ಮ ಶಾಸಕರು ಕೂಡ ಅಲ್ಲಿ ಇದ್ದರು. ಅಲ್ಲಿ ವಾಯಕ ಜನಾಂಗದಲ್ಲಿ ಕೆಲವು ಸೆನಾನಿಮಸ್ ಇವೆ. ಆ ಸೆನಾನಿಮಸ್ ಅನ್ನು ನೀವು ಎಸ್.ಟಿ. ಗಳಿಗೆ ಸೇರಿಸಿ ಎಂದು ಅವರು ಹೋರಾಟವನ್ನು ಮಾಡುತ್ತಿದ್ದಾರೆ. ಆ ಹೋರಾಟಕ್ಕೆ ಸಮಾಧಾನ ರೀತಿಯಿಂದ ಅವರ ರೆಪ್ರಸೆಂಟೇಶನ್‌ನ್ನು ರಿಸೀವ್ ಮಾಡಿ ಅವರ ಮನವಿಯನ್ನು ಕೇಳಿ ಅವರನ್ನು ಕಳುಹಿಸಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಆದರೆ ಅಲ್ಲಿ ಅವರ ರೆಪ್ರಸೆಂಟೇಶನ್ ತೆಗೆದುಕೊಳ್ಳುವುದಕ್ಕೂ ಯಾರೂ ಇಲ್ಲ, ಮತ್ತು ಅವರು ಪೀಸ್‌ಫುಲ್ ಆಗಿ ಬರತಕ್ಕಂಥವರಿಗೆ ಪೊಲೀಸರು ಲಾಠಿ ಛಾರ್ಜ್ ಮಾಡತಕ್ಕಂಥದ್ದನ್ನು ನೋಡಿದರೆ, ಫೈರಿಂಗ್ ಮಾಡತಕ್ಕಂಥದ್ದನ್ನು ನೋಡಿದರೆ, ಟಿಯರ್ ಗ್ಯಾಸ್ ಸಿಡಿಸತಕ್ಕಂಥದ್ದನ್ನು ನೋಡಿದರೆ ಇವರ ಮೇಲೆ ಇಂಥ ಸಿಟ್ಟು ಏಕೆ ಬಂತೋ ಗೊತ್ತಿಲ್ಲ. ಈ ರೀತಿಯಿಂದಾಗಿ ಇಂದು ಮೈಸೂರಿನಲ್ಲಿಯೂ ಕೂಡ law and order problem ಆಗಿದೆ. ಮಂಗಳೂರಿನಲ್ಲಿಯೂ ಇದೇ ಪ್ರಾಬ್ಲಂ ಆಗಿದೆ. ಇದೇ ರೀತಿಯಾಗಿ ಬಳ್ಳಾರಿಯಲ್ಲಿ ಆಗಿದೆ ಬಳ್ಳಾರಿಯಲ್ಲಿ ಈಗ ಇರತಕ್ಕಂಥದ್ದು ಹಳೆ ಏರ್‌ಪೋರ್ಟ್, ಅದಕ್ಕೆ ಬಹಳ ಎಂದರೂ ಎಕ್ಸ್‌ಟೆನ್‌ಶನ್ ಮಾಡಿದರೆ ಸಾಕಾಗಬಹುದು. ಇವರೇನು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಮಾಡುತ್ತಾರಾ? ಇವೊತ್ತಲ್ಲ ನಾಳೆ ಪುಕ್ಕಟ್ಟೆ ಅಲ್ಲಿಂದ ಐರನ್ ಓರ್ ತೆಗೆದುಕೊಂಡು ಅದನ್ನು ಮಾರಿಕೊಂಡು ಬರುತ್ತಾರಲ್ಲ ಅವರಿಗೆ ಮಾತ್ರ ಅನುಕೂಲ. ನಮ್ಮ ಕಡೆ ಹೇಳುತ್ತಾರೆ ಇಂಥದ್ದಕ್ಕೆ ಈಮಾಕತ್ ಎಂದು.. ಅಂದರೆ ನಮ್ಮದೇ ಅಲ್ಲಿ ನಡೆಯಲಿ ಎಂದು ಹೇಳಿ ಅಲ್ಲಿ ಏರ್‌ಪೋರ್ಟ್ ಮಾಡುವುದಕ್ಕೆ ರೈತರ ಜಮೀನು ತೆಗೆದುಕೊಳ್ಳಲು ನೀವು ಮುಂದಾಗಿದ್ದೀರಿ. ಇದು

ಸರಿಯಲ್ಲ. ಅಲ್ಲಿ ಏನು ಮಾಡಿದ್ದೀರಿ ನೀವು ಹೇಳಿ. ಯಾವಾಗಲೂ ರೈತರ ಪರ ನಾವು ಇದ್ದೇವೆ ಎಂದು ಹೇಳುತ್ತೀರಿ ರೈತರ ಪರ ಇರತಕ್ಕಂಥ ನೀವು ಜಮೀನು ಬಿಟ್ಟುಕೊಡುವ ರೈತರ ಮೇಲೆ ಲಾಠಿ ಛಾರ್ಜ್ ಮಾಡಿಸಿದ್ದೀರಿ. ನಮ್ಮ ಜಮೀನನ್ನು ಏರ್‌ಪೋರ್ಟ್‌ಗೆ ಬಿಟ್ಟುಕೊಡುವುದಿಲ್ಲ, ನೀವು ಬೇಕಾದರೆ ಇರತಕ್ಕಂಥ ಜಮೀನಿನಲ್ಲಿಯೇ ಮಾಡಿಕೊಳ್ಳಿ ಎಂದು ರೈತರು ಹೇಳಿದರೆ ಅವರ ಮೇಲೆ ಕೂಡ ನೀವು ಲಾಠಿ ಛಾರ್ಜ್ ಮಾಡಿಸಿದ್ದೀರಿ. ಅವರಿಗೆ ಹೆದರಿಸತಕ್ಕಂಥದ್ದು, ಆಮೇಲೆ ಬೆನ್ನು ಹತ್ತಿ ಹೊಡೆಯತಕ್ಕಂಥದ್ದು, ಅನೇಕ ಹೆಣ್ಣುಮಕ್ಕಳು ಅಲ್ಲಿಯೇ ಬಿದ್ದು ಲಾಠಿ ಏಟು ತಿಂದರೂ ಅವರು ನಮ್ಮ ಪ್ರಾಣವನ್ನು ಬೇಕಾದರೆ ಕೊಡುತ್ತೇವೆ ಹೊರತು ನಮ್ಮ ಜಮೀನನ್ನು ಕೊಡುವುದಿಲ್ಲವೆಂದಿದ್ದಾರೆ. ಇದೊಂದೇ ಅಲ್ಲ. ಇದರ ಜೊತೆ ಜೊತೆಯಲ್ಲಿ ಹಾವೇರಿಯಲ್ಲಿರಬಹುದು, ದಾವಣಗೆರೆಯಲ್ಲಿರಬಹುದು, ಇಲ್ಲೆಲ್ಲಾ ಫೈರಿಂಗ್ ಆಯಿತು, ಗೋಲಿಬಾರ್ ಆಯಿತು. ಅಂದರೆ ರೈತರ ಬಗ್ಗೆಯೂ ನಿಮಗೆ ಅನುಕಂಪವಿಲ್ಲ, ಯುವಕರ ಬಗ್ಗೆ ಅನುಕಂಪವಿಲ್ಲ, ಮಹಿಳೆಯರ ಮೇಲೆ ನಡೆದ ದೌರ್ಜನ್ಯದ ಬಗ್ಗೆಯೂ ನಿಮಗೆ ಅದನ್ನು ನಿಲ್ಲಿಸಲು ಕಾಳಜಿಯಿಲ್ಲ, ನಿಮಗೆ ಯಾವುದರ ಬಗ್ಗೆ ಕಾಳಜಿ ಇದೆಯೋ ನನಗೆ ಅರ್ಥವಾಗುತ್ತಿಲ್ಲ. ಇಂಥ ಘಟನೆಗಳು ನಡೆದಾಗ ಸಮಾಧಾನದಿಂದ ಕ್ರಮವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಅವರಿಗೆ ಪ್ರಚೋದನೆ ಮಾಡತಕ್ಕಂಥ ರೀತಿಯಲ್ಲಿ ಪೊಲೀಸರು ವರ್ತನೆ ಮಾಡಿದ್ದಾರೆ. ಇದು ನಿಜವಾಗಿಯೂ ಎಲ್ಲಾ ಕಡೆ ಹಬ್ಬುತ್ತದೆ. ನಾಳೆಯ ದಿವಸ ರಾಜ್ಯಕ್ಕೇ ಧಕ್ಕೆ ತರತಕ್ಕಂಥ ರೀತಿಯಲ್ಲಿ ಚಳುವಳಿಗಳು ನಡೆಯುತ್ತವೆ ಎನ್ನತಕ್ಕಂಥ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಇವೊತ್ತಿನ ಧಿವಸ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇದು ನಿಮಗೂ ಗೊತ್ತಿದೆ. ಏನೆಂದರೆ ನೀವು ಯಾವುದೇ ಪೇಪರ್‌ನ ಎಡಿಟೋರಿಯಲ್ ಕಾಲಂ ತೆಗೆದುಕೊಳ್ಳಿ, ಅದರಲ್ಲಿ ಒಂದರಲ್ಲಿಯೂ ಕೂಡ ಸರ್ಕಾರದ ಪರವಾಗಿ ಬರೆದಿಲ್ಲ. ಈ ಕಾನೂನು ವ್ಯವಸ್ಥೆ ಬಗ್ಗೆ Mangalore's Immoral Police, Wednesday, January-28, 2009 ಆಮೇಲೆ Barbarians at large Bangalore incident is alarming evidence of growing intolerance, ಇದು Times of India. ಪತ್ರಿಕೆಯಲ್ಲಿ ಬಂದಿರುವುದು. ಆಮೇಲೆ ಮಂಗಳೂರಿನಲ್ಲಿ ಪಬ್ ಸಂಸ್ಕೃತಿ ಮೇಲೆ ದಾಳಿ ಎಂದು ಪ್ರಜಾವಾಣಿಯಲ್ಲಿ ಬಂದಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಅವರು ಬಹಳಷ್ಟು ತಮಗೆ ಬೇಕಾದ್ದನ್ನು ಮಾತ್ರ ಓದುತ್ತಾರಲ್ಲಾ, ಆದರೆ ಇದನ್ನು ಏಕೆ ಅವರು ಓದಲಿಲ್ಲವೋ ಗೊತ್ತಾಗಲಿಲ್ಲ. ಈ ಎಡಿಟೋರಿಯಲ್ ಕಾಲಂ ಎಲ್ಲವೂ ಪ್ರಜಾವಾಣಿ, ಹಿಂದು ಮತ್ತು ಟೈಂಸ್ ಆಫ್ ಇಂಡಿಯಾ, ವಿಜಯ ಕರ್ನಾಟಕ ಮತ್ತು ಉದಯವಾಣಿ ಮತ್ತು ಸಂಯುಕ್ತ ಕರ್ನಾಟಕ, ಹೀಗೆ ಎಲ್ಲಾ ಪತ್ರಿಕೆಗಳಲ್ಲಿಯೂ

ಬಂದಿದೆ. ಇದನ್ನು ಅವರಿಗೆ ಓದುವುದಕ್ಕಾಗುವುದಿಲ್ಲವೆ? ಈ ಪತ್ರಿಕೆಗಳಲ್ಲಿ ಎಲ್ಲರೂ ಕೂಡ ಸರ್ಕಾರವನ್ನು condemn ಮಾಡಿದ್ದಾರೆ. ಎಲ್ಲರೂ condemn ಮಾಡುವುದಲ್ಲದೇ ಇವರು ನಡೆಸುತ್ತಿರತಕ್ಕಂಥ ರೀತಿನೀತಿ ಸರಿಯಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇವೊತ್ತು ಸಂಘಟನೆಗಳವರು ಕಾನೂನನ್ನು ಕೈಗೆ ತೆಗೆದು ಕೊಂಡು ಈ ಸರ್ಕಾರದ ಬೆಂಬಲವಿದೆಯೆಂದು ಯಾರಾದರೂ ಪ್ರೆಸ್ಯೂಮ್ ಮಾಡಿದರೆ ಅವರಿಗೆ ನೀವು ಪಾಠ ಕಲಿಸಬೇಕು. ನಾವು ಕಾನೂನಿನ ಪ್ರಕಾರ ನಡೆದುಕೊಳ್ಳುತ್ತೇವೆ, ಕಾನೂನಿನ ನೀತಿಯಂತೆ ನಡೆದುಕೊಳ್ಳುತ್ತೇವೆ, ಕಾನೂನು violate ಮಾಡಿದರೆ ಯಾವುದೇ ಪಕ್ಷದವರಿರಲಿ, ಯಾವುದೇ ಸಂಘ ಸಂಸ್ಥೆಗಳವರಿರಲಿ ಅವರನ್ನು ಒಳಗೆ ಹಾಕುತ್ತೇವೆ ಎನ್ನತಕ್ಕಂಥದ್ದನ್ನು ನೀವು ಹೇಳಬೇಕು. ಕೇವಲ ಬಾಯಿ ಮಾತಿನಲ್ಲಿ ಹೇಳಿ ಹಿಂದುಗಡೆಯಿಂದ ಅವರನ್ನು ಬಿಟ್ಟುಬಿಡಿ ಎಂದು ಹೇಳುವುದು. ನೀವೇ ಬಂಧಿಸುವುದು ಮತ್ತೆ ಅವರನ್ನು ನೀವೇ ಬಿಡಿಸುವುದು. ಇವರೇ ಕೇಸ್‌ಗಳನ್ನು ಹಾಕಿಸುವುದು, ಮತ್ತೆ ಇವರೇ ಅವರನ್ನು ಬಿಡಿಸುವುದು. ರಿಜಿಸ್ಟರ್ ಇವರೇ ಮಾಡಿಸುವುದು. ಆಮೇಲೆ ಬಿ ರಿಪೋರ್ಟ್ ಹಾಕುವುದಕ್ಕೆ ಹೇಳುವುದು. ಅದೂ ಇಲ್ಲವೆಂದರೆ ಕೊನೆಗೆ ಸರ್ಕಾರದ ಮಟ್ಟದಲ್ಲಿ ವಿತ್‌ಡ್ರಾ ಮಾಡಿಬಿಟ್ಟರೆ ಮುಗಿದೇ ಹೋಯಿತಲ್ಲ. ಇವೊತ್ತು ಕಾನೂನನ್ನು ಮುರಿಯತಕ್ಕಂಥದ್ದಕ್ಕೆ ಧೈರ್ಯ ಬಂದದ್ದು ಈ ಸರ್ಕಾರದಿಂದ. ಈಗ ಇನ್ನೊಂದು incident ಹೇಳುತ್ತೇನೆ. ಬೆಂಗಳೂರಿನಲ್ಲಿ ದಿನಾಂಕ 10-01-2009 ರಂದು ಹಾಡು ಹಗಲೇ ದುಷ್ಕರ್ಮಿಗಳು ಜಯನಗರದ ಮಾರುತಿ ಬ್ಲಾಕ್‌ನಲ್ಲಿ ಇಬ್ಬರು ವೃದ್ಧರನ್ನು ಕೊಂದರು. ಅದಕ್ಕೂ ಹತ್ತು ದಿವಸಗಳ ಹಿಂದೆ ಕೊಲೆಯಾಗಿತ್ತು. ಅದರ ಬಗ್ಗೆ ಕೂಡ ಈ ಗೃಹ ಮಂತ್ರಿಗಳು ಹೇಳಬಹುದು, ಏನೆಂದರೆ, ಅವರವರ ಮನೆಯಲ್ಲಿ ಅವರು ಮನೆ ಬೀಗ ಜಡಿದುಕೊಂಡು ಸುರಕ್ಷಿತವಾಗಿ ಇರಬೇಕು. ಇದರಲ್ಲಿ ನಮ್ಮ ತಪ್ಪೇನಿದೆ ಎಂದು ಹೇಳಬಹುದು. ಮಕ್ಕಳೇ ಅಡ್ಡಾಡಿ ಇವೊತ್ತು ಓಡಾಡುವಾಗ ಅಂಥ ಮಕ್ಕಳನ್ನು ಜೋಪಾನ ಮಾಡತಕ್ಕಂಥದ್ದು ತಂದೆ ತಾಯಿ ಜವಾಬ್ದಾರಿಯೇ ಹೊರತು ಅವರ ರಕ್ಷಣೆ ನಮ್ಮದಲ್ಲ ಎಂದು ಹೇಳುವಾಗ ಇವರಿಗೂ ಕೂಡ ಹಾಗೆಯೇ ಹೇಳಬಹುದು. ಪಬ್ಲಿಕ್ ಪ್ರಾಪರ್ಟಿ ಸೇಫ್‌ಗಾರ್ಡ್ ಮಾಡತಕ್ಕಂಥದ್ದು ನಮ್ಮ ಕೆಲಸವಲ್ಲವೆಂದು ಇದಕ್ಕೂ ಹೇಳಿ ಜಾರಿಕೊಳ್ಳಬಹುದು. ಆದರೆ ಸಂವಿಧಾನ ಪ್ರಕಾರ ಒಂದು ಸರ್ಕಾರ ರಚನೆಯಾದ ಮೇಲೆ ಆ ಸರ್ಕಾರದ ಕರ್ತವ್ಯವೇನೆಂದರೆ ಸಾಮಾನ್ಯ ಜನರ ಜೀವದ ರಕ್ಷಣೆಯನ್ನೂ ಮಾಡಬೇಕಾಗುತ್ತದೆ. ಅವರ ಆಸ್ತಿ ಪಾಸ್ತಿ ರಕ್ಷಣೆಯನ್ನೂ ಮಾಡಬೇಕು, Public Property ರಕ್ಷಣೆಯನ್ನೂ ಮಾಡಬೇಕು. ಮಾನ ಮರ್ಯಾದೆಯ ರಕ್ಷಣೆಯನ್ನೂ ಮಾಡತಕ್ಕಂಥ ಕೆಲಸವನ್ನು ಮಾಡಬೇಕಾದ್ದು

ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಆದರೆ ನಮ್ಮ ಜವಾಬ್ದಾರಿಯಲ್ಲ ಎಂದು ಹೇಳಿ ಇವೊತ್ತು ಗೃಹ ಸಚಿವರು ಹೇಳುತ್ತಾರೆ. ಎಲ್ಲಾದರೂ ಮೈಮೇಲೆ ಜೋರಾಗಿಯೇ ಈ ಬಗ್ಗೆ ವಿರೋಧ ಬಂದಾಗ ಆಗ ಮುಖ್ಯಮಂತ್ರಿಗಳು ಅದನ್ನು ಡಿನೈ ಮಾಡುತ್ತಾರಷ್ಟೆ. ಅವರು ಹೇಳಿದ್ದು ಸರಿಯಿಲ್ಲ, ನಾನು ಹೇಳುವುದು ಸರಿ, ನಾನು ಇಲ್ಲಿ ಇದ್ದೀನಲ್ಲ, ನಾನು ಏನು ಹೇಳುತ್ತೇನೆ ಅದನ್ನು ಕೇಳಿ ಎಂದು ಹೇಳುತ್ತಾರೆ. ದಿನಾಂಕ:20–01–2009 ರಲ್ಲಿ ಕೇವಲ ಹತ್ತು ದಿವಸದ ಅಂತರದಲ್ಲಿ ಮತ್ತೆ ಜಯನಗರದಲ್ಲಿ 4ನೇ ಟಿ ಬ್ಲಾಕ್‌ನಲ್ಲಿ ಮನೆಯೊಂದಕ್ಕೆ ದುಷ್ಕರ್ಮಿಗಳು ನುಗ್ಗಿ ಒಂದೇ ಕುಟುಂಬಕ್ಕೆ ಸೇರಿದ ಸತ್ಯಭಾಮ ಎನ್ನುವವರನ್ನು ಮತ್ತು ಮೂವರು ಮಕ್ಕಳ ತಲೆಗೆ ಕಬ್ಬಿಣದಿಂದ ಹೊಡೆದು ಜಜ್ಜಿ ಕೊಲೆ ಮಾಡಿದ್ದಾರೆ. ದಿನಾಂಕ: 24–01–2009 ರಂದು ಬೈಕ್‌ನಲ್ಲಿ ಹೋಗುತ್ತಿದ್ದ ಖಾಸಗಿ ಕಂಪನಿ ಉದ್ಯೋಗಿಯೊಬ್ಬರನ್ನು ಅಡ್ಡಗಟ್ಟಿ ದುಷ್ಕರ್ಮಿಗಳು ಆತನನ್ನು ಕೊಲೆ ಮಾಡಿ 10 ಲಕ್ಷ ರೂಪಾಯಿಗಳ ಹಣವನ್ನು ದೋಚಿದ್ದಾರೆ. ಈ ಘಟನೆ ಪೀಣ್ಯದಲ್ಲಿ ನಡೆದಿದೆ. ದಿನಾಂಕ: 17–02–2009 ರಂದು ಭಾರತಿ ವಿಜ್ಞಾನ ಮಂದಿರದ ನಿವೃತ್ತ ಪ್ರೊಫೆಸರ್ ಪುರುಷೋತ್ತಮ ಲಾಲ್ ಸಚ್‌ದೇವ್ ಮತ್ತು ಅವರ ಕುಟುಂಬದ ಇಬ್ಬರು ಸದಸ್ಯರನ್ನು ಆರ್.ಟಿ.ನಗರದ ಅವರ ನಿವಾಸದಲ್ಲಿಯೇ ಅಮಾನುಷವಾಗಿ ಕೊಲೆ ಮಾಡಿದ್ದಾರೆ. ದಿನಾಂಕ: 18–02–2009 ರಂದು ಜಯನಗರದ ಮೂರನೇ ಬ್ಲಾಕ್‌ನಲ್ಲಿ ಐದು ಜನರ ಗುಂಪೊಂದು ಮೋಟಾರ್ ಬೈಕ್‌ನಲ್ಲಿ ಹೋಗುತ್ತಿದ್ದ ನವೀನ್ ಅಲಿಯಾಸ್ ಬಂಟಿ ಎಂಬುವವನನ್ನು ಮಚ್ಚು ಕತ್ತಿಗಳಿಂದ ಕೊಚ್ಚಿದ್ದಾರೆ. ಹೀಗೆ ಹೇಳುತ್ತಾ ಹೋದರೆ ಇಂಥ ನೂರಾರು ಉದಾಹರಣೆಗಳನ್ನು ಕೊಡಬಹುದು. ನಾನು ಈಗ ಹೇಳುತ್ತಿರುವುದೆಲ್ಲಾ ಕೇವಲ ಇತ್ತೀಚೆಗೆ ಒಂದೆರಡ್ಮೂರು ತಿಂಗಳುಗಳಲ್ಲಿ ನಡೆದಿರುವಂಥ ಘಟನೆಗಳು. ಅಂದರೆ Law and Order ಎಷ್ಟರಮಟ್ಟಿಗೆ ಈಗ ಸುರಕ್ಷಿತವಿದೆ ಎಂಬ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಮರ್ಡರ್ ಆಗುವುದಿಲ್ಲವೆಂದು ನಾನು ಹೇಳುವುದಿಲ್ಲ. ಮರ್ಡರ್ ಆಗುತ್ತವೆ. ಆದರೆ ಅದನ್ನು ತಡೆಗಟ್ಟುವಂಥ ಶಕ್ತಿ ಬೇಕು ನಿಮಗೆ. ಆಡಳಿತವನ್ನು ಚುರುಕುಗೊಳಿಸತಕ್ಕಂಥದ್ದು ಆಗಬೇಕು. ಆದರೆ ಅದಕ್ಕೆ ನಿಮಗೆ ಪುರುಸೊತ್ತು ಇಲ್ಲವಲ್ಲ. ಜನರ ಮೇಲೆ ಮತ್ತು ರೈತರ ಮೇಲೆ ಪ್ರೀತಿ ಇದೆ. ಆದರೆ ಯಡಿಯೂರಪ್ಪನವರಿಗೆ ಪುರುಸೊತ್ತು ಇಲ್ಲ. ಪಾಪ ಎಲ್ಲ ಕೆಲಸವನ್ನು ಅವರೇ ಮಾಡಬೇಕು. ಫೈನಾನ್ಸ್ ಡಿಪಾರ್ಟ್‌ಮೆಂಟ್ ಕೆಲಸವನ್ನೂ ಅವರೇ ಮಾಡಬೇಕು. ಹೋಂ ಡಿಪಾರ್ಟ್‌ಮೆಂಟ್‌ನಲ್ಲಿ ಟ್ರಾನ್ಸ್‌ಫರ್ ಕೆಲಸವನ್ನೂ ಕೂಡ ಅವರೇ ಮಾಡಬೇಕು. ಪಿ.ಡಬ್ಲ್ಯೂ.ಡಿ. ಯದ್ದನ್ನೂ ಅವರೇ ಮಾಡಬೇಕು. ಎಲ್ಲ ಇಲಾಖೆಗಳಲ್ಲಿಯೂ ಕೂಡ ಟ್ರಾನ್ಸ್‌ಫರ್‌ಗಳು ಇದುವರೆವಿಗೂ ನಡೆದಿದೆ. ನಾವೆಂದೂ

ಕೂಡ ಇನ್ನು ಮುಂದೆ ಟ್ರಾನ್ಸ್‌ಫರ್‌ಗಳನ್ನು ಮಾಡುವುದಿಲ್ಲ, ಇನ್ನು ಮೇಲೆ ನಿಲ್ಲಿಸಿದ್ದೇವೆ ಎಂದು ಹೇಳುವುದು. ಎಲ್ಲಿ ಟ್ರಾನ್ಸ್‌ಫರ್‌ಗಳನ್ನು ಮಾಡುವುದನ್ನು ನಿಲ್ಲಿಸಿದ್ದೀರಿ ಸ್ವಾಮಿ? ಪ್ರತಿ ದಿನ ಒಂದಲ್ಲ ಒಂದು ಟ್ರಾನ್ಸ್‌ಫರ್ ನಡೆಯುತ್ತಲೇ ಇದೆ. ಇಲ್ಲಾ ಕೆ.ಎ.ಎಸ್., ಐ.ಎ.ಎಸ್. ಅಥವಾ ಐ.ಪಿ.ಎಸ್. ಕಡೆಗೆ ಯಾರು ಟ್ರಾನ್ಸ್‌ಫರ್‌ಗಳಿಗೆ ಸಿಗುತ್ತಿಲ್ಲವೆಂದರೆ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ದಿನ ಒಂದು transfer ಮಾಡುವುದಿರುತ್ತದೆ. KAS, ಇಲ್ಲ IAS, ಇಲ್ಲ IPS ಕೊನೆಗೆ ಯಾರೂ ಸಿಗಲಿಲ್ಲವೆಂದರೆ Sub inspector, Circle inspectorರನ್ನು transfer ಮಾಡುವುದು. ಇದು ಸತತವಾಗಿ ನಡೆದಿದೆ. ಯಾರಾದರೂ ಸತ್ತರು, retired ಆದರು ಎಂದರೆ ಅಂತಹ vacancy fill up ಮಾಡುತ್ತೇವೆ ಎಂದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಮಾಡುವಂತಹ ಅವಶ್ಯಕತೆ ಇದೆ. ಆದರೆ ಇವರು continuous ಆಗಿ ಮಾಡುವುದು. ಯಾರು ಇವರ ಮಾತನ್ನು ಕೇಳಲಿಲ್ಲವೆಂದರೆ ಅವರನ್ನು ತೆಗೆದು ಹಾಕುವುದು. ಇವರ ಮಾತು ಕೇಳುವವರಿದ್ದರೆ ರಕ್ಷಣೆ ಕೊಡುವುದು. ಅಂತಹ ಪೊಲೀಸರನ್ನು ಕೆಲವು ಕಡೆ ಇವರು ಹಾಕಿಕೊಂಡಿದ್ದಾರೆ. ಎಲ್ಲರೂ ಹಾಗೇ ಇದ್ದಾರೆ ಎಂದು ಹೇಳುವುದಿಲ್ಲ. ನೀವು ಬಿಗಿಯಾಗಿ ನಡೆದುಕೊಂಡರೆ, ನಿಮ್ಮ ಕೆಳಗೆ ಇರುವಂತಹ ಸಿಬ್ಬಂದಿ ಕೂಡ ಅಷ್ಟೇ ಬಿಗುವಿನಿಂದ ನಡೆಯುತ್ತಾರೆ. ಆದರೆ ಇವತ್ತು ದುರ್ದೈವ ಏನಾಗಿದೆ ಎಂದರೆ ನಿಮ್ಮ ಪಕ್ಷದಲ್ಲಿ 110 ಸೀಟು ಬಂದಿತ್ತಲ್ಲ, ಅದನ್ನು ಗಟ್ಟಿ ಮಾಡಿಕೊಳ್ಳುವುದಕ್ಕೋಸ್ಕರ 116 ಜನ ಏನು ಸೇರಿದಿರಿ, ಅವರನ್ನೆಲ್ಲ ಕೂಡ ಶಾಂತಿ ಪಡಿಸಬೇಕೆಂದು ಹೇಳಿ, ಹರಕೆ ಮಾಡಿಕೊಂಡವರು; ಹೇಗೆ ಕುರಿ ಕಡಿದು ಅಥವಾ ಕೆಲವು ಕಡೆ ಮೈಮೇಲೆ ಬೇವು ಹಾಕಿಕೊಂಡು ಬೆತ್ತಲೆ ಹೋಗಿ ದೇವರನ್ನು ತೃಪ್ತಿಪಡಿಸುತ್ತಾರಂತೆ. ಹಾಗೇ ಇಲ್ಲಿ ಆಡಳಿತದಲ್ಲಿ ಏನಾದರೂ ಆಗಲಿ MLAಗಳಿಗೆ ಖುಷಿ ಪಡಿಸಬೇಕೆಂದು ಯಡಿಯುರಪ್ಪನವರು ಅವರು ಹೇಳಿದ್ದನ್ನು ಬರೆದಿದ್ದೇ ಬರೆದಿದ್ದು. ಸಾರ್ ಇವರು ಕಾಂಗ್ರೆಸ್ ಪರ ಇರುವವರು ಎಂದರೆ ಹೌದಾ, ಇವರನ್ನು ತೆಗೆದುಹಾಕಿ ಎಂದು ಹೇಳುವುದು. ಸಾರ್, ಇವರು ಬಿಜೆಪಿ ಪರ ಇರುವವರು ಎಂದರೆ ಹೌದಾ, ಇವರಿಗೆ ದೊಡ್ಡ ಜಾಗ ಕೊಡಿ ಎಂದು ಹೇಳುವುದು. ಮತ್ತೆ executive post ಕೊಡುವುದು. ಇವರು ಕಾಂಗ್ರೆಸ್ ನವರು, ಜೆಡಿಎಸ್‌ನವರು ಎಂದು ಹೇಳುವವರ ಮಾತು ಕೇಳುತ್ತಾರೆ. ಈ ರೀತಿಯಾಗಿ ದ್ವೇಷದ ರಾಜಕಾರಣವನ್ನು ಮಾಡುತ್ತಾ ಹೋದರೆ ರಾಜ್ಯದ ಅಭಿವೃದ್ಧಿಯಾಗುತ್ತದೆ ಏನು? ಆ ಅಧಿಕಾರಿ ನಿಮ್ಮಲ್ಲಿ ಇರುವವರೆಗೆ loyal, ನಾಳೆ ನಾವು ಬಂದೆವು ಎಂದರೆ ನಮ್ಮ ಕಡೆ ಬರುತ್ತಾನೆ, ನಮ್ಮ ಕಡೆ ಬಂದಾಗ ನಮಗೆ loyal. ನೀವು ನೋಡಿ, ನಿಮ್ಮ ಆಡಳಿತಕ್ಕೆ ಒಳ್ಳೆಯ ಹೆಸರು ತರುವಂತಹ

ರೀತಿಯಲ್ಲಿ ಇರುವಂತಹ ಅಧಿಕಾರಿಗಳನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳಬೇಕು. ಆ ರೀತಿ ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳುವುದನ್ನು ಬಿಟ್ಟು, ಅವರಿಗೆ ನೀವೇ ಕೆಟ್ಟ ಚಟ ಕಲಿಸಿದಾಗ, ಕೆಟ್ಟ ದಾರಿಗೆ ಹಚ್ಚಿದಾಗ, ಅವನು ಖಂಡಿತವಾಗಿ ಅದನ್ನೇ ಮಾಡುತ್ತಾನೆ. ಏಕೆಂದರೆ ಏನು ಮಾಡಿದರೂ ನೀವು ಖುಷಿ ಪಡುತ್ತೀರಿ ಎಂದು ತಿಳಿದುಕೊಂಡು, ನಿಮ್ಮ ಖುಷಿಗೋಸ್ಕರ ಕಾನೂನನ್ನು ಕೂಡ violate ಮಾಡಿ ಮಾಡುತ್ತಾನೆ. ಆಗ ಕೆಲವು un written law ಇರುತ್ತದೆ, ಕೆಲವು written law ಇರುತ್ತದೆ. ಕೆಲವು precedents ಇರುತ್ತದೆ. ಈಗ ನಾವು ಒಬ್ಬರಿಗೊಬ್ಬರು ನೋಡಿದರೆ ನಮಸ್ಕಾರ ಎಂದು ಹೇಳುತ್ತೇವೆ. ಕಾನೂನಿನಲ್ಲಿ ಎಲ್ಲಿಯಾದರೂ ನಮಸ್ಕಾರ ಮಾಡಬೇಕೆಂದು ಬರೆದಿದೆ ಏನು? ಈಗ etiquette ಅದೇ ರೀತಿಯ ಕೆಲವು customs ಇರುತ್ತವೆ, usages ಇರುತ್ತವೆ, ಕೆಲವು ನಡೆದುಕೊಂಡು ಬಂದಂತಹ ಅನೇಕ ಪದ್ಧತಿಗಳು ಇರುತ್ತವೆ. ಅದನ್ನೆಲ್ಲ ಗಾಳಿಗೆ ತೂರುವುದು. ನೀವು ಅನೇಕ functionನಲ್ಲಿ ನೋಡಿ, ಮಧ್ಯಾಹ್ನ 5.00 ಗಂಟೆಗೆ function ಇರುತ್ತದೆ, 3.00 ಗಂಟೆಗೆ ಇವರ invitation ಬರುತ್ತದೆ. ಮತ್ತೇ ನೀವು ಸಹಕಾರ ಕೊಡುವುದಿಲ್ಲವೆಂದು ಹೇಳುವುದು. ನೀವು ವಿರೋಧ ಪಕ್ಷದವರನ್ನು ಕರೆಯುವುದಕ್ಕಾಗುವುದಿಲ್ಲವೇನು? ನೀವು ಕರೆಯುವುದು ಹೇಗೆ? ನೀವು print ಮಾಡುವುದು, ಯಾರನ್ನು ಕೇಳುವುದಿಲ್ಲ. ನಿಮಗೆ ಪುರುಸೊತ್ತು ಇದ್ದಾಗ, ಎಲ್ಲರಿಗೆ ಪುರುಸೊತ್ತು. ನಿಮಗೆ ಬೇಕಾದಾಗ ಸಮಾರಂಭಗಳು. ನಿಮಗೆ ಬೇಡ ಎಂದಾಗ ಸಮಾರಂಭಗಳು ಇಲ್ಲ. ನಮ್ಮಲ್ಲಿ ಒಂದು ನಾಲಾ programme ಇತ್ತು. ಇಲ್ಲಿಗೆ ಇವತ್ತು Animal Husbandry minister ಬರಲಿಲ್ಲವೆಂದು ಕಾಣುತ್ತದೆ. ಮಂತ್ರಿಗಳು ತರಾತುರಿಯಲ್ಲಿ ಬಂದರು, ಅವರು ಒಂದು ಮಠಕ್ಕೆ ಹೋಗಬೇಕಾಗಿತ್ತು. ಒಂದು ಸರ್ಕಾರಿ function ಕೂಡಾ ಆ ಜಿಲ್ಲೆಯಲ್ಲಿ ಇತ್ತು. ಅಲ್ಲಿ ಒಂದು ನಾಲಾಗೆ ಕಲ್ಲು ಹಾಕಿ inauguration ಮಾಡಿದರು. ಸ್ವಾಮಿ ಅದು ಡಿಸೆಂಬರ್ 28ರಂದು inauguration ಆಗಬೇಕಾಗಿತ್ತು. ಒಂದು ಕಾರ್ಯಕ್ರಮವನ್ನು ನೀವು ರೂಪಿಸಿದಾಗ, at least ಎಲ್ಲರನ್ನು involve ಮಾಡಿಕೊಂಡು, ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕು. ಆದರೆ ನಿಮಗೆ ಯಾವಾಗ ಏನು ಕಾರ್ಯಕ್ರಮ ಸಿಗುತ್ತದೋ ಅದರ ಜೊತೆಯಲ್ಲಿ ಸರ್ಕಾರದ ಕಾರ್ಯಕ್ರಮವನ್ನು ಜೋಡಿಸಿಕೊಂಡು ಮಾಡಬೇಕೆಂದು ಮಾಡಿಕೊಂಡು ಹೋದರೆ ಇದು ನಿಜವಾಗಲೂ ಏನಾಗುತ್ತದೆ? ನಾವು ನೀರಾವರಿಗೆ ಆದ್ಯತೆ ಕೊಟ್ಟಿದ್ದೇವೆ, ಕೊಡುತ್ತೇವೆ. ಇನ್ನೂ ಅದರ ಬಗ್ಗೆ ನೀವು ಆಸಕ್ತಿ ವಹಿಸಿ ಕೆಲಸ ಮಾಡಿದರೆ ನೀರಾವರಿ ಯೋಜನೆಗಳಿಗೆ ಅಥವಾ ಅದು constructive one ಆಗಿದ್ದರೆ ನಮ್ಮ ಬೆಂಬಲ ಇದೆ. ಆದರೆ ಎಲ್ಲ ಕೂಡ ನಿಮ್ಮಿಚ್ಛೆಯ

ಅನುಸಾರವಾಗಬೇಕು, ನಿಮಗೆ ಬೇಕಾದರೆ ಮಾಡಬೇಕು, ಬೇಡವಾದರೆ ಬಿಡಬೇಕು ಎಂದು ಮಾಡುವುದು ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ತಾವು ನೋಡಿಕೊಳ್ಳಿ. ಬಿಜೆಪಿ ಸರ್ಕಾರದ್ದು ಇನ್ನೊಂದು ವಿಶೇಷ ಏನೆಂದರೆ ಕೆಲವು ಪ್ರಮುಖವಾದಂತಹ ನಿರ್ಣಯಗಳನ್ನು ಅವರು ತೆಗೆದುಕೊಳ್ಳುತ್ತಾರೆ. ಹೇಗೆಂದರೆ ಮೊದಲು session ಕರೆದರೂ ಕೂಡ ನಮಗೆ ಏನು ಅದರ ಬಗ್ಗೆ ತಿಳಿಸುವುದಿಲ್ಲ. ಬೆಳಗಾಂನಲ್ಲಿ ಒಂದು ಕಡೆ ಸದನ ಕರೆದು, ಇನ್ನೊಂದು ಕಡೆ ಹೊರಗಡೆ ಹೋಗಿ schemeಗಳನ್ನು announce ಮಾಡಿ Houseಗೆ ಬರುವುದು. ನಾನು ಅದರ ಬಗ್ಗೆ ಕೇಳಿದಾಗ, ಇಲ್ಲ ಅದು ತಪ್ಪಾಗಿದೆ, ಈ ರೀತಿ ಮಾಡಬಾರದಿತ್ತು, ಮಾಡಿದೆವು ಎಂದು ಹೇಳಿದರು. ಈಗಲೂ ಕೂಡ ಇಲ್ಲಿ session ಕರೆಯುತ್ತೀರಿ ಎಂದರೆ ನೀವು cabinet decision ತೆಗೆದುಕೊಂಡು ಹೇಳಿಬಿಡುವುದು. ಅರೆ, session ಏಕೆ ಕರೆಯುತ್ತೀರಿ? Sessionನಲ್ಲಿಯೇ ಏನು ಹೇಳಬೇಕಾಗಿದೆ ಎನ್ನುವುದನ್ನು ಹೇಳಿ. ಎಷ್ಟು ಹೊಸ ಯೋಜನೆಗಳನ್ನು ತೆಗೆದುಕೊಳ್ಳಬೇಕು? ಯಾವ್ಯಾವ ಯೋಜನೆಗಳನ್ನು ತೆಗೆದುಕೊಳ್ಳಬೇಕು? ಎಲ್ಲಿ ಏನೇನು ಮಾಡಬೇಕು ಎನ್ನುವುದನ್ನು sessionನಲ್ಲಿ ಹೇಳಿದರೆ, ಅದು authentic ಆಗಿ ನಾವೂ ಕೂಡ ಅದನ್ನು ಕೇಳುವುದಕ್ಕಾಗುತ್ತದೆ. ಆದರೆ ಅದರ ಬಗ್ಗೆ ನಿರ್ಣಯ ತೆಗೆದುಕೊಂಡು, announce ಮಾಡುವುದು. ಏಕೆಂದರೆ public consumptionಗೋಸ್ಕರ, ಪ್ರಚಾರಕ್ಕೋಸ್ಕರ ಹೊರಗಡೆ announce ಮಾಡುವುದು. ಇಲ್ಲಿ ಬಂದು ನಾವು ಬಾಯಿ ಬಡಿದುಕೊಂಡು ಮನೆಗೆ ಹೋಗುವುದು. ಬೇರೆ ಏನೂ ಕೆಲಸ ಇಲ್ಲ. ಏಕೆಂದರೆ ಯಾವುದನ್ನು ಕೇಳುವ ಹಾಗೆ ಇಲ್ಲ, ಹೇಳುವ ಹಾಗೆ ಇಲ್ಲ. ಈ ರೀತಿಯಾದಂತಹ ಆಡಳಿತ ಇವತ್ತು ನಡೆದಿದೆ. ಅದಕ್ಕಾಗಿ ನಾನು ಇವತ್ತು ಇವೆಲ್ಲವನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಿನಾಂಕ: 19.10.2009ರಲ್ಲಿ ಜಾಲಹಳ್ಳಿಯಲ್ಲಿ ಒಂದು murder ಆಯಿತು. ದಿನಾಂಕ:10.01.2009ರಲ್ಲಿ ಜಯನಗರದಲ್ಲಿ ಆಗಿದೆ, 20.01.2009ರಲ್ಲಿ ಕೂಡ ತಿಲಕ್ ನಗರದಲ್ಲಿ ಒಂದೇ ಮನೆಯ ವಾಸಿಗಳಾದ ಮೂವರು ಹೆಂಗಸರ ಕೊಲೆಯಾಯಿತು. ನಂತರ 16-02-2009 ರಂದು ಆಯಿತು. ಹೀಗೆ ಅನೇಕ ಉದಾಹರಣೆಗಳು ಇವೆ, ಅದನ್ನು ನಾನು ಹೇಳಿಕೊಂಡು ಹೋದರೆ ಬಹುಶಃ ಇದಕ್ಕೆ ಒಂದು ಡೈರಿ ತೆಗೆಯಬೇಕಾದಂತಹ ಪ್ರಸಂಗ ಬರುತ್ತದೆ.

ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ರೈತರ ಬಗ್ಗೆ ಸಾಕಷ್ಟು ಕಾಳಜಿ. ಅಷ್ಟೇ ಅಲ್ಲ ಒಂದು ಮಾತನ್ನು ನಾವು ಹೇಳಲೇ ಬೇಕು. ಅವರು ಶಿಕಾರಿಪುರ ಕ್ಷೇತ್ರ ಪ್ರತಿನಿಧಿಸುತ್ತಿದ್ದು, basically ಅದು ಹಳ್ಳಿಯ ಜನರು ಇರುವಂತಹ ಮತಕ್ಷೇತ್ರ, ಹೆಚ್ಚು ಹಳ್ಳಿಯ ಜನರೇ ಅವರಿಗೆ ಮತ ಕೊಡುವುದು. ಅವರೇ ಮತದಾರರು ಇದ್ದ

ಕಾರಣ ಅಧಿಕಾರ ಬೇಕೇ ಬೇಕು, ಶಾಸಕರಾಗಬೇಕು, ಮಂತ್ರಿಗಳಾಗಬೇಕು, ಸರ್ಕಾರ ಬರಬೇಕು, ಅದಕ್ಕೆ ರೈತರ ಬಗ್ಗೆ ಕಾಳಜಿಯಿಂದ ಮೊದಲಿನಿಂದಲೂ ಮಾತನಾಡುತ್ತಿದ್ದರು. ಆದರೆ ಈ ಒಂಬತ್ತು ತಿಂಗಳಿನಿಂದ ಈ ರೈತರ ಬಗ್ಗೆ ಕಾಳಜಿ ಎಲ್ಲಿ ಹೋಯಿತು ಗೊತ್ತಾಗಲಿಲ್ಲ. Fertilizers ಕೇಳಿದರೆ ಗುಂಡೇಟು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಜಮೀನುಗಳನ್ನು ಬಿಟ್ಟುಕೊಡಿ ಎಂದರೆ ಲಾಠಿ ಚಾರ್ಜ್ ಮಾಡಿಸುವುದು. SEZನಲ್ಲಿ ಬರುತ್ತದೆ, ಅದನ್ನು drop ಮಾಡಿ ಎಂದರೆ ಬಂದಿದ್ದು ನೋಡಿಕೊಳ್ಳೋಣ, ಅವರನ್ನು ಒಳಗೆ ದಬ್ಬಿ ಎಂದು ಹೇಳುವುದು. ಮಾನ್ಯ ರಾಮಚಂದ್ರ ಗೌಡರಿಗೆ ಏನಾಗಿತ್ತೋ? ನಿನ್ನೆ, ಇದ್ದಕ್ಕಿದ್ದ ಹಾಗೆ ಸವಾರಿ ಬಂದು, ನಮ್ಮ ಕಡೆ ಪೀರನಿಗೆ ಸವಾರಿ ಬರುತ್ತದೆಂದು ಹೋಗುತ್ತಾರೆ. ಮಾನ್ಯ ಅಧ್ಯಕ್ಷರೆ, ಅದು ಮೂಢನಂಬಿಕೆ. ಆದರೆ ಜನರಿಗೆ ಸವಾರಿ ಬರುತ್ತದೆಂದು ತಿಳಿಸಬೇಕಲ್ಲ. ಅವನು ಮೈಯಲ್ಲಿ ಸವಾರಿ ಬಂದಹಾಗೆ ಮಾಡಿ, ಅದು, ಇದು ಹೇಳಿಕೊಂಡು, ಹೇಳಿಕೆ ಹೇಳತಕ್ಕಂಥ ರೀತಿಯಲ್ಲಿ ಹೆಚ್ಚಾಗಿ ನಮ್ಮ ಕಡೆ ಕೊಡಿಸುತ್ತಾರೆ. ಮೌಲಾಳಿ, ಹುಸೇನ್ ಸಾಬ್, ಲಾಲ್ ಸಾಬ್ ಎಂದೇಳಿ ಪೀರಗಳನ್ನು ಕೊಡಿಸುವುದು. ಅವರಿಗೆ ಸವಾರಿನೇ ಬರುವುದಿಲ್ಲ. ಆದರೆ ಸವಾರಿ ತಂದರೆ ಜನ ಎಲ್ಲಾ ನೋಡಿತ್ತಾರೆ, ಈ ವರ್ಷ ಏನು ಹೇಗೆ, ಒಳ್ಳೆಯದಿದೆಯೋ, ಕೆಟ್ಟದಿದೆಯೋ ಎಂದು ಹೇಳುತ್ತಾರೆ. ಹಾಗೆ Medical Education Minister ಮಾನ್ಯ ರಾಮಚಂದ್ರ ಗೌಡರಿಗೆ ಏನು ಸವಾರಿ ಬಂದಿತ್ತೋ ಗೊತ್ತಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಒಬ್ಬ International famous modern artist ಅವರು ಏನು ಹೇಳಿದರೆಂದರೆ "modern art ಬಗ್ಗೆ ನಿಮಗೆ ಏನೂ ಗೊತ್ತಿಲ್ಲ, ದಯವಿಟ್ಟು ನೀವು ಮಾತನಾಡಬೇಡಿ "ಎಂದಾಗ," ನಾನು ಮಾತನಾಡುತ್ತೇನೆ, You get out" ಎಂದರು. ಮಾನ್ಯ ಯಡಿಯುರಪ್ಪನವರೇ ನೀವು ಟಿವಿ ನೋಡಿದ್ದೀರಾ? ರಾಮಚಂದ್ರ ಗೌಡರು get out, pull him out ಎಂದರೆ, ಪೊಲೀಸರು ಅವರ ಮಾತು ಕೇಳುತ್ತಾರೆ, ಮತ್ತು ಯಾರೇ ಗಲಾಟೆ ಮಾಡಿದರೂ ಕೂಡ ಇಲ್ಲಿ ಪೋಲೀಸನ್ನು ಉಪಯೋಗ ಮಾಡಿ ದಬ್ಬಾಳಿಕೆ ಮಾಡಿ ಕಳಿಸಬಹುದು ಎನ್ನುವುದಕ್ಕೆ ಇದೊಂದು ಉದಾಹರಣೆ. ಎಂದರೆ ಈ ಸರ್ಕಾರದ authority ಎಷ್ಟು ದುರುಪಯೋಗ ವಾಗುತ್ತಿದೆ ಎನ್ನುವುದಕ್ಕೆ ಇದೊಂದೆ ಸಾಕ್ಷಿ. ಅಲ್ಲಿ ಎಲ್ಲಾ ಬುದ್ಧಿಜೀವಿ ಜನ. ಅಲ್ಲಿ ಯಾರೂ ಕೂಡ ಗಲಾಟೆ ಮಾಡುವವರು, ಅಂತಹವರು, ಇಂತಹವರು ಇರಲಿಲ್ಲ. ಅಲ್ಲಿ ಇದ್ದವರು ಎಲ್ಲಾ ದೊಡ್ಡ ದೊಡ್ಡ ಕಲಾವಿದರು. ಅವರಿಗೆ ಈ ಭಾಷೆಯನ್ನು ನೀವು ಉಪಯೋಗ ಮಾಡಬೇಕಾದರೆ, ಅಲ್ಲಿ ಒಂದು 200 ರಿಂದ 300 ಜನ ಇಲ್ಲ. ಅಲ್ಲಿ ಇವರ ತಾಪ ಕೋಪ ನೋಡಿದರೆ ಇವರ ವರ್ತನೆ ಯಾವ ರೀತಿಯಾಗಿ ಹೋದ ಕಡೆಯಲ್ಲೆಲ್ಲ ಇರಬಹುದು, ಇವರು ಯಾವ ರೀತಿಯಾಗಿ

ಅಧಿಕಾರಿ ಗಳನ್ನು ಉಪಯೋಗ ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ಅದೊಂದು ಸಾಕ್ಷಿಯಾಗಿದೆ. ಮತ್ತು ಅವರೂ ಇವರ ಪ್ರೀತಿಗೆ ಪಾತ್ರರು. ಮಾನ್ಯ ಯಡಿಯುರಪ್ಪನವರಿಗೆ ಅವರು ಕಣ್ಣಿದ್ದ ಹಾಗೆ. ಒಂದು ಕಡೆ ಮಾನ್ಯ ಆಚಾರ್ಯರವರು ಬಲಗಣ್ಣು ಆದರೆ, ಇವರು ಎಡಗಣ್ಣು.

5-30 PM

ಮಾನ್ಯ ಯಡಿಯೂರಪ್ಪನರಿಗೆ ಕಣ್ಣು ಯಾರೆಂದರೆ, ಒಂದು ಕಡೆ ಮಾನ್ಯ ಅಚಾರ್ಯರು ಇನ್ನೊಂಧು ಕಡೆ ಮಾನ್ಯ ರಾಮಚಂದ್ರಗೌಡರು ಆಗಿದ್ದಾರೆ. ಆ ಎರಡೂ ಕಣ್ಣುಗಳು ಎಷ್ಟು ineffective ಆಗಿವೆ? ಅವರು ಯಾವುದಾದರೂ ಸರ್ಜನ್ ಹತ್ತಿರ ಹೋಗಿ ತೋರಿಸಿ. ಅದನ್ನು ಆಪರೇಷನ್ ಮಾಡಲಿ, ಅದನ್ನು ಅಪರೇಷನ್ ಮಾಡಿದರೆ ಸರಿಹೋಗುತ್ತದೆ, ಇಲ್ಲವೆಂದರೆ ಆ ಕುರುಡು ಕಣ್ಣನ್ನು ಇಟ್ಟುಕೊಂಡು ಏನು ಮಾಡುತ್ತೀರಿ? ಅದಕ್ಕಾಗಿ ಅದನ್ನು ತೋರಿಸಿ, ಸರಿಯಾಗಿ ರಿಪೇರಿ ಮಾಡಿಸಿ, ನಿಮ್ಮ ಕಣ್ಣುಗಳು ಸ್ವಚ್ಛವಾದರೆ, ಎಲ್ಲಾ ಕಡೆಯಲ್ಲೂ ನಿಮಗೆ ಒಳ್ಳೆಯದು ಕಾಣುತ್ತದೆ, ಇಲ್ಲವೆಂದರೆ ಆ ಎರಡೇ ಕಣ್ಣಿನಲ್ಲಿ ನೋಡಿದರೆ ಅಲ್ಲಿ Law & order problem, ಇಲ್ಲಿ ಮಾನ್ಯ ರಾಮಚಂದ್ರ ಗೌಡರದು ಏನೂ ಇಲ್ಲದೇ unnecessary problem. ಇವರನ್ನು ತೆಗೆದುಕೊಂಡು ಇವರು ಸವಾರಿ ಮಾಡುವವರು. ಇವರು ಏನು ಎಂದರೆ, ಕಣ್ಣು ಅವರಿಬ್ಬರದು ಇದ್ದ ಮೇಲೆ ಇವರು ಕುರುಡರಾಗಿ ಇರಬೇಕಲ್ಲಾ. ಇಂಥಾ ಸರ್ಕಾರ, ಇಂಥಾ ಮಂತ್ರಿಗಳು, ಇವರನ್ನು ಸಾಕಿಕೊಂಡು ರಥವನ್ನು ನಡಿಸುತ್ತಿದ್ದಾರೆ. ಅದಕ್ಕಾಗಿ ಬಳ್ಳಾರಿ ರೈತರ ಮೇಲೆ ಗೋಲಿಬಾರ್, firing, ಅಲ್ಲಿ ಒಬ್ಬರು ಯಾರೋ ಇರಬಹುದು. ನಿಮಗೆ electionನಲ್ಲಿ ಸಹಾಯ ಮಾಡುತ್ತಾರೆ, ಬೆಂಬಲ ನೀಡುತ್ತಾರೆ. ಅದು immaterial, but ರಾಜ್ಯಕ್ಕೆ ಅಂಥವರಿಂದ ತೊಂದರೆನೋ ಅಥವಾ ಅವರಿಂದ ಲಾಭನೋ ಇದನ್ನು ಕೂಡ ನೀವು ಅರ್ಥ ಮಾಡಿಕೊಳ್ಳಬೇಕು. ನಿಮ್ಮ ಪ್ರೀತಿ, ವಿಶ್ವಾಸ, ನಿಮ್ಮ ಬೆಂಬಲ ಹೊರಗಡೆ ಇರಲಿ. ಆದರೆ ಆಡಳಿತದಲ್ಲಿ ನಿವು ಹೇಗೆ ನಡೆದುಕೊಳ್ಳಬೇಕೆನ್ನುವಂಥಾದ್ದನ್ನು ಕಲಿಯಬೇಕು. ನಾನು ನಿಮಗೆ ಇಲ್ಲಿ ಒಂದು ಸಾರಿ ಹೇಳಿದ್ದೆ. ಒಂದು ಸಾರಿ ಮಾನ್ಯ ಡಿ.ದೇವರಾಜ ಅರಸುರವರು ನನ್ನನ್ನು ಕರೆದು ನನಗೆ ಒಂದು ಕಿವಿ ಮಾತನ್ನು ಹೇಳಿದ್ದರೆಂದು ಹೇಳಿದ್ದೆ. ನಾನು 1978ರಲ್ಲಿ ಒಬ್ಬರಿಗೆ ಟಿಕೆಟ್ ಕೊಡಿಸಬೇಕೆಂದು ಹೋಗಿದ್ದೆ. ಆಗ ನಾನು ಗುಲ್ಬರ್ಗಾ incharge minister ಆಗಿದ್ದೆ. ನಾನು ಕರೆದುಕೊಂಡು ಹೊದ ಮೇಲೆ ಅವರ ಹೆಸರೇನು? ಎಂದು ಕೇಳಿದರು. ಆಗ ಅವರ ಹೆಸರು XYZ ಎಂದು ಹೇಳಿದೆ, ಮತ್ತೆ ಅವರು ಏನು ಕೆಲಸ ಮಾಡುತ್ತಾರೆಂದು ಕೇಳಿದರು. ಅವರು ವ್ಯಾಪಾರ ಮಾಡುತ್ತಾರೆಂದು ಹೇಳಿದೆ. ಅದಕ್ಕೆ

ಅವರು ನೋಡಪ್ಪಾ ವ್ಯಾಪಾರ ಮಾಡುವವರು, ಕಾಂಟ್ರಾಕ್ಟ್ ಮಾಡುವವರು, ಬಿಸಿನೆಸ್ ಮಾಡುವವರು, ಯಾರು ಇದ್ದಾರೆ. ಅವರ ಬಗ್ಗೆ ನೀನು ಹುಷಾರಾಗಿ ಇರಬೇಕೆಂದು ಹೇಳಿದರು. ಅದಕ್ಕೆ ನಾನು ಏಕೆ ಸಾರ್, ಎಂದು ಕೇಳಿದೆ. ಅವರು ಪಾರ್ಟಿಯಲ್ಲಿ 1969ನಿಂದ ನಮ್ಮ ಜೊತೆಯಲ್ಲೆ ಇದ್ದಾರೆಂದು ಹೇಳಿದೆ. ಅದಕ್ಕೆ ಅವರು ಹೌದಪ್ಪ ಇರಬಹುದು. ನಿನ್ನಲ್ಲಿ Political power ಇದೆ, ಅಧಿಕಾರ ಇದೆ. ಅವನಲ್ಲಿ ಅಧಿಕಾರವಿಲ್ಲ, ಹಣವಿದೆ. ಅದಕ್ಕಾಗಿ ಅವರು ನಿಮ್ಮಲ್ಲಿ ಕೆಲಸ ಮಾಡಿಸಿ ಕೊಡಬೇಕೆಂದು ನಿಮ್ಮ political power ಅನ್ನು ಉಪಯೋಗ ಮಾಡಿಕೊಂಡು ಇನ್ನೂ ಶ್ರೀಮಂತನಾಗಬೇಕೆಂದು ಬರುತ್ತಾರೆ. ಈ Political power ಅನ್ನು ನೀನು ಅವನ ಕೈಯಲ್ಲಿ ಕೊಟ್ಟರೆ, ಈ ಸಮಾಜವೂ ಉದ್ಧಾರವಾಗುವುದಿಲ್ಲ, ನಿಮ್ಮ ಹತ್ತಿರ ಬರುವುದನ್ನು ಬಿಟ್ಟು ಬಿಡುತ್ತಾನೆಂದು ಹೇಳಿದರು. ಆ ರೀತಿ ಇದೆ, ಅದಕ್ಕೆ ಹುಷಾರಾಗಿ ಇರಿ. ಯಾರೋ ದುಡ್ಡು ಇರುವವರು, industrialist ಸಹಾಯ ಮಾಡುತ್ತಾರೆಂದು ತಿಳಿದುಕೊಂಡು ಅವರಿಗೆ ಎಂದೂ ಕೂಡ ಈ ರೀತಿಯಲ್ಲಿ ನೀವು ಮಣೆಯನ್ನು ಹಾಕಿದರೆ ಇಂಥ ರೈತರು ಬಲಿಯಾಗುತ್ತಾರೆ. ನೀವು ಅವರ ಮಾತನ್ನು ಎಷ್ಟು ಕೇಳಬೇಕೋ ಅಷ್ಟನ್ನು ಕೇಳಿ. ನಾನು ಬೇಡವೆಂದು ಹೇಳುವುದಿಲ್ಲ. ನಿಮ್ಮ ಪಕ್ಷಕ್ಕೆ sympathizer ಇರಬೇಕು, ಸಹಾಯ ಮಾಡಿರಬಹುದು, ನಿಮ್ಮ ಜೊತೆಯಲ್ಲಿರಬಹುದು, ಅದು ಬೇರೆ ವಿಚಾರ. ಅವರಲ್ಲವೆಂದರೆ ಇನ್ನೊಬ್ಬರು ಯಾರಾದರೂ ಮಾಡುತ್ತಾರೆ. ಎಲ್ಲಾ ಪಕ್ಷದವರಿಗೂ ಕಡಿಮೆ ಪ್ರಮಾಣದಲ್ಲಿರಬಹುದು, ಹೆಚ್ಚಿನ ಪ್ರಮಾಣದಲ್ಲಿರಬಹುದು. ಎಷ್ಟೋ ಜನ ಬೆಂಬಲ ನೀಡುವಂಥವರು ಉದ್ದಿಮೆದಾರರು ಇರುತ್ತಾರೆ, supporters ಇರುತ್ತಾರೆ, sympathizers ಇರುತ್ತಾರೆ. ನಾವು ಎಲ್ಲಾ ಮಾತನ್ನು ಅವರು ಹೇಳಿದ್ದೆ ಸತ್ಯವೆಂದರೆ, ಸಾಮಾನ್ಯ ಜನರು ಎಲ್ಲಿಗೆ ಹೋಗಬೇಕು? ಇವತ್ತು ರೈತರು ಅದೇ ಗೋಳಿನಲ್ಲಿದ್ದಾರೆ. ಅವರು ಹೇಳಿದ್ದೆಲ್ಲಾ ಸರಿಯೆಂದು ತಿಳಿದುಕೊಂಡು, ಇವತ್ತು ವಿಮಾನ ನಿಲ್ದಾಣದ ಹೆಸರಿನ ಮೇಲೆ land acquire ಮಾಡುವುದಕ್ಕೆ ಹೋದಾಗ ಅಲ್ಲಿ ರೈತರು ಕೊಡುವುದಿಲ್ಲವೆಂದರೆ, ನೀವು ಆಗ ರೈತರ ಮೇಲೆ ಲಾಠಿ ಪ್ರಹಾರ ಮಾಡಿದರೆ, ಇದನ್ನು ನಿಮ್ಮ ಮನಸ್ಸು ಒಪ್ಪುತ್ತದಾ? ನೀವು ರೈತರ ಪರ ಅನೇಕ ಚಳುವಳಿಗಳನ್ನು ಮಾಡಿದಿರಿ. ಇಲ್ಲೇ ಸದನದಲ್ಲಿ zero hourನಲ್ಲಿ ಪ್ರತಿ ದಿವಸ ನೀವು ಮಾತನಾಡದೇ ಇರುವ ದಿವಸಗಳಿಲ್ಲ. ನೀವು fertilizer ಬಗ್ಗೆ ಇಲ್ಲವೆಂದರೆ ಬೀಜದ ಬಗ್ಗೆ, ರೈತರ ಮೇಲೆ ದಬ್ಬಾಳಿಕೆಯಾಯಿತು, current ಈ ವಿಷಯಗಳನ್ನೇ ಮಾತನಾಡುತ್ತಾ ಇದ್ದಿರಿ. ಈಗ ಅದು ಎಲ್ಲಿಗೆ ಹೋಯಿತು? ಈಗ ಆ ಕರೆಂಟ್ ಇಲ್ಲ, ರೈತರ ಮೇಲೆ ಇದ್ದಂಥ ಪ್ರೀತಿಸೂ ಹೋಯಿತು. ಬೀಜದ ಬಗ್ಗೆ, ಗೊಬ್ಬರದ ಬಗ್ಗೆ ಮಾತನಾಡುವುದು

ಹೋಯಿತು. ಈಗ ಏನಾದರೂ ಕೂಡ ಅಂಥವರು ಹೇಳಿದ ಮಾತನ್ನು ಕೇಳಿಕೊಂಡು ನೀವು ಮುಂದುವರೆದರೆ, ಇವತ್ತಲ್ಲ ನಾಳೆ ನಿಮಗೆ ಕುತ್ತು ಬರುತ್ತದೆ. ಇದನ್ನು ನೀವು ನೆನಪಿನಲ್ಲಿಟ್ಟುಕೊಳ್ಳಿ. ಪ್ರಜಾಪ್ರಭುತ್ವದಲ್ಲಿ ಒಬ್ಬ ಕಾರ್ಯಕರ್ತನನ್ನು ಬೇಕಾದರೆ ನೀವು ಬೆಂಬಲಿಸಿ ಅಥವಾ ಸಾಮಾನ್ಯ ಜನರ ಬಗ್ಗೆ ಪ್ರೀತಿ ಇರುವಂಥ ಜನರನ್ನು ನೀವು ಮೇಲೆತ್ತಿ. ಅದೆಲ್ಲವನ್ನೂ ಬಿಟ್ಟು ಏನೋ ಅವರ ಕೆಲಸವನ್ನು ಸಾಧನೆ ಮಾಡುವುದಕ್ಕೋಸ್ಕರ, ರಕ್ಷಣೆಗೋಸ್ಕರ ಇವತ್ತಿನ ದಿವಸ ಈ ರೀತಿಯಾದಂಥ ದಬ್ಬಾಳಿಕೆಗಳು ನಡೆದರೆ ಇದು ರಾಜ್ಯದಲ್ಲಿ ಶೋಭೆ ತರುವಂಥಾದ್ದಲ್ಲ, ಮತ್ತು ಇವರ new jest ಕೆಟ್ಟದಾಗಿ ಎಲ್ಲಾ ಕಡೆಗಳಲ್ಲಿ ಹರಡುತ್ತಿದ್ದೆಯೆಂದರೆ, ಇದರಿಂದ ಇವತ್ತು ಕರ್ನಾಟಕ ರಾಜ್ಯ ಅಶಾಂತಿಯಿಂದ ಕೂಡಿದೆ. ಒಂದು ಕಡೆ ರೈತರ ಮೇಲೆ ಇಂಥಾ ಲಾಠಿ ಚಾರ್ಜಿಂಗ್, ಹೆಣ್ಣು ಮಕ್ಕಳ ಮೇಲೆ ಅನುಚಿತ ವರ್ತನೆಗಳು ಮತ್ತು ಹೊರಗಿನಿಂದ ವಿದ್ಯಾರ್ಥಿಗಳು ಬಂದರೆ ಇಲ್ಲಿ safe ಇಲ್ಲವೆಂದರೆ, ನಾಳೆ ದಿವಸ ಅನೇಕ ಜನ ಇಲ್ಲಿ ಕಲಿಯುವುದಕ್ಕೂ admission ಅನ್ನು ತೆಗೆದುಕೊಳ್ಳದೇ ಇರಬಹುದು, ಏಕೆಂದರೆ ನಮ್ಮಲ್ಲಿ ಸಾಕಷ್ಟು private institutions ಇವೆ. ಅವರಿಗೆ ಬರುವಂಥ ವಿದ್ಯಾರ್ಥಿಗಳು ಹೊರಗಿನವರಾಗಿರುತ್ತಾರೆ. ಇದೆಲ್ಲವೂ ಕೂಡ ಇವತ್ತು ನಿಮ್ಮ ಮುಂದೆ ಇದೆ. ಇದರ ಬಗ್ಗೆ ಈ ಸರ್ಕಾರ ಚಿಂತನೆ ಮಾಡದೇ ಹೋದರೆ ಖಂಡಿತವಾಗಿ ಏನೂ ಪ್ರಯೋಜನವಾಗುವುದಿಲ್ಲ ಮತ್ತು ಅಲ್ಲಿನ ಜನರು ಇವತ್ತು ಆಕ್ರೋಶಕ್ಕೊಳಗಾಗಿದ್ದಾರೆ ಮತ್ತು ಸಾವಿರಾರು ಜನ ರೈತರು ಈ ಒಂದು ಚಳುವಳಿಯಲ್ಲಿ ಭಾಗವಹಿಸಿ ಇವತ್ತಿನ ದಿವಸ ವಿಮಾನ ನಿಲ್ದಾಣಕ್ಕೆ ಜಮೀನನ್ನು ಕೊಡುವುದಿಲ್ಲವೆನ್ನುವಂಥ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ಅಭಿವೃದ್ಧಿಯಾಗಬೇಕು, ಜಮೀನು ಬೇಕು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಪದ್ಧತಿ ಪ್ರಕಾರ ನೀವೇ ಅವರನ್ನು ಕರೆಸಿ ಮಾತನಾಡಿ ಜಮೀನನ್ನು ತೆಗೆದುಕೊಳ್ಳುವಂಥಾದ್ದು ಒಂದು ವಿಷಯ. ಆದರೆ ದಬ್ಬಾಳಿಕೆಯಿಂದ ನಾವು ಕೇಳಿದರೆ ಕೊಡಲಿಲ್ಲವೆಂದು ತೋಳ ಬಲದ ಮೇಲೆ ರೈತರನ್ನು ಹೆದರಿಸುತ್ತೇವೆಂದರೆ, ಇದು ಸಾಧ್ಯವಿಲ್ಲ. ಇದು rebound ಆಗುತ್ತದೆ. ಇದು ನಿಮ್ಮ ಮೇಲೆ reflect ಆಗುತ್ತದೆ. ಅದನ್ನು ನೀವು ತಿಳಿದುಕೊಳ್ಳಿ, ಇಲ್ಲವೆಂದರೆ ಅದಕ್ಕೆ ಬೆಲೆ ನೀವು ಕೊಡಬೇಕಾಗುತ್ತದೆ. ಆ ಬೆಲೆಯನ್ನು ಕೊಟ್ಟು ನೀವೂ ಕೂಡ ಹೊರಗಡೆ ಹೋಗುವಂಥಾದ್ದು ಆಗುತ್ತದೆನ್ನುವ ಮಾತನ್ನು ಇವತ್ತು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನೊಂದು ವಿಚಾರವೇನೆಂದರೆ, ನಾನು ಈ ವಿಷಯವಾಗಿ ಹೆಚ್ಚು ಮಾತನಾಡದೇ ಇದನ್ನು ಪುನಃ 24ನೇ ತಾರೀಖಿನಂದು ಪ್ರಸ್ತಾಪ ಮಾಡುತ್ತೇನೆ. ಅದು ವಿಶೇಷವಾಗಿ ಶಾಸಕರಾದ ಮಾನ್ಯ ಸಂಪಂಗಿಯವರ ಬಂಧನದ ಬಗ್ಗೆ ಮತ್ತು ಲೋಕಾಯುಕ್ತರು ಮಾಡಿದಂಥ

ದಾಳಿಯ ಬಗ್ಗೆ, ಅದನ್ನು ನಾವು 24ನೇ ತಾರೀಖಿನಂದು ಪ್ರಸ್ತಾಪ ಮಾಡುತ್ತೇವೆ. ಅದರ ಬಗ್ಗೆ ಏನು ಕ್ರಮ ಜರುಗಿದೆ ಮತ್ತು ಯಾವ ರೀತಿಯಲ್ಲಿ ಇವತ್ತು ಆಡಳಿತ ನಡೆದಿದೆ ಮತ್ತು ಪೊಲೀಸರ ಹೆಸರನ್ನು ಉಪಯೋಗ ಮಾಡಿಕೊಂಡು ಯಾವ ರೀತಿಯಗಿ ಕೆಲವು ಜನ ಆಡಳಿತ ಪಕ್ಷದವರು ಹೆದರಿಸುತ್ತಿದ್ದಾರೆನ್ನುವುದಕ್ಕೆ ಇದೊಂದು ಉದಾಹರಣೆಯೇ ಸಾಕ್ಷಿಯಾಗಿದೆ. ಅದಕ್ಕಾಗಿ ಅದರ detail ಅನ್ನು ತಮಗೆ ಪ್ರತ್ಯೇಕವಾಗಿ ಬರೆದು ಕೊಡುತ್ತೇವೆ. ಏಕೆಂದರೆ ಅವರು ಸಹ ಈ ಮನೆಯ ಸದಸ್ಯರಾಗಿದ್ದಾರೆ. Naturally ಅವರಿಗೂ ಕೂಡ depend ಮಾಡಿಕೊಳ್ಳುವುದಕ್ಕೆ ಅವಕಾಶ ಬೇಕಾಗುತ್ತದೆ. ಅದಕ್ಕಾಗಿ ನಾನು 24ನೇ ತಾರೀಖಿನಂದು ಪುನಃ ಈ ವಿಷಯವನ್ನು raise ಮಾಡುತ್ತೇನೆ. ಇವತ್ತು ನಾವು ಏನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆ ವಿಚಾರಗಳ ಬಗ್ಗೆ ದಯವಿಟ್ಟು ಕೂಲಂಕುಷವಾಗಿ ತಾವು ವಿಚಾರ ಮಾಡಿ. ಇವತ್ತು Law & order ಅನ್ನು maintain ಮಾಡುವುದಕ್ಕೆ ಗೃಹ ಸಚಿವರು ಏನು ವಿಫಲ ರಾಗಿದ್ದಾರೋ, ಅವರನ್ನು ತಾವು ತಕ್ಷಣ ಕೈ ಬಿಡಬೇಕು. ನೀವು dismiss ಮಾಡಿ, ಇಲ್ಲವೆಂದರೆ ಯಾರಾದರೂ Public Interest Litigation ಹಾಕಿ ಮತ್ತೊಂದು ಕೇಸ್ ಅನ್ನು ಬುಕ್ ಮಾಡಿದರೆಂದರೆ ಅದು ವ್ಯತ್ಯಾಸವಾಗಬಹುದು, ಎರಡನೆಯದಾಗಿ ಅನಾವಶ್ಯಕವಾಗಿ ಕೇಂದ್ರ ಸಚಿವರ ಮೇಲೆ ಕೇಸನ್ನು register ಮಾಡಿದ್ದೀರಿ. ಅದನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕು, ನೀವು ಪ್ರೋತ್ಸಾಹ ನೀಡುತ್ತಿದ್ದೀರೆಂಬ ಅಭಿಪ್ರಾಯ ಬರಬಾರದು. ತಾವು ದಯವಿಟ್ಟು ಈ ಕೆಲಸವನ್ನು ಮಾಡಬೇಕು. ನಾನು ಮತ್ತೊಮ್ಮೆ demand ಮಾಡುತ್ತೇನೆ. Home Minister ಒಂದು ಕ್ಷಣವೂ ಕೂಡ ಅಧಿಕಾರದಲ್ಲಿರುವುದಕ್ಕೆ ಲಾಯಕ್ ಇಲ್ಲ. ತಾವು ಅವರನ್ನು ಕೈ ಬಿಡಬೇಕು. ಮಾನ್ಯ ಮುಖ್ಯಮಂತ್ರಿಯವರು ಸಮರ್ಥನೆ ಮಾಡಿಕೊಂಡು ಮಾತನಾಡುವ ಅವಶ್ಯಕತೆ ಇಲ್ಲ. ನಾವು ಏನೋ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು ನೋಡಬಹುದು, 9 ತಿಂಗಳವರೆಗೂ ಕೂಡ ಅಧಿಕಾರವನ್ನು ನಡೆಸುವುದಕ್ಕೆ ಆಗಲಿಲ್ಲವೆಂದರೆ ಏನು ಮಾಡುವುದಕ್ಕೆ ಆಗುತ್ತದೆ? ಮಾನ್ಯ ಅಧ್ಯಕ್ಷರೆ, ಹಳ್ಳಿ ಕಡೆ ಒಂದು ಗಾದೆ ಮಾತು ಇದೆ. ತಾವು ತಪ್ಪು ತಿಳಿದುಕೊಳ್ಳುವುದಿಲ್ಲವೆಂದರೆ ಹೇಳುತ್ತೇನೆ. "ಲಗ್ನ ಮಾಡಿದ ಮೇಲೂ, ಅಪ್ಪ ನೀನೇ ನೋಡೆಂದು ಮಗ ಹೇಳಿದರೆ ಅಪ್ಪ ಏನು ಮಾಡಬೇಕು" ಆ ರೀತಿಯಲ್ಲಿ ಸಣ್ಣ ಪುಟ್ಟ ಎಲ್ಲಾ ಕೆಲಸವನ್ನು ನಿಮ್ಮಿಂದ ಮಾಡಿಸಿ, Home Minister ಎಂದು ಏತಕ್ಕೆ ಇರಬೇಕು? ನಿಮ್ಮ ಭಾರವನ್ನು ಕಡಿಮೆ ಮಾಡತಕ್ಕಂಥಾದ್ದು ಆಗಬೇಕೇ ಹೊರತಾಗಿ ಪದೇ ಪದೇ ಎಲ್ಲದಕ್ಕೂ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ ಎಂದಾಗಬಾರದು. ನಾನು ಫೋನ್ ಮಾಡಿ ಕೇಳಿದೆ, ಆಯಿತು, ಮುಖ್ಯಮಂತ್ರಿಯವರ ಜೊತೆಯಲ್ಲಿ

ಮಾತನಾಡುತ್ತೇನೆ ಎಂದು ಅಂದರೆ ನೀವು ಹೇಗೆ ಮಂತ್ರಿಗಳನ್ನು ಇಟ್ಟಿದ್ದೀರಿ ಎಂದು ಗೊತ್ತಾಗುತ್ತದೆ. ನಾವು ಏನು ಕೇಳಿದರೂ ಕೂಡ ಮುಖ್ಯಮಂತ್ರಿಗಳನ್ನು ಕೇಳುತ್ತೇವೆ ಎಂದು ಹೇಳುತ್ತಾರೆ. ಅದಕ್ಕೇ ನಿಮಗೆ ಅವರ ಮೇಲೆ ಜಾಸ್ತಿ ಪ್ರೀತಿ ಇದೆ. ಒಂದು ಸೂಜಿ, ಒಂದು ಪಿನ್ ಈ ಕಡೆಯಿಂದ ಆ ಕಡೆ ಎತ್ತಿ ಇಡಬೇಕಾದರೂ ಕೂಡ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಕೇಳುತ್ತೇವೆ ಎಂದರೆ ಶಹಬಾಸ್, ಇಂಥ ಮಂತ್ರಿಗಳನ್ನು ನೀವು ಇಟ್ಟುಕೊಂಡಿದ್ದೀರಿ, ನಿಮಗೆ ಧನ್ಯವಾದ. ಆದರೆ ತಕ್ಷಣ, ಕಾನೂನಿನ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ, ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಮತ್ತು ರೈತರ ಹಿತದೃಷ್ಟಿಯಿಂದ ಅವರನ್ನು ನೀವು ಕೈಬಿಡಬೇಕು. ಏಕೆಂದರೆ, ಅವರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ, ಅದು ಅವರ ಕೈಯಿಂದ ಆಗುವುದಿಲ್ಲ. ತಾವು ತಕ್ಷಣ ಅವರನ್ನು ಕೈಬಿಟ್ಟು, ಡಿಸ್‌ಮಿಸ್ ಮಾಡಿ, ನಂತರ ಎಲ್ಲ ಮಂತ್ರಿಗಳಿಗೂ ಒಂದು ಕಾಗದ ಕಳುಹಿಸಿ, ಯಾವ ಮಂತ್ರಿಗಳು ಕೆಲಸ ಮಾಡುವುದಿಲ್ಲ, ಈಗ ಆಚಾರ್ಯ ಅವರಿಗೆ ಏನು ಗತಿಯಾಗಿದೆ, ಅದೇ ಗತಿ ನಿಮಗೆ ಬರುತ್ತದೆ ಎನ್ನುವ ಸಂದೇಶ ಯಡಿಯೂರಪ್ಪನವರಿಂದ ಹೋಗಲಿ. ಈಗ ನಿಮಗೆ ಯಾರೂ ಏನೂ ಮಾಡುವ ಹಾಗಿಲ್ಲವಲ್ಲ, ನಿಮ್ಮ ಸದಸ್ಯರ ಸಂಖ್ಯೆ ಭರ್ತಿಯಾದವಲ್ಲ, ಈಗ ನಿಮ್ಮ ಸದಸ್ಯರ ಬಲ ಒಟ್ಟು 115 ಆಗಿದೆ. ಆರು ಜನರು ಹೆಚ್ಚು ಕಡಿಮೆ ಆದರೂ ಸಹ ನೀವು ಭದ್ರವಾಗಿದ್ದೀರಲ್ಲ, ಹೀಗಿರುವಾಗ ಹೆದರಿಕೊಳ್ಳುವುದು ಏಕೆ? ಈದರೂ ಕಾನೂನು ಸುವ್ಯವಸ್ಥೆಯನ್ನು ಚೆನ್ನಾಗಿಡಿ. ಇಷ್ಟು ಹೇಳಿ, ಮಾತನಾಡುವುದಕ್ಕೆ ತಾವು ನನಗೆ ಸಮಯವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಅಭಿನಂದಿಸುತ್ತೇನೆ ಮತ್ತು ಮುಖ್ಯಮಂತ್ರಿಗಳು ತಾಳ್ಮೆಯಿಂದ ಈ ಮಾತನ್ನು ಕೇಳಿ, ಆಚಾರ್ಯ ಅವರನ್ನು ಡಿಸ್‌ಮಿಸ್ ಮಾಡುತ್ತಾರೆ ಎಂದು ತಿಳಿದುಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ): ಮಾನ್ಯ ಸಭಾಧ್ಯಕ್ಷರೇ, ನಿಲುವಳಿ ಸೂಚನೆಯ ಮುಖೇನ ಸರ್ಕಾರದ ಗಮನವನ್ನು ಸೆಳೆಯಬೇಕು ಎಂದು ಹೇಳಿ ನಾವು ಪ್ರಯತ್ನ ಪಟ್ಟಾಗ, ತಾವು ನಿಯಮ 69ರ ಅಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಈಗಾಗಲೇ ನಮ್ಮ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿ, ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುರಕ್ಷಿತವಾಗಿಲ್ಲ, ಕಾನೂನಿನ ಪರಿಸ್ಥಿತಿ ಹದಗೆಟ್ಟಿದೆ ಎನ್ನತಕ್ಕಂಥ ವಿಚಾರವನ್ನು ಅನೇಕ ಉದಾಹರಣೆಗಳನ್ನು ಕೊಡುವುದರ ಮುಖೇನ, ಸರ್ಕಾರದ ವೈಫಲ್ಯ ಏನು ಎನ್ನುವುದನ್ನು ತೋರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಾನು ನೇರವಾಗಿ ವಿಚಾರವನ್ನು ಪ್ರಸ್ತಾಪ ಮಾಡಬೇಕು ಎನ್ನುವುದಾದರೆ, ಸರ್ಕಾರ ಅಧಿಕಾರಕ್ಕೆ ಬಂದು 9 ತಿಂಗಳಾಯಿತು. ಪ್ರಾರಂಭದ ದಿನಗಳಲ್ಲಿ ನಾವು ಟೀಕೆ ಮಾಡುವುದಕ್ಕೆ, ಲೋಪದೋಷಗಳನ್ನು ಎತ್ತಿ ಹಿಡಿಯುವುದಕ್ಕೆ ಸಾಕಷ್ಟು ಅವಕಾಶಗಳು ಇರುತ್ತಿರಲಿಲ್ಲ. ಕಾರಣ, ನೀವು ಹೊಸದಾಗಿ ಅಧಿಕಾರಕ್ಕೆ ಬಂದಿದ್ದೀರಿ, ನಾವು ಹೆಚ್ಚಿಗೆ ಟೀಕೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದಾಗಿತ್ತು. ಆದರೆ 9 ತಿಂಗಳು ಆದಮೇಲೆ ಇವತ್ತು ಸರ್ಕಾರ ಯಾವ ದಿಕ್ಕಿನಲ್ಲಿ ನಡೆಯುತ್ತಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಸರ್ಕಾರ ಭದ್ರವಾಗಿದ್ದಾಗ ಕಾನೂನು ಸುವ್ಯವಸ್ಥೆ ತನ್ನಷ್ಟಕ್ಕೆ ತಾನೇ ಭದ್ರವಾಗಿರುತ್ತದೆ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ಎಂದರೆ ಇವತ್ತು ಸರ್ಕಾರದ ಭದ್ರತೆಯ ಬಗ್ಗೆ ನೀವು ಅನುಮಾನ ಪಡಯಬೇಕಾಗಿಲ್ಲ. ಈಗಾಗಲೇ 121 ಜನರ ಬೆಂಬಲವನ್ನು ಇಟ್ಟುಕೊಂಡು ನೀವು ಸರ್ಕಾರವನ್ನು ರಚನೆ ಮಾಡಿದ್ದೀರಿ. ರಚನೆ ಮಾಡಿದ ಮೇಲೂ ಕೂಡ ಎಲ್ಲೋ ಒಂದು ಕಡೆ ಒಳ್ಳೆಯ ಆಡಳಿತವನ್ನು ಜನಗಳಿಗೆ ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ ಎನ್ನುವ ನೋವಿನ ಸಂಗತಿಯನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಏಕೆ ಆಗಲಿಲ್ಲ ಎನ್ನತಕ್ಕಂಥಾದ್ದಕ್ಕೆ ಕಾರಣಗಳೇನು ಎನ್ನತಕ್ಕಂಥಾದ್ದನ್ನು ಹುಡುಕುವುದಕ್ಕಿಂತ ಹೆಚ್ಚಾಗಿ, ಇವತ್ತು ನಿಮ್ಮ ಜವಾಬ್ದಾರಿಕೆ, ಸಚಿವ ಸಂಪುಟದಲ್ಲಿರತಕ್ಕಂಥ ಸಚಿವರುಗಳು ಕಾರ್ಯ ನಿರ್ವಹಣೆ ಮಾಡುವುದರಲ್ಲಿ ಸಾಕಷ್ಟು ಲೋಪಗಳು ಆಗುತ್ತಿವೆ, ತಪ್ಪುಗಳು ಆಗುತ್ತಿವೆ, omissions ಆಗುತ್ತಿವೆ, ಅದನ್ನು ಇವತ್ತು ನೀವು ಸರಿಪಡಿಸಬೇಕು. ಸರಿಪಡಿಸಲು ಆಗದೇ ಇರುವಂಥ ಮಟ್ಟಕ್ಕೆ ಹೋಗಿರತಕ್ಕಂಥ ಸಂದರ್ಭವೂ ಇದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಇವತ್ತು ಏಕೆ ಕಾನೂನು, ಸುವ್ಯವಸ್ಥೆ ಇಷ್ಟೊಂದು ಹದಗೆಡುತ್ತಿದ್ದರೂ ಕೂಡ, ಮುಖ್ಯಮಂತ್ರಿಗಳಾಗಿರತಕ್ಕಂಥವರು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ನಾವು ಕೇಳಬಹುದು. ಅವರ ದೃಷ್ಟಿ ಇರತಕ್ಕಂಥಾದ್ದು ನಾಳೆಯ ಚುನಾವಣೆಯ ಮೇಲೆ. ಆ ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಾದರೂ ಕೂಡ ನಾವು ಸಂಖ್ಯಾಬಲನ್ನು ಜಾಸ್ತಿ ಮಾಡಿಕೊಳ್ಳಬೇಕು ಎನ್ನುವ ಒಂದು ದೃಷ್ಟಿಯಿಂದ, ಅದಕ್ಕೆ ಯಾವುದೋ ಒಂದು ರೀತಿಯಲ್ಲಿ ಭಯಾನಕವಾಗಿರತಕ್ಕಂಥ ಒಂದು ವಾತಾವರಣವನ್ನು ಈ ರಾಜ್ಯದಲ್ಲಿ ಸೃಷ್ಟಿ ಮಾಡತಕ್ಕಂಥ ಪ್ರಕ್ರಿಯೆಗಳು ನಡೆಯುತ್ತಿವೆ ಎನ್ನತಕ್ಕಂಥ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ ಇವತ್ತು ಯಾರಿಗೆ ರಕ್ಷಣೆ ಬೇಕಾಗಿತ್ತು, ಅವರಿಗೆ ರಕ್ಷಣೆ ಸಿಗುತ್ತಿಲ್ಲ. ನೆಲ, ಜಲ, ಕಾನೂನು ಸುವ್ಯವಸ್ಥೆಗೋಸ್ಕರ ನಾವು ಇದ್ದೇವೆ ಎಂದು ನೀವೇ ಹೇಳಿದಿರಿ. ಆದರೆ ಇವತ್ತು ನಿಮ್ಮ ರಾಜ್ಯದಲ್ಲಿ ಹೆಣ್ಣುಮಕ್ಕಳು ನೆಮ್ಮದಿಯಿಂದ ಇದ್ದಾರೆಯೇ? ಅಲ್ಪಸಂಖ್ಯಾತರು

ನೆಮ್ಮದಿಯಿಂದ ಇದ್ದಾರೆಯೇ? ಹಿಂದುಳಿದ ವರ್ಗದವರು ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಾಗುತ್ತಿದೆಯೇ? ರೈತರು ನೆಮ್ಮದಿಯಿಂದ ಇದ್ದಾರೆಯೇ? ಯಾರಿಗೆ ರಕ್ಷಣೆ ಇರಬೇಕಾಗಿತ್ತೋ, ಯಾರ ಪರವಾಗಿ ಈ ಸರ್ಕಾರ ವಕಾಲತ್ತನ್ನು ವಹಿಸಿ, ಅವರಿಗೆ ಆಡಳಿತವನ್ನು ಕೊಡಬೇಕಾಗಿತ್ತೋ, ಅವರ ವಿರುದ್ಧವಾಗಿಯೇ ನಿಮ್ಮ ನಡವಳಿಕೆಗಳು ಇದ್ದರೆ, ಇವತ್ತು ನಿಮ್ಮ ಕಾನೂನಿನ ವ್ಯವಸ್ಥೆ ಏನಾಗಿದೆ ಎನ್ನುವ ಬಗ್ಗೆ ನೀವು ಯೋಚನೆ ಮಾಡಬೇಕು. ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ಬಹಳ ಮುಖ್ಯವಾಗಿ, ಎಲ್ಲೋ ಒಂದು ಕಡೆಗೆ ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡಿದ್ದೀರಿ. ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮುಂಬೈಯಲ್ಲಿ ಆಗಿರತಕ್ಕಂಥ terrorist activity ಬಗ್ಗೆ ಯಾರಿಗೂ ಸಮಾಧಾನ ಇಲ್ಲ. ಮುಂಬೈಯಲ್ಲಿ ಆದಂಥ ಹತ್ಯೆಯ ಪ್ರಕರಣದ ಬಗ್ಗೆ ಇವತ್ತು ಇಡೀ ದೇಶದಲ್ಲಿರುವ ಎಲ್ಲ ಪಕ್ಷದವರು ಕೂಡ ಅದನ್ನು condemn ಮಾಡತಕ್ಕಂಥ ಕೆಲಸವನ್ನು ಮಾಡಿವೆ. Condemn ಮಾಡುವುದರ ಜೊತೆಗೆ, ನಾವು ಒಂದು ರೀತಿಯ ಎಚ್ಚರಿಕೆಯನ್ನು ವಹಿಸಬೇಕಾಗಿದ್ದು, ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತು ಹಾಕಬೇಕಾಗಿದೆ. ಇವತ್ತು ನಮ್ಮ ದೇಶದಲ್ಲಿ ಭಯೋತ್ಪಾದನೆ ಇಲ್ಲ. ಭಯೋತ್ಪಾದನೆ ಇರತಕ್ಕಂಥಾದ್ದು ನೆರೆ ರಾಷ್ಟ್ರಗಳಲ್ಲಿ. ನೆರೆರಾಷ್ಟ್ರಗಳಲ್ಲಿರತಕ್ಕಂಥ ಆ ಭಯೋತ್ಪಾದನೆಯನ್ನು ಬುಡಸಮೇತ ಕಿತ್ತು ಹಾಕಬೇಕಾಗಿದ್ದಾಗ, ನಾವು ರಾಜ ತಾಂತ್ರಿಕವಾಗಿರತಕ್ಕಂಥ ರೀತಿಯಲ್ಲಿ ನಾವು ಕಾನೂನುಗಳನ್ನು ತರಬೇಕಾಗುತ್ತದೆ, ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ, ಕೇಂದ್ರದ ಜೊತೆಗೆ ವಿಚಾರವನ್ನು ಮಾಡಬೇಕಾಗುತ್ತದೆ, ವ್ಯವಹಾರವನ್ನು ಮಾಡಬೇಕಾಗುತ್ತದೆ. ಅಷ್ಟೇ ಪ್ರಮಾಣದಲ್ಲಿ ನೀವೂ ಕೂಡ ಎಚ್ಚರಿಕೆಯಿಂದ ಇರಬೇಕಾಗಿರತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಆದರೆ ನೀವು ಅದರ ಕಡೆ ಗಮನ ಹರಿಸುವುದನ್ನು ಬಿಟ್ಟು, ನೀವು ಮಾಡುತ್ತಿರತಕ್ಕಂಥ ಕೆಲಸ ಏನೆಂದರೆ, ಭಯೋತ್ಪಾದನೆಯನ್ನು ನಿರ್ಮೂಲನ ಮಾಡಲು ಒಂದು movement ಮಾಡಬೇಕಾಗುತ್ತದೆ ಜನಗಳಲ್ಲಿ ಎಚ್ಚರಿಸಬೇಕಾಗುತ್ತದೆ, ಜನಗಳಲ್ಲಿ ಒಂದು ರೀತಿಯ awarenessಅನ್ನು ಮೂಡಿಸಬೇಕಾಗುತ್ತದೆ ಎನ್ನುವ ವಿಚಾರವನ್ನು ಯಾರು ಮುಖ್ಯಮಂತ್ರಿಗಳ ಕಿವಿಗೆ ಹಾಕಿದರೋ ನನಗೆ ಗೊತ್ತಿಲ್ಲ. ಇವತ್ತು ಅಂಥ ಒಂದು ಕೆಲಸ ನಡೆದಿದೆ. ಭಯೋತ್ಪಾದನೆಯ ವಿಚಾರದಲ್ಲಿ ಸರ್ಕಾರ ಯಾವ ರೀತಿಯಾಗಿ ನಡೆದಿದೆ ಎಂದರೆ, ಎಲ್ಲೋ ಒಂದು ಕಡೆಯಲ್ಲಿ, ಈ ರಾಜ್ಯದ ಕಾನೂನು, ಸುವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ನೀವು ಪರೋಕ್ಷವಾಗಿ, ನೇರವಾಗಿ ನೀವೇ ಹೊಣೆಗಾರರು ಎಂದು ಹೇಳತಕ್ಕಂಥ ಒಂದು ನಿದರ್ಶನ ನನ್ನ ಮುಂದೆ ಇದೆ. ವಿದ್ಯಾರ್ಥಿ ಜಾಗೃತಿ

ಅಭಿಯಾನ ಕಾರ್ಯಕ್ರಮವನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳ ಬೃಹದಾಕಾರವಾಗಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕುಗಳಲ್ಲಿ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ, ಭಯೋತ್ಪಾದನೆಯನ್ನು ಯಾರೂ support ಮಾಡತಕ್ಕಂಥ ಪ್ರಶ್ನೆ ಇಲ್ಲ. ಎಲ್ಲರೂ ಭಯೋತ್ಪಾದನೆ ವಿರುದ್ಧವಾಗಿ ಇರತಕ್ಕಂಥವರೇ. ಅದಕ್ಕೆ ಕಾಂಗ್ರೆಸ್ ಪಕ್ಷ, ಇನ್ನೊಂದು ಪಕ್ಷ ಅಥವಾ ಬಿ.ಜೆ.ಪಿ. ಎನ್ನುವ ಪ್ರಶ್ನೆ ಇಲ್ಲ. ಇದು ಇಡೀ ದೇಶದ ಸಮಸ್ಯೆ. ದೇಶದ ಈ ಸಮಸ್ಯೆಗಾಗಿ ಇವತ್ತು ದೊಡ್ಡ ಬಲಿಯನ್ನು ತೆತ್ತಿರುವವರು ಎಂದರೆ, ಎಲ್ಲರಿಗಿಂತ ಹೆಚ್ಚು ಬೆಲೆಯನ್ನು ತೆತ್ತಿರತಕ್ಕಂಥವರು ಎಂದರೆ ಅದು ನಮ್ಮ ಕಾಂಗ್ರೆಸ್ ಪಕ್ಷ. ನಮ್ಮ ನಾಯಕರಾಗಿದ್ದಂಥ ಶ್ರೀಮತಿ ಇಂದಿರಾಗಾಂಧಿಯವರನ್ನು ಕಳೆದುಕೊಂಡಿದ್ದೇವೆ, ನಮ್ಮ ನಾಯಕರಾಗಿದ್ದಂಥ ಶ್ರೀ ರಾಜೀವ ಗಾಂಧಿಯವರನ್ನು ಕಳೆದುಕೊಂಡಿದ್ದೇವೆ. ಈ ರೀತಿಯಾಗಿ, ನಮ್ಮ ಪಕ್ಷದ ಮುಖಂಡರುಗಳನ್ನು ಕಳೆದುಕೊಂಡಿರುವ ನಾವು ಯಾವ ರೀತಿಯಾಗಿ ಭಯೋತ್ಪಾದನೆಯಿಂದ ಹೊರಬರಬೇಕು ಎನ್ನುವ ಬಗ್ಗೆ ಇವತ್ತು ಇಡೀ ದೇಶ ಕುಳಿತು ಚಿಂತನೆಯನ್ನು ಮಾಡಬೇಕಾಗುತ್ತದೆ. ಇವತ್ತು ನೀವು ಏನು ಮಾಡಿದಿರಿ? ಮುಂಬೈಯಲ್ಲಿ ಆಗಿರತಕ್ಕಂಥ ನಿದರ್ಶನವನ್ನು ಗಮನದಲ್ಲಿಟ್ಟುಕೊಂಡು ನೀವು ಒಂದು ತೀರ್ಮಾನವನ್ನು ಮಾಡಿದ್ದೀರಿ. ನೀವು ಏನು ತೀರ್ಮಾನ ಮಾಡಿದಿರಿ ಎಂದರೆ ನೀವು ಒಂದು ಸರ್ಕಾರಿ ಆದೇಶವನ್ನು ಮಾಡುತ್ತೀರಿ. ನೀವು ಸರ್ಕಾರಿ ಆದೇಶವನ್ನು ಮಾಡಬೇಕಾದಾಗ ಅದಕ್ಕೆ ಒಂದು ಕಾರಣಗಳು ಬೇಕಾಗುತ್ತದೆ. ನಿಮ್ಮ ಮಂತ್ರಿಗಳಿಂದ ಈ ವಿಚಾರ ಪ್ರಸ್ತಾಪವಾದಂಥ ಸಂದರ್ಭದಲ್ಲಿ, ಒಂದು ಸರ್ಕಾರಿ ಆದೇಶ issue ಆಗಬೇಕಾದಂಥ ಸಂದರ್ಭದಲ್ಲಿ ಅದಕ್ಕೆ ಒಂದು ನಿಯಮವಿದೆ. ಒಂದು Government Order ಎಂದರೆ ಅದಕ್ಕೆ ಒಂದು preamble ಇರಬೇಕಾಗುತ್ತದೆ. ಯಾವ ಸಂದರ್ಭದಲ್ಲಿ ಇದನ್ನು ಮಾಡಬೇಕಾಗಿದೆ, ಅಂತಿಮವಾಗಿರತಕ್ಕಂಥ ತೀರ್ಮಾನವೇನು ಎನ್ನುವುದಕ್ಕೆ ಒಂದು order form ಇರುತ್ತದೆ. ಇದೇ ವಿಚಾರವನ್ನು ನಾನು ಬೆಳಗಾವಿಯಲ್ಲಿ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಸರ್ಕಾರಿ ಆದೇಶವನ್ನು ಕೇಳಿದೆ. ಮಾನ್ಯ ಸಚಿವರು ಅದನ್ನು ಕೊಡಲಿಲ್ಲ. ನಾನೇ ಸರ್ಕಾರಿ ಆದೇಶವನ್ನು ಪಡೆದಿದ್ದೇನೆ. ಇವತ್ತು ಸರ್ಕಾರದ ಆದೇಶ ಏನಿದೆ ಎನ್ನುವುದನ್ನು ನಾವು ನೋಡಬೇಕು. ನಾವೆಲ್ಲ ಕಾನೂನು ತಜ್ಞರಿದ್ದೇವೆ, ಕಾನೂನಿನ ಶಾಲೆಯಲ್ಲಿ ಓದಿರತಕ್ಕಂಥವರಾಗಿದ್ದೇವೆ. ಇವತ್ತು ನಾವು ಕಾನೂನನ್ನು ಮಾಡಬೇಕಾದಾಗ ಯಾವ ರೀತಿಯಾಗಿ ನಡೆದಿದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಕರ್ನಾಟಕ ಸರ್ಕಾರದ ನಡವಳಿಕೆಗಳು: ರಾಜ್ಯದಲ್ಲಿ

ಭಯೋತ್ಪಾದನೆ ವಿರೋಧಿ ಅಭಿಯಾನ ಸಮಿತಿ ರಚನೆ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಟಿಪ್ಪಣಿ ದಿನಾಂಕ: 8.12.2008 ಅಂದರೆ ದಿನಾಂಕ: 8.12.2008ರಂದು ಒಂದು ಟಿಪ್ಪಣಿಯನ್ನು ಕಳುಹಿಸುತ್ತೀರಿ. ಅದಕ್ಕೆ ಪ್ರಸ್ತಾವನೆ: ಮೇಲೆ ಓದಲಾದ ಟಿಪ್ಪಣಿಯಲ್ಲಿ ಭಯೋತ್ಪಾದನೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಂಬಂಧ ರಾಜ್ಯ ಮತ್ತು ವಿಭಾಗ ಮಟ್ಟದಲ್ಲಿ ಭಯೋತ್ಪಾದನೆ ವಿರೋಧಿ ಅಭಿಯಾನ ಸಮಿತಿಗಳನ್ನು ರಚಿಸುವಂತೆ ಕೋರಿರುತ್ತಾರೆ. ಸರ್ಕಾರಿ ಆದೇಶ: ಆದೇಶ ಸಂಖ್ಯೆ ಇಂತಿಷ್ಟು ಎಂದು ಹಾಕಿ, ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಭಯೋತ್ಪಾದನೆ ವಿರುದ್ಧ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಂಬಂಧದಲ್ಲಿ ರಾಜ್ಯ ಮತ್ತು ವಿಭಾಗ ಮಟ್ಟದಲ್ಲಿ ಅನುಬಂಧ 1 ಮತ್ತು 2ರಲ್ಲಿ ಇರುವಂತೆ ಭಯೋತ್ಪಾದನೆ ವಿರೋಧ ಅಭಿಯಾನ ಸಮಿತಿಗಳನ್ನು ರಚಿಸಲು ಸರ್ಕಾರ ಆದೇಶಿಸಿದೆ. ಅಂದರೆ ಕಮಿಟಿ ಮಾಡಿದಿರಿ. ತಾವು ಅಧ್ಯಕ್ಷರಾಗಿದ್ದೀರಿ ಮತ್ತು ಇದಕ್ಕೆ ಯಾರ್‍ಯಾರು ಸದಸ್ಯರಾಗಿದ್ದೀರಿ ಎಂಬುದನ್ನು ಇವತ್ತು ನೀವು ಮಾಡಿದ್ದೀರಿ. ಇನ್ನೊಂದು ಆದೇಶವನ್ನು ಸಹ ಮಾಡಿದ್ದೀರಿ. ಅದರಲ್ಲಿಯೂ ಕೂಡ ಅದನ್ನೇ ರಿಪೀಟ್ ಮಾಡಿ ಒಂದು ಆದೇಶವನ್ನು ಮಾಡಿ ವಿಭಾಗ ಮಟ್ಟದಲ್ಲಿ ಮಾಡಬೇಕಾದಾಗ ಯಾರ್‍ಯಾರು ಯಾವ್ಯಾವ ರೀತಿ ಮಾಡಬೇಕೆಂದು ಹೇಳಿದ್ದೀರಿ. ಇದಾದ ಮೇಲೆ ನೀವೊಂದು ಸುತ್ತೋಲೆಯನ್ನು ಹೊರಡಿಸಿದ್ದೀರಿ. ಆ ಸುತ್ತೋಲೆಯಲ್ಲಿ ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನದ ಬಗ್ಗೆ ಎಂದು ಯಾವ ರೀತಿಯಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆನ್ನುವ ವಿಚಾರದಲ್ಲಿ ನೀವು ಉಪಕುಲಪತಿಗಳು ಮತ್ತು ಎಲ್ಲ ಅಧಿಕಾರಿಗಳನ್ನು ಕರೆಸಿ ಚಿಂತನೆಯನ್ನು ಮಾಡಿ ಈ ಕೆಲಸವನ್ನು ಮಾಡಿದ್ದೀರಿ. ಭಯೋತ್ಪಾದನೆ ಬಗ್ಗೆ ಸರ್ಕಾರಿ ಆದೇಶದಲ್ಲಿ ಪ್ರಸ್ತಾವನೆ ಮಾಡಿದ್ದೀರಿ. ಬಹುಶಃ ಈ ಆರ್ಡರ್ ಅನ್ನು ನೋಡಿ ಎಲ್ಲರೂ ಏನೆಂದುಕೊಂಡರೆಂದರೆ, ಈ ಆದೇಶದಲ್ಲಿ ಏನೋ ಒಂದು ಇದೆ, ಸರ್ಕಾರ ಬಹಳ ಕಾಳಜಿಯನ್ನು ವಹಿಸುತ್ತಿದೆ ಎನ್ನುವ ರೀತಿಯಲ್ಲಿ ತಿಳಿದುಕೊಂಡಿದ್ದಾರೆ. ಆದರೆ, ನೀವು ಇಲ್ಲಿ ಯಾವ ಕೆಲಸವನ್ನು ಮಾಡಿದ್ದೀರಿ ಎಂದರೆ, ನಿಮ್ಮ advertisement ಪ್ರತಿ ನಿತ್ಯ ಪತ್ರಿಕೆಯಲ್ಲಿ ಬರುತ್ತಿದೆ. ಅದರಲ್ಲಿ ನೀವು ಯಾವ photo ಹಾಕಿಸಿದ್ದೀರೆಂದರೆ ಒಂದು ಕಡೆ ಸ್ವಾಮಿ ವಿವೇಕಾನಂದರವರ photo ಹಾಕಿದ್ದೀರಿ, ಇನ್ನೊಂದು ಕಡೆಗೆ ಮುಖ್ಯಮಂತ್ರಿಗಳ Photo ಅನ್ನು ಹಾಕಿದ್ದೀರಿ. 'ಭಯೋತ್ಪಾದನೆ ಅಳಿಸಿ, ದೇಶ ಉಳಿಸಿ, ವಿದ್ಯಾರ್ಥಿ ಜಾಗೃತಿ ಅಭಿಯಾನ' ಎಂದು title ಇದೆ. ಇದರಲ್ಲಿ 'ಜನವರಿ 12, ಸ್ವಾಮಿ ವಿವೇಕಾನಂದರ ಜಯಂತಿಯಿಂದ ಫೆಬ್ರವರಿ 28, 2009ರ ವರೆಗೆ ರಾಜ್ಯಾದ್ಯಂತ ಎಲ್ಲಾ ಕಾಲೇಜುಗಳಲ್ಲಿ ಸಂಕಲ್ಪ, ತಾಲ್ಲೂಕುಗಳಲ್ಲಿ ಜಾಥಾ ಹಾಗೂ

ಜಿಲ್ಲಾ ಸಮಾವೇಶಗಳು ನಡೆಯಲಿವೆ.' ಇದಕ್ಕೆ invite ಮಾಡಿರತಕ್ಕಂಥವರು ಯಾರೆಂದರೆ Deputy commissioner, Police Commissioner, Superintendent of Police, Vice Chancellors, ಈ ರೀತಿ ನೀವು ಏನು involve ಮಾಡಿ ಮಾಡುತ್ತಿದ್ದೀರಿ, ನಿಮಗೆ ಅಧಿಕಾರವನ್ನು ಕೊಟ್ಟವರು ಯಾರು? ವಿವೇಕಾನಂದರ ಹೆಸರನ್ನು ಬಳಕೆ ಮಾಡುವುದಕ್ಕೆ ನಿಮಗೆ ಅಧಿಕಾರವನ್ನು ಕೊಟ್ಟವರು ಯಾರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ಭಯೋತ್ಪಾದನೆ ಬಗ್ಗೆ awareness ತರುವಂಥ ಕೆಲಸವನ್ನು ಮಾಡಿ

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಅಧಿಕಾರ ಕೊಟ್ಟವರು ಯಾರು ಎಂದು ಕೇಳಿದರು. ಅಧಿಕಾರ ಕೊಟ್ಟವರು ರಾಜೀವಗಾಂಧಿಯವರು. ಜನವರಿ 12, 1985ರಲ್ಲಿ ವಿವೇಕಾನಂದರ ಬಗ್ಗೆ ಅಧಿಕಾರವನ್ನು ಕೊಟ್ಟವರು ರಾಜೀವ ಗಾಂಧಿಯವರು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ನೀವು ಮಾಡುತ್ತಿರುವುದು ಏನು? What are you doing?

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ನೀವು ಭಯೋತ್ಪಾದನೆಯನ್ನು ಬೆಂಬಲಿಸಿದರೆ ನಮ್ಮದೇನೂ ಅಭ್ಯಂತರವಿಲ್ಲ. ನಿಮಗೆ ನೆನಪಿಸುತ್ತಿದ್ದೇನೆ ಅಷ್ಟೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ನಾವು ಬೆಂಬಲಿಸುತ್ತಿದ್ದೇವೆಯೋ, ವಿರೋಧ ಮಾಡುತ್ತಿದ್ದೇವೆಯೋ ಅದನ್ನು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಲಿಂಬಾವಳಿಯವರೆ, ಆ ಮಾತನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: 1985 ಜನವರಿ 12ರಂದು 'ರಾಷ್ಟ್ರೀಯ ಯುವದಿನ' ಎಂದು ಘೋಷಣೆ ಮಾಡಿದವರು ಸನ್ಮಾನ್ಯ ರಾಜೀವ ಗಾಂಧಿಯವರು. ಹಾಗಾಗಿ ರಾಷ್ಟ್ರೀಯ ಯುವದಿನ ಸ್ವಾಮಿ ವಿವೇಕಾನಂದರ ಬಗ್ಗೆ ಯುವಕರು, ವಿದ್ಯಾರ್ಥಿಗಳು ಕಾರ್ಯಕ್ರಮ ಮಾಡಬಾರದೆಂದು ನೀವು ಹೇಳುವುದಾದರೆ, ಹಾಗಿದ್ದರೆ ಒಂದು ಸರ್ಕಾರವಾಗಿ ಒಬ್ಬ ಯುವ ಮಂತ್ರಿಯಾಗಿ ಅದನ್ನು

ಮಾಡಬಾರದೆಂದು ನನಗೆ ನೀವು advice ಮಾಡುವುದಾದರೆ ಹಾಗಾದರೆ ನೀವು ಭಯೋತ್ಪಾದಕರನ್ನು ಬೆಂಬಲಿಸುತ್ತೀರೆಂದು ಹೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಮಂತ್ರಿಗಳಾದ ತಾವು ಬಹಳ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿದ್ದೀರಿ. ಮಾತನಾಡಬೇಕಾದಾಗ ಬಹಳ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ವಿವೇಕಾನಂದರ ಹುಟ್ಟುಹಬ್ಬವನ್ನು youth day ಎಂದು ಕರೆದಂಥವರು ರಾಜೀವ ಗಾಂಧಿಯವರು. ಆದರೆ ಅವರು ಯುವಕರಿಗೆ ಯಾವ ರೀತಿಯಾದಂಥ ಸ್ಫೂರ್ತಿಯನ್ನು ತುಂಬುತ್ತಿದ್ದರು ಎನ್ನುವಂಥದ್ದನ್ನು ಬಹುಶಃ ಅವರ preaching's ಅನ್ನು, teachings ಅನ್ನು ನಾನು ಕೂಡ ಓದಿದ್ದೇನೆ. ಓದಿದವರಿಗೆ ಅರ್ಥವಾಗುತ್ತದೆ. ಬಹುಶಃ ನೀವು ಓದಲಿಲ್ಲವೆಂದು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ವಿವೇಕಾನಂದರು ಯುವಕರನ್ನು ಎದ್ದೇಳಿ ಎಂದು ಹೇಳಿದರು.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಓದಿಲ್ಲ ಎಂದು ಹೇಳಿದಿರಿ.

ಶ್ರೀ ಟಿ.ಬಿ.ಜಯಚಂದ್ರ: ಆ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ.

ಶ್ರೀ ಅರವಿಂದ ಲಿಂಬಾವಳಿ: ತಾವು ಆ ತೀರ್ಮಾನಕ್ಕೆ ಬರುವುದಾದರೆ ನಾನೂ ಸಹ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಸ್ವಾಮಿ ವಿವೇಕಾನಂದರು ಒಂದು ಮಾತು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ, ನಿನ್ನನ್ನು ನೀನು ಸುಧಾರಿಸಿಕೊಂಡರೆ ಒಬ್ಬ ಘಟಿಂಗ ಕಡಿಮೆ ಆಗುತ್ತಾನೆಂದು ಹೇಳಿದರು. ನಿನ್ನನ್ನು ನೀನು ಸುಧಾರಿಸಿಕೊಂಡರೆ ಒಬ್ಬ ಉಗ್ರಗಾಮಿ ಕಡಿಮೆಯಾಗುತ್ತಾನೆಂದು ಅರ್ಥ. ಇಲ್ಲಿ ಇರುವ ನಾವು ಸುಧಾರಿಸಿಕೊಂಡರೆ ಸದನ ಸರಿಯಾಗಿ ನಡೆಯುತ್ತದೆ. ಚೆನ್ನಾಗಿ ಮಾತನಾಡಬೇಕು ಎಂದು ಹೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಯುವಕರಿಗೆ ಸ್ಫೂರ್ತಿಯನ್ನು ತುಂಬುವುದಕ್ಕೋಸ್ಕರ ನಾವೆಲ್ಲರೂ ಕೂಡ youth day ಎಂದು ಆಚರಿಸುವ ಮುಖೇನ ಅವರ ಸ್ಫೂರ್ತಿಯನ್ನು ನಾವು ತುಂಬಬೇಕು, ಮೈಗೂಡಿಸಿಕೊಳ್ಳಬೇಕು ಆ ರೀತಿಯಾಗಿ ಮುನ್ನಡೆಯಬೇಕೆಂದು ಹೇಳಿದರು. ದೇಶಾಭಿಯಾನ, ದೇಶಾಭಿಮಾನದ ಜೊತೆಗೆ ದೇಶದ ಪ್ರಗತಿ, ಈ ದೇಶದಲ್ಲಿರತಕ್ಕಂಥ ವ್ಯತ್ಯಾಸಗಳ ಬಗ್ಗೆ, ಅಂಕುಡೊಂಕುಗಳ ಬಗ್ಗೆ ಇವತ್ತು ಜನರನ್ನು ಎಚ್ಚರಿಸುವ ಕೆಲಸವನ್ನು youth day ಎಂದು ಮಾಡುತ್ತಿದ್ದರು. ಆದರೆ, ನೀವು ಏನು ಮಾಡುತ್ತಿದ್ದೀರಿ? ನೀವು ಬಹಳ ಬುದ್ಧಿವಂತರಿದ್ದೀರಿ. ನಾನು ನೀವು ಬುದ್ಧಿವಂತರು ಇಲ್ಲ ಎಂದು ಹೇಳುತ್ತಿಲ್ಲ. ನೀವು ಯಾವ ರೀತಿಯಾಗಿ

ಕೇಸರೀಕರಣ ಮಾಡುವುದಕ್ಕೆ ಹೊರಟಿದ್ದೀರೆಂದರೆ, (ಗೊಂದಲ) ಸ್ವಲ್ಪ ಕೇಳಿ, ನಾನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಉಪಾಧ್ಯಕ್ಷರೆ ಮಾನ್ಯ ಸಚಿವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಪದೇ ಪದೇ ಎದ್ದು disturb ಮಾಡುವುದು ಸರಿಯಲ್ಲ. (ಗೊಂದಲ) ಸ್ವಲ್ಪ ಸಹನೆಯಿಂದ ಕೇಳುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಹಾಗಾದರೆ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು article ಬಂದಿದೆ. ನೆಹರು ಜಯಂತಿ ಆಚರಣೆ ಮಾಡುತ್ತಾರೆ. ಮಕ್ಕಳ ದಿನಾಚರಣೆ ಎಂದು heading ಯಾರದ್ದು ಇದೆ? ಒಂದೊಮ್ಮೆ ಮಕ್ಕಳ ದಿನಾಚರಣೆ ಕಾಂಗ್ರೆಸ್ಸೀಕರಣ ಎಂದರೆ ಏನಂತೀರಿ? ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆಗೆ rights ಯಾರು ಕೊಟ್ಟರು ಎಂದು ಕೇಳುತ್ತಾರೆ. ಇದಕ್ಕೆ ಉತ್ತರ ಅದನ್ನು ಅವರು ಓದಿ ನೋಡಲಿ. ಅದಕ್ಕೆ ಯಾರಾದರೂ ವಿರೋಧ ಮಾಡಿದ್ದಾರೆಯೇ? ನಮ್ಮ ರಾಜ್ಯದಲ್ಲಿ ನೆಹರು ಯುವ ಕೇಂದ್ರದಲ್ಲಿ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಒಂದು ಕಾರ್ಯಕ್ರಮ ಮಾಡಿದರು. ಅದು ಯಾರಿಗಾದರೂ ಗೊತ್ತಾಯಿತೇ? ಅದರ ಅಧ್ಯಕ್ಷರು ಯಾರು? Vice Chairman ಯಾರು? ಇವರ ಮೀನಾಕ್ಷಿ ನಟರಾಜನ್ ಅವರು ಯಾರು ಎಂದು ಮಾನ್ಯ ಡಿ.ಕೆ. ಶಿವಕುಮಾರ್‌ರವರಿಗೆ ಚೆನ್ನಾಗಿ ಗೊತ್ತಿದೆ. ಅವರು ಇವತ್ತು ರಾಜ್ಯಾದ್ಯಂತ ಇರತಕ್ಕಂಥವರನ್ನು, ಕಾಂಗ್ರೆಸ್‌ನ ಕಾರ್ಯಕರ್ತರನ್ನು ಕರೆದುಕೊಂಡು ದೆಹಲಿಯಲ್ಲಿ ಸಮಾವೇಶ ಮಾಡುತ್ತಾರೆ, ನಮ್ಮದೇನೂ ವಿರೋಧವಿಲ್ಲ, ಭಯೋತ್ಪಾದನೆ ವಿರುದ್ಧ ಎಲ್ಲರೂ ಹೋರಾಟ ಮಾಡಿ. ನಾವು ಇವರನ್ನು ಕರೆದಿದ್ದೇವೆ. ಕರೆದಿರುವ ಕಡೆಗೆ ಇವರು ಬಂದಿಲ್ಲ. ಅಂದರೆ ಇವರು ಯಾರಿಗೆ supporters? ಅದರ ಬಗ್ಗೆ ಏನು ಹೇಳುತ್ತಾರೆ? ಅವರು ಅಧ್ಯಕ್ಷರು. ಮಧ್ಯಪ್ರದೇಶದ ಯುವ ಕಾಂಗ್ರೆಸ್‌ನ ಅಧ್ಯಕ್ಷರು, NSUI ನ ಹಿಂದಿನ ರಾಷ್ಟ್ರೀಯ ಅಧ್ಯಕ್ಷರು, ಇವರು ದಿನೇಶ್ ಗುಂಡೂರಾವ್‌ರವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಹಾಗಿದ್ದರೆ, ಅಂಥ ವಿಚಾರಗಳನ್ನು ಮಾಡುವುದರ ಬಗ್ಗೆ ನಾವೇನಾದರೂ ವಿರೋಧ ಮಾಡಿದ್ದೇವೆಯೇ? ಇವರ ವಿರೋಧ ಏಕೆ ಎಂದು ಗೊತ್ತಾಗುತ್ತಿಲ್ಲ. ಅದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ನೀವು ವಿದ್ಯಾರ್ಥಿಗಳಿಗೆ ಜಾಗೃತಿ ಮಾಡಿ. ನಾವ್ಯಾರೂ ನೀವು ಮಾಡುವಂಥ ಕೆಲಸಕ್ಕೆ ಒಳ್ಳೆಯ ಕೆಲಸ ಮಾಡುವುದಕ್ಕೆ ಖಂಡಿತ ನಾವು ಬೆಂಬಲ ಕೊಡುತ್ತೇವೆ. ತಾವು ಏನು ಮಾಡಿದ್ದೀರಿ? ಸ್ವಾಮಿ ವಿವೇಕಾಂದರ

ಮಾತನ್ನು ತೆಗೆದುಕೊಳ್ಳೋಣ. Be bold hearted when you are defeated, be large hearted when you are victorious. ತಮಗೆ ಅಧಿಕಾರ ಸಿಕ್ಕಿದೆ. ತಮಗೆ ಅವಕಾಶ ಸಿಕ್ಕಿದೆ, ಸಿಕ್ಕಿದಾಗ ಇಂಥ ಒಂದು ದೊಡ್ಡ ಕೆಲಸದಲ್ಲಿ ಒಳ್ಳೆಯ ಕೆಲಸ ಮಾಡಬೇಕು. ನಾವು ಮೊನ್ನೆ ತಾನೆ ಬಾಂಬೆ ವಿಚಾರ ಆದಾಗ ನಾವು ನಮ್ಮ Leaders ಅನ್ನೇ ಬಲಿ ತೆಗೆದುಕೊಂಡೆವು. ಒಂದು responsibility ಗೋಸ್ಕರ ನಮ್ಮ ನಾಯಕರು resignation ಕೊಟ್ಟರು. ಅಂಥ ಒಂದು ಪಕ್ಷದ ಸದಸ್ಯರಾಗಿ ನಾವಿದ್ದೇವೆ. ಈಗ ತಮಗೆ ಒಳ್ಳೆಯದಾಗಲಿ ಎಂದು Prime Minister ರವರು ಹೇಳಿದರು. ನಿಜ, ನೀವು ಇದರ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಹೇಳಿದ್ದಾರೆಂದು Chief Minister ರವರು ಹೇಳುತ್ತಾರೆ. ಬಹಳ ಸಂತೋಷ. ನೀವು ಅದರಲ್ಲಿ ABVP ಯನ್ನಾದರೂ ಹಾಕಿಕೊಳ್ಳಿ, NSUI ಯವರನ್ನೂ ಹಾಕಿಕೊಳ್ಳಿ, Students Federations ರವರನ್ನಾದರೂ ಹಾಕಿಕೊಳ್ಳಿ, ಜನತಾದಳದವರನ್ನು ಹಾಕಿಕೊಳ್ಳಿ, ಎಲ್ಲಾ ಪಾರ್ಟಿಯವರನ್ನು ಇಟ್ಟುಕೊಂಡು ಮಾಡಿ ಸ್ವಾಮಿ. ನೀವು ಯಾರೂ ಬೇಡ ಎಂದು ಹೇಳುತ್ತೀರಿ. ಬಹಳ ಜನ education institutions ಅನ್ನು ನಡೆಸುತ್ತಾರೆ. ನಾನೂ ಸಹ education institutions ಅನ್ನು ನಡೆಸುತ್ತಿದ್ದೇನೆ. ಬಹಳ ಜನ ಇದ್ದಾರೆ. Vice chancellors ಗೆ ನೀವು directions ಕೊಡುತ್ತೀರಿ. ಆ Vice Chancellors ಗೆ ಏನೆಂದು directions ಕೊಡುತ್ತೀರೆಂದರೆ, ಯಾರಾದರೂ ಬರಲಿಲ್ಲವೆಂದರೆ ಅವರಿಗೆ Show cause notice issue ಮಾಡುತ್ತೀರಿ. ನಿಮ್ಮ Director ರವರಿಂದ ಲೆಟರ್ ಹೋಗುತ್ತದೆ, ಅದಕ್ಕೆ ಮೊದಲು ABVP ಗೆ ಹೋಗುತ್ತದೆ, ಆಮೇಲೆ Vice Chancellors ಗೆ ಹೋಗುತ್ತದೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ನಿಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ನೀವು ಅನಗತ್ಯವಾಗಿ ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ.

ಶ್ರೀ ಡಿ.ಕೆ. ಶಿವಕುಮಾರ್: ನಾನು ತಪ್ಪು ದಾರಿಗೆ ಎಳೆಯುತ್ತಿದ್ದೇನೆಯೇ?

ಶ್ರೀ ಅರವಿಂದ ಲಿಂಬಾವಳಿ: ಹಾಗಾದರೆ ಎಲ್ಲಿದೆ ತೋರಿಸಿ. ಯಾರಿಗೆ ನೋಟಿಸ್ ಕೊಟ್ಟಿದ್ದೇವೆ ತೋರಿಸಿ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಒಂದು ಹೇಳುತ್ತೇನೆ. Yes, a letter has gone to the. . . . . . . if your department has not....

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ: ಒಂದ್ನಿಮಿಷ ಹೇಳುತ್ತೇನೆ. ಒಂದು University ಯಲ್ಲಿ mischief ಮಾಡಿದ್ದಾರೆ. ಅದು ನನಗೆ ಗೊತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್: ನನಗೆ ಗೊತ್ತಿಲ್ಲ ಅದು.

ಶ್ರೀ ಅರವಿಂದ ಲಿಂಬಾವಳಿ: ಯಾವ ಅಧಿಕಾರಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಯಾರ ಡೈರೆಕ್ಷನ್ ಮೇಲೆ ಮಾಡಿದ್ದಾರೆ ಎನ್ನುವುದು ಗೊತ್ತಿದೆ.

(ಗೊಂದಲ)

6-00 PM

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಯಾರು ಮಾಡಿದ್ದಾರೆಂದು ಹೇಳಿ, ಅದನ್ನು ಬಹಿರಂಗಪಡಿಸಿ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಮುಖ್ಯಮಂತ್ರಿಗಳೆ, ಒಳ್ಳೆಯ ಕೆಲಸ ಮಾಡಿದರೆ ಖಂಡಿತವಾಗಿಯೂ ನಿಮಗೆ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಒಳ್ಳೆಯ ಕೆಲಸವಾಗಬೇಕು. ಬೇಕಾದಷ್ಟು ಜನ students leadership ನಲ್ಲಿ ಬಂದಿದ್ದಾರೆ. ನೀವು mark ಮಾಡುವ ಸಂದರ್ಭದಲ್ಲಿ ಮಾಡಿ. ರಾಜಕಾರಣ ಮಾಡಬಾರದೆಂದೇನೂ ಇಲ್ಲ. ರಾಜಕಾರಣ ಮಾಡಬೇಕು. ಆದರೆ, Vice Chancellors ಅನ್ನು Police Commissioners ಅನ್ನು ಬಳಸಿಕೊಳ್ಳುವುದೆಂದರೆ What is the necessity? ನಾವು ಆ students ಗಳಿಗೆ ಬಂದೂಕು ಕೊಡುತ್ತಿದ್ದೇವೆಯೇ? ಆ ವಿದ್ಯಾರ್ಥಿಗಳಲ್ಲಿ ಭಯೋತ್ಪಾದಕರು ಇದ್ದಾರೆಯೇ? ಮೊದಲು ABVP ಗೆ mark ಮಾಡುತ್ತೀರಿ, ಆಮೇಲೆ Vice Chancellors ಗೆ mark ಮಾಡುತ್ತೀರಿ, ನೀವು mischief ಎಂದು ಹೇಳುತ್ತಿದ್ದೀರಲ್ಲ, if I show that ತಾವು resignation submit ಮಾಡುತ್ತೀರಾ? ಇಲ್ಲದಿದ್ದರೆ ನಾನು ಮಾಡುತ್ತೇನೆ. ನೀವು ಒಪ್ಪಿಕೊಳ್ಳುತ್ತೀರಾ? ನಿಮ್ಮ department ನವರು letter ನ first copy ಅನ್ನು ABVP ಗೆ next copy ಅನ್ನು Vice Chancellor ಗೆ ಕಳುಹಿಸಿದ್ದರೆ ಈ challenge ಅನ್ನು ನೀವು ಮುಖ್ಯಮಂತ್ರಿಗಳ ಎದುರುಗಡೆ ಒಪ್ಪಿಕೊಳ್ಳುತ್ತೀರಾ? ಅಗತ್ಯವಿಲ್ಲ ಸ್ವಾಮಿ.

ಶ್ರೀ ಅರವಿಂದ ಲಿಂಬಾವಳಿ:- ಅನಗತ್ಯವಾಗಿ ಮಾತನಾಡಬೇಡಿ. ಇದು ಸರ್ಕಾರ. ಸರ್ಕಾರವನ್ನು ಹೇಗೆ ನಡೆಸಬೇಕೆಂದು ಅಧಿಕಾರಿಗಳು ನಮಗೂ ಹೇಳಿಕೊಟ್ಟಿದ್ದಾರೆ, ನಿಮಗೂ ಹೇಳಿಕೊಟ್ಟಿದ್ದಾರೆ. ತಾವು ಪತ್ರಿಕೆಗಳನ್ನು ಓದುತ್ತೀರೆಂದು ಭಾವಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಮುಖ್ಯಮಂತ್ರಿಗಳೆ, ತಾವು ತಮ್ಮ ಪಕ್ಷಕ್ಕೆ ಒಳ್ಳೆಯ ಕೆಲಸ ಮಾಡುತ್ತಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಯಾರೋ ಒಬ್ಬ ಮೇಸ್ಟ್ರು ಹೋಗುವುದಿಲ್ಲ, Principal ಹೋಗುವುದಿಲ್ಲ. ಅವರಿಗೆ ನೀವು Show cause notice issue ಮಾಡಿದ್ದೀರಿ. ತಮಗೆ ಈ ಮೂಲಕ ತಿಳಿಸುವುದೇನೆಂದರೆ ಇಂಥ ಭಯೋತ್ಪದನೆ ಅಳಿಸಿ, ದೇಶ ಉಳಿಸಿ, ವಿದ್ಯಾರ್ಥಿ ಅಭಿಯಾನದ ಸಭೆಗೆ ಗೈರುಹಾಜರಾಗಿದ್ದೀರಿ, ಈ ಗೈರು ಹಾಜರಿ ಕಾರಣ ನಿಮ್ಮ ಮೇಲೆ ಏಕೆ ಶಿಸ್ತು ಕ್ರಮ ತೆಗೆದುಕೊಳ್ಳಬಾರದು ಎಂಬ ಬಗ್ಗೆ ಸೂಕ್ತ ಸಮಾಜಾಯಿಷಿಯನ್ನು ತಕ್ಷಣ ಮಾನ್ಯ ಕಾಲೇಜು ಶಿಕ್ಷಣ ಆಯುಕ್ತರವರಿಗೆ ಖುದ್ದಾಗಿ ತಪ್ಪದೆ ಸಲ್ಲಿಸಬೇಕು" ಎಂದು ಇದೆ. Why is this compulsory? How can you do it? what is this in democracy? ಏನಿದು? ಏಕೆ? ನೀವು ಮಾಡಿ. ಈ ಹಿನ್ನೆಲೆಯಲ್ಲಿ ತಾವು ಕೊಟ್ಟಂಥ ಆದೇಶ ಯಾವ ರೀತಿ ಬಳಕೆಯಾಗುತ್ತಿದೆ? I am telling you, institutions ಗೆ ಒಂದು ಪಾವಿತ್ರ್ಯತೆ ಇದೆ. ನಾವೂ ಇಂಥ ಕಾಲೇಜುಗಳಲ್ಲಿ Secretary ಯಾಗಿ ಮತ್ತೊಂದಾಗಿ ಕೆಲಸ ಮಾಡಿದ್ದೆವು. ನನಗೆ Assembly ಗೆ ticket ಸಿಕ್ಕಿದಾಗ ನಾನು final year degree student ಆಗಿದ್ದೆ. ನಿಮ್ಮ ಪಾರ್ಟಿಯನ್ನು build ಮಾಡಿ, ಬೇಡ ಎಂದು ಹೇಳುವುದಿಲ್ಲ. ಆದರೆ, ಈ compus ಅನ್ನು, institution ಅನ್ನು, vice Chancellor ಅನ್ನು, injustice should not flow from the seat of justice. ಯಾರು Justice ಗಳಿರುತ್ತಾರೆ, ಅಲ್ಲಿ Vice chancellors ಇರುತ್ತಾರೆ. ಲಕ್ಷಾಂತರ ಮಂದಿಯ ಭವಿಷ್ಯವನ್ನು ಏಕೆ ರಾಜಕಾರಣಕ್ಕೆ ಬಳಸಿಕೊಳ್ಳಬೇಕು? ಖಾದಿ ಬಟ್ಟೆ ಹಾಕಿಕೊಂಡು ಬೆಳಗ್ಗೆಯಿಂದ ಸಾಯಂಕಾಲದವರೆಗೆ ನಾವಿದ್ದೇವಲ್ಲ. ಪಾಪ, ಆ institutions Vice Chancellors ಅನ್ನು, ಬೆಳಗ್ಗೆಯಿಂದ ಸಾಯಂಕಾಲದವರೆಗೆ ಆ ಮೇಸ್ಟ್ರುಗಳನ್ನು, ಆ ಹೆಣ್ಣುಮಕ್ಕಳನ್ನು ಏಕೆ ಇಂಥ ಜಾಗೃತಿ ಅಭಿಯಾನಕ್ಕೆ ಬಳಸಿಕೊಳ್ಳುತ್ತೀರಿ? ನಿಮ್ಮ ಪಕ್ಷವನ್ನು ಬೆಳೆಸಿಕೊಳ್ಳಿ. ನಾವು ಬೇಡವೆಂದು ಹೇಳುವುದಿಲ್ಲ. We are there to support you. ನೀವು ಇಂಥದ್ದನ್ನು ಮಾಡಿ, ಎಲ್ಲರನ್ನೂ ಕರೆದುಕೊಳ್ಳಿ. Syllabus ಮಾಡುತ್ತಿದ್ದೀರಾ? You do your syllabus? You do it. You encourage them. ಇದಕ್ಕೆ ಯಡಿಯೂರಪ್ಪನವರ ಭಾಷಣ ಏಕೆ ಬೇಕು? ಕಾಗೇರಿಯವರ ಭಾಷಣ ಏಕೆ ಬೇಕು? ABVP ಭಾಷಣ ಏಕೆ ಬೇಕು? ಭಜರಂಗದಳದ ಭಾಷಣ ಏಕೆ ಬೇಕು? ಎಲ್ಲಾ ಪಾರ್ಟಿಯವರನ್ನು ಕರೆದುಕೊಳ್ಳಬೇಕಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿ): ನಾನು ಕೊನೆಯಲ್ಲಿ ಮಾತನಾಡಬೇಕೆಂದಿದ್ದೆ.

ಶ್ರೀ ಡಿ.ಕೆ. ಶಿವಕುಮಾರ್: I am telling you, ನೀವು ಒಳ್ಳೆಯದು ಮಾಡಿದಾಗ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, institutions, Government, Police Commissioner, ಪೊಲೀಸ್ ಅಧಿಕಾರಿಗಳು . . .

ಶ್ರೀ ಬಿ.ಎಸ್. ಯಡಿಯೂರಪ್ಪ: ರಾತ್ರಿ 10 ಗಂಟೆಯವರೆಗೂ ನಾನು ನಿಮ್ಮ ಭಾಷಣ ಕೇಳುವುದಕ್ಕೆ ರೆಡಿ ಇದ್ದೇನೆ. ಆ ಕಡೆ ಕುಳಿತಿರುವ ಗೌರವಾನ್ವಿತ ಸದಸ್ಯರ ಗಮನಕ್ಕೆ ಎರಡು ವಿಷಯಗಳನ್ನು ತರಲಿಕ್ಕೆ ಬಯಸುತ್ತೇನೆ. ನನಗೆ ನೆನಪು ಇರುವ ಹಾಗೆ, ಈ ದೇಶದ ಪ್ರಧಾನಿಯವರು ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಮುಂಬೈ ಘಟನೆ ಆದಮೇಲೆ ಆಯಾ ರಾಜ್ಯಗಳು ಯಾವ ರೀತಿ ಈ ಭಯೋತ್ಪಾದನೆಯನ್ನು ಹತ್ತಿಕ್ಕುವುದಕ್ಕೆ ಏನೇನು ಮಾಡಬೇಕು ಎಂದು ಅನೇಕ ಸಲಹೆಗಳನ್ನು ಮೊದಲನೇ ಬಾರಿಗೆ ಕೊಟ್ಟರು. ಒಬ್ಬ ಗೃಹ ಸಚಿವರನ್ನು ನೀವು ಬಲಿ ಕೊಟ್ಟಿರಿ. Invitation ಅನ್ನು ನಾನು ಮಾಧ್ಯಮದ ಸ್ನೇಹಿತರಿಗೆ, ನಿಮಗೆ ಕಳುಹಿಸಿಕೊಡುತ್ತೇನೆ. ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಹ ನಮ್ಮೆಲ್ಲ ಆಯಾ ಕ್ಷೇತ್ರದ ಮುಖಂಡರನ್ನು ಮಲ್ಲಿಕಾರ್ಜುನ ಖರ್ಗೆಯವರು ಸೇರಿದಂತೆ ನಾವು ಎಲ್ಲರನ್ನೂ ಕರೆದಿದ್ದೇವೆ. ಶಿವಮೊಗ್ಗದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಮಂಗಳೂರಿನಲ್ಲಿ ರವಿಶಂಕರ್ ಗುರೂಜಿಯವರು ಭಾಗವಹಿಸಿದ್ದರು, ಹುಬ್ಬಳ್ಳಿಯಲ್ಲಿ ಗುರುಸಿದ್ಧರಾಜಯೋಗೀಂದ್ರ ಸ್ವಾಮಿಗಳು ಭಾಗವಹಿಸಿದ್ದರು. ಕಾಂಗ್ರೆಸ್ ಮುಖಂಡರಾದ, ವಿರೋಧ ಪಕ್ಷದ ಶಾಸಕರಾದ ನರೇಂದ್ರ ಬಾಬುರವರು ಭಾಗವಹಿಸಿದ್ದರು. ಶ್ರೀನಿವಾಸ ಪ್ರಸಾದ್ ರವರು ಮೈಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಧ್ರುವನಾರಾಯಣ್‌ರವರು ಭಾಗವಹಿಸಿದ್ದರು. ಯು.ಟಿ. ಖಾದರ್‌ರವರು ಮಂಗಳೂರಿನಲ್ಲಿ ಭಾಗವಹಿಸಿದ್ದರು. ಭದ್ರಾವತಿಯಲ್ಲಿ ಸಂಗಮೇಶ್‌ರವರು ಭಾಗವಹಿಸಿದ್ದರು. ಸೈಯದ್ ಷಾ ಹುಸೇನ್, ಅಧ್ಯಕ್ಷರು, ಖ್ವಾಜಾ ಬಂದೇ ನವಾಜ್ ಶಿಕ್ಷಣ ಸಂಸ್ಥೆ, ಗುಲಬರ್ಗಾ ಇವರು ಭಾಗವಹಿಸಿದ್ದರು. ರೆಡೆನಲ್ ಪಾಲ್ ರವರು ಹುಬ್ಬಳ್ಳಿಯಲ್ಲಿ ಭಾಗವಹಿಸಿದ್ದರು. ಪತ್ರಕರ್ತರಾದ ವಿಶ್ವೇಶ್ವರ ಭಟ್‌ರವರು, ಹುಣಸವಾಡಿ ರಾಜಣ್ಣನವರು, ಸೀತಾರಾಂ ರವರು ರಂಗನಾಥ್‌ರವರು ಭಾಗವಹಿಸಿದ್ದರು. ಇದು ಸರ್ಕಾರದ ಕಾರ್ಯಕ್ರಮ. ನಾನು ಸೂಚನೆ ಕೊಟ್ಟಿದ್ದೇನೆ. ಎಲ್ಲಾ ಸರ್ಕಾರಿ Vice Chancellors ರಿಂದ ಹಿಡಿದು Principal ರಿಂದ ಹಿಡಿದು ಇದರಲ್ಲಿ ಭಾಗವಹಿಸಿದರೆ ತಪ್ಪೇನೂ ಇಲ್ಲ. ನನಗೇನು ದುಃಖವೆಂದರೆ, Prime Minister ರವರು ಹೇಳಿದಂಥ ಒಂದು ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಿಮ್ಮನ್ನು ಕರೆದು ಮಾಡುತ್ತಿದ್ದೇವೆ. ನಿಮ್ಮನ್ನು ಕರೆಯದೇ ನಾವು ಆ ಕೆಲಸ ಮಾಡಿಲ್ಲ, ಇದು ಸರ್ಕಾರದ ಕಾರ್ಯಕ್ರಮ. ನಾನು ಬಹಿರಂಗವಾಗಿ ಹೇಳುತ್ತಿದ್ದೇನೆ. ನೆಹರು ಯುವಕ

ಕೇಂದ್ರದಿಂದ ಇಂಥದ್ದೇ ಒಂದು ಕಾರ್ಯಕ್ರಮವಾಗಿದ್ದು, ಪ್ರತಿ ರಾಜ್ಯಕ್ಕೆ 2 ಕೋಟಿ ರೂಪಾಯಿಗಳನ್ನು ಕೊಟ್ಟು ಮಾಡುತ್ತಿದ್ದರು ನೆಹರು ಯುವ ಕೇಂದ್ರದ ಉಪಾಧ್ಯಕ್ಷ ಶ್ರೀ ಮೀನಾಕ್ಷಿ ನಟರಾಜನ್‌ರವರು ಈ ಕಾರ್ಯಕ್ರಮದ ಮುಖ್ಯಸ್ಥರು ಮತ್ತು ಮಧ್ಯ ಪ್ರದೇಶದ ಯುವ ಕಾಂಗ್ರೆಸ್ ಅಧ್ಯಕ್ಷರು. ಇತ್ತೀಚೆಗೆ ದೆಹಲಿಯಲ್ಲಿ ಭಯೋತ್ಪಾದನೆ ಮತ್ತು ಹಿಂಸಾಚಾರದ ವಿರುದ್ಧ ಏರ್ಪಡಿಸಿದ್ದ ಯುವ ಸಮಾವೇಶವನ್ನು ಕೇಂದ್ರ ಸಚಿವರಾದ ಎಂ.ಎಸ್.ಗಿಲ್‌ರವರು ಉದ್ಘಾಟನೆ ಮಾಡಿದರು. ಇಲ್ಲಿ ಎಲ್ಲಾ ಪ್ರತಿಪಕ್ಷದ ನಾಯಕರಿಂದ ಹಿಡಿದು ಆಯಾ ಪಕ್ಷದ ಮುಖಂಡರನ್ನು ಕರೆದಾಗ ಅಲ್ಲಿಗೆ ಬಂದು ನಿಮ್ಮ ವಿಚಾರಗಳನ್ನು ಮಂಡನೆ ಮಾಡಬೇಕಾಗಿತ್ತು. ಯುವಕರಲ್ಲಿ ಹೇಗೆ ದೇಶಭಕ್ತಿಯನ್ನು, ರಾಷ್ಟ್ರಭಕ್ತಿಯನ್ನು ಉಂಟು ಮಾಡಬೇಕು, ಭಯೋತ್ಪಾದನೆಯನ್ನು ಹತ್ತಿಕ್ಕುವುದು ಹೇಗೆ? ಭಯೋತ್ಪಾದನೆ ಇಂದು ಜಗತ್ತಿನಲ್ಲಿ ಒಂದು ಪಿಡುಗಾಗಿದೆ, ಇದನ್ನು ಹತ್ತಿಕ್ಕುವುದಕ್ಕೆ ಆದ್ಯತೆಯನ್ನು ಕೊಡಬೇಕೆಂದು ನೀವು ಮಾತನಾಡಿದ್ದರೆ ಆಗ ನಾವ್ಯಾರಾದರೂ ತಡೆದಿದ್ದರೆ ಅಥವಾ ಎಲ್ಲಿಯಾದರೂ ಈ ಸಮಾರಂಭ ನಡೆದಾಗ ನೀವು ಬರಬಾರದು ಎಂದು ಹೇಳಿದ್ದರೆ ಹೇಳಿ. ನೀವು ಎಲ್ಲಾ ಕಡೆ ಏನೇನು ಮಾಡಿದ್ದೀರಿ ಎನ್ನುವ ಬಗ್ಗೆ ನಾನು ಆಮೇಲೆ ಉತ್ತರ ಕೊಡುತ್ತೇನೆ. ಇಂಥ ಕಡೆ 25 ರಿಂದ 30 ಸಾವಿರಕ್ಕಿಂತ ಕಡಿಮೆ ಯುವಕರು ಸೇರಿರಲಿಲ್ಲ. ನೀವು ಯಾವಾಗ ಇದನ್ನು ವಿರೋಧ ಮಾಡಿದಿರಿ ಆಗ ಬರುವ ಯುವಕ ಯುವತಿಯರ ಸಂಖ್ಯೆ ಜಾಸ್ತಿಯಾಗುತ್ತಾ ಬಂತು. ಅಲ್ಲಿ ಎಲ್ಲಿಯಾದರೂ ಒಂದು ಕಡೆ ನಾವು ಆ ಸಮಾರಂಭದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಂಡಿದ್ದರೆ, ಕಾಂಗ್ರೆಸ್ ಅನ್ನು ಟೀಕೆ ಮಾಡಿದ್ದರೆ ಅಥವಾ ರಾಜಕೀಯ ಲಾಭ ಮಾಡಿಕೊಳ್ಳುವುದಕ್ಕೆ ಹೊರಟಿದ್ದರೆ, ವೋಟ್ ಕೇಳಿದ್ದರೆ ಈ ತರಹ ದುರುಪಯೋಗ ಮಾಡಿದ್ದೀರಿ ಯಡಿಯೂರಪ್ಪನವರೆ ಎಂದರೆ ನಾನು ತಲೆ ಬಾಗುತ್ತೇನೆ. ಪ್ರತಿಪಕ್ಷದ ನಾಯಕರನ್ನು ಕರೆದಿದ್ದೇವೆ. ನೀವು ಯಾವುದೋ ಒಂದು ಸಮೂಹಕ್ಕೆ ನೋವಾಗುತ್ತದೆ ಎನ್ನುವ ಕಾರಣವೋ ಅಥವಾ ನಿಮಗೆ ಬಿಡುವಿಲ್ಲದ ಕಾರಣವೋ ಗೊತ್ತಿಲ್ಲ. ರಾಜಕಾರಣದ ಚದುರಂಗದ ಆಟದಲ್ಲಿ ನಾವೂ ಇರಬೇಕಾಗುತ್ತದೆ, ನೀವೂ ಇರಬೇಕಾಗುತ್ತದೆ. ನಿಮಗೆ ಬಿಡುವಿಲ್ಲದೆ ನೀವೂ ಡೆಲ್ಲಿಯಲ್ಲಿ, ಎಲ್ಲೆಲ್ಲಿಯೋ ಇದ್ದು ಈ ಕಾರ್ಯಕ್ರಮಕ್ಕೆ ಬರದೆಯೇ ಈ ಯಶಸ್ಸನ್ನು ಕಂಡು ಬೊಬ್ಬೆ ಹೊಡೆದರೆ, ಶಿವಕುಮಾರ್‌ರವರೆ, ಇದು ಯಾವ ಧರ್ಮ? ಏನು ಧರ್ಮ?

ಶ್ರೀ ಡಿ.ಕೆ. ಶಿವಕುಮಾರ್: ನಮ್ಮದು main point ಏನೆಂದರೆ, ...

ಶ್ರೀ ಬಿ.ಎಸ್. ಯಡಿಯೂರಪ್ಪ: ಇದರಿಂದ ನಿಮಗೆ ಲಾಭವಾಗುತ್ತದೆಯೇ? ನಾನು ಹೇಳಬೇಕೇ? ಕೊನೆಯ ಪಕ್ಷ 8ನೇ ತಿಂಗಳು ಆದಮೇಲಾದರೂ ಈ ರೀತಿಯ

ಪ್ರಮುಖ ಸಂಗತಿಗಳ ಬಗ್ಗೆ ಈ ಮನೆಯಲ್ಲಿ ಸರಿ ತಪ್ಪುಗಳ ಬಗ್ಗೆ ಚರ್ಚೆಯಾಗಬೇಕು. ಈ ವಿಷಯದಲ್ಲಿ ನಾವು ಏನೇನು ಸೂಚನೆಗಳನ್ನು ಕಳುಹಿಸಿದ್ದೇವೆ, ಆ ಸೂಚನಾ ಪತ್ರವನ್ನು ಶಿವಕುಮಾರ್‌ರವರೆ ನಾನು ನಿಮಗೆ ಕಳುಹಿಸಿಕೊಡುತ್ತೇನೆ. 15 ವರ್ಷಗಳ ಹಿಂದೆ ಪ್ರಧಾನಿಯಾಗಿದ್ದ ರಾಜೀವ ಗಾಂಧಿಯವರ ಹತ್ಯೆಯ ಭಯೋತ್ಪಾದಕರು ಬೆಂಗಳೂರಿನ ಕೋಣನಕುಂಟೆಯ ಮನೆಯೊಂದರಲ್ಲಿ ಅಡಗಿಕೊಂಡಿದ್ದರು. ಈ ಬಗ್ಗೆ ಹಾಲು ಮಾರುವ ಅನಕ್ಷರಸ್ಥ ಮಹಿಳೆಯೊಬ್ಬರು ನೀಡಿದ ಮಾಹಿತಿ ಕಾರಣದಿಂದ ಹಂತಕರು ಸಿಕ್ಕಿಕೊಳ್ಳುವ ಹಾಗಾಯಿತು. ಇದೇ ರೀತಿಯಲ್ಲಿ ನಮ್ಮ ದೇಶದ ಉದ್ದಗಲಕ್ಕಿರುವ ವಿದ್ಯಾರ್ಥಿ, ಅಧ್ಯಾಪಕರ ಸಮೂಹ ಜಾಗೃತಿಗೊಂಡು ಉಗ್ರರ ವಿರುದ್ಧ ಸಕ್ರಿಯವಾದರೆ ಭಯೋತ್ಪಾದನೆ ಸರ್ವನಾಶವಾಗುವುದರಲ್ಲಿ ಸಂಶಯವಿಲ್ಲ. ಬನ್ನಿ, ಉಗ್ರರ ವಿರುದ್ಧ ಜಾಗೃತಿ ಮೂಡಿಸಲು ಮುನ್ನುಗ್ಗೋಣ. ರೂಂ ಅಥವಾ ಮನೆ ಬಾಡಿಗೆ ಕೊಡುವ ಮುನ್ನ ಸಂಪೂರ್ಣ ಮಾಹಿತಿ ಪಡೆದುಕೊಂಡು ಬಾಡಿಗೆ ಕೊಡಬೇಕು. ಮಾರುಕಟ್ಟೆ ದರಕ್ಕಿಂತ ಜಾಸ್ತಿ ಖರೀದಿಸಿದರೆ ಮಾಹಿತಿ ನೀಡಬೇಕು, ಭಯೋತ್ಪಾದನೆ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ ಆಶ್ರಯ ನೀಡಬೇಡಿ, ಮೊಬೈಲ್, ಸಿಮ್ ಕಾರ್ಡ್ ಅನ್ನು ಇತರರಿಗೆ ಕೊಟ್ಟು ತೊಂದರೆಗೆ ಸಿಕ್ಕಿಹಾಕಿಕೊಳ್ಳಬೇಡಿ,. Campus ಗಳಲ್ಲಿ ರಾಷ್ಟ್ರಭಕ್ತಿ ಮೂಡಿಸುವ ವಿಚಾರದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ನೀವು ವಾಸವಾಗಿರುವ ಗಲ್ಲಿ, ಹಳ್ಳಿ, ಹಾಸ್ಟೆಲ್, ಕಾಲೇಜ್ ಕ್ಯಾಂಪಸ್‌ಗಳಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಸದಾ ಜಾಗೃತರಾಗಿರಿ, ನಿಮ್ಮ ಕ್ಯಾಂಪಸ್ ಮತ್ತು ಸುತ್ತಮುತ್ತ ಭಯೋತ್ಪಾದನೆ ಚಟುವಟಿಕೆಗಳ ವಿರುದ್ಧ ಜಾಗೃತಿ ಮೂಡಿಸಿ, ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸೇನೆ ಹಾಗೂ ಪೊಲೀಸ್ ಇಲಾಖೆಗೆ ನೈತಿಕ ಬೆಂಬಲ ನೀಡಿ. ಭಯೋತ್ಪಾದನೆ ಹತ್ತಿಕ್ಕುವ ವಿಚಾರದಲ್ಲಿ ನಾವೆಲ್ಲರೂ ಸೈನಿಕರೆಂಬ ಭಾವನೆಯಿಂದ ಕೆಲಸ ಮಾಡಿ–ಇದು ನಾವು ಕೊಟ್ಟಿರುವ ಸುತ್ತೋಲೆ. ಮಲ್ಲಿಕಾರ್ಜುನ ಖರ್ಗೆಯವರಿಂದ ಹಿಡಿದು ರಾಜ್ಯದಲ್ಲಿರುವ ಎಲ್ಲಾ ಮುಖಂಡರಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದೇವೆ. ಯಾವುದೋ ಕಾರಣಕ್ಕೆ ನೀವು ಬರದಿರಬಹುದು. ಆದರೆ, ಕಾಂಗ್ರೆಸ್‌ನ ಸ್ನೇಹಿತರು ನೀವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದೀರಿ. ನಿಮಗೇನು ಸರಿ ಕಾಣುತ್ತದೋ ಆ ಕಾರ್ಯಕ್ರಮ ಮಾಡಿ. ಕರ್ನಾಟಕ ರಾಜ್ಯದಲ್ಲಿ ಬಹಳ ವರ್ಷಗಳ ನಂತರ ಬಿಜೆಪಿ ಅಧಿಕಾರಕ್ಕೆ ಬಂದ ಕಾಲದಲ್ಲಿ ಪ್ರಧಾನಿಯವರು ಈ ಕಳಕಳಿಯನ್ನು ವ್ಯಕ್ತಪಡಿಸಿದಾಗ ಇಂಥ ಕಾರ್ಯಕ್ರಮ ಮಾಡಿದ್ದೇವೆ. ಅಷ್ಟೇ ಅಲ್ಲ ಪ್ರಧಾನಿಯವರು ಕಳುಹಿಸಿದ ಪತ್ರವನ್ನು ನಿಮಗೆ ಕೊಡುತ್ತೇನೆ. ನಾನು ಪ್ರಧಾನಿಯವರಿಗೆ ಹೇಳಿದ್ದೇನೆ, ಕರ್ನಾಟಕದ ಯುವಕರಲ್ಲಿ ಇರುವಂಥ ಜಾಗೃತಿ, ಈ ದೇಶಭಕ್ತಿ, ರಾಷ್ಟ್ರಭಕ್ತಿ, ಅವರಲ್ಲಿರುವಂಥ ಕಳಕಳಿಯನ್ನು

ನೋಡಿ ನನಗೆ ಆಶ್ಚರ್ಯವಾಗಿದೆ ಪ್ರಧಾನಿಯವರೆ, ಇಡೀ ದೇಶದಲ್ಲಿ ಎಲ್ಲಾ Vice chancellors ಸಭೆ ಕರೆದು ಕಾಲೇಜಿಗೆ ನೀವು ಸೂಚನೆ ಕೊಟ್ಟು ದೇಶದ ಉದ್ದಗಲಕ್ಕೆ ನೀವು ಪಕ್ಷಾತೀತವಾಗಿ ಈ ಕಾರ್ಯಕ್ರಮವನ್ನು ಮಾಡಿಸಬೇಕು ಎಂದು ಈ ಯಶಸ್ಸು ನೋಡಿ ನಾನು ಪತ್ರ ಬರೆದಿದ್ದೇನೆ. ನಂತರ ಪ್ರತಿ ತಾಲ್ಲೂಕಿಗೂ ಇದನ್ನು ವಿಸ್ತರಿಸುತ್ತಿದ್ದೇವೆ. ಆಗಲಾದರೂ ಬನ್ನಿ. Suppose, ನೀವು ವಿರೋಧಿಸಿದಿರಿ ಎಂದು ಯುವಕರು ಬರಲಿಲ್ಲವೆಂದರೆ ಪರವಾಗಿಲ್ಲ, ಆದರೆ, ಕಲ್ಲು ಹೊಡೆದು ಯೂನಿವರ್ಸಿಟಿಗೆ ನುಗ್ಗಿ ಕಾನೂನು ಕೈಗೆ ತೆಗೆದುಕೊಂಡರೆ, ಯುವಕರು ತಿರುಗಿ ಬೀಳುತ್ತಾರೆ. ಯುವ ಸಮೂಹ ಏನು ಇದೆ ಇವರು ನಿಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕು? ಆವತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದ ಕಾಂಗ್ರೆಸ್ ಎಲ್ಲಿ, ಇವತ್ತು ಬಿಜೆಪಿ ಎಲ್ಲಿ ಬೆಳೆಯತ್ತೋ ಎನ್ನುವ ಭಯದಿಂದ ಅದನ್ನು ಹತ್ತಿಕ್ಕಬೇಕೆಂದು ಹೊರಟರೆ ನಿಮಗೆ ಲಾಭವಾಗುತ್ತದೆಯೆ ಶಿವಕುಮಾರ್? ನೀವು ಯೋಚಿಸಿ ತಾವು ಉತ್ತರ ಕೊಡಿ ಚರ್ಚೆ ಮಾಡೋಣ. ರಾತ್ರಿ 12 ಗಂಟೆಯವರೆಗೆ ಕುಳಿತುಕೊಳ್ಳುವುದಕ್ಕೆ ನಾನು ಸಿದ್ದನಿದ್ದೇನೆ. ಇದರ ಮೂಲಕ ರಾಜ್ಯದ ಜನರಿಗೆ ಮೆಸೇಜ್ ಹೋಗಲಿ. ತಪ್ಪು ನಾವು ಮಾಡಿದ್ದೇವೋ ಅಥವಾ ನೀವು ಮಾಡಿದ್ದೀರಾ ಎನ್ನುವುದು ಗೊತ್ತಾಗಲಿ. ನೀವು ತಪ್ಪು ಮಾಡಿದ್ದರೆ ತಿದ್ದಿಕೊಳ್ಳಿ, ನಾವು ತಪ್ಪು ಮಾಡಿದ್ದರೆ ತಿದ್ದಿಕೊಳ್ಳುವುದಕ್ಕೆ ಸಿದ್ಧ ಇದ್ದೇವೆ. ಆದರೆ, ದೇಶಭಕ್ತಿ ರಾಷ್ಟ್ರಭಕ್ತಿಯನ್ನು ಹೆಚ್ಚಿಸಿ ಹೇಗಾದರೂ ಮಾಡಿ ಭಯೋತ್ಪಾದನೆಯನ್ನು ಹತ್ತಿಕ್ಕಬೇಕೆನ್ನುವ ಪ್ರಯತ್ನ ಏನು ಇದೆ ಅದಕ್ಕೆ ದಯಮಾಡಿ ಸಹಕಾರ ಮಾಡಿ.

ಶ್ರೀ ಡಿ.ಕೆ.ಶಿವಕುಮಾರ್: ಸ್ವಾಮಿ ತಾವು ಪಕ್ಷಾತೀತವಾಗಿ ಮಾಡುವುದಾದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ನೀವು ಪ್ರಾರಂಭದಿಂದ ಏನು ಮಾಡಿದಿರಿ? ನಿಮ್ಮ ಪಕ್ಷದ ಕಾರ್ಯಕರ್ತರನ್ನು ಆ ಕಮಿಟಿಯಲ್ಲಿ ಹಾಕಿಕೊಂಡು ಅವರ ಮುಖಾಂತರ ಕಳುಹಿಸಿದಿರಿ. ನೋಡಿ ನನ್ನ ಕೈಯಲ್ಲಿರುವುದು M.E.S ಕಾಲೇಜಿನ ಪ್ರಾಂಶುಪಾಲರ ಚೇಂಬರ್‌ನಲ್ಲಿ ABVP, RSS ನವರು ಪ್ರಿಂಟ್ ಮಾಡಿದಂಥ ಪುಸ್ತಕವನ್ನು ನೀವು ಮಾಡಿರುವ ಕಮಿಟಿಯವರ ಮೂಲಕ ಕಳುಹಿಸಿಲ್ಲವೆ?

ಡಾ: ಬಿ.ಎಸ್.ಯಡಿಯೂರಪ್ಪ: ABVP, RSS ನವರು ದೇಶಭಕ್ತರಲ್ಲವೇ? ಅದರಲ್ಲಿ ತಪ್ಪೇನಿದೆ?

(ಗೊಂದಲ)

SRI D.K.SHIVAKUMAR : Don't use the campuses. I am telling you, don't use the campuses, don't use the vice chancellors for this.

ಡಾ:ಬಿ.ಎಸ್.ಯಡಿಯೂರಪ್ಪ: ನೋ ನೋ ನಮ್ಮ ಕಾರ್ಯಕರ್ತರು..

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಹಾಗಾದರೆ NSUI ನವರು ದೇಶಭಕ್ತರಲ್ಲವೆ? ನಾವು ದೇಶಭಕ್ತರಲ್ಲವೆ? ಏಕೆ ನೀವು ಈ ಕೆಲಸ ಮಾಡುತ್ತೀರಿ? Why?

ಡಾ:ಬಿ.ಎಸ್.ಯಡಿಯೂರಪ್ಪ: ಮಾನ್ಯ ಶಿವಕುಮಾರ್‌ರವರೆ ಒಂದು ನಿಮಿಷ ಕುಳಿತುಕೊಳ್ಳಿ ನಾನು ಹೇಳುತ್ತೇನೆ. ನೀವು ಕರಪತ್ರ ಮುದ್ರಿಸಿ ಹಂಚಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ನಮ್ಮನ್ನು ಆ ಕಮಿಟಿಗೆ ಸೇರಿಸಿಕೊಳ್ಳಿ. ಆಮೇಲೆ ನಾವು ಏನು ಮಾಡುತ್ತೇವೆ ನೀವು ನೋಡಿ. You appoint the committee, ನಮ್ಮನ್ನೂ ಸೇರಿಸಿಕೊಳ್ಳಿ. ನಾವು ಏನು ಮಾಡುತ್ತೇವೆ ನೋಡಿ.

(ಗೊಂದಲ)

ಡಾ:ಬಿ.ಎಸ್.ಯಡಿಯೂರಪ್ಪ: ಇದು ಒಂದು ಸರ್ಕಾರದ ಕಾರ್ಯಕ್ರಮ ನಿಮ್ಮ ಎಲ್ಲಾ ಮುಖಂಡರನ್ನು ನಾವು ಕರೆದಿದ್ದೇವೆಂದು ಹೇಳಿದಾಗ ನಮಗೆ ವಿದ್ಯಾರ್ಥಿಗಳ ಬಗ್ಗೆ ಆಸಕ್ತಿ ಇರುವುದು ನಮ್ಮ ಎಲ್ಲಾ ಸಂಘಟನೆಯನ್ನು ಯಶಸ್ವಿ ಮಾಡಿ ಎಂದು ನಾವು ಹೇಳಿದ್ದರೆ, ನಿಮ್ಮ ವಿದ್ಯಾರ್ಥಿ ಸಂಘಟನೆಗಳಿಗೆ ನೀವು ಸುತ್ತೋಲೆ ಕಳುಹಿಸಿ. ನಮ್ಮ ಸರ್ಕಾರದಿಂದ ಏನು ಬೇಕೆಂದು ಕೇಳಿ ಮಾಡಬಹುದಾಗಿತ್ತು. ಎಲ್ಲಾ ಜಾಹೀರಾತುಗಳಲ್ಲಿ ನಿಮ್ಮ ಶಾಸಕರು ಇದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಂದ ಹಿಡಿದು ಎಲ್ಲಾ ಮುಖಂಡರುಗಳ ಹೆಸರುಗಳು ಇವೆ. ನಿಮ್ಮ ಯೂನಿಟ್‌ನವರು ಇದನ್ನು ಮಾಡುವುದಕ್ಕೆ ಏನು ಅಡ್ಡಿ ಇತ್ತು? ಏಕೆ ಮಾಡಲಿಲ್ಲ?

ಶ್ರೀ ಡಿ.ಕೆ.ಶಿವಕುಮಾರ್: ಮಾಡಿ ಸ್ವಾಮಿ, ನೀವು ಮಾಡಿ. ದಯವಿಟ್ಟು ತಾವು ಮಾಡಿ, ನಮ್ಮನ್ನೂ ಸೇರಿಸಿಕೊಳ್ಳಿ, ನಮ್ಮನ್ನೂ ಕರೆಯಿರಿ ನಾವು ರೆಡಿ ಇದ್ದೇವೆ.

ಡಾ:ಬಿ.ಎಸ್.ಯಡಿಯೂರಪ್ಪ: ಕರೆದಿದ್ದೇವೆ. ನಾವು ರೆಡಿ ಇದ್ದೇವೆ. ಕರೆಯುವುದಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: ಮಾಡಿ ಸ್ವಾಮಿ, You withdraw the order and see that NSUI, SFI . . .

ಡಾ:ಬಿ.ಎಸ್.ಯಡಿಯೂರಪ್ಪ: ಎಲ್ಲಾರನ್ನು ಕರೆಯುವುದಕ್ಕೆ ನಾವು ರೆಡಿ ಇದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: I am sorry. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ವೇದಿಕೆಯನ್ನು, ನಮ್ಮ ವಿದ್ಯಾರ್ಥಿಗಳು ಅದನ್ನು ಪಬ್ಲಿಷ್ ಮಾಡಿದರೆ ನೀವು ಕಾಂಗ್ರೆಸ್‌ನವರು ಬಂದು ನಿಮ್ಮ ಲಿಟ್ರೇಚರ್‌ನ್ನು ಪಬ್ಲಿಷ್ ಮಾಡಿ, ಅದನ್ನು

ಉಪಯೋಗಿಸಿಕೊಳ್ಳಿ ಎಂದರು. ಅಂದರೆ, ಸರ್ಕಾರದ ವೆಚ್ಚದಲ್ಲಿ ನಮ್ಮದು ನಿಮ್ಮದು ಪಾರ್ಟಿ ಪ್ರಚಾರ ಮಾಡುವುದಕ್ಕೆ ಉಪಯೋಗಿಸಬೇಕೆ?

(ಗೊಂದಲ)

ಶ್ರೀ ಸಿ.ಟಿ.ರವಿ : ಅವರು ಒಂದು ವರ್ಷದಿಂದ ಈ ಕಾರ್ಯಕ್ರಮ ಮಾಡುತ್ತಿದ್ದಾರೆ ಅದಕ್ಕೆ ನಮ್ಮ ಮುಖ್ಯಮಂತ್ರಿಗಳು ಈಗ ಆ ಕಾರ್ಯಕ್ರಮ ಮಾಡುತ್ತಿದ್ದಾರೆ.

ಡಾ:ಬಿ.ಎಸ್.ಯಡಿಯೂರಪ್ಪ: ನಾವು ಮುದ್ರಿಸುತ್ತಿಲ್ಲ ಅವರೇ ಮುದ್ರಿಸಿರುವುದು. ಸರ್ಕಾರದಿಂದ ಯಾವುದು ಮಾಡಿಸಿಲ್ಲ. ಹಾಗಾದರೆ ಅದನ್ನು ಕಳುಹಿಸಿ ಕೊಡಿ. Please send it.

ಶ್ರೀ ಡಿ.ಕೆ.ಶಿವಕುಮಾರ್: ಎಂ.ಇ.ಎಸ್. ಕಾಲೇಜಿನಲ್ಲಿ ಸಿಕ್ಕಿರುವ ಪುಸ್ತಕ ಇಲ್ಲಿದೆ. ನಾನು ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

(ಗೊಂದಲ)

ಡಾ:ಬಿ.ಎಸ್.ಯಡಿಯೂರಪ್ಪ: ಅವರು ಮುದ್ರಿಸಿರುವುದು. ಸರ್ಕಾರದಿಂದ ನಾವು ಯಾವುದೇ ಪುಸ್ತಕವನ್ನು ಪ್ರಿಂಟ್ ಮಾಡಿಸಿಲ್ಲ. ಸರ್ಕಾರದ ಒಂದು ಪೈಸೆ ಕೂಡ ಖರ್ಚು ಮಾಡಿಲ್ಲ. ಆದರೆ, ಆ ಆಹ್ವಾನ ಪತ್ರಿಕೆಯಲ್ಲಿ ಸರ್ಕಾರದ ಕಾರ್ಯಕ್ರಮ ಎಂದು ಪ್ರತಿ ಪಕ್ಷದ ನಾಯಕರಿಂದ ಹಿಡಿದು ಪ್ರತಿಯೊಬ್ಬ ನಾಯಕರನ್ನು ಆಯಾಯ ಜಿಲ್ಲೆಗಳಲ್ಲಿ ನಾವು ಕರೆದಿದ್ದೇವೆ, ನಿಮ್ಮವರು ಕೂಡ ಅದರಲ್ಲಿ ಭಾಗವಹಿಸಿ ಉಗ್ರವಾದ ಒಳ್ಳೆಯ ಭಾಷಣ ಮಾಡಿ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿರುವ ಪ್ರಶ್ನೆ ಅದಲ್ಲ. ಎಲ್ಲರಿಗೂ ಅಭಿಮಾನವಿದೆ, ನಾವೂ ದೇಶಪ್ರೇಮಿಗಳೇ. ನೀವೊಬ್ಬರೆ ಕಾಂಟ್ರಾಕ್ಟ್ ತೆಗೆದುಕೊಂಡಿಲ್ಲ. ಅದಕ್ಕೆ ನಾನು ಏನು ಹೇಳಿದೆ ಎಂದರೆ, ಇವತ್ತು ಅದರ ಹೆಸರಿನಲ್ಲಿ ಆ ನೆಪದಲ್ಲಿ ನಿಮಗೆ ಬೇಕಾದ ಕಾರ್ಯಕರ್ತರು ಮತ್ತು ನಿಮಗೆ ಬೇಕಾದಂಥ ನಿಮ್ಮ ಸರ್ಕಾರದ ಹಿಂದೆ ಇರುವಂಥ ಸಂಘಟನೆ ಇದೆ ಎಂದು ಇಂಥ ಲಿಟ್ರೇಚರ್‌ಗಳನ್ನು ಪಬ್ಲಿಷ್ ಮಾಡಿ ಈ ideologyಯನ್ನು infuse ಮಾಡತಕ್ಕಂಥ ಪ್ರಯತ್ನ ನಡೆದಿದೆ. ಅದನ್ನು ನೀವು ಮಾಡಿಕೊಳ್ಳಿ ಎಂದು ಅವರಿಗೆ ನೇರವಾಗಿ ಹೇಳಿದಿರಿ.

ಡಾ:ಬಿ.ಎಸ್.ಯಡಿಯೂರಪ್ಪ: ಮುದ್ರಿಸಿರುವುದು ನಾವಲ್ಲ. ಸಂಸ್ಥೆಯವರು ಮುದ್ರಿಸಿರುವುದು. ತಾವು ಲಿಟ್ರೇಚರ್ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಈಗ ತಾನೇ ಹೇಳಿದಿರಲ್ಲಾ, ಮಾನ್ಯ ಉಪಾಧ್ಯಕ್ಷರೇ, ಬೇಕಾದರೆ ಕಡತ ತೆಗಿಸಿ ನೋಡಿ. ಅವರು ಹೇಳಿದಿರೋ ಇಲ್ಲವೋ?

ಡಾ:ಬಿ.ಎಸ್.ಯಡಿಯೂರಪ್ಪ: ಮಾನ್ಯ ಶಿವಕುಮಾರ್‌ರವರೆ ನಮಗೆ ನಿಮ್ಮ ಬಗ್ಗೆ ಗೌರವವಿದೆ. ನಾನು ಎರಡು ಸಂಗತಿ ಹೇಳಿದೆ. ನಮ್ಮ ಭಾರತೀಯ ಜನತಾ ಪಾರ್ಟಿಯ ಸರ್ಕಾರವೇ ಇಲ್ಲಿರುವುದು. ನಾನು ಏನಾದರೂ ಕಾರ್ಯಕ್ರಮ ಮಾಡಿದಾಗ ಆಕಸ್ಮಾತಾಗಿ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿದ್ದು ಆ ಕಾರ್ಯಕ್ರಮ ಯಶಸ್ಸು ಮಾಡುವುದಕ್ಕೆ ಓಡಾಡಿದ್ದರೆ ಅದೇನು ಅಪರಾದವಲ್ಲ. ಒಂದು ನಿಮಿಷ ತಾವು ನನ್ನ ಮಾತನ್ನು ಪೂರ್ತಿ ಕೇಳಬೇಕು. ನಾವೇನಾದರೂ ಸರ್ಕಾರದ ಖರ್ಚಿನಲ್ಲಿ ಏನಾದರೂ ಸಾಹಿತ್ಯವನ್ನು ಮುದ್ರಿಸಿದ್ದರೆ, ಏನ್ರೀ ಯಡಿಯೂರಪ್ಪನವರೆ ನಿಮ್ಮ ಬಿಜೆಪಿಯದು, ನಿಮ್ಮ ಆರ್.ಎಸ್.ಎಸ್ ದು ನಿಮ್ಮ ಸಂಘ ಪರಿವಾರದ್ದು ಏಕೆ ಮುದ್ರಿಸಿದ್ದೀರಿ ಎಂದು ಕೇಳಬಹುದಾಗಿತ್ತು. ಆ ರೀತಿಯಾಗಿ ನಾನು ಏನಾದರೂ ಮುದ್ರಿಸಿದ್ದರೆ ನಾನು ಈ ಕೂಡಲೇ ನಿಮ್ಮಲ್ಲಿ ಕ್ಷಮಾಪಣೆ ಕೇಳುತ್ತೇನೆ. ನಂತರ ನಾನು ನಿಮಗೆ ಉತ್ತರ ಕೊಡುತ್ತೇನೆ. ಈ ಕಾರ್ಯಕ್ರಮ ಚೆನ್ನಾಗಿ ಆಗಬೇಕೆಂದು ಆಯಾಯ ಪಕ್ಷದ ಸಂಘಟನೆಯವರು ಪ್ರಿಂಟ್ ಮಾಡಿಕೊಂಡರೆ, ನಿಮ್ಮ ಕಡೆಯವರು ಪ್ರಿಂಟ್ ಮಾಡಿಕೊಳ್ಳಲಿ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲವೆಂದು ಹೇಳಿದೆ. ವಿದ್ಯಾರ್ಥಿ ಪರಿಷತ್‌ನವರು ಮಾಡಿಕೊಳ್ಳುವುದಕ್ಕೆ ಬೇಡ ಎಂದು ಹೇಳುವುದಕ್ಕೆ ನಾನು ಯಾರು? ಅದೊಂದು ಸ್ವತಂತ್ರ ಸಂಸ್ಥೆ, ವಿದ್ಯಾರ್ಥಿಯ ಸಂಘಟನೆ. ಅದನ್ನು ತಡೆಯುವುದಕ್ಕೆ ನಾನು ಯಾರು?

ಶ್ರೀ ಅರವಿಂದ ಲಿಂಬಾವಳಿ : ABVP ಸಂವಿಧಾನವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಡಿ.ಕೆ.ಶಿವಕುಮಾರ್ ರವರು ಓದಬೇಕು. NSUI ನ ಸಂವಿಧಾನವನ್ನು ತೆಗೆದು ಓದಿ. Let me complete. ಒಂದು ನಿಮಿಷ. ನಿಜ ಹೇಳಿದರೆ ತಡೆಯುತ್ತೀರಿ, ಪರವಾಗಿಲ್ಲ ನೀವು.

(ಗೊಂದಲ)

ಉಪಾಧ್ಯಕ್ಷರು: ಆಯಿತು ಬಿಡಿ. ಜಯಚಂದ್ರರವರೇ ನೀವು ಮುಂದುವರಿಸಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ : ABVP, NSUI, SFI, AISF, AIDSOನ ಸಂವಿಧಾನವಿದೆ. ಅವರ ಮೂಲಭೂತ ಯೂನಿಟ್ ಇರುವುದೇ ಕಾಲೇಜ್ ಕ್ಯಾಂಪಸ್‌ನಲ್ಲಿ. ಹೀಗಾಗಿ ಕಾಲೇಜಿನ ಕ್ಯಾಂಪಸ್‌ನಲ್ಲಿ ಇವರೆಲ್ಲ ನಿರಂತರವಾಗಿ ಚಟುವಟಿಕೆ ಮಾಡುತ್ತಿರುತ್ತಾರೆ. ಅವರು ಯಾವುದೋ ಚಟುವಟಿಕೆ ಮಾಡುತ್ತಿರುವ ಪುಸ್ತಕವನ್ನು ಮಾನ್ಯ ಡಿ.ಕೆ.ಶಿವಕುಮಾರ್‌ರವರು ಇಲ್ಲಿ ತಂದು ಅದನ್ನು ತೋರಿಸಿ ನಾವು ಹಂಚುತ್ತಿರುವುದು ಎಂದು ಹೇಳಿದರೆ ಇದು ಎಷ್ಟರ ಮಟ್ಟಿಗೆ ಸಮಂಜಸ? ಅವರು ಚಟುವಟಿಕೆ ಮಡುವುದು ಅದೆ. NSUI ದು ಅದೇ, ABVP ದು ಅದೇ.

ಶ್ರೀ ಕೆ.ಎಸ್.ಈಶ್ವರಪ್ಪ: ರಾಜೀವಗಾಂಧಿ ಯುವಕ ಕೇಂದ್ರ ಎಂದು ಇಡೀ ದೇಶದಲ್ಲಿ ಮಾಡಿದಿರಿ. ಇದು ಸಂತೋಷ. ಹಳ್ಳಿಹಳ್ಳಿಯಲ್ಲೂ ಇವರ ಪಕ್ಷದ ಪ್ರಮುಖರನ್ನು ಸೇರಿಸಿ ಕಮಿಟಿ ಮಾಡಿ ಒಂದೊಂದು ಕಮಿಟಿಗೆ ಹತ್ತು ಹತ್ತು ಸಾವಿರ ರೂಪಾಯಿ ದುಡ್ಡ ಕೊಟ್ಟರು. ನಿಮ್ಮ ಬಗ್ಗೆ ಯೋಚನೆ ಮಾಡಿಕೊಳ್ಳಿ ನಾನು ಹೇಳುತ್ತಿರುವುದು ಅದಲ್ಲ. ಇದು ತಪ್ಪು ಎಂದು ನಾನು ಹೇಳುವುದಿಲ್ಲ. ರಾಷ್ಟ್ರ ಭಕ್ತಿ ನಿರ್ಮಾಣ ಮಾಡುವುದಕ್ಕೆ ಹತ್ತು ಸಾವಿರ ಅಲ್ಲದಿದ್ದರೂ ಒಂದು ಲಕ್ಷ ಕೊಡಿ. ಆದರೆ, ಇಡೀ ದೇಶದಲ್ಲಿ ರಾಜೀವಗಾಂಧಿ ಹೆಸರಿನಲ್ಲಿ ಯುವಕರನ್ನು ಕರೆದಾಗ ನಿಮಗೆ ನಮ್ಮ ಪಕ್ಷದ ಕಾರ್ಯಕರ್ತರು ನೆನಪಾಗಲಿಲ್ಲ. ಇವತ್ತು ಭಯೋತ್ಪಾದಕರನ್ನು ನಿಗ್ರಹಿಸಬೇಕೆಂದು ಹೊರಟರೆ, ವಿದ್ಯಾರ್ಥಿ ಜಾಗೃತಿಗಳನ್ನು ಮಾಡಿದರೆ, ಆ ಕಾರ್ಯಕ್ರಮಕ್ಕೆ ಲಕ್ಷಾಂತರ ಜನ ಯುವಕರು ಬಂದರೆ ನಿಮಗ್ಯಾಕೆ ಹೊಟ್ಟೆ ಉರಿ? ಇಡೀ ದೇಶದಲ್ಲಿ ಭಯೊತ್ಪಾದಕರನ್ನು ಮಟ್ಟ ಹಾಕಬೇಕೆಂದು ಯುವಕರು ಪ್ರತಿಭಟನೆ ಮಾಡುತ್ತಿರಬೇಕಾದರೆ, ನೀವು ನಿಜವಾಗಲೂ ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಶಿಕ್ಷಣ ಸಚಿವರನ್ನು ಅಭಿನಂದಿಸಬೇಕಾಗಿತ್ತು. ಅದು ಬಿಟ್ಟು ನೀವು ಇಲ್ಲಿ ರಾಜಕೀಯ ಮಾಡಿಕೊಂಡರೆ ಹೇಗೆ? ವಿದ್ಯಾರ್ಥಿಗಳನ್ನು ಜಾಗೃತಿ ಮಾಡಿ ದೇಶ ಭಕ್ತಿ ನಿರ್ಮಾಣ ಮಾಡುತ್ತಿದ್ದರೆ, ದೇಶಭಕ್ತಿ ನಿರ್ಮಾಣ ಮಾಡಿದರೆ ಕಾಂಗ್ರೆಸ್‌ಗೆ ನೋವೆ?

ಶ್ರೀ ದಿನೇಶ್ ಆರ್. ಗುಂಡುರಾವ್: ನೆಹರು ಯುವ ಕೇಂದ್ರ ಅದೊಂದು ಕೇಂದ್ರ ಸರ್ಕಾರದ ಸಂಸ್ಥೆ. ಇವತ್ತು ಇವರು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಒಂದು ದೊಡ್ಡ ಮಹತ್ತರವಾದ ಉದ್ದೇಶ ಇವರದು. ಭಯೋತ್ಪಾದನೆಯನ್ನು ನಿವಾರಣೆ ಮಾಡಬೇಕು, ಇದನ್ನು ಮಾಡುವುದಕ್ಕೆ ವಿದ್ಯಾರ್ಥಿಗಳಲ್ಲಿ ಜಾಗ್ರತೆ ಮೂಡಿಸಬೇಕು ಎನ್ನುವುದೇ ಇದು ಒಂದು ಕಾರ್ಯಕ್ರಮ. ಇಷ್ಟೊಂದು ದೊಡ್ಡದಾದ ಉದಾರವಾದ ಕಾರ್ಯಕ್ರಮದಲ್ಲಿ ಒಂದು ಸಮಿತಿ ಮಾಡಿದಾಗ ಅವರು ಯಾರನ್ನು ಹಾಕಿಕೊಳ್ಳುತ್ತಾರೆ? ಬಿ.ಜೆ.ಪಿ.ಯ ಕಾರ್ಯಕರ್ತರು, ಎ.ಬಿ.ವಿ.ಪಿ.ಯ ಕಾರ್ಯಕರ್ತರು, ಆರ್.ಎಸ್.ಎಸ್.ನ ಕಾರ್ಯಕರ್ತರನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ಒಬ್ಬ ಮುಸ್ಲಿಂ ಇಲ್ಲ, ಒಂದು ನಿಮಿಷ ಮುಗಿಸಿ ಬಿಡುತ್ತೇನೆ.

(ಗೊಂದಲ)

ಅವರು ನೆಹರು ಯುವ ಕೇಂದ್ರದ ಬಗ್ಗೆ ಮಾತನಾಡುವುದು ಬೇಡ.

(ಗೊಂದಲ)

ನೀವು ನಿಮ್ಮ ಪಾರ್ಟಿಯವರನ್ನು ಬೋರ್ಡ್, ಕಾರ್ಪೋರೇಷನ್ ಮೆಂಬರ್ಸ್ ಮಾಡಿ. ಆಶ್ರಯ ಸಮಿತಿಯ ಸದಸ್ಯರನ್ನಾಗಿ, ಆರಾಧಾನಾ ಸಮಿತಿಯ ಸದಸ್ಯರನಾಗಿ ನಿಮ್ಮ

ಪಾರ್ಟಿಯವರನ್ನು ಮಾಡಿ. ಆದರೆ ಇದರ ಉದ್ದೇಶ ಏನು? ನೆಹರು ಯುವ ಕೇಂದ್ರ ಒಂದು ಸಂಸ್ಥೆ ಆದರೆ ನೀವು ಮಾಡುತ್ತಿರುವುದು ಒಂದು ಕಾರ್ಯಕ್ರಮ. ಇದು ಸಂಸ್ಥೆಯಲ್ಲ. ಈ ಕಾರ್ಯಕ್ರಮವನ್ನು ಎಲ್ಲರಿಗೂ ಮುಟ್ಟಿಸಬೇಕು. ಪ್ರತಿಯೊಬ್ಬರನ್ನು ನೀವು ಸೇರಿಸಿಕೊಳ್ಳಬೇಕಾಗಿತ್ತು. ಇದರಲ್ಲಿ ಒಬ್ಬ ಮುಸ್ಲಿಂ ಇಲ್ಲ, ಒಬ್ಬ ಕ್ರೈಸ್ತರು ಇಲ್ಲ, ನಿಮಗೆ ಬೇಕಾದವರನ್ನು ಸಮಿತಿಯಲ್ಲಿ ಹಾಕಿಕೊಂಡು ನೀವು ಕಾರ್ಯಕ್ರಮ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನಿಮ್ಮ ಸರ್ಕಾರ ಬಂದಾಗ ನಿಮ್ಮದು ಮಾಡುತ್ತೀರಿ, ನಮ್ಮ ಸರ್ಕಾರ ಬಂದಾಗ ನಮ್ಮದು ಮಾಡುತ್ತೇವೆ.

ಶ್ರೀ ದಿನೇಶ್ ಆರ್ ಗುಂಡುರಾವ್: ಆ ಕಮಿಟಿಗೆ ನಮ್ಮನ್ನೂ ಸೇರಿಸಿಕೊಳ್ಳಬೇಕಾಗಿತ್ತು. ಆ ಕಮಿಟಿಯಲ್ಲಿ ಒಬ್ಬ ಮುಸ್ಲಿಂ ಇಲ್ಲ, ಒಬ್ಬ ಕ್ರಿಶ್ಚಿಯನ್ ಇಲ್ಲ, ಬರಿ ನಿಮಗೆ ಬೇಕಾದವರನ್ನು ಸಮಿತಿಯಲ್ಲಿ ಹಾಕಿಕೊಂಡು ಕಾರ್ಯಕ್ರಮ ಮಾಡಿದರೆ ಹೇಗೆ?

ಶ್ರೀ ಅರವಿಂದ ಲಿಂಬಾವಳಿ: ನೆಹರು ಯುವ ಕೇಂದ್ರದ ಕಾರ್ಯಕ್ರಮ – Together for Peace. Nation wide campaign of youth against terrorism and violence.

ಶ್ರೀ ದಿನೇಶ್ ಗುಂಡೂರಾವ್:- ನೆಹರು ಯುವಕ ಕೇಂದ್ರದವರದ್ದು ಬೇಕಾದಷ್ಟು ಅಭಿವೃದ್ಧಿ ಕಾರ್ಯಕ್ರಮಗಳಿವೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಅದರಲ್ಲಿ ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರೆ ಇದ್ದಾರೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ಕಾಂಗ್ರೆಸ್‌ನವರು ಭಯೋತ್ಪಾದನೆ ಬಗ್ಗೆ ಕಾರ್ಯ ಕ್ರಮಗಳನ್ನು ಮಾಡುವುದಕ್ಕೆ ಹೋಗಿ ಅದರಲ್ಲಿ ಫೇಲ್ ಆಗಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು:- ವಿಚಾರ ಬೇರೆ ಕಡೆಗೆ ಹೋಗುತ್ತಿದೆ. ತಾವು ತಮ್ಮ ಮಾತನ್ನು ಮುಂದುವರಿಸಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. (ಗೊಂದಲ) ನಾನು ನಿಮಗೆ ನಿಜ ಹೇಳಬಾರದೆ?

ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ರಾಜ್ಯದಲ್ಲಿ ರಾಜೀವ್ ಗಾಂಧಿ ಯುವಶಕ್ತಿ ಎಂಬ ನೂತನ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಆದೇಶವನ್ನು 2003ರಲ್ಲಿ ಮಾಡಿದ್ದಾರೆ. ಇದಕ್ಕೆ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಅಧ್ಯಕ್ಷರು ಮತ್ತು ಶ್ರೀಮತಿ ಮೋಟಮ್ಮ (ಗೊಂದಲ) ಮಾನ್ಯ ತಿಮ್ಮಾಪುರರವರು, ಮಾನ್ಯ ಬಂಗಾರಪ್ಪನವರು, ಮಾನ್ಯ ಎಸ್.ಎಸ್.ಮಲ್ಲಿಕಾರ್ಜುನ್‌ರವರು, ಹೆಚ್.ಸಿ.ವೇಣುಗೋಪಾಲ್‌ರವರು ಅದರಲ್ಲಿ ಇದ್ದರು. ಇವರೆಲ್ಲಾ ಯಾರು? ಮತ್ತೆ ಇದಕ್ಕೆ 9 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ 9 ಕೋಟಿ ರೂಪಾಯಿ ಎಲ್ಲಿಂದ ಬಂತು? (ಗೊಂದಲ) ನಾವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ. ಇದಕ್ಕೆ ಅವರು ಸಪೋರ್ಟ್ ಮಾಡಬೇಕು. ಮತ್ತೆ ಇದಕ್ಕೆ ಅವರನ್ನು ಸಹ ನಾವು ಕರೆದಿದ್ದೇವೆ. ಅವರ ತರಹ ನಾವೇನು ಅವರನ್ನು ಬಿಟ್ಟಿಲ್ಲ.

ಉಪಾಧ್ಯಕ್ಷರು:- ಮಾನ್ಯ ಜಯಚಂದ್ರರವರೆ, ತಾವು ತಮ್ಮ ಮಾತನ್ನು ಮುಂದುವರಿಸಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಉಪಾಧ್ಯಕ್ಷರೆ, ಅವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳುತ್ತಿದ್ದೇನೆ. ದಯವಿಟ್ಟು ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

ಶ್ರೀ ಆರ್.ರೋಷನ್‌ಬೇಗ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಈ ರೀತಿಯಾಗಿ ಮಧ್ಯದಲ್ಲಿ ಎದ್ದು ಎಷ್ಟು ಸಾರಿ interfere ಮಾಡುವುದು?

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ರೋಷನ್‌ಬೇಗ್‌ರವರೆ, ಈಗ ಸದನ ನಡೆಯುತ್ತಿದೆ. ಇಲ್ಲಿ ನಿಜ ಸಂಗತಿಗಳನ್ನು ಹೇಳುತ್ತೇನೆ ಕೇಳಿ.

ಉಪಾಧ್ಯಕ್ಷರು:- ಒಂದು ನಿಮಿಷ ಅವರು ಮಾತನಾಡಿ ಮುಗಿಸಲಿ. ಆನಂತರ ನೀವು ಮಾತನಾಡಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದನ್ನು ಕೇಳಿ. ಭಯೋತ್ಪಾದನೆ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಮಾನ್ಯ ಅಡ್ವಾನಿಯವರನ್ನು ಸಭೆಗೆ ಕರೆದಿದ್ದರು. (ಗೊಂದಲ) ಅವರು ಲೋಕಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿದ್ದಾರೆ. ನಾವು ಇಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಿಗೆ ಬಹಳಷ್ಟು ಗೌರವ ಕೊಡುತ್ತೇವೆ. ಆದರೆ, ಅವರನ್ನು 128ನೇ ಸೀಟ್‌ನಲ್ಲಿ ಕುಳ್ಳರಿಸಿದ್ದಾರೆ. ಇವರು ಅವರಿಗೆ ಕೊಡುವ ಗೌರವ ಇದೇನ?

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಎಲ್ಲರು ಕುಳಿತುಕೊಳ್ಳಿ, ಮೊದಲು ಅವರು ಮಾತನಾಡಲಿ. ತಾವು ತಮ್ಮ ಮಾತನ್ನು ಮುಂದುವರಿಸಿ ಬೇಗ ಮುಗಿಸಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್:- ನೀವು ಭಯೋತ್ಪಾದನೆಯನ್ನು ಹುಟ್ಟು ಹಾಕುತ್ತಿರುವುದು.

(ಗೊಂದಲ)

ಶ್ರೀ ಹೆಚ್.ಸಿ.ಮಹದೇವಪ್ರಸಾದ್:- ಮೊದಲು ಮಾನ್ಯ ಜಯಚಂದ್ರರವರು ಮಾತನಾಡುವುದನ್ನು ತಾವು ಕೇಳಿ. ಆನಂತರ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಉಪಾಧ್ಯಕ್ಷರೆ, ಅವರು ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅರವಿಂದ ಲಿಂಬಾವಳಿಯವರು ಗೌರವಾನ್ವಿತ ಸಚಿವರಾಗಿದ್ದಾರೆ. ..

(ಗೊಂದಲ)

ಉಪಾಧ್ಯಕ್ಷರು:- ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ, ತಾವೆಲ್ಲ ಕುಳಿತುಕೊಳ್ಳಿ, ತಾವು ಮುಂದುವರಿಸಿ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ಕಮಿಟಿಗಳು ಆಗುತ್ತವೆ. ನಾವು ವಿರೋಧಪಕ್ಷದಲ್ಲಿದ್ದು ಕೊಂಡು ನಿಮ್ಮ ತಪ್ಪುಗಳು ಏನಿವೆ ಎಂಬುದನ್ನು ಸಭಾ ನಾಯಕರ ಎದುರಿಗೆ ತೋರಿಸಿಕೊಡುವುದಕ್ಕೋಸ್ಕರ ನಾವು ಇಲ್ಲಿದ್ದೇವೆ. ಇದು ನಮ್ಮ ಜವಾಬ್ದಾರಿ ಕೂಡ ಆಗಿದೆ. ನೀವು ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಸರ್ಕಾರಿ ಆದೇಶವನ್ನು ಮಾಡುತ್ತೀರಿ. ಅದಕ್ಕೆ ಸದಸ್ಯರುಗಳನ್ನು ಹಾಕಿಕೊಂಡಿದ್ದೀರಿ. ಅವರ್ಯಾರು ಎಂಬುದು ನನಗೆ ಗೊತ್ತಿಲ್ಲ. ಇದರಲ್ಲಿ ಭದ್ರಿನಾಥ್, ದೇವಿಪ್ರಸಾದ್ ಶೆಟ್ಟರ್, ಭಾಸ್ಕರ್, ತುಮಕೂರಿನ ರಮೇಶ್ ಕುಮಾರ್ ಮತ್ತು ಬೆಂಗಳೂರಿನ ಬಸವೇಶ್ವರನಗರದ ಚೇತನ್‌ರವರು ಮತ್ತು ಆನಂದ್, ರಾಜನಕುಂಟೆ, ಬೆಂಗಳೂರು. ಇವರೆಲ್ಲರನ್ನು ತಾವು ಇದರಲ್ಲಿ ಹಾಕಿದ್ದೀರಿ. ಇವರೆಲ್ಲಾ ಯಾರು? (ಗೊಂದಲ) ನಾನು ಹೇಳುವುದನ್ನು ಮೊದಲು ಕೇಳಿ ಭಯೋತ್ಪಾದನೆಯನ್ನು ಮೊದಲು ಹುಟ್ಟು ಹಾಕಿರುವವರೆ ನೀವು. ನಾನು ಹೇಳುವುದನ್ನು ಸೌಜನ್ಯವಾಗಿ ಕೇಳುವುದನ್ನು ಮೊದಲು ಕಲಿಯಿರಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಅವರ್‍ಯಾರು ಭಯೋತ್ಪಾದಕರಲ್ಲ. ಅವರು ಈ ದೇಶದ ಪ್ರಜೆಗಳು.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್:- ಅವರು ಭಯೋತ್ಪಾದಕರೆಂದು ನಾವು ಹೇಳಿಲ್ಲ. ಅವರು ನಿಮ್ಮ ಪಕ್ಷದ ಕಾರ್ಯಕರ್ತರು.

(ಗೊಂದಲ)

ಉಪಾಧ್ಯಕ್ಷರು:- ಅವರು ಮಾತನಾಡಿ ಮುಗಿಸಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್.ಪುಟ್ಟೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಯಚಂದ್ರರವರಿಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಮತ್ತೆ ಅವರು ಯೀಲ್ಡ್ ಆಗಿಲ್ಲ. ಈ ನಡುವೆ ಮಾನ್ಯ ಸಚಿವರ ಏಕೆ ಮಾತನಾಡಬೇಕು?

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ಮಧ್ಯದಲ್ಲಿ ಯಾರು ಮಾತನಾಡಬೇಡಿ. ಮಾನ್ಯ ಶಿವಲಿಂಗೇಗೌಡರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮಗೆ ಅನುಮತಿ ಕೊಟ್ಟಿಲ್ಲ. ಮತ್ತೆ ಅವರು ಯೀಲ್ಡ್ ಕೂಡ ಆಗಿಲ್ಲ. ಈ ನಡುವೆ ದಯವಿಟ್ಟು ಯಾರು ಮಾತನಾಡಬೇಡಿ. ದಯವಿಟ್ಟು ತಾವು ಮುಂದುವರಿಸಿ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಅಲ್ಲಿರತಕ್ಕಂಥವರ ಹೆಸರನ್ನು ಓದಿ ಹೇಳಿದ್ದೇನೆ. ನನ್ನ ಆತ್ಮೀಯರಾದ ಮಾನ್ಯ ಉನ್ನತ ಶಿಕ್ಷಣ ಸಚಿವರು ಇವರ ಬಗ್ಗೆ ಹೇಳುತ್ತಿದ್ದಾರೆ. ಅವರು ಭಯೋತ್ಪಾದಕರಲ್ಲವೆಂದು ನಾವೂ ಕೂಡ ಹೇಳುತ್ತಿದ್ದೇನೆ. ನಾನು ಕುಂಬಳಕಾಯಿ ಕಳ್ಳ ಎಂದರೆ ನೀವೇಕೆ ಹೆಗ್ಗಲು ಮುಟ್ಟಿಕೊಳ್ಳುತ್ತೀರಿ? ದಯಮಾಡಿ ನಾನು ಹೇಳುವುದನ್ನು ಮೊದಲು ಕೇಳುವುದಕ್ಕೆ ಕಲಿತುಕೊಳ್ಳಿ. ಬೇರೆ ಸದಸ್ಯರಂತೆ ನೀವು ಮಾತನಾಡತಕ್ಕಂಥದ್ದು ಅಲ್ಲ. ಈ ವಿಷಯದ ಬಗ್ಗೆ ನೀವು ಉತ್ತರ ಕೊಡುವುದಕ್ಕೆ ಅವಕಾಶ ಇದೆ. ಆಗ ನೀವೇ ಉತ್ತರ ಕೊಡಬೇಕಾಗುತ್ತದೆ. ನಾನು ಈ ಸಂದರ್ಭದಲ್ಲಿ ಮುಖ್ಯವಾಗಿ ಹೇಳುವುದೇನೆಂದರೆ, ಡಿಪಿಎಆರ್ ಇಲಾಖೆ ಮಾನ್ಯ ಮುಖ್ಯ ಮಂತ್ರಿಯವರ ವ್ಯಾಪ್ತಿಗೆ ಬರುತ್ತದೆ. ಒಬ್ಬ ಮಂತ್ರಿ ಮಿನಿಟ್ ಕಳುಹಿಸಿದರೆ ಅದರ ಮೇಲೆ ಒಂದು ಆದೇಶವಾಗುತ್ತದೆಂದರೆ ಹೇಗೆ? ಈ ವಿಷಯವನ್ನು ಸಚಿವಸಂಪುಟದ ಮುಂದೆ ತಂದು ಇದರ ಬಗ್ಗೆ ಒಂದು ತೀರ್ಮಾನ ಮಾಡಿ ಭಯೋತ್ಪಾದನೆಯನ್ನು ಹತ್ತಿಕ್ಕುವಂಥ ಒಂದು ಕೆಲಸಕ್ಕೆ ಎಲ್ಲರನ್ನು

ಇನ್ವಾಲ್ವ್ ಮಾಡಿಕೊಂಡು ಇದರ ಬಗ್ಗೆ ಒಂದು ತೀರ್ಮಾನವನ್ನು ತಾವೇಕೆ ಮಾಡಲಿಲ್ಲ? ಇದಕ್ಕೆ ಈಗಾಗಲೇ 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಮತ್ತೆ ಇದಕ್ಕೆ ಇನ್ನೂ ಖರ್ಚಾಗುತ್ತಿದೆ. ಇವತ್ತು ಇದನ್ನು ಹೇಗೆ ಮಾಡುತ್ತೀರಿ? ಸಚಿವ ಸಂಪುಟದಲ್ಲಿ ಇನ್ನು ತೀರ್ಮಾನವಾಗಿಲ್ಲ. ಕೇವಲ ಒಬ್ಬ ಮಂತ್ರಿಯ ಮಿನಿಟ್ ಮೇಲೆ ಆಗಿರತಕ್ಕಂಥದ್ದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ನೀವು ಖರ್ಚು ಮಾಡುತ್ತಿದ್ದೀರಿ. ನಿಮ್ಮ ಡಿಪಿಎಆರ್ ಇಲಾಖೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದೆಯೇ? ಮತ್ತೆ ಹಣಕಾಸಿನ ಇಲಾಖೆ ಏನು ಮಾಡುತ್ತಿದೆ? ತಾವೇ ಹಣಕಾಸಿನ ಇಲಾಖೆಯ ಸಚಿವರಾಗಿರುವುದರಿಂದ ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಮಾನ್ಯ ಮಂತ್ರಿಗಳು ಭಯೋತ್ಪಾದನೆ ಬಗ್ಗೆ ಆದೇಶ ಮಾಡುತ್ತಾರೆ. ಆದರೆ, ಅದರಲ್ಲಿ ವಿವೇಕಾನಂದರವರ ಹೆಸರು ಇಲ್ಲ. ಮಾನ್ಯ ಪ್ರಧಾನ ಮಂತ್ರಿಗಳನ್ನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ, ಅವರ ಹೆಸರು ಕೂಡ ಇದರಲ್ಲಿ ಇಲ್ಲ. ಇದನ್ನೆಲ್ಲಾ ಏತಕ್ಕಾಗಿ ಮಾಡುತ್ತಿದ್ದೇವೆಂದು preamble ಹೇಳಬಹುದಾಗಿತ್ತಲ್ಲವೆ? ಇದರ ಬಗ್ಗೆ ಏನು ಹೇಳಿಲ್ಲ. ಮಾನ್ಯ ಮಂತ್ರಿಯವರು ಒಂದು ಮಿನಿಟ್ ಕಳುಹಿಸುತ್ತಾರೆ. ಅದರ ಮೇಲೆ ಒಂದು order issue ಮಾಡುತ್ತಾರೆ. ಇದೆಲ್ಲಾ ಏನು ಸ್ವಾಮಿ? ಒಂದು ಮಿನಿಟ್ ಕಳುಹಿಸಿದ 8 ದಿವಸಕ್ಕೆ ಒಂದು order ಮಾಡಿದ್ದೀರಿ. ಇದರ ಬಗ್ಗೆ ಯಾರ ರೆಫರ್ ಆಗಬೇಕಾಗಿಲ್ಲವೆ? ಕಾನೂನು ಇಲಾಖೆಗೆ ಹೋಗಿ ರೆಫರ್ ಆಗಬೇಕಾಗಿಲ್ಲ ಅಲ್ಲವೇ? ಇದು ಸರಿಯೇ ಅಥವಾ ತಪ್ಪೇ ಎಂಬ ಪ್ರಶ್ನೆಯೇ ಇಲ್ಲ. ಏಕಾಏಕಿ ಆದೇಶ ಮಾಡಿದ್ದೀರಿ. ದಯಮಾಡಿ ನಾನು ಹೇಳುವುದನ್ನು ತಾವು ಕೇಳಿ. ಮಾನ್ಯ ಮುಖ್ಯಮಂತ್ರಿಗಳು ಸೌಜನ್ಯದಿಂದ ಕುಳಿತು ನಾನು ಮಾತನಾಡುವುದನ್ನು ಕೇಳುತ್ತಿದ್ದಾರೆ. ತಾವು ದಯಮಾಡಿ ಅವರನ್ನು ನೋಡಿಯಾದರು ಕಲಿಯಿರಿ. ನೀವು ಅಧಿಕಾರದಲ್ಲಿರುವಾಗ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನೀವು ಪೋಲೀಸ್ ಕಮಿಷನರ್‌ರವರ ಹೆಸರು ಮತ್ತು ಡೆಪ್ಯುಟಿ ಕಮಿಷನ್‌ರ್‌ರವರ ಹೆಸರನ್ನು ಇದರಲ್ಲಿ ಹಾಕಿಸಿ ಅಲ್ಲಿ ಸ್ವಾಮಿ ವಿವೇಕಾನಂದರವರ ಫೋಟೋವನ್ನು ಹಾಕಿದ್ದೀರಿ. ನಿಮ್ಮ ಸರ್ಕಾರದ ಆದೇಶದಲ್ಲಿ ಸ್ವಾಮಿ ವಿವೇಕಾನಂದರವರ ಹೆಸರನ್ನು ಪ್ರಸ್ತಾಪ ಮಾಡಿದ್ದೀರಾ? ಇವರ ಹೆಸರನ್ನು ಪ್ರಸ್ತಾಪ ಮಾಡಿಲ್ಲ. ಒಂದು ಸರ್ಕಾರಿ ಆದೇಶವನ್ನು ಮಾಡಿ ನಿಮ್ಮ ಇಚ್ಚೆಗೋಸ್ಕರ ಸ್ವಾಮಿ ವಿವೇಕಾನಂದರವರ ಹೆಸರನ್ನು ಹಾಕುತ್ತೀರಿ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸ್ವಾಮಿ ವಿವೇಕಾನಂದರವರನ್ನು ಇಡೀ ವಿಶ್ವ ಮೆಚ್ಚಿದಂಥ ವ್ಯಕ್ತಿಯಾಗಿದ್ದರು. ಮತ್ತೆ ವಿಶ್ವ ಮೆಚ್ಚಿದಂಥ ಮಾನವ ಎಂದರೆ ಅವರು ಸ್ವಾಮಿ ವಿವೇಕಾನಂದರವರು. ಅವರ teachings and preachings ಬಗ್ಗೆ ಇವರು ಯಾರು ಕೂಡ ಮಾತನಾಡುವಂತಿಲ್ಲ.

ಇವತ್ತಿನ ದಿವಸ ಅವರಿಗೆ ನಾವೆಲ್ಲ ಗೌರವಿಸಬೇಕಾಗಿದೆ. ಅವರ ಹೆಸರಿನಲ್ಲಿ ನಿಮ್ಮ ಪಕ್ಷದ ಪಟ್ಟವನ್ನು ಕಟ್ಟಿದ್ದಕ್ಕೆ ನಮಗೆ ದುಃಖವಾಗುತ್ತದೆ. ಒಂದು ಸರ್ಕಾರಿ ಆದೇಶ ಮಾಡಿ ನೀವು ಯಾವ ರೀತಿಯಾಗಿ ಖರ್ಚು ಮಾಡುತ್ತೀರಿ? ಖರ್ಚು ಮಾಡುವುದಕ್ಕೆ business transaction ಗೆ ಸಂಬಂಧಪಟ್ಟಂತೆ ರೂಲ್ಸ್ ಇಲ್ವಾ? 5 ಕೋಟಿ ರೂಪಾಯಿಗಿಂಥ ಹೆಚ್ಚು ಖರ್ಚು ಮಾಡಬೇಕಾದರೆ ಅದು ಕ್ಯಾಬಿನೆಟ್ ಮುಂದೆ ಬರಬೇಕಾಗಿಲ್ಲವೆ? ಕ್ಯಾಬಿನೆಟ್ ಮುಂದೆ ಬಾರದೆ ಏಕಾಏಕಿ ಇದನ್ನು ಮಾಡಿ ಖರ್ಚು ಮಾಡತಕ್ಕಂಥದು ಸರಿಯೇ? 30 ರಿಂದ 40 ಸಾವಿರ ಜನರು ಬಂದಿದ್ದರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಶಿವಮೊಗ್ಗ ಜಿಲ್ಲೆಯ ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಒಂದೊಂದು ತಾಲ್ಲೂಕಿನಿಂದ 40 ರಿಂದ 50 ಬಸ್‌ಗಳು ಬಂದಿವೆ. ಇವು ಯಾವರೀತಿಯಾಗಿ ಬಂದಿವೆ ಸ್ವಾಮಿ? ಇದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ?

6-30 PM

ಇದನ್ನು ಸಚಿವ ಸಂಪುಟದಲ್ಲಿ ತಂದು ಈ ವಿಚಾರವನ್ನು ಮಾಡಿದ್ದರೆ ಬಹುಶಃ ಇಡೀ ದೇಶ ಇದನ್ನು ಅನುಕರಣೆ ಮಾಡುತ್ತಿತ್ತು. ಪ್ರಧಾನ ಮಂತ್ರಿಗಳು ಕೂಡ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಎಲ್ಲೋ ಒಂದು ಕಡೆ ಈ ಹೆಸರಿನಲ್ಲಿ ಇವತ್ತು ತಮ್ಮ ಪಕ್ಷದ ಬೇಳೆಯನ್ನು ಬೇಯಿಸಿಕೊಳ್ಳಬೇಕು. ಇವತ್ತು ವಿದ್ಯಾರ್ಥಿಗಳನ್ನು ಭಯೋತ್ಪಾದನೆಯ ಹೆಸರಿನಲ್ಲಿ ಯಾವುದೋ ಒಂದು ಜನಾಂಗದ ವಿರುದ್ಧವಾಗಿ ಎತ್ತಿಕಟ್ಟಬೇಕೆಂಬ ತಂತ್ರ ಎನ್ನುವುದನ್ನು ಬಿಟ್ಟರೆ ಬೇರೆ ಯವುದು ಇಲ್ಲವೆನ್ನುವ ಮಾತನ್ನು ಹೇಳುತ್ತೇನೆ. ನಿಜವಾಗಿಯೂ ಕೂಡ ಆ ಕಳಕಳಿ ಇದ್ದಿದ್ದರೆ.. ಈಶ್ವರಪ್ಪನವರೇ ಸ್ವಲ್ಪ ಕೇಳಿ ಸ್ವಾಮಿ, ನೀವು ವೇದಿಕೆ ಮೇಲೆ ಹೇಳುತ್ತಿದ್ದಿರಿ..

ಶ್ರೀ ಕೆ.ಎಸ್.ಈಶ್ವರಪ್ಪ: ಜಯಚಂದ್ರರವರೇ ಕೋಮುವಾದದ ಬಗ್ಗೆ ಮಾತನಾಡಿದರೆ ನಿಜಕ್ಕೂ ನಿಮಗೆ ಪಾಪ ಬರುತ್ತದೆ. ಇಷ್ಟು ಅನ್ಯಾಯ ಮಾಡಬೇಡಿ. ಖಂಡಿತ ನೀವು ದಾರಿ ತಪ್ಪುವಂತೆ ಮಾಡಬೇಡಿ. ರಾಜಕೀಯ ಮಾಡಲಿಕ್ಕೆ ಒಂದು ಇತಿಮಿತಿ ಇರಬೇಕು. ಮುಸ್ಲಿಂ ಹೆಣ್ಣುಮಕ್ಕಳು ಬುರ್ಖಾ ಹಾಕಿಕೊಂಡು ಸಾವಿರಾರು ಸಂಖ್ಯೆಯಲ್ಲಿ ಬಂದು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ವಿಷಯ ನಿಮಗೆ ಗೊತ್ತಿರಲಿಲ್ಲ. ಇಲ್ಲಿಯೂ ಕೂಡ ಜಾತೀಯತೆ, ಧರ್ಮ ತರಲಿಕ್ಕೆ ಹೋಗುತ್ತೀರಲ್ಲಾ, ದೇವರು ನಿಮ್ಮನ್ನು ಮೆಚ್ಚುತ್ತಾನೆಯೇ? ಹಾಳಾಗಿ ಹೋಗ್ತೀರಿ, ದಯವಿಟ್ಟು ಇಷ್ಟೊಂದು ಅನ್ಯಾಯ ಮಾಡಬೇಡಿ. ಏನಾದರೂ ಹೇಳುವುದಕ್ಕೂ ಕೂಡ ಇತಿಮಿತಿ ಇರಬೇಕು.

ಶ್ರೀ ಟಿ.ಬಿ.ಜಯಚಂದ್ರ: ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಇವರ ಬಗ್ಗೆ ಜೈ ಹೇಳುವುದಕ್ಕೆ ಬಂದಿದ್ದೇವೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಅದಕ್ಕೋಸ್ಕರ ವಿರೋಧ ಪಕ್ಷದವರಾದರೆ ಎಲ್ಲಾದಕ್ಕೂ ಜಾತಿ, ಎಲ್ಲಾದಕ್ಕೂ ರಾಜಕೀಯ, ಎಲ್ಲಾದಕ್ಕೂ ಧರ್ಮ ಎಂದರೆ ಇದನ್ನು ದೇವರು ಮೆಚ್ಚುತ್ತಾನೆಯೇ. ಇಷ್ಟು ಕೀಳು ಮಟ್ಟದ ರಾಜಕೀಯ ಮಾಡಬೇಡಿ.

ಶ್ರೀ ಟಿ.ಬಿ.ಜಯಚಂದ್ರ: ನಿಮ್ಮಲ್ಲಿರುವ ಲೋಪದೋಷವನ್ನು ಎತ್ತಿ ಹಿಡಿಯಲಿಕ್ಕೋಸ್ಕರ ನಾವು ಇಲ್ಲಿರುವುದು. ಹೌದು, ನೀವು ಮಾಡುತ್ತಿರುವುದರಲ್ಲಿ ಲೋಪವಿಲ್ಲವೇ? ನೀವು ಈ ವಿಚಾರದಲ್ಲಿ ಸರ್ಕಾರಿ ಆದೇಶವನ್ನು ಮಾಡುತ್ತಿರಲ್ಲಾ, ಇದನ್ನು ಯಾರಿಗಾದರೂ ಅಧಿಕಾರಿಗಳಿಗೆ ಕೊಡಿ, ಆಗ ನೀವು ಮಾಡುತ್ತಿರುವುದರ ಬಗ್ಗೆ ಏನು ಹೇಳುತ್ತಾರೆ ನೋಡೋಣ. ನೀವು ಈ ವಿಚಾರವನ್ನು ಕ್ಯಾಬಿನೆಟ್‌ಗೆ ತರಬೇಕಾಗಿತ್ತು. ತಾವು ಸಚಿವ ಸಂಪುಟದ ಮಂತ್ರಿಗಳಲ್ಲವೇ. ನೀವು ಯಾವರೀತಿಯಾಗಿ ಇದಕ್ಕೆ ಹಣವನ್ನು ಬಿಡುಗಡೆ ಮಾಡಿದಿರಿ? ಏಕೆ ಈ ರೀತಿ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ್ ಖರ್ಗೆ: ಜಯಚಂದ್ರರವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಸಿ.ಟಿ.ರವಿ: ಇವರು ಕಲ್ಲು ಹೊಡೆದಿದ್ದಾರೆ. ಇವರೆಲ್ಲಾ ಬುದ್ಧಿ ಹೇಳುವವರೇ?

ಉಪಾಧ್ಯಕ್ಷರು: ರವಿಯವರೇ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಪ್ರತಿಪಕ್ಷದಲ್ಲಿರುವವರಿಗೆ ಮಾತನಾಡಲಿಕ್ಕೆ ಸ್ವಾತಂತ್ರ್ಯವಿದೆ. ಅವರು ಮಾತನಾಡಲಿ, ಉತ್ತರ ಕೊಡಲಿಕ್ಕೆ ನಮಗೆ ಅವಕಾಶ ಇದೆ. ಅವರು ಏನು ಹೇಳುತ್ತಾರೆ ಅದು ರೆಕಾರ್ಡ್‌ಗೆ ಹೋಗಲಿ. ಜನ ಇದನ್ನು ಗಮನಿಸಬೇಕು. ನಾವೇ ಆಗಲಿ, ಅವರೇ ಆಗಲಿ ಡೆಮಾಕ್ರಸಿ ವ್ಯವಸ್ಥೆಯಲ್ಲಿದ್ದೇವೆ. ಅವರು ಇದರಲ್ಲಿ ತಪ್ಪಾಗಿದೆ ಎಂದು ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ನಮಗೆ ಉತ್ತರ ಕೊಡಲಿಕ್ಕೆ ಅವಕಾಶ ಇದೆ. ಕ್ಯಾಬಿನೆಟ್ ಡಿಸಿಷನ್ ಏನು ಆಗಿದೆ? ಎಷ್ಟು ಹಣ ಖರ್ಚು ಮಾಡಿದ್ದೇವೆ? ಆ ಎಲ್ಲಾ ವಿವರಗಳನ್ನು ಅವರಿಗೆ ಕೊಡೋಣ. ಇದರಲ್ಲಿ ಮುಚ್ಚುಮರೆ ಮಾಡುವಂಥದ್ದು ಯಾವುದು ಇಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಇದರಲ್ಲಿ ಈಶ್ವರಪ್ಪನವರು ಎದ್ದು ನಿಂತಿರಬಹುದು, atleast ಜಯಚಂದ್ರರವರು, ಶಿವಕುಮಾರ್‌ರವರು ಇರಬಹುದು. ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಇರಬಹುದು, ಹಿರಿಯರಿರುವಂಥ ಈ ಸಭೆಯಲ್ಲಿ ಈ ಜಾತಿ, ಅಲ್ಪಸಂಖ್ಯಾತರು ವಿಷಯದಲ್ಲಿ ಈ ದೇಶಭಕ್ತಿ ಪ್ರಶ್ನೆ ಬಂದಾಗ ಮುಂಬೈನಲ್ಲಿ ಜನರನ್ನು ಕೊಲ್ಲುವಾಗ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂದು ಕೊಂದು ಹಾಕಿದರೇ

ಸ್ವಾಮಿ, ಎಲ್ಲರನ್ನು ಕೊಂದರು. ಇದರ ವಿರುದ್ಧ ಪ್ರಧಾನಿಯವರೇ ಇಷ್ಟು ಕಳಕಳಿಯನ್ನು ವಹಿಸಿಕೊಂಡಿದ್ದಾರೆ. ಇಡೀ ಜಗತ್ತು ಈ ಭಯೋತ್ಪಾದನೆಯ ವಿರುದ್ಧ ಒಟ್ಟಾಗಿರುವ ಕಾಲದಲ್ಲಿ ನಿಮ್ಮ ಬಾಯಿಂದ ಆ ಮಾತು ಬಂದರೆ ಏನು ಮೆಸೇಜ್ ಹೋಗುತ್ತದೆ ಎಂಬ ದೃಷ್ಟಿಯಿಂದ ನೊಂದುಕೊಂಡಿದ್ದೇವೆ ಹೊರತು ಇದರಲ್ಲಿ ಏನೂ ಇಲ್ಲ. ನೀವು ಮಾತನಾಡಿ, ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ರೆಕಾರ್ಡ್‌ನಲ್ಲಿಯೂ ತೆಗೆಸಬೇಡಿ. ರೆಕಾರ್ಡ್‌ನಲ್ಲಿ ಅದು ಉಳಿಯಲಿ ತೊಂದರೆಯೇನಿಲ್ಲ. ಆದರೆ ಈ ಮಾತು ನಿಮ್ಮ ಬಾಯಿಂದ ಬರುವುದು ಎಷ್ಟರಮಟ್ಟಿಗೆ ಸರಿ ಎಂಬುದು ನಮ್ಮ ಅಭಿಪ್ರಾಯವಾಗಿದೆ.

ಉಪಾಧ್ಯಕ್ಷರು: ಆಯಿತು, ಜಯಚಂದ್ರರವರೇ ಮಾತನಾಡಿ.

ಶ್ರೀ ಟಿ.ಬಿ.ಜಯಚಂದ್ರ: ಏನಾಗಿದೆಯೆಂದರೆ, ಇದೊಂದು ವಿಚಾರದಲ್ಲಿ ಸಾಕಷ್ಟು ರೀತಿಯಲ್ಲಿ ಮಾತನಾಡಿ, ಮಾತನಾಡಿ ಬಹಳ ದೊಡ್ಡ ದೇಶಪ್ರೇಮಿಗಳಿವರು ಎನ್ನುವಂಥ ನಿಟ್ಟಿನಲ್ಲಿ ಬಿಂಬಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆ. ನಾನು ಕೇಳಿದ್ದೇನೆಂದರೆ ನಿಮ್ಮ ವಿದ್ಯಾ ಮಂತ್ರಿಗಳಾಗಿರುವವರು ಈ ರೀತಿಯಾಗಿ ಸರ್ಕಾರದ ಹಣವನ್ನು ಬಳಸಿ ಪಕ್ಷವನ್ನು ಬೆಳೆಸಲಿಕ್ಕೆ ಹಾಗು ಪಕ್ಷದ ಕಾರ್ಯಕ್ರಮವನ್ನು ಮಾಡಲಿಕ್ಕೆ ಸಾಧ್ಯವೇ ಎನ್ನುವುದು ನೇರವಾದ ವಿಚಾರ. ನಾವು ಮಾಡಿರುವುದು ಸರಿಯಿದೆಯೇ ಎಂಬ ಬಗ್ಗೆ ತಾವು ಯೋಚನೆ ಮಾಡಿ. ಇದನ್ನು ಸರಿಪಡಿಸುವುದಾದರೆ ತಾವು ಈ ವಿಚಾರವನ್ನು ಸಚಿವ ಸಂಪುಟದಲ್ಲಿ ತಂದು ವಿಚಾರ ಮಾಡಿ ಜಾತ್ಯಾತೀತವಾಗಿರುವ ರೀತಿಯಲ್ಲಿ, ಭಯೋತ್ಪಾದನೆಯನ್ನು ಹತ್ತಿಕ್ಕುವಂಥ ರೀತಿಯಲ್ಲಿ ಇವತ್ತು ಅಧಿಕಾರಿಗಳ ಸಲಹೆಯನ್ನು ಪಡೆಯುವಂತೆ ಮಾಡಿ. ದಯಮಾಡಿ ಕಡತಗಳನ್ನು ತರಿಸಿಕೊಂಡು ನೋಡಿ. ಒಂದು ಮಿನಿಟ್ ಕಳುಹಿಸುತ್ತಾರೆ ಸಾಯಂಕಾಲ ಆರ್ಡರ್ ಇಷ್ಯೂ ಆಗುತ್ತದೆ ಎಂದರೆ ಏನು ಸರ್ಕಾರವಿದು? ಖಂಡಿತವಾಗಿ ಟೀಕೆಗೋಸ್ಕರ ಟೀಕೆ ಮಾಡುತ್ತಿಲ್ಲ. ನೀವು ಮಾಡುತ್ತಿರುವ ತಪ್ಪನ್ನು ತಿದ್ದಿಕೊಳ್ಳಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇವತ್ತು ನೀವು ವಿವೇಕಾನಂದರ ಹೆಸರನ್ನು ಸಾರಾಸಗಟಾಗಿ ಬಳಸುತ್ತಿದ್ದೀರಿ. ಅಧಿಕಾರಿಗಳನ್ನು ಹಾಕುತ್ತಿದ್ದೀರಲ್ಲಾ ಇದು ಸರಿಯೇ ಅಥವಾ ತಪ್ಪೇ ಎನ್ನುವುದನ್ನು ಯೋಚನೆ ಮಾಡಿ. ಇದು ಒಂದು ಕಡೆಯಾದರೆ ದಯಮಾಡಿ ತಾವು ಯಾರ ಪರ ಇದ್ದೀರಿ ಎಂಬ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಪಕ್ಷದ ನಾಯಕಿಯಾಗಿರುವ ಸೋನಿಯಾಗಾಂಧಿಯವರು ಬಾಂಬೆಯಲ್ಲಿ ನಡೆದ ಭಯೋತ್ಪಾದನೆ ಘಟನೆಯ ಬಗ್ಗೆ ಮಾತನಾಡಿದ ಸಂದರ್ಭದಲ್ಲಿ ನಮ್ಮ ಸಂಸತ್ತು ಸದಸ್ಯರನ್ನು ಅಡ್ರೆಸ್ ಮಾಡುವಾಗ ಒಂದು ಮಾತನ್ನು ಹೇಳುತ್ತಾರೆ. ನಮಗೂ ನಿಮಗೂ ಇರುವ ವ್ಯತ್ಯಾಸಗಳೇನು

ಎನ್ನುವುದನ್ನು ನಾನು ವಿಚಾರ ಮಾಡಿ ಒಂದು ಮಾತಿನಲ್ಲಿ ಹೇಳುತ್ತೇನೆ. 'The whole country is united in its determination to combat the forces of terrorism. This is one. The barbaric attacks where so many innocent people including from abroad lost their lives were meticulously planned and ruthlessly executed in a cold blooded manner. They were deliberate assault on our nationalhood and a brazen attempt to destroy the fabric of our society and our secular democratic way of life. This is our approach.' ನಿಜವಾಗಲೂ ಕೂಡ ಇವತ್ತು ಸೆಂಟ್ರಲ್ ಕ್ಯಾಬಿನೆಟ್ ಬಜೆಟ್‌ನಲ್ಲಿ ಮಂಡನೆ ಮಾಡಿದರು. ಮಧ್ಯಂತರ ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲಿ ಕೂಡ ಅವರು ರಕ್ಷಣೆ ಇಲಾಖೆಗೆ ಕೊಟ್ಟಿರುವಂಥ ಅಮೌಂಟ್ ಎಷ್ಟು ಎಂದರೆ, 35% ಬಜೆಟ್ ಅನ್ನು ಇಡುವ ಸಂದರ್ಭದಲ್ಲಿ ದೇಶಭಕ್ತಿ, ಭಯೋತ್ಪಾದನೆ ಬಗ್ಗೆ ನೆರೆಹೊರೆ ರಾಷ್ಟ್ರಗಳು ಯಾವರೀತಿ ಇದ್ದಾರೆ ಎಂಬ ಬಗ್ಗೆ ನಾವು ಎಚ್ಚರಿಕೆ ತೆಗೆದುಕೊಂಡೆ ಕಾರ್ಯಕ್ರಮವನ್ನು ಹಾಕಿರುವಂಥದ್ದು. ಅಂಥ ಕಾರ್ಯಕ್ರಮಗಳು ರಾಜ್ಯ ಮಟ್ಟದಲ್ಲಿಯೂ ಆಗಬೇಕು. ರಾಜ್ಯಸರ್ಕಾರ ನಾಳೆ ಬಜೆಟ್ ಅನ್ನು ಮಂಡಿಸುತ್ತಿದೆ. ಆ ಬಜೆಟ್ ಅನ್ನು ಮಂಡಿಸುವ ಸಂದರ್ಭದಲ್ಲಿ ಇಂಥ ವಿಚಾರದಲ್ಲಿ ಕೇಂದ್ರಸರ್ಕಾರದಿಂದ N.S.U.I ಆಗಿಲ್ಲದಿರಬಹುದು. ನಾನು ಮಾಡುತ್ತೇನೆಂಬ ಮಾತನ್ನು ಹೇಳಿದ್ದೀರಿ. ಇಂಥ ವಿಚಾರಕ್ಕೆ ಹಣವನ್ನು ಖರ್ಚು ಮಾಡುವಂಥ ಕೆಲಸವನ್ನು ಮಾಡಬೇಕು ವಿನಃ ಇವತ್ತು ಓದುವ ಹುಡುಗರಿಗೆ ಮಾಡುವಂಥದ್ದಲ್ಲ. ವಿವೇಕಾನಂದರ ಹೆಸರನ್ನು ಏಕೆ ಬಳಸಿದಿರಿ ಎಂಬುದು ನಮ್ಮ ಪ್ರಶ್ನೆ? ಈಗೇನಾಗಿದೆ ವಿವೇಕಾನಂದರ ಹುಟ್ಟುಹಬ್ಬವನ್ನು Youth Day ಎಂದು ಮಾಡಬೇಕೆನ್ನುವ ಸಂದರ್ಭದಲ್ಲಿ ಅನುಮಾನ ಬರುವಂತಹ ವಾತಾವರಣ ಸೃಷ್ಟಿಯಾಗಿಹೋಯಿತು. ಬೇರೆ ಬೇರೆ ಜನಾಂಗದವರು ವಿವೇಕಾನಂದರನ್ನು ಒಂದು ಕೆಟ್ಟ ದೃಷ್ಟಿಯಿಂದ ನೋಡುವಂಥ ವಾತಾವರಣ ಸೃಷ್ಟಿಯಾಗಿದೆ. ದಯಮಾಡಿ ಈ ಕೆಲಸ ಆಗಬಾರದು ಎನ್ನುವ ಬಗ್ಗೆ ತಾವು ಯೋಚನೆ ಮಾಡಿ. ಉತ್ತರ ಕೊಡುವ ಸಂದರ್ಭದಲ್ಲಿ ಯೋಚನೆ ಮಾಡಿ ಉತ್ತರ ಕೊಡಿ ಎಂದು ಹೇಳುತ್ತೇನೆ. ಬೆಳಗಾಂನಲ್ಲಿ ಅಧಿವೇಶನ ನಡೆಯುವಾಗ ಕೊನೆ ದಿವಸ ನಾನು ಅಧಿವೇಶನದ ಸಭೆಯಲ್ಲಿ ಇರಲಿಲ್ಲ. ಕೊನೆ ದಿವಸ ಶಿರಾದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿ ಹಿಂದೂ ಜಾಗ್ರತಾ ವೇದಿಕೆ ಕರ್ನಾಟಕ ಇವರು ಒಂದು Procession ಮಾಡಿ ಮಾತನಾಡುವ ಸಂದರ್ಭದಲ್ಲಿ ಒಂದು ಗಲಾಟೆ ಆಯಿತು. ನನಗೆ ಗೊತ್ತಾದಾಗ ತಕ್ಷಣ ನಾನು ಹೋಗಿ ಶಾಂತಿ ಸಭೆಯನ್ನು ಕರೆದು ಸಮಾಧಾನ ಮಾಡುವ ಕೆಲಸವನ್ನು ಮಾಡಿದೆ. ಅವರು

ಪ್ರೊಸೆಷನ್ ಮಾಡಿದರು, ಭಾಷಣಗಳನ್ನೆಲ್ಲಾ ಮಾಡಿದ್ದಾಯಿತು. ಇದಾದ ಮೇಲೆ ಮತ್ತೆ ನಾನು ತಮಗೆ ಹೇಳುತ್ತಿದ್ದೇನೆ, ಟೀಕೆಗೋಸ್ಕರ ಹೇಳುತ್ತಿಲ್ಲ. ಮತ್ತೆ ಹಿಂದೂ ಜಾಗತೀಕರಣ ವೇದಿಕೆಯಿಂದ Pamphlet ಮಾಡಿ ಮರುದಿನ ಸಭೆಯನ್ನು ಕರೆದಿದ್ದರು. ಆ ಸಂದರ್ಭದಲ್ಲಿ ಸೆಕ್ಷನ್ 144 ಜಾರಿಯಲ್ಲಿತ್ತು. ಆಗ ಎರಡೂ ಕಡೆ ಹಿಂದೂ ಮುಸ್ಲಿಂ ಜನಾಂಗದ 20–25 ಜನರನ್ನು ಜೈಲಿಗೆ ಕಳುಹಿಸಿದ್ದಾರೆ. ಪೊಲೀಸರು ಕಾನೂನು ಸುವ್ಯವಸ್ಥೆಯನ್ನು ಸುರಕ್ಷಿತವಾಗಿ ನಡೆಸುವಂಥ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಅದಾದ ನಂತರ ಪುನಃ ಹಿಂದೂ ಜಾಗ್ರತೆ ವೇದಿಕೆಯವರು ನಾಳೆ ಇನ್ನೊಂದು ಪ್ರೊಸೆಷನ್ ಮಾಡುತ್ತೇವೆಂದು ಪೊಲೀಸಿನವರ ಬಳಿ ಪರ್ಮಿಷನ್ ಕೇಳುತ್ತಾರೆ. ಇನ್ನೂ ಆಗಿ ಒಂದು ತಿಂಗಳಾಗಿಲ್ಲ. ಆಗಲೇ ನಾವು ಮಸ್ಸಾ ಮಾಡುತ್ತೇವೆಂದು ಕೇಳಿದಾಗ ಪೊಲೀಸರು ಅದಕ್ಕೆ ಪರ್ಮಿಷನ್ ಕೊಟ್ಟಿಲ್ಲ. ರೆಫ್ಯೂಸ್ ಮಾಡಿದ್ದಾರೆ. ಆಗುವುದಿಲ್ಲ. ನಮ್ಮ convention ಪ್ರಕಾರ ಇಂಥ communally ವ್ಯತ್ಯಾಸಗಳು ನಡೆದಂಥ ಸಂದರ್ಭದಲ್ಲಿ ಮೂರು ತಿಂಗಳವರೆಗೆ ನಾವು ಅವಕಾಶ ಕೊಡಲಿಕ್ಕೆ ಆಗುವುದಿಲ್ಲವೆಂದು reject ಮಾಡುತ್ತಾರೆ. ಇದಾದ ನಂತರ ಮಾನ್ಯ ಮುಖ್ಯಮಂತ್ರಿಗಳೊಬ್ಬರನ್ನು ಬಿಟ್ಟು ನಾನು ಎಲ್ಲರಿಗೂ ಮಾತನಾಡಿದೆ. ಜಿಲ್ಲಾ ಮಂತ್ರಿಗಳು, ಗೃಹ ಸಚಿವರು ಎಲ್ಲರಿಗೂ ಮಾತನಾಡಿದೆ. ಎಲ್ಲಾ ಅಧಿಕಾರಿಗಳ ಜೊತೆ ಖುದ್ದಾಗಿ ಹೋಗಿ ಮಾತನಾಡಿದೆ. ಇದರಲ್ಲಿ ಏನಾದರೂ ಅಹಿತಕರವಾದ ವ್ಯತ್ಯಾಸಗಳು ನಡೆದರೆ ಅದ್ಕೆ ಸರ್ಕಾರವೇ ಜವಾಬ್ದಾರಿ ಆಗುತ್ತದೆ ಎಂದು. ಪೊಲೀಸರು ರೆಫ್ಯೂಸ್ ಮಾಡಿದ ಮೇಲೂ ಸಹ ಹಿಂದೂ ಜಾಗೃತಿ ವೇದಿಕೆಯವರು ಈ ರೀತಿ ಪ್ರೊಸೆಷನ್ ಮಾಡುತ್ತಿದ್ದಾರೆಂದು ಹೇಳಿದರೆ ಅದು ತಪ್ಪಾಗುತ್ತದೆನ್ನುವ ಮಾತನ್ನು ಹೇಳಿದಾಗ ಅದಕ್ಕೆ ಪರ್ಮಿಷನ್ ಕೊಡಲಿಲ್ಲ. ಆದರೆ ಇವತ್ತು ಏಕಾಏಕಿ ಪರ್ಮಿಷನ್ ಕೊಡುತ್ತಾರೆ. ಒಟ್ಟು ನಾಳೆ ಸಭೆಯನ್ನು ಮಾಡಬಹುದು ಎಂದು ಅವಕಾಶವನ್ನು ಮಾಡಿಕೊಡುತ್ತೀರಲ್ಲಾ. Pamphletನಲ್ಲಿರುವಂಥ ಅಂಶವೇನೆಂದರೆ ಹಿಂದೂ ಬಂಧುಗಳೇ, ಜಿಹಾದಿ, ಇಸ್ಲಾಮಿಕ್ ಭಯೋತ್ಪಾದನೆಯನ್ನು ಬಗ್ಗುಬಡಿಯಲು ಮತಾಂತರವೆಂಬ ಮತೀಯ ಆಕ್ರಮಣವನ್ನು ಮಟ್ಟ ಹಾಕಲು ಸೋಗಲಾಡಿ ಸೆಕ್ಯುಲರ್‌ವಾದಿಗಳ ದ್ವಂದ್ವ ದ್ರೋಹಗಳನ್ನು ಬೆತ್ತಲೆಗೊಳಿಸಲು ಜನಸಂಖ್ಯಾ ಸ್ಫೋಟವೆಂಬ ಬೆಂಕಿಯಿಂದ ಭಾರತವನ್ನು ರಕ್ಷಿಸಲು ಆಂಗ್ಲ ಆಕ್ರಮಣ ನುಸುಳುಕೋರರನ್ನು ತಡೆದು ಹೊರಹಾಕುವಂತೆ ಆಗ್ರಹಿಸಲು ಹಿಂದೂ ಜನಜಾಗೃತಿ ಸಮಾವೇಶ. ಇದು.. .

ಉಪಾಧ್ಯಕ್ಷರು: ಶಿವಣ್ಣನವರೇ, ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ: ಇದು ಸರ್ಕಾರವಿದು, ಇದಕ್ಕೆ ಸಂವಿಧಾನವೆಂಬುದಿದೆ. ಬಿಜೆಪಿಯವರು ಸಭೆಯನ್ನು ಹೊರಗೆ ಮಾಡಿಕೊಳ್ಳಲಿ. ಸರ್ಕಾರದಲ್ಲಲ್ಲ.

ಶ್ರೀ ಎಸ್.ಶಿವಣ್ಣ: ಅಧ್ಯಕ್ಷರೇ, ಇವರೇ ಅದಕ್ಕೆಲ್ಲಾ ಕಾರಣರು. ನನಗೆ ಗೊತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ: ಕರ್ನಾಟಕ ಎಷ್ಟು ಸುರಕ್ಷಿತ ಎಂಬ ಬಗ್ಗೆ ನಾನು ಎಲ್ಲವನ್ನೂ ಓದಿ ಹೇಳುವಂಥ ಅವಶ್ಯಕತೆ ಇಲ್ಲ. ಎಲ್ಲೋ ಒಂದು ಕಡೆ ಹುಬ್ಬಳ್ಳಿಯ ಮಹಮದ್ ಆಸೀಫ್ ಸೇರಿದಂತೆ ಐದು ಜನ ಉಗ್ರ ವಿದ್ಯಾರ್ಥಿಗಳು ಸೆರೆ ಸಿಕ್ಕಿರುವುದು ಇಲ್ಲಿಯೇ. ಚಿಕ್ಕಬಳ್ಳಾಪುರ ಅಂಜುಮಾನ್ ಸಿದ್ದಿಕಿ ಸೇರಿದಂತೆ 11 ಜನ ಭಯೋತ್ಪಾದಕರಿದ್ದಾರೆ.

ಶ್ರೀ ಎಸ್.ಶಿವಣ್ಣ: ಅಧ್ಯಕ್ಷರೆ, ಕಲ್ಲು ಎಸೆದು ಇವರೇ ಗಲಾಟೆ ಮಾಡಿಸುತ್ತಾರೆ. ಎಲ್ಲೋ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಒಂದು ವರ್ಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ರೀತಿಯಿಂದ ಸಹಾಯಕ್ಕೆ ಬರತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳು ನಡೆಯುತ್ತವೆ ಇದು ಹಿಂದು ದೇಶಕ್ಕೆ ಒಳ್ಳೆಯದೆ? ಹಿಂದೂ ಸಮಾವೇಶಕ್ಕೆ ಒಳ್ಳೆಯದಾಗುತ್ತದೆಯೇ ಎಂದು ನಾನು ನೇರವಾಗಿ ಹೇಳತಕ್ಕಂಥದ್ದು, ಎಲ್ಲೋ ಒಂದು ಕಡೆ ಸಂಘಟನೆಗಳ ಮುಖೇನ ನೀವು ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮತವನ್ನು ಪಡೆಯತಕ್ಕಂಥ ಒಂದು ತಂತ್ರಗಾರಿಕೆಯನ್ನು ಮಾಡುತ್ತಿದ್ದೀರಿ ಇದು ತಪ್ಪು ಎಂದು ನಾನು ಹೇಳುತ್ತಿದ್ದೇನೆ. ಇವತ್ತು ನಾನು ಒಂದು ವಿಚಾರವನ್ನು ಹೇಳುತ್ತೇನೆ. ಬಹುಶಃ ವಿವೇಕಾನಂದರ ಹೆಸರನ್ನು ಇಟ್ಟುಕೊಂಡು ಹಿಂದು ಜನಗಳಿಗೆ ಬೆಂಕಿ ಹಾಕತಕ್ಕಂಥ ಒಂದು ಸಂದರ್ಭ ಇರಲಿಲ್ಲ. ಪೊಲೀಸ್‌ರು ರೆಫ್ಯೂಸ್ ಮಾಡಿ ಬೆಳಗ್ಗೆ ಏಕಾಏಕಿ ಪರ್ಮಿಷನ್ ಕೊಡುತ್ತಾರೆ ಇದನ್ನು ಯಾವ ಪುರುಷಾರ್ಥಕ್ಕಾಗಿ ಮಾಡುತ್ತೀರಿ. ಇದು ಎಲ್ಲೋ ಒಂದು ಕಡೆ ಗೃಹ ಮಂತ್ರಿಗಳ ಒಪ್ಪಿಗೆ ಇಲ್ಲದೆ ನಡೆಯುವುದಕ್ಕೆ ಸಾಧ್ಯವಿಲ್ಲ. ನಮ್ಮ ಕಡೆ ಸಹ ಸಹಕಾರ ಇದೆ. ಆದರೆ ಕೇವಲ ಒಂದು ತಿಂಗಳ ಹಿಂದೆ ಆ ಘಟನೆ ನಡೆದಿದೆ ಮತ್ತೆ ಇದನ್ನು ಮಾಡುವ ಕೆಲಸ ಯಾತಕ್ಕೋಸ್ಕರ ಎಂದು ನಾನು ಕೇಳುವುದು ತಪ್ಪೇ? ದಯಮಾಡಿ ಯೋಚನೆ ಮಾಡಿ. ಈ ರೀತಿಯಾಗಿ ನೀವು ಕಾರ್ಯಕ್ರಮವನ್ನು ಹಾಕುವುದರಿಂದ ಪಕ್ಷ ಬೆಳೆಸುವುದಕ್ಕೆ ಸಾಧ್ಯವಿಲ್ಲ. ಒಬ್ಬರನ್ನೇ ನಂಬುವುದರಿಂದ ಸಹಾಯವಾಗುವುದಿಲ್ಲವೆಂದು ಹೇಳುತ್ತಾ, ಜನಗಳಿಗೆ ಇದರಿಂದ ತಪ್ಪು ಸಂದೇಶ ಹೋಗಬಾರದು. ಕಾಂಗ್ರೆಸ್ ಪಕ್ಷದ ಒಂದು ವರ್ಗವನ್ನು ತುಳಿಯುವುದಕ್ಕೋಸ್ಕರ ಭಯೋತ್ಪಾದನೆ ಬಗ್ಗೆ ನೀವು ಸಾರಿ ಸಾರಿ ಹೇಳುತ್ತಿದ್ದೀರಿ ಅಲ್ಲವೇ? ಭಯೋತ್ಪಾದನೆಯನ್ನು ನಾವು ವಿರೋಧ ಮಾಡುತ್ತೇವೆ, ಅದನ್ನು ಹತ್ತಿಕ್ಕಲು ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ.

ಬಜೆಟ್‌ನಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಅದಕ್ಕೆ ನಾವು ಮೆಚ್ಚುಗೆಯನ್ನು ಕೊಡುತ್ತೇವೆ. ಈಗಾಗಲೇ ಮಾನ್ಯ ಖರ್ಗೆಯವರು ಸಾಕಷ್ಟು ವಿಷಯಗಳನ್ನು ಮಾತನಾಡಿದ್ದಾರೆ. ನಾನು ಇನ್ನೊಂದು ಮುಖ್ಯವಾದ ವಿಷಯವನ್ನು ತಮಗೆ ಹೇಳುವುದಕ್ಕೆ ಬಯಸುತ್ತೇನೆ. ತಾವು TV ಯಲ್ಲಿ ಒಂದು ಸಲ ಅಲ್ಲ ಹತ್ತಾರು ಸಲ ನೋಡಬಹುದು. ಅಮಾಯಕರು ಆಗಿರತಕ್ಕಂಥವರು ಹೊಟ್ಟೆಪಾಡಿಗಾಗಿ ಪಬ್‌ನಲ್ಲಿ ಕೆಲಸ ಮಾಡತಕ್ಕಂಥ ಹೆಣ್ಣು ಮಕ್ಕಳ ಮೇಲೆ ಇವತ್ತು ಹೊಡೆಯುತ್ತಾರಲ್ಲ ಯಾರು ಸ್ವಾಮಿ ಇವರಿಗೆ ಆ ಧೈರ್ಯವನ್ನು ಕೊಟ್ಟವರು? ಯಾರು ಸ್ವಾಮಿ ಇವರಿಗೆ ಆ ಶಕ್ತಿಯನ್ನು ಕೊಟ್ಟವರು? ಅವರ ಪಕ್ಷದವರು ಮುಖ್ಯಮಂತ್ರಿಯಾಗಿರುವ ಕಾರಣಕ್ಕಾಗಿಯೇ ಅವರಿಗೆ ಆ ಧೈರ್ಯ ಬಂದಿರುವುದು ಎಂಬುವುದರ ಬಗ್ಗೆ ತಾವು ಯೋಚನೆಯನ್ನು ಮಾಡಿ. ಇವತ್ತು ನಿಮ್ಮ ಅಧಿಕಾರವನ್ನು ಯಾವ ರೀತಿಯಾಗಿ ದುರುಪಯೋಗ ಮಾಡುತ್ತಿದ್ದಾರೆಂಬ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು. ಇವತ್ತು ನಿಮ್ಮ ಉಳಿವಿಗೋಸ್ಕರ, ನಿಮ್ಮ ಒಳತಿಗೊಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ಇವತ್ತು ಆಗಿರುವಂತಹ ಘಟನೆ ಇಡೀ ದೇಶದಲ್ಲಿ ಎಲ್ಲರೂ ನೋಡಿದ್ದಾರೆ. ಇವತ್ತು ಕೇಂದ್ರದ ಸಚಿವರು ಬಂದು ನೋಡುವಂತಹ ಪರಿಸ್ಥಿತಿ ಬಂದಿದೆ. ಇಡೀ ದೇಶದಲ್ಲಿರುವ ಜನ ಕೂಡ ನೋಡುವಂತಹ ಪರಿಸ್ಥಿತಿಯಾಗಿದೆ. ಇವತ್ತು ಕರ್ನಾಟಕದಲ್ಲಿಯೂ ಕೂಡ ಹೆಣ್ಣುಮಕ್ಕಳಿಗೆ ರಕ್ಷಣೆ ಇಲ್ಲದಂತಹ ವಾತಾವರಣವು ಸೃಷ್ಟಿಯಾಗಿದೆ. ಈ ರಾಜ್ಯದ ಪ್ರಶ್ನೆಗೆ ಹೋದರೆ ನಮಗೆ ಅವಮಾನವಾಗುತ್ತದೆ. ನಾವು ಮೊನ್ನೆ ದೆಹಲಿಗೆ ಹೋದಾಗ ಈ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದರು. ಇವತ್ತು ಚರ್ಚ್‌ಗಳಲ್ಲಿ ಆಗಿರುವಂತಹ ಘಟನೆಯ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದರು. ಇವತ್ತು ಮಾನ್ಯ ಪ್ರಧಾನಮಂತ್ರಿಗಳು ಈ ವಿಚಾರದ ಬಗ್ಗೆ ಅನೇಕ ಸಾರಿ ಹೇಳಿದ್ದಾರೆ. ತಮ್ಮ ಸಭೆಯಲ್ಲಿಯೂ ಕೂಡ ಹೇಳಿದ್ದಾರೆ. ಇದರಿಂದಾಗಿ ನಮ್ಮ ದೇಶಕ್ಕೆ, ನಮ್ಮ ರಾಜ್ಯಕ್ಕೆ ಅಗೌರವ ಬಂದಿದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ತಾವು ಇವತ್ತು ಮುಖ್ಯಮಂತ್ರಿಗಳಾಗಿರುವಂತಹ ಸಂದರ್ಭದಲ್ಲಿ ಇಂತಹ ವಿಚಾರಗಳು ಅಂದರೆ ಅತಿ ಸೂಕ್ಷ್ಮವಾದಂತಹ ವಿಚಾರಗಳು ಬಂದಾಗ ಎಲ್ಲಿ ರಾಜ್ಯದ ಪ್ರತಿಷ್ಠೆಗೆ ತೊಂದರೆಯಾಗುತ್ತದೆ ಅಂತಹದ್ದರ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎಂಬ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನು ಸ್ವಾಮಿ ತಾಲಿಬಾನ್‌ಕಾರಣವಾಯಿತೆಂದರೆ ಸಚಿವರ ಮೇಲೆ ಕೇಸ್ ರಿಜಿಸ್ಟರ್ ಮಾಡುವಂತಹ ಮಟ್ಟಕ್ಕೆ ಹೋಗುತ್ತೇವೆಂದರೆ, ಪಬ್‌ಗಳಲ್ಲಿ ನಮ್ಮ ಬಡಹೆಣ್ಣುಮಕ್ಕಳ ಮೇಲೆ ಯಾವ ರೀತಿಯಾಗಿ ದೌರ್ಜನ್ಯ ಮಾಡುತ್ತಾರೆಂದರೆ ಅವರಿಗೆ ಯಾವ ರೀತಿಯಾಗಿ ಶಿಕ್ಷೆಯನ್ನು ಕೊಡುತ್ತೀರೆಂಬ ಬಗ್ಗೆ.

ನಿಮ್ಮ ಗಮನವಿಲ್ಲ. ಆದರೆ ಸಚಿವರನ್ನು condom ಮಾಡುತ್ತಾರಲ್ಲಾ, ಅದು ಹೆಣ್ಣುಮಕ್ಕಳಿಗೆ ಆಗಿರುವಂತಹದ್ದು ಈ ಬಗ್ಗೆ ಇಡೀ ದೇಶವೇ ನೋಡುತ್ತಿದೆ. ದೇಶಕ್ಕೆ ಅವಮಾನವಾಗುತ್ತಿದೆ, ಕೇಂದ್ರ ಸರ್ಕಾರ ಆ ಬಗ್ಗೆ re act ಮಾಡಬಾರದೇ? ಅವರು ಬಂದು ಆ ಮಾತನ್ನು ಹೇಳಿದರೆ ಅವರ ಮೇಲೆ ಕೇಸ್ ಹಾಕುತ್ತೀರೆಂದರೆ ಇದು ತಮ್ಮ ದೃಷ್ಟಿ ಯಾವ ಕಡೆ ಇದೆ ಎಂಬುದರ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಕೇರಳ ಸರ್ಕಾರದ ಒಬ್ಬ ಶಾಸಕರ ಮಗಳು ಬೇರೆ ಜನಾಂಗದವರ ಜೊತೆ ಮಾತನಾಡುತ್ತಾರೆಂದರೆ ಅವರ ಮೇಲೆ ಹೋಗಿ ಗಲಾಟೆಯನ್ನು ಮಾಡುತ್ತಾರೆ ಇವತ್ತು ದಕ್ಷಿಣ ಕನ್ನಡ ಮತ್ತು ಉತ್ತರಕನ್ನಡ ಭಾಗಕ್ಕೆ ಏನಾದರೂ ಪ್ರತ್ಯೇಕ ಸಂವಿಧಾನವಿದೇಯೇ? ಕಾನೂನು ಇದೆಯೇ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ. ಆಡಳಿತವನ್ನು ನಡೆಸುತ್ತಿರುವವರು ಯಾರು ಎಂಬುದರ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು ಮಾನ್ಯ ಯಡಿಯೂರಪ್ಪನವರು ಬಿಜೆಪಿ ಅಧ್ಯಕ್ಷರಾಗಿ ಆಡಳಿತವನ್ನು ಮಾಡುತ್ತಿಲ್ಲ. ಮುಖ್ಯಮಂತ್ರಿಯಾಗಿ ಆಡಳಿತವನ್ನು ನಡೆಸುತ್ತಿದ್ದೀರಿ. ನಾವು ಒಳಗಡೆ ಬರಬೇಕಾದರೆ ಪ್ರಮಾಣವಚನವನ್ನು ಸ್ವೀಕಾರ ಮಾಡಿ ಇವತ್ತು ನಾವು ಸಂವಿಧಾನದ ಅಡಿಯಲ್ಲಿ ಕೆಲಸವನ್ನು ಮಾಡುತ್ತೇವೆ, ಜನಗಳಿಗೆ ರಕ್ಷಣೆಯನ್ನು ಕೊಡುತ್ತೇವೆ ಎಂಬ ಪ್ರಮಾಣವಚನವನ್ನು ಮಾಡಿ ಇಲ್ಲಿಗೆ ಬಂದಿದ್ದೇವೆ ಎಂಬುದನ್ನು ಮರೆಯಬಾರದು. ಇದು ಒಂದು ಕಡೆಯಾದರೆ, ತಾವು ಇವತ್ತು ರೈತರ ಹಿನ್ನೆಲೆಯ ಮೇಲೆ ಅಧಿಕಾರಕ್ಕೆ ಬಂದಿದ್ದೀರಿ. ನಾನು ಎಲ್ಲೇ ಇದ್ದರೂ ಕೂಡ ನಿಜವಾಗಿಯೂ ಹೇಳುತ್ತೇನೆ. ಒಬ್ಬ ಯಡಿಯೂರಪ್ಪನಂತಹವರು ರೈತರ ಹಿನ್ನೆಲೆಯಲ್ಲಿ ಬಂದಿರುವಂತಹವರು, ಅಧಿಕಾರದ ಕುರ್ಚಿಯಲ್ಲಿ ಕುಳಿತುಕೊಳ್ಳುವಂತಹ ಆಸೆಯನ್ನು ಪಟ್ಟವರು ಮಾಡುವುದು ಇದಲ್ಲಾ, ಮಹಾತ್ಮಾ ಗಾಂಧೀಜಿಯವರು ತಮ್ಮ ಮಾತಿನಲ್ಲಿ ಹೇಳುತ್ತಾರೆ. ಇವತ್ತು ರೈತರಾಗಿರುವಂತಹವರು, ರೈತರ ಪರವಾಗಿ ಕಾಳಜಿಯನ್ನು ಇಟ್ಟುಕೊಂಡವರು ಅಧಿಕಾರದ ಗದ್ದುಗೆಯನ್ನು ಹಿಡಿಯಬೇಕೆಂಬುದು ಗಾಂಧೀಜಿಯವರ ಕನಸಾಗಿತ್ತು. ಗಾಂಧೀಜಿಯವರ ಕನಸು ಇವತ್ತು ನನಸಾಗಿರುವಂತಹ ಸಂದರ್ಭದಲ್ಲಿ ರೈತರ ಮೇಲೆ ಆಗುತ್ತಿರುವಂತಹ ಅತ್ಯಾಚಾರಗಳು, ದ್ರೋಹಗಳು ಆ ಕೆಲಸವನ್ನು ಇವತ್ತು ತಮ್ಮ ಕಣ್ಣೆದುರಿಗೆ ನಡೆಯುತ್ತಿದೆಯಲ್ಲಾ ತಾವು ಅಧಿಕಾರಕ್ಕೆ ಬಂದು 9 ತಿಂಗಳಲ್ಲಿ ಒಂದೇ, ಎರಡೇ, ಎಷ್ಟು ದೃಷ್ಟಾಂತಗಳನ್ನು ಹೇಳಬಹುದು. ಎಷ್ಟು ನಿದರ್ಶನಗಳನ್ನು ಕೋಟ್ ಮಾಡಬಹುದು. ಯಾವುದೋ ಊರಿನಲ್ಲಿ ವಿಮಾನ ನಿಲ್ದಾಣವನ್ನು ಮಾಡುವುದಕ್ಕೆ ಬೇಕಾದಷ್ಟು ಜಾಗಗಳು ಇವೆ. ಹಂಪಿಯಲ್ಲಿ ಮಾಡಬಹುದಾಗಿತ್ತು. ಇನ್ನೊಂದು ಕಡೆ ಮಾಡಬಹುದಗಿತ್ತು. ಎಲ್ಲೋ ಒಂದು ಕಡೆಗೆ ಈ ಬಗ್ಗೆ

ಸಾರ್ವಜನಿಕವಾಗಿ ಚರ್ಚೆಗಳು ನಡೆಯುತ್ತಿದೆ. ಇವತ್ತು ಸರ್ಕಾರ ಯಿರದೋ ಒಬ್ಬರ ನಿಯಂತ್ರಣದಲ್ಲಿ ಇದೆ, ಈ ಬಗ್ಗೆ ಸಾರಾಸಗಟಾಗಿ ಜನರು ಬೀದಿ ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಇವತ್ತು ಸರ್ಕಾರ ಯಾವುದೋ ಒಂದು ಲಾಬಿಗೆ ಒಳಗಾಗಿದೆ. ಅಂತಹವರ ಅನುಕೂಲಕ್ಕೋಸ್ಕರ ಅವರೇ ಇಟ್ಟಿರುವಂತಹ 25 helicopter ಗಳು, ಅವರಿಗೆ ಸಹಾಯವಾಗುವುದಕ್ಕೋಸ್ಕರ ಇವತ್ತು ವ್ಯವಸಾಯಕ್ಕೆ ಯೋಗ್ಯವಾಗಿರುವಂತಹ ರೈತರ ಜಮೀನುಗಳನ್ನು, ನೀರಾವರಿಯಾಗಿರುವಂತಹ ಪ್ರದೇಶಗಳಲ್ಲಿ ಇವತ್ತು ಅಲ್ಲಿ Aero drum ಮಾಡುತ್ತೇವೆಂದು ಹೊರಟಿರುವಂತಹ ಸಂದರ್ಭದಲ್ಲಿ ರೈತರು ಹೊಟ್ಟೆಪಾಡಿಗೋಸ್ಕರ ಪ್ರತಿಭಟನೆಯನ್ನು ಮಾಡುತ್ತಾರೆ, ಅದನ್ನು ಮಾಡಿದಂತಹ ಕೆಲವೇ ಕ್ಷಣಗಳಲ್ಲಿ ಇವತ್ತು ಸಚಿವಸಂಪುಟದ ಸದಸ್ಯರು ಹೇಳುತ್ತಾರೆ. ನಾವು ಏನೇ ಆಗಲಿ ಅಲ್ಲಿ Aero drum ಮಾಡುತ್ತೇವೆಂದು ಹೇಳುತ್ತಾರೆ. ಏನು ಸ್ವಾಮಿ ತಮಗೆ ರೈತರ ಬಗ್ಗೆ ಕಾಳಜಿ ಇದೆಯೇ? ಏಕೆ ಸ್ವಾಮಿ ಅವರಿಗೆ ಈ ತರಹದ ಅಧಿಕಾರ ಕೊಟ್ಟಿದ್ದೀರಿ? ಇದರಿಂದ ಏನಾಗುತ್ತದೆ ಎಂದರೆ, ತಮಗೆ ಕೆಟ್ಟ ಹೆಸರು ಬರುತ್ತದೆ. ಇನ್ಯಾರು ಅಲ್ಲ ಇವತ್ತು ರೈತರ ಪರವಾಗಿ ಇರುವಂತಹ ತಾವು ಅಧಿಕಾರದ ಕುರ್ಚಿಯಲ್ಲಿರುವಾಗ ನಿಮ್ಮ ಸಚಿವ ಸಂಪುಟದ ಬಹಳ ಸದಸ್ಯರು ಮಾಡುತ್ತಿರುವುದು ಏನು ಎಂಬುದನ್ನು ಮಾನ್ಯ ಖರ್ಗೆಯವರು ವಿವರವಾಗಿ ಹೇಳಿದ್ದಾರೆ. ನಿಮಗೆ ಟೈಮ್ ಇಲ್ಲ, ನೀವು ನೋಡುತ್ತಿಲ್ಲ. ಅದರ ಬಗ್ಗೆ ತಾವು ಯೋಚನೆ ಮಾಡಿ ಎಂಬ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಾವು ತಕ್ಷಣಕ್ಕೆ ವಿರೋಧ ಮಾಡಿದ್ದೇವೆ. ನಾವು ಏನು ಆ ಕಡೆ ಬಂದು ಕುಳಿತುಕೊಳ್ಳುವಂತಹ ಪ್ರಶ್ನೆ ಇಲ್ಲ. ತಮಗೆ ಬೆಂಬಲವನ್ನು ಕೊಟ್ಟಿದ್ದಾರೆ. ತಾವು ಅಧಿಕಾರದ ಕುರ್ಚಿಯಲ್ಲಿ ಇರಬೇಕು. ತಮ್ಮ ಅವಧಿಯವರೆಗಾದರು ಕುಳಿತುಕೊಳ್ಳಲಿ ಎನ್ನುವಂತಹ ಮಾತನ್ನು ಹೇಳುವುದರ ಜೊತೆಗೆ ಆದರೆ ಇಲ್ಲಿ ತಪ್ಪುಗಳು ಆಗಬಾರದು. ತಮಗೆ ಕೆಟ್ಟ ಹೆಸರು ಬರಬಾರದು, ಆದರೆ ಕುರ್ಚಿ ಮುಖ್ಯವಲ್ಲ. ಎಷ್ಟು ದಿವಸಗಳ ಕಾಲ ಅಧಿಕಾರದಲ್ಲಿ ಇರುತ್ತೀರಿ ಎಂಬುದು ಮುಖ್ಯವಲ್ಲ. ಅಧಿಕಾರದ ಅವಧಿಯಲ್ಲಿ ನೀವು ಯಾವ ರೀತಿಯಾಗಿ ನಡೆದುಕೊಳ್ಳುತ್ತಿದ್ದೀರಿ ಯಾವ ರೀತಿಯಾಗಿ ನಡವಳಿಕೆಗಳು ಇತ್ತು, ಯಾವ ರೀತಿಯಾಗಿ ಆಡಳಿತ ಇತ್ತು ಎಂಬುದು ಬಹಳ ಮುಖ್ಯ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸ್ವಾಮಿ ನಾನು ಮೈಸೂರಿನಲ್ಲಿ ಆಗಿರುವಂತಹ ಘಟನೆಯ ಬಗ್ಗೆ ಹೇಳುತ್ತೇನೆ. ಅಲ್ಲಿ ವಾಲ್ಮೀಕಿ ಜನಾಂಗದವರು ಸೇರಿರುವಂತಹದ್ದು ಅಲ್ಲಿ Deputy Commissioner ರವರಿಗೆ Memorandumನ್ನು ಕೊಡುವುದಕ್ಕೆ ಬಂದರು. ಅಲ್ಲಿ Deputy commissionerರವರು ಇಲ್ಲವೆಂದು ಅವರು ಇನ್ನೊಂದು ಕಡೆಗೆ ಹೋದರು. ಅವರು ಪರಿವಾರ ಮತ್ತು ವಾಲ್ಮೀಕಿ

ಜನಾಂಗಗಳಲ್ಲಿ ವ್ಯತ್ಯಾಸವಾಗಿರುವಂತಹದ್ದರ ಬಗ್ಗೆ ಜನರು ಇದು ನೀವಿದ್ದಾಗ ಅಲ್ಲಾ, ನಾನು ಮಂತ್ರಿಯಾಗಿರುವಂತಹ ಸಂದರ್ಭದಲ್ಲಿಯೂ ಇಂತಹ ವಿಚಾರದಲ್ಲಿ ನನ್ನ ಅಧ್ಯಕ್ಷತೆಯಲ್ಲಿಯೂ ಕೂಡ ಒಂದು ಸಭೆಯು ನಡೆದಿತ್ತು. ನಾನು ಮಂಡ್ಯದಲ್ಲಿ Incharge Minister ಆಗಿರುವಂತಹ ಕಾಲದಲ್ಲಿ ಈ ವಿಚಾರವು ಇತ್ತು. ಒಂದು ಸಾರಿ ಅಲ್ಲ, ಹತ್ತು ಸಾರಿ ಈ ಬಗ್ಗೆ ಸಭೆಗಳನ್ನು ಮಾಡಿ ಇದಕ್ಕೆ ಪರಿಹಾರವನ್ನು ಮಾಡುವುದಕ್ಕೆ ಆಗದ ಪರಿಸ್ಥಿತಿಗೆ ಹೋಗಿತ್ತು. ಅದು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಅವರು ಮನವಿಯನ್ನು ಕೊಡುವುದಕ್ಕೆ ಬಂದಾಗ ಅವರ ಮೇಲೆ ಆ ರೀತಿಯಾಗಿ ಗುಂಡನ್ನು ಮತ್ತು ಟಿಯರ್ ಗ್ಯಾಸ್‌ನ್ನು ಹಾರಿಸುವಂತಹ ಮಟ್ಟಕ್ಕೆ ಹೋಯಿತು ಎಂದರೆ ಇವತ್ತು ಅಲ್ಪಸಂಖ್ಯಾತರಿಗೆ, ಈ ಸರ್ಕಾರದಲ್ಲಿ ರಕ್ಷಣೆ ಇಲ್ಲ. ಅದರಲ್ಲೂ ಕೂಡ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಅಧಿಕಾರದ ಅವಧಿಯಲ್ಲಿ ನಮಗೆ ನಿಜವಾಗಿಯೂ ರಕ್ಷಣೆಯು ಸಿಗುತ್ತದೆ ಎಂದು ಹೇಳಿ ನಿಮ್ಮನ್ನು ಹರಿಸಿ ಬಂದರೆ ಅವರಿಗೆ ಕೊಟ್ಟಿರುವಂತಹ treatmentನ್ನು ನೋಡಿದಾಗ ತಾವು ಈ ಬಗ್ಗೆ ಯೋಜನೆಯನ್ನು ಮಾಡಿ ಅಲ್ಪಸಂಖ್ಯಾತರಿಗೂ ರಕ್ಷಣೆ ಇಲ್ಲ. ರೈತರಿಗಂತೂ ಮೊದಲೇ ರಕ್ಷಣೆ ಇಲ್ಲ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಹೆಣ್ಣುಮಕ್ಕಳಿಗೂ ರಕ್ಷಣೆ ಇಲ್ಲ, ಅಲ್ಪ ಸ್ವಲ್ಪ ಎಲ್ಲೋ ಹೆಣ್ಣುಮಕ್ಕಳಿಗೆ ಹಿಂದೆ ಗೌರವವಿತ್ತು. ಇವತ್ತು ಹೆಣ್ಣುಮಕ್ಕಳಿಗೂ ರಕ್ಷಣೆ ಇಲ್ಲ. ಅಲ್ಪಸ್ವಲ್ಪ ಎಲ್ಲೋ ಹೆಣ್ಣುಮಕ್ಕಳಿಗೆ ಗೌರವವಿತ್ತು. ಅವರನ್ನು ಕೂಡ ಇವತ್ತು ಹರಾಜು ಹಾಕುವಂಥ ಮಟ್ಟಕ್ಕೆ ತಂದಿದ್ದಾರೆ ನಿಮ್ಮ ಸಂಘಟನೆಗಳು ಎಂದು ಹೇಳಿದರೆ ತಪ್ಪಾಗಲಾರದು. ನಿಮ್ಮ ದೃಷ್ಟಿ ಚುನಾವಣೆ ಮೇಲೆದೆ ಬಿಟ್ಟರೆ ರಾಜ್ಯದ ಜನರ ಹಿತದೃಷ್ಟಿಯ ಬಗ್ಗೆ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ದಯಮಾಡಿ, ಇವತ್ತು ತಪ್ಪು ಮಾಡಿರುವುದು ಗೃಹ ಸಚಿವರು ಇರಬಹುದು ಅಥವಾ ಅರವಿಂದ ಲಿಂಬಾವಳಿಯವರು ತಪ್ಪು ಮಾಡಿರಬಹುದು. ದಯಮಾಡಿ, ಇದು Cabinet responsibility. ಇದು ತಮ್ಮ ಸಚಿವ ಸಂಪುಟದ ಜವಾಬ್ದಾರಿಕೆಯಾಗುತ್ತದೆ. ದಯಮಾಡಿ, ಅವರಿಂದ ರಾಜೀನಾಮೆಯನ್ನು ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಿ. ನೀವು ಅವರ ರಾಜೀನಾಮೆಯನ್ನು ತೆಗೆದುಕೊಂಡು ಇವತ್ತು ನಿಮ್ಮ ಕುರ್ಚಿಗೆ, ನಿಮ್ಮ ಘನತೆಗೆ ಕುಂದು ಬರದೇ ಇರುವ ರೀತಿಯಲ್ಲಿ ಕೆಲಸವನ್ನು ನಿರ್ವಹಣೆ ಮಾಡಬೇಕು ಎನ್ನುವ ಮಾತನ್ನು ಆಸೆಯಿಂದ ಹೇಳುತ್ತಿದ್ದೇನೆ. ಇನ್ನು ಹೆಚ್ಚಿಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾಳೆ ಶಿರಾದಲ್ಲಿ ನಡೆಯತಕ್ಕಂಥ ಘಟನೆ ಬಗ್ಗೆ ವಿಶೇಷವಾದ ಗಮನ ಇರಬೇಕು ಎಂದು

ಹೇಳುತ್ತೇನೆ. ಆದರೆ, ಒಂದು ಕಡೆ ಪೋಲೀಸ್‌ನವರು refuse ಮಾಡುತ್ತಾರೆ. refuse ಮಾಡಿ ಎಂಟು ದಿವಸಗಳು ಆದಮೇಲೆ, ಏಕಾಏಕಿ ಕೊಡುತ್ತೇವೆ ಎಂದು ಹೇಳಿದ ಕಾಣದ ಕೈಗಳು ಏನಿಲ್ಲ. ಇಲ್ಲಿ ಗೃಹ ಸಚಿವರು interfere ಆಗಿರಬೇಕು, ಇಲ್ಲವೇ ಸಚಿವ ಸಂಪುಟದವರು ಆಗಿರಬೇಕು, ಇಲ್ಲವೇ ಮಾನ್ಯ ಮುಖ್ಯಮಂತ್ರಿಗಳು ಆಗಿರಬೇಕು. ಇದು ಏಕೆ ಹೀಗೆ ಆಗುತ್ತಿದೆ? ನಮ್ಮ ಕಣ್ಣೆದುರಿಗೆ ಆಗಿರುವಂಥ ದೃಷ್ಟಾಂತ, ನಿದರ್ಶನಗಳು ನಮ್ಮ ಮುಂದೆ ಇರಬೇಕಾದರೆ, ಸರ್ಕಾರ ಎಲ್ಲೋ ಒಂದು ಕಡೆ ರಾಜಕೀಯ ಮಾಡುತ್ತಿದೆ ಎಂದು ಹೇಳಬೇಕೋ ಅಥವಾ ಜನರ ರಕ್ಷಣೆ ಮಾಡುತ್ತಿದೆ ಎಂದು ಹೇಳಬೇಕೋ ಗೊತ್ತಾಗುತ್ತಿಲ್ಲ. ಬಹುಶಃ ಎಲ್ಲೋ ಒಂದು ಕಡೆ ನಾನು ನಿಮಗೆ ರಾಜೀನಾಮೆ ಕೊಡಿ ಎಂದು ಹೇಳುವ ಮಾತಲ್ಲ. ಆದರೆ, ನಿಮ್ಮ ಸಚಿವ ಸಂಪುಟದ ಸದಸ್ಯರು, ಈ ಎಲ್ಲದಕ್ಕೂ ಕೂಡ, ಇದು ಆಗಿರತಕ್ಕಂಥದ್ದು ಬರೀ ದಕ್ಷಿಣ ಕನ್ನಡ, ಕರಾವಳಿ ಪ್ರದೇಶದಲ್ಲಿ ಆಗಿರತಕ್ಕಂಥ ಸಂದರ್ಭದಲ್ಲಿ, ಎಲ್ಲೋ ಒಂದು ಕಡೆ ಅವರ ನಿರ್ಲಕ್ಷ್ಯ ಆಗಿರಬಹುದು ಹಾಗೂ omissions ಆಗಿರಬಹುದು. ಆ ಕಾರಣಕ್ಕೋಸ್ಕರ ಅವರ ರಾಜೀನಾಮೆಯನ್ನು ಪಡೆಯುವುದು ಸೂಕ್ತವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ಸ್ವಲ್ಪ ಮುಜುಗರಕ್ಕೆ ಒಳಗಾದರು. ನಾನು ನಿಮ್ಮ ರಾಜೀನಾಮೆಯನ್ನು ಕೇಳುವುದಿಲ್ಲ. ಅವರ ರಾಜೀನಾಮೆಯನ್ನು ಕೇಳುತ್ತೇನೆ ಎಂದು ಹೇಳಿದರು. ಏಕೆಂದರೆ, ಜಯಚಂದ್ರರವರು ಅವರ ಊರಿನ ಅಳಿಯರು. ಅದಕ್ಕೆ ಸ್ವಲ್ಪ ರಾಜೀನಾಮೆಯನ್ನು ಕೇಳುವುದಕ್ಕೆ ಮುಜುಗರ. ಆದರೆ, ನಾನು ಮಾತ್ರ ರಾಜೀನಾಮೆಯನ್ನು ಕೇಳುತ್ತೇನೆ.

ಅಧ್ಯಕ್ಷರು: ಜೆ.ಡಿ.ಎಸ್.ನಿಂದ ಒಬ್ಬರು ಮಾತನಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಜೆ.ಡಿ.ಎಸ್.ನವರಿಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಜೆ.ಡಿ.ಎಸ್.ನಿಂದ ಒಬ್ಬರು ಮಾತನಾಡಿ.

ಶ್ರೀ ಡಿ.ಕೆ.ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೇ ಒಂದು ಮನವಿ ಏನೆಂದರೆ ಅವರು ಚರ್ಚೆಯಲ್ಲಿ ಮಾತನಾಡಬೇಕಾದರೆ, ನಾವು ಇದನ್ನು misuse ಮಾಡಿಲ್ಲ, politicalize ಮಾಡಿಲ್ಲ ಎಂದು ಹೇಳಿದ್ದಾರೆ.. ನನ್ನ ಒಂದು simple request ಏನೆಂದರೆ, ನಾನು ಬೇರೆ ವಿಷಯ ಆಮೇಲೆ ತೆಗೆದುಕೊಳ್ಳುತ್ತೇನೆ. ಈ ಏನು ಅಭಿಯಾನ ಇದೆ ಅದರ ಬಗ್ಗೆ 2

ನಿಮಿಷಗಳ ಕಾಲ ಮಾತನಾಡುತ್ತೇನೆ. ಇದನ್ನು non-politicalize ಮಾಡಿದ್ದರೆ, ನನ್ನದು ಏನೂ ಅಭ್ಯಂತರವಿರಲಿಲ್ಲ. ಚುನಾವಣೆ ಆದಮೇಲೆ ಈ ಕಾರ್ಯಕ್ರಮ ಮಾಡಿದ್ದರೆ ಚೆನ್ನಾಗಿತ್ತು. ಏಕೆಂದರೆ, ಈಗ ಪರೀಕ್ಷೆಗಳ ಸಮಯ. ಟೀಚರ್ಸ್‌ಗೆ ತೊಂದರೆಯಾಗುತ್ತದೆ. ಈ semester systemನಲ್ಲಿ ಟೀಚರ್ಸ್ ಹಾಗೂ ಮಕ್ಕಳು ಎಷ್ಟು involve ಆಗಿರುತ್ತಾರೆ ಎಂದರೆ, ಅದು institutions ನಡೆಸುವವರಿಗೆ ಗೊತ್ತು ಮತ್ತು ಮಕ್ಕಳಿಗೆ ಗೊತ್ತು. ಈ ಸಂದರ್ಭದಲ್ಲಿ 15 ದಿನಗಳ process ಆಗಿ Vice chancellor ಇರಬಹುದು, ಎಲ್ಲವನ್ನು ಉಪಯೋಗಿಸಿ, ಮಾನ್ಯ ಮುಖ್ಯಮಂತ್ರಿಗಳು ನಾವು ಯಾರನ್ನೂ misuse ಮಾಡಿಕೊಂಡಿಲ್ಲವೆಂದು ಹೇಳುತ್ತಾರೆ. ಈಗ ನೀವು release ಮಾಡಿರುವಂತಹ advertisement ಕಳುಹಿಸಿಕೊಡುತ್ತೇನೆ, ನೀವು ಗಮನಿಸಿದ್ದೀರೋ ಇಲ್ಲೋ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, use ಮಾಡಿಕೊಂಡಿದ್ದಾರೆ. misuse ಮಾಡಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಮುಖ್ಯಮಂತ್ರಿಗಳೇ, ಏನು ನೀವು advertisement ಕೊಟ್ಟಿದ್ದೀರಿ ಅದು ಎಲ್ಲಾ ಪೇಪರ್‌ಗಳಲ್ಲೂ ಬಂತು. ಪಾಪ ಪೇಪರ್‌ನವರಿಗೂ ಅನುಕೂಲವಾಗಲಿ, ನಾನು ಬೇಡವೆಂದು ಹೇಳುವುದಿಲ್ಲ. ಎಲ್ಲಾ ಪೇಪರ್‌ನಲ್ಲೂ ಆಫೀಸರ್ಸ್ ಜೊತೆಗೆ, Vice chancellor ಜೊತೆಗೆ, Director ಹೆಸರು ಕೂಡ ಬಂತು. ನೀವು ಏನೋ ಅತಿಥಿಗಳು, ನೀವು ಎಲ್ಲರ ಹೆಸರನ್ನು ಹಾಕಿಸಿದ್ದೀರಿ. ಅದು ಇರಲಿ. ಪೇಪರ್‌ನ ಕೆಳಗಡೆಯೂ ಕೂಡ, ಪೇಪರ್‌ನ ಪ್ರತಿಯೊಂದು ಕಡೆಯೂ ಯಾರೋ Regional Committee ಮಾಡಿದ್ದಾರಲ್ಲಾ ಅವರು invitee. ಮೈಸೂರಿನ ರವಿ ಕುಮಾರ್, ಅವರು ಹೆಸರಿನಲ್ಲಿ ಅಧ್ಯಕ್ಷರು ಎಂದು ಮಾಡಿದ್ದಾರೆ. That is what I am telling you.

ಶ್ರೀ ಅರವಿಂದ ಲಿಂಬಾವಳಿ: ಸಮಿತಿ ಅಧ್ಯಕ್ಷರು ಎಂದು ಮಾಡಿದ ಮೇಲೆ ಅವರ ಹೆಸರು ಇರಬೇಕಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: You withdraw this Committee. ಚುನಾವಣೆ ಆದಮೇಲೆ ಮಾಡೋಣ. ನಾವೆಲ್ಲಾ ಸೇರಿ non-political ಆಗಿ ಮಾಡೋಣ. Campus saffronization ಮಾಡಬೇಡಿ. ವಿದ್ಯಾರ್ಥಿಗಳಲ್ಲಿ ಭಾಗ ಬೇಡ. ನಾವು ನಿಮ್ಮ ಜೊತೆ ಸೇರಿಕೊಳ್ಳುತ್ತೇವೆ. ಕ್ಯಾಬಿನೆಟ್‌ನಲ್ಲಿ ಇಟ್ಟಿದ್ದಾರೆ. ಐದು ಕೋಟಿ ಬರಬೇಕಾದರೆ, ಕ್ಯಾಬಿನೆಟ್‌ಗೆ ತರದೇ ಮಾಡುವುದಕ್ಕೆ ಆಗುವುದಿಲ್ಲ. ನನಗೆ ಅರ್ಥವಾಗುತ್ತದೆ. ಅವರೇನೋ order ಮಾಡಿರಬಹುದು, ಕಂಪನಿ ಮಾಡಿರಬಹುದು. ಆದರೆ, ಅದನ್ನು ಮಾಡಿ ಎನ್ನುವುದು ತಮಗೆ ಒಂದು request.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಒಪ್ಪಿಕೊಂಡಿದ್ದೇನೆ. ಅದೇ ರೀತಿ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ. ಕಾಂಗ್ರೆಸ್ಸಿನವರು ಮತದಾರರ ಪಟ್ಟಿ ಮಾಡಿದ್ದೀರಲ್ಲಾ, ಅದನ್ನು withdraw ಮಾಡಿಸುತ್ತೀರಾ? ನಿಮ್ಮ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನವರು ಒಂದು ಕಮಿಟಿ ಮಾಡಿದ್ದೀರಿ. ರಾಜೀವ್ ಗಾಂಧಿ ಯುವ ಶಕ್ತಿ ಸಂಘ. ಅದು ಪೂರಾ ಕಾಂಗೆಸ್‌ಮಯ. ನಾನು ಪಟ್ಟಿ ಕೊಡುತ್ತೇನೆ. ಒಂದು ನಿಮಿಷ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: I am telling you, see, that was a non-political. ನಾವು ಆಫೀಸರ್ಸ್‌ಗೆ ಬಿಟ್ಟು ಬಿಟ್ಟಿದ್ದೆವು. ಆದರೆ, ನೀವು ಆಫೀಸರ್ಸ್‌ಗೆ ಮಾಡುತ್ತಿಲ್ಲವಲ್ಲಾ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಪಟ್ಟಿಯನ್ನು ಓದುತ್ತೇನೆ. ರಾಜೀವ್‌ಗಾಂಧಿ ಯುವ ಶಕ್ತಿ ಸಂಘಗಳ ಅನುಷ್ಠಾನವನ್ನು . . . (ಗೊಂದಲ). ರಾಜೀವ್‌ಗಾಂಧಿ ಯುವ ಶಕ್ತಿ ಸಂಘಗಳ ಅನುಷ್ಠಾನವನ್ನು ಕಾಲಕಾಲಕ್ಕೆ ಪರಿಶೀಲಿಸಿ, ಸಲಹೆ ಸೂಚನೆಗಳನ್ನು ಇಡಲು ರಾಜ್ಯ ಸಮನ್ವಯ ಸಮಿತಿಯು ಕೆಳಕಂಡಂತೆ ಇರತಕ್ಕದ್ದು. ಡಿ.ಕೆ.ಶಿವಕುಮಾರ್, ಮಾನ್ಯ ನಗರಾಭಿವೃದ್ಧಿ ಸಚಿವರು, ಅಧ್ಯಕ್ಷರು. (ಗೊಂದಲ) ಸ್ವಲ್ಪ ನಾನು ಮಾತನಾಡುವವರೆಗೆ ಸುಮ್ಮನೆ ಕುಳಿತುಕೊಳ್ಳಿ. ಶ್ರೀಮತಿ ಮೋಟಮ್ಮ. (ಗೊಂದಲ) ಆರ್.ಬಿ.ತಿಮ್ಮಾಪುರ್, ಎಸ್.ಕುಮಾರ್ ಬಂಗಾರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್, ಎಸ್.ಸಿ.ವೇಣುಗೋಪಾಲ್, ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ. (ಗೊಂದಲ). ಹೇಳುತ್ತೇನೆ. ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಡಿ.ಕೆ.ಶಿವಕುಮಾರ್: ಅವರು ಛೇರ್‌ಮನ್ ಆಗಿರುವುದಕ್ಕೆ ನಾನು ಪ್ರಶ್ನೆ ಮಾಡುತ್ತಿಲ್ಲ. ನಿಮ್ಮ ಭಜರಂಗದಳದವರು, ABVP ಹೆಸರನ್ನು ಬಿಡಬೇಕಾಗಿತ್ತು ಎಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ಸ್ವಲ್ಪ ನಾನು ಹೇಳುವುದನ್ನು ಕೇಳಿ, ಮಾನ್ಯ ಜಯಚಂದ್ರರವರೇ, ಸ್ವಲ್ಪ ಸುಮ್ಮನಿರಿ. ನಾನು ಹೇಳುತ್ತಿರುವುದೇನೆಂದರೆ, ನಿಮ್ಮ ಸರ್ಕಾರ ಇರುವಂತಹ ಸಂದರ್ಭದಲ್ಲಿ ನಿಮಗೆ ಯಾರ್‍ಯಾರು ಬೇಕು ಅವರನ್ನು ನೀವು ಹಾಕಿಕೊಂಡಿದ್ದೀರಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: We will do it. ನೀವು withdraw ಮಾಡಿ. ನಾವು ಏನು ವಿರೋಧ ಮಾಡಬೇಕೋ ಅದನ್ನು ಮಾಡುತ್ತೇವೆ. ಆಮೇಲೆ ತೋರಿಸುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನೀವು ಅಷ್ಟೇ ಅಲ್ಲ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಇನ್ನೂ ಬದುಕಿದೆಯಲ್ಲಾ, ಮೊದಲು ನೀವೆಲ್ಲರೂ ಒಟ್ಟಾಗಿ. ಆದರೆ, ನೀವು ಒಟ್ಟಾಗುವುದಿಲ್ಲವೆಂದು ನನಗೆ ಗೊತ್ತು. ಇದರ ಬಗ್ಗೆ ಎಲ್ಲರೂ ಒಟ್ಟಾಗಿ ವಿರೋಧ ಮಾಡಿದರೂ ಕೂಡ ರಾಜ್ಯದಲ್ಲಿರುವಂಥಾ ಯುವಕರು ರಾಷ್ಟ್ರಭಕ್ತಿಯನ್ನು ಖಂಡಿತವಾಗಿ ತೋರಿಸುತ್ತಾರೆ. ಇದರಲ್ಲಿ ನೀವು ಯಾವ ಅನುಮಾನವನ್ನು ಇಟ್ಟುಕೊಳ್ಳಬೇಡಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಈಗ ನಾನು main subjectಗೆ ಬಂದು ಬಿಡುತ್ತೇನೆ. ಈಗ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ ನಿಜ. ತಾವು Adjournment motion ನಲ್ಲಿ ಈ ವಿಷಯಕ್ಕೆ ಅವಕಾಶವಿಲ್ಲವೆಂದು ನಿಯಮ 69ರ ಮೇರೆಗೆ discussionಗೆ permission ಕೊಟ್ಟಿದ್ದೀರಿ. ಇಲ್ಲಿ Industries Minister ಇದ್ದಾರೆ. ಆದರೆ, ಮಾನ್ಯ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಇಲ್ಲ, ಎಲ್ಲೋ ಹೊರಗಡೆ ಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಆದ್ದರಿಂದ, ಇವರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಅಟಲ್ ಬಿಹಾರಿ ವಾಜಿಪೇಯಿ ರವರು ಅಂತರಾಷ್ಟ್ರೀಯ ವಿಮಾನನಿಲ್ದಾಣದ foundation lay ಮಾಡುವಂಥ ಸಂದರ್ಭದಲ್ಲಿ ಮತ್ತು ಕೆ.ಆರ್.ಪುರಂ ಕ್ಷೇತ್ರದ ಒಂದು ಬ್ರಿಡ್ಜ್ open ಮಾಡುವಂಥ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಿದ್ದರು. ಆ ಸಂದರ್ಭದಲ್ಲಿ ಅವರು ವಿಧಾನಸೌಧದ ಕೆಳಗಡೆ ಹಾಲ್‌ಗೆ ಒಂದು ಸಲ ಬಂದಿದ್ದಾಗ ಏನು ಹೇಳಿದ್ದಾರೆಂದರೆ, ಆವತ್ತಿನ ಕಾಲದಲ್ಲಿ, the world leaders – ಚೈನಾ ಪ್ರಧಾನಮಂತ್ರಿಗಳು, ಜಪಾನ್ ಪ್ರಧಾನಮಂತ್ರಿಗಳು, ಪೋಲ್ಯಾಂಡ್ ಪ್ರಧಾನಮಂತ್ರಿಗಳು, ಬ್ರಿಟೀಷ್ ಪ್ರಧಾನ ಮಂತ್ರಿಗಳು ಇವರೆಲ್ಲರೂ ಕೂಡ, ಮೊದಲು ರಾಷ್ಟ್ರದ headquarter ಆದ ರಾಜಧಾನಿಯಾದ ದೆಹಲಿಗೆ ಬರುತ್ತಿದ್ದರು. ದೆಹಲಿಗೆ ಬಂದ ನಂತರ ಬೇರೆ ರಾಜ್ಯಗಳಿಗೆ ಹೋಗುತ್ತಿದ್ದರು. ಆದರೆ, ಈಗ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಮೊದಲು ಬೆಂಗಳೂರಿಗೆ ಬಂದು ನಂತರ ಬೆಂಗಳೂರಿನಿಂದ ಹೊರಗಡೆಗೆ ಹೋಗುತ್ತಿದ್ದಾರೆ ಎನ್ನುವ ಮಾತನ್ನು ಮಾನ್ಯ ವಾಜಪೇಯಿಯವರು ಹೇಳಿದ್ದರು. ಏಕೆಂದರೆ, ಅವತ್ತಿನ ಕಾಲದಲ್ಲಿ ಸರ್ಕಾರ ಮತ್ತು ಆವತ್ತಿನ ಕಾಲದ ಅನೇಕ ಖಾಸಗಿ ಸಂಸ್ಥೆಗಳು ಎಲ್ಲಾ ಸೇರಿ ಈ ರೀತಿ ಬೆಂಗಳೂರನ್ನು ಅಭಿವೃದ್ಧಿ ಮಾಡಿದ್ದಾರೆ ಎನ್ನುವ ವಿಚಾರವನ್ನು ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಗಳೇ, ನಾನು ಮೊನ್ನೆ ಒಂದೆರಡು–ಮೂರು ದಿನ ಹೊರಗಡೆ

ರಾಜ್ಯಗಳಾದ ದೆಹಲಿ, ಹೀಗೆ ಬೇರೆ ಬೇರೆ ಸ್ಥಳಗಳಿಗೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿರುವ ಸಂದರ್ಭದಲ್ಲಿ, Airhostess ಯಾವ magazines ಬೇಕು ಎಂದು ಕೇಳಿದರು. ಆಗ ಎಲ್ಲಾ magazines ಅನ್ನು ಕೊಡಿ ನೋಡೋಣ ಎಂದು ಹೇಳಿದೆ. ಆಗ ಎಲ್ಲಾ magazines ಕೊಟ್ಟರು. ನಾನು ತಮಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ತಮ್ಮದು ಒಂದು ಬಲಿಷ್ಠವಾದಂಥ ಸರ್ಕಾರ, majority ಇದೆ. ನಿಮ್ಮ majority ಬಗ್ಗೆ, ನಿಮ್ಮ popularity ಬಗ್ಗೆ, ನಿಮ್ಮ commitment ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ನಿಮಗೆ ಆಫೀಸರ್ಸ್, media friends, relatives ಇದ್ದಾರೆ, ಮತ್ತೆ ಹೊರಗಡೆ ದೇಶದ ಜನರಿದ್ದಾರೆ, ಎಲ್ಲರೂ ಇದ್ದಾರೆ. ಆದ್ದರಿಂದ, ನಾನು ತಮಗೆ ಹೇಳುವುದೇನೆಂದರೆ, ನನ್ನ ಸರ್ಕಾರದ ಬಗ್ಗೆ ಜನರು ಏನು ಮಾತನಾಡುತ್ತಾರೆ? ನನ್ನ ಪರಿಸ್ಥಿತಿ ಏನಿದೆ? ಈ ರಾಜ್ಯದ ಪರಿಸ್ಥಿತಿ ಏನಿದೆ? ಎಂದು ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕಡೆ ಇರುವ ನಿಮ್ಮ ಸ್ನೇಹಿತರನ್ನು ಒಂದು ಸಣ್ಣ ಪ್ರಶ್ನೆ ಕೇಳಿ? ತಾವು Just ಒಂದು ಬಾರಿ ಆಲೋಚನೆ ಮಾಡಬೇಕು. ಇವತ್ತಿನ ದಿವಸ, ಒಂದೇ magazine ಅಲ್ಲದೆ, ಸುಮಾರು ಐದಾರು magazineಗಳನ್ನು ನಾನು ನೋಡಿದ್ದೇನೆ.

7-00PM

ಒಂದಲ್ಲ ಐದಾರು ಮ್ಯಾಗಜೀನ್‌ಗಳನ್ನು ನೋಡಿದ್ದೇನೆ. ಅದರಲ್ಲಿ ಒಂದು Outlook. The Talibanisation of Karnataka ಎನ್ನುವುದು first. ಅಲ್ಲಿ ಏನನ್ನು ಹೇಳುತ್ತಾರೆಂದರೆ, The Karnataka Chief Minister Mr.B.S.Yeddyurappa's new year card as a seldom wish. He hope 2009 will be free from violence, hope that peace would flourish, it now appears that it was purely a personal wish, not that of his Government or party or largest saffron parivara he belongs to. Judging by the recent events IT seems to be becoming new basin of Industries and commerce. What led up to this and what is next? ಎಂದು ಪ್ರತಿಯೊಂದು ವಿಚಾರದಲ್ಲೂ ಕೂಡ, ತಾವು ಅದನ್ನು ತೆಗೆದು ಓದಿ. ನೀವೇ ಹೇಳುತ್ತೀರಿ no major crimes and law and order problems during my rule ಎಂದು ಹೇಳಿಕೊಂಡು ಅವರು ಕೊನೆಗೆ ನಿಮ್ಮ ಸರ್ಕಾರವನ್ನು ಹೇಗೆ ಬಿಂಬಿಸುತ್ತಿದ್ದಾರೆಂದರೆ, no mixing with muslims, no converting, no preaching, no pubbing, no media freedom, no party, no dancing in the dark, no living partners, no holding hands, ಇದು ಒಂದು ಮ್ಯಾಗಜೀನ್‌ನಲ್ಲಿರುವುದು. Frontline ತೆಗೆದುಕೊಳ್ಳಿ, Taliban in saffron.

ಅದನ್ನು ಬೇಕಾದರೆ ತೆಗೆಸಿ ನೋಡಿ. ಈ ಎಲ್ಲಾ ಮ್ಯಾಗಜೀನ್‌ಗಳನ್ನು ನಿಮಗೆ ಕಳುಹಿಸುಕೊಡುತ್ತೇನೆ. ಒಂದು Outlook, ಇನ್ನೊಂದು Frontline. ನೀವು The Week ಮ್ಯಾಗಜೀನ್ ನೋಡಿ. ಮಂಗಳೂರು ಘಟನೆ, Safronisation, vulganaisism, ruling the academic mood in the Mangalore colleges, ಇದರ ಬಗ್ಗೆ ದೊಡ್ಡ ಇತಿಹಾಸವಿದೆ. ಅದರ ಒಳಗಡೆ ಏನೇನಿದೆ ABVP is demanding a ban on burkhas in the colleges. They say that the parents of this girl who are beaten in Amazea have said that they deserve the thrashing. ಇವೆಲ್ಲಾ vote bank politics ಎಂದು Frontline ಅವರು ಬರೆದಿದ್ದಾರೆ. ಇದನ್ನೆಲ್ಲಾ ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಕರ್ನಾಟಕದ ಇಮೇಜ್. ಹಿಂದೆ global investors meeting ಮಾಡಿದರು. ತಾವು ಮೊನ್ನೆ ತಾನೆ ಮೀಟಿಂಗ್ ಮಾಡಿದಿರಿ. ಮಂಗಳೂರಿನಲ್ಲಿ ಮಣಿಪಾಲ ಸೆಂಟರ್ ಇಷ್ಟೊಂದು ಬೆಳೆದಿದೆ ಎಂದರೆ, ಅಲ್ಲಿರುವಂತಹ ಬ್ಯಾಂಕ್, ಕಾಲೇಜು institutionsಗಳಿಂದ, ಅಲ್ಲಿರುವ ವಿದ್ಯಾ ಸಂಸ್ಥೆಗಳಿಂದ. ಬೆಂಗಳೂರು ಇಷ್ಟರ ಮಟ್ಟಿಗೆ ಬೆಳೆದಿದೆಯೆಂದರೆ ಇಲ್ಲಿರುವಂತಹ basic education institutions ಗಳಿಂದ. ಕೇವಲ ಕರ್ನಾಟಕ ರಾಜ್ಯದವರಲ್ಲ, ಹೊರಗಡೆ ರಾಜ್ಯದವರು ಬಂದು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವತ್ತು ಐಟಿ-ಬಿಟಿ ಸಂಸ್ಥೆಗಳು ಬೆಂಗಳೂರಿನಲ್ಲಿ ನಡೆಯುತ್ತಿವೆ. ನಮ್ಮ ಇಂಜಿನಿಯರ್ಸ್ ಇದ್ದರೂ ಕೂಡ, ನಮ್ಮ ಇಂಜಿನಿಯರ್ಸ್‌ನ್ನು human resources ಹೊರಗಡೆ transfer ಮಾಡುತ್ತಿದ್ದೇವೆ. ಹೊರಗಡೆ ರಾಜ್ಯದಿಂದ ಬಂದು ಇವತ್ತು ಲಕ್ಷಾಂತರ ಮಂದಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಪರಿಸ್ಥಿತಿ ಏನಾಗಿದೆಯೆಂದರೆ ಎಲ್ಲಾ ಕಡೆ new let, ಮತ್ತೊಂದು ಇವೆಲ್ಲಾ ಆಗಿ, ಕಳೆದ ಏಳು ತಿಂಗಳಿನಿಂದ ಮೊನ್ನೆ ಕಮಿಟಿಯಲ್ಲಿ ಏನು ಒಂದಿಷ್ಟು announcement ಮಾಡುವುದನ್ನು ಬಿಟ್ಟರೆ, ಯಾರೂ ಕೂಡ investors ಈ ರಾಜ್ಯಕ್ಕೆ ಬರಲು ತಯಾರಿಲ್ಲ No Investor has come. ಯಾರಿಗೂ ಇಲ್ಲಿ ಸಮಾಧಾನವಿಲ್ಲ. ಇದು ಒಂದು popular Government. ಹಿಂದೆ ಸರ್ಕಾರದಲ್ಲಿ difference ಇತ್ತು. Two party rule ಇತ್ತು. ಅದು ಬೇರೆ ವಿಚಾರ. ಆದರೆ, ನೀವೆಲ್ಲಾ ಒಗ್ಗಟ್ಟಾಗಿದ್ದೀರಿ. ನಿಮ್ಮದೊಂದು ರಾಷ್ಟ್ರೀಯ ಪಕ್ಷವಿದೆ. ರಾಷ್ಟ್ರೀಯ ಪಕ್ಷದವರಿಗೆ ಒಂದು ಆದೇಶವಿರುತ್ತದೆ. ರಾಷ್ಟ್ರೀಯ ಚಿಂತನೆ ಇರುತ್ತದೆ. ಅಂತಹ ಚಿಂತನೆ ಇರುವಂತಹ ಸಂದರ್ಭದಲ್ಲಿ ಇವತ್ತು ಪೋಲೀಸ್ ಬಗ್ಗೆ ಗೌರವ ಇಲ್ಲ, bureaucracy ಬಗ್ಗೆ ಗೌರವವಿಲ್ಲ, ಆಡಳಿತದ ಬಗ್ಗೆ ಗೌರವವಿಲ್ಲ, ಸರ್ಕಾರದ ಬಗ್ಗೆ ಗೌರವವಿಲ್ಲ. ಏಕೆಂದರೆ, ವಿಶ್ವಾಸವನ್ನು ವ್ಯಕ್ತಪಡಿಸಲಿಲ್ಲವೆಂದರೆ, ಹೊರಗಡೆಯಿಂದ ಬಂದು ರಾಜ್ಯದಲ್ಲಿ ಹಣವನ್ನು ಹಾಕಲಿಲ್ಲವೆಂದರೆ ಹೇಗೆ? ನಮ್ಮ ಹಳ್ಳಿಗಳಲ್ಲಿ ಯಾರೂ

ತೆರಿಗೆ ಕಟ್ಟುವುದಿಲ್ಲ. What I am trying to say is ಈ ರಾಜ್ಯ ಬೆಳೆಯಬೇಕು. ಈ ರಾಷ್ಟ್ರದ 33% ರಷ್ಟು tax payers ಕರ್ನಾಟಕ ರಾಜ್ಯದಲ್ಲಿದ್ದಾರೆ. ಮಹಾರಾಷ್ಟ್ರವನ್ನು ಬಿಟ್ಟರೆ, Karnataka is the second highest tax paying state. ಇದರ ಪಾವಿತ್ರತೆ ಹಾಳಾಗಬಾರದು, ರಾಜ್ಯ ಬೆಳೆಯಬೇಕು. ರಾಷ್ಟ್ರ ಬೆಳೆಯಬೇಕು. ನೀವು ಮಾಡಿ, ನಾನು ಹೇಳುವುದೆಲ್ಲಾ ಸರಿ ಎಂದು ಹೇಳುತ್ತಿಲ್ಲ. It is a bit of advise, a small suggestion to the Hon'ble Chief Minister. ನನ್ನದೇನು ಅಭ್ಯಂತರವಿಲ್ಲ. ನಾನು attack ಮಾಡಿ ರಾಜೀನಾಮೆ ಕೊಡಿ ಎಂದು ಹೇಳುತ್ತಿಲ್ಲ. ಈ ರಾಜ್ಯದ ಗೌರವ ಹಾಳಾಗುತ್ತಿದೆ. ರಾಜ್ಯದ ಮೇಲೆ ನಂಬಿಕೆ ಹೋಗುತ್ತಿದೆ. ಪೊಲೀಸ್ ಆಡಳಿತದ ಬಗ್ಗೆ ನಂಬಿಕೆ ಹೋಗುತ್ತಿದೆ. ಒಳ್ಳೊಳ್ಳೆ ಆಫೀಸರ್ಸ್ ರಾಜ್ಯದಲ್ಲಿ ಹೆಸರನ್ನು ಪಡೆದಿದ್ದಾರೆ. ಮಂಗಳೂರು ಘಟನೆಗೆ ಯಾರೋ ಒಬ್ಬ small officer ನನ್ನೋ, ಪ್ರಸಾದ್‌ರವರನ್ನೋ ಅಥವಾ ಇನ್ನೊಬ್ಬ ಐ.ಜಿ.ಯವರನ್ನು ಕಳುಹಿಸಿಬಿಟ್ಟರೆ ಏನು ನಡೆಯುವುದಿಲ್ಲ. Economy world ನಲ್ಲಿ ಆಗಿದೆ. ಇವತ್ತು Indian economy ಬ್ಯಾಂಕಿನ ರಾಷ್ಟ್ರೀಕರಣ, ಡಾ.ಮನಮೋಹನ ಸಿಂಗ್ ಅವರು ಮಾಡಿದಂತಹ ಪಾಲಿಸಿಗಳು ಅಷ್ಟೋ ಇಷ್ಟೋ ನಿಂತಿದೆ. ಅದೇ ಪಾಲಿಸಿಯನ್ನು ಸನ್ಮಾನ್ಯ ದೇವೇಗೌಡರು, ಗುಜ್ರಾಲ್ ಅವರು, ವಾಜಪೇಯಿ ಅವರು continue ಮಾಡಿದರು. ಇವತ್ತು ಕೂಡ ಪಾಲಿಸಿಗಳಿವೆ. ಆದರೆ, ಈ ರಾಜ್ಯ it is a peace loving state. ರಾಜ್ಯವನ್ನು ಇಡೀ ವಿಶ್ವವೇ ನೋಡುತ್ತಿದೆ. International Market ಅನ್ನು ತೆಗೆದುಕೊಳ್ಳಿ, ಇವತ್ತು ಅವರಿಗೆ ಭಾರತ ದೇಶ ಗೊತ್ತಿಲ್ಲ. ಬೆಂಗಳೂರು ಎಲ್ಲಿದೆ ಎನ್ನುವುದು ಗೊತ್ತು. ಅಂತಹ ಸಂದರ್ಭದಲ್ಲಿ ಈ ರಾಜ್ಯ ಹಾಳಾಗಬಾರದು. ಈ ರಾಜ್ಯವನ್ನು ಕಾಪಾಡಬೇಕು. ನಮ್ಮಲ್ಲಿರುವಂತಹ ಪ್ರಾಥಮಿಕ ಶಿಕ್ಷಣ, ನಮ್ಮಲ್ಲಿರುವಂತಹ ಭಾಷೆ, ನಮ್ಮಲ್ಲಿರುವಂತಹ ಮಕ್ಕಳು ಏನು ಕಲಿತ್ತಿದ್ದಾರಲ್ಲಾ, ಇಡೀ ಪ್ರಪಂಚದಲ್ಲಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಹೋಗಿ, You go to any university in the world, ಅಲ್ಲಿ vice-chancellor ಮಾತ್ರ white ನವರು ಇರಬಹುದು. ಆ ದೇಶದವರು ಇರಬಹುದು. 2nd , 3rd and 4th level ಇವರೆಲ್ಲರೂ ನಮ್ಮ ಭಾರತೀಯರು. ನಮ್ಮ ಬೆಂಗಳೂರಿನವರು, ನಮ್ಮ ಕರ್ನಾಟಕದವರು, ಎಲ್ಲರೂ ಕುಳಿತುಕೊಂಡು ಬೆಂಗಳೂರನ್ನು ನೋಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸಂತೋಷದಿಂದ ನಾಳೆ ಬೆಳಿಗ್ಗೆ ಬಜೆಟ್ ಮಂಡಿಸುತ್ತಿದ್ದಾರೆ. Income ಎಷ್ಟಿತ್ತು? ಹಿಂದೆ ಏನಿತ್ತು? ಈಗ ಪಬ್, ಯಾವ ಪಬ್? ಪಬ್ ಸರಿಯಿಲ್ಲವೆಂದರೆ, ಬ್ಯಾನ್ ಮಾಡಿ. You come out with the Legislation. ಯಾರು ಬೇಡವೆಂದು ಹೇಳುತ್ತಾರೆ? ಆದರೆ, ಮೊನ್ನೆ ತಾನೇ renewal ಮಾಡಿದ್ದೀರಿ. ಈಗ pub culture

ಎಂದರೇನು ನಮ್ಮ ಹಳ್ಳಿಯಲ್ಲಿ ಜನರು ಕುಳಿತುಕೊಂಡು ಸಾರಾಯಿ ಕುಡಿಯುವ ರೀತಿಯೇ? ಬೆಳಿಗ್ಗೆ 8 ಗಂಟೆಗೆ wine shop open ಆಗುತ್ತದೆಯಲ್ಲಾ, ಅದಕ್ಕೆ ಒಂದು modern ಆಗಿ ಹೆಸರನ್ನು ಕೊಡಲಾಗಿದೆ. ಹೊರಗಡೆಯಿಂದ ಇಲ್ಲಿಗೆ ಬರುವವರು ಇಲ್ಲಿ ಕೆಲಸ ಮಾಡಲು ಆಸಕ್ತಿಯಿಂದ ಬರಬೇಕು, ನಡೆಯಬೇಕು, ಪ್ರೀತಿ ಇರಬೇಕು, ವಿಶ್ವಾಸ ಇರಬೇಕು. ನಮ್ಮ ಹಳ್ಳಿಯಲ್ಲಿ ನಾನು ತೆರಿಗೆ ಕಟ್ಟುವುದಿಲ್ಲ. ನಮ್ಮ ತಂದೆ–ತಾಯಿಯವರು ಏನೋ ಒಂದು small water tax ಅಥವಾ ಮತ್ತೊಂದನ್ನು ಕಟ್ಟಬಹುದು. ಒಂದು 20 ರೂಪಾಯಿ ಕಟ್ಟಬಹುದು. ಇಡೀ ರಾಜ್ಯ ನಡೆಯುತ್ತಿರುವುದು ಬೆಂಗಳೂರಿನ ಜನರಿಂದ. It is the heart. ಬೆಂಗಳೂರು ಇಡೀ ಕರ್ನಾಟಕ ರಾಜ್ಯದ ಹೃದಯ. ಇದು ನಿಂತು ಹೋಯಿತೆಂದರೆ, ಇಡೀ ರಾಜ್ಯವೇ ನಿಂತು ಹೋಗುತ್ತದೆ. ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ನಮಗೆ ಹಣ ಸಿಗುವುದಿಲ್ಲ. ಅದಕ್ಕೋಸ್ಕರ ನಮ್ಮ ಇಮೇಜ್ ಏನೆಂದರೆ, This Government will be there for the next four and a half years. The country's economy should not fall. ಏಕೆಂದರೆ 33% ತೆರಿಗೆ ಕರ್ನಾಟಕದಿಂದ ಹೋಗುತ್ತಿದೆ. Prime Minister is concerned, the world is concerned. ಅದಕ್ಕೋಸ್ಕರ ಹಿಂದೆ ಸೆಪ್ಟೆಂಬರ್ 11 ರ ಘಟನೆ ಆದಂತಹ ಸಂದರ್ಭದಲ್ಲಿ ಇಡೀ ಪ್ರಪಂಚದಲ್ಲಿ, ಹೊರಗಡೆ ದೇಶದವರಿಂದ ಒಂದು ಕಮಿಟಿ set-up ಆಯಿತು. ಕಮಿಟಿ set-up ಆದನಂತರ ಏನು institutions ಮಾಡಬೇಕು? ಏನು ಮಾಡಬೇಕೆಂದು ಆಯಿತು. Muslim dominated countriesನಲ್ಲಿ businessmen ಕಡಿಮೆಯಾದರು. ಅಲ್ಲಿಂದ ಶಿಫ್ಟ್ ಆಗಬೇಕಾಯಿತು. ಎಲ್ಲಿಗೆ ಶಿಫ್ಟ್ ಆದರು ಗೊತ್ತೆ? They all came to Bangalore. ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಇಲ್ಲಿ 16 educational institutions, international Schools ಸ್ಥಾಪನೆಯಾಯಿತು. ಏಕೆಂದರೆ, ಅಲ್ಲಿ foreigners ಬರುತ್ತಾರೆ, ಆ ಮಕ್ಕಳಿಗೆ ಅವಕಾಶ ಸಿಗಬೇಕು. ಅಂತಹ ಒಂದು ದೊಡ್ಡ ಬೆಳವಣಿಗೆ ಬೆಂಗಳೂರಿನಿಂದ ಆಗುತ್ತಿದೆ. ಇಲ್ಲಿ ಒಂದು ಸಾವಿರ ರೂಪಾಯಿ ಇದ್ದಿದ್ದು ಹತ್ತು ಸಾವಿರ ರೂಪಾಯಿಯಾಯಿತು. ಎರಡು ಸಾವಿರ ರೂಪಾಯಿಗೆ ತೆಗೆದುಕೊಂಡ ಆಸ್ತಿ 25 ಸಾವಿರ ರೂಪಾಯಿ ಆಯಿತು. ಏಕೆ ಆಯಿತು? ಹೊರಗಡೆಯಿಂದ ಜನರು ಬಂದಿದ್ದರಿಂದ. ನಮ್ಮ ಜನಕ್ಕೂ ಜಾಸ್ತಿ ಅನುಕೂಲವಾಯಿತು. ಈಗ ಪರಿಸ್ಥಿತಿ ಏನಾಗುತ್ತಿದೆ? ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಬೇಕು. ಏಕೆಂದರೆ, ಹಿಂದಿನ ಮೂರು ದಿನಗಳ ಪತ್ರಿಕೆಯನ್ನು ನೋಡಿ, ಅದರಲ್ಲಿ ಮನೆ ಮಾಲೀಕರನ್ನು ಕಟ್ಟಿ ಹಾಕಿ ದರೋಡೆ, ಮತ್ತೆ ಕಾಡಿದ ಅಭದ್ರತೆ, ಎಂಟು ಕೋಟಿಗಾಗಿ ವೈದ್ಯನ ಕೊಲೆ, ಆರ್.ಟಿ.ನಗರದಲ್ಲಿ ಒಂದೇ ಕುಟುಂಬದ ಮೂರು ಮಹಿಳೆಯರ ಕೊಲೆ, ಹಣ

ಕೊಟ್ಟು ಪಬ್ ಮೇಲೆ ದಾಳಿ, ಮೊದಲನೆಯ ತಲೆದಂಡ ಇದು ಯಾವುದೋ ವಿದ್ಯಾರ್ಥಿಯದ್ದು, ಜೆ.ಪಿ.ನಗರ ಪೊಲೀಸ್ ಐವರ ಕೊಲೆ, ಆರೋಪಿ ಬಂಧನ, ಚಿನ್ನ ಲೂಟಿ, ಹಣ, ಚಿನ್ನಕ್ಕಾಗಿ ವೈಯರ ಕೊಲೆ, ಕಲ್ಲು ಎತ್ತು ಹಾಕಿ ವಿಜ್ಞಾನಿಯ ಹತ್ಯೆ, ಪೊಲೀಸ್ ಹೆಸರಿನಲ್ಲಿ ಸುಲಿಗೆ. What I am going to tell is ಈ image. . . . ಒಂದು ನಿಮಿಷ ಮುಗಿಸಿಬಿಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು): ಎಲ್ಲಿ ಚರ್ಚೆಯಾಗಬೇಕೆಂದರೆ, ಅವರು ಬಹಳ ಒಳ್ಳೆಯ ದಾರಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. Positive ಆಗಿ ತೆಗೆದುಕೊಂಡು ಹೋಗುತ್ತಿದ್ದಾರೆ. Healthy ಚರ್ಚೆಯಾಗಬೇಕು. ನೀವು ಇದ್ದಿದ್ದನ್ನು ಹೇಳಿಕೊಂಡು ಹೋಗುತ್ತಿದ್ದರೆ ಏನು ಪ್ರಯೋಜನವಾಗುವುದಿಲ್ಲ. ನಾವು ಹಾಗೆ ಮಾಡಬಾರದು. ನೀವು ಹಾಗೆ ಮಾಡಬಾರದು. ಮಾನ್ಯ ಡಿ.ಕೆ.ಶಿವಕುಮಾರ್ ಅವರು ಬೆಂಗಳೂರಿನ ಬಗ್ಗೆ ಇರುವಂತಹ ಕಳಕಳಿ, economic activities, investment ಇದರ ಬಗ್ಗೆ ನಾವು ಕೂಡ ಒಪ್ಪಿಕೊಳ್ಳುತ್ತೇವೆ. ಇದರ ಬಗ್ಗೆ ಎರಡು ಮಾತಿಲ್ಲ. Investors ಬರಬೇಕು, invest ಮಾಡಬೇಕು. Economic activity ಆಗಬೇಕು. Economic activity ಯಿಂದ ಬಹಳಷ್ಟು cascading effect ಆಗುತ್ತದೆ, Employment generation ಆಗುತ್ತದೆ, Macro economy ಯಿಂದ Micro economy ಕೂಡ ಬೆಳೆಯುತ್ತದೆ. ಅದಕ್ಕೆ ತಕ್ಕಂತೆ ಶಿಕ್ಷಣವಿರಬೇಕು. ನೀವು ಕ್ರೈಮ್ ಬಗ್ಗೆ ಹೇಳಿದ್ದೀರಲ್ಲಾ, ತಾವು ಸೂಕ್ಷ್ಮವಾಗಿ ಗಮನಿಸಿ ಇಪ್ಪತ್ತು ವರ್ಷಗಳ ಹಿಂದೆ ಇದ್ದಂತಹ ಬೆಂಗಳೂರು, ಬೆಂಗಳೂರಿನಲ್ಲಿ economic activity ಏನು development ಆಗಿದೆ. ಹೊರಗಡೆಯವರು ಬಂದ ಮೇಲೆ ಬೆಂಗಳೂರು ಏನಾಗಿದೆ. ಎಲ್ಲಿ economy develop ಆಗುತ್ತದೆಯೋ ಅಲ್ಲಿ crime develop ಆಗುತ್ತದೆ. It is an international phenomena. Healthy debate ಆಗಬೇಕೆಂದು ಮಾತನಾಡುತ್ತಿದ್ದೇನೆ. ಶಬ್ದ ಕೋಷ್ಟಕದಲ್ಲಿ ಸರಿಯಾದ ಅರ್ಥವಿರುತ್ತದೆ, ಅಪಾರ್ಥವೂ ಇರುತ್ತದೆ. ಎಲ್ಲಾ ಅಪಾರ್ಥ ಮಾಡಿಕೊಂಡರೆ ಮಾತುಕತೆ ಮಾಡುವುದೇ ಬೇಕಿಲ್ಲ. ನಾನು ಸಮರ್ಥನೆ ಮಾಡುತ್ತಿಲ್ಲ. ನಾನು ಸಮರ್ಥಿಸುತ್ತಿಲ್ಲ. ಪ್ರಶ್ನೆ ಏನೆಂದರೆ, ಇವತ್ತು ನಾವು ಅದಕ್ಕೆ ತಯಾರಾಗಿರಬೇಕು. Economic activitiesಗೆ ಬರುವಾಗ ಅವರು ಸುಮ್ಮನೆ ಬರುವುದಿಲ್ಲ. ಬದಲಾಗಿ ಲಾಭಕ್ಕಾಗಿಯೇ ಬರುತ್ತಾರೆ. ಇವತ್ತು ಇನ್‌ವೆಸ್ಟ್‌ಮೆಂಟ್ ಎಷ್ಟು ಬಂದಿದೆ ಎಂದು.... ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಏನಿತ್ತು? ಕಾಂಗ್ರೆಸ್‌ನಲ್ಲಿ ಏನಿತ್ತು? ಅವತ್ತು ಮೆಜಾರಿಟಿಯಲ್ಲಿದ್ದ ಸರ್ಕಾರದಲ್ಲಿ ಏನಿತ್ತು? ಇವತ್ತಿನ ಸರ್ಕಾರದಲ್ಲಿ ಇಂದಿನ ರೂಪಾಯಿ ಮೌಲ್ಯದಲ್ಲಿ..... ನಾನು ಅವತ್ತಿನ ರೂಪಾಯಿ

ಮೌಲ್ಯವನ್ನು ಹೇಳುವುದಿಲ್ಲ. ಇವತ್ತಿನ Dollar value, Rupee value ನೋಡಿದರೆ, in spite of recession throughout the world, throughout the country, Finance Minister, Government of India, has himself agreed that our investments have not come down. ಕರ್ನಾಟಕದಲ್ಲಿ ಇನ್‌ವೆಸ್ಟ್‌ಮೆಂಟ್ ಕಡಮೆಯಾಗಿಲ್ಲ. ಈ ಸದನದ ಮುಖಾಂತರ ತಪ್ಪು ಸಂದೇಶ ಈ ರಾಜ್ಯಕ್ಕೆ, ದೇಶಕ್ಕೆ ಹೋಗುವುದು ಬೇಡ. Investors are coming in all fields. This is No.1.

No.2 ಏನೆಂದರೆ, ಬೆಂಗಳೂರಿನ ಹಾರ್ಟ್.. ..yes. ಇಲ್ಲಿ economic activities ಇದೆ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಅದರಲ್ಲಿ ಎರಡು ಮಾತಿಲ್ಲ. ಆದರೆ, heartಗೆ blood supply ಎಲ್ಲಿಂದ ಬರುತ್ತದೆ ಸ್ವಾಮಿ? ಬೆಂಗಳೂರಿನಲ್ಲಿ ಒಂದಾದರೂ ವಿದ್ಯುತ್ ಸ್ಥಾವರ ಇದೆಯೇ? ಒಂದಾದರೂ ಡ್ಯಾಮ್ ಇದೆಯೇ? ಇಲ್ಲಿಗೆ ನೀರು ಬರುವುದು ಜೋಗ್‌ಫಾಲ್ಸ್‌ನಿಂದ, ವಿದ್ಯುತ್ ಬರುವುದು ರಾಯಚೂರಿನಿಂದ. ಆದುದರಿಂದ, ಕರ್ನಾಟಕ ಮತ್ತು ಬೆಂಗಳೂರು, ಎರಡನ್ನೂ ಒಂದು ಮಾಡಲು ಹೋಗಬೇಡಿ. ತಮಿಳರಿಗೆ ಇದೇ ಬೇಕಾಗಿರುವುದು. ಬೆಂಗಳೂರಿನ ಮೇಲಿನ ಪ್ರೀತಿಯ ಭರದಲ್ಲಿ ತಾವು distinguish ಮಾಡಲು ಹೋಗಬೇಡಿ. ಕರ್ನಾಟಕ ಒಂದು. ಅದರ repercussion ಹೇಗಾಗುತ್ತದೆಂದರೆ, ಒಂದು ನಿಮಿಷ....ಈ heartಗೆ blood ಬರುವುದು ಉತ್ತರ ಕರ್ನಾಟಕದಿಂದ. ಅದಕ್ಕೋಸ್ಕರ, ಸಮಗ್ರ ಕರ್ನಾಟಕ, ಅದರಲ್ಲೂ ಬೆಂಗಳೂರು ಪ್ರಾಮುಖ್ಯವಾಗಿದೆ. ಇದನ್ನೂ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಆದುದರಿಂದ, ಇನ್‌ವೆಸ್ಟರ್ಸ್ ಬರುವುದು ಕಡಮೆಯಾಗಿಲ್ಲ, economic activities ಕಡಿಮೆಯಾಗಿಲ್ಲ. Compare with the world recession and country recession with the State recession. ತಾವು comparative ಆಗಿ ಮಾತನಾಡಬೇಕು.

ಶ್ರೀ ಡಿ.ಕೆ.ಶಿವಕುಮಾರ್: ಈಗ ಇಲ್ಲಿ Finance Secretaryಯವರು ಕುಳಿತಿದ್ದಾರೆ, ಕುಳಿತುಕೊಳ್ಳಲಿ, ಪರವಾಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಅವರೆಲ್ಲರೂ ನೀವಿದ್ದಾಗಲೂ ಇದ್ದರು. ಒಂದು ನಿಮಿಷ ಸರ್. ಇಲ್ಲಿ ನಾವು ಮತ್ತು ನೀವು ಬಹಳ ಮುಖ್ಯ. ನೀವು ಇದ್ದಾಗ Finance Secretaryಯವರೂ ಇದ್ದರು, Home Minister ಸಹ ಇದ್ದರು. ನೀವೆಲ್ಲರೂ ದೆಹಲಿ ಪತ್ರಿಕೆಗಳ ಬಗ್ಗೆ ಹೇಳಿದ್ದೀರಲ್ಲ, ದೆಹಲಿ ಪತ್ರಿಕೆಯಲ್ಲಿ ಏನಾಯಿತು? ನಂಬರ್ ಒನ್ ಎಂದು ಬರೆದರು. ಮುಂದೇನಾಯಿತು? ನೀವು CNN ಬಗ್ಗೆ ಹೇಳಿದ್ದೀರಿ. ಇವತ್ತು CNNನವರು ನಂಬರ್ ಒನ್ ಎಂದು ನಮಗೆ ಹೇಳಿದ್ದಾರೆ. ಈ ಪತ್ರಿಕೆಗಳ measurement ಒಂದು ಕಡೆ. ಆ ದೃಷ್ಟಿಕೋನ ಬೇರೆ.

ನಾವು ಹಳ್ಳಿಯ ಜೊತೆಗೆ ದಿಲ್ಲಿಯನ್ನೂ ನೋಡಬೇಕಾಗುತ್ತದೆ. ಆದುದರಿಂದ, ಬರೀ ದಿಲ್ಲಿಯಲ್ಲಿ ನೋಡಿದರೆ ಹಳ್ಳಿಯನ್ನು ಮರೆಯುತ್ತೇವೆ. ಇವತ್ತು ನಾವು ಹಳ್ಳಿಯನ್ನು ನೋಡಿದ್ದೇವೆ. ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ. Economy control ಮಾಡುತ್ತಿದ್ದೇವೆ, ಜೊತೆಗೆ development ಸಹ ಮಾಡುತ್ತಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ: ಬಹಳ ಮುಖ್ಯವಾದ ವಿಚಾರವೇನೆಂದರೆ, ಇಲ್ಲಿ industrial investment ಆಗಬೇಕಾದಾಗ ಬಹಳ ಪ್ರಾಮುಖ್ಯವಾಗಿರುವುದು ಇಲ್ಲಿನ environment.

ಶ್ರೀ ಬಸವರಾಜ ಬೊಮ್ಮಾಯಿ: ಸ್ವಾಮಿ, environment ಇಲ್ಲದಿದ್ದರೆ, ಎಲ್ಲರಿಗೂ Bangalore Metro..... Government of India is thinking about Bangalore. ಮೆಟ್ರೊಗೆ ಏಕೆ ಕಟ್ ಮಾಡಿದಿರಿ? ಕಟ್ ಮಾಡಬೇಡಿ ಎಂದು ನೀವೆಲ್ಲರೂ ಹೋಗಿ ಹೇಳುವುದಕ್ಕಾಗಲಿಲ್ಲವೇ? ಬೇರೆ ರಾಜ್ಯಗಳಿಗೆಲ್ಲಾ ಕೊಟ್ಟಿದ್ದೀರಿ. ಮೆಟ್ರೊಗೆ ಏಕೆ ಹಾಗೆ ಮಾಡಿದಿರಿ? ತಮಿಳಿನ ಮೇಲೆ ಪ್ರೀತಿ ಇದ್ದರೆ Central Government Budgetನಲ್ಲಿ ಮೆಟ್ರೊಗೆ ಏಕೆ ಕಟ್ ಮಾಡಿದ್ದೀರಿ? ಅಂದರೆ, ಕೇಂದ್ರ ಸರ್ಕಾರಕ್ಕೆ ಎಷ್ಟು ಪ್ರೀತಿ ಇದೆ ಎಂಬುದನ್ನು ತೋರಿಸುತ್ತದೆ. ಕರ್ನಾಟಕದ ಮೇಲೆ ಕೇಂದ್ರ ಸರ್ಕಾರಕ್ಕೆ ಢೋಂಗಿ ಪ್ರೀತಿ ಇದೆ. ನಿಜವಾದ ಪ್ರೀತಿ ಇದ್ದಿದ್ದರೆ ಮೆಟ್ರೊಗೆ ಕಟ್ ಮಾಡುತ್ತಿರಲಿಲ್ಲ. ನಮಗೂ ಮಾತುಗಳನ್ನಾಡಲು ಬರುತ್ತದೆ. ನೀವು ಮೆಟ್ರೊಗೆ ಏಕೆ ಕಟ್ ಮಾಡಿದಿರಿ? Bangalore development ಆಗಬೇಕಾದರೆ Metro is one of the important infrastructure. Investors ಬರಬೇಕಾದರೆ ಮೆಟ್ರೋ ಬೇಕಾಗುತ್ತದೆ, transportation ಬೇಕಾಗುತ್ತದೆ.

ಇವತ್ತು transportation is a mojor challenge in the City. Traffic Jam is a major challenge. ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮೆಟ್ರೊಗೆ ನಾವು contribution ಕೊಟ್ಟಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: ನಮಗೂ ಮಾತನಾಡಲು ಬರುತ್ತದೆಂದು ಅವರು ತೋರಿಸಿಕೊಳ್ಳುತ್ತಿರಬೇಕಾದರೆ ನಾವು ಬೇಡವೆಂದು ಹೇಳುವುದಕ್ಕಾಗುತ್ತದೆಯೇ ಪಾಪ! Let him enjoy his privilege.

ಶ್ರೀ ಟಿ.ಬಿ.ಜಯಚಂದ್ರ: ಶಿವಕುಮಾರ್‌ರವರು ಹೇಳಿದ ಒಂದು ವಿಚಾರವೇನೆಂದರೆ, ಕರ್ನಾಟಕ ಮತ್ತು ಬೆಂಗಳೂರು ಎನ್ನುವ ವ್ಯತ್ಯಾಸವನ್ನು ನಾವು ಮಾಡುತ್ತಿಲ್ಲ. ಅವರು ಬೆಂಗಳೂರು ವಿಚಾರ ಹೇಳಿದರೆ ಅದು ಕರ್ನಾಟಕವೇ.

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನು ನಿಮ್ಮ ಅನುಕೂಲಕ್ಕೋಸ್ಕರ ಹೇಳುತ್ತಿದ್ದೀರಿ, ಅಷ್ಟೆ. ಅದು ನಿಮ್ಮ ಅನುಭವ.

ಶ್ರೀ ಟಿ.ಬಿ.ಜಯಚಂದ್ರ: ಸ್ವಲ್ಪ ಕೇಳಿ ಸ್ವಾಮಿ. ಇಲ್ಲಿ ಏಕೆ ಇನ್‌ವೆಸ್ಟ್‌ಮೆಂಟ್ ಬರುತ್ತಿದೆ ಎಂದರೆ, ಇಡೀ ಪ್ರಪಂಚದಲ್ಲಿ ಬೆಂಗಳೂರಿನಲ್ಲಿರುವಂತಹ environment ಇರುವುದು only 2-3 cities in the world. ಒಂದು ವಿಷಯ ಹೇಳುವುದೇನೆಂದರೆ, it is a peace loving people. ಈಗ ಆಗುತ್ತಿರುವ ಕೊಲೆ, ಸುಲಿಗೆಗಳಿಂದ ಸಮಾಜಕ್ಕೆ ಧಕ್ಕೆಯಾಗುತ್ತದೆನ್ನುವ ಭಾವನೆಯನ್ನು ಅವರು ವ್ಯಕ್ತಪಡಿಸಿದ್ದು ಬಿಟ್ಟರೆ ತಾವು ಕರ್ನಾಟಕ ಬೇರೆ ಬೆಂಗಳೂರು ಬೇರೆ ಎಂದು ದೊಡ್ಡದಾಗಿ ಭಾಷಣ ಮಾಡಿಬಿಟ್ಟಿರಿ.

ಡಾ: ಬಿ.ಎಸ್.ಯಡಿಯೂರಪ್ಪ: ಮಾನ್ಯ ಶಿವಕುಮಾರ್‌ರವರು ಹೇಳಿರುವ ಕೆಲವು ವಿಷಯಗಳನ್ನು ನಾನು ಸ್ವಾಗತಿಸುತ್ತೇನೆ. ರಾಜಕಾರಣದಲ್ಲಿ ಯಾರೂ ಶಾಶ್ವತವಲ್ಲ. ಯಾರೂ ಬೇಕಾದರೂ ಇಲ್ಲಿ ಇರಬಹುದು, ಅಲ್ಲಿ ಇರಬಹುದು, ನಾವು ಪ್ರಜಾಪ್ರಭುತ್ವದಲ್ಲಿ ನೋಡಿದ್ದೇವೆ. ಆದರೆ, ಇವತ್ತು ಮಂಗಳೂರಿನಲ್ಲಿ ನಡೆದ 2–3 ಘಟನೆಗಳೇನಿವೆ, ಇದನ್ನು ಹತ್ತಿಕ್ಕುವುದಕ್ಕೆ ಒಂದು ಕ್ಷಣವಾದರೂ ನಾನಾಗಲಿ, ಗೃಹ ಸಚಿವರಾಗಲಿ, ತಡ ಮಾಡಲಿಲ್ಲ. 24 ಗಂಟೆಯೊಳಗೆ ತಪ್ಪಿತಸ್ಥರನ್ನು ಬಂಧಿಸಿದ್ದೇವೆ. ಘಟನೆಗಳು ರಿಪೀಟ್ ಆದಲ್ಲಿ, ಗೂಂಡಾ ಆಕ್ಟ್‌ನಡಿ ಒಳಗೆ ಹಾಕುವುದಕ್ಕೂ ನಾವು ಸಿದ್ಧರಿದ್ದೇವೆ. ಅವರು ಯಾವುದೇ ಪಕ್ಷದವರಾಗಿರಲಿ, ಆದರೆ, ನೀವು.... ಶಿವಕುಮಾರ್‌ರವರೆ, ಒಂದು ನಿಮಿಷ. ನಿಮ್ಮಂತಹ ಅನುಭವಿ ರಾಜಕಾರಣಿಗಳು, ನಿಮಗೆ ಮುಂದೆ ಭವಿಷ್ಯವಿದೆ. ಭಯೋತ್ಪಾದನೆ ಹತ್ತಿಕ್ಕುವ ಸಂದರ್ಭದಲ್ಲಿ ನೀವು ಬೀದಿಗಳಿದು, ಅರೆಸ್ಟ್ ಆಗಿ, ಕಲ್ಲುಗಳನ್ನು ತೂರಿ, ಬಸ್ಸುಗಳನ್ನು ನಾಶ ಮಾಡಿ, ಈ ತರಹ ನಮ್ಮ ಕಾಂಗ್ರೆಸ್ ಮುಖಂಡರು ಮಾಡುವುದುದರಿಂದ ಒಳ್ಳೆಯ ಹೆಸರು ಬರುತ್ತದೆಯೇ? ಇದು ಧರ್ಮವೇ?

ಒಬ್ಬ ಮಾನ್ಯ ಸದಸ್ಯರು: ಕ್ಷಮೆ ಕೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್: ಏಕೆ ಕ್ಷಮೆ ಕೇಳಬೇಕು? ನನ್ನ blood ಏನೆಂದು ನಿಮಗೆ ಇನ್ನೂ ಗೊತ್ತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಪಬ್ಲಿಕ್ ಆಸ್ತಿಯನ್ನು ಲೂಟಿ ಮಾಡಿದಿರಲ್ಲ, ಕ್ಷಮೆ ಕೇಳಲಿಲ್ಲವೆಂದರೆ, ಅದು ಒಳ್ಳೆಯದೆಂದಾದರೂ ಒಪ್ಪಿಕೊಳ್ಳಿ. ಅದನ್ನು ಸಮರ್ಥಿಸಿಕೊಳ್ಳಿ. Youth Congress ಮತ್ತು SUCI ಗೂಂಡಾಗಿರಿ ಮಾಡಿ ಎಂದು ಇನ್ನೂ encourage ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ಈಶ್ವರಪ್ಪನವರೆ, ನಾನು ಯಾವುದಕ್ಕೆ ಕ್ಷಮೆ ಕೇಳಬೇಕು, ಏನು ಮಾಡಬೇಕೆಂದು ನನಗೂ ಅಷ್ಟಿಷ್ಟು ಅನುಭವವಿದೆ. ನಿಮ್ಮಷ್ಟು ಅನುಭವ, ಸೀನಿಯಾರಿಟಿ ಇಲ್ಲದೇ ಇರಬಹುದು. ನನ್ನನ್ನು ಈ ಸಲ ಜನರು ಗುರ್ತಿಸಿ ಇಲ್ಲಿಗೆ ಕಳುಹಿಸಿದ್ದಾರೆ. I will come out on that. ಏಕೆಂದರೆ, ನನಗೂ movement ಗೊತ್ತು, agitations ಗೊತ್ತು, ನೀವೇನು ಮಾಡಿದ್ದೀರಿ, ನಿಮ್ಮ ಪಾರ್ಟಿಗಳವರು ಏನು ಮಾಡಿದ್ದಾರೆ, ಇವತು ಮಂತ್ರಿಯಾಗಲಿಲ್ಲವೆಂದು ಹುಬ್ಬಳ್ಳಿಯಲ್ಲಿ ಏನು ಗಲಾಟೆ ನಡೆಯಿತು, ಆನೇಕಲ್‌ನಲ್ಲಿ ಏನು ಗಲಾಟೆ ನಡೆಯಿತು, ಅವೆಲ್ಲವೂ emotionsನಲ್ಲಿ ಹುಡುಗರು ಏನೋ ಸ್ವಲ್ಪ.......

ಶ್ರೀ ಕೆ.ಎಸ್.ಈಶ್ವರಪ್ಪ: ನಾವು ಅದಕ್ಕೆ ಆಗಲೇ ಕ್ಷಮೆ ಕೇಳಿಬಿಟ್ಟಿದ್ದೇವೆ. ನೀವು ಕ್ಷಮೆ ಕೇಳಿಲ್ಲವೆಂದು........

ಶ್ರೀ ಡಿ.ಕೆ.ಶಿವಕುಮಾರ್: ಆಯಿತು, ಕೇಳೋಣ ಬಿಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಮ್ಮದು ಗೂಂಡಾಗಿರಿಯೇ ಕೆಲಸ ಎಂದರೆ, ಆಯಿತು, ಮಾಡಿಕೊಂಡು ಹೋಗಿ.

ಶ್ರೀ ಡಿ.ಕೆ.ಶಿವಕುಮಾರ್: ಬೆಂಗಳೂರಿನ ಬಗ್ಗೆ ನಾನು ಏಕೆ ಪ್ರಸ್ತಾಪಿಸಿದೆ ಎಂದರೆ, ರಾಜ್ಯದ image ಬಗ್ಗೆ ವಿರೋಧ ಪಕ್ಷದವರಾದ ನಾವು ಹೇಳಿದ್ದೆಲ್ಲವೂ ಸರಿಯಲ್ಲ. ಯಾರೋ ಈ ಮೀಡಿಯಾದವರು ಬರೆದಿದ್ದಾರಲ್ಲ, Outlook, India Today, Times, ಮತ್ತೊಂದು ಪತ್ರಿಕೆಯವರು ಅವರ್ಯಾರೂ ಸರಿ ಇಲ್ಲದೇ ಇರಬಹುದು. ಅವರುಗಳಿಗೆ ಬೇರೆ ಉದ್ದೇಶಗಳಿರಬಹುದು. ಅವರು ಯಾವುದಕ್ಕಾದರೂ ಬರೆಯಲಿ. ನಾನು ತಮಗೆ ಹೇಳುವುದೇನೆಂದರೆ, ಈ ರಾಜ್ಯ, ಇಲ್ಲಿರುವಂತಹ economic activities..... ಏಕೆಂದರೆ, ಇಲ್ಲಿ ಹಣ ಬಂದರೆ ಹಳ್ಳಿಗಳಿಗೆ ಹೋಗುತ್ತದೆ. ದುಡ್ಡು, ಬ್ಲಡ್ ಎರಡೂ ನಿಂತು ಹೋದರೆ....ಈಗ ಬ್ಲಡ್ ನಿಂತು ಹೋದರೆ ಏನಾಗುತ್ತದೆಂದು ಒಂದು ಸಲ ಸಾಯಿಬಾಬಾರವರು ಹೇಳಿದರು. ಬ್ಲಡ್ ನಿಂತು ಹೋದರೆ, ಬಿ.ಪಿ. ಶುಗರ್, ಮತ್ತೊಂದು ಕಾಯಿಲೆಗಳು ಬರಲು ಶುರುವಾಗುತ್ತದೆ. ದುಡ್ಡು ನಿಂತು ಹೋಯಿತೆಂದರೆ, ದುಡ್ಡು ಒಂದೇ ಕಡೆ ಸೇರಿಕೊಂಡುಬಿಟ್ಟರೆ, ಕಳ್ಳ ಬರುತ್ತಾರೆ, income Taxನವರು, Sales Taxನವರು, ಎಲ್ಲರೂ ನುಗ್ಗುತ್ತಾರೆ. ಅದಕ್ಕೋಸ್ಕರ, ಇವೆರಡೂ ciruculationನಲ್ಲಿರಬೇಕು. ಈ circulation ಇರಬೇಕಾದರೆ, ಬೆಂಗಳೂರಿನಿಂದಲೇ ಹೋಗಬೇಕು. ಬೆಂಗಳೂರಿನಲ್ಲಿಯೇ highest tax ಜನರು ಪಾವತಿಸುವುದು. ಇದರಿಂದ ನಮ್ಮ ಹಳ್ಳಿಗಳು ಅಭಿವೃದ್ಧಿಯಾಗುತ್ತವೆ. ಇದು ನನ್ನ concept, ಇದು ನನ್ನ ಚಿಂತನೆಯಾಗಿದೆ.

ಗ್ರಾಮೀಣ ಪ್ರದೇಶಕ್ಕೆ ಹೆಚ್ಚಿನ ಅನುಕೂಲ ಆಗಬೇಕಾದರೆ, ಇಲ್ಲಿ ನಾವು ಜನರನ್ನು ಆಕರ್ಷಿಸಬೇಕು, ಇಲ್ಲಿ ಜನರು ಹಣ ಕಟ್ಟಬೇಕು, ಹಣ ಇಲ್ಲಿಂದ ಹೋಗಬೇಕು. ಇಲ್ಲಿ ನಾಳೆ ಬಜೆಟ್ ಅನ್ನು ಮಂಡಿಸಬೇಕಾದರೆ, ಎಲ್ಲಿಂದ ಹಣ ಬಂದು ತುಂಬುತ್ತಿದೆ, ಯಾವ ಕಡೆಯಿಂದ ಬರುತ್ತಿದೆ, ಅದನ್ನು ತೆಗೆಸಿ ನೋಡಿದೆ. ಅವರಿಗೆ ಎಲ್ಲವೂ ಗೊತ್ತಿದೆ. I am also a born farmer. ನಾನು 3-6 ಎಕರೆಗಳಷ್ಟು ಜಮೀನು ಮಾಡಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು farmer ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ, ಅದನ್ನು ನೀವು ಮರೆಯುತ್ತಿದ್ದೀರೆಂಬ ಭಯ ನಮಗಿದೆ.

ಶ್ರೀ ಡಿ.ಕೆ.ಶಿವಕುಮಾರ್: ನನಗೂ ಕಮಿಟ್‌ಮೆಂಟ್ ಇದೆ. I am an Agriculturist by birth. ಇಲ್ಲಿಗೆ ಹೊರಗಡೆಯಿಂದ ವಿದ್ಯಾಭ್ಯಾಸಕ್ಕೆ, ಮತ್ತೊಂದು ಉದ್ದೇಶಕ್ಕೆ ಬರುವವರಿಗೆ, ಹುಡುಗ-ಹುಡುಗಿಯರು ಜೊತೆಯಲ್ಲಿ ಹೋಗಬೇಕಾದರೆ, ಹೆದರಿಕೆಯ ವಾತಾವರಣವಿದೆ. ದೇವಸ್ಥಾನಕ್ಕೆ ಹೋಗಬೇಕಾದರೆ, ನಾನು ಯಾವ ದೇವಸ್ಥಾನಕ್ಕೆ ಹೋಗಬೇಕು? ಮದುವೆ ಮಾಡಿಕೊಳ್ಳಬೇಕಾದರೆ, ಎಲ್ಲಿ ಮಾಡಿಕೊಳ್ಳಬೇಕು? ಪ್ರೀತಿ ಮಾಡಬೇಕಾದರೂ ನಿಮ್ಮ ಪರ್ಮಿಶನ್ ತೆಗೆದುಕೊಳ್ಳಬೇಕು. ಅಣ್ಣ-ತಂಗಿ ಜೊತೆಯಲ್ಲಿ ಹೋಗಬೇಕಾದರೆ, ಯಾವುದಾದರೂ ಧರ್ಮ ಆಚರಿಸಬೇಕಾದರೂ ಪರ್ಮಿಶನ್ ತೆಗೆದುಕೊಳ್ಳುವಂತಹ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಗಿದೆ.

Personal lifeನಲ್ಲಿ, ಮತ್ತೊಂದು ಲೈಫ್‌ನಲ್ಲಿ ಸಂಘ-ಸಂಸ್ಥೆಗಳು, ಸರ್ಕಾರಗಳು ಹಿಂದೆ ಇದೇ ಭಯೋತ್ಪಾದನೆ ವಿಚಾರದಲ್ಲಿ ಪೊಲೀಸ್ ಅಧಿಕಾರಿಗಳು All Party Meeting ಕರೆದಿದ್ದರು. ಆ ಸಂದರ್ಭದಲ್ಲಿ ಕೆಲವು Ministers, Chief Minister ಸಹ ಇದ್ದರು. ನಾನು ಅವತ್ತು moral policing ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದೇನೆ. ಮುಖ್ಯಮಂತ್ರಿಗಳಿಗೆ ಇದು ನೆನಪಿರಬೇಕು. ಅಂದಿನ ಸಭೆಯಲ್ಲಿ ಅವತ್ತಿನ D.G. ಇದ್ದರು, Home Minister ಮತ್ತು ಎಲ್ಲರೂ ಇದ್ದರು. ನಾನು ಕೇವಲ ಶ್ರೀರಾಮಸೇನೆ, ಮತ್ತೊಂದರ ಬಗ್ಗೆ ಪ್ರಸ್ತಾಪಿಸಲಿಲ್ಲ. ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅನೇಕ ಸಂಘ-ಸಂಸ್ಥೆಗಳ ಬಗ್ಗೆಯೂ ಪ್ರಸ್ತಾಪಿಸಿ, ಮುಂದೆ ಇವು ಮುಳ್ಳಾಗುತ್ತವೆ. ಈಗ ಮುಂಬೈನಲ್ಲಿ ಯಾವ ರೀತಿ ಗಲಾಟೆಯಾಗುತ್ತಿದೆ, ಶಿವಸೇನೆ ವಿಚಾರ ಮತ್ತು ಬೇರೆ ಬೇರೆ ಸಂಘಟನೆಗಳ ಗಲಾಟೆಗಳಾಗುತ್ತಿದೆ, ಅದರಿಂದ ಎಷ್ಟು affect ಆಗುತ್ತದೆ, ಅದರ ಬಗ್ಗೆ ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಅಂದು ಮುಖ್ಯಮಂತ್ರಿಗಳು ಭಯೋತ್ಪಾದನಾ ವಿಚಾರದಲ್ಲಿ All Party Meeting ಕರೆದಾಗ ನಾನು ನನ್ನ ಸಲಹೆಗಳನ್ನು ನೀಡಿದ್ದೇನೆ. ಇದನ್ನು ನಾನು ಹೊಸದಾಗಿ ಹೇಳುತ್ತಿಲ್ಲ.

ಆದುದರಿಂದ, ಮುಖ್ಯಮಂತ್ರಿಗಳೆ, ಈ ರಾಜ್ಯದಲ್ಲಿ ಭಯದ ದೊಡ್ಡ ವಾತಾವರಣ ಇಂದು ನಿರ್ಮಾಣವಾಗಿದೆ. ನೀವು ಅವರ್‍ಯಾರೋ D.G.ಯೋ, A.D.G.ಯೋ, ಮಂಗಳೂರಿನಲ್ಲಿರುವವರನ್ನು ಬೇರೆಡೆಗೆ ಟ್ರಾನ್ಸ್‌ಫರ್ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಇದಕ್ಕೊಂಡು ಮೇಜರ್ ಸರ್ಜರಿಯಾಗಬೇಕು. ನಿಮ್ಮಲ್ಲಿರುವ ಎಲ್ಲರೂ ನಿಮ್ಮ ಮೇಲೆಯೇ ಅವಲಂಬಿಸುತ್ತಿದ್ದಾರೆ. ಯಾರಾದರೂ ಮಿನಿಸ್ಟರ್ಸ್ ಏನಾದರೊಂದು ರಿಪ್ಲೈ ಕೊಡಬೇಕಾದರೆ, "ನಾನು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ನಂತರ ತಮಗೆ ತಿಳಿಸುತ್ತೇನೆ" ಎಂದು ಹೇಳುತ್ತಾರೆ. ಬೆಳಗಾಂನಲ್ಲೂ ಹಾಗೇ ಹೇಳುತ್ತಿದ್ದರು. ಬೆಳಗಾಂ ಅಧಿವೇಶನದಲ್ಲೂ ಅದೇ ರೀತಿ ಹೇಳುತ್ತಿದ್ದರು. ಪ್ರತಿಯೊಂದು ಸಂದರ್ಭದಲ್ಲೂ ಈ ರೀತಿ ಹೇಳುವಂತಹ ಸಂದರ್ಭ ನಿರ್ಮಾಣವಾಗುತ್ತಿದೆ. ಈ ರಾಜ್ಯದಲ್ಲಿ Law and Order complete ಆಗಿ fail ಆಗಿದೆ, ಕುಸಿದು ಹೋಗಿದೆ. ಅದು restore ಆಗಬೇಕು. ನಾವು Central Home Minister resignation ತೆಗೆದುಕೊಂಡೆವು, ಮಹಾರಾಷ್ಟ್ರ CM resignation ತೆಗೆದುಕೊಂಡೆವು. ಅದೇ ರೀತಿ ಇಲ್ಲೂ ಒಂದಿಬ್ಬರ resignation ತೆಗೆದುಕೊಳ್ಳಿ, ಅದರಿಂದ ತಪ್ಪೇನಾಗುವುದಿಲ್ಲ. 'ನಾನು ಬದ್ಧನಾಗಿದ್ದೇನೆ, ನನಗೆ commitment ಇದೆ, ಈ ರಾಜ್ಯದ ಜನತೆಗೆ commitment ಇದೆ' ಎಂಬ ಒಂದು message ಹೋಗುತ್ತದೆ. ಈ ನಿಟ್ಟಿನಲ್ಲಿ ತಾವು ಕೆಲಸ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ರಾಜ್ಯಕ್ಕೆ ಮುಂದೆ ಒಂದು ಒಳ್ಳೆಯ message ಅನ್ನು ಕೊಡುತ್ತಾರೆ, ಈ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಾರೆ ಎಂದು ಭಾವಿಸುತ್ತೇನೆ. ಇಡೀ ಪ್ರಪಂಚದ ಜನ ನಮ್ಮನ್ನು ನೋಡಿ ಇದೊಂದು ಉತ್ತಮ ರಾಜ್ಯ, peace loving State ಎನ್ನುವ ರೀತಿಯಲ್ಲಿ ಕಾರ್ಯಕ್ರಮ ರೂಪಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು, ಆದಷ್ಟು ಬೇಗನೇ Home Minister resignation ತೆಗೆದುಕೊಂಡು ಅದನ್ನು accept ಮಾಡಲಿ, ಇಲ್ಲದಿದ್ದರೆ ಅವರನ್ನು ಬೇರೆ ಕಡೆಗೆ ಎಲ್ಲಾದರೂ shift ಮಾಡಲಿ ಎಂದು ತಮ್ಮ ಮುಖಾಂತರ ಅವರಲ್ಲಿ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಡಾ: ಬಿ.ಎಸ್.ಯಡಿಯೂರಪ್ಪ:- ಮಾನ್ಯ ಆಚಾರ್ಯರವರು ಪ್ರಾಮಾಣಿಕರಾದಂತಹ ಒಬ್ಬ ಗೃಹ ಸಚಿವರಾಗಿದ್ದಾರೆ. ನಾನು 25–30 ವರ್ಷಗಳಿಂದ ರಾಜಕಾರಣದಲ್ಲಿದ್ದೇನೆ. ನನಗೆ ಗೊತ್ತಿರುವ ಪ್ರಕಾರ, ನಿಷ್ಠುರವಾಗಿರುವ ಇಂತಹ ಒಳ್ಳೆಯ ಗೃಹ ಸಚಿವರನ್ನು ನಾವು ಕಂಡಿರಲಿಲ್ಲ. ನೋಡುವುದಕ್ಕೆ ಅವರು ಸೌಮ್ಯವಾಗಿ ಕಾಣಬಹುದು. ಮಂಗಳೂರಿನಲ್ಲಿ ನಡೆದಂತಹ ಘಟನೆಗಳು ಒಂದು ವ್ಯವಸ್ಥಿತ

ಪಿತೂರಿ, ಕೈವಾಡ. ಕೆಟ್ಟ ಹೆಸರು ತರಬೇಕೆನ್ನುವಂತಹ ಷಡ್ಯಂತ್ರದಿಂದಲೇ ನಡೆದ ಘಟನೆಗಳವು.

ಶ್ರೀ ಡಿ.ಕೆ.ಶಿವಕುಮಾರ್:- He is too good.

ಡಾ: ಬಿ.ಎಸ್.ಯಡಿಯೂರಪ್ಪ:- ಇದರಲ್ಲಿ ಯಾರ್‍ಯಾರ ಕೈವಾಡ ಇದೆ ಎಂಬುದು ಜಗತ್ತಿಗೇ ಗೊತ್ತಿದೆ. 24 ಗಂಟೆಗಳಲ್ಲೇ ನಾವು ಬಂಧನ ಮಾಡಿದ್ದೇವೆ. ಅಂತಹ ಒಳ್ಳೆಯ ಗೃಹ ಸಚಿವರಿಗೆ ನೀವು ಅಭಿನಂದನೆಯನ್ನು ಸಲ್ಲಿಸುವುದನ್ನು ಬಿಟ್ಟು ರಾಜೀನಾಮೆ ಕೇಳುತ್ತಿದ್ದೀರಲ್ಲಾ?

ಶ್ರೀ ಡಿ.ಕೆ.ಶಿವಕುಮಾರ್:- ಅವರಿಗೆ ಏನೂ powers ಇಲ್ಲ. ABVP, ಭಜರಂಗ ದಳದವರೇ ಎಲ್ಲಾ rule ಮಾಡುತ್ತಿದ್ದಾರೆ. He is a powerless man.

ಅಧ್ಯಕ್ಷರು:- ಚರ್ಚೆಯನ್ನು ನಾಳೆ continue ಮಾಡೋಣ. ಈಗ ಸದನವನ್ನು ನಾಳೆ ಮಧ್ಯಾಹ್ನ 12.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನು ರಾತ್ರಿ 7.23 ಗಂಟೆಗೆ ಮರುದಿನ ಅಂದರೆ ದಿನಾಂಕ 20ನೇ ಫೆಬ್ರವರಿ 2009ರಂದು ಮಧ್ಯಾಹ್ನ 12.30 ಗಂಟೆಗೆ ಪುನಃ ಸೇರುವಂತೆ ಮುಂದೂಡಲಾಯಿತು]

ಗಂಗಾ ಕಲ್ಯಾಣದಲ್ಲಿ ಸಾಮೂಹಿಕ ಏತ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುವುದು.

1 ಶ್ರೀ ಸಿದ್ದು ಸವದಿ (ತೆರೆದಾಳ್)

ಶ್ರೀ ಡಿ.ಸುಧಾಕರ(ಸಮಾಜ ಕಲ್ಯಾಣ ಸಚಿವರು)

ಅ 2006–2009ರವರೆಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಒದಗಿಸಿದ ಅನುದಾನ ದಲ್ಲಿ ವೈಯಕ್ತಿಕ ಕೊಳವೆ ಬಾವಿ ಮತ್ತು ಸಾಮೂಹಿಕ ಏತ ನೀರಾವರಿಗಳೆಷ್ಟು (ವರ್ಷವಾರು ಪ್ರತ್ಯೇಕ ಮಾಹಿತಿ ಪೂರೈಸುವುದು);

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ 2006 ರಿಂದ 2009ರವರೆಗೆ ಕೈಗೊಂಡ ವೈಯಕ್ತಿಕ ಹಾಗೂ ಸಾಮೂಹಿಕ ಏತ ನೀರಾವರಿ ಘಟಕಗಳ ವಿವರ ಕೆಳಕಂಡಂತಿವೆ.

ವರ್ಷ	ವೈಯಕ್ತಿಕ	ಸಾಮೂ ಹಿಕ ಏತ ನೀರಾವರಿ
2006–07	1826	31
2007–08	2130	49

2008–09	1465 (2008–09ನೇ ಸಾಲಿನ ಫಲಾನುಭವಿ ಗಳ ಆಯ್ಕೆ ಹಾಗೂ ಆಯ್ಕೆಗೊಂಡ ಫಲಾನುಭವಿಗಳ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆಯುವ ಕೆಲಸ ಪ್ರಗತಿಯಲ್ಲಿದೆ)	7

ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ:–

ವರ್ಷ	ಫಲಾನುಭವಿಗಳ ಸಂಖ್ಯೆ					
	ಗುರಿ		ಸಾಧನೆ ಗುರಿ			ಸಾಧನೆ
	ಪ.ಜಾ	ಪ.ವ	ಪ.ಜಾ	ಪ.ವ ಪ.ಜಾ	ಪ.ವಾ	ಪ.ಜಾ ಪ.ವ
2006–07	10000	5359	5376	2590 60ಘಟಕ 300 ಫಲಾನು ಭವಿಗಳು	60 ಘಟಕ 300 ಫಲಾನು ಭವಿಗಳು	61ಘಟಕ 63ಘಟಕ 439 353 ಫಲಾನು ಫಲಾನು ಭವಿಗಳು ಭವಿಗಳು
2007–08	6383	–	8582	– 64ಘಟಕ 363 ಫಲಾನು ಭವಿಗಳು		61 ಘಟಕ – 351 ಫಲಾನು ಭವಿಗಳು
2008–09	7825	–	1107	– 98ಘಟಕ 581		22ಘಟಕ – 129 ಫಲಾನು ಭವಿಗಳು

				ಫಲಾನು ಭವಿಗಳು		

ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ:

ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಬೇಪಟ್ಟು ದಿನಾಂಕ: 22-2-2007ರಿಂದ ಸ್ವತಂತ್ರವಾಗಿ ಕಾರ್ಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಅ) 2007-08ನೇ ಸಾಲಿನ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಮತ್ತು ಏತ ನೀರಾವರಿ ಪ್ರಗತಿ ವಿವರಗಳು

(ರೂ.ಲಕ್ಷಗಳಲ್ಲಿ)

ಯೋಜನೆ	ವಾರ್ಷಿಕ ಗುರಿ		ಭೌತಿಕ ಸಾಧನೆ		ಷರಾ
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
ವೈ.ನಿ. ಕೊಳಚೆ ಬಾವಿ	4650	4000.00	4123	3598.47	
ಏತ ನೀರಾವರಿ	480	250.00	364	250.00	

ಆ) 2008-09ನೇ ಸಾಲಿನ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಮತ್ತು ಏತ ನೀರಾವರಿ ಪ್ರಗತಿ ವಿವರಗಳು:

(ರೂ.ಲಕ್ಷಗಳಲ್ಲಿ)

ಯೋಜನೆ	ವಾರ್ಷಿಕ ಗುರಿ		ಭೌಥಿಕ ಸಾಧನೆ		ಷರಾ
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
ವೈ.ನಿ. ಕೊಳವೆ ಬಾವಿ	**4070**	**3500.00**	**780**	**312.00**	**ಬಿಲ್ಲುಗಳು ಪಾವತಿ ಮಾಡುವ ಹಂತದಲ್ಲಿದೆ. ಕೊಳವೆ ಬಾವಿಗಳ ಕೊರೆಯುವ ಕೆಲಸ ಪ್ರಗತಿಯಲ್ಲಿದೆ.**
ಏತ ನೀರಾವರಿ	**376**	**270.00**	**162**	**100.00**	
ಕ್ರೂಡಿಕೃತ	**465**	**400.00**	**-**	**-**	

ಆ ಈ ಯೋಜನೆಯಲ್ಲಿ ಯಾವ ಯಾವ ವರ್ಗದ ಜನಾಂಗಗಳಿಗೆ ಈ ಸೌಲಭ್ಯ ಯಾವ ಪ್ರಮಾಣದಲ್ಲಿ ಒದಗಿಸಲಾಗುವುದು;

ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ, ಪ್ರವರ್ಗ-3ಬಿಯಲ್ಲಿ ಒಳಪಡುವ ಹಿಂದುಳಿದ ವರ್ಗಗಳ ಜನರಿಗೆ ಈ ಯೋಜನೆಯಲ್ಲಿ ಸೌಲಭ್ಯ ನೀಡಲಾಗುತ್ತಿದೆ.

ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮೊತ್ತದಲ್ಲಿ ಪ್ರವರ್ಗ-1, 2ಎಗೆ ಶೇಕಡಾ 70ರಷ್ಟು ಹಾಗೂ ಪ್ರವರ್ಗ-3ಎ, 3ಬಿಗೆ ಶೇಕಡಾ 30ರಷ್ಟು ಅನುಪಾತದಲ್ಲಿ ಯೋಜನೆ ಸೌಲಭ್ಯ ಒದಗಿಸಲಾಗುತ್ತಿದೆ.

ಡಾ:ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ:

ಪರಿಶಿಷ್ಟ ಜಾತಿಗೆ ಸೇರಿದ ಉಪಜಾತಿಗಳಿಗೆ ಈ ಸೌಲಭ್ಯವ್ನು ಒದಗಿಸಲಾಗುತ್ತಿದೆ.

ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ:

ಪರಿಶಿಷ್ಟ ಪಂಗಡದವರಿಗೆ ಈ ಯೋಜನೆಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಇ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಗನುಗುಣವಾಗಿ ಯೋಜನೆಯಲ್ಲಿ ಹೆಚ್ಚಿಗೆ ಅನುದಾನವನ್ನು ಒದಗಿಸಲಾಗುವುದೇ;

ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ 2008-09ನೇ ಸಾಲಿಗೆ 3080 ಲಕ್ಷ ರೂ.ಗಳ ಅನುದಾದ ಒದಗಿಸಲಾಗಿದೆ. ಈ ಮೊತ್ತ ಕಳೆದ ವರ್ಷಗಳಲ್ಲಿ ಒದಗಿಸಿದ ಮೊತ್ತಕ್ಕಿಂತ ಹೆಚ್ಚಿಗೆ ಇರುತ್ತದೆ. ಈ ವರ್ಗಗಳ ಹೆಚ್ಚು ಜನರಿಗೆ ಸೌಲಭ್ಯ ನೀಡಲು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಅನುದಾನ ನೀಡಲಾಗುತ್ತಿದೆ.

ಈ ಹಾಗಿಲ್ಲದಿದ್ದಲ್ಲಿ, ಅತಿ ದೊಡ್ಡ ಸಂಖ್ಯೆಯಲ್ಲಿ ಇರುವ ಈ ಜನಾಂಗದ ಬಡ ಕುಟುಂಬಗಳಿಗೆ ಅನ್ಯಾಯ ವಾಗುವುದಿಲ್ಲವೆ;

ನಿಗದಿತ ಅನುದಾನ ಮೊತ್ತಕ್ಕೆ ಅನುಗುಣವಾಗಿ ಗುರಿ ನಿಗಧಿಪಡಿಸಿ ಹೆಚ್ಚಿನ ಸಂಖ್ಯೆಯ ಹಿಂದುಳಿದ ವರ್ಗಗಳ ಜನರಿಗೆ ಯೋಜನೆ ಸೌಲಭ್ಯ ನೀಡಲಾಗುತ್ತಿದೆ. ಜನಾಂಗದ ಬಡ ಕುಟುಂಬಗಳಿಗೆ ಅನ್ಯಾಯವಾಗುವ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಉ ಹಾಗಿದ್ದಲ್ಲಿ, ಇದನ್ನು ಸರಿ ಪಡಿಸಲು ಸರ್ಕಾರ ದವರು ಕೈಗೊಂಡಿರುವ ಕ್ರಮಗಳೇನು?

ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಅನುದಾನ ಒದಗಿಸಲು ಬೇಡಿಕೆ ಇರುವ ವಿಷಯವು ಗಮನಕ್ಕೆ ಬಂದಿದ್ದು, ಹೆಚ್ಚಿನ ಅನುದಾನ ಒದಗಿಸುವ ಬಗ್ಗೆ ಚಿಂತನೆಯಲ್ಲಿರುತ್ತದೆ.

ಗಂಗಾ ಕಲ್ಯಾಣದಲ್ಲಿ ಸಾಮೂಹಿಕ ಏತ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುವುದು

4ಶ್ರೀ ಸಿದ್ದು ಸವದಿ (ತೆರೆದಾಳ್)

ಬಿ. ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ತೇರದಾಲ ಮತ ಕ್ಷೇತ್ರದಲ್ಲಿರುವ ಒಟ್ಟು ಸರಕಾರಿ ಪಿ.ಹೆಚ್.ಸಿ ಮತ್ತು ಸಿ.ಎಚ್.ಸಿ. ಆಸ್ಪತ್ರೆಗಳ ಸಂಖ್ಯೆ ಎಷ್ಟು?

ತೇರದಾಲ ಮತಕ್ಷೇತ್ರದಲ್ಲಿ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 2 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಆ ಈ ಎಲ್ಲಾ ಕೇಂದ್ರಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು?

ಈ ಎಲ್ಲಾ ಕೇಂದ್ರಗಳಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ 131 ಹಾಗೂ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ 86

ಇ ಖಾಲಿಯಿರುವ ವೈದ್ಯರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ರಂಬನಹಟ್ಟಿ ಮತ್ತು ಮಹಾಲಿಂಗಪುರ ದಲ್ಲಿ ಕ್ರಮವಾಗಿ ಒಂದೊಂದು ವೈದ್ಯರ ಹುದ್ದೆ ಖಾಲಿ ಇದೆ. ಖಾಲಿ ವೈದ್ಯರ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಈ ತೇರದಾಳ ಕ್ಷೇತ್ರದಲ್ಲಿ ಇನ್ನೂ 4 ಹೊಸ ಪಿ.ಎಚ್.ಸಿಗಳ ಬೇಡಿಕೆ ಇದ್ದು ಅವುಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಮಾರ್ಗಸೂಚಿ ಪ್ರಕಾರ ತೇರದಾಳ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇರುವುದಿಲ್ಲ.

ಉ ಈಗಿರುವ ಕೇಂದ್ರಗಳಿಗೆ ಸರಕಾರದಿಂದ ಒದಗಿಸುತ್ತಿರುವ ಸೌಲಭ್ಯಗಳು ಯಾವುವು?

ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 6 ಹಾಸಿಗೆಗಳ ಸೌಲಭ್ಯ ಇದ್ದು ವೈದ್ಯರು-1, ಲೇಡಿ ಹೆಲ್ತ್ ವಿಸಿಟರ್ಸ್ -1, ಫಾರ್ಮಾಸಿಸ್ಟ್-1, ಶುಶ್ರೋಷಕರು-1, ಲ್ಯಾಬ್ ಟೆಕ್ನಿಷಿಯನ್-1, ಕಿರಿಯ ಆರೋಗ್ಯ ಸಹಾಯಕರು-1 ರಿಂದ 2, ಗ್ರೂಪ್-ಡಿ-1 ಸಿಬ್ಬಂದಿ ಇರುತ್ತಾರೆ. ಪ್ರತಿ ಸದರಿ ಕೇಂದ್ರಕ್ಕೆ ಔಷಧಿಗಾಗಿ ರೂ.1 ಲಕ್ಷ ಅನುದಾನ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಕಾರ್ಯಕ್ರಮದಡಿಯಲ್ಲಿ ರೂ.75,000/- ಮುಕ್ತನಿಧಿ/ನಿರ್ವಹಣೆ ಮೊತ್ತವನ್ನು ಒದಗಿಸಲಾಗಿದೆ.

ಪ್ರತಿ ಸಮುದಾಯ ಆರೋಗ್ಯ ಕೇಂದ್ರ 30 ರಿಂದ 50 ಹಾಸಿಗೆಗಳ ಸೌಲಭ್ಯ ಹೊಂದಿರುತ್ತದೆ. ಹಾಗೂ ಸದರಿ ಕೇಂದ್ರದಲ್ಲಿ ತಜ್ಞರು-4, ದಂತ ವೈದ್ಯರು-1, ಶುಶ್ರೂಷಕರು-6, ಫಾರ್ಮಾಸಿಸ್ಟ್ 1 ರಿಂದ 2, ಲ್ಯಾಬ್‌ಟೆಕ್ನಿಷಿಯನ್ -1, ಲೇಡಿ ಹೆಲ್ತ್ ವಿಸಿಟರ್ಸ್-1, ಗ್ರೂಪ್-ಡಿ-6, ಸಮಾಲೋಚಕರು-1 ಸಿಬ್ಬಂದಿ ಇರುತ್ತಾರೆ. 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರಕ್ಕೆ ರೂ. 4 ಲಕ್ಷದಂತೆ ಹಾಗೂ 50 ಹಾಸಿಗೆಗಳ ಕೇಂದ್ರಕ್ಕೆ ರೂ.6 ಲಕ್ಷದಂತೆ ಔಷಧಿ ಖರೀದಿಗಾಗಿ ಅನುದಾನ ಕಲ್ಪಿಸಲಾಗಿದೆ. ಇದಲ್ಲದೆ, ರಾಷ್ಟ್ರೀಯ ಗ್ರಾಮೀನ ಆರೋಗ್ಯ

ಅಭಿಯಾನದ ಕಾರ್ಯಕ್ರಮದಡಿಯಲ್ಲಿ ರೂ.1,50,000 ಮುಕ್ತನಿಧಿ/ನಿರ್ವಹಣೆ ಮೊತ್ತವನ್ನು ಒದಗಿಸಲಾಗಿದೆ.
ಮೇಲ್ಕಂಡ ಆರೋಗ್ಯ ಕೇಂದ್ರಗಳು ಸಾರ್ವಜನಿಕರಿಗೆ ಉಚಿತ ಆರೋಗ್ಯ ಸೌಲಭ್ಯವನ್ನು ಒದಗಿಸುತ್ತಿವೆ.

5 ಶ್ರೀ ಸಿದ್ದು ಸವದಿ (ತೇರದಾಳ್) ಎಂ.ಎಲ್
ಪ್ರೊ.ಡಾ:ಮುಮ್ತಾಜ್ ಅಲಿ ಖಾನ್(ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಂದ 2008-09ಕ್ಕೆ ಕೊಟ್ಟಿರುವ ಒಟ್ಟು ಸೌಲಭ್ಯಗಳೆಷ್ಟು (ಕ್ಷೇತ್ರವಾರು ಮತ್ತು ಯೋಜನವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

ಅನುಬಂಧ-1ರಲ್ಲಿ ಒದಗಿಸಲಾಗಿದೆ.
ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ.

ಆ ಶಾದಿ ಮಹಲ್ ಮತ್ತು ಗಂಗಾ ಕಲ್ಯಾಣದಂತಹ ಸೌಲಭ್ಯಗಳನ್ನು ಕೊಡಲು ಇರುವ ನಿಯಮಾವಳಿಗಳೇನು; 2008-09ರಲ್ಲಿ ತೆರದಾಳ ಮತಕ್ಷೇತ್ರಕ್ಕೆ ಕೊಟ್ಟಿ ಸಂಖ್ಯೆ ಎಷ್ಟು;

ಅನುಬಂಧ-2ರಲ್ಲಿ ಒದಗಿಸಲಾಗಿದೆ.

1) 2008-09ನೇ ಸಾಲಿನಲ್ಲಿ ಮಸ್ಜಿದೆ ಅಕ್ಸ್ ಶಾದಿಮಹಲ್ ದೇವರಾಜ ನಗರ, ದುರ್ಗನ್ನರ್ ತೆರೆದಾಳ್, ಜಮಖಂಡಿ ತಾಲ್ಲೂಕ್ ಬಾಗಲಕೋಟೆ ಜಿಲ್ಲೆ ಇವರಿಗೆ ರೂ.5.00 ಲಕ್ಷಗಳ ಅನುದಾನ ಮಂಜೂರಾಗಿದೆ.
2) 2008-09ನೇ ಸಾಲಿನಲ್ಲಿ ತೆರೆದಾಳ್ ಮತಕ್ಷೇತ್ರಕ್ಕೆ ಗಂಗಾ ಕಲ್ಯಾಣ ಯೋಜನೆಯಡಿ 3 ವೈಯಕ್ತಿಕ ಕೊಳವೆ ಬಾವಿಗಳ ಗುರಿಯನ್ನು ನೀಡಲಾಗಿದೆ.

ಇ ಇಲಾಖೆಯ ಬಹುತೇಕ ಸೌಲಭ್ಯಗಳನ್ನು ಕೆಲವೊಂದು ಕ್ಷೇತ್ರಗಳಿಗೆ ಮಾತ್ರ ಮೇಲಿಂದ ಮೇಲೆ ಒದಗಿಸುತ್ತಿರುವುದು; ನಿಜವೇ ಹಾಗಿದ್ದಲ್ಲಿ, 2005ರಿಂದ ಇಲ್ಲಿಯವರೆಗೆ ಒದಗಿಸಿದ ಅನುದಾನ ಮೊತ್ತವೆಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು)?

ಉದ್ಭವಿಸುವುದಿಲ್ಲ

ಅನುಬಂಧ-1

ವಕ್ಫ್ ಮತ್ತು ಅಲ್ಪಸಂಖ್ಯಾತರ ಇಲಾಖೆಗಳಿಂದ ನಿಡುವ ಸೌಲಭ್ಯಗಳು:-

1) ಸ್ವಾವಲಂಬನ ಮಾರ್ಜಿನ್ ಹಣ ಸಾಲದ ಯೋಜನೆ
2) ಶ್ರಮಶಕ್ತಿ ಯೋಜನೆ
3) ಅರಿವು ವಿದ್ಯಾಭ್ಯಾಸದ ಯೋಜನೆ
4) ಗಂಗಾ ಕಲ್ಯಾಣ ನೀರಾವರಿ ಯೋಜನೆ
5) ಭೂ ಖರೀದಿ ಯೋಜನೆ
6) ಮೈಕ್ರೋ ಫೈನಾನ್ಸ್ ಯೋಜನೆ
7) ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಸಾಲದ ಯೋಜನೆ
8) ಮಹಿಳಾ ಅಭಿವೃದ್ಧಿ ಯೋಜನೆ
9) ಸಣ್ಣ ಮತ್ತು ಅತಿ ಸಣ್ಣ ಸಾಲಗಳ (NMDFC ಯೋಜನೆ)
10) ಅಲ್ಪಸಂಖ್ಯಾತರ ಗುಂಪು ಅಭಿವೃದ್ಧಿ ಕಾರ್ಯಕ್ರಮ
11) ಶಾದಿಮಹಲ್/ಸಮುದಾಯ ಭವನ ನಿರ್ಮಾಣ ಸಹಾಯ ಧನ/ಸಾಲ ಯೋಜನೆ
12) ವಿದ್ಯಾರ್ಥಿಗಳ ಹಾಸ್ಟೆಲ್ ಕಟ್ಟಡ ನಿರ್ಮಾಣ ಯೋಜನೆ
13) ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆ
14) ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಕಲಿಕೆ ಮತ್ತು ಬೋಧನಾ ಸಾಮಗ್ರಿ ಪೂರೈಕೆ ಮಾಡುವ ಯೋಜನೆ
15) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ ಯೋಜನೆ
16) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ
17) ಮುರಾರ್ಜಿ ದೇಸಾಯಿ ವಸತಿ ಶಾಲೆಗಳ ಯೋಜನೆ
18) ಅಲ್ಪಸಂಖ್ಯಾತರ ಅನಾಥಾಲಯಗಳಿಗೆ ಅನುದಾನ ನೀಡುವ ಯೋಜನೆ
19) ವಕ್ಫ್ ಆಸ್ತಿಗಳ ಸಂರಕ್ಷಣೆಗಾಗಿ ಸರ್ಕಾರದಿಂದ ನಿರ್ಮಾಣ, ದುರಸ್ತಿ ಹಾಗೂ ಜೀರ್ಣೋದ್ಧಾರಕ್ಕಾಗಿ ಸಹಾಯಧನ ನೀಡುವ ಯೋಜನೆ.

ಅನುಬಂಧ – 2

ವಿಷಯ: ಮತೀಯ ಅಲ್ಪಸಂಖ್ಯಾತರಿಗೆ ಶಾದಿಮಹಲ್/ಸಮುದಾಯ ಭವನ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡುವ ಕಾರ್ಯಕ್ರಮದ ಬಗ್ಗೆ.

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ:ಸಕಿ 245 ಬಿಎಂಎಸ್ 2000 ದಿನಾಂಕ:05–10–2000.
2) ದಿನಾಂಕ:04–07–2006ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಖ್ ಜನಾಂಗದವರ ಸಾಮಾಜಿ ಮತ್ತು ಸಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವ ಸಲುವಾಗಿ ಅದರಲ್ಲೂ ಪ್ರಮುಖವಾಗಿ ಮುಸ್ಲಿಂ ಜನಾಂಗದವರು ವಿವಾಹ ನೆರವೇರಿಸಲು ಶಾದಿಮಹಲ್‌ಗಳನ್ನು ನಿರ್ಮಿಸುವ ಅವಶ್ಯಕತೆ ಇರುತ್ತದೆ ಎಂದು ಮತ್ತು ಈ ಸಂಬಂಧ ಮತೀಯ ಅಲ್ಪಸಂಖ್ಯಾತರಿಗೆ ಸೇರಿದ ಖಾಸಗಿ ಸಂಸ್ಥೆಗಳು ಮುಂದೆ ಬಂದಲ್ಲಿ, ಅಂತಹ ಸಂಸ್ಥೆಗಳಿಗೆ ರೂ.5.00ಲಕ್ಷಗಳ ಗರಿಷ್ಠ ಮೊತ್ತಕ್ಕೆ ಸೀಮಿತಗೊಳಿಸಿ ಕೆಲವು ಅಗತ್ಯ ಷರತ್ತುಗಳೊಂದಿಗೆ ಆದೇಶ ಹೊರಡಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಸಭೆಯ ನಡವಳಿಗಳಲ್ಲಿ ಈ ಶಾದಿಮಹಲ್ ಯೋಜನೆಯು 2000ರಿಂದ ಪ್ರಚಲಿತವಾಗಿದ್ದು, ಈಗಿನ ಸನ್ನಿವೇಶದಲ್ಲಿ ಕಟ್ಟಡ ಸಾಮಗ್ರಿಗಳ ಬೆಲೆಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಹಾಗೂ ಈ ಸಮಾಜಕ್ಕೆ ಸಂಬಂಧಿಸಿದ ಸಂಘ ಸಂಸ್ಥೆಗಳು ಶಾದಿಮಹಲ್, ಸಮುದಾಯ ಭವನಗಳ ಕಟ್ಟಡಗಳ ಮೂಲ ಸೌಕರ್ಯಗಳ ಅವಶ್ಯಕತೆಯನ್ನು ಪೂರೈಸುವಲ್ಲಿ ಸಹಾಯವಾಗಲು ಸರ್ಕಾರದ ಈ ಆರ್ಥಿಕ ಸಹಾಯವನ್ನು ಹೆಚ್ಚಿಸಲು ಕೋರಿರುತ್ತಾರೆ ಮತ್ತು ಅಲ್ಪಸಂಖ್ಯಾತರಿಂದ ಮಂತ್ರಿಗಳಿಗೆ ಮತ್ತು ಸಂಸದ ಸದಸ್ಯರಿಗೂ ಕೂಡ ಆರ್ಥಿಕ ಸಹಾಯ ಹೆಚ್ಚಿಸುವ ಬಗ್ಗೆ ಮನವಿಗಳು ಸ್ವೀಕೃತವಾಗಿರುತ್ತವೆ.

ಅಧಿಕಾರಯುಕ್ತ ಸಮಿತಿಯು ಮೇಲೆ(2)ರಲ್ಲಿ ಓದಲಾದ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ಜಿಲ್ಲಾ ಮತ್ತು ಇತರೆ ಸ್ಥಳಗಳಲ್ಲಿ ಕಟ್ಟಡದ ನಿರ್ಮಾಣದ ಖರ್ಚು ಮತ್ತು ಪ್ರಚಲಿತ ನಿವೇಶನಗಳ ಬೆಲೆ ಹೆಚ್ಚಳವಾಗಿರುವ ಪರಿಸ್ಥಿತಿಯನ್ನು

ಪರಿಗಣಿಸಿ, ಪ್ರಸಕ್ತ ಸಾಲಿನಿಂದ ಸದರಿ ಆರ್ಥಿಕ ಸಹಾಯಕವನ್ನು ಪ್ರತಿ ಪ್ರಸ್ತಾವನೆಗೆ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ರೂ.50.00ಲಕ್ಷಗಳಿಗಿಂತ ಮತ್ತು ಇತರೆ ಕೇಂದ್ರಗಳಲ್ಲಿ ರೂ.20.00ಲಕ್ಷಗಳಿಗಿಂತ ಕಮ್ಮಿ ಇರಕೂಡದೆಂಬ ಮಿತಿಯನ್ನು ನಿಗದಿಪಡಿಸಿರುತ್ತಾರೆ. ಈ ಅನುದಾನವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಸಂಖ್ಯೆ:2225-03-277-2-48 (ಯೋಜನೆ) ಅಡಿಯಲ್ಲಿ ಒದಗಿಸಿರುವ ಮೊತ್ತದಿಂದ ಹೊರಡಿಸಬಹುದಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಸಕಿ 91 ಅಸಂಯೋ 2006

ಬೆಂಗಳೂರು, ದಿನಾಂಕ:17-07-2006

ಅಲ್ಪಸಂಖ್ಯಾತರ ಶಾದಿಮಹಲ್ ಸಮುದಾಯ ಭವನ ಯೋಜನೆಯ ಬಗ್ಗೆ ಪರಿಶೀಲಿಸಲಾಗಿ, ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಖ್ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸದರಿ ಜನಾಂಗಕ್ಕೆ ಸೇರಿದ ಖಾಸಗಿ ಸಂಘ ಸಂಸ್ಥೆಗಳು ಅವರ ಅನುಕೂಲಕ್ಕಾಗಿ ಶಾದಿಮಹಲ್/ಸಮುದಾಯ ಭವನಗಳನ್ನು ನಿರ್ಮಿಸಲು ಉದ್ದೇಶಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಅಂತಹ ಸಂಘ ಸಂಸ್ಥೆಗಳಿಗೆ ಶಾದಿಮಹಲ್/ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಗರಿಷ್ಠ ಮಿತಿ ಜಿಲ್ಲಾ ಕೇಂದ್ರಗಳಲ್ಲಿ ರೂ.50.00ಲಕ್ಷಗಳಿಗೆ ಮೀರದಂತೆ ಮತ್ತು ಇತರೆ ಸ್ಥಳಗಳಲ್ಲಿ ರೂ.20.00ಲಕ್ಷಕ್ಕೆ ಮೀರದಂತೆ ಮತ್ತು ಇತರೆ ಸ್ಥಳಗಳಲ್ಲಿ ರೂ.20.00ಲಕ್ಷಕ್ಕೆ ಮೀರದಂತೆ ಅನುದಾನ ಮಂಜೂರು ಮಾಡುವ ಕಾರ್ಯಕ್ರಮಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರ ಮಂಜೂರಾತಿ ನೀಡಿದೆ ಹಾಗೂ ಮೇಲೆ(1)ರಲ್ಲಿ ಓದಲಾದ ಸರ್ಕಾರಿ ಆದೇಶವನ್ನು ಈ ದಿನಾಂಕದಿಂದ ರದ್ದುಪಡಿಸಾಗಿದೆ.

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಈ ಕೆಳಗಿನ ನಿಬಂಧನೆಗಳಿರುತ್ತವೆ.

1. ಅಭ್ಯರ್ಥಿಯು ಬಿಳಿ ಹಳೆಯ ಮೇಲೆ ಅರ್ಜಿಯನ್ನು ಸಲ್ಲಿಸಬೇಕು
2. ಅಲ್ಪಸಂಖ್ಯಾತರ ವರ್ಗಕ್ಕೆ ಸೆರಿದವರಾಗಿರಬೇಕು
3. ವಾರ್ಷಿಕ ಆದಾಯ ರೂ.22,00/-ಗಳ ಒಳಗಿರಬೇಕು
4. ಇವರು ಸಣ್ಣ ಹಿಡುವಳಿದಾರರಾಗಿರಬೇಕು
5. ಇವರು 2 ರಿಂದ 5 ಎಕರೆ ಜಮೀನು ಹೊಂದಿರಬೇಕು.
6. ಪಾಣಿ ಮತ್ತು ರೆಕಾರ್ಡ್ ಆಫ್ ರೈಟ್ಸ್ ಇವರ ಹೆಸರಿನಲ್ಲಿರಬೇಕು
7. ಅಭ್ಯರ್ಥಿಯು ತಾಲ್ಲೂಕು ಸಮಿತಿಯಿಂದ ಆಯ್ಕೆಯಾಗಬೇಕು.

16 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)
ಪ್ರೊ.ಡಾ:ಮುಮ್ತಾಜ್ ಆಲಿ ಖಾನ್‌ಹಜ್(ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ 2008ರ ಬಜೆಟ್‌ನಲ್ಲಿ ರಾಜ್ಯದ ಯಾವ ಸ್ಥಳಗಳಲ್ಲಿ ಎಷ್ಟು ಶಾದಿಮಹಲ್‌ಗಳನ್ನು ನಿರ್ಮಿಸಲಾಗುವುದೆಂದು ತಿಳಿಸಲಾಗಿತ್ತು.

ಇಂತಹ ಗುರಿ ಸರ್ಕಾರದ ಮುಂದೆ ಇರುವುದಿಲ್ಲ.

ಆ 2008ರ ಬಜೆಟ್ ನಲ್ಲಿ ಶಾದಿಮಹಲ್‌ಗಳ ಸ್ಥಾಪನೆಗಾಗಿ ಮೀಸಲಿಟ್ಟ ಹಣವೆಷ್ಟು ಹಾಗೂ ಈವರೆಗೆ ಬಿಡುಗಡೆ ಮಾಡಲಾದ ಹಣವೆಷ್ಟು ಮತ್ತು ಪ್ರಾರಂಭಿಸಲಾಗಿರುವ ಸ್ಥಳಗಳಾವುವು (ವಿವರ ನೀಡುವುದು)

2008-09ರ ಆಯವ್ಯಯದಲ್ಲಿ ರೂ.1500.00 ಲಕ್ಷಗಳನ್ನು ಒದಗಿಸಿದ್ದು, ಈವರೆಗೆ ರೂ.641.00 ಲಕ್ಷವನ್ನು ಬಿಡುಗಡೆ ಮಾಡಲಾಗಿದ್ದು, ಇನ್ನುಳಿದ ಹಣವನ್ನು ಪ್ರಸ್ತುತ ಆರ್ಥಿಕ ವರ್ಷ ಮುಗಿಯುವುದರೊಳಗೆ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದು. ಪ್ರಾರಂಭಿಸಲಾಗಿರುವ ಸ್ಥಳಗಳ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಇ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾದಿಮಹಲ್ ಸ್ಥಾಪನೆಗೆ ಯಾವಾಗ ಚಾಲನೆ ನೀಡಲಾಗುವುದು?

ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

18 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)
ವೈದ್ಯಕೀಯ ಶಿಕ್ಷಣ ಸಚಿವರು

ಅ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ಯಾವ ಸರ್ಕಾರವಿದ್ದಾಗ ಹಾಗೂ ಯಾವಾಗ ರಾಮನಗರದಲ್ಲಿ ಸ್ಥಾಪಿಸಲು ತೀರ್ಮಾನ ತೆಗೆದುಕೊಳ್ಳಲಾಯಿತು;

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ರಾಮನಗರಕ್ಕೆ ಸ್ಥಳಾಂತರಿಸುವ ತೀರ್ಮಾನವನ್ನು ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾಗಿದ್ದ ಸರ್ಕಾರದಲ್ಲಿ ತೆಗೆದುಕೊಳ್ಳಲಾಗಿದೆ ಹಾಗೂ ದಿನಾಂಕ:10.08.2007ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟಿದೆ.

ಆ ಈ ವಿಶ್ವವಿದ್ಯಾಲಯ ಸ್ಥಾಪನೆಯ ವಿಭಾಗಗಳ ರೂಪುರೇಶೆ ಗಳೇನೆಂಬುದರ ಬಗ್ಗೆ ಪೂರ್ಣ ವಿವರ ನೀಡುವುದು;

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ವೈದ್ಯಕೀಯ, ದಂತವೈದ್ಯಕೀಯ, ಫಾರ್ಮಸಿ, ಶುಶ್ರೂಷಾ ಮಹಾ ವಿದ್ಯಾಲಯಗಳ ಜೊತೆಗೆ 250 ಹಾಸಿಗೆಗಳುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು 750 ಹಾಸಿಗೆಗಳ ಸುಸಜ್ಜಿತ ಆಧುನಿಕ ಆಸ್ಪತ್ರೆ ಮತ್ತು ಇತರೆ ಪೂರಕ ಕಟ್ಟಡಗಳ ನಿರ್ಮಾಣ.

ಇ ಈ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಮೀಸಲಾಗಿಟ್ಟ ಹಣ ಎಷ್ಟು; ಇಲ್ಲಿಯವರೆವಿಗೂ ಬಿಡುಗಡೆ ಮಾಡಿದ ಹಣ ಎಷ್ಟು ಹಾಗೂ ಕಾಮಗಾರಿಯು ಯಾವ ಹಂತದಲ್ಲಿವೆ ಎಂಬುದನ್ನು ತಿಳಿಸುವುದು;

ಮೀಸಲಿಟ್ಟ ಒಟ್ಟು ಮೊತ್ತ

– ರೂ.310.00ಕೋಟಿ

ಇದುವರೆವಿಗೆ ಬಿಡುಗಡೆಯಾದ ಮೊತ್ತ

– ರೂ.43.00ಕೋಟಿ

ಕಾಮಗಾರಿ ಪ್ರಾರಂಭವಾಗಬೇಕಾಗಿದೆ

ಈ ಕಾಮಗಾರಿಯನ್ನು ಇನ್ನೂ ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ವಿಶ್ವವಿದ್ಯಾಲಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಭೂಸ್ವಾಧೀನ ಪ್ರಕ್ರಿಯೆ ಮುಗಿದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

19ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)
ಮಾನ್ಯ ಕಾರ್ಮಿಕ ಸಚಿವರು.

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳು ಹಾಗೂ ಅದರಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳು:

ಸಂಖ್ಯೆ	ಸರ್ಕಾರಿ	ಅನುದಾನಿತ	ಅನುದಾನ ರಹಿತ
ಸಂಸ್ಥೆಗಳು	01	ಇಲ್ಲ	04
ವಿದ್ಯಾರ್ಥಿಗಳು	136	ಇಲ್ಲ	357

ಆ) ಈ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿರುವ ಅಗತ್ಯ ಸಿಬ್ಬಂದಿಗಳ ಕೊರತೆ ಎಷ್ಟು (ವಿವರ ನೀಡುವುದು);

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕೊರತೆ ಇರುವ ಸಿಬ್ಬಂದಿಗಳು –6. ವಿವರಗಳು:–

1. ಪ್ರಥಮ ದರ್ಜೆ ಸಹಾಯಕರು–01.

2. ದ್ವಿತೀಯ ದರ್ಜೆ ಸಹಾಯಕರು-01.
3. ಕಾರ್ಯಗಾರ ಸಹಾಯಕರು-05.
4. ಸಮೂಹ ಡಿ-03.
5. ಕಿರಿಯ ತರಬೇತಿ ಅಧಿಕಾರಿ-06.

ಇ) 2008ನೇ ಅಧಿವೇಶನದಲ್ಲಿ (13/1) ಈ ಸಿಬ್ಬಂದಿ ಕೊರತೆಯನ್ನು ತಕ್ಷಣವೇ ಪರಿಹರಿಸಲಾಗುವುದೆಂದು ತಿಳಿಸಲಾಗಿದ್ದು, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಲೋಕಸೇವಾ ಆಯೋಗಕ್ಕೆ ಕಿರಿಯ ತರಬೇತಿ ಅಧಿಕಾರಿಗಳನ್ನು ಆಯ್ಕೆ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿರುತ್ತದೆ. ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿಯನ್ನು ಪಡೆದು ಶೀಘ್ರವಾಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಪ್ರಸ್ತುತ ತಾತ್ಕಾಲಿಕವಾಗಿ ಖಾಲಿ ಇರುವ ಕಿರಿಯ ತರಬೇತಿ. ಅಧಿಕಾರಿ ಹುದ್ದೆಗಳ ಎದುರು ಅತಿಥಿ ಬೋಧಕರನ್ನು ಆಹ್ವಾನಿಸಿ ತರಬೇತಿ ನೀಡಲಾಗುತ್ತಿದೆ. ಕ್ರಮ ಸಂಖ್ಯೆ: 1 ರಿಂದ 4 ರಲ್ಲಿನ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬಲಾಗಿದೆ

ಹಾಸ್ಟೆಲ್ ಕಟ್ಟಡ ಹಾಗೂ ಸಿಬ್ಬಂದಿ ಕೊರತೆ ಪೂರೈಸಿರುವ ಬಗ್ಗೆ

20ಶ್ರೀ ಬಾಲಕೃಷ್ಣ ಹೆಚ್.ಸಿ.

ಶ್ರೀ.ಡಿ. ಸುಧಾಕರ(ಸಮಾಜ ಕಲ್ಯಾಣ ಸಚಿವರು)

ಅ ಮಾಗಡಿ ವಿಭಾಗ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿವಿಧ ವರ್ಗದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು(ಪ್ರತಿ ವಿದ್ಯಾರ್ಥಿ ನಿಲಯಗಳಲ್ಲಿನ ವಿವರ ನೀಡುವುದು);

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ.ಜಾತಿ. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿನ ವಿಧ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 1082 ಆಗಿದ್ದು 2008-09 ನೇ ಸಾಲಿಗೆ 601 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ನಿಲಯವಾರು ಕೆಳಕಂಡಂತಿದೆ.

ಮಾಗಡಿ ತಾಲ್ಲೂಕು	ಮಂಜೂ ರಾತಿ ಸಂಖ್ಯೆ	ದಾಖ ಲಾತಿ ಸಂಖ್ಯೆ
1.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಗುಡೇಮಾರನಹಳ್ಳಿ	45	39
2.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಬಾಳೇನಹಳ್ಳಿ	50	37
3.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಮಾಗಡಿ ಟೌನ್	110	37
4.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ,	70	27

ಕುದೂರು		
5.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ತಿಪ್ಪಸಂದ್ರ	50	32
6.ಸರ್ಕಾರಿ ಮೆ.ಪೂ.ಬಾಲಕಿಯರ ವಿದ್ಯಾರ್ಥಿನಿಲಯ, ಮಾಗಡಿ ಟೌನ್	100	54
7.ಸರ್ಕಾರಿ ಮೆ.ಪೂ.ಬಾಲಕೀಯರ ವಿದ್ಯಾರ್ಥಿನಿಲಯ, ಕುದೂರು	75	30
8.ಸರ್ಕಾರಿ ಮೆ.ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಮಾಗಡಿ ಟೌನ್	57	14
9.ಸರ್ಕಾರಿ ಮೆ.ನಂತರದ ಬಾಲಕರ ವಿದ್ಯಾರ್ಥಿನಿಲಯ, ಕುದೂರು, ಮಾಗಡಿ ತಾ:	50	21
10.ಸರ್ಕಾರಿ ಮೆ.ನಂತರದ ಬಾಲಕರ ವಿದ್ಯಾರ್ಥಿನಿಲಯ, ಮಾಗಡಿ ಟೌನ್	100	15
11.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ದೊಡ್ಡಗಂಗವಾಡಿ	50	45
12.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಹೊಂಟೇಗೌಡನದೊಡ್ಡಿ	50	47
13.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಬಿಡದಿ	50	39
14.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಕಣ್ವಾ	50	50
15.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಜಾಲಮಂಗಲ	100	50
16.ಸರ್ಕಾರಿ ಮೆ.ಪೂ.ಬಾಲಕರ ವಿದ್ಯಾರ್ಥಿನಿಲಯ, ಕೋಡಿಯಾಲಕರೇನಹಳ್ಳಿ	75	64
ಒಟ್ಟು	**1082**	**601**

ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ 10 ಮೆಟ್ರಿಕ್ ಪೂರ್ವ ಮತ್ತು 3 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದೆ. ನಿಲಯವಾರು ಕೆಳಕಂಡಂತಿದೆ.

ವಿದ್ಯಾರ್ಥಿನಿಲಯದ ಹೆಸರು	ಮಂಜೂರಾತಿ ಸಂಖ್ಯೆ
<u>ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು</u>	65
1.ಬಾಲಕರ ವಿದ್ಯಾರ್ಥಿನಿಲಯ,ಮಾಗಡಿ ಟೌನ್	100

2.ಬಾಲಕರ ವಿದ್ಯಾರ್ಥಿನಿಲಯ,ತಗ್ಗಿಕುಪ್ಪೆ	50
3.ಬಾಲಕಿಯರ ವಿದ್ಯಾರ್ಥಿನಿಲಯ, ತಗ್ಗಿಕುಪ್ಪ	50
4.ಬಾಲಕರ ವಿದ್ಯಾರ್ಥಿನಿಲಯ, ಮಾಡಬಾಳ್	50
5.ಬಾಲಕರ ವಿದ್ಯಾರ್ಥಿನಿಲಯ, ಅಜ್ಜನಹಳ್ಳಿ	50
6.ಬಾಲಕರ ವಿದ್ಯಾರ್ಥಿನಿಲಯ, ಕ್ಯಾಸಾಪುರ	50
7.ಬಾಲಕಿಯರ ವಿದ್ಯಾರ್ಥಿನಿಲಯ, ಕೂಟಗಲ್	50
8.ಬಾಲಕರ ವಿದ್ಯಾರ್ಥಿನಿಲಯ, ಯರೆಹಳ್ಳಿ	50
9.ಬಾಲಕರ ವಿದ್ಯಾರ್ಥಿನಿಲಯ, ಬಿಡದಿ	50
10.ಬಾಲಕಿಯರ ವಿದ್ಯಾರ್ಥಿನಿಲಯ, ಮಾಗಡಿ ಟೌನ್ (2008–09ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿರುತ್ತದೆ)	50
<u>ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು</u>	
1. .ಬಾಲಕರ ವಿದ್ಯಾರ್ಥಿನಿಲಯ, ಮಾಗಡಿ ಟೌನ್	60
2.ಬಾಲಕಿಯರ ವಿದ್ಯಾರ್ಥಿನಿಲಯ, ಕುದೂರು	50
3.ಬಾಲಕಿಯರ ವಿದ್ಯಾರ್ಥಿನಿಲಯ, ಮಾಗಡಿ ಟೌನ್ (2008–09ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿರುತ್ತದೆ)	100

ಆ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿ ಯಲ್ಲಿನ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಸಮಾಜ ಕಲ್ಯಾಣ ಇಲಾಖಾವತಿಯಿಂದ 11 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ. 5 ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಪ.ಜಾತಿ ವಿದ್ಯಾರ್ಥಿನಿಲಯ ಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಂಡಿದ್ದು ವಿವರಗಳು ಈ ಕೆಳಕಂಡಂತಿವೆ:

ವಿದ್ಯಾರ್ಥಿನಿಲಯದ ಹೆಸರು	ಸ್ವಂತ ಕಟ್ಟಡ ನಿರ್ಮಿಸಲು ಕೈಗೊಂಡ ಕ್ರಮ
1.ಸರ್ಕಾರಿ ಮೆ.ಪೂ. ಬಾಲಕಿಯರ ವಿದ್ಯಾರ್ಥಿ ನಿಲಯ, ಕುದೂರು	ನಿವೇಶನ ಗುರುತಿಸಿದ್ದು ಇಲಾಖಾ ವಶಕ್ಕೆ ಪಡೆಯಬೇಕಾಗಿದೆ.
2.ಸರ್ಕಾರಿ ಮೆ.ಪೂ ಬಾಲಕರ ವಿದ್ಯಾರ್ಥಿ ನಿಲಯ, ಹೊಂಚೇಗೌಡನದೊಡ್ಡಿ	ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.
3.ಸರ್ಕಾರಿ ಮೆ.ಪೂ ಬಾಲಕರ ವಿದ್ಯಾರ್ಥಿ ನಿಲಯ, ಬಿಡದಿ	ನಿವೇಶನ ಗುರುತಿಸಲಾಗಿದೆ.
4.ಸರ್ಕಾರಿ ಮೆ.ಪೂ ಬಾಲಕರ	ನಿವೇಶನ ಗುರುತಿಸಲಾಗಿದೆ.

ವಿದ್ಯಾರ್ಥಿ ನಿಲಯ, ಕೋಡಿಯಾಲಕರೇನಹಳ್ಳಿ	
5.ಸರ್ಕಾರಿ ಮೆ.ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕೂದೂರು, ಮಾಗಡಿ ಟೌನ್	ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ 5 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಹಾಗೂ 2 ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳು ಹೀಗೆ ಒಟ್ಟು 7 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕ್ರ ಸಂ.	ವಿದ್ಯಾರ್ಥಿನಿಲಯದ ಹೆಸರು
	ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
1	ಬಾಲಕರ ವಿದ್ಯಾರ್ಥಿನಿಲಯ,ಅಜ್ಜನಹಳ್ಳಿ
2	ಬಾಲಕರ ವಿದ್ಯಾರ್ಥಿನಿಲಯ,ಕ್ಯಾಸಾಪುರ
3	ಬಾಲಕರ ವಿದ್ಯಾರ್ಥಿನಿಲಯ,ಯರೆಹಳ್ಳಿ
4	ಬಾಲಕರ ವಿದ್ಯಾರ್ಥಿನಿಲಯ,ಬಿಡದಿ
5	ಬಾಲಕರ ವಿದ್ಯಾರ್ಥಿನಿಲಯ,ಮಾಗಡಿ ಟೌನ್ (2008-09ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿರುತ್ತದೆ)
	ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು
1	ಬಾಲಕಿಯರ ವಿದ್ಯಾರ್ಥಿನಿಲಯ,ಕುದೂರು
2	ಬಾಲಕಿಯರ ವಿದ್ಯಾರ್ಥಿನಿಲಯ, ಮಾಗಡಿ ಟೌನ್ (2008-09ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿರುತ್ತದೆ)

ಇ 2008ರ ಅಧಿವೇಶನದಲ್ಲಿನ ಪ್ರಶ್ನೆಯ ಉತ್ತರದಲ್ಲಿ ಇವುಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಿಸಲಾಗುತ್ತಿದೆಯೆಂದು ತಿಳಿಸಲಾಗಿದ್ದು, ಇಲ್ಲಿಯವರೆಗೆ ಎಷ್ಟು ಸ್ವಂತ ಕಟ್ಟಡಗಳನ್ನು ಪೂರ್ಣ ಗೊಳಿಸಲಾಗಿದೆ ಹಾಗೂ ಪೂರ್ಣಗೊಳ್ಳದಿದ್ದಲ್ಲಿ ಕಾರಣಗಳೇನು;

<u>ಸಮಾಜ ಕಲ್ಯಾಣ ಇಲಾಖೆ:-</u>

ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಾಡಿಗೆ ಕಟ್ಟಡದಲ್ಲಿ 5 ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದು, ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯದ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ವಿದ್ಯಾರ್ಥಿ ನಿಲಯಗಳ ಸಂಖ್ಯೆ	ವಿವರ
ಅ	5	1.ಸರ್ಕಾರಿ ಮೆ.ಪೂ. ಬಾಲಕಿಯರ ವಿದ್ಯಾರ್ಥಿ ನಿಲಯ, ಕುದೂರು 2.ಸರ್ಕಾರಿ ಮೆ.ಪೂ ಬಾಲಕರ ವಿದ್ಯಾರ್ಥಿ ನಿಲಯ, ಹೊಂಟೇಗೌಡನದೊಡ್ಡಿ 3.ಸರ್ಕಾರಿ ಮೆ.ಪೂ ಬಾಲಕರ ವಿದ್ಯಾರ್ಥಿ ನಿಲಯ, ಬಿಡದಿ 4.ಸರ್ಕಾರಿ ಮೆ.ಪೂ ಬಾಲಕರ ವಿದ್ಯಾರ್ಥಿ ನಿಲಯ, ಕೋಡಿಯಾಲಕರೇನಹಳ್ಳಿ 5.ಸರ್ಕಾರಿ ಮೆ.ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕುದೂರು, ಮಾಗಡಿ ಟೌನ್

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಕಳೆದ ಅಧಿವೇಶನದ ಪ್ರಶ್ನೆ ಸಂ 346ರಲ್ಲಿ ಕೇರಳಾದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಕುದೂರು ಇದರ ಕಟ್ಟಡ ನಿಮಾಣ ಪ್ರಗತಿಯಲ್ಲಿದೆ ಎಂಬುದಾಗಿ ತಿಳಿಸಲಾಗಿತ್ತು. ಸದರಿ ಕಟ್ಟಡ ಇನ್ನೂ ನಿರ್ಮಾಣ ಹಂತದಲ್ಲಿದ್ದು, ಮೊದಲನೇ ಮಹಡಿಗೆ ಆರ್.ಸಿ.ಸಿ ಹಾಕಲಾಗಿದೆ. ನಿವೇಶನದ ಸ್ವಲ್ಪ ಭಾಗ ರಸ್ತೆಗೆ ಹೋಗಿದ್ದು, ಹಿಂದು ಅನುಮೋದನೆಯಾಗಿದ್ದ ನಕ್ಷಯ ಬದಲಾಗಿ ಲಭ್ಯವಾದ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಹೊಸದಾಗಿ ನಕ್ಷೆ ಸಿದ್ದಪಡಿಸಿ ಅನುಮೋದನೆ ಪಡೆದು ಕೆಲಸ ಪ್ರಾರಂಭಿಸಿದ್ದರಿಂದ ವಿಳಂಬವಾಗಿರುತ್ತದೆ.

ಆರ್.ಐ.ಡಿ.ಎಫ್ ಯೋಜನೆಯಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬಿಡದಿ ಮತ್ತು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಯರೇಹಳ್ಳಿ ಇದರ ಕಟ್ಟಡ ನಿರ್ಮಾಣ. ಕಾರ್ಯಗಳಿಗೆ ಮಂಜೂರಾತಿ ದೊರೆತಿದ್ದು, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಯರೇಹಳ್ಳಿ ಇದರ ಕಟ್ಟಡ ನಿರ್ಮಾಣ ಮೇಲ್ಚಾವಣಿರೆಗೆ ಬಂದಿರುತ್ತದೆ. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಬಿಡದಿ ಇದರ ಕಟ್ಟಡ ನಿರ್ಮಿಸಲು ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಸ್ಥಳ ಪರಿಶೀಲನೆ ಮಾಡಿ, ಲಭ್ಯವಿದ್ದ ನಿವೇಶನ, ಕಟ್ಟಡ ನಿರ್ಮಾಣಕ್ಕೆ ಯೋಗ್ಯವಾಗಿರುವುದಿಲ್ಲವೆಂದು ತಿಳಿಸಿದ್ದು, ಬದಲಿ ನಿವೇಶನ ಪಡೆಯಲು ಕ್ರಮವಹಿಸಲಾಗುತ್ತಿದೆ.

ಈ 2008ರ ಅಧಿವೇಶನದಲ್ಲಿ ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ 30 ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳು ಖಾಲಿ ಇದ್ದು ತಕ್ಷಣವೇ ಭರ್ತಿ ಮಾಡಲಾಗುವು ದೆಂದು ತಿಳಿಸಲಾಗಿತ್ತು ಈ 30 ಖಾಲಿ ಹುದ್ದೆಗಳ ಸಂಪೂರ್ಣ ವಿವರ ನೀಡುವುದು ಹಾಗೂ ಇಲ್ಲಿಯವರೆಗೂ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ?

<u>ಸಮಾಜ ಕಲ್ಯಾಣ ಇಲಾಖೆ:-</u>

ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಸ್ತುತ 12 ಮೆಟ್ರಿಕ್ ಪೂರ್ವ ಮತ್ತು 02 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು ಈ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ಹುದ್ದೆ ವಿವರ	ಗ್ರೂಪ್ 'ಸಿ'	ಗ್ರೂಪ್ 'ಡಿ'	ಒಟ್ಟು
1	ವಿದ್ಯಾರ್ಥಿನಿಲಯ, ವಾರ್ಡ್‌ನ್	6	–	6
2	ಅಡುಗೆಯವರು	–	11	11
3	ಅಡುಗೆ ಸಹಾಯಕರು	–	9	9
4	ರಾತ್ರಿ ಕಾವಲುಗಾರರು	–	4	4
	ಒಟ್ಟು	**6**	**24**	**30**

ಪತ್ರ ಸಂಖ್ಯೆ: ಎಸ್‌ಡಬ್ಲ್ಯೂಡಿ 239: ಬಿಇಟಿ 2007, ದಿನಾಂಕ:8–7–2008 ರಲ್ಲಿ 27 ಸೀನಿಯರ್ ವಾರ್ಡನ್ ಹುದ್ದೆಗಳನ್ನು 450 ವಾರ್ಡನ್ ಹುದ್ದೆಗಳನ್ನು ನೇರನೇಮಕಾತಿ ಮುಖಾಂತರ ಭರ್ತಿ ಮಾಡಲು ಹಾಗೂ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರ ಖಾಲಿ ಹುದ್ದೆಗಳನ್ನು ಹೊರ ಸಂಪನ್ಮೂಲಗಳಿಂದ ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಅದರಂತೆ ಪ್ರಥಮ ಹಂತದಲ್ಲಿ 250 ವಾರ್ಡನ್ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗ ಬೇಕಾಗಿದೆ. ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಬಂದ ನಂತರ ವಾರ್ಡನ್ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಗ್ರೂಪ್–ಡಿ ವೃಂದದ ಖಾಲಿ ಹುದ್ದೆಗಳನ್ನು ಹೊರ ಸಂಪನ್ಮೂಲದ ಮೂಲಕ ಭರ್ತಿ ಮಾಡಲು ಅನುಮತಿ ನೀಡಿದಂತೆ 24 ಗ್ರೂಪ್–ಡಿ ವೃಂದದ ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರ ಹುದ್ದೆಗಳನ್ನು ಹೋರ ಸಂಪನ್ಮೂಲದಿಂದ ಭರ್ತಿ ಮಾಡಲು ಕ್ರಮ ಕೈಗೊಂಡಿದೆ.

<u>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:</u>

ಮಾಗಡಿ ವಿಧಾನ ಸಭಾ ಕ್ಷೇತ್ರವಲ್ಲಿ ಒಟ್ಟು 12 ಇಲಾಖಾ ವಿದ್ಯಾರ್ಥಿ ನಿಲಯಗಳಿದ್ದು, ಸದರಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ

ನಿಲಯಗಳಲ್ಲಿ ಒಟ್ಟಾರೆ 39 ಗ್ರೂಪ್-ಸಿ ಮತ್ತು ಡಿ ಹುದ್ದೆಗಳು ಖಾಲಿ ಇರುತ್ತವೆ (ಸನ್ 2008ರವರೆಗೆ)

ವಿದ್ಯಾರ್ಥಿನಿಲಯದ ಹೆಸರು ಮತ್ತು ಸ್ಥಳ	ನಿ. ಪಾ	ನಿ. ಮೇ	ಅಡುಗೆಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು	ಒಟ್ಟು
1.ಮೆ.ಪೂ.ಬಾ.ವಿ.ನಿ. ಮಾಗಡಿಟೌನ್	-	-	-	1	-	1
2.ಮೆ.ಪೂ.ಬಾಲಕಿಯರ ವಿ.ನಿ. ಮಾಗಡಿ ಟೌನ್ (ಹೊಸದು)	-	1	2	1	1	5
3.ಮೆ.ನಂ.ಬಾಲಕಿಯರ ವಿ.ನಿ.ಮಾಗಡಿ ಟೌನ್	1	-	3	2	1	7
4.ಮೆ.ನಂ.ಬಾ.ವಿ.ನಿ ಮಾಗಡಿ ಟೌನ್	-	-	1	-	-	1
5.ಮೆ.ನಂ.ಬಾ.ವಿ.ನಿ ಅಜ್ಜನಹಳ್ಳಿ, ಮಾಗಡಿ ಟೌನ್	-	1	2	1	-	4
6.ಮೆ.ಪೂ.ಬಾಲಕಿಯರ ವಿ.ನಿ. ತಗ್ಗಿಕುಪ್ಪೆ, ಮಾಗಡಿ ಟೌನ್	-	-	1	1	-	2
7.ಮೆ.ಪೂ.ಬಾಲಕಿಯರ ವಿ.ನಿ.ಕುದೂರು, ಮಾಗಡಿ ಟೌನ್	-	-	1	1	-	2
8.ಮೆ.ಪೂ.ಬಾ.ವಿ.ನಿ ಕ್ಯಾಸಾಪುರ,ರಾಮನಗರ	-	1	2	1	-	4
9.ಮೇ.ಪೂ.ಬಾ.ವಿ.ನಿ ಲಕ್ಷ್ಮೀಪುರ,ರಾಮನಗರ	-	1	2	1	-	4
10.ಮೆ.ಪೂ.ಎರೆಹಳ್ಳಿ ರಾಮನಗರ ತಾ:	-	1	2	1	-	4
11.ಮೆ.ಪೂ.ಬಾಲಕಿಯರ ವಿ.ನಿ.ಕೂಟಗಲ್ ರಾಮನಗರ ತಾ:	-	-	2	1	1	4
12.ಮ.ಪೂ.ಬಾ.ವಿ.ನಿ. ಬಿಡದಿ,ರಾಮನಗರ ತಾ:	-	1	-	-	-	1
ಒಟ್ಟು	**1**	**6**	**18**	**11**	**3**	**39**

ದಿನಾಂಕ:8-7-2008ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ದಿನಾಂಕ:30-4-2008ರಂದು ಖಾಲಿ ಇದ್ದ 88 ನಿಲಯ ಪಾಲಕರು ಹಾಗೂ 454 ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ

ನೀಡಿದ್ದು, 542 ಅಡುಗೆಯವರು 800 ಅಡುಗೆ ಸಹಾಯಕರು, 293 ಕಾವಲುಗಾರರು, 86 ಜವಾನರು, 158 ಸ್ವಚ್ಛತಾ ಸಿಬ್ಬಂದಿಯನ್ನು ನೇರ ನೇಮಕಾತಿ ಬದಲಿಗೆ ಹೊರಮೂಲದಿಂದ ಪಡೆಯಲು ಅನುಮತಿ ನೀಡಿರುತ್ತದೆ.

- ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ನಿಲಯ ಮೇಲ್ವಿಚಾರಕರ 337 ಹುದ್ದೆಗಳು ಹಾಗೂ ನಿಲಯ ಚಾಲಕರ 45 ಹಾಗೂ 34 ಆಶ್ರಮಶಾಲಾ ಶಿಕ್ಷಕರು, ಗ್ರೂಪ್–ಸಿ ಹುದ್ದೆಗಳನ್ನು ಭರ್ತಿಮಾಡಲು ದಿನಾಂಕ:2–8–2008 ಮತ್ತು 24–6–2008ರ ಪತ್ರದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ತಿಳಿಸಲಾಗಿದೆ.
- ಗ್ರೂಪ್–ಡಿ ವೃಂದದ ಅಡುಗೆಯವರು, ಅಡುಗೆಸಹಾಯಕರು, ರಾಷ್ಟ್ರ ಕಾವಲುಗಾರರು, ಜವಾನರು ಮತ್ತು ಸ್ವಚ್ಛತಾ ಸಿಬ್ಬಂದಿ ಹುದ್ದೆಗಳನ್ನು ಹೊರಮೂಲದಿಂದ ಭರ್ತಿ ಮಾಡಲು ದಿನಾಂಕ:11–11–2008ರಲ್ಲಿ ಸೂಚನೆ ನೀಡಿದ್ದು, ಈಗಾಗಲೇ ಅದರಂತೆ ಜಿಲ್ಲೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ದಲಿತ ಮಹಿಳೆಯ ಕುಟುಂಬಕ್ಕೆ ಪರಿಹಾರ ನೀಡುವುದು

21 ಶ್ರೀ ಆರ್.ಧ್ರುವನಾರಾಯಣ್

ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು.)

ಅ) ಮಾಗಡಿ ತಾಲ್ಲೂಕಿನ ಗೆಜಗಾರಕುಪ್ಪೆ ಸಮೀಪದ ಲಕ್ಕಸಂದ್ರ ಗ್ರಾಮದ ಕಿರು ನೀರು ಸರಬರಾಜು ಟ್ಯಾಂಕಿನಲ್ಲಿ ಕುಡಿಯುವ ನೀರು ಹಿಡಿದಿದ್ದರಿಂದ ದಲಿತ ಮಹಿಳೆಯನ್ನು ಜಾತಿ ಹೆಸರಲ್ಲಿ ನಿಂದಿಸಿ, ಪಂಚಾಯಿತಿ ನಡೆಸಿ, 101 ರೂಪಾಯಿಗಳ ದಂಡ ಹಾಕಿದ್ದರಿಂದ ಅವಮಾನಿತಳಾಗಿ ದಲಿತ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿರುತ್ತದೆ.

ಆ) ಆ ಮಹಿಳೆಯ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ; ಎಷ್ಟು ಹಣವನ್ನು ಪರಿಹಾರದ ರೂಪದಲ್ಲಿ ನೀಡಲಾಗಿದೆ; ಪರಿಹಾರ ಕೊಟ್ಟಿಲ್ಲದಿದ್ದಲ್ಲಿ ಅದನ್ನು ಎಂದು ನೀಡಲಾಗುವುದು;

ಹೌದು. ರೂ.50.000.00 ಮೊತ್ತದ ಪರಿಹಾರ ನೀಡಲಾಗಿದೆ.

ಇ ಈ ಘಟನೆಗೆ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು?

ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿತ್ತು. ಆದರೆ ಆರೋಪಿಗಳು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದು ಕಾನೂನಿನ್ವಯ ಮುಂದಿನ ಕ್ರಮ ಜರುಗಿಸಲಾಗುವುದು.

ಡಾ. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಸಾಲ ನೀಡುವುದು

23 ಶ್ರೀ ಆರ್.ಧ್ರುವನಾರಾಯಣ್

ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ ಸಹಕಾರ ಇಲಾಖೆಯ ಸಂಘ ಸಂಸ್ಥೆ ಮತ್ತು ಸೊಸೈಟಿ ಗಳಲ್ಲಿ ನೀಡಲಾಗುವ ಸಾಲಕ್ಕೆ ಕೇವಲ ಶೇ.3 ರಷ್ಟು ಮಾತ್ರ ಬಡ್ಡಿದರ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸಹಕಾರಿ ಪತ್ತಿನ ಸಂಸ್ಥೆಗಳು ರಾಜ್ಯದಲ್ಲಿ ರೈತರು ನೇಕಾರರು ಹಾಗು ಮೀನುಗಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ದಿನಾಂಕ:01-04-2008ರಿಂದ ಜಾರಿಗೊಳಿಸಲು ಮಂಜೂರಾತಿ ನೀಡಲಾಗಿದೆ.

ಆ ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ ದಿಂದ ನೀಡಲಾಗುವ ಸಾಲಕ್ಕೆ ವಿಧಿಸಲಾಗುತ್ತಿರುವ ಬಡ್ಡಿದರ ಎಷ್ಟು;

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಅಡಿ ನಡೆಯುವ ಸಾಲಕ್ಕೆ ಈ ಕೆಳಗಿನಂತೆ ಬಡ್ಡಿ ದರ ನಿಗದಿಪಡಿಸಲಾಗಿದೆ.

1) ಸ್ವಯಂ ಉದ್ಯೋಗ ಹಾಗೂ ಐ.ಎಸ್.ಬಿ. ಯೋಜನೆಯಡಿ ನೀಡುವ ಅಂಚಿನ ಸಾಲಕ್ಕೆ-ಶೇ.4.

2) ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮ ಇದರಿಂದ ಅವಧಿ ಸಾಲ ಪಡೆದು, ನೀಡುವ ಸಾಲಕ್ಕೆ ನಿಗದಿಪಡಿಸಿರುವ ಬಡ್ಡಿದರದ ವಿವರ ಈ ಕೆಳಗಿನಂತಿವೆ:-

- ನೇರಸಾಲ ಯೋಜನೆಯಡಿ ಅವಧಿಸಾಲಕ್ಕೆ ಶೇ.6
- ನೇರಸಾಲ ಯೋಜನೆಯಡಿ ನಿಗಮ ನೀಡುವ ಅಂಚಿನ ಹಣಕ್ಕೆ-ಶೇ.4.
- ಮಹಿಳಾ ಸಮೃದ್ಧಿ ಯೋಜನೆಯಡಿ ಅವಧಿಸಾಲಕ್ಕೆ-ಶೇ.4.
- ಮಹಿಳಾ ಕಿಸಾನ್ ಯೋಜನೆಯಡಿ ಅವಧಿ ಸಾಲಕ್ಕೆ-ಶೇ.5
- ಭೂ ಒಡತನ ಯೋಜನೆಯಡಿ ಅವಧಿ ಸಾಲಕ್ಕೆ-ಶೇ.6.
- ಮೈಕ್ರೋ ಕ್ರೆಡಿಟ್ ಯೋಜನೆಯಡಿ ಅವಧಿ ಸಾಲಕ್ಕೆ-ಶೇ.5.
- ಮೈಕ್ರೋ ಫೈನಾನ್ಸ್ (ಕಿರುಸಾಲ) ಯೋಜನೆಯಡಿ ನಿಗಮ ನೀಡುವ ಅಂಚಿನ ಹಣಕ್ಕೆ-ಶೇ.4.
- ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಇವರಿಂದ ಪಡೆದ ಅವಧಿ ಸಾಲಕ್ಕೆ-ಶೇ.6, ನಿಗಮ ನೀಡುವ ಅಂಚಿನ ಹಣಕ್ಕೆ-ಶೇ.4.

ಇ ಸಹಕಾರ ಸಂಘಗಳಲ್ಲಿರುವಂತೆ ಶೇ.3ರ ಬಡ್ಡಿದರವನ್ನು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಫಲಾನುಭವಿಗಳಿಗೂ ವಿಸ್ತರಿಸುವಲ್ಲಿ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವುದು.

24 ಶ್ರೀ ಆರ್.ಧ್ರುವನಾರಾಯಣ್

ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ ರಾಜ್ಯದ ವಿವಿಧ ಇಲಾಖೆ ಮತ್ತು ನಿಗಮಗಳಲ್ಲಿ ಪ್ರಸ್ತುತ ಗುರುತಿಸಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು;

18994

ಆ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಪ್ರಗತಿ ಪರಿಶೀಲನೆಗಾಗಿ ಸಂಪುಟದ ಉಪಸಮಿತಿಯ ರಚನೆಯಾಗಿದೆಯೇ;

ಇಲ್ಲ

ಇ ಹಾಗಿದ್ದಲ್ಲಿ, ಆ ಉಪಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಯಾರು;

ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಹಾಗಿದ್ದಲ್ಲಿ, ಯಾವಾಗ ರಚನೆ ಮಾಡಲಾಗುವುದು?

ಸರ್ಕಾರದ ಪರಿಶೀಲನೆಯಲ್ಲಿದೆ.

25 ಶ್ರೀ ಆರ್.ಧ್ರುವನಾರಾಯಣ್ ಎಂ.ಎಲ್.ಎ.

ಪ್ರೊ.ಡಾ.ಮುಮ್ತಾಜ್ ಅಲಿ ಖಾನ್(ಹೆಚ್.ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ 2006–07, 2007–08 ಮತ್ತು 2008–09ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡಲಾದ ಒಟ್ಟು ಅನುದಾನ ಎಷ್ಟು?

ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವ ಅನುದಾನದ ವಿವರ ಇಂತಿದೆ:–

1.2006–07 – ರೂ.4800.00 ಲಕ್ಷಗಳು

2.2007–08 – ರೂ.5035.00 ಲಕ್ಷಗಳು

3.2008–09 – ರೂ.5120.00 ಲಕ್ಷಗಳು

ಆ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಪ್ರತಿ ರೈತನಿಗೆ ಕೊಳವೆ ಬಾವಿ ಕೊರೆಸಲು ನೀಡಲಾಗುವ ಅನುದಾನ ಎಷ್ಟು (ವಿವರ ನೀಡುವುದು)?

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪ್ರತಿ ರೈತನಿಗೆ ನೀಡಲಾಗುತ್ತಿರುವ ಅನುದಾನದ ಮೊತ್ತ

ವೈಯಕ್ತಿಕ ಕೊಳವೆಬಾವಿಗೆ ರೂ.86,000/- ಮತ್ತು ರೂ.14,000/- ಗಳ ಸಾಲ ಹಾಗೂ ಸಾಮೂಹಿಕ 2 ಕೊಳವೆಬಾವಿಗೆ ರೂ.2,59,000/- ಹಾಗೂ 3 ಕೊಳವೆಬಾವಿಗೆ ರೂ.3,53,000/-ಗಳನ್ನು ಒದಗಿಸಲಾಗುತ್ತಿದೆ. ವೈಯಕ್ತಿಕ ಕೊಳವೆಬಾವಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

ಇ ವಿಧಾನ ಸಭಾ ಕ್ಷೇತ್ರವೊಂದಕ್ಕೆ ನೀಡಲಾಗುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

2008-09ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಮತಕ್ಷೇತ್ರಕ್ಕೆ ಅಲ್ಪಸಂಖ್ಯಾತರ ಜನಸಂಖ್ಯೆಗನುಗುಣವಾಗಿ 2 ರಿಂದ 5 ಕೊಳವೆಬಾವಿಯ ಗುರಿಯನ್ನು ನಿಗದಿಪಡಿಸಲಾಗಿದೆ.

ಈ 2008-09ರಲ್ಲಿ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರಕ್ಕೆ ನೀಡಲಾದ ಅನುದಾನದ ವಿವರಗಳನ್ನು ಒದಗಿಸುವುದು.

2008-09ನೇ ಸಾಲಿನಲ್ಲಿ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರಕ್ಕೆ 5 ವೈಯಕ್ತಿಕ ಕೊಳವೆಬಾವಿಗೆ ರೂ.5.00 ಲಕ್ಷಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿದೆ.

26 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಸಚಿವರು)

ಅ ರಾಜ್ಯದಲ್ಲಿ ಅಸಂಘಟಿತ ವಲಯಗಳ ಕಾರ್ಮಿಕರೆಂದು ಯಾರನ್ನು ಗುರುತಿಸಲಾಗಿದೆ;

ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳ ಸಾಮ್ಯಕ್ಕೆ ಒಳಪಟ್ಟ ಕಾರ್ಖಾನೆ, ನಿಗಮ, ಮಂಡಳಿ ಮತ್ತು ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಕಾರ್ಮಿಕರನ್ನು ಹೊರತುಪಡಿಸಿ, ಉಳಿದ ಎಲ್ಲಾ ಕಾರ್ಮಿಕರನ್ನು ಅಸಂಘಟಿತ ವಲಯಗಳ ಕಾರ್ಮಿಕರೆಂದು ಗುರುತಿಸಲಾಗಿದೆ.

ಆ ಈ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಿದೆ;

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ದಿ:18-01-2007 ರಂದು ಸ್ಥಾಪಿಸಿದ್ದು, ಸದರಿ ಮಂಡಳಿಯಿಂದ ಕಾರ್ಮಿಕರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಕಲ್ಪಿಸಿದೆ.

1. ನೋಂದಾಯಿತ ಕಟ್ಟಡ ಕಾರ್ಮಿಕರು ಮರಣ ಹೊಂದಿದರೆ ಅವರ ಅಂತ್ಯಕ್ರಿಯೆಗಾಗಿ ರೂ.2000/-.

2. ಕಟ್ಟಡ ಕಾರ್ಮಿಕರು ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರೆ ಮೊದಲ 5 ದಿನಗಳಿಗೆ ರೂ.400/- ರಂತೆ ಹಾಗೂ ಉಳಿದ ದಿನಗಳಿಗೆ ರೂ.50/-ರಂತೆ ಗರಿಷ್ಟ ರೂ.2,000/- ವೈದ್ಯಕೀಯ ಚಿಕಿತ್ಸೆಗೆ ಸಹಾಯಧನ.
3. ಕೆಲಸ ಮಾಡುತ್ತಿದ್ದಾಗ ಅಪಘಾತವಾಗಿ ಮರಣ ಹೊಂದಿದರೆ ಅಥವಾ ಶಾಶ್ವತ ಅಂಗವಿಕಲರಾದರೆ ಒಂದು ಲಕ್ಷಗಳ ಪರಿಹಾರ ಧನ.
4. ನೋಂದಾಯಿತಗೊಂಡು ಒಂದು ವರ್ಷ ಆದವರಿಗೆ ಹೃದ್ರೋಗ, ಕಿಡ್ನಿ ಜೋಡಣೆ ಮತ್ತು ಕ್ಯಾನ್ಸರ್ ಶಸ್ತ್ರ ಚಿಕಿತ್ಸೆಗಾಗಿ ಗರಿಷ್ಠ ರೂ.10,000/-ಗಳ ಸಹಾಯಧನ.
5. ಮಹಿಳಾ ಕಟ್ಟಡ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ ರೂ.4,000/- [ಎರಡು ಬಾರಿ ಮಾತ್ರ].
6. ಕಟ್ಟಡ ಕಾರ್ಮಿಕರ ಅವಲಂಬಿತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯಧನ ಎರಡು ಮಕ್ಕಳಿಗೆ ಮಾತ್ರ.
7. ನೊಂದಾಯಿತ ಕಟ್ಟಡ ಕಾರ್ಮಿಕರ ಮೊದಲ ಮದುವೆಗೆ ಅಥವಾ ಅವಲಂಬಿತ ಎರಡು ಮಕ್ಕಳ ಮದುವೆಗೆ ರೂ.5,000/-ಗಳ ಸಹಾಯಧನ.
8. ನಿರ್ಮಾಣ ಕೆಲಸದ ಉಪಕರಣ ಖರೀದಿಸಲು ರೂ.5,000/-ಗಳ ಸಾಲ.

ಇ ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು

ಇದಕ್ಕಾಗಿ ಸರ್ಕಾರ ವೆಚ್ಚ ಮಾಡಿರುವುದಿಲ್ಲ. ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಕಟ್ಟಡ ನಿರ್ಮಾಣಗಾರರಿಂದ ಸುಂಕ ಸಂಗ್ರಹಿಸಿ ಇದನ್ನು ಕಾರ್ಮಿಕರ ಕಲ್ಯಾಣಕ್ಕೆ ಬಳಸಲಾಗುತ್ತಿದೆ. ಇದುವರೆಗೆ ರೂ.14,60,600/-ಗಳನ್ನು ಕಟ್ಟಡ ಕಾರ್ಮಿಕರ ಕಲ್ಯಾಣಕ್ಕೆ ವೆಚ್ಚ ಮಾಡಲಾಗಿದೆ.

ಈ ರಾಜ್ಯದಲ್ಲಿ ಗಾರ್ಮೆಂಟ್ಸ್ ವಲಯದಲ್ಲಿ ಕೆಲಸ ಮಾಡುತ್ತಿರುವ ಟೈಲರ್‌ಗಳ ಕಲ್ಯಾಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಟೈಲರ್‌ಗಳ ಕಲ್ಯಾಣಕ್ಕೆ ಸರ್ಕಾರವು ಈವರೆಗೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ.

ಉ ಇವರುಗಳ ಕಲ್ಯಾಣಕ್ಕಾಗಿ ಒಂದು ನಿಗಮವನ್ನು ಸ್ಥಾಪಿಸುವ ಪ್ರಸ್ತಾಪ ವೇನಾದರೂ ಸರ್ಕಾರದ ಮುಂದಿದೆಯೇ?

ಟೈಲರ್‌ಗಳ ಕಲ್ಯಾಣಕ್ಕೆ ಪ್ರತ್ಯೇಕವಾಗಿ ನಿಗಮ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲ. ಆದರೆ ಸದರಿ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರೆಂದು ಗುರುತಿಸಲಾಗಿದ್ದು, ಅಸಂಘಟಿತ ಕಾರ್ಮಿಕರ ರಾಜ್ಯ ಮಂಡಳಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಹಿಂದುಳಿದ ವರ್ಗಗಳ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ದೊರೆಯುತ್ತಿರುವ ಸೌಲಭ್ಯಗಳು

28 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ(ಭಾಲ್ಕಿ)

ಶ್ರೀ ಡಿ.ಸುಧಾಕರ್(ಸಮಾಜ ಕಲ್ಯಾಣ ಸಚಿವರು)

ಅ ಬೀದರ್ ಜಿಲ್ಲೆ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ಎಷ್ಟು ಜನ ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ರಿಯಾಯಿತಿ (Fee concession) ಯೋಜನೆಯ ಲಾಭ ದೊರೆತಿದೆ, ಇದಕ್ಕಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ಶುಲ್ಕ ಮರು ಪಾವತಿ ಮಾಡಿದ ವಿವರಗಳು ಈ ಕೆಳಕಂಡಂತಿವೆ.

1. ಶುಲ್ಕ ಮರುಪಾವತಿ ಮಾಡಿದೆ.

   ವಿದ್ಯಾರ್ಥಿಗಳ ಸಂಖ್ಯೆ : 232

2. ಪಾವತಿ ಮಾಡಿದ ಹಣ :

   ರೂ.30,84,060/-

(ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಆ ಈ ಅವಧಿಯಲ್ಲಿ ಇನ್ನೂ ಎಷ್ಟು ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ (Fee concession) ಯೋಜನೆಯ ಸೌಲಭ್ಯ ದೊರೆಯಬೇಕಾಗಿದೆ; ಇದನ್ನು ಯಾವಾಗ ಬಿಡುಗಡೆ ಮಾಡಲಾಗುವುದು; ಎಷ್ಟು ಅವಧಿಯಿಂದ ಇದು ಬಾಕಿ ಇದೆ?

374 ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿಸಬೇಕಾಗಿದೆ. ಬಾಕಿ ಇರುವ ಶುಲ್ಕ ಮರು ಪಾವತಿಗಾಗಿ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಬಿಡುಗಡೆ ಆದ ಕೂಡಲೇ ಬಾಕಿ ಬಿಲ್ಲುಗಳನ್ನು ಇತ್ಯರ್ಥಗೊಳಿಸಲಾಗುವುದು. ಈ ಕಾರ್ಯಕ್ರಮದಡಿ 2005-06ನೇ ಸಾಲಿನಿಂದ 2007-08ನೇ ಸಾಲಿನ ವರೆಗಿನ ಬಿಲ್ಲುಗಳು ಬಾಕಿ ಇರುತ್ತದೆ.

ಬೀದರ್ ಜಿಲ್ಲೆಯ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳ ಅವಧಿಯಲ್ಲಿ ಬಂದಿರುವ ಕ್ಲೈಮುಗಳ ಮೊತ್ತ, ಪಾವತಿಸಿದ ಶುಲ್ಕ ಹಾಗೂ ಬಾಕಿ ಇರುವ ಶುಲ್ಕದ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ವರ್ಷ	ಸ್ವೀಕರಿಸಿದ ಕ್ಲೇಮಗಳ ಒಟ್ಟು ಮೊತ್ತ	ಸ್ವೀಕರಿಸಿದ ಕ್ಲೇಮಗಳ ವಿದ್ಯಾರ್ಥಿಗಳ ಸಂಖ್ಯೆ	ಪಾವತಿಸಿದ ಶುಲ್ಕದ ಒಟ್ಟು ಮೊತ್ತ	ಶುಲ್ಕ ಮರು ಪಾವತಿಸಿದ ವಿದ್ಯಾರ್ಥಿಗಳ ಸಂಖ್ಯೆ	ಬಾಕಿ ಪಾವತಿಸಿ ಬೇಕಾದ ಮೊತ್ತ	ಬಾಕಿ ಪಾವತಿಸ ಬೇಕಾದ ವಿದ್ಯಾರ್ಥಿಗಳ ಸಂಖ್ಯೆ
1	2	3	4	5	6	7	8
1	2005–06	11,24,180	135	5,28,680	63	5,95,500	72
2	2006–07	25,71,380	170	25,55,380	169	16,000	01
3	2007–08	58,48,520	301	–	–	52,48,520	301
ಒಟ್ಟು		**95,44,080**	**606**	**30,84,060**	**232**	**64,60,020**	**374**

31 ಶ್ರೀ ಖಾದರ್. ಯು.ಟಿ.(ಮಂಗಳೂರು)

ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಸಚಿವರು)

ಅ ರಾಜ್ಯದಲ್ಲಿ ದರ್ಜಿ [ಟೈಲರಿಂಗ್] ವೃತ್ತಿಯಿಂದ ಜೀವನ ಸಾಗಿಸುತ್ತಿರುವ ಕಾರ್ಮಿಕರಿಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು ದರ್ಜಿಗಳ "ಕಲ್ಯಾಣ ನಿಧಿ" ಯನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ?

ದರ್ಜಿ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರನ್ನಾಗಿ ಗುರುತಿಸಲಾಗಿರುತ್ತದೆ.

ಭಾರತ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಅಸಂಘಟಿತ ಕಾರ್ಮಿಕರ ಸಮಾಜಿಕ ಭದ್ರತೆಯ ಕಾಯಿದೆ–2008ನ್ನು ರಚಿಸಿದೆ.

ಸದರಿ ಕಾಯ್ದೆಗೆ ನಿಯಮಗಳನ್ನು ಕೇಂದ್ರ ಸರ್ಕಾರವರು ರೂಪಿಸ ಬೇಕಾಗಿದೆ. ಕಾಯಿದೆ ಕಲಂ 1[3] ರಲ್ಲಿ ಕೇಂದ್ರ ಸರ್ಕಾರ ತನ್ನ ಅಧಿಕೃತ ರಾಜ್ಯ ಪತ್ರದಲ್ಲಿ ಅಧಿ ಸೂಚನೆ ಹೊರಡಿಸಿದ ದಿನಾಂಕದಿಂದ ಕಾನೂನು ಜಾರಿಗೆ ಬರುತ್ತದೆ

205	– " –	– " –	ಶ್ರೀಮತಿ.ದಾಕಮ್ಮ ಕೋಂ ಕುಕು ಪೂಜಾರಿ ಹಿಂಗಾಡಿ ಮನೆ, ಎಲಿಯನಡುಗೋಡು ಗ್ರಾಮ, ಮೆಹನ್ನೆರಡು ಕವಲು ರಸ್ತೆ, ಭಂಟ್ವಾಳ ತಾ॥	
206	– " –	– " –	ಶ್ರೀ.ಡೀಕಯ್ಯ ಪೂಜಾರಿ ಬಿನ್ ತನಿಯ ಪೂಜಾರಿ, ನ್ಯಾಯತರ್ಪು ಗ್ರಾಮ, ನಾಳ ಅಂಚೆ, ಬೆಳ್ತಂಗಡಿ ತಾ॥	
207	– " –	– " –	ಶ್ರೀಮತಿ.ಬಾಬಿ ಹೆಂಗ್ಸು ಕೋಂ ಡೀಕಯ್ಯ ಪೂಜಾರಿ, ಬನಸಿರಿ ಮನೆ, ಕೆಳಗಿನ ಕಲ್ಯೆ, ಉಜಿರೆ ಅಂಚೆ ಗ್ರಾಮ, ಬೆಳ್ತಂಗಡಿ ತಾ॥	
208	– " –	– " –	ಶ್ರೀ.ರಾಜು ಪೂಜಾರಿ ಬಿನ್ ಬೊಗ್ಗು ಪೂಜಾರಿ, ಮಲ್ಲ ಮೂರು ಮನೆ, ಹೊಸಂಗಡಿ ಗ್ರಾಮ, ಬೆಳ್ತಂಗಡಿ ತಾ॥	
209	– " –	– " –	ಶ್ರೀ.ಎನ್.ರಾಮಣ್ಣ ಪೂಜಾರಿ ಪೂಜಾರಿ ಬಿನ್ ದೇರಣ್ಣ ಪೂಜಾರಿ, ವಳಚ್ಚಿಲ ತೊಟ್ಟು	

			ಮನೆ, ಶಿರ್ಲಾಲು ಗ್ರಾಮ, ಬೆಳ್ತಂಗಡಿ ತಾ||	
210	– " –	– " –	ಧನಂಜಯ ಸುವರ್ಣ ಬಿನ್ ಶಾಂತಪ್ಪ ಪೂಜಾರಿ, ನಡ ಗ್ರಾಮ, ಬೆಳ್ತಂಗಡಿ ತಾ||	
ಸಾಮೂಹಿಕ ಯೋಜನೆ				
211	– " –	– " –	ಕುಂಞಣ್ಣಗೌಡ ಬಿನ್ ಚೀಕ್ರಗೌಡ, ಕಡಿರುದ್ಯಾವರ ಗ್ರಾಮ, ಬೆಳ್ತಂಗಡಿ ತಾ||	ಕೊರೆದಿದೆ
212	– " –	– " –	ತಿಮ್ಮಪ್ಪಗೌಡ ಬಿನ್ ಕುಂಬಗೌಡ ಹಾಗೂ ಇತರರು – " –	– " –
213	– " –	– " –	ಶಿವಾನಂದ ಹೆಗಡೆ ಕರಂಬಾರು ಗ್ರಾಮ, ಬೆಳ್ತಂಗಡಿ ತಾ||	– " –
214	– " –	– " –	ಪ್ರಭಾವತಿ ಹೆಗಡೆ ಹಾಗೂ ಇತರರು –"–	– " –

ಅನುಬಂಧ–2

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು–52 ಗಂಗಾ ಕಲ್ಯಾಣ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ಆಯ್ಕೆಗೊಂಡ ಫಲಾನುಭವಿಗಳ ಹೆಸರು ಹಾಗೂ ಯಾವ ಹಂತದಲ್ಲಿದೆ ಎಂಬ ವಿವರ

ಕ್ರ ಸಂ.	ವರ್ಷ	ವಿಧಾನಸಭಾ ಕ್ಷೇತ್ರ	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಕೊಳವೆ ಬಾವಿಯ ಪ್ರಗತಿ ಹಂತ
1	2	3	4	5
1	2005–06	ಕುಂದಾಪುರ	ಚನ್ನಮ್ಮ ಶೇರಿಗಾರ್ತಿ ಕೋಂ ಲೇಟ್ ನಾರಾಯಣ, ಕಂದಾರವರ,ಮೂಡ್ಲಕಟ್ಟೆ, ಕುಂದಾಪುರ ತಾ||	ಕೊರೆದಿಲ್ಲ
2	– " –	– " –	ಶೇಖರ್ ಬಿನ್ ಲೇಟ್ ಬಾಲಯ್ಯ, ಮನೆ ನಂ.2–145, ಕಾಳಾವರ,	– " –

			ಕುಂದಾಪುರ	
3	– " –	ಬೈಂದೂರು	ನಾಗಮ್ಮ ಪೂಜಾರ್ತಿ ಕೋಂ ಮರ್ಲಪೂಜಾರಿ, ಬಿಜೂರು, ಕುಂದಾಪುರ ತಾಲ್ಲೂಕು.	ತೆರೆದಬಾವಿ ಕಾಮಗರಿ ಪ್ರಗತಿಯಲ್ಲಿದೆ
4	– " –	ಕಾರ್ಕಳ	ಸದಾನಂದ ಮೊಯಿಲ ಬಿನ್ ಮಂಜುನಾಥ ಮೊಯಿಲ, ಹಂದಿಕಲ್ಲುಬಾರ,ಕಾರ್ಕಳ ತಾ||	ಕೊರೆದಿದೆ
5	– " –	– " –	ರಾಧ ಮೊಯಿಲಿ ಕೋಂಡೊಂಬ ಮೊಯಿಲಿ, ಕಲ್ಯಾ, ಕಾರ್ಕಳ ತಾ||	– " –
6	– " –	– " –	ಗೀತ ಪೂಜಾರ್ತಿ ಕೋಂ ಸುಂದರ ಪೂಜಾರಿ, ಕುಕ್ಕುಜೆ, ಕಾರ್ಕಳ ತಾ||	– " –
7	– " –	– " –	ಸುಂದರ ಭಂಡಾರಿ ಬಿನ್ ಮುತ್ತು ಭಂಡಾರಿ, ಮುಂಡ್ಕೂರು, ಕಾರ್ಕಳ ತಾಲ್ಲೂಕು	ತೆರೆದಬಾವಿ ಕಾಮಗರಿ ಪ್ರಗತಿಯಲ್ಲಿದೆ
8	– " –	– " –	ಸುರೇಶ ಪೂಜಾರಿ ಬಿನ್ ಸಾಧು ಪೂಜಾರಿ, ವರಂಗ, ಕಾರ್ಕಳ ತಾಲ್ಲೂಕು.	ಕೊರೆದಿದೆ
9	– " –	– " –	ಅಶೋಕ ಕೊಟ್ಯಾನ್ ಬಿನ್ ಸುಬ್ಬಯ್ಯ ಕೊಟ್ಯಾನ್, ಇರ್ವತ್ತೂರು, ಕಾರ್ಕಳ.	– " –
10	– " –	ಉಡುಪಿ	ವಿಶ್ವನಾಥ ನಾಯಕ್ ಬಿನ್ ಸುಬ್ಬಣ್ಣ ನಾಯಕ್, ಹಿರಿಯಡ್ಕ, ಉಡುಪಿ ತಾ||	ತೆರೆದಬಾವಿ ಕಾಮಗರಿ ಪ್ರಗತಿಯಲ್ಲಿದೆ
11	– " –	ಬ್ರಹ್ಮಾವರ	ಅಕ್ಕಯ್ಯ ಆಚಾರ್ತಿ ಕೋಂ ಲೇಟ್ ಪದ್ಮನಾಭ ಆಚಾರ್ಯ, ಉಪ್ಪೂರು,	– " –

			ಉಡುಪಿ	
12	– " –	ಕಾಪು	ಸಂಜೀವ ಪುರುಷ ಬಿನ್ ಲೇಟ್ ಬಾಬು ಪುರುಷ, ಕುರ್ಕಾಲು, ಉಡುಪಿ ತಾ॥	ಕೊರೆದಿದೆ
13	– " –	– " –	ವ್ಯಾಸರಾಯ ನಾಯಕ್ ಬಿನ್ ಮಂಜುನಾಥ ನಾಯಕ್, ಶಿರ್ವ, ಉಡುಪಿ ತಾಲ್ಲೂಕು.	ತೆರೆದಬಾವಿ ಕಾಮಗರಿ ಪ್ರಗತಿಯಲ್ಲಿದೆ
14	2006–07	ಕುಂದಾಪುರ	ರಾಧ ಕೋಂ ಶಾಂತಪ್ಪ ಪೂಜಾರಿ, ಸಿದ್ದಾಪುರ, ಕುಂದಾಪುರ ತಾ॥	ತೆರೆದಬಾವಿ ಕೊರೆದಿದೆ
15	– " –	– " –	ಚಿಕ್ಕುಹಂಡ್ತಿ ಕೋಂ ಕರಿಯ ಕುಲಾಲ್, ಮಂಡಳ್ಳಿ, ಕುಂದಾಪುರ ತಾ॥	– " –
16	– " –	– " –	ಮಂಜಿ ಪೂಜಾರ್ತಿ ಕೋಂ ಗೋವಿಂದ, ಉಳ್ಳೂರು, ಕುಂದಾಪುರ ತಾ॥	ಕೊರೆದಿಲ್ಲ
17	– " –	– " –	ಮಂಜು ಭಂಡಾರಿ ಬಿನ್ ಗೋವಿಂದ ಭಂಡಾರಿ, ಮೋಳಹಳ್ಳಿ, ಕುಂದಾಪುರ	ಕೊರೆದಿದೆ
18	– " –	– " –	ಮಂಜನಾಯಕ್ ಬಿನ್ ಸುಬ್ಬನಾಯಕ್, ಹಂಪಾರು, ಕುಂದಾಪುರ ತಾ॥	– " –
19	– " –	– " –	ಕುಷ್ಟಕುಲಾಲ್ ಬಿನ್ ಮುತ್ತುಕುಲಾಲ್, ರಟ್ಟಿಡಿ, ಕುಂದಾಪುರ ತಾ॥	– " –
20	– " –	– " –	ಸಾವಿತ್ರಿಬಾಯಿ ಕೋಂ ಕೊಯಿರ ನಾಯಕ, ಹೊಡಾರು, ಕುಂದಾಪುರ ತಾ॥	ತೆರೆದಬಾವಿ ಪ್ರಗತಿಯಲ್ಲಿರುತ್ತದೆ
21	– " –	ಬೈಂದೂರು	ಕೃಷ್ಣ ಆಚಾರಿ ಬಿನ್ ರಂಗಾ	ಕೊರೆದಿದೆ

			ಆಚಾರಿ, ಮುದ್ದೂರು, ಕುಂದಾಪುರ ತಾ॥	
22	– " –	– " –	ಆನಂದನಾಯಕ ಬಿನ್ ಲಕ್ಷ್ಮಣನಾಯಕ್ ಕೆರಾಡಿ, ಕುಂದಾಪುರ ತಾ॥	– " –
23	– " –	– " –	ಗೋವಿಂದ್ರಾಯನಾಯಕ ಬಿನ್ ಮಂಜು ಕೆರಾಡಿ ಗ್ರಾಮ, ಕುಂದಾಪುರ ತಾ॥	– " –
24	– " –	– " –	ಚಂದುಗಾಣಿಗಾ ಕೋಂ ಲೇಟ್ ವೆಂಕಯ್ಯ, ಎರೇಬಾಳು, ಕುಂದಾಪುರ ತಾ॥	– " –
25	– " –	– " –	ಮೋಹನ್ ಪೂಜಾರಿ ಬಿನ್ ಅಮ್ಮಕ್ಕ ಪೂಜಾರ್ತಿ, ಉಪ್ಪಂದ,ಕುಂದಾಪುರ ತಾ॥	ಕೊರೆದಿಲ್ಲ
26	– " –	– " –	ಕುಷ್ಟುಪೂಜಾರಿ ಬಿನ್ ಮಾಧವಪೂಜಾರಿ, ಎಡ್ತರೆ, ಕುಂದಾಪುರ ತಾ॥	ಕೊರೆದಿದೆ
27	– " –	– " –	ಬಾಬುಕಾಂಚನ್ ಬಿನ್ ಲೇಟ್ ಹವಳಿ ಸೈಕ್, ದೇವಲಕುಂದ, ಕುಂದಾಪುರ ತಾ॥	– " –
28	– " –	– " –	ನಂದಿಪೂಜಾರಿ ಬಿನ್ ಲೇಟ್ ದಾರಪೂಜಾರಿ, ನೂಜಾಡಿ, ಕುಂದಾಪುರ ತಾ॥	– " –
29	– " –	– " –	ಚಂದ್ರಾವತಿ ಕೋಂ ಲೇಟ್ ನಾರಾಯಣ ಶೇರುಗಾರ, ಬಿಜೂರು, ಕುಂದಾಪುರ ತಾ	– " –
30	– " –	– " –	ಶೇಷಿಭಂಡಾರ್ತಿ ದೇವಾಡಿಗ ಕೋಂ ದುರ್ಗಯ್ಯ, ಶಿರೂರು, ಕುಂದಾಪುರ ತಾ	ತೆರೆದಬಾವಿ ಪ್ರಗತಿಯಲ್ಲಿರುತ್ತದೆ

31	2006-07	ಕಾರ್ಕಳ	ಸುಬ್ರಹ್ಮಣ್ಯ ಬಿನ್ ಲಕ್ಷ್ಮಣ ಮಡಿವಾಳ, ಹೆಬ್ರಿ, ಕಾರ್ಕಳ ತಾ॥	ತೆರೆದಬಾವಿ ಪ್ರಗತಿಯಲ್ಲಿರುತ್ತದೆ
32	– " –	– " –	ಜಯರಾಮಸಾಲಿಯಾನ್ ಬಿನ್ ಕಿಟ್ಟಪೂಜಾರಿ ಬೋಳ, ಕಾರ್ಕಳ ತಾ॥	ಕೊರೆದಿದೆ
33	2006-07	ಕಾರ್ಕಳ	ಕೊರವಳು ಪೂಜಾರ್ತಿ ಕೋಂ ಲಚ್ಚಣ್ಣ ಪೂಜಾರಿ, ನಿಂಜೂರು, ಕಾರ್ಕಳ ತಾ॥	ಕೊರೆದಿದೆ
34	– " –	– " –	ಶ್ರೀನಿವಾಸಪ್ರಭು ಬಿನ್ ಲೇಟ್ ಬಾಬುಪ್ರಭು, ಅಂಡಾರು ಗರಾಮ, ಉಡುಪಿ ತಾ॥	– " –
35	– " –	ಉಡುಪಿ	ಕಮಲ ಸೇರಿಗಾರ ಕೋಂ ವಾಸು ಸೇರಿಗಾರ, ಬೊಮ್ಮರಬೆಟ್ಟು, ಉಡುಪಿ ತಾ॥	– " –
36	– " –	– " –	ನೇತ್ರಾವತಿ ಕೋಂ ಗೋಪಾಲ ಸೇರಿಗಾರ, ಅಂಜಾರು, ಉಡುಪಿ ತಾ॥	ಕೊರೆದಿಲ್ಲ
37	– " –	ಬ್ರಹ್ಮಾವರ	ದೇವೇಂದ್ರಪ್ರಭು ಬಿನ್ ಲೇಟ್ ಕಾಳುಪ್ರಭು, ಬೆಳ್ಳರ್ಪಾಡಿ, ಉಡುಪಿ ತಾ॥	ಕೊರೆದಿದೆ
38	– " –	– " –	ಶಂಕರ ಟಿ.ಪೂಜಾರಿ ಬಿನ್ ತಿಮ್ಮಪ್ಪಪೂಜಾರಿ ಹೇರೂರು, ಉಡುಪಿ ತಾ॥	– " –
39	– " –	– " –	ಗೋಪಾಲನಾಯಕ್ ಬಿನ್ ಲೇಟ್ ಚಂದ್ರಯ್ಯ ನಾಯಕ್, ಬೈರಂಪಳ್ಳಿ, ಉಡುಪಿ ತಾ॥	ಕೊರೆದಿಲ್ಲ
40	– " –	– " –	ಕೆ.ಕೃಷ್ಣ ಮಡಿವಾಳ ಬಿನ್ ಅನಂತ ಮಡಿವಾಳ,	ಕೊರೆದಿದೆ

			ಬೇರ್ಕಾಡಿ, ಉಡುಪಿ ತಾ॥	
41	2007–08	ಕಾರ್ಕಳ	ಶ್ರೀ.ರಾಮಕೃಷ್ಣ ನಾಯಕ್ ಬಿನ್ ಅಪ್ಪು ನಾಯಕ್, ಹೊಸ್ಮಾರು, ಮುನಿಯಾಲು, ವರಂಗ, ಕಾರ್ಕಳ ತಾ॥	ತೆರೆದಬಾವಿ ಕೊರೆದಿದೆ
42	– " –	– " –	ಶ್ರೀ.ಅಶೋಕ ಜೋಗಿ ಬಿನ್ ದಿ.ಕೃಷ್ಣ ಜೋಗಿ "ದೇವಿ ಕೃಪ ನಿಲಯ" ಫಳ್ಳಿ, ಕಾರ್ಕಳ ತಾ॥	– " –
43	– " –	– " –	ಶ್ರೀ.ಬಾಡು ಪೂಜಾರಿ ಬಿನ್ ದಿ.ಕುಡ್ಡು ಪೂಜಾರಿ, "ದಡ್ಕಿ ಕಂಬಳ ಮನೆ" ನಿಂಜೂರು, ಕಾರ್ಕಳ ತಾ॥	ತೆರೆದಬಾವಿ ಕಾಮಗಾರಿ ಪ್ರಗತಿಯಲ್ಲಿದೆ
44	– " –	– " –	ಶ್ರೀಮತಿ.ಚೆಲ್ಲಿ ಪೂಜಾರ್ತಿ ಕೋಂ ದಿ.ದಾದು ಪೂಜಾರಿ, ವರಂಗ, ಮುಟ್ಲುಪಾಡಿ ರಸ್ತೆ	ತೆರೆದಬಾವಿ ಕೊರೆದಿದೆ
45	– " –	– " –	ಶ್ರೀ.ಕರಿಯ ಪೂಜಾರಿ ಬಿನ್ ಚಿಕ್ಕಯ್ಯ ಪೂಜಾರಿ, ಈದು, ಕಾರ್ಕಳ ತಾ॥	ಕೊರೆದಿಲ್ಲ
46	– " –	ಕುಂದಾಪುರ	ಶ್ರೀ.ಬಿ.ಸುಧಾಕರ ನಾಯ್ಕ ಬಿನ್ ಲೇ.ಕಮಲಾ ಬಾಯಿ, ಮನೆ ನಂ.3–26, ಗುತ್ತಿಕೆರೆ, ಬಳ್ಕೂರು, ಕುಂದಾಪುರ ತಾ॥	ತೆರೆದಬಾವಿ ಕೊರೆದಿದೆ
47	– " –	– " –	ಶ್ರೀಮತಿ.ಲಕ್ಷ್ಮೀ ಶೇರಿಗಾರ್ತಿ ಕೋಂ ದಿ.ಶ್ರೀನಿವಾಸ ಶೇರಿಗಾರ,ನಂ.1/65, ನೇರಂಬಳ್ಳಿ, ಹಂಗಳೂರು, ಕುಂದಾಪುರ ತಾ॥	ತೆರೆದಬಾವಿ ಕೊರೆದಿದೆ
48	– " –	– " –	ಶ್ರೀ.ರವೀಂದ್ರ ಶೇರಿಗಾರ್ ಬಿನ್ ತಿಮ್ಮಪ್ಪ ಶೇರಿಗಾರ್, ನುಗ್ಗಿಬೈಲು, ಕುಂದಾಪುರ	– " –

			ತಾ॥	
49	2007-08	ಕುಂದಾಪುರ	ಶ್ರೀ.ಮಂಜುನಾಥ್ ಕುಲಾಲ್ ಬಿನ್ ದುರ್ಗಾ ಕುಲಾಲ್, ಹೊಸಬಾಳು, ಕಾಸನಕೋಡ್ಲು, ಕುಂದಾಪುರ ತಾ॥	ತೆರೆದಬಾವಿ ಕೊರೆದಿದೆ
50	- " -	- " -	ಶ್ರೀಮತಿ.ಅಕ್ಕಯ್ಯ ಪೂಜಾರ್ತಿ ಬಿನ್ ಚೆನ್ನ ಪೂಜಾರಿ, ತೊಂಬಟ್ಟು, ಮುಚ್ಚಟ್ಟು, ಕುಂದಾಪುರ ತಾ॥	- " -
51	- " -	- " -	ಶ್ರೀ ಕೆ ಮಹಾಬಲ ಬಿನ್ ಹರಿಯನಾಯ್ಕ ಕಾಸಡಿ-76, ಹಾಲಾಡಿ, ಕುಂದಾಪುರ ತಾಲ್ಲೂಕು.	- " -
52		ಬೈಂದೂರು	ಶ್ರೀಮತಿ.ನಾಗು ಬಿನ್ ಲೇ.ಮರ್ಲಿ ಪೂಜಾರ್ತಿ ಅತ್ತಿಕೆರೆ,ಹೊಸೂರುಯಡ್ತರೆ, ಕುಂದಾಪುರ ತಾ	ಕೊರೆದಿದೆ
53	- " -	- " -	ಶ್ರೀಮತಿ.ಚಿಕ್ಕಮ್ಮ ಪೂಜಾರ್ತಿ ಬಿನ್ ಲೇ.ಮಾಸ್ತಿ ಪೂಜಾರ್ತಿ, ಪೂಜಾರಿ ಮನೆ, ದೊಂಬೆ, ಪಡುವರಿ, ಕುಂದಾಪುರ ತಾ	ಕೊರೆದಿದೆ
54	- " -	- " -	ಶ್ರೀಮತಿ.ನಾಗಮ್ಮ ಯಾನೆನಾಗಿ ಕೋಂ ಲೇ.ಮಗುವಣ್ಣ,ಬಿಜೂರು ಗ್ರಾಮ, ಕುಂದಾಪುರ ತಾ	ತೆರೆದಬಾವಿ ಪ್ರಗತಿಯಲ್ಲಿದೆ
55	- " -	- " -	ಶ್ರೀ.ರಾಮ ದೇವಾಡಿಗ ಬಿನ್ ಲೇ.ಕುಪ್ಪಯ್ಯ ದೇವಾಡಿಗ, ಕೊರಾಡಿ, ಯಡ್ತರೆ ಕುಂದಾಪುರ ತಾ॥	ತೆರೆದಬಾವಿ ಕೊರೆದಿದೆ
56	- " -	- " -	ಶ್ರೀ.ಶ್ರೀರಾಮ ಖಾರ್ವಿ ಬಿನ್	- " -

			ಬಡ್ಕಿ ಮಂಜ, ಊದೂರು, ಯಡ್ತರೆ, ಕುಂದಾಪುರ-ತಾ॥	
57		ಬ್ರಹ್ಮಾವರ	ಕೃಷ್ಣ ನಾಯರಿ ಬಿನ್ ಹಿರಿಯಣ್ಣ ನಾಯರಿ ವಾರಂಬಳ್ಳಿ, ಉಡುಪಿ ತಾ॥	– " –
58	– " –	– " –	ಶ್ರೀಮತಿ.ಮಿನಾಕ್ಷಿ ಪೂಜಾರ್ತಿ ಕೋಂ ಲೇ. ಪಮ್ಮ ಪೂಜಾರಿ. – " –	– " –
59	– " –	– " –	ಪ್ರಶಾಂತ ಬಿನ್ ಶಿವಮರಕಾಲ, ಮ.ನಂ.3–43 ಕನ್ನಾರು, ಚೇರ್ಕಾಡಿ, ಉಡುಪಿ ತಾ॥	ತೆರೆದಬಾವಿ ಕೊರೆದಿದೆ
			ಸಾಮೂಹಿಕ ಯೋಜನೆ	
60	– " –	– " –	ಭವಾನಿ ಶೆಡ್ತಿ ಕೋಂ ಲೇ.ಹೆರಿಯಣ್ಣ ಶೆಟ್ಟಿ ಯಡ್ತಾವಿ, ಉಡುಪಿ ತಾ॥	ಕೊರೆದಿಲ್ಲ
	– " –	– " –	ಸರೋಜಿನಿಶೆಡ್ತಿ ಕೋಂ ಶೇಖರ ಶೆಟ್ಟಿ – " –	– " –
	– " –	– " –	ಬಾಬು ನಾಯ್ಕ ಬಿನ್ ಪುಟ್ಟ ನಾಯ್ಕ – " –	
	– " –	– " –	ಶೀನ ನಾಯ್ಕ ಬಿನ್ ಪುಟ್ಟ ನಾಯ್ಕ – " –	

ಅನುಬಂಧ-2

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು-52
ಗಂಗಾ ಕಲ್ಯಾಣ ಯೋಜನೆಯಡಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಳವೆ ಬಾವಿ ಕೊರೆಯಲು ಬಾಕಿ ಇರುವ ಫಲಾನುಭವಿಗಳ ವಿವರ

ಕ್ರ ಸಂ.	ವರ್ಷ	ವಿಧಾನಸಭಾ ಕ್ಷೇತ್ರ	ಫಲಾನುಭವಿಗಳ ಹೆಸರು ಮತ್ತು ವಿಳಾಸ
1	2	3	4
		ಉಡುಪಿ ಜಿಲ್ಲೆ	
1	2005-06	ಕುಂದಾಪುರ	ಚನ್ನಮ್ಮ ಶೇರಿಗಾರ್ತಿ ಕೋಂ ಲೇಟ್ ನಾರಾಯಣ, ಕಂದಾರವರ, ಮೂಡ್ಲಕಟ್ಟೆ, ಕುಂದಾಪುರ ತಾ॥
2	- " -	- " -	ಶೇಖರ್ ಬಿನ್ ಬಾಲಯ್ಯ, ಮನೆ ನಂ.2-145, ಕಾಳವರ, ಕುಂದಾಪುರ.
3	2006-07	- " -	ಮಂಜಿ ಪೂಜಾರ್ತಿ ಕೋಂ ಗೋವಿಂದ, ಉಳ್ಳೂರು, ಕುಂದಾಪುರ ತಾ॥
4	- " -	ಬೈಂದೂರು	ಮೋಹನ ಪೂಜಾರಿ ಬಿನ್ ಅಮ್ಮಕ್ಕ ಪೂಜಾರ್ತಿ, ಉಪ್ಪಂದ, ಕುಂದಾಪುರ ತಾ॥
5	- " -	ಉಡುಪಿ	ನೇತ್ರಾವತಿ ಕೋಂ ಗೋಪಾಲ ಶೇರಿಗಾರ, ಅಂಜಾರು, ಉಡುಪಿ ತಾ॥
6	2007-08	ಕಾರ್ಕಳ	ಕರಿಯಪೂಜಾರಿ ಬಿನ್ ಚಿಕ್ಕಯ್ಯ ಪೂಜಾರಿ, ಈದು, ಕಾರ್ಕಳ ತಾ॥
7	- " -	ಬ್ರಹ್ಮಾವರ	ಭವಾನಿ ಶೆಡ್ತಿ ಕೋಂ ಹಿರಿಯಣ್ಣ ಶೆಟ್ಟಿ, ಯಡ್ತಾಡಿ, ಉಡುಪಿ ತಾ॥ ಹಾಗೂ ಇತರರು.
9	- " -	- " -	ಬಾಬುನಾಯಕ ಬಿನ್ ಪುಟ್ಟನಾಯಕ, ಯಡ್ತಾಡಿ, ಉಡುಪಿ ತಾ॥ ಹಾಗೂ ಇತರರು.
		ದಕ್ಷಿಣ ಕನ್ನಡ ಜಿಲ್ಲೆ	
1	2007-08	ಮೂಡಬಿದ್ರೆ	ಓಮಯ್ಯ ಆಚಾರ್ಯ ಬಿನ್ ರಾಮಣ್ಣ ಆಚಾರ್ಯ, ಬೆಳುವಾಯಿ, ಮಂಗಳೂರು.
2	- " -	- " -	ಶಾಂತ ಕೋಂ ಸುಧಾಕುಮಾರ್, ಹಂಡೇಲು ಪುತ್ತಿಗೆ, ಮಂಗಳೂರು.
3	- " -	- " -	ಲಕ್ಷ್ಮೀ ಪೂಜಾರ್ತಿ ಕೋಂ ಚಂದ ಪೂಜಾರ್ತಿ, ಇರುವೈಲು ಗ್ರಾಮ, ಮಂಗಳೂರು.

4	– " –	ಭಂಟ್ವಾಳ	ನಾಗೇಶಶೆಟ್ಟಿ ಬಿನ್ ಮಹಬಲಶೆಟ್ಟಿ, ಬುಡೋಳಿ, ಭಂಟ್ವಾಳ ತಾ॥
5	– " –	– " –	ನೋಣುಶೆಟ್ಟಿ ಬಿನ್ ಶಿವಣ್ಣಶೆಟ್ಟಿ ಹಾಗೂ ಇತರರು, ಬುಡೋಳಿ, ಭಂಟ್ವಾಳ ತಾ॥
6	– " –	ವಿಟ್ಲ	ಕುಸುಮಾವತಿ ಕೋಂ ಲೇಟ್ ರಾಮಣ್ಣ ಪೂಜಾರಿ, ಕಡೇಶಾಲ್ಯ, ಭಂಟ್ವಾಳ.
7	– " –	ಪುತ್ತೂರು	ರಾಮಚಂದ್ರಪ್ರಭು ಬಿನ್ ಸುಬ್ರರಾಯಪ್ರಭು, ನಾರ್ಣಕಜೆ ಮನೆ, ನಲ್ಲೂರು ಕೆಮಾಜ್ರೆ, ಸುಳ್ಯ ತಾ॥
8	– " –	ಸುಳ್ಯ	ಶ್ರೀನಿವಾಸ ನಾಯಕ ಬಿನ್ ವೆಂಕಪ್ಪ ನಾಯಕ, ಕಳಂಜ, ಸುಳ್ಯ ತಾ॥
9	– " –	– " –	ಮೋನಪ್ಪ ಪೂಜಾರಿ ಬಿನ್ ಮಾಲಿಂಗ ಪೂಜಾರಿ, ಮಂಡೇಕೋಲು, ಸುಳ್ಯ ತಾ॥
10	– " –	ಬೆಳ್ತಂಗಡಿ	ಅಪ್ಪಿ ಹೆಂಗ್ಸು, ಬಡೆಗ್ರಾ ಮನೆ, ತೆಕ್ಕಾರು, ಬೆಳ್ತಂಗಡಿ ತಾ॥
11	– " –	– " –	ಶಶಿಧರ ಪೂಜಾರಿ ಬಿನ್ ಬಾಬು ಪೂಜಾರಿ, ಕೋಡಿಮೇರು ಮನೆ, ಆರಂಬೋಡಿ, ಬೆಳ್ತಂಗಡಿ ತಾ॥

ಕರ್ನಾಟಕ ವಿಧಾನಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
ಶ್ರೀಜಗದೀಶ್ ಶೆಟ್ಟರ್

ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನ)
ಶುಕ್ರವಾರ ವಾರ 20ನೇ ಫೆಬ್ರವರಿ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 12.30 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು/ಉಪಾಧ್ಯಕ್ಷರು (ಶ್ರೀ ಜಗದೀಶ್ ಶೆಟ್ಟರ್ ರವರು)
ಪೀಠವನ್ನು ಅಲಂಕರಿಸಿದ್ದರು

12.30 pm

ಆಯವ್ಯಯ ಮಂಡನೆ

ಅಧ್ಯಕ್ಷರು: ಡಾ: ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಯವರು 2009-10ನೇ ಸಾಲಿನ ಆಯವ್ಯಯವನ್ನು ಮಂಡಿಸುವುದು.

ಡಾ: ಬಿ.ಎಸ್. ಯಡಿಯೂರಪ್ಪ: (ಮುಖ್ಯಮಂತ್ರಿ) ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಕರ್ನಾಟಕ ಸರ್ಕಾರದ 2009-2010ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ಹರ್ಷಿಸುತ್ತೇನೆ.

1. ಕರ್ನಾಟಕ ಸರ್ಕಾರದ 2009-10ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ನಾನು ಹರ್ಷಿಸುತ್ತೇನೆ. ರಾಜ್ಯದ ಜನತೆಯ ಆಶೀರ್ವಾದದಿಂದ ಸತತ ನಾಲ್ಕು ಬಾರಿ ಮುಂಗಡ ಪತ್ರ ಮಂಡಿಸುವ ಅವಕಾಶ ನನಗೆ ದೊರೆತಿದೆ. ಈ ಅವಕಾಶವಿತ್ತ ಜನತೆಗೆ ನಾನು ಋಣಿಯಾಗಿದ್ದೇನೆ.

2. ಕರ್ನಾಟಕ ಜನತೆಯ ಆಶಯದಂತೆ 2008ರ ಮೇ 30ರಂದು ಅಸ್ತಿತ್ವಕ್ಕೆ ಬಂದ ಭಾರತೀಯ ಜನತಾ ಪಕ್ಷದ ಸರ್ಕಾರ ತನ್ನ ಅಧಿಕಾರಾವಧಿಯ ಒಂಬತ್ತನೆ ತಿಂಗಳನ್ನು ಪ್ರವೇಶಿಸಿದೆ. ಸ್ಥಿರ ಸರ್ಕಾರವನ್ನು ಬಯಸಿದ ಜನತೆ ಉಪ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಗೆಲ್ಲಿಸುವ ಮೂಲಕ ಸರ್ಕಾರಕ್ಕೆ ಸ್ಥಿರತೆ ತಂದುಕೊಟ್ಟಿದ್ದಾರೆ. ನಮ್ಮ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳನ್ನು ಜನತೆ ಒಪ್ಪಿಕೊಂಡಿದ್ದಾರೆ ಎಂಬುದು ಇದರಿಂದ ದೃಢಪಟ್ಟಿದೆ. ಸ್ಥಿರತೆ ಮತ್ತು ಅಭಿವೃದ್ಧಿಗಾಗಿ ಜನಾದೇಶ ದೊರೆತಿದೆ. ಇದರಿಂದ ಸರ್ಕಾರಕ್ಕೆ ಆನೆಬಲ ಬಂದಿದೆ. ಈ ಜನಾದೇಶವನ್ನು ಅಭಿವೃದ್ಧಿಯ ವೇಗ ಮತ್ತು ವಿಸ್ತಾರವನ್ನು ಹೆಚ್ಚಿಸಲು ಬಳಕೆ ಮಾಡಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ನಾಡಿನ ಜನತೆಗೆ ಭರವಸೆ ನೀಡುತ್ತೇನೆ.

"ನನ್ನ ಕನಸಿನ ರಾಮರಾಜ್ಯದಲ್ಲಿ ಭಿಕ್ಷುಕನಿಗೂ, ಭೂಪತಿಗೂ ಸರಿಸಮಾನವಾದ ಹಕ್ಕುಗಳು ದೊರೆಯುವವು".

3. ಮಹಾತ್ಮ ಗಾಂಧೀಜಿಯವರು ಅಮೃತ ಬಜಾರ್ ಪತ್ರಿಕೆಯ 1934ರ ಆಗಸ್ಟ್ 2ರ ಸಂಚಿಕೆಯಲ್ಲಿ ಬರೆದ ತಮ್ಮ ಲೇಖನದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ಈ ಮಾತು ನಮಗೆ ದಾರಿದೀಪ. ಸರ್ವರನ್ನೂ ಸಮಾನವಾಗಿ ಪರಿಭಾವಿಸಿ ಎಲ್ಲರ ಅಭ್ಯುದಯಕ್ಕೆ ಶ್ರಮಿಸುವ ಸಂಕಲ್ಪ ತೊಡಲು ಸ್ಫೂರ್ತಿ. ಈ ದಿಶೆಯಲ್ಲಿ ದಿಟ್ಟ ಹೆಜ್ಜೆಯನ್ನಿರಿಸಿದ್ದೇವೆ.

4. ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿಯವರೆಗೆ ನಮ್ಮ ಸರ್ಕಾರಕ್ಕೆ ಹಲವು ಕಠಿಣ ಸವಾಲುಗಳು ಎದುರಾಗಿವೆ. ಅವುಗಳನ್ನು ಪರಿಹರಿಸಿಕೊಂಡು ಯಶಸ್ವಿಯಾಗಿ

ಮುನ್ನಡೆದಿದ್ದೇವೆ. ರಾಜ್ಯದಲ್ಲಿ ರಸಾಯನಿಕ ಗೊಬ್ಬರಗಳ ತೀವ್ರ ಅಭಾವ ನಾವು ಎದುರಿಸಿದ ಮೊದಲ ಸವಾಲು. ಈ ಕೊರತೆಗೆ ನಾವು ಕಾರಣರಲ್ಲವಾದರೂ ಸಮಸ್ಯೆ ಬಗೆಹರಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳದೆ, ಪರ್ಯಾಯ ವ್ಯವಸ್ಥೆಗೆ ವಿಶೇಷ ಕ್ರಮಗಳನ್ನು ಕೈಗೊಂಡ ತೃಪ್ತಿ ನಮ್ಮದು. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ನಾನು ರೈತರ ಹಿತರಕ್ಷಣೆಗೆ ಎಂದೂ ಹಿಂದೆ–ಮುಂದೆ ನೋಡಿಲ್ಲ. ಮುಂಗಾರು ವೈಫಲ್ಯ ಸೃಷ್ಟಿಸಿದ ಅಭಾವ ಪರಿಸ್ಥಿತಿ ನಾವು ಎದುರಿಸಿದ ಮತ್ತೊಂದು ದೊಡ್ಡ ಸವಾಲು. ಸೂಕ್ತ ಪರಿಹಾರ ಕಾಮಗಾರಿಗಳ ಮೂಲಕ ಈ ಸವಾಲಿಗೆ ಸಮರ್ಥ ಉತ್ತರ ಕಂಡುಕೊಂಡೆವು. ತಡವಾಗಿಯಾದರೂ ವರುಣದೇವ ಕೃಪೆ ತೋರಿದ್ದರಿಂದ, ರೈತರ ಈ ವರ್ಷ ಸಮೃದ್ಧ ಎನ್ನದಿದ್ದರೂ ಸಾಧಾರಣವಾದ ಫಸಲನ್ನು ಬೆಳೆಯಲು ಸಾಧ್ಯವಾಗಿದೆ.

5. ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಮಳೆಯ ತೀವ್ರ ಕೊರತೆಯಿಂದಾಗಿ ಜಲಾಶಯಗಳಲ್ಲಿ ಸಾಕಷ್ಟು ನೀರು ಸಂಗ್ರಹವಾಗದೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ತೀವ್ರ ಕೊರತೆ ಉಂಟಾಗಿದೆ. ಈ ಕೊರತೆಯನ್ನು ನೀಗಿಸಲು ರಾಜ್ಯ ಸರ್ಕಾರ ಹೊರ ರಾಜ್ಯಗಳಿಂದ ಮತ್ತು ಖಾಸಗಿ ಮೂಲಗಳಿಂದ ವಿದ್ಯುತ್‌ಚ್ಛಕ್ತಿ ಖರೀದಿಸುವ ಅನಿವಾರ್ಯ ಒತ್ತಡಕ್ಕೆ ಒಳಗಾಯಿತು. ಈ ಉದ್ದೇಶಕ್ಕೆ ಅಗತ್ಯ ಹೆಚ್ಚುವರಿ ಹಣಕಾಸನ್ನು ಒದಗಿಸಿಕೊಂಡು ವಿದ್ಯುತ್ ಸರಬರಾಜು ಏರುಪೇರಾಗದಂತೆ ನೋಡಿಕೊಳ್ಳಲಾಗಿದೆ. ಇಂತಹ ಸಮಸ್ಯೆಗಳ ನಡುವೆಯೂ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲದ ಕೊರತೆಯಾಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸುವ ಮೂಲಕ ಸರ್ಕಾರ ಜನತೆಯ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು ಹೇಳಲು ಅಭಿಮಾನ ಪಡುತ್ತೇನೆ.

6. ಪ್ರತಿ ನೂರು ದಿನಗಳಿಗೊಮ್ಮೆ ಜನತೆಯ ಮುಂದೆ ಯೋಜನೆ ಮತ್ತು ಸಾಧನೆ ಬಗ್ಗೆ ವಿವರವಾದ ವರದಿಯನ್ನು ಮಂಡಿಸುವ ವಿಶಿಷ್ಟ ಪದ್ಧತಿಯನ್ನು ನಾವು ಪ್ರಾರಂಭಿಸಿದ್ದೇವೆ. ಎರಡನೇ ಶನಿವಾರ ಹೊರತುಪಡಿಸಿ ಪ್ರತಿ ಶನಿವಾರದಂದು ಹೋಬಳಿ ಮಟ್ಟದಲ್ಲಿ "ಜನಸ್ಪಂದನ" ಕಾರ್ಯಕ್ರಮ ಆಯೋಜಿಸುವ ಮೂಲಕ ಆಡಳಿತ ಯಂತ್ರವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ದು ಸಮಸ್ಯೆಗಳ ನಿವಾರಣೆಗೆ ಸ್ಪಂದಿಸಿದ್ದೇವೆ. ಈ ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ಮತ್ತು ಜನರ ಸಮಸ್ಯೆಗಳ ನಿವಾರಣೆಯ ದಿಕ್ಕಿನಲ್ಲಿ ಆಡಳಿತ ಯಂತ್ರವನ್ನು ಮುನ್ನಡೆಸಿದ್ದು ಈ ಪ್ರಯತ್ನದಲ್ಲಿ ಮತ್ತಷ್ಟು ಸುಧಾರಣೆ ಹಾಗೂ ದಕ್ಷತೆ ತರಲು ಸರ್ಕಾರ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

7. ಕಳೆದ ಆರು ತಿಂಗಳುಗಳಲ್ಲಿ ರಾಜ್ಯದಾದ್ಯಂತ ನಡೆಸಿದ ಜನಸ್ಪಂದನ ಕಾರ್ಯಕ್ರಮಗಳಲ್ಲಿ ಜನರ ಕುಂದುಕೊರತೆಗಳ ಬಗ್ಗೆ 6.20 ಲಕ್ಷ ಮನವಿಗಳನ್ನು ಸ್ವೀಕರಿಸಿ 5.08 ಲಕ್ಷ (ಶೇ.82) ಮನವಿಗಳನ್ನು ಇತ್ಯರ್ಥಮಾಡಿರುವುದು ಒಂದು ಅಪೂರ್ವ ದಾಖಲೆಯೆಂದು ತಿಳಿಸಲು ಸಂತೋಷಿಸುತ್ತೇನೆ. ಮುಂದಿನ ದಿನಗಳಲ್ಲಿ ಈ ಜನಪ್ರಿಯ ಕಾರ್ಯಕ್ರಮವನ್ನು ವಿಸ್ತರಿಸಿ ಗ್ರಾಮ ಮಟ್ಟದ ಯೋಜನೆಗಳ ಅನುಷ್ಠಾನ, ಕಾಮಗಾರಿಗಳ ತಪಾಸಣೆ, ಹಾಗೂ ಅಂಗನವಾಡಿ ಆಸ್ಪತ್ರೆಗಳಂತಹ ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೂ ಸಹಾಯಕವಾಗುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಆರ್ಥಿಕ ಪರಿಸ್ಥಿತಿಯ ಹಿನ್ನೆಲೆ

8. 2009-10ನೇ ಸಾಲಿನ ಮುಂಗಡ ಪತ್ರದ ವಿವರಗಳನ್ನು ಸಾದರಪಡಿಸುವ ಮುನ್ನ ಸದ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯನ್ನು ಸ್ಥೂಲವಾಗಿ ವಿವರಿಸಲು ಇಚ್ಛಿಸುತ್ತೇನೆ. 2008-09ನೇ ಸಾಲಿನ ಮಧ್ಯದ ವರೆಗೆ ಅಂದರೆ ಸೆಪ್ಟಂಬರ್ 2008ರವರೆಗೆ ಜಗತ್ತಿನ ಅತ್ಯಂತ ದೊಡ್ಡ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುವ ಅಮೆರಿಕ ಮತ್ತು ಇತರ ಹಲವು ದೇಶಗಳಲ್ಲಿ ತಲೆದೋರಿದ ಜಾಗತಿಕ ಹಣಕಾಸಿನ ಮಾರುಕಟ್ಟೆಯ ಬಿಕ್ಕಟ್ಟಿನ ಬಿರುಗಾಳಿಯು ಆ ದೇಶಗಳ ಅರ್ಥ ವ್ಯವಸ್ಥೆಯ ಹಲವಾರು ಬೃಹತ್ ಸಂಸ್ಥೆಗಳನ್ನು ತೀವ್ರ ಕ್ಷೋಭೆಗೊಳಪಡಿಸಿ ನಾಶಪಡಿಸಿದೆ. ಹಣಕಾಸಿನ ಮಾರುಕಟ್ಟೆಗಳ ಅನಿರೀಕ್ಷಿತ ಕುಸಿತದಿಂದ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯೂ ಸಹ ಗಣನೀಯ ಪ್ರಮಾಣದ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದಿದೆ. ನಮ್ಮ ದೇಶದ ಹಣಕಾಸಿನ ಮಾರುಕಟ್ಟೆಗಳಲ್ಲಿ ತೊಡಗಿಸಿದ್ದ ವಿದೇಶಿ ಹೂಡಿಕೆಗಳನ್ನು ಗಣನೀಯ ಪ್ರಮಾಣದಲ್ಲಿ ಹಿಂತೆಗೆದುಕೊಂಡ ಪರಿಣಾಮವಾಗಿ ನಮ್ಮ ಹಣಕಾಸಿನ ಮಾರುಕಟ್ಟೆಯಲ್ಲಿ ತೀವ್ರ ಕುಸಿತ ಉಂಟಾಗಿದೆ. 2008ರ ಸೆಪ್ಟಂಬರ್ ಅಂತ್ಯದವರೆಗೆ ಹಣದುಬ್ಬರದ ಪರಿಸ್ಥಿತಿಯನ್ನು ನಿಯಂತ್ರಿಸಲು ಅನುಸರಿಸಿದ್ದ ಬಿಗಿ ಹಣಕಾಸಿನ ನೀತಿಯನ್ನು ಬದಲಾಯಿಸಿ ಹಣಕಾಸಿನ ಮಾರುಕಟ್ಟೆಯಲ್ಲಿ ಹೆಚ್ಚಿನ ಹಣಕಾಸಿನ ಲಭ್ಯತೆಗೆ ಅನುವು ಮಾಡಿಕೊಡಬೇಕಾಗಿ ಬಂದಿದೆ. ಇದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಬಡ್ಡಿ ದರಗಳನ್ನು ಶೇ.9 ರಿಂದ ಶೇ.5.5ಕ್ಕೆ ಇಳಿಸಿರುವುದಲ್ಲದೆ, ಹಣಕಾಸಿನ ಸಂಸ್ಥೆಗಳು ಹೊಂದಿರಬೇಕಾದ ಕಡ್ಡಾಯ ನಗದು ಇಡುಗಂಟಿನ ಪ್ರಮಾಣವನ್ನು ಸಹ ಗಣನೀಯವಾಗಿ ಸಡಿಲಿಸಿದೆ.

9. ನಮ್ಮ ದೇಶದ ಹಣಕಾಸಿನ ಮಾರುಕಟ್ಟೆಯಲ್ಲಿ ಉದ್ಭವಿಸಿದ ಬಿಕ್ಕಟ್ಟಿನ ದೆಸೆಯಿಂದ ದೇಶದ ಕೈಗಾರಿಕೆಗಳಿಗೆ ಅಗತ್ಯವಿರುವ ಬಂಡವಾಳದ ಲಭ್ಯತೆಯಲ್ಲಿ ವ್ಯತ್ಯಯ ಉಂಟಾಗಿದೆ. ಇದೇ ಸಂದರ್ಭದಲ್ಲಿ ಹೊರ ದೇಶಗಳಲ್ಲಿ ಉಂಟಾಗಿರುವ

ವ್ಯಾಪಕವಾದ ಆರ್ಥಿಕ ಹಿಂಜರಿತದ ಪರಿಣಾಮವಾಗಿ ನಮ್ಮ ರಫ್ತು ಸಾಮಗ್ರಿಗಳಿಗೆ ಬೇಡಿಕೆ ಕಡಿಮೆಯಾಗಿದ್ದು ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳ ಉತ್ಪಾದನೆಗೆ ಅಡಚಣೆ ಉಂಟಾಗಿದೆ.

10. ಮೇಲ್ಕಂಡ ಜಾಗತಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಮ್ಮ ದೇಶದ ಅರ್ಥ ವ್ಯವಸ್ಥೆಯು ಹಿಂದೆ ನಿರೀಕ್ಷಿಸಿದ್ದಂತೆ ವಾರ್ಷಿಕ ಶೇ.9ರ ಪ್ರಮಾಣದಲ್ಲಿ ಬೆಳವಣಿಗೆಯನ್ನು ಸಾಧಿಸುವುದು ಸಾಧ್ಯವಾಗದೆ, 2008-09ನೆಯ ಸಾಲಿನ ಬೆಳವಣಿಗೆಯನ್ನು ಶೇ.7ರ ದರದಲ್ಲಿ ಸಾಧಿಸಬಹುದೆಂದು ಕೇಂದ್ರ ಸರ್ಕಾರದ ಮೂಲಗಳಿಂದ ಅಂದಾಜು ಮಾಡಲಾಗಿದೆ. ರಾಷ್ಟ್ರಮಟ್ಟದಲ್ಲಿ ಕೈಗಾರಿಕಾ ಉತ್ಪನ್ನದ ಬೆಳವಳಣಿಗೆಯು ಕಳೆದ ವರ್ಷದ ಶೇ.8.2ರ ಬೆಳವಣಿಗೆಗೆ ಬದಲಾಗಿ ಈ ಸಾಲಿನಲ್ಲಿ ಶೇ.4.1ಕ್ಕೆ ಇಳಿಯುವ ಸಂಭವವಿರುತ್ತದೆ. ಅದರಂತೆಯೇ ಸೇವಾ ಕ್ಷೇತ್ರದ ಬೆಳವಣಿಗೆಯೂ ಸಹ ಕಳೆದ ವರ್ಷದ ಶೇ.10.8ರ ಬದಲಾಗಿ ಶೇ.9.3ಕ್ಕೆ ಇಳಿಮುಖವಾಗುವುದೆಂದು ಹೇಳಲಾಗಿದೆ. ಕೃಷಿ ಕ್ಷೇತ್ರದ ಉತ್ಪನ್ನದ ಬೆಳವಣಿಗೆಯು 2007-08ರಲ್ಲಿ ಶೇ.4.9 ರಿಂದ ಈ ವರ್ಷ ಶೇ.2.6ಕ್ಕೆ ಇಳಿಯುವುದೆಂದು ಅಂದಾಜು ಮಾಡಲಾಗಿದೆ. ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹದ ಮೇಲೆಯೂ ಸಹ ಪ್ರತಿಕೂಲ ಪರಿಣಾಮ ಉಂಟಾಗಿದ್ದು ತೆರಿಗೆ ಸಂಗ್ರಹವು ಆಯವ್ಯಯದ ಅಂದಾಜು ರೂ.6.88 ಲಕ್ಷ ಕೋಟಿಗೆ ಬದಲಾಗಿ ರೂ.6.28 ಲಕ್ಷ ಕೋಟಿ ಆಗುವುದೆಂದು ಅಂದಾಜು ಮಾಡಲಾಗಿದೆ. ಇದರ ಪರಿಣಾಮವಾಗಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು 2008-09ರಲ್ಲಿ ರಾಷ್ಟ್ರೀಯ ಆಂತರಿಕ ಉತ್ಪನ್ನದ ಶೇ.6ಕ್ಕೆ ಏರಬಹುದೆಂದು ಅಂದಾಜು ಮಾಡಲಾಗಿದೆ.

11. ಮೇಲ್ಕಂಡ ಪರಿಸ್ಥಿತಿಯಲ್ಲಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ತೀವ್ರ ಬೆಳವಣಿಗೆಯ ಮಾರ್ಗದಲ್ಲಿ ಪುನಃಸ್ಥಾಪನೆ ಮಾಡಲು ಕೇಂದ್ರ ಸರ್ಕಾರವು ಈವರೆಗೆ ಎರಡು ಬಾರಿ ಆರ್ಥಿಕ ಉತ್ತೇಜನ ಕ್ರಮಗಳನ್ನು ಪ್ರಕಟಿಸಿದ್ದರೂ ಸಹ ಇದರಿಂದ ಗಮನಾರ್ಹ ಬದಲಾವಣೆ ಕಂಡುಬಂದಿರುವುದಿಲ್ಲ. ದಿನಾಂಕ: 16.2.2009ರಂದು ಮಂಡಿಸಲಾದ ಕೇಂದ್ರ ಸರ್ಕಾರದ ತಾತ್ಕಾಲಿಕ ಮುಂಗಡ ಪತ್ರದಲ್ಲಿಯೂ ಮೇಲ್ಕಂಡ ಆರ್ಥಿಕ ಹಾಗೂ ವಿತ್ತೀಯ ಪರಿಸ್ಥಿತಿಯ ಸುಧಾರಣೆಗೆ ಯಾವುದೇ ನಿರ್ದಿಷ್ಟ ಮಾರ್ಗಸೂಚಿಯನ್ನು ನಮೂದಿಸಿಲ್ಲವೆಂಬುದು ಅತ್ಯಂತ ನಿರಾಶಾದಾಯಕ ಅಂಶವೆಂದು ತಿಳಿಸಲು ವಿಷಾದಿಸುತ್ತೇನೆ.

12. ಪ್ರಸ್ತುತ ಪರಿಸ್ಥಿತಿಯನ್ನು ಸುಧಾರಿಸಲು ರಾಜ್ಯ ಸರ್ಕಾರಗಳು ಬಂಡವಾಳ ವೆಚ್ಚವನ್ನು ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರವು ಸಲಹೆ ಮಾಡಿದ್ದು ಇದಕ್ಕಾಗಿ ಈ ಸಾಲಿನ ಪ್ರತಿ ರಾಜ್ಯದ ವಿತ್ತೀಯ ಕೊರತೆಯ ಶಾಸನಬದ್ಧ ಮಿತಿಯನ್ನು ರಾಜ್ಯದ

ಆಂತರಿಕ ಉತ್ಪನ್ನದ ಶೇ.3 ರಿಂದ ಶೇ.3.5ಕ್ಕೆ ಹೆಚ್ಚಿಸಬೇಕೆಂದು ಸಲಹೆ ಮಾಡಿದೆ. ಕೇಂದ್ರ ಸರ್ಕಾರವು ಪ್ರಕಟಿಸಿರುವಂತೆ ಯೋಜನಾ ವೆಚ್ಚದಲ್ಲಿ ಸುಮಾರು ರೂ.20,000 ಕೋಟಿ ಹೆಚ್ಚಳವನ್ನು ಸಾಧಿಸಲು ಉದ್ದೇಶಿಸಿದ್ದು ಇದರ ಅಂಗವಾಗಿ ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ.

ರಾಜ್ಯದ ಆರ್ಥಿಕ ಬೆಳವಣಿಗೆ

13. ಜಾಗತಿಕ ಮಟ್ಟದ ಹಾಗೂ ರಾಷ್ಟ್ರಮಟ್ಟದ ಮೇಲ್ಕಂಡ ವಿದ್ಯಮಾನಗಳು ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ತಮ್ಮದೇ ಪರಿಣಾಮವನ್ನು ಉಂಟು ಮಾಡಿರುತ್ತವೆ. ಈಗಾಗಲೇ ಮಧ್ಯಮಾವಧಿ ವಿತ್ತೀಯ ಪರಿಶೀಲನೆಯ ಮೂಲಕ ಸರ್ಕಾರವು ವಿಧಾನ ಮಂಡಲದ ಬೆಳಗಾವಿ ಅಧಿವೇಶನದಲ್ಲಿ ಪ್ರಕಟಿಸಿರುವಂತೆ ರಾಜ್ಯದ ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ಬೆಳವಣಿಗೆಯು ಸ್ವಲ್ಪ ಮಟ್ಟಿಗೆ ಕುಂಠಿತಗೊಂಡಿರುವುದು ಕಂಡುಬರುತ್ತದೆ. ವಿಶೇಷವಾಗಿ ವಿದೇಶದ ಬೇಡಿಕೆಯನ್ನು ಅವಲಂಬಿಸಿರುವ ಮಾಹಿತಿ ತಂತ್ರಜ್ಞಾನ, ಸಿದ್ಧ ಉಡುಪುಗಳ ಉದ್ಯಮ, ಯಂತ್ರೋಪಕರಣಗಳ ತಯಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಬೇಡಿಕೆಯ ಅಭಾವದಿಂದ ಬಿಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗಿದೆ. ಇದರಿಂದಾಗಿ ರಾಜ್ಯದಲ್ಲಿ ಉದ್ಯೋಗಾವಕಾಶಗಳ ಬೆಳವಣಿಗೆಗೆ ಅಡ್ಡಿಯುಂಟಾಗಿದೆ. ಬೆಂಗಳೂರು ಮತ್ತಿತರ ನಗರ ಪ್ರದೇಶಗಳಲ್ಲಿ ಸ್ಥಿರ ಆಸ್ತಿಗಳ ವಹಿವಾಟಿನಲ್ಲಿ ಗಣನೀಯ ಹಿಂಜರಿತ ಉಂಟಾಗಿದೆ. ಇದರ ಪರಿಣಾಮವಾಗಿ ರಾಜ್ಯದ ತೆರಿಗೆ ಸಂಗ್ರಹವೂ ಸಹ ನಿರೀಕ್ಷಿತ ಮಟ್ಟವನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಹ ರಾಜ್ಯ ಸರ್ಕಾರವು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸಲು ಮತ್ತು ವಿಶೇಷವಾಗಿ 2008-09ರ ಆಯವ್ಯಯದಲ್ಲಿ ಉದ್ದೇಶಿಸಿದಂತೆ ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.

14. 2009-10ನೆಯ ಸಾಲಿನಲ್ಲಿ ರಾಜ್ಯದ ಕೈಗಾರಿಕಾ ಕ್ಷೇತ್ರವು ಶೇ.5.8ರಷ್ಟು ಮತ್ತು ಸೇವಾ ವಲಯದ ಚಟುವಟಿಕೆಗಳು ಶೇ.9.2ರಷ್ಟು ಬೆಳವಣಿಗೆ ತೋರಿಸುವುದೆಂದು ಅಂದಾಜು ಮಾಡಲಾಗಿದೆ. ಕೃಷಿ ಕ್ಷೇತ್ರದಲ್ಲಿ ಅಸಮರ್ಪಕವಾದ ಮಳೆಯಿಂದಾಗಿ 2007-08ಕ್ಕೆ ಹೋಲಿಸಿದರೆ ಶೇ.5.7ರಷ್ಟು ಉತ್ಪಾದನೆ ಕಡಿಮೆಯಾಗುವುದೆಂದು ಅಂದಾಜು ಮಾಡಲಾಗಿದೆ. ಈ ಸಾಲಿನಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಪ್ರಸ್ತುತ ಬೆಲೆಗಳಲ್ಲಿ 2007-08ರ ರೂ.2,33,802 ಕೋಟಿಯಿಂದ 2008-09ರ ಅಂತ್ಯಕ್ಕೆ ಸುಮಾರು ರೂ.2,68,138 ಕೋಟಿ ಆಗುವುದೆಂದು ಅಂದಾಜು ಮಾಡಲಾಗಿದ್ದು, ಒಟ್ಟಾರೆ ಬೆಳವಣಿಗೆಯು ಪ್ರಸ್ತುತ

ಸಾಲಿನಲ್ಲಿ 1999-2000ದ ಸ್ಥಿರ ಬೆಲೆಗಳಲ್ಲಿ ಶೇ.5.5ರಷ್ಟು ಮತ್ತು ಪ್ರಸ್ತುತ ಬೆಲೆಗಳಲ್ಲಿ ಶೇ.14.7 ಆಗುವುದೆಂದು ನಿರೀಕ್ಷಿಸಲಾಗಿದೆ. ರಾಜ್ಯದ ಜನರ ತಲಾ ಆದಾಯವು 2007-08ರಲ್ಲಿ (ಪ್ರಸ್ತುತ, ಬೆಲೆಗಳಲ್ಲಿ) ರೂ.40809 ಇದ್ದದ್ದು 2008-09ರಲ್ಲಿ ರೂ.46289ಕ್ಕೆ ಏರುವುದೆಂದು ಅಂದಾಜು ಮಾಡಲಾಗಿದೆ.

15. ಜಗತ್ತಿನ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿಯೂ, ಭಾರತದಂತೆ ಕರ್ನಾಟಕ ರಾಜ್ಯವೂ ಸಹ ಗಣನೀಯ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತಿರುವುದು ನಮ್ಮ ಆರ್ಥಿಕ ವ್ಯವಸ್ಥೆಯ ಸದೃಢತೆಗೆ ಸಾಕ್ಷಿಯಾಗಿದೆ.

ರಾಜ್ಯದ ವಿತ್ತೀಯ ಪರಿಸ್ಥಿತಿ

16. 2008-09ರ ಮುಂಗಡ ಪತ್ರವನ್ನು ಮಂಡಿಸುವ ಸಂದರ್ಭದಲ್ಲಿ ರಾಜ್ಯದ ವಿತ್ತೀಯ ಸುಧಾರಣೆಗಳ ಚಿತ್ರಣವನ್ನು ನಾನು ಮಾನ್ಯ ಸದನಕ್ಕೆ ನೀಡಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಲು ಇಚ್ಚಿಸುತ್ತೇನೆ. 2004-05ನೇ ಸಾಲಿನಿಂದ ರಾಜ್ಯ ಸರ್ಕಾರವು ಸತತವಾಗಿ ರಾಜಸ್ವ ವೆಚ್ಚದ ಮೇಲೆ ರಾಜಸ್ವ ಸ್ವೀಕೃತಿಗಳ ಹೆಚ್ಚಳವನ್ನು (Revenue Surplus) ಸಾಧಿಸುತ್ತಾ ಬಂದಿರುವುದಲ್ಲದೆ ವಿತ್ತೀಯ ಕೊರತೆಯನ್ನು (Fiscal Deficit) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3ರ ಮಿತಿಯಲ್ಲಿ ನಿಯಂತ್ರಿಸಿಕೊಂಡು ಬಂದಿರುತ್ತದೆ. 2008-09ನೆಯ ಸಾಲಿನಲ್ಲಿಯೂ ಸಹ ಇದೇ ಪರಿಸ್ಥಿತಿಯನ್ನು ಮುಂದುವರೆಸುವ ರಾಜ್ಯ ಸರ್ಕಾರದ ಉದ್ದೇಶವನ್ನು ಮುಂಗಡ ಪತ್ರದಲ್ಲಿ ಸೂಚಿಸಲಾಗಿತ್ತು. 2008-09ನೆಯ ಸಾಲಿನ ಪರಿಷ್ಕೃತ ಅಂದಾಜುಗಳ ಪ್ರಕಾರ ರಾಜ್ಯದ ರಾಜಸ್ವ ಸ್ವೀಕೃತಿಗಳು ರೂ.42,818 ಕೋಟಿ ಮತ್ತು ಸಾಲದ ಹೊರತಾಗಿ ಬಂಡವಾಳ ಸ್ವೀಕೃತಿಗಳು ರೂ.271 ಕೋಟಿ ಆಗುವ ನಿರೀಕ್ಷೆಯಿದ್ದು, ಇದು ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ ಶೇ.9.4 ಕಡಿಮೆಯಾಗಿರುತ್ತದೆ. ರಾಷ್ಟ್ರದ ಒಟ್ಟಾರೆ ಆರ್ಥಿಕ ವ್ಯವಸ್ಥೆಯ ಸದ್ಯದ ಪರಿಸ್ಥಿತಿಯನ್ನು ಗಮನಿಸಿ ಕೇಂದ್ರ ಸರ್ಕಾರವು ರಾಜ್ಯದ ವಿತ್ತೀಯ ಕೊರತೆಯ ಮಿತಿಯನ್ನು ಶೇ.3.5ಕ್ಕೆ ಹೆಚ್ಚಿಸಲು ಸಲಹೆ ಮಾಡಿದ್ದು ಅದರಂತೆ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಲು ಉದ್ದೇಶಿಸಿದೆ. ಈ ತಿದ್ದುಪಡಿಯಿಂದ ಒದಗುವ ಹೆಚ್ಚಿನ ವಿತ್ತೀಯ ಅವಕಾಶವನ್ನು ರಾಜ್ಯದ ಅಭಿವೃದ್ಧಿಗಾಗಿ ಬಂಡವಾಳ ವೆಚ್ಚಗಳಲ್ಲಿ ತೊಡಗಿಸಲಾಗುವುದು. ನಿರ್ದಿಷ್ಟವಾಗಿ ಸುಮಾರು ರೂ.1000 ಕೋಟಿ ಬಂಡವಾಳವನ್ನು ಈ ಮೂಲಕ ರಾಜ್ಯದ ಆದ್ಯತೆಗಳಾದ ವಿದ್ಯುತ್ ಉತ್ಪಾದನೆ, ಉತ್ತಮ ರಸ್ತೆಗಳ ನಿರ್ಮಾಣ, ರೈಲ್ವೆ ಮಾರ್ಗಗಳ ನಿರ್ಮಾಣ ಮತ್ತು ಬಂದರುಗಳ ಅಭಿವೃದ್ಧಿಯಂತಹ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುವುದು. ಇದರಿಂದ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು

ಬಲಪಡಿಸಲು ಮತ್ತು ಕೈಗಾರಿಕೆ ಹಾಗೂ ಸೇವಾ ವಲಯಗಳ ಅಭಿವೃದ್ಧಿಯನ್ನು ತೀವ್ರಗೊಳಿಸಲು ಬುನಾದಿಯನ್ನು ಬಲಪಡಿಸಿದಂತಾಗುವುದು.

17. ರಾಜ್ಯ ಸರ್ಕಾರದ ಒಟ್ಟು ಋಣಭಾರವು ಈ ವರ್ಷದ ಅಂತ್ಯದ ವೇಳೆಗೆ ರೂ.71,814 ಕೋಟಿ ಆಗಲಿದ್ದು ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜು ರೂ.2,68,138 ಕೋಟಿಯ ಶೇ.27ಕ್ಕಿಂತಲೂ ಕಡಿಮೆ ಇರುತ್ತದೆ. ಸರ್ಕಾರವು ತನ್ನ ಋಣಭಾರದ ಮೇಲೆ ಭರಿಸಬೇಕಾದ ಬಡ್ಡಿಯ ಮೊತ್ತವು ರಾಜ್ಯದ ರಾಜಸ್ವ ಸ್ವೀಕೃತಿಗಳಿಗೆ ಹೋಲಿಸಿದರೆ ಸುಮಾರು ಶೇ.11ರಷ್ಟಿದ್ದು ಇದು 2002-03ರಲ್ಲಿದ್ದ ಶೇ.21 ಪ್ರಮಾಣಕ್ಕಿಂತ ಗಣನೀಯವಾಗಿ ಕಡಿಮೆಯಾಗಿರುತ್ತದೆ.

ಕೇಂದ್ರದ ತೆರಿಗೆ ಭಾಗಾಂಶ ಹೆಚ್ಚಿಸಲು ಬೇಡಿಕೆ

18. ಕರ್ನಾಟಕವು ಸಾಧಿಸಿರುವ ಉತ್ತಮ ವಿತ್ತೀಯ ಸುಧಾರಣೆಗಳ ವಿವರಗಳನ್ನು ರಾಜ್ಯಸರ್ಕಾರವು ಇತ್ತೀಚೆಗೆ ಕೇಂದ್ರದ 13ನೇ ಹಣಕಾಸಿನ ಆಯೋಗದ ಮುಂದೆ ಸಾದರಪಡಿಸಿದೆ. ಕರ್ನಾಟಕದ ಅಭಿವೃದ್ಧಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ರಾಜ್ಯಕ್ಕೆ ಹೆಚ್ಚಿನ ಸಂಪನ್ಮೂಲಗಳ ಅವಶ್ಯಕತೆಯಿದ್ದು ಕೇಂದ್ರ ಸರ್ಕಾರದ ತೆರಿಗೆ ಆದಾಯದಲ್ಲಿ ರಾಜ್ಯದ ಭಾಗಾಂಶವನ್ನು ಹೆಚ್ಚಿಸಬೇಕೆಂದು ಹಣಕಾಸಿನ ಆಯೋಗದ ಮುಂದೆ ಸರ್ಕಾರವು ಮನವಿ ಸಲ್ಲಿಸಿದೆ. 6ನೆಯ ಹಣಕಾಸಿನ ಆಯೋಗದ ಶಿಫಾರಸ್ಸಿನಂತೆ 1975 ರಿಂದ 1979 ರವರೆಗೆ ಕೇಂದ್ರದ ತೆರಿಗೆಗಳಲ್ಲಿ ಶೇ.5.40 ಭಾಗಾಂಶವನ್ನು ಕರ್ನಾಟಕವು ಪಡೆಯುತ್ತಿದ್ದು ಈ ಭಾಗಾಂಶವು ಕ್ರಮೇಣ ಶೇ.4.46ಕ್ಕೆ ಇಳಿದಿರುವುದರಿಂದ ರಾಜ್ಯಕ್ಕೆ ಈ ವಿಷಯದಲ್ಲಿ ಅನಾನುಕೂಲವಾಗಿದೆಯೆಂದು ಆಯೋಗಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಇದರ ಪರಿಣಾಮವಾಗಿ ಪ್ರತಿ ವರ್ಷವೂ ರಾಜ್ಯ ಸರ್ಕಾರವು ತನ್ನ ತೆರಿಗೆ ಆದಾಯವನ್ನು ಹೆಚ್ಚಿಸಲು ವಿಶೇಷ ಶ್ರಮವಹಿಸಬೇಕಾಗಿದ್ದು 2007-08ರಲ್ಲಿದ್ದಂತೆ ಕರ್ನಾಟಕದ ತೆರಿಗೆ ಸಂಗ್ರಹಣೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.11.1ರಷ್ಟಿದ್ದು ರಾಷ್ಟ್ರದ ಇತರ ಎಲ್ಲ ರಾಜ್ಯಗಳಿಗೆ ಹೋಲಿಸಿದರೆ ಇದು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಮೇಲ್ಕಂಡ ಪರಿಸ್ಥಿತಿಯನ್ನು ಗಮನಿಸಿ ಕೇಂದ್ರದ ತೆರಿಗೆಯಲ್ಲಿ ರಾಜ್ಯಕ್ಕೆ ನ್ಯಾಯಯುತವಾದ ಭಾಗಾಂಶವನ್ನು ಹಣಕಾಸಿನ ಆಯೋಗವು ಒದಗಿಸುವುದೆಂದು ನಿರೀಕ್ಷಿಸಲಾಗಿದೆ.

ಸುಖಸ್ಯ ಮೂಲಂ ಧರ್ಮ:
ಧರ್ಮಸ್ಯ ಮೂಲಂ ಅರ್ಥ:
ಅರ್ಥಸ್ಯ ಮೂಲಂ ರಾಜ್ಯಂ

19. ಜನತೆಯ ನೆಮ್ಮದಿಯ ಜೀವನಕ್ಕೆ ಆಡಳಿತವು ಅನುಸರಿಸುವ ನೀತಿಯೇ ಬುನಾದಿಯೆಂಬುದನ್ನು ಕೌಟಿಲ್ಯನ ಅರ್ಥಶಾಸ್ತ್ರದ ಮೇಲಿನ ಸೂತ್ರವಾಕ್ಯವು

ಸೂಚಿಸುತ್ತದೆ. ಪ್ರಸ್ತುತ ಆರ್ಥಿಕ ಹಿನ್ನಡೆಯ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಿ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು 11ನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಉದ್ದೇಶಿಸಿದಂತೆ ವಾರ್ಷಿಕ ಶೇ.9ರ ಪ್ರಮಾಣಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರವು ಸೂಕ್ತ ನೀತಿಯನ್ನು ಅನುಸರಿಸಬೇಕಾಗಿದೆ. ಇದಕ್ಕಾಗಿ ಸರ್ಕಾರವು ರಾಜ್ಯದ ಯೋಜನಾ ಮಂಡಳಿಯ ನೇತೃತ್ವದಲ್ಲಿ ತಜ್ಞರ ಕಾರ್ಯಪಡೆಯ ಮೂಲಕ 'ಕರ್ನಾಟಕ – ಅಭಿವೃದ್ಧಿಯ ಮುನ್ನೋಟ' ಎಂಬ ನೀಲನಕ್ಷೆಯನ್ನು ಸಿದ್ಧಪಡಿಸಿದೆ.

20. ಮೇಲ್ಕಂಡ ಅಭಿವೃದ್ಧಿಯ ಮುನ್ನೋಟದಲ್ಲಿ ಹಿಂದಿನ ರಾಷ್ಟ್ರಪತಿಗಳಾಗಿದ್ದ ಡಾ:ಎ.ಪಿ.ಜೆ. ಅಬ್ದುಲ್‌ಕಲಾಂ ಅವರು ರಾಜ್ಯದ ವಿಧಾನ ಮಂಡಲವನ್ನು ಉದ್ದೇಶಿಸಿ 2005ರಲ್ಲಿ ನೀಡಿದ ಭಾಷಣದ ಮುಖ್ಯಾಂಶಗಳು ಅಡಕವಾಗಿವೆಯೆಂದು ತಿಳಿಸಲು ಸಂತೋಷಿಸುತ್ತೇನೆ. 2008–09ನೆಯ ಸಾಲಿನ ಮುಂಗಡ ಪತ್ರದಲ್ಲಿ ನಾನು ಚಿತ್ರಿಸಿದ 10 ಅಂಶಗಳ ಕಾರ್ಯತಂತ್ರವು ಮೇಲ್ಕಂಡ ಮುನ್ನೋಟದ ಭಾಗವಾಗಿದ್ದು ಅದರ ಅನುಷ್ಠಾನವನ್ನು ಮುಂದುವರಿಸಲು ರಾಜ್ಯ ಸರ್ಕಾರವು ಬದ್ಧವಾಗಿದೆ.

ನಡೆದುಬಂದ ದಾರಿ

21. ಮೇಲ್ಕಂಡ ಮುನ್ನೋಟದ ಚೌಕಟ್ಟಿನಲ್ಲಿ ಸರ್ಕಾರವು ಕಳೆದ ವರ್ಷ ಹಲವು ಪ್ರಗತಿಪರ ಯೋಜನೆಗಳಲ್ಲಿ ಗಣನೀಯ ಸಾಧನೆಯನ್ನು ಮಾಡಿರುವ ಬಗ್ಗೆ ತಮ್ಮ ಮುಂದೆ ಈ ಕೆಳಗಿನ ಕೆಲವು ಅಂಶಗಳಲ್ಲಿ ಸಾದರಪಡಿಸಲು ಇಚ್ಛಿಸುತ್ತೇನೆ.

- **ಭಾಗ್ಯಲಕ್ಷ್ಮಿ ಯೋಜನೆ:** ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಇಲ್ಲಿಯವರೆಗೂ 5,29,111 ಫಲಾನುಭವಿಗಳನ್ನು ಗುರುತಿಸಿದ್ದು ರೂ.548.86 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.
- **ಸಂಧ್ಯಾಸುರಕ್ಷಾ ಯೋಜನೆ:** ಸಂಧ್ಯಾ ಸುರಕ್ಷಾ ಯೋಜನೆಯಡಿ 4,16,927 ಫಲಾನುಭವಿಗಳಿಗೆ ಜನವರಿ 2009ರ ಅಂತ್ಯದ ವರೆವಿಗೆ ರೂ:58.65 ಕೋಟಿ ಹಣ ಬಿಡುಗಡೆ ಮಾಡಲಾಗಿದೆ.
- **ಜನಸ್ಪಂದನ:** ಗ್ರಾಮೀಣ ಜನರ ಸಮಸ್ಯೆ ನಿವಾರಣೆಯ ಜನಸ್ಪಂದನ ಕಾರ್ಯಕ್ರಮ ಕೋರಿ 6,20,331 ಅರ್ಜಿಗಳು ಬಂದಿದ್ದು 5,08,472 ಅರ್ಜಿಗಳನ್ನು (ಶೇ.82) ಡಿಸೆಂಬರ್ ಅಂತ್ಯದ ವರೆಗೆ ವಿಲೇವಾರಿ ಮಾಡಲಾಗಿದೆ.
- **ರೈತರಿಗೆ ಶೇಕಡ 3ರ ಬಡ್ಡಿ ದರದಲ್ಲಿ ಸಾಲ:** 2008–09ನೇ ಸಾಲಿನಲ್ಲಿ ದಿನಾಂಕ 31.01.2009ರವರೆವಿಗೆ 10,40,717 ಮಂದಿ ರೈತರಿಗೆ ರೂ.2657.78 ಕೋಟಿ ಮೊತ್ತದ ಕೃಷಿ ಸಾಲವನ್ನು ಶೇಕಡ 3ರ ಬಡ್ಡಿ ದರದಲ್ಲಿ ವಿತರಿಸಲಾಗಿದೆ.

- **22 ಲಕ್ಷ ಒಣಭೂಮಿ ರೈತರಿಗೆ ನಗದು ನೆರವು:** ಈ ವರೆಗೆ 22 ಲಕ್ಷ ಒಣಭೂಮಿ ಬೇಸಾಯವನ್ನು ಅವಲಂಬಿಸಿರುವ ರೈತ ಕುಟುಂಬಗಳಿಗೆ ತಲಾ ರೂ.1000ದಂತೆ ರೂ.220 ಕೋಟಿ ನಗದು ಸಹಾಯಧನ ನೀಡಿಕೆ.
- **ಸುವರ್ಣ ಗ್ರಾಮೋದಯ:** ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ದಿನಾಂಕ 13.1.2009ರವರೆಗೆ ಈ ವರ್ಷ ರೂ.288.89 ಕೋಟಿ ವೆಚ್ಚ ಮಾಡಲಾಗಿದೆ. 1204 ಗ್ರಾಮಗಳಲ್ಲಿ ಯೋಜನೆ ಅನುಷ್ಠಾನದಲ್ಲಿದೆ.
- **ಗ್ರಾಮೀಣ ನೀರು ಸರಬರಾಜು:** ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗಾಗಿ ಈ ವರ್ಷದ ಆಯವ್ಯಯದಲ್ಲಿ ರೂ.950 ಕೋಟಿಯಲ್ಲಿ ಈ ವರೆವಿಗೆ 650 ಕೋಟಿ ರೂಪಾಯಿ ಬಿಡುಗಡೆಯಾಗಿದ್ದು ಈಗಾಗಲೇ ರೂ.633.79 ಕೋಟಿ ವೆಚ್ಚವಾಗಿದೆ.
- **ಬಂಡವಾಳ ಹೂಡಿಕೆ:** ಏಕ ಗವಾಕ್ಷಿಯಲ್ಲಿ 222 ಕೈಗಾರಿಕೆಗಳಿಗೆ ಅನುಮೋದನೆ ನೀಡಲಾಗಿದ್ದು 3559 ಕೋಟಿ ಬಂಡವಾಳ ಹೂಡಿಕೆಯಾಗಿದ್ದು 94 ಸಾವಿರ ಉದ್ಯೋಗ ಸೃಷ್ಟಿ ನಿರೀಕ್ಷಿಸಲಾಗಿದೆ. ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ 45 ಬೃಹತ್ ಉದ್ದಿಮೆಗಳಿಗೆ ಅನುಮೋದನೆ ದೊರೆತಿದ್ದು ರೂ.1,08,,926,20 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆಯಾಗಿದ್ದು 4,90,842 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ.
- **ಉದ್ಯೋಗ ಮೇಳ:** ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಗಳಲ್ಲಿ ಉದ್ಯೋಗ ಮೇಳ ನಡೆಸಲಾಗಿದ್ದು, ಇದರಲ್ಲಿ 297 ಉದ್ಯೋಗ ಪತಿಗಳು ಪಾಲ್ಗೊಂಡಿರುತ್ತಾರೆ. 62811 ಉದ್ಯೋಗಾಕಾಂಕ್ಷಿಗಳು ಪಾಲ್ಗೊಂಡಿದ್ದು, 13612 ಉದ್ಯೋಗಗಳನ್ನು ಉದ್ಯೋಗ ಮೇಳದಿಂದಾಗಿ ಸೃಜಿಸಲಾಗಿದೆ. Apprentiship training ಕಾರ್ಯಕ್ರಮದಿಂದ 20669 ಉದ್ಯೋಗಗಳು ಸೃಷ್ಟಿಯಾಗಿವೆ.
- **ಆರೋಗ್ಯ ಕವಚ:** ಹೊಸ ತುರ್ತು ಸೇವಾ ಯೋಜನೆಗೆ (ಇ.ಎಂ.ಆರ್.ಐ.) ನವೆಂಬರ್ 1, 2008ರಂದು ಚಾಲನೆ ನೀಡಲಾಯಿತು. ಇದಕ್ಕೆ ತುರ್ತು ಕರೆ ಮಾಡುವವರು 108ಕ್ಕೆ ಯಾವುದೇ ಶುಲ್ಕವಿಲ್ಲದೇ ಕರೆ ಮಾಡಬಹುದು.. ಇದುವರೆವಿಗೆ ಈ ದೂರವಾಣಿಗೆ 9,41,666 ಸಹಾಯಕ್ಕಾಗಿ ಕರೆಗಳು ಬಂದಿವೆ. 150 ಆಂಬುಲೆನ್ಸ್‌ಗಳನ್ನು 24 ಘಂಟೆಗಳ ನಿರಂತರ ಸೇವೆಗೆ ಒಳಪಡಿಸಲಾಗಿದ್ದು, 11,468 ಜೀವಗಳನ್ನು ಉಳಿಸಲಾಗಿದೆ. 1667 ಪೊಲೀಸ್ ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

- **ಬೀಜ ವಿತರಣೆ:** ಭತ್ತ, ರಾಗಿ, ಸೂರ್ಯಕಾಂತಿ, ಮೆಕ್ಕೆಜೋಳ, ಜೋಳ, ತೊಗರಿ, ಹೆಸರು, ಉದ್ದು ಮುಂತಾದ ಒಟ್ಟು 3,58,958 ಕ್ವಿಂಟಲ್ ಬಿತ್ತನೆ ಬೀಜವನ್ನು 16.87 ಲಕ್ಷ ರೈತರಿಗೆ 2008–09ನೇ ಸಾಲಿನ ಹಿಂಗಾರು ಹಾಗೂ ಮುಂಗಾರಿನಲ್ಲಿ ವಿತರಿಸಲಾಗಿದೆ.
- **ಸಮಾಜ ಕಲ್ಯಾಣ:** ಪ.ಜಾತಿ, ಪ.ವರ್ಗ ಹಾಗೂ ಹಿಂದುಳಿದ ವರ್ಗಗಳ 293 ವಿದ್ಯಾರ್ಥಿ ನಿಲಯಗಳನ್ನು ಮತ್ತು 45 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿನ ಬಾಲಕಿಯರ ಸಂಖ್ಯೆಯನ್ನು ಶೇ.22 ರಿಂದ ಶೇ.30ಕ್ಕೆ ಏರಿಸಿ ಲಿಂಗ ತಾರತಮ್ಯವನ್ನು ಕಡಿಮೆಗೊಳಿಸಿದೆ.

22. ಇನ್ನೂ ಹಲವು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ತೀವ್ರ ಪ್ರಗತಿಯನ್ನು ಸಾಧಿಸಲು ನಮ್ಮ ಅವಿರತ ಪ್ರಯತ್ನ ನಡೆದಿದ್ದು ಮುಂಬರುವ ದಿನಗಳಲ್ಲಿ ರಾಜ್ಯದ ಸರ್ವತೋಮುಖ ಪ್ರಗತಿಗೆ ಸರ್ಕಾರವು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

ಅಭಿವೃದ್ಧಿಯ ಕಾರ್ಯತಂತ್ರ

23. ರಾಜ್ಯದ ಗ್ರಾಮೀಣ ಜನತೆಯು ಬಹುತೇಕ ಕೃಷಿ ಮತ್ತು ಸಂಬಂಧಿತ ಉದ್ಯೋಗಗಳಲ್ಲಿ ನಿರತವಾಗಿದ್ದು ಕೃಷಿ ಅಭಿವೃದ್ಧಿಯು ಜನತೆಯ ಜೀವನ ಮಟ್ಟವನ್ನು ಸುಧಾರಿಸಲು ಅನಿವಾರ್ಯವಾಗಿದೆ. ಆದ್ದರಿಂದ ರಾಜ್ಯ ಸರ್ಕಾರದ ಅಭಿವೃದ್ಧಿ ನೀತಿಯಲ್ಲಿ ಕೃಷಿ ಅಭಿವೃದ್ಧಿಗೆ ಸದಾ ಅಗ್ರ ಸ್ಥಾನವೇ ಸಲ್ಲಬೇಕಾಗಿದೆ. ಇದಲ್ಲದೆ, ರಾಜ್ಯದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಯುವಪೀಳೀಗೆಗೆ ಹೆಚ್ಚು ಹೆಚ್ಚು ಲಾಭದಾಯಕವಾದ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಪ್ರಮುಖ ಅವಶ್ಯಕತೆಯಾಗಿದೆ. ಈಗಾಗಲೇ ಸುಮಾರು ಶೇ.58ರಷ್ಟು ಜನರಿಗೆ ಉದ್ಯೋಗ ಒದಗಿಸುತ್ತಿರುವ ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳನ್ನು ವಿಸ್ತರಿಸಲು ಸೀಮಿತ ಅವಕಾಶವಿರುವುದರಿಂದ ಮುಂಬರುವ ವರ್ಷಗಳಲ್ಲಿ ರಾಜ್ಯದ ಆರ್ಥಿಕ ವಿಕಾಸವು ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳ ಅಭಿವೃದ್ಧಿಯ ಮೇಲೆ ಅವಲಂಬಿಸಿರುವುದನ್ನು ನಾವು ಗಮನಿಸಬೇಕಾಗಿದೆ. 'Industrialise or perish' ಎಂಬ ಸೂತ್ರ ವಾಕ್ಯವನ್ನು ನೀಡಿದ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರು ತೋರಿದ ಮಾರ್ಗದಲ್ಲಿ ನಾವು ದೃಢನಿರ್ಧಾರದಿಂದ ಮುಂದುವರಿಯಬೇಕಾಗಿದೆ. **ಆದ್ದರಿಂದ ಕೃಷಿ ಮತ್ತು ನೀರಾವರಿಯ ಅಭಿವೃದ್ಧಿಯ ಜೊತೆಗೆ ರಾಜ್ಯದ ಔದ್ಯೋಗೀಕರಣದ ಹಾದಿಯನ್ನು ಸುಗಮಗೊಳಿಸಲು ವಿದ್ಯುಚ್ಛಕ್ತಿಯ ಉತ್ಪಾದನೆ, ರಸ್ತೆ ಮತ್ತು ಸಂಪರ್ಕ ಜಾಲಗಳ ಅಭಿವೃದ್ಧಿ, ರೈಲ್ವೆ ಮಾರ್ಗಗಳ ಅಭಿವೃದ್ಧಿ, ಬಂದರುಗಳ ಹಾಗೂ ವಿಮಾನ ನಿಲ್ದಾಣಗಳ**

ನಿರ್ಮಾಣ, ಕೈಗಾರಿಕಾ ಕ್ಷೇತ್ರಗಳ ನಿರ್ಮಾಣ ಮುಂತಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರವು ವಿಶೇಷ ಗಮನ ಹರಿಸಬೇಕಾದ ಅವಶ್ಯಕತೆ ಇದೆ. ಇದಲ್ಲದೆ, ಮಾನವ ಶಕ್ತಿ ಸಂಪನ್ಮೂಲಗಳ ಅಭಿವೃದ್ಧಿ ನಗರಗಳ ವ್ಯವಸ್ಥಿತ ಬೆಳವಣಿಗೆ, ಸಾಮಾಜಿಕ ನ್ಯಾಯ ಮತ್ತು ಕನ್ನಡ ನುಡಿ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಆದ್ಯತೆ ನೀಡಬೇಕಾಗಿದೆ. ಆರ್ಥಿಕ ಹಿಂಜರಿತದ ಇಂದಿನ ಪ್ರತಿಕೂಲ ಪರಿಸ್ಥಿತಿಯಲ್ಲಿ ರಾಜ್ಯದ ಜನತೆಯ ಜೀವನ ಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಭವಿಷ್ಯದ ಬೆಳವಣಿಗೆಗಾಗಿ ಅಗತ್ಯವಿರುವ ತಳಹದಿಯನ್ನು ನಿರ್ಮಿಸಲು 2009-10ನೆಯ ಸಾಲಿನ ಮುಂಗಡ ಪತ್ರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆಯೆಂದು ತಿಳಿಸಲು ಹರ್ಷಿಸುತ್ತೇನೆ.

ಡಾ॥ ನಂಜುಂಡಪ್ಪ ವರದಿಯ ಅನುಷ್ಠಾನದಲ್ಲಿ ಹೊಸ ಹೆಜ್ಜೆ

24. ಡಾ॥ ನಂಜುಂಡಪ್ಪ ಅವರ ವರದಿಯ ಅನುಸಾರ ಗುರುತಿಸಲಾದ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಕಳೆದ ಎರಡು ವರ್ಷಗಳಿಂದ ವಿಶೇಷ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗುತ್ತಿದೆ. ಈ ಯೋಜನೆಗೆ 2007-08ರಲ್ಲಿ ರೂ.1,572 ಕೋಟಿ ಮತ್ತು 2008-09ರಲ್ಲಿ ರೂ.2,547 ಕೋಟಿ ಅನುದಾನವನ್ನು ಒದಗಿಸಲಾಗಿತ್ತು. ಈ ಸಾಲಿನ ವಿಶೇಷ ಅಭಿವೃದ್ಧಿಗಾಗಿ ಮುಂಗಡ ಪತ್ರದಲ್ಲಿ ರೂ.2,574 ಕೋಟಿ ಅನುದಾನವನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರತ್ಯೇಕ ಅನುದಾನದ ಶೀರ್ಷಿಕೆಯನ್ನು ಒದಗಿಸಬೇಕೆಂಬ ಬೇಡಿಕೆಯನ್ನು ಪರಿಗಣಿಸಿ ಆಯವ್ಯಯದ ಪ್ರತಿಯೊಂದು ಮುಖ್ಯ ಬೇಡಿಕೆಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಪ್ರತ್ಯೇಕ ಶೀರ್ಷಿಕೆಯನ್ನು ಪ್ರಸ್ತುತ ಮುಂಗಡ ಪತ್ರದಲ್ಲಿ ನೀಡಲಾಗುತ್ತಿದೆ.

25. ಪ್ರಾದೇಶಿಕ ಸಮತೋಲನವನ್ನು ಸಾಧಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರ ಮುಂತಾದ ಪ್ರಾದೇಶಿಕ ಮಂಡಳಿಗಳಿಗೆ ಅಗತ್ಯ ಅನುದಾನವನ್ನು ಒದಗಿಸಲಾಗುವುದು.

ರಾಜ್ಯದ ಅಭಿವೃದ್ಧಿಗೆ ತಜ್ಞರ ಮಾರ್ಗದರ್ಶನ

26. ರಾಜ್ಯದ ಅಭಿವೃದ್ಧಿ ನೀತಿಯ ಅನುಷ್ಠಾನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಖ್ಯಾತ ತಜ್ಞರ ಮಾರ್ಗದರ್ಶನವನ್ನು ಪಡೆಯಲು ಸರ್ಕಾರವು ವಿಶೇಷ ಕಾರ್ಯಪಡೆಗಳನ್ನು ರಚಿಸಿದೆ.

27. ಕರ್ನಾಟಕ ಅಭಿವೃದ್ಧಿ ಮುನ್ನೋಟ 2020 (Karnataka Vision 2020) ತಂಡವು ರಾಜ್ಯದ ಸಮಗ್ರ ಮತ್ತು ಸಮತೋಲಿತ ಅಭಿವೃದ್ಧಿಯ ಬಗ್ಗೆ ಮುಂದಿನ

ಎರಡು ದಶಕಗಳಲ್ಲಿ ಅನುಸರಿಸಬೇಕಾದ ಸ್ಥೂಲ ಅಭಿವೃದ್ಧಿ ಮಾರ್ಗದ ಬಗ್ಗೆ ಚಿಂತನೆ ನಡೆಸಿದೆ.

28. ಕರ್ನಾಟಕ ಜ್ಞಾನ ಆಯೋಗವು ರಾಜ್ಯವನ್ನು ಜ್ಞಾನಾಧಾರಿತ ಸಮಾಜವಾಗಿ ರೂಪಿಸುವಲ್ಲಿ ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯತಂತ್ರದ ಬಗ್ಗೆ ಸಲಹೆ ನೀಡುತ್ತಿದೆ.

29. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವು ರಾಜ್ಯದಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಶಿಕ್ಷಣವನ್ನು ಅಭಿವೃದ್ಧಿಪಡಿಸಲು ಮತ್ತು ನೂತನ ತಂತ್ರಜ್ಞಾನಗಳನ್ನು ಬೆಳೆಸಲು ಅಗತ್ಯ ಸಲಹೆಯನ್ನು ನೀಡುತ್ತಿದೆ.

30. ಕೌಶಲ್ಯ ವೃದ್ಧಿ ಆಯೋಗವು ರಾಜ್ಯದ ಯುವಕ ಯುವತಿಯರಿಗೆ ಸೂಕ್ತ ತಾಂತ್ರಿಕ ಹಾಗೂ ವೃತ್ತಿ ಕೌಶಲ್ಯಗಳಲ್ಲಿ ಪರಿಣತಿ ನೀಡಿ ಲಕ್ಷಾಂತರ ನೂತನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

31. ಕೈಗಾರಿಕೀಕರಣದ ಸಮಗ್ರ ಯೋಜನೆಯ ರೂಪು ರೇಷೆಗಳನ್ನು ತಯಾರಿಸಲು ಕೈಗಾರಿಕಾ ಅಭಿವೃದ್ಧಿ ಮುನ್ನೋಟದ ಕಾರ್ಯಪಡೆ ರಚಿಸಿದ್ದು ನೂತನ ಕೈಗಾರಿಕಾ ನೀತಿಯನ್ನು ರೂಪಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ.

32. ಕರ್ನಾಟಕ ಕೃಷಿ ಮಿಷನ್ ಅಡಿಯಲ್ಲಿ ರಾಜ್ಯದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಅಳವಡಿಸಿಕೊಂಡಿರುವ ಕಾರ್ಯಕ್ರಮಗಳ ಸೂಕ್ಷ್ಮ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ.

33. ಸಾವಯವ ಕೃಷಿ ಮಿಷನ್ ತಂಡವು ಇಡೀ ರಾಜ್ಯದಲ್ಲಿ ಸಹಸ್ರಾರು ರೈತ ಕುಟುಂಬಗಳನ್ನು ಸಂಘಟಿಸಿ ಸಾವಯವ ಕೃಷಿಯನ್ನು ಅಳವಡಿಸುವಲ್ಲಿ ಪ್ರೇರಣೆ ಹಾಗೂ ಮಾರ್ಗದರ್ಶನವನ್ನು ನೀಡುತ್ತಿದೆ.

34. ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆಯು ಸರ್ಕಾರದ ಕಾಮಗಾರಿಗಳಲ್ಲಿ ಸೂಕ್ತ ಮಾನಕಗಳಿಗೆ ಅನುಸಾರವಾಗಿ ಗುಣ ನಿಯಂತ್ರಣ ಮಾಡಿ ದಕ್ಷತೆಯನ್ನು ಹೆಚ್ಚಿಸಲು ಶ್ರಮಿಸುತ್ತಿದೆ.

35. ಬೆಂಗಳೂರು ಮೂಲಸೌಲಭ್ಯ ಮತ್ತು ಅಭಿವೃದ್ಧಿ ಕಾರ್ಯಗಳ ಕಾರ್ಯಪಡೆ (ABIDE)ಯು ಬೆಂಗಳೂರಿನ ವ್ಯವಸ್ಥಿತ ಅಭಿವೃದ್ಧಿಗಾಗಿ ನೀಲ ನಕ್ಷೆಯನ್ನು ರೂಪಿಸುತ್ತಿದೆ.

36. ಜೈವಿಕ ಇಂಧನ ಕಾರ್ಯಪಡೆಯು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಪರಿಸರ ಸ್ನೇಹಿ ಮಾರ್ಗದಲ್ಲಿ ಇಂಧನದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿದೆ.

37. ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆಯು ಮಲೆನಾಡು ಪ್ರದೇಶದಲ್ಲಿ ಜೈವಿಕ ವೈವಿಧ್ಯತೆ ಮತ್ತು ಪರಿಸರದ ಸಂರಕ್ಷಣೆಗೆ ಕಾರ್ಯತಂತ್ರವನ್ನು ರೂಪಿಸುತ್ತಿದೆ.

38. ಈ–ಆಡಳಿತದ ಬಗ್ಗೆ ಸಮಗ್ರ ಯೋಜನೆ ತಯಾರಿಸಲು ತಜ್ಞರ ತಂಡವನ್ನು ರಚಿಸಲಾಗಿದೆ.

39. ಇದಲ್ಲದೆ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಜಲ ಸಂಪನ್ಮೂಲ ಪ್ರಾಧಿಕಾರ, ಅನಿವಾಸಿ ಕನ್ನಡಿಗರ ಕೋಶ, ಮುಜರಾಯಿ ಆಸ್ತಿಗಳ ಸಮೀಕ್ಷೆಯ ಕಾರ್ಯಪಡೆ, ಹಾಗೂ ವಕ್ಫ್ ಆಸ್ತಿಗಳ ಸಮೀಕ್ಷಾ ಸಮಿತಿಗಳನ್ನು ರಚಿಸಲಾಗಿದೆ. ಈ ಎಲ್ಲಾ ಕಾರ್ಯಪಡೆಗಳ ಸಲಹೆಗಳು ವಿಶೇಷ ರೀತಿಯಲ್ಲಿ ಸಂಬಂಧಪಟ್ಟ ಇಲಾಖೆಗಳ ಕಾರ್ಯತಂತ್ರವನ್ನು ರೂಪಿಸುವಲ್ಲಿ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಮೂಲ್ಯ ಸಲಹೆಯನ್ನು ನೀಡುತ್ತಿವೆ ಮತ್ತು ಪ್ರಸ್ತುತ ಆಯವ್ಯಯದಲ್ಲಿ ಅವರ ಸಲಹೆಗಳನ್ನು ಪರಿಗಣಿಸಲಾಗಿದೆ.

40. ಸರ್ಕಾರದ ಅಭಿವೃದ್ಧಿ ನೀತಿಯನ್ನು ಸಾಕಾರಗೊಳಿಸುವ ಪ್ರಯತ್ನದಲ್ಲಿ ಆಡಳಿತ ಯಂತ್ರವನ್ನು ಹೆಚ್ಚು ದಕ್ಷತೆಯಿಂದ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಅಗತ್ಯ ಸುಧಾರಣೆಗಳನ್ನು ಜಾರಿಗೊಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಆಡಳಿತದಲ್ಲಿ ಒಂದು ಹೊಸ 'ಅನುಷ್ಠಾನ ಪರ್ವ'ವನ್ನು ಪ್ರಾರಂಭಿಸಬೇಕಾಗಿದೆ. ಇದಕ್ಕಾಗಿ ರೂಪಿಸಲಾದ ಅನುಷ್ಠಾನ ಸಂಹಿತೆಯ ವಿವರಗಳನ್ನು ಪ್ರತ್ಯೇಕವಾಗಿ ನೀಡಿದ್ದೇನೆ. ಈ ಮುಂಗಡ ಪತ್ರದ ಮೂಲಕ 2009–10ನೇ ಸಾಲಿನ ಸರ್ಕಾರದ ಅಭಿವೃದ್ಧಿ ಯೋಜನೆಗಳ ಮುಖ್ಯಾಂಶಗಳನ್ನು ಮತ್ತು ಅವುಗಳ ಅನುಷ್ಠಾನಕ್ಕಾಗಿ ಒದಗಿಸಕೊಳ್ಳಲಿರುವ ಸಂಪನ್ಮೂಲಗಳ ಚಿತ್ರಣವನ್ನು ತಮ್ಮ ಮುಂದೆ ಪ್ರಸ್ತುತಪಡಿಸುತ್ತೇನೆ.

ಪ್ರಮುಖ ಅಭಿವೃದ್ಧಿ ಕ್ಷೇತ್ರಗಳಿಗೆ ಆದ್ಯತೆ

41. 2009–10ನೇ ಸಾಲಿಗೆ 29,500 ಕೋಟಿ ರೂ.ಗಳ ಯೋಜನಾ ಗಾತ್ರವು 2007–08ನೇ ಸಾಲಿನಲ್ಲಿ ರಾಜ್ಯ ಯೋಜನೆಗೆ ಖರ್ಚಾಗಿರುವ 17,227 ಕೋಟಿ ರೂ.ಗಳಿಗಿಂತ ಶೇ.71ರಷ್ಟು ಹೆಚ್ಚಾಗಿದೆ. ಮುಂದಿನ ವರ್ಷದಲ್ಲಿ ಸರ್ಕಾರದ ಆದ್ಯತೆಗಳಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುಟಿಕೆಗಳು, ಗ್ರಾಮೀಣಾಭಿವೃದ್ಧಿ, ನೀರಾವರಿ, ವಿದ್ಯುಚ್ಛಕ್ತಿ, ರಸ್ತೆಗಳು, ನಗರಾಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರಗಳು ಒಳಗೊಂಡಿವೆ.

- ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ 2,440 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

- ಗ್ರಾಮೀಣಾಭಿವೃದ್ಧಿಗೆ 3,063 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ನೀರಾವರಿ ಕಾಮಗಾರಿಗಳಿಗೆ 4,714 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ವಿದ್ಯುಚ್ಛಕ್ತಿ ವಲಯದ ಯೋಜನೆ ಮತ್ತು ಯೋಜನೇತರ ವೆಚ್ಚವನ್ನು 6,107 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.
- ಸಾರಿಗೆ ವಲಯದಲ್ಲಿ 1,327 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.
- ಬೆಂಗಳೂರು ನಗರವೂ ಸೇರಿದಂತೆ ನಗರಾಭಿವೃದ್ಧಿ ವಲಯದಲ್ಲಿ 7,376 ಕೋಟಿ ರೂ.ಗಳನ್ನು ಖರ್ಚು ಮಾಡಲು ಅಂದಾಜಿಸಲಾಗಿದೆ.
- ಶಿಕ್ಷಣ ಕ್ಷೇತ್ರಕ್ಕಾಗಿ 8,888 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು.

ಹಸಿರು ಮಾರ್ಗದಲ್ಲಿ ಕೃಷಿ ಅಭಿವೃದ್ಧಿ

"ಮಣ್ಣಿನ ಕೊಡುಗೆಗೆ ನೋವಿಗೆ ನಲಿವಿಗೆ ಕನ್ನಡಿ ಹಿಡಿವಾಸೆ,
ಮಾವನ ಹೃದಯದ ಕರುಣೆಗೆ ಒಲವಿಗೆ ದನಿಗೂಡಿಸುವಾಸೆ"

–ಕೆ.ಎಸ್. ನರಸಿಂಹಸ್ವಾಮಿ.

42. ಅನ್ನದಾತನ ನೋವು–ನಲಿವಿಗೆ ಮಲ್ಲಿಗೆ ಕವಿ ನರಸಿಂಹಸ್ವಾಮಿಯವರು ಮನ ಮಿಡಿದು ನುಡಿನ ಕಾವ್ಯದ ಸಾಲುಗಳಿವು. ರೈತರ ಸಮಸ್ಯೆಗಳಿಗೆ ಸ್ಪಂದಿಸುವ ವಿಚಾರದಲ್ಲಿ ಸರ್ಕಾರ ಎಂದಿಗೂ ಹಿಂದೆ ಬೀಳದು.

43. ಕಳೆದ ಆರು ವರ್ಷಗಳಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆಯು ಶೇ.2ಕ್ಕಿಂತಲೂ ಕಡಿಮೆಯಿದ್ದು 2007–08ರಲ್ಲಿ ಶೇ.4.4ಕ್ಕೆ ಏರಿತ್ತು. ಆದರೆ 2008–09ರಲ್ಲಿ ಅಸಮರ್ಪಕ ಮಳೆಯಿಂದಾಗಿ ರಾಜ್ಯಾದಾದ್ಯಂತ ನಿರೀಕ್ಷಿಸಿದಂತೆ ಕೃಷಿ ಕ್ಷೇತ್ರದ ಬೆಳವಣಿಗೆ ಆಗಿರುವುದಿಲ್ಲ. ವಿಶೇಷವಾಗಿ ಆಹಾರ ಧಾನ್ಯಗಳ ಉತ್ಪಾದನೆಯು 2007–08ರ ಸಾಲಿನ 121 ಲಕ್ಷ ಟನ್‌ಗಳಿಗೆ ಹೋಲಿಸಿದರೆ 2008–09ರಲ್ಲಿ 109 ಲಕ್ಷ ಟನ್ ಆಗುವುದೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ರಾಜ್ಯದ ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ಮುಂಬರುವ ವರ್ಷಗಳಲ್ಲಿ ಉತ್ತಮ ತಂತ್ರಜ್ಞಾನವನ್ನು ಒಳಗೊಂಡಂತೆ ಕೃಷಿಗೆ ಬೆಂಬಲ ನೀಡುವ ಯೋಜನೆಗಳ ಅನುಷ್ಠಾನವನನು ತೀವ್ರಗೊಳಿಸಬೇಕಾಗಿದೆ. ಇದಕ್ಕಾಗಿ ಸರ್ಕಾರವು ಹಲವು ವಿಶೇಷ ಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದು ಅವುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವಾಗಿದೆ.

ಶೇ. 3ರ ಬಡ್ಡಿ ದರದಲ್ಲಿ ರೈತರಿಗೆ ಬ್ಯಾಂಕ್ ಸಾಲ

44. ರಾಜ್ಯ ಸರ್ಕಾರವು ರೈತರಿಗೆ ಶೇ.3ರ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ಸಾಲ ವಿತರಿಸುವ ಕ್ರಮದಿಂದ ಲಕ್ಷಾಂತರ ರೈತರು ಪ್ರಯೋಜನವನ್ನು ಪಡೆದಿದ್ದು 2008–09ನೇ ಸಾಲಿನಲ್ಲಿ ಈವರೆಗೆ ಒಟ್ಟು 2,650 ಕೋಟಿ ರೂ. ಸಾಲ

ಒದಗಿಸಲಾಗಿದೆ. ಈ ಯೋಜನೆಯನ್ನು 2009–10ನೇ ಸಾಲಿನಲ್ಲಿ ಮುಂದುವರೆಸಲು ರೂ.150 ಕೋಟಿ ಸಹಾಯಧನವನ್ನು ಒದಗಿಸಲಾಗುವುದು.

45. ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆಯುವ ರೈತರಿಗೂ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸಬೇಕೆಂಬ ರೈತಬಾಂಧವರ ಬಹುದಿನಗಳ ಬೇಡಿಕೆಯನ್ನು ನಮ್ಮ ಸರ್ಕಾರವರು ಈಡೇರಿಸಲು ಸಿದ್ಧವಾಗಿದೆ. 2009–10ರ ಸಾಲಿನಿಂದ ವಾಣಿಜ್ಯ ಬ್ಯಾಂಕುಗಳಿಂದ ಬೆಳೆ ಸಾಲ ಪಡೆಯುವ ಎಲ್ಲ ರೈತರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸಲು ರೂ.250 ಕೋಟಿ ಸಹಾಯಧನವನ್ನು ಆಯವ್ಯಯದಲ್ಲಿ ಒದಗಿಸುತ್ತಿದ್ದೇನೆ. ಈ ಸೌಲಭ್ಯವು ರೂ.50,000ವರೆಗೆ ಬ್ಯಾಂಕುಗಳಿಂದ ಬೆಳೆ ಸಾಲ ಪಡೆಯುವ ರೈತರಿಗೆ ಅನ್ವಯಿಸುತ್ತದೆ. ರಾಜ್ಯದ ನೇಗಿಲಯೋಗಿಗಳ ಅಶೋತ್ತರಗಳಿಗೆ ಸ್ಪಂದಿಸುವ ಈ ಚರಿತ್ರಾರ್ಹ ನಿರ್ಧಾರದಿಂದ ರಾಜ್ಯದ ಲಕ್ಷಾಂತರ ರೈತರು ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬಹುದಾಗಿದೆ.

46. ಕೃಷಿ ವಿಷಯಗಳ ಅಧ್ಯಯನ ಹಾಗೂ ಸಂಶೋಧನೆಗೆ ಒತ್ತು ನೀಡಲು ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಈಗಾಗಲೇ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು, ಈ ಸಂಸ್ಥೆಗಳಿಗೆ ಮುಂದಿನ ಸಾಲಿನಲ್ಲಿ ತಲಾ ರೂ.20 ಕೋಟಿ ಹಣಕಾಸಿನ ಸೌಲಭ್ಯವನ್ನು ಒದಗಿಸಲಾಗುವುದು.

ಸಾವಯವ ಕೃಷಿಗಾಗಿ ಸಂಘಟನೆ

47. ಒಂದು ಸಾವಿರ ಗ್ರಾಮಗಳಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸುವ ಸರ್ಕಾರದ ನೀತಿಗೆ ರೈತಬಾಂಧವರಿಂದ ಅಭೂತಪೂರ್ವ ಬೆಂಬಲ ದೊರೆತಿದೆ. ಸುಮಾರು 50 ಸಾವಿರ ರೈತರು ಸ್ವಯಂ ಪ್ರೇರಣೆಯಿಂದ ಸಾವಯವ ಸಂಘಟನೆಗಳ ಸದಸ್ಯರಾಗಿ ನೊಂದಾಯಿಸಿಕೊಂಡಿದ್ದಾರೆ. ದಿನಾಂಕ: 26.1.2009ರ ಗಣರಾಜ್ಯೋತ್ಸವ ದಿನದಂದು ನಡೆದ ಸಾವಯವ ಕೃಷಿ ರೈತರ ಸಮಾವೇಶದಲ್ಲಿ ಮಾಜಿ ರಾಷ್ಟ್ರಪತಿ ಡಾ|| ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಸಮಕ್ಷಮ ಸಹಸ್ರಾರು ರೈತರು ಸಾವಯವ ಕೃಷಿಯನ್ನು ಅನುಸರಿಸಲು ಪ್ರತಿಜ್ಞೆಯನ್ನು ಕೈಗೊಂಡಿದ್ದಾರೆ. 2009–10ನೇ ಸಾಲಿನಲ್ಲಿ ಸಾವಯವ ಕೃಷಿಯ ಅಭಿವೃದ್ಧಿಗಾಗಿ ಸರ್ಕಾರವು ರೂ.100 ಕೋಟಿ ಸಹಾಯಧನವನ್ನು ವಿನಿಯೋಗಿಸುವುದು.

48. 2008–09ನೇ ಸಾಲಿನಲ್ಲಿ ಇಡೀ ರಾಷ್ಟ್ರದಲ್ಲಿ ಮೊದಲಬಾರಿಗೆ ರಾಜ್ಯ ಸರ್ಕಾರವು ರೈತರಿಗೆ ವಿದೇಶಗಳಲ್ಲಿ ಅಧ್ಯಯನ ಪ್ರವಾಸಕ್ಕಾಗಿ ವ್ಯವಸ್ಥೆ ಮಾಡಿದೆ. ರೈತರು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುವ

ಸಲುವಾಗಿ ಈ ಯೋಜನೆಯನ್ನು 2009-10ರಲ್ಲಿಯೂ ಮುಂದುವರಿಸಿ 1000 ಜನರಿಗೆ ಪ್ರವಾಸದ ಅವಕಾಶವನ್ನು ಕಲ್ಪಿಸಿಕೊಡಲಾಗುವುದು.

49. ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಬೆಳಗಾವಿಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಡಿಯಲ್ಲಿ ಬೃಹತ್ ಪ್ರಮಾಣದ ತೋಟಗಾರಿಕಾ ಉತ್ಪನ್ನ ಮಾರುಕಟ್ಟೆಯನ್ನು ಖಾಸಗಿ ಸಹಭಾಗಿತ್ವದೊಡನೆ ರೂ.100 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಚಾಮರಾಜನಗರದಲ್ಲಿ ಅರಿಶಿನ ಮಾರುಕಟ್ಟೆ ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕ ಹಾಗೂ ಶೈತ್ಯಾಗಾರಗಳ ನಿರ್ಮಾಣಕ್ಕಾಗಿ ರೂ.10 ಕೋಟಿ ಒದಗಿಸಲಾಗುವುದು.

ಕೋಲಾರಕ್ಕೆ ತೋಟಗಾರಿಕೆ ಕಾಲೇಜು

50. ಹಣ್ಣು ಮತ್ತು ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾದ ಕೋಲಾರ ಜಿಲ್ಲೆಯಲ್ಲಿ ನೂತನ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ರೂ.5 ಕೋಟಿ ನೀಡಲಾಗುವುದು.

51. ಕಳೆದ ಮುಂಗಾರಿನಲ್ಲಿ ಮಳೆಯ ವೈಫಲ್ಯದಿಂದಾಗಿ ಸಂಕಷ್ಟದಲ್ಲಿದ್ದ ಖುಷ್ಕಿ ಕೃಷಿಯನ್ನು ಅವಲಂಬಿಸಿರುವ ಸಣ್ಣ ರೈತರಿಗೆ ಸಹಾಯಧನವನ್ನು ಪ್ರತಿ ಕುಟುಂಬಕ್ಕೆ ರೂ.1000ದಂತೆ ವಿತರಿಸಲಾಗಿದೆ. ಸುಮಾರು 22 ಲಕ್ಷ ರೈತರು ಇದರ ಪ್ರಯೋಜನವನ್ನು ಪಡೆದಿದ್ದು, ಇದಕ್ಕಾಗಿ ಈವರೆಗೆ ರೂ.220 ಕೋಟಿ ವೆಚ್ಚವಾಗಿದೆ.

ರೈತರಿಗೆ ವಿದ್ಯುತ್ ಸರಬರಾಜಿಗಾಗಿ 2100 ಕೋಟಿ

52. 2008-09ರಲ್ಲಿ ಪ್ರಥಮಬಾರಿಗೆ 10 ಅಶ್ವಶಕ್ತಿಯವರೆಗೆ ನೀರಾವರಿ ಪಂಪ್‌ಗಳನ್ನು ಹೊಂದಿರುವ ರೈತರಿಗೆ ಉಚಿತ ವಿದ್ಯುತ್ ಒದಗಿಸುವ ಕ್ರಮವನ್ನು ಜಾರಿಗೆ ತರಲಾಯಿತು. 2009-10ರಲ್ಲಿ ಇದಕ್ಕಾಗಿ ರೂ.2100 ಕೋಟಿ ಸಹಾಯಧನವನ್ನು ನೀಡಲು ಉದ್ದೇಶಿಸಿದೆ. ಇದರಿಂದ ಒಟ್ಟಾರೆ 17 ಲಕ್ಷ ರೈತ ಕುಟುಂಬಗಳಿಗೆ ಸಹಾಯವಾಗುವುದು.

ರೇಷ್ಮೆ ವ್ಯವಸಾಯಕ್ಕೆ ಪ್ರೋತ್ಸಾಹ

53. ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನಾ ಸಂಸ್ಥೆ ತಲಘಟ್ಟಪುರ ಕೇಂದ್ರದ ಸಂಶೋಧನಾ ಚಟುವಟಿಕೆಗಳ ಅಭಿವೃದ್ಧಿಗಾಗಿ ರೂ.2 ಕೋಟಿ ಒದಗಿಸಲಾಗುವುದು.

54. ರೇಷ್ಮೆ ಗೂಡಿನ ನೂಲು ಬಿಚ್ಚಾಣಿಕೆಯನ್ನು ಯಾಂತ್ರೀಕರಣಗೊಳಿಸಲು ರೂ.2 ಕೋಟಿ ಅನುದಾನ ನೀಡಲಾಗುವುದು.

ಪಶುಸಂಗೋಪನೆ ಮತ್ತು ಹೈನುಗಾರಿಕೆ

55. ರಾಜ್ಯದ ಸಹಸ್ರಾರು ಕುಟುಂಬಗಳು ಕುರಿ ಹಾಗೂ ಮೇಕೆ ಸಾಕಾಣಿಕೆಯಲ್ಲಿ ನಿರತರಾಗಿದ್ದು ವೈಜ್ಞಾನಿಕ ರೀತಿಯ ಪಶುಪಾಲನಾ ಕ್ರಮಗಳನ್ನು

ಅನುಸರಿಸಲು ಅವರಿಗೆ ಸಹಾಯ ಮಾಡಲಾಗುವುದು. ಇದಕ್ಕಾಗಿ ಕುರಿ/ಮೇಕೆ ಸಾಕಾಣಿಕೆದಾರರ ಗುಂಪುಗಳನ್ನು ರಚಿಸಿ ಅವರ ಪಶುಸಂಪತ್ತಿಗೆ ವಿಮೆ ಸೌಲಭ್ಯವನ್ನು ಒದಗಿಸಲು ರೂ.5 ಕೋಟಿ ನೀಡಲಾಗುವುದು.

56. ಪ್ರತಿ ತಾಲ್ಲೂಕಿನಲ್ಲಿ ಗೋಸಂರಕ್ಷಣೆಗಾಗಿ ಗೋಶಾಲೆಗಳನ್ನು ಸ್ಥಾಪಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ರೂ.10 ಲಕ್ಷದವರೆಗೆ ಅನುದಾನವನ್ನು ನೀಡಲಾಗುವುದು.

57. ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ರೈತ ಕುಟುಂಬಗಳಿಗೆ ಪ್ರತಿಲೀಟರ್ ಹಾಲಿಗೆ ರೂ.2ರಂತೆ ಸಹಾಯಧನ ನೀಡುವ ವಿನೂತನ ಕ್ರಮವನ್ನು ಸರ್ಕಾರವು 2008–09ರಲ್ಲಿ ಜಾರಿ ಮಾಡಿದೆ. ಇದಕ್ಕಾಗಿ ರೂ.65 ಕೋಟಿ ವೆಚ್ಚ ಮಾಡಲಾಗಿದ್ದು,' ಇದರಿಂದ 5.03 ಲಕ್ಷ ಹಾಲು ಉತ್ಪಾದಕರು ವಿಶೇಷವಾಗಿ ಮಹಿಳೆಯರು, ಹೆಚ್ಚಿನ ಆದಾಯವನ್ನು ಗಳಿಸುತ್ತಿದ್ದಾರೆ. ಮುಂದಿನ ವರ್ಷದಲ್ಲಿ ಈ ಯೋಜನೆಗಾಗಿ ರೂ.200 ಕೋಟಿ ಒದಗಿಸಲಾಗಿದೆ.

58. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೈನುಗಾರಿಕೆಯ ಅಭಿವೃದ್ಧಿ ಆಂದೋಲನವನ್ನು ತೀವ್ರಗೊಳಿಸಲು 2009–10ರಲ್ಲಿ 1000 ನೂತನ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ಸರ್ಕಾರದಿಂದ ರೂ.5 ಕೋಟಿ ಸಹಾಯಧನ ನೀಡಲು ಉದ್ದೇಶಿಸಿದೆ. ಗುಲ್ಬರ್ಗ ಹಾಗೂ ಬೆಳಗಾವಿ ವಿಭಾಗಗಳಲ್ಲಿ ಹಾಲಿನ ಶೀತಲೀಕರಣ ಘಟಕಗಳನ್ನು ಸ್ಥಾಪಿಸಲು ರೂ.10 ಕೋಟಿ ನೀಡಲಾಗುವುದು.

59. ಗದಗದಲ್ಲಿ ನೂತನ ಪಶುವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಈಗಾಗಲೇ ತೀರ್ಮಾನಿಸಲಾಗಿದ್ದು, ಅದಕ್ಕಾಗಿ ಈ ಮುಂಗಡ ಪತ್ರದಲ್ಲಿ ರೂ.5 ಕೋಟಿ ಒದಗಿಸಲಾಗಿದೆ.

60. ಚಿಕ್ಕಮಗಳೂರು ಜಿಲ್ಲೆಯ ಅಮೃತಮಹಲ್ ಕಾವಲು ಜಮೀನುಗಳನ್ನು ಅಭಿವೃದ್ಧಿಪಡಿಸಿ, ಪಶುಸಂಗೋಪನೆ ಹಾಗೂ ಸಂಶೋಧನೆಗೆ ಉಪಯೋಗಿಸಲು ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾನಿಲಯಕ್ಕೆ ರೂ.10 ಕೋಟಿ ನೀಡಲಾಗುವುದು.

ಮೀನುಗಾರಿಕೆ

61. 2008–09ರಲ್ಲಿ ಮೀನುಗಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸುವ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದ್ದು, ಸದರಿ ಯೋಜನೆಯನ್ನು ಮುಂದುವರೆಸಲಾಗುವುದು. ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸಲು ಈ ವರ್ಷ ಒದಗಿಸಿದ್ದ ರೂ.5 ಕೋಟಿ ಅನುದಾನವನ್ನು ಮುಂದಿನ ಸಾಲಿನಲ್ಲಿ ರೂ.20 ಕೋಟಿಗೆ ಹೆಚ್ಚಿಸಿ 5000 ಮನೆಗಳನ್ನು ನಿರ್ಮಿಸಲಾಗುವುದು.

ಮೀನುಗಾರರು ಬಳಸುವ ಮಂಜುಗಡ್ಡೆಯ ತಯಾರಿಕೆಗೆ ಪ್ರೋತ್ಸಾಹ ನೀಡಲು ಕಳೆದ ವರ್ಷ ನೀಡಿರುವ ವ್ಯಾಟ್ ತೆರಿಗೆ ವಿನಾಯಿತಿಯನ್ನು ಮುಂದುವರೆಸಲಾಗುವುದು.

62. ಮೀನುಗಾರರ 2000 ಸ್ವಸಹಾಯ ಗುಂಪುಗಳನ್ನು ರಚಿಸಿ ಅವರಿಗೆ ಆರ್ಥಿಕ ಬೆಂಬಲ ಒದಗಿಸಲು ರೂ.10 ಕೋಟಿ ನೀಡಲಾಗುವುದು.

63. ಅಲಂಕಾರಿಕ ಮೀನಿನ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಆಕ್ವಾ ಪಾರ್ಕ್‌ಗಳನ್ನು ಸ್ಥಾಪಿಸಲು ರೂ.2 ಕೋಟಿ ನೀಡಲಾಗುವುದು.

64. ಮಂಗಳೂರಿನಲ್ಲಿ ಸಿಂಗಪೂರ್‌ನಲ್ಲಿರುವ ಆಕ್ವಮೆರಿನ್ ಪಾರ್ಕ್ ಮಾದರಿಯ ಸೌಲಭ್ಯವನ್ನು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

ಸಹಕಾರ

65. 2008-09ನೆಯ ಸಾಲಿನಲ್ಲಿ ಕರ್ನಾಟಕ ಸಹಕಾರಿ ಮಾರುಕಟ್ಟೆ ಮಂಡಳಿಯ ಮೂಲಕ ರೈತರಿಗೆ ರಸಗೊಬ್ಬರಗಳನ್ನು ಮಾರಾಟ ಮಾಡಲು ರೂ.250 ಕೋಟಿ ದುಡಿಯುವ ಬಂಡವಾಳದ ವ್ಯವಸ್ಥೆ ಮಾಡಲಾಗಿದೆ. 2009-10ರಲ್ಲಿಯೂ ಸಹ ಅಗತ್ಯವಿರುವ ರಾಸಾಯನಿಕ ಗೊಬ್ಬರಗಳನ್ನು ಮುಂಗಡವಾಗಿ ದಾಸ್ತಾನು ಮಾಡಲು ಈ ಸಂಸ್ಥೆಗೆ ಅಗತ್ಯವಿರುವ ಹಣಕಾಸಿನ ಸೌಲಭ್ಯವನ್ನು ಕಲ್ಪಿಸಲಾಗುವುದು.

66. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ವ್ಯಾಪಕವಾದ ಆಂದೋಲನವನ್ನು ಕೈಗೊಳ್ಳಬೇಕಾಗಿದೆ. ಇದರಿಂದ ಈ ಹಿಂದುಳಿದ ಕುಟುಂಬಗಳಿಗೆ ರಿಯಾಯಿತಿ ಬಡ್ಡಿಯ ಸಾಲಗಳನ್ನು ಪಡೆಯಲು ಮತ್ತು ಸಹಕಾರ ಸಂಸ್ಥೆಗಳಿಂದ ಇತರ ಸವಲತ್ತುಗಳನ್ನು ಪಡೆಯಲು ಅನುಕೂಲವಾಗುತ್ತದೆ. ಇದಕ್ಕಾಗಿ ಆಯವ್ಯಯದಲ್ಲಿ ರೂ.5 ಕೋಟಿ ಒದಗಿಸಲಾಗಿದೆ.

67. ಸಹಕಾರ ಸಂಘಗಳ ಸದಸ್ಯರ ಆರೋಗ್ಯ ರಕ್ಷಣೆಗಾಗಿ ರೂಪಿಸಿರುವ ಯಶಸ್ವಿನಿ ಯೋಜನೆಗೆ 2008-09ರಲ್ಲಿ ರೂ.40 ಕೋಟಿ ಒದಗಿಸಿದ್ದು, ಈ ವರೆಗೆ 8.14 ಲಕ್ಷ ಸದಸ್ಯರು ಈ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ. ಈ ಪೈಕಿ 1.85 ಲಕ್ಷ ಸದಸ್ಯರು ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು ಪಡೆದಿದ್ದು, 6.29 ಲಕ್ಷ ಸದಸ್ಯರು ಹೊರರೋಗಿಗಳಾಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಕೇವಲ ರೂ.130ರ ವಂತಿಗೆಯಿಂದ ಸದಸ್ಯರು ಬೆಲೆಬಾಳುವ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿದ್ದು ಈ ಯೋಜನೆಗಾಗಿ 2009-10ರಲ್ಲಿ ರೂ.40 ಕೋಟಿ ಒದಗಿಸಲಾಗುತ್ತಿದೆ.

ಕೃಷಿ ಮಾರುಕಟ್ಟೆ : ಬೆಂಬಲ ಬೆಲೆ ಒದಗಿಸಲು ರೂ.750 ಕೋಟಿ

68. ರೈತರು ಉತ್ತಮವಾದ ಬೆಳೆಯನ್ನು ಪಡೆದ ಅಪರೂಪದ ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಧಾರಣೆಯ ಕುಸಿತದಿಂದ ಅಪಾರ ನಷ್ಟವನ್ನು ಅನುಭವಿಸುವುದನ್ನು ತಪ್ಪಿಸಲು ಮಾರುಕಟ್ಟೆಯ ಮಧ್ಯ ಪ್ರವೇಶಕ್ಕಾಗಿ ಸರ್ಕಾರವು ಅಗತ್ಯ ನಿಧಿಯನ್ನು ಒದಗಿಸಿದೆ. ಈ ವರ್ಷ ರಾಜ್ಯದಲ್ಲಿ ಮೆಕ್ಕೆ ಜೋಳವನ್ನು ಬೆಂಬಲ ಬೆಲೆಯ ಆಧಾರದ ಮೇಲೆ ಖರೀದಿಸಲು ಸರ್ಕಾರವು ರೂ.400 ಕೋಟಿ ದುಡಿಯುವ ಬಂಡವಾಳವನ್ನು ವ್ಯವಸ್ಥೆ ಮಾಡಿದ್ದು, ಮುಂದಿನ ವರ್ಷ ರೂ.750 ಕೋಟಿಯವರೆಗೆ ವಿವಿಧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯ ಲಾಭವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದು.

69. 2009-10ನೇ ಸಾಲಿನಲ್ಲಿ ಕೃಷಿ ಮಾರುಕಟ್ಟೆಗಳಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಇ-ಟೆಂಡರಿಂಗ್ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗುವುದು. ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯಲ್ಲಿ ಈರುಳ್ಳಿ, ಆಲೂಗಡ್ಡೆ ಮುಂತಾದ ಉತ್ಪನ್ನಗಳಿಗಾಗಿ ರೂ.100 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಸಗಟು ಮಾರುಕಟ್ಟೆಯನ್ನು ನಿರ್ಮಿಸಲಾಗುವುದು. ಬೆಂಗಳೂರು ಬಳ್ಳಾರಿ ರಸ್ತೆಯಲ್ಲಿರುವ ಬ್ಯಾಟರಾಯನಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸುಸಜ್ಜಿತ ತರಕಾರಿ ಸಗಟು ಮಾರುಕಟ್ಟೆಯನ್ನು ಸ್ಥಾಪಿಸಲಾಗುವುದು.

ಜಲಸಂಪನ್ಮೂಲ ಮತ್ತು ನೀರಾವರಿ

70. ಕರ್ನಾಟಕದ ಜಲಸಂಪತ್ತಿನ ಸಾರ್ಥಕ ಬಳಕೆಗೆ ಪೂರಕವಾದ ನೀರಾವರಿ ಯೋಜನೆಗಳನ್ನು ನಾವು ಅತ್ಯಂತ ಆದ್ಯತೆಯ ಮೇರೆಗೆ ಅನುಷ್ಠಾನ ಮಾಡಬೇಕಾಗಿದೆ. ರಾಜ್ಯದ ಒಟ್ಟು ಕೃಷಿ ಪ್ರದೇಶವಾದ 106 ಲಕ್ಷ ಹೆಕ್ಟೇರ್ ಪೈಕಿ ಈ ವರೆಗೆ 36.03 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗಿದೆ. ಮುಂಬರುವ ವರ್ಷಗಳಲ್ಲಿ ರಾಜ್ಯದ ನೀರಾವರಿ ಪ್ರದೇಶವನ್ನು ವಿಸ್ತರಿಸಲು ಭಾರಿ, ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸಲು ಅಗತ್ಯ ಅನುದಾನವನ್ನು ತೊಡಗಿಸಬೇಕಾಗಿದೆ. ಈ ದೃಷ್ಟಿಯಿಂದ 2009-10ನೆಯ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ರೂ.3,096 ಕೋಟಿ ಅನುದಾನವನ್ನು ಒದಗಿಸಲಿದ್ದು ಇದು 2008-09ರ ಆಯವ್ಯಯದ ಅಂದಾಜಿಗಿಂತ ಇದು ಶೇ.20ರಷ್ಟು ಹೆಚ್ಚಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಗಳ ತ್ವರಿತ ಅನುಷ್ಠಾನ

71. ಜಲಸಂಪನ್ಮೂಲ ಇಲಾಖೆಯ ವತಿಯಿಂದ ಬಿಜಾಪುರ ಜಿಲ್ಲೆಯ ಚಿಮ್ಮಲಗಿ ಏತನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಮುದ್ದೇಬಿಹಾಳ್, ಬಸವನಬಾಗೇವಾಡಿ, ಸಿಂಧಗಿ, ಇಂಡಿ ಮತ್ತು ಬಿಜಾಪುರ ತಾಲ್ಲೂಕುಗಳ ಒಟ್ಟು

87,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ.2,193 ಕೋಟಿ ಎಂದು ಅಂದಾಜು ಮಾಡಿದ್ದು ಈ ಬೃಹತ್ ಯೋಜನೆಯ ಅನುಷ್ಠಾನವನ್ನು ಕೂಡಲೇ ಪ್ರಾರಂಭಿಸಲಾಗುವುದು.

72. ಬಿಜಾಪುರ ಜಿಲ್ಲೆಯ ಗುತ್ತಿಬಸವಣ್ಣ ಏತನೀರಾವರಿ ಯೋಜನೆಯ 2ನೇ ಹಂತದಲ್ಲಿ ರೂ.120 ಕೋಟಿ ವೆಚ್ಚದಲ್ಲಿ ಒಟ್ಟು 20,600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ನಿರ್ಮಾಣ ಹಂತದಲ್ಲಿರುವ ಪ್ರಮುಖ ಯೋಜನೆಗಳಾದ ಕಾರಂಜಾ ಯೋಜನೆ, ತಿಮ್ಮಾಪುರ ಮತ್ತು ಸೊಣ್ಣ ಏತನೀರಾವರಿ ಯೋಜನೆಗಳು ಮತ್ತು ಹಲವು ಜಲಾಶಯಗಳ ನಿರ್ಮಾಣವನ್ನು ಈ ಸಾಲಿನಲ್ಲಿ ಕೈಗೊಳ್ಳಲಾಗುವುದು. ಇದಲ್ಲದೆ ಈಗಾಗಲೇ ಅನುಮೋದಿಸಲಾಗಿರುವ ಹಿಪ್ಪರಗಿ ನೀರಾವರಿ ಯೋಜನೆಯ ಐನಾಪುರ ಪಶ್ಚಿಮ ನಾಲೆ ಹಾಗೂ ಕರಿಮಸೂತಿ ಪೂರ್ವ ನಾಲೆ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು.

73. ಬಹು ವರ್ಷಗಳ ಬೇಡಿಕೆಯಾಗಿದ್ದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸಿ ನೀರಾವರಿ ವ್ಯವಸ್ಥೆಯನ್ನು ಹಸ್ತಾಂತರಿಸಲು ಪ್ರಾಯೋಗಿಕವಾಗಿ ತಲಾ ಒಂದೊಂದು ಮುಖ್ಯ ಕಾಲುವೆ ಅಚ್ಚುಕಟ್ಟು ಒಳಗೊಂಡಂತೆ KBJNL, KNNL, CNNL ಮೂಲಕ 3 ಅಚ್ಚುಕಟ್ಟು ಪ್ರದೇಶಗಳಲ್ಲಿ ಈ ಹಸ್ತಾಂತರ ಕಾರ್ಯಕ್ರಮಕ್ಕೆ ಅಗತ್ಯವಿರುವ ದುರಸ್ತಿ ಕಾಮಗಾರಿಗಳನ್ನು ಹಾಗೂ ಇತರೆ ಕ್ರಮಗಳನ್ನು ಕೈಗೊಳ್ಳಲಾಗುವುದು. ಮುಂದಿನ ವರ್ಷದಲ್ಲಿ 63,000 ಹೆಕ್ಟೇರ್‌ಗೆ ಮೀರಿ ಹೊಸ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ರಾಜ್ಯದ ಜಲಸಂಪನ್ಮೂಲ ಇಲಾಖೆಯು ಕ್ರಮ ಕೈಗೊಳ್ಳುವುದು.

ಭದ್ರಾ ಮೇಲ್ದಂಡೆ ಯೋಜನೆಗೆ ಚಾಲನೆ

74. ಈಗಾಗಲೇ ಸರ್ಕಾರದಿಂದ ಅನುಮೋದಿತವಾಗಿರುವ ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸಲು ಮುಂದಿನ ವರ್ಷದಲ್ಲಿ ರೂ.500 ಕೋಟಿ ವೆಚ್ಚ ಮಾಡಲಾಗುವುದು.

ಕೆರೆಗಳ ಅಭಿವೃದ್ಧಿಗೆ ವ್ಯವಸ್ಥಿತ ಯೋಜನೆ

75. ನೀರಾವರಿ ಕಾಮಗಾರಿಗಳಿಗಾಗಿ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ರೂ.764 ಕೋಟಿ ಅನುದಾನವನ್ನು ಒದಗಿಸಿ ನೀರಾವರಿ ಕೆರೆಗಳ ಹಾಗೂ ಏತನೀರಾವರಿ ಯೋಜನೆಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನವನ್ನು ಮಾಡಲಾಗುವುದು. ರಾಜ್ಯದ ಎಲ್ಲಾ ಕೆರೆಗಳ ಸಮಗ್ರ ಸಮೀಕ್ಷೆಯನ್ನು ನಡೆಸಿ ಅವುಗಳ ಪುನರುಜ್ಜೀವನಕ್ಕೆ ವ್ಯವಸ್ಥಿತವಾದ ಯೋಜನೆಗಳನ್ನು ಇಸ್ರೋ

(ISRO) ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ದೂರಸಂವೇದನೆ ಅಳವಡಿಕೆ ಕೇಂದ್ರ (KSRAC)ದ ಮೂಲಕ ರೂಪಿಸಲು ಉದ್ದೇಶಿಸಿದೆ.

76. ಕಾವೇರಿ ನದಿಯ ಉಪನದಿಯಾದ ಅರ್ಕಾವತಿಯ ಪುನಶ್ಚೇತನಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ರೂ.2 ಕೋಟಿ ಒದಗಿಸಲಾಗುವುದು.

ಗ್ರಾಮೀಣ ಅಭಿವೃದ್ಧಿ

77. ರಾಜ್ಯದ ಗ್ರಾಮಗಳಿಗೆ ಹಂತ ಹಂತವಾಗಿ ಉತ್ತಮ ದರ್ಜೆಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಮಹಾತ್ವಾಕಾಂಕ್ಷೆಯ ಸುವರ್ಣ ಗ್ರಾಮೋದಯ ಯೋಜನೆಯನ್ನು ಮುಂದುವರೆಸಿದೆ. ಮೊದಲ ಹಂತದ 1,200 ಗ್ರಾಮಗಳ ಅಭಿವೃದ್ಧಿಗಾಗಿ ಈಗಾಗಲೇ ರೂ.625 ಕೋಟಿ ಒದಗಿಸಲಾಗಿದೆ. 2009–10ರಲ್ಲಿ 2ನೇ ಸುತ್ತಿನ 1,200 ಗ್ರಾಮಗಳ ಅಭಿವೃದ್ಧಿಗಾಗಿ ರೂ.300 ಕೋಟಿ ಮೊದಲನೇ ಕಂತಿನ ಅನುದಾನವನ್ನು ಒದಗಿಸಲಾಗುತ್ತಿದೆ. ಗ್ರಾಮಗಳ ಆಂತರಿಕ ರಸ್ತೆಗಳ ಅಭಿವೃದ್ಧಿ, ಚರಂಡಿಗಳ ನಿರ್ಮಾಣ, ವಿದ್ಯುದ್ದೀಕರಣ, ಶೌಚಾಲಯಗಳ ನಿರ್ಮಾಣ ಮುಂತಾದ ಅತ್ಯವಶ್ಯಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಈ ಯೋಜನೆಯಲ್ಲಿ ಗ್ರಾಮೀಣ ಸಮುದಾಯಗಳನ್ನು ತೊಡಗಿಸಲಾಗುತ್ತಿದೆ.

78. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮೀಣ ಕಾರ್ಮಿಕರ ಜೀವನ ನಿರ್ವಹಣೆಗೆ ಅತ್ಯುತ್ತಮ ಆಧಾರವನ್ನು ಒದಗಿಸುತ್ತದೆ. 2009–10ರಲ್ಲಿ ಕನಿಷ್ಠ ರೂ.1200 ಕೋಟಿ ಅನುದಾನವನ್ನು ಈ ಯೋಜನೆಯಲ್ಲಿ ಉಪಯೋಗಿಸಲು ರಾಜ್ಯ ಸರ್ಕಾರವು ಸಂಕಲ್ಪಿಸಿದ್ದು ಇದಕ್ಕಾಗಿ ತನ್ನ ಪಾಲಿನ ಅನುದಾನವನ್ನು ರೂ.144 ಕೋಟಿ ಒದಗಿಸಲಾಗುವುದು. ಪ್ರತಿ ಗ್ರಾಮಪಂಚಾಯತಿಯ ಆಶ್ರಯದಲ್ಲಿ ಕನಿಷ್ಠ 100 ಸಣ್ಣ ರೈತರ ಹಿಡುವಳಿಗಳ ಅಭಿವೃದ್ಧಿ ಮಾಡಲು ಈ ಯೋಜನೆಯ ಅನುದಾನವನ್ನು ಬಳಸಲು ಅಗತ್ಯ ಉತ್ತೇಜನವನ್ನು ನೀಡಲಾಗುವುದು. ಇದರಿಂದ ಸಣ್ಣ ರೈತರಿಗೆ ಶಾಶ್ವತವಾಗಿ ತಮ್ಮ ಹಿಡುವಳಿಗಳ ಉತ್ಪಾದಕತೆಯನ್ನು ಹೆಚ್ಚಿಸಲು ಸಾಧ್ಯವಾಗುವುದು.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಲ್ಲಿ ಸಾಧನೆ

79. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ 2008–09ರಲ್ಲಿ ಸರ್ಕಾರವು ರೂ.325 ಕೋಟಿ ವಿನಿಯೋಗಿಸಿದ್ದು 1,124 ಕಿಲೋಮೀಟರ್ ರಸ್ತೆಯನ್ನು ಉತ್ತಮಪಡಿಸಲಾಗಿದೆ. ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯ ಅನುಷ್ಠಾನದಲ್ಲಿ ರಾಜ್ಯವು ರಾಷ್ಟ್ರ ಮಟ್ಟದಲ್ಲಿಯೇ ಉನ್ನತ ಪ್ರಶಂಸೆಯನ್ನು ಗಳಿಸಿ ಈವರೆಗೆ 7,880 ಕಿಲೋಮೀಟರ್‌ಗಳ ರಸ್ತೆಯನ್ನು ನಿರ್ಮಿಸಿದೆ. ಮುಂದಿನ ಸಾಲಿನಲ್ಲಿ

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ರೂ.800 ಕೋಟಿ ಅನುದಾನವನ್ನು ವಿನಿಯೋಗಿಸಿ 2,500 ಕಿಲೋಮೀಟರ್ ರಸ್ತೆಗಳನ್ನು ಉತ್ತಮಪಡಿಸಲಾಗುವುದು.

80. ಖಾಸಗಿ ಸಹಭಾಗಿತ್ವದೊಡನೆ ವಾರ್ಷಿಕ ಪಾವತಿ (Annuity) ಆಧಾರದ ಮೇಲೆ ರೂ.5,000 ಕೋಟಿ ವೆಚ್ಚದಲ್ಲಿ ಗ್ರಾಮೀಣ ರಸ್ತೆಗಳನ್ನು ಉತ್ತಮಪಡಿಸಲು ಬೃಹತ್ ಯೋಜನೆಯನ್ನು ಮುಂದಿನ ವರ್ಷ ಪ್ರಾರಂಭಿಸಲಾಗುವುದು. ಈ ವಿಷಯದಲ್ಲಿ ಪೂರ್ವಭಾವಿ ವೆಚ್ಚಕ್ಕಾಗಿ ರೂ.10 ಕೋಟಿ ವಿನಿಯೋಗಿಸಲಾಗುವುದು.

81. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಿದ್ದು ಈ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ 500 ಕಾಲು ಸಂಕಗಳ ಹಾಗೂ ತೂಗು ಸೇತುವೆಗಳ ನಿರ್ಮಾಣಕ್ಕೆ ರೂ.25 ಕೋಟಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶಾಶ್ವತ ನೀರು ಸರಬರಾಜು ಯೋಜನೆಗಳ ಪರಿಕಲ್ಪನೆ

82. ನದಿ ಹಾಗೂ ಜಲಾಶಯಗಳಿಂದ ಗ್ರಾಮೀಣ ಜನವಸತಿಗಳಿಗೆ ಮತ್ತು ನಗರ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ವಿಶೇಷ ಯೋಜನೆಯೊಂದನ್ನು ರೂಪಿಸಲಾಗುತ್ತಿದ್ದು ಪ್ರಾರಂಭಿಕವಾಗಿ ಬಿಜಾಪುರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ಯೋಜನೆಯನ್ನು 2009–10ರಲ್ಲಿ ಅನುಷ್ಠಾನಗೊಳಿಸಲು ರೂ.100 ಕೋಟಿಯನ್ನು ವಿನಿಯೋಗಿಸಲಾಗುವುದು. ಇದಲ್ಲದೆ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ನಿರ್ಮಾಣಕ್ಕಾಗಿ ಒಟ್ಟಾರೆ ರೂ.800 ಕೋಟಿ ಅನುದಾನವನ್ನು ಒದಗಿಸಲಾಗುವುದು.

83. ರಾಜ್ಯದ ಹಳ್ಳಿಗಳಲ್ಲಿ ಗ್ರಾಮನೈರ್ಮಲ್ಯದ ವ್ಯವಸ್ಥೆಯನ್ನು ಕಲ್ಪಿಸುವುದು ಜನರ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿದೆ. 2009–10ನೇ ವರ್ಷದಲ್ಲಿ ಗ್ರಾಮೀಣ ನೈರ್ಮಲ್ಯದ ಆಂದೋಲನದಲ್ಲಿ ಉತ್ತಮ ಸಾಧನೆಯನ್ನು ತೋರುವ ಗ್ರಾಮ, ತಾಲ್ಲೂಕು, ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲು ರೂ.5 ಕೋಟಿ ವಿನಿಯೋಗಿಸಲಾಗುವುದು. ಈ ವಿಷಯದಲ್ಲಿ ಸಾಕಷ್ಟು ಪ್ರಗತಿ ಸಾಧಿಸಲು ವಿಫಲವಾಗುವ ಪಂಚಾಯತಿಗಳ ವಿರುದ್ಧ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

84. ಅಲ್ಲದೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮುಂದುವರೆದ ಯೋಜನೆಗಳ ಜೊತೆಯಲ್ಲಿ 2009–10ನೇ ಸಾಲಿನಲ್ಲಿ ಈ ಕೆಳಕಂಡ ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

- ತುರ್ತು ನೀರು ಸರಬರಾಜು ಯೋಜನೆಗಳ ಅನುಷ್ಠಾನಕ್ಕಾಗಿ ತಾಲ್ಲೂಕು ಮಟ್ಟದ ಕಾರ್ಯಪಡೆಗಳಿಗೆ ರೂ.35.00 ಕೋಟಿಗಳನ್ನು ಒದಗಿಸಲಾಗಿದೆ.
- ಸಬ್–ಮಿಷನ್ ಕಾರ್ಯಕ್ರಮ / ಬಹುಗ್ರಾಮಗಳ ನೀರು ಸರಬರಾಜು ಕಾರ್ಯಕ್ರಮಗಳ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳ ನಿರ್ವಹಣೆಗಾಗಿ ರೂ.25.00 ಕೋಟಿಗಳನ್ನು ಒದಗಿಸಲಾಗುವುದು.
- "ಸೌರ ಬೆಳಕು"- ಗ್ರಾಮಗಳಲ್ಲಿ ಸೌರ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸಲು ರೂ.5 ಕೋಟಿ ನೀಡಲಾಗುವುದು.
- ಗ್ರಾಮ ಪಂಚಾಯತಿ ಕಟ್ಟಡಗಳ ನಿರ್ಮಾಣಕ್ಕಾಗಿ 'ಗ್ರಾಮ ಸೌಧ' ಯೋಜನೆಯನ್ನು ರೂಪಿಸಿ, ಪ್ರಸ್ತುತ ವರ್ಷದಲ್ಲಿ ರೂ.50.00 ಕೋಟಿಗಳನ್ನು ಒದಗಿಸಲಾಗಿದೆ. ರೂ.10 ಲಕ್ಷದ ಅಂದಾಜಿನಲ್ಲಿ ಪಂಚಾಯತಿ ಕಾರ್ಯಾಲಯದ ನಿರ್ಮಾಣಕ್ಕಾಗಿ ಗ್ರಾಮ ಪಂಚಾಯತಿಗಳಿಗೆ ಶೇ.50 ರಷ್ಟು ಅನುದಾನ ನೀಡಲಾಗುವುದು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

85. ರಾಜ್ಯದಲ್ಲಿ ಜನರ ಸಾಕ್ಷರತಾ ಪ್ರಮಾಣವು ಈಗ ಶೇ.67 ರಷ್ಟಿದ್ದು ಇದನ್ನು ತೀವ್ರಗತಿಯಲ್ಲಿ ಹೆಚ್ಚಿಸಲು ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸಬೇಕಾಗಿದೆ. ಇದಲ್ಲದೆ, ರಾಜ್ಯದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಿಸಿ ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಉತ್ತಮ ತಳಹದಿಯನ್ನು ನಿರ್ಮಿಸಬೇಕಾಗಿದೆ. ಈ ದೃಷ್ಟಿಯಿಂದ ಪ್ರಾಥಮಿಕ .ಹಾಗೂ ಪ್ರೌಢ ಶಿಕ್ಷಣದ ಆಯವ್ಯಯವನ್ನು 2008–09ರಲ್ಲಿ ಗಣನೀಯವಾಗಿ ಹೆಚ್ಚಿಸಿದ್ದು, ಮುಂದಿನ ವರ್ಷಗಳಲ್ಲಿ ಈ ಕ್ಷೇತ್ರದ ಪ್ರಾಮುಖ್ಯತೆಯನ್ನು ಕ್ರಮೇಣ ಹೆಚ್ಚಿಸಲಾಗುವುದು.

86. ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅಕ್ಷರ ದಾಸೋಹ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವ 8ನೇ ತರಗತಿಯ ಹೆಣ್ಣುಮಕ್ಕಳಿಗೆ ನೀಡುವ ಉಚಿತ ಬೈಸಿಕಲ್ ಯೋಜನೆಯನ್ನು 2008–09ರಿಂದ 8ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಗಿದ್ದು, ಈ ಯೋಜನೆಯನ್ನು 2009–10ನೇ ಸಾಲಿನಲ್ಲಿ ಮುಂದುವರಿಸಲಾಗುವುದು.

87. ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲಿ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಅಗತ್ಯವಿರುವ ಶಿಕ್ಷಕರ ಹುದ್ದೆಯನ್ನು ಭರ್ತಿಮಾಡಲಾಗುವುದು, ಹಾಗೂ ಈ ಭಾಗಕ್ಕೆ ವಿಶೇಷ ಗಮನ ಹರಿಸಿ ಶಿಕ್ಷಕರ ಮತ್ತು ಮಕ್ಕಳ ಅನುಪಾತವನ್ನು ರಾಜ್ಯ ಸರಾಸರಿಗೆ ತಕ್ಕಂತೆ ಸಮತೋಲನಗೊಳಿಸಲಾಗುವುದು.

88. 2009–10ನೇ ಸಾಲಿನಿಂದ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಸಹಯೋಗದೊಂದಿಗೆ ರಾಜ್ಯದ ಹಿಂದುಳಿದ ಶಿಕ್ಷಣ ವಲಯಗಳಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ 114 ಕೇಂದ್ರೀಯ ವಿದ್ಯಾಲಯ ಮಾದರಿಯ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳನ್ನು ತೆರೆಯಲಾಗುವುದು.

89. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಡಿಸೆಂಬರ್ 2006ರ ನಂತರ ಉದ್ಭವಿಸಿದ ಸಹ ಶಿಕ್ಷಕರ ಖಾಲಿ ಹುದ್ದೆಗಳನ್ನು (2531 ಹುದ್ದೆ) ಭರ್ತಿ ಮಾಡುವ ಸಲುವಾಗಿ ಅಗತ್ಯವಿರುವ (ಅಂದಾಜು 35.00 ಕೋಟಿ) ಅನುದಾನವನ್ನು ನೀಡಿ ಈಗಿನ ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಿಸಲಾಗುವುದು.

90. ಕಿತ್ತೂರು ಚೆನ್ನಮ್ಮ ಮಹಿಳಾ ವಿದ್ಯಾಶಾಲೆಯ ಅಭಿವೃದ್ಧಿಗೆ ರೂ.2 ಕೋಟಿ ನೀಡಲಾಗುವುದು.

ಉನ್ನತ ಶಿಕ್ಷಣ

91. ರಾಜ್ಯದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರಮಾಣವು ಶಾಲಾ ಶಿಕ್ಷಣವನ್ನು ಪೂರೈಸುವ ಶೇ.60 ರಷ್ಟು ಮಾತ್ರವಿದ್ದು ಇದನ್ನು ಕನಿಷ್ಟ ಶೇ.75ಕ್ಕೆ ಹೆಚ್ಚಿಸುವುದು ಅವಶ್ಯಕವಾಗಿದೆ. ಇದಕ್ಕಾಗಿ ಉನ್ನತ ಶಿಕ್ಷಣ ಸಂಸ್ಥೆಗಳ ಸಾಮರ್ಥ್ಯ ಹಾಗೂ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ.

92. ಇತ್ತೀಚೆಗೆ ಸ್ಥಾಪಿತವಾಗಿರುವ ತುಮಕೂರು ವಿಶ್ವವಿದ್ಯಾಲಯ ಮತ್ತು ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯಗಳಿಗೆ ಸೂಕ್ತ ಮೂಲ ಸೌಲಭ್ಯಗಳನ್ನು ಕಲ್ಪಿಸಲು 2009–10ರಲ್ಲಿ ರೂ.10 ಕೋಟಿ ಅನುದಾನವನ್ನು ಒದಗಿಸಲಾಗುವುದು.

ಡಾ॥ ಶಿವಕುಮಾರ ಸ್ವಾಮೀಜಿ ವಿಶ್ವವಿದ್ಯಾನಿಲಯ

93. ತುಮಕೂರು ವಿಶ್ವವಿದ್ಯಾನಿಲಯವನ್ನು ಡಾ॥ ಶಿವಕುಮಾರ ಸ್ವಾಮೀಜಿ ವಿಶ್ವವಿದ್ಯಾನಿಲಯವೆಂದು ಪುನರ್‌ನಾಮಕರಣ ಮಾಡಲಾಗುವುದು.

94. ಕೊಡಗಿನ ಕುಶಾಲನಗರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ರೂ.2 ಕೋಟಿ ಒದಗಿಸಲಾಗುವುದು.

95. ಆಯುರ್ವೇದ ವೈದ್ಯ ವಿಜ್ಞಾನದ ಅಭಿವೃದ್ಧಿಗಾಗಿ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದು.

96. ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಡಾ॥ ಅಂಬೇಡ್ಕರ್ ಅಧ್ಯಯನ ಪೀಠವನ್ನು ಸ್ಥಾಪಿಸಲು ಈಗಾಗಲೇ ಅನುಮತಿ ನೀಡಿದ್ದು ಅದಕ್ಕಾಗಿ ರೂ.2 ಕೋಟಿ ಅನುದಾನವನ್ನು ನೀಡಲಾಗುವುದು.

97. ಧಾರವಾಡದ ಸಿಎಂಡಿಆರ್ ಸಂಸ್ಥೆಯಲ್ಲಿ ಡಾ|| ಡಿ.ಎಂ. ನಂಜುಂಡಪ್ಪನವರ ಹೆಸರಿನಲ್ಲಿ ಸಂಶೋಧನಾ ಪೀಠವನ್ನು ಸ್ಥಾಪಿಸಲು ರೂ.1 ಕೋಟಿ ಒದಗಿಸಲಾಗುವುದು.

98. ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಗ್ರಾಮದಲ್ಲಿ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ತಾಂತ್ರಿಕ ಪ್ರದರ್ಶನಾಲಯ ಹಾಗೂ ಸಭಾಭವನವನ್ನು ಸ್ಥಾಪಿಸಲು ರೂ.2 ಕೋಟಿ ಅನುದಾನ ನೀಡಲಾಗುವುದು.

ದಾವಣಗೆರೆಯಲ್ಲಿ ಹೊಸ ವಿಶ್ವವಿದ್ಯಾನಿಲಯ

99. ರಾಜ್ಯದಲ್ಲಿ ಉನ್ನತ ಶಿಕ್ಷಣ ಸೌಕರ್ಯಗಳನ್ನು ವಿಸ್ತರಿಸಲು ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಅವಶ್ಯಕತೆ ಇದ್ದು 2009–10ರಲ್ಲಿ ದಾವಣಗೆರೆಯಲ್ಲಿ ನೂತನ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ದಾವಣಗೆರೆಯ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಸುಮಾರು 170 ಎಕರೆ ಜಮೀನು, ಕಟ್ಟಡಗಳು ಮತ್ತು ಶೈಕ್ಷಣಿಕ ಸಿಬ್ಬಂದಿಯು ಲಭ್ಯವಿದ್ದು ಈ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರೂ.10 ಕೋಟಿ ಒದಗಿಸಲಾಗುವುದು.

100. ಹಿಂದುಳಿದ ಕೊಪ್ಪಳ ಜಿಲ್ಲೆಯಲ್ಲಿ ತಾಂತ್ರಿಕ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಲು ಗಂಗಾವತಿಯಲ್ಲಿ ನೂತನ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುವುದು.

101. ಬೆಂಗಳೂರಿನಲ್ಲಿ ಸಂಸ್ಕೃತ–ವೇದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮತ್ತು ಮೈಸೂರಿನಲ್ಲಿ ಸಂಗೀತ ಮತ್ತು ಲಲಿತ ಕಲೆಗಳ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಈಗಾಗಲೇ ವಿಧೇಯಕಗಳನ್ನು ವಿಧಾನ ಮಂಡಲದಲ್ಲಿ ಮಂಡಿಸಲಾಗಿದೆ. ಮೇಲುಕೋಟೆಯಲ್ಲಿ ಸಂಸ್ಕೃತ ಸಂಶೋಧನಾ ಮತ್ತು ಅಕಾಡೆಮಿ ಕೇಂದ್ರದ ಅಭಿವೃದ್ಧಿಗೆ ಸಹಾಯಧನ ನೀಡಲಾಗುವುದು. ಈ ವಿಶ್ವವಿದ್ಯಾನಿಲಯಗಳ ವೆಚ್ಚಕ್ಕಾಗಿ ತಲಾ ರೂ.5 ಕೋಟಿ ಒದಗಿಸಲಾಗುವುದು.

ವಿಜ್ಞಾನ ಮತ್ತು ತಂತ್ರಜ್ಞಾನ

102 ಪ್ರೊ|| ಸಿ.ಎನ್.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ ವಿಜ್ಞಾನ ಮತ್ತು ತಂತ್ರಜ್ಞಾನ ವಿಷನ್ ಗ್ರೂಪ್ ಸಲಹೆಯಂತೆ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ವಿದ್ಯಾರ್ಥಿ–ವಿಜ್ಞಾನಿ ಸಂವಾದ, ವಿಜ್ಞಾನ ಮೇಳ, ವಿಜ್ಞಾನ ಸಂಘಗಳ ಸ್ಥಾಪನೆ, ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠ ಸಂಸ್ಥೆಗಳನ್ನು ಸ್ಥಾಪಿಸಲು ಕಾಲೇಜು–ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಶಿಕ್ಷಣದ ಉನ್ನತೀಕರಣ, ಜಿಲ್ಲಾ ಮಟ್ಟದಲ್ಲಿ ವಿಜ್ಞಾನ

ಶಿಕ್ಷಣ ಕೇಂದ್ರ ಮತ್ತು ವಸ್ತು ಸಂಗ್ರಹಾಲಯ, ಇತ್ಯಾದಿ ನೂತನ ಕಾರ್ಯಕ್ರಮಗಳಿಗೆ ರೂ.10 ಕೋಟಿ ಕೊಡಲಾಗುವುದು.

ಚಿತ್ರದುರ್ಗದಲ್ಲಿ ವಿಜ್ಞಾನ ಸಂಸ್ಥೆ

103. ಚಿತ್ರದುರ್ಗದ ಜಿಲ್ಲೆಯಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಶಾಖೆಯನ್ನು ತೆರೆಯಲು 1000 ಎಕರೆಯ ಜಮೀನನ್ನು ಒದಗಿಸಲಾಗುವುದು.

104. ರಾಜ್ಯದಲ್ಲಿ ಕರ್ನಾಟಕ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ ಮತ್ತು ಖಾಯಂ ಭೂಕಂಪನ ಮಾಪನ ಕೇಂದ್ರಗಳ ಸ್ಥಾಪನೆ ಮಾಡಲು ರೂ.5 ಕೋಟಿ ಮೀಸಲಿಡಲಾಗುವುದು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

105. ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಶಿಫಾರಸ್ಸುಗಳನ್ನು ಪರಿಗಣಿಸಿ, ಬೆಂಗಳೂರು ಹೊರಗಡೆ ಪ್ರಮುಖ ನಗರಗಳಲ್ಲಿ ಬಯೋಟೆಕ್ ಪಾರ್ಕ್‌ಗಳನ್ನು ನಿರ್ಮಾಣ ಮಾಡಲಾಗುವುದು. ಗುಲ್ಬರ್ಗಾ ವಿಭಾಗದಲ್ಲಿ ಐ.ಟಿ. ಕ್ಷೇತ್ರಕ್ಕೆ ಉತ್ತೇಜನ ನೀಡಲು ಕಿಯೋನಿಕ್ಸ್ ಮುಖಾಂತರ ಐ.ಟಿ. ಪಾರ್ಕ್ ನಿರ್ಮಾಣ ಮಾಡಲು ರೂ.10 ಕೋಟಿ ನೀಡಲಾಗುವುದು.

106. ಹಿಂದುಳಿದ ಪ್ರದೇಶವಾದ ಗುಲ್ಬರ್ಗ ವಿಭಾಗದಲ್ಲಿ ಮಾಹಿತಿ ತಂತ್ರಜ್ಞಾನದ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರತಿ ಘಟಕಕ್ಕೆ ರೂ.20 ಲಕ್ಷದವರೆಗೆ ಸಹಾಯಧನ ನೀಡಲಾಗುವುದು.

107. ಗ್ರಾಮೀಣ ಪ್ರದೇಶದಲ್ಲಿ ಇಂಟರ್‌ನೆಟ್ ಉಪಯೋಗ ಜನಪ್ರಿಯಗೊಳಿಸಲು ಎಲೆಕ್ಟ್ರಾನಿಕ್ ಪಬ್ಲಿಕ್ ಕಾಲ್ ಆಫೀಸ್ (e-PCO) ಸ್ಥಾಪನೆಗೆ ಉತ್ತೇಜನ ನೀಡಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

108. ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಸೌಲಭ್ಯಗಳ ಅಭಿವೃದ್ಧಿಗಾಗಿ ಸರ್ಕಾರವು ವೆಚ್ಚಮಾಡುತ್ತಿರುವ ಮೊತ್ತವು ಪ್ರತಿ ವರ್ಷವೂ ಹೆಚ್ಚಾಗುತ್ತಿದೆ. 2009–10ನೇ ಸಾಲಿನಲ್ಲಿ ಒಟ್ಟು ರೂ.1840 ಕೋಟಿ ವೆಚ್ಚದಲ್ಲಿ ಸರ್ಕಾರದ ವೈದ್ಯಕೀಯ ಸೇವೆಗಳ ವ್ಯವಸ್ಥೆಯನ್ನು ನಿರ್ವಹಿಸಿ ಬಲಪಡಿಸಲಾಗುವುದು.

109. ರಾಜ್ಯದಲ್ಲಿ ವೈದ್ಯಕೀಯ, ಆರಕ್ಷಕ ಮತ್ತು ಅಗ್ನಿಶಾಮಕ ತುರ್ತು ಸೇವೆಗಳನ್ನು ಒದಗಿಸುವ ಸಲುವಾಗಿ ತುರ್ತು ನಿರ್ವಹಣೆ ಪ್ರಕ್ರಿಯೆ ಸೇವೆ ಅಂದರೆ **'ಆರೋಗ್ಯ ಕವಚ'** ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗಿದ್ದು ಅದು ರಾಜ್ಯದಲ್ಲಿ ಜನಪ್ರಿಯತೆಯನ್ನು ಗಳಿಸಿದೆ

ಎಂದು ತಿಳಿಸಲು ನನಗೆ ಸಂತೋಷವಾಗಿದೆ. ಈ ಯೋಜನೆಯಡಿ ಮಾರ್ಚ್ 2010ರ ವೇಳೆಗೆ 517 ಆಂಬುಲೆನ್ಸ್‌ಗಳನ್ನು ರೂ.221.25 ಕೋಟಿಗಳ ವೆಚ್ಚದಲ್ಲಿ ನೀಡಲಾಗುವುದು. 2008ರ ನವೆಂಬರ್ ರಿಂದ ಫೆಬ್ರವರಿ 1, 2009ರ ವರೆಗೆ ಈ ಯೋಜನೆಯಡಿ ಒಟ್ಟು 8,15,658 ದೂರವಾಣಿ ಕರೆಗಳನ್ನು ನಿರ್ವಹಿಸಲಾಗಿದ್ದು, ಒಟ್ಟಾರೆ 8832 ಜೀವಗಳನ್ನು ಉಳಿಸಲಾಗಿದೆಯೆಂದು ಅಂದಾಜು ಮಾಡಿದೆ.

ಬಡ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ

110. ಗುಲ್ಬರ್ಗ ವಿಭಾಗದ ಹಿಂದುಳಿದ ಜಿಲ್ಲೆಗಳಲ್ಲಿ 'ಸುವರ್ಣ ಆರೋಗ್ಯ ಸುರಕ್ಷಾ' ಯೋಜನೆಯ ಮೂಲಕ 16 ಲಕ್ಷ ಬಡ ಕುಟುಂಬಗಳಿಗೆ ತಲಾ ರೂ.1.50 ಲಕ್ಷದವರೆಗೆ ವೈದ್ಯಕೀಯ ನೆರವನ್ನು ಉಚಿತವಾಗಿ ಒದಗಿಸಲಾಗುವುದು.

111. ಉನ್ನತ ಮಟ್ಟದ ವಿಶೇಷ ತಂತ್ರಜ್ಞಾನದ ವೈದ್ಯಕೀಯ ಸಂಸ್ಥೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಸರ್ಕಾರವು 2008–09ನೇ ಸಾಲಿನಲ್ಲಿ ಕರ್ನಾಟಕ ಮಧುಮೇಹ ಸಂಸ್ಥೆಯನ್ನು ಸ್ಥಾಪಿಸಿದ್ದು ಈ ಸಂಸ್ಥೆಯ ಚಿಕಿತ್ಸಾ ಸೌಲಭ್ಯಗಳ ಸಂಕೀರ್ಣವನ್ನು ನಿರ್ಮಿಸಲು 2009–10ರಲ್ಲಿ ರೂ.5 ಕೋಟಿ ವಿನಿಯೋಗಿಸಲಾಗುವುದು.

		32 c	(c) where the licence is	The same duty as	**"OMMITED"**	**"OMMITED"**

			granted for a lumpsum amount advanced in addition to rent or fee or by whatever name it is called.	conveyance (No.20) for the lumpsum amount advanced as set forth in the licence in addition to the duty which would have been payble on such licence, if no lumpsum amount advanced had been paid or delivered.		
10	**Power of Attorney**	**41(e)**	(e) when given for consideration and authorizing the attorney to sell any immovable property;	The same duty as a Conveyance (No.20) for a market value equal to the amount of the consideration.	(e) when given for consideration and / or when coupled with interest and authorizing the attorney to sell any immovble property;	The same duty as a Conveyance [under Article 20(1)] on consideration or on market value of the property (which is the

	Power of Attorney	**41(ea)**	(ea) when given to a promoter or developer by whatever name called of construction, development on, or sale, or transfer (in any manner whatsoever) of, any immovable property situated in Karnataka State. Where the market value of property. (1) Does not exceed Rs.one Crore. (2) Exceeds one crore and does not exceed two crores (3) Exceeds two crores and does not exceed five crores (4) Exceeds five crores and does not exceed ten crores.	10,000/- 20,000/- 50,000/- 1,00,000/- 1,50,000/-	(ea) when given for construction / development/ sale of an immovable property, including a multi-unit house or building or unit of apartment/flat/portion of a multi-storied building to a person having a stipulation that after construction/ development, such property shall be held jointly or severally by person and the owner or lessee, as the case may be, of such property, or that it shall be sold jointly or severally by them or that a part or it shall be held jointly or severally by them and the remaining part thereof shall be	subject matter of such power of attorney), whichever is higher. One Rupee for every one Hundred Rupees or part thereof on the market value of the property, and/or the estimated cost of construction or proposed construction/ development or proposed construction/ deveplopment or proposed Development of the subject matter of such Transfer under the power of

			(5) Exceeds ten crores.		sold jointly or severally by them. Explanation: 1) the expression "lessee' shall mean a holder of a lease for a period exceeding thirty years or more or in perpetuity or does not purport to be forany definite term. 2) the expression "building" shall mean a building having more than one apartment/flat/office accommodation or portion of a multi-storied building or both.	attorney in accordance with the provisions of section 28 of the Karnataka Stamp Act 1957); or the consideration for such transfer whichever is higher. Provided that, when proper stamp duty is paid under clauses (e) or (f) of articls 5 (as the case may be) on such agreement, or records thereof or memorandum of an agreement executed between the same parties and in respect of the

		41 (f)	(f) In any other case	One Hundred Rupees	In any other case	same property, the duty chargeable under these clauses shall be as per Article 41(f). Two Hundred Rupees.
11	**Release**	**45 (a) (i) & (ii)**	Recease, that is to say, any instrument (not being such a release as is provided for by Section 24), whereby a person renounees a claim upon another person or against any specified property: (a) where the release is		Art. 45. Release, that is to say, any instrument (not being such a release as is provided for by Section 24), whereby a person / Releaser renounces a claim or part of claim upon another person or against any specified property, (a) where the release	The same duty as a Conveyance [Under Article No.20(1)] on the market value of

			not between the family members.		is not between the family members.	the property and / or on the amount or value of claim or part of claim renounced, as the case may be (which is the subject matter of Release); or consi-deration for such release, whichever is higher.
			(i) where the release is not for any consideration.	2.5% on the market value of the property, which is the subject matter of release		
			(ii) if the rselease is for consideration.	50% of the rate applicable to conveyance on the market value of the property, which is the subject matter of release		
			1(b) where the release is between the family members. Explanation: Family in relation to a person for the purpose of clause (b) means, husband, wife, son, daughter, father, mother, brother, sister, wife of a predeceased son and childred of predeceased son or	Rupees One Thousand.	1(b) where the release is between the family members. Explanation: Family in relation to a person for the purpose of clause (b) means, husband, wife, son, daughter, father, mother, brother, wife / **childred of predeceased brother,** sister,	Rupees One Thousand.

			predeceased daughter.)		**husband/ childred of predeceased sister,** wife of a predeceased son and childred of predecased son or predeceased daughter.)	
12	**Settlement**	**48**	Explanation- For the purpose of this sub-clause family in relation to settler means husband, wife, son, daughter, daughter-in-law, brothers, sisters and grand children.	One Thousand Rupees	Explanation- For the purpose of this sub-clause, family in relation to settler means **Father, Mother,** husband, wife, son, daughter, daughter-in-law, brothers, sisters and grand children.	One Thousand Rupees

ಅನುಬಂಧ -2

ಕರ್ನಾಟಕ ಸರ್ಕಾರ

Government of Karnataka

ಆರ್ಥಿಕ ಇಲಾಖೆ

ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು

2009 – 2013

(2009ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ವಿಧಾನಮಂಡಲದ ಮುಂದೆ ಮಂಡಿಸಿದಂತೆ)

(As presented to the Legislature in February 2009)

ಕರ್ನಾಟಕ ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು

2009–13

ಅಧ್ಯಾಯ–1 – ಪೀಠಿಕೆ	1
ಅಧ್ಯಾಯ–2 – ವಿತ್ತೀಯ ನಿರ್ವಹಣೆಯ ಮೌಲ್ಯಮಾಪನೆ	10
ಅಧ್ಯಾಯ–3 – ಸ್ಥೂಲ ಆರ್ಥಿಕ ದೃಷ್ಟಿಕೋನ	16
ಅಧ್ಯಾಯ–4 – ರಾಜಸ್ವ ಸುಧಾರಣೆಗಳು ಹಾಗೂ ಮುನ್ನಂದಾಜುಗಳು	19
ಅಧ್ಯಾಯ–5 – ವೆಚ್ಚ ನಿರ್ವಹಣೆ ಮತ್ತು ಮುನ್ನಂದಾಜುಗಳು	25
ಅಧ್ಯಾಯ–6 – ಸಾರ್ವಜನಿಕ ಹಣಕಾಸು ನಿರ್ವಹಣೆ ಮತ್ತು ವ್ಯವಸ್ಥಿತ ಸುಧಾರಣೆಗಳು	31
ಅಧ್ಯಾಯ–7 – ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 2009–13	34

ನಿಯಮ ಪಾಲನಾ ಹೇಳಿಕೆ

2009-10 ರ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002ರ 3ನೇ ಪ್ರಕರಣದ ಅನುಪಾಲನೆಯಲ್ಲಿ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ.

ಅಧಿನಿಯಮದ 3ನೇ ಪ್ರಕರಣಕ್ಕೆ ಅನುಗುಣವಾಗಿ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಈ ಮುಂದಿನ ಅಂಶಗಳನ್ನು ಅಳವಡಿಸಬೇಕಾಗಿದೆ. ಈ ಎಲ್ಲ ಅಂಶಗಳು ಈ ದಾಖಲಾತಿಯಲ್ಲಿ ಲಭ್ಯವಾಗುತ್ತವೆ.

1. ಸರ್ಕಾರದ ಮಧ್ಯಮಾವಧಿ ವಿತ್ತೀಯ ಉದ್ದೇಶಗಳು (ಅಧ್ಯಾಯ 1, 4, 5, 6 ಮತ್ತು 7)
2. ಹಿಂದಿನ ವರ್ಷಗಳಲ್ಲಿ ನಿಗದಿಪಡಿಸಿದ ವಿತ್ತೀಯ ಸೂಚಕಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನ (ಅಧ್ಯಾಯ 2)
3. ಇತ್ತೀಚಿನ ಆರ್ಥಿಕ ಪ್ರವೃತ್ತಿಗಳು ಮತ್ತು ಬೆಳವಣಿಗೆ ಹಾಗೂ ಅಭಿವೃದ್ಧಿ ಸಾಧ್ಯತೆಗಳ ಹೇಳಿಕೆ (ಅಧ್ಯಾಯ 3)
4. ಸರ್ಕಾರದ ಪ್ರಮುಖ ಆದ್ಯತೆಗಳು ಮತ್ತು ಪ್ರಮುಖ ವಿತ್ತೀಯ ನೀತಿಗಳು ಮತ್ತು ಅವುಗಳ ಸುಸ್ಥಿರತೆಯ ಮೌಲ್ಯಮಾಪನ (ಅಧ್ಯಾಯ 4 ರಿಂದ 7)
5. ನಾಲ್ಕು ವರ್ಷದ ಚಲನಶೀಲ ಗುರಿಗಳು (ಅಧ್ಯಾಯ 7)
6. ರಾಜಸ್ವ ಕೊರತೆ ಮತ್ತು ಉತ್ಪಾದನಾ ಉದ್ದೇಶಗಳಿಗಾಗಿ ಬಂಡವಾಳ ಸ್ವೀಕೃತಿಗಳ ಬಳಕೆಗೆ ಸಂಬಂಧಿಸಿದಂತೆ ಸುಸ್ಥಿರತೆಯ ಮೌಲ್ಯಮಾಪನ.

ಅಧ್ಯಾಯ-1
ಪೀಠಿಕೆ

ಎ. ಎದುರಾಗಿರುವ ಸವಾಲುಗಳು

1. ಕಳೆದ ಐದು ವರ್ಷಗಳಲ್ಲಿ ಕಂಡುಬಂದ ಪರಿಣಾಮಕಾರಿ ಆರ್ಥಿಕ ಬೆಳವಣಿಗೆ ಹಾಗೂ ಸುಸ್ಥಿರ ವಿತ್ತೀಯ ಸಂಯೋಜನೆಯನ್ನಾಧರಿಸಿ 2008-12ರ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಮಂಡಿಸಲಾಯಿತು. 2008-09ರ ಅವಧಿಯಲ್ಲಿ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇಕಡಾ 2.88 ಎಂದು, ಹೆಚ್ಚುವರಿ ರಾಜಸ್ವವು ಜಿಎಸ್‌ಡಿಪಿಯ ಶೇಕಡಾ 0.63 ಎಂದು ಅಂದಾಜು ಮಾಡಲಾಗಿತ್ತು. ಅಂತಾರಾಷ್ಟ್ರೀಯ ಸರಕು ಬೆಲೆ ಸಂಕೇತಗಳು (signals), ಅದರಲ್ಲೂ ವಿಶೇಷವಾಗಿ ಪೆಟ್ರೋಲಿಯಂ ಬೆಲೆಗಳನ್ನು ಪರಿಗಣಿಸಿ, 2008-09ರಲ್ಲಿ ಜಿಎಸ್‌ಡಿಪಿ ಶೇ. 7ರಷ್ಟು ಏರಬಹುದೆಂದು, ಹಣದುಬ್ಬರ ಶೇಕಡಾ 8ರಷ್ಟಾಗಬಹುದೆಂದು ಭಾವಿಸಲಾಗಿತ್ತು. ಹಾಗಿದ್ದರೂ ಎಂಟಿಎಫ್‌ಪಿ ಮಂಡನೆಯಾದ ತರುವಾಯದ ಅವಧಿಯಲ್ಲಿ ಜಾಗತಿಕ ಹಣಕಾಸಿನ ವ್ಯವಸ್ಥೆಯ ಬಿಕ್ಕಟ್ಟಿನ ಪರಿಣಾಮವಾಗಿ ಹಿಂದೆಂದೂ ಅನುಭವಿಸದಿದ್ದ ಆರ್ಥಿಕ ಮುಗ್ಗಟ್ಟು ಪ್ರಪಂಚದಾದ್ಯಂತ ವ್ಯಾಪಿಸಿತು. ಭಾರತದ ಗಡಿಯಾಚೆಗೆ ಉದ್ಭವಿಸಿದಂಥ ಕಾರಣಗಳು ಭಾರತದ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡಿದವು. ಅಂತೆಯೇ ಕರ್ನಾಟಕದ ಆರ್ಥಿಕ ವ್ಯವಸ್ಥೆಯೂ ಬಾಧೆಗೆ ಒಳಗಾಗಿದೆ. ಹೀಗೆ 2008-09ರ ಅವಧಿಯು ಸರ್ಕಾರದ ಹಣಕಾಸಿನ ವ್ಯವಸ್ಥಾಪನೆಯಲ್ಲಿ ಹಿಂದೆಂದೂ ಕಂಡರಿಯದ ಸವಾಲುಗಳನ್ನು ತಂದೊಡ್ಡಿತು. ಈ ಸ್ಥಿತಿ 2009-10ರಲ್ಲಿಯೂ ಮುಂದುವರಿಯುವ ಸಂಭವವಿದೆ. 2009-10ರ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ, ಎಫ್‌ಆರ್‌ಬಿಎಂ ಶಾಸನದಡಿ ವಿಧಿಸಲಾದಂತೆ 2009-10ರ ಕೊರತೆ ಗುರಿಗಳಿಗೆ ಬದ್ಧರಾಗಿರುವುದು ಕಷ್ಟವೆಂದೂ ಸೂಚಿಸಲಾಗಿದೆ. 2009-10ರ (ಪ್ರಸ್ತುತ ಬೆಲೆಗಳಲ್ಲಿ) ಜಿಡಿಪಿ ಬೆಳವಣಿಗೆ ಮುನ್ನಂದಾಜು ದರ ಶೇ. 11ರಷ್ಟಿದ್ದು, ಇದು 2008-09ರ ಶೇ. 14.9ರ ಮುನ್ನಂದಾಜು ದರಕ್ಕೆ ಹೋಲಿಸಿದರೆ ಕಡಿಮೆ ಎಂದು ಕೇಂದ್ರ ಆಯವ್ಯಯದಲ್ಲಿ ಸೂಚಿಸಲಾಗಿದೆ. ನಂತರದ ವರ್ಷಗಳಲ್ಲಿ ಎಂದರೆ 2010-11 ಹಾಗೂ 2011-12ರಲ್ಲಿ ಜಿಡಿಪಿ ಬೆಳವಣಿಗೆ ಅನುಕ್ರಮವಾಗಿ ಶೇ. 13 ಹಾಗೂ ಶೇ. 13.4 ಎಂದು ಮುನ್ನಂದಾಜು ಮಾಡಲಾಗಿದೆ. ಹೀಗೆ ಮಧ್ಯಮಾವಧಿ ವಿತ್ತೀಯ ಚಿತ್ರಣವು ಕಳೆದೆರಡು ವರ್ಷಗಳಲ್ಲಿದ್ದಷ್ಟು ಆಶಾದಾಯಕವಾಗಿಲ್ಲ.

2. ಪ್ರಸ್ತುತ ಅನಿಶ್ಚಿತ ಆರ್ಥಿಕ ಸ್ಥಿತಿಯು ಮಧ್ಯಮಾವಧಿಯಲ್ಲಿ ಮುಂದುವರಿಯುವ ಸಾಧ್ಯತೆಯಿದೆ. ಇದು ಕರ್ನಾಟಕದ ಆರ್ಥಿಕತೆಯ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆ ಇದೆ. 2008-09ರಲ್ಲಿ ಜಿಡಿಪಿ ಬೆಳವಣಿಗೆ ಪ್ರಮಾಣ ನಿರೀಕ್ಷೆಗಿಂತ ಕಡಿಮೆಯಾಗಿದ್ದು; ಗ್ರಾಹಕ ಬೇಡಿಕೆಯನ್ನು ಉದ್ದೀಪಿಸಲು ಕೇಂದ್ರವು ತೆರಿಗೆ/ ಸುಂಕಗಳಲ್ಲಿ ಕಡಿತವನ್ನು ಘೋಷಿಸಿದ್ದು ಕೇಂದ್ರ ತೆರಿಗೆ ಸ್ವೀಕೃತಿಗಳ ಮೇಲೆ ತನ್ಮೂಲಕ

ಭಾರತ ಸರ್ಕಾರದಿಂದ ಕರ್ನಾಟಕಕ್ಕೆ ವರ್ಗಾವಣೆಯಾಗುತ್ತಿದ್ದ ಹಕ್ಕಿನ ಸ್ವೀಕೃತಿಗಳ ಮೇಲೆ ಅವುಗಳು ಪರಿಣಾಮ ಬೀರಿವೆ. ಕರ್ನಾಟಕಕ್ಕೆ ಆಯವ್ಯಯ ಅಂದಾಜಿನಲ್ಲಿ 2008-09ರಲ್ಲಿ 7982 ಕೋಟಿ ರೂ. ನಿಧಿ ವರ್ಗಾವಣೆಯನ್ನು ಅಂದಾಜು ಮಾಡಲಾಗಿದ್ದು ಅದು ಪರಿಷ್ಕೃತ ಅಂದಾಜಿನಂತೆ 7152 ಕೋಟಿ ರೂ.ಗಳಿಗೆ ಇಳಿದಿದೆ. ಸರ್ಕಾರವು ತನ್ನ ಅಭಿವೃದ್ಧಿ ಆದ್ಯತೆಗಳನ್ನು ನಿರ್ವಹಿಸುವ ಹಾಗೂ ರಾಜ್ಯದ ಆರ್ಥಿಕ ಸ್ಥಿತಿಯ ಬೆಳವಣಿಗೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಮತ್ತು ದೊರೆಯಬಹುದಾದ ಆದಾಯದ ಬೆಳವಣಿಗೆ ಹಿನ್ನೆಲೆಯಲ್ಲಿ ಎಂಟಿಎಫ್‌ಪಿ 2009-13ನ್ನು ಮಂಡಿಸಲಾಗುತ್ತಿದೆ. ಮುಂದಿನ ಅಧ್ಯಾಯಗಳಲ್ಲಿ ರಾಜ್ಯದ ಮುಂದಿನ ಸವಾಲುಗಳು ಹಾಗೂ ಸರ್ಕಾರದ ಪ್ರತಿಕ್ರಿಯೆಯನ್ನು ವಿವರಿಸಲಾಗಿದೆ.

ಬಿ. ವಿತ್ತೀಯ ಸ್ಥಿತಿಯನ್ನು ಸರಿಪಡಿಸುವ ಹಾದಿ

3. ವಿತ್ತೀಯ ಸಂಚಯನದಲ್ಲಿ (consolidation) ಕರ್ನಾಟಕವು ಮುಂಚೂಣಿಯಲ್ಲಿದೆ. ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಪರಿಮಿತಿ ಅಧಿನಿಯಮ, 1999 ಹಾಗೂ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002-ಇಂಥ ವಿತ್ತೀಯ ಕಾನೂನುಗಳ ನೆರವಿನಿಂದ ಸರ್ಕಾರವು ಯೋಜಿಸಿದಂತೆ ವಿತ್ತೀಯ ಸಂಚಯನವನ್ನು ಸಾಧಿಸಿದೆ.

4. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮವನ್ನು (KFRA) ರೂಪಿಸುವುದಕ್ಕೆ ಮುಂಚೆ ಅದರಲ್ಲೂ ವಿಶೇಷವಾಗಿ 1997ರಿಂದೀಚೆಗೆ ರಾಜ್ಯದ ವಿತ್ತೀಯ ಸ್ಥಿತಿಯು ತೀವ್ರ ಒತ್ತಡಕ್ಕೊಳಗಾಯಿತು. ವೇತನ ಆಯೋಗದ ಶಿಫಾರಸುಗಳ ಅನುಷ್ಠಾನದಿಂದಾಗಿ ಉಂಟಾದ ವೇತನ ಹೆಚ್ಚಳದ ಖರ್ಚು, ನೀರಾವರಿ ಯೋಜನೆಗಳಂಥ ಪ್ರಮುಖ ಖರ್ಚಿನ ಬಾಬುಗಳಿಗಾಗಿ ಅಂದಾಜು ಮೀರಿದ ಸಾಲಗಳು, ತೆರಿಗೆ ರಾಜಸ್ವದ ಸಂಗ್ರಹಣೆಯಲ್ಲಾದ ಕೊರತೆ, ಹೆಚ್ಚಿನ ಬಡ್ಡಿ ಸಂದಾಯ-ಇಂಥ ಹಲವಾರು ಅಂಶಗಳು ಇಂಥ ಸ್ಥಿತಿಗೆ ಕಾರಣವಾಗಿದೆ. ರಾಜ್ಯದ ಹಣಕಾಸು ಸ್ಥಿತಿಯಲ್ಲಿ 1997-98 ರಿಂದೀಚೆಗೆ ಸಾಕಷ್ಟು ರಾಜಸ್ವ ಕೊರತೆಯುಂಟಾಯಿತು. 1997-98ರಲ್ಲಿ ಅನುಕ್ರಮವಾಗಿ ಜಿಎಸ್‌ಡಿಪಿಯ ಶೇಕಡಾ 0.38 ಹಾಗೂ 2.20 ಪ್ರಮಾಣದಲ್ಲಿದ್ದ ರಾಜಸ್ವ ಹಾಗೂ ವಿತ್ತೀಯ ಕೊರತೆಯು 2001-02ರಲ್ಲಿ ಅನುಕ್ರಮವಾಗಿ ಶೇಕಡಾ 3.01 (3284 ಕೋಟಿ ರೂ.) ಹಾಗೂ 5.4 (5870 ಕೋಟಿ ರೂ.) ಕ್ಕೆ ಏರಿತು.

5. ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮವನ್ನು ಅಂಗೀಕರಿಸುವುದಕ್ಕೆ ಮುಂಚೆ ಕರ್ನಾಟಕದಲ್ಲಿಯೂ ಇತರ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿದ್ದಂಥ ಸ್ಥಿತಿಯೇ ಗೋಚರಿಸುತ್ತಿತ್ತು. 1997-98 ಹಾಗೂ 2001-02ರ ನಡುವಣ ಅವಧಿಯಲ್ಲಿನ ಪ್ರಮುಖ ವಿತ್ತೀಯ ಸೂಚಕಗಳು ರಾಜ್ಯದ ಕುಂಠಿತ ವಿತ್ತೀಯ

ಸ್ಥಿತಿಯನ್ನೇ ತೋರಿಸಿದವು. ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ಮೊದಲು ಎದುರಿಸಿದ ವಿತ್ತೀಯ ಒತ್ತಡವನ್ನು ಕೋಷ್ಟಕ-1ರಲ್ಲಿ ನೋಡಬಹುದು.

ಕೋಷ್ಟಕ-1
ಕೆಎಫ್‌ಆರ್‌ಎ.ಯನ್ನು ಅಧಿನಿಯಮಿಸುವುದಕ್ಕೆ ಮೊದಲು ಕರ್ನಾಟಕ ಸರ್ಕಾರದ ವಿತ್ತೀಯ ಕೊರತೆ ಮತ್ತು ರಾಜಸ್ವ ಕೊರತೆ.

(ರೂ.ಗಳು ಕೋಟಿಗಳಲ್ಲಿ)

ಬಾಬು	1997-98	1998-99	1999-00	2000-01	2001-02
ಜಿಎಸ್‌ಡಿಪಿ ನಾಮನಿರ್ದಿಷ್ಟ	73046	87841	101247	108362	112846
ವಿತ್ತೀಯ ಕೊರತೆ	1610	3112	4276	4219	5870
ಜಿಎಸ್‌ಡಿಪಿಯ ಶೇಕಡಾವಾರು ವಿತ್ತೀಯ ಕೊರತೆ	2.20	3.54	4.22	3.89	5.20
ರಾಜಸ್ವ ಕೊರತೆ	277	1215	2325	1862	3284
ಜಿಎಸ್‌ಡಿಪಿಯ ಶೇಕಡಾವಾರು ರಾಜಸ್ವ ಕೊರತೆ	0.38	1.38	2.45	1.78	3.01

6. ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ 2005-06ರ ವೇಳೆಗೆ ಶೂನ್ಯ ರಾಜಸ್ವ ಕೊರತೆ ಖಾತರಿಪಡಿಸಲು ಮತ್ತು ವಿತ್ತೀಯ ಕೊರತೆಯನ್ನು ಶೇಕಡಾ 3ಕ್ಕಿಂತ ಕೆಳಗೆ ನಿಯಂತ್ರಿಸುವುದನ್ನು ಕಡ್ಡಾಯಪಡಿಸಲಾಯಿತು. ಈ ಕಡ್ಡಾಯದಿಂದಾಗಿ ಸರ್ಕಾರದ ಹಣಕಾಸನ್ನು ವಿವೇಚನಾತ್ಮಕವಾಗಿ ನಿರ್ವಹಿಸಲು ಸರ್ಕಾರಕ್ಕೆ ಸಾಧ್ಯವಾಯಿತು. ರಾಜ್ಯವು ಪ್ರಮುಖವಾಗಿ ರಾಜಸ್ವ ವೆಚ್ಚಗಳನ್ನು ಕಡಿತಗೊಳಿಸಲು ತೆಗೆದುಕೊಂಡ ಕ್ರಮಗಳ ಕಾರಣ, ಕಾರ್ಯನೀತಿ ಕ್ಷೇತ್ರದಲ್ಲಿ ರಾಜಸ್ವ ವೃದ್ಧೀಕರಣ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಮತ್ತು ಹೆಚ್ಚಿಸಿದ ತೆರಿಗೆ ಸಂದಾಯ ಪಾಲನೆಗೆ ಸಾಂಸ್ಥಿಕ ಸಾಮರ್ಥ್ಯ ಹೆಚ್ಚಿಸುವ ಮೂಲಕ 1990ರ ದಶಕದ ವಿತ್ತೀಯ ಒತ್ತಡವನ್ನು ಪೂರ್ತಿಯಾಗಿ ನಿಭಾಯಿಸಿದೆ. 2000-01ರಲ್ಲಿ ಜಿಎಸ್‌ಡಿಪಿಯ ಶೇಕಡ

7.9ರಷ್ಟಿದ್ದ ಒಟ್ಟಾರೆ ತೆರಿಗೆ ಸ್ವೀಕೃತಿಗಳು ಸುಧಾರಣೆಗೊಂಡು 2007–08ರಲ್ಲಿ ಜಿಎಸ್‌ಡಿಪಿಯ ಶೇಕಡ 11.1ಕ್ಕೆ ಏರಿದವು. ಈ ಹಿನ್ನೆಲೆಯಲ್ಲಿ ರಾಜ್ಯವು 2004–05ರ ಅವಧಿಗೆ ಮುನ್ನವೇ ಮೇಲ್ಕಂಡ ಅಧಿನಿಯಮದ ಮೂಲಕ ಕಡ್ಡಾಯಪಡಿಸಿದ್ದ ಕೊರತೆ ಗುರಿಗಳನ್ನು ಸಾಧಿಸಿದೆ ಮತ್ತು ಆನಂತರ ಅದೇ ದಾರಿಯಲ್ಲಿ ಮುಂದುವರಿದಿದೆ.

7. ಅಲ್ಲದೆ ವಿತ್ತೀಯ ಹೊಣೆಗಾರಿಕೆ ಅಧಿನಿಯಮವು ವಿತ್ತೀಯ ಜವಾಬ್ದಾರಿಯನ್ನು ಅಭಿವೃದ್ಧಿ ಹೊಣೆಗಾರಿಕೆಯಿಂದೂ ಕೂಡ ಒತ್ತು ನೀಡಿದ್ದು ವಿತ್ತೀಯ ವ್ಯವಹರಣೆಗಳಲ್ಲಿ ಪಾರದರ್ಶಕತೆ ನಿರೀಕ್ಷಿಸಿತ್ತು. ವಿತ್ತೀಯ ಕ್ರೋಢೀಕರಣದ ಬಗ್ಗೆ ಗಮನಹರಿಸಿ ನಿರ್ದಿಷ್ಟ ಗುರಿಗಳೊಳಗೆ ಋಣಗಳು ಮತ್ತು ಕೊರತೆಗಳನ್ನು ನಿರ್ವಹಿಸಲು ಅಗತ್ಯಪಡಿಸಲಾಗಿತ್ತು. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಹಲವಾರು ಕಾರ್ಯ ನೀತಿ ಕಾರ್ಯೋನ್ಮುಖತೆಗಳನ್ನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ಪ್ರಾರಂಭಿಸಿತು. ರಾಜಸ್ವ ಸರಳೀಕರಣ ಕ್ರಮಗಳನ್ನು ಶ್ಲಾಘಿಸುತ್ತಾ ಕೆಲವು ಆಡಳಿತಾತ್ಮಕ ಕ್ರಮಗಳ ಎಂದರೆ, ಭಾರತೀಯ ತಯಾರಿಕೆಯ ಮದ್ಯಕ್ಕೆ ಏಕಮಾರ್ಗ ವ್ಯವಹರಣೆ ಮೂಲಕ ಅಬ್ಕಾರಿ ಶುಲ್ಕ ವಂಚನೆ ತಡೆಗಟ್ಟುವುದು, ಸಾರಾಯಿ ತಯಾರಿಕೆಯ ಉದಾರೀಕರಣ, ನೋಂದಣಿಗಾಗಿ ಛಾಪಾಕಾಗದ ಬಳಕೆ ರದ್ದಿಯಾತಿ, ಸಂಬಳ ಮತ್ತು ಪಿಂಚಣಿ ವೆಚ್ಚವನ್ನು ರಾಜಸ್ವ ವೆಚ್ಚದ ಶೇಕಡಾ 35ಕ್ಕಿಂತ ಕಡಿಮೆಯಿರುವಂತೆ ನಿರ್ವಹಿಸುವುದು ಮತ್ತು ಐಟಿ ಆಧಾರಿತ ಮಾನವ ಸಂಪನ್ಮೂಲ ವ್ಯವಸ್ಥಾಪನಾ ಪದ್ಧತಿ ಜಾರಿ ಇವುಗಳು ಗಮನಾರ್ಹವಾಗಿವೆ. ಅದೇ ರೀತಿ ಭಾರತ ಸರ್ಕಾರದ ಋಣ ಕ್ರೋಡೀಕರಣ ಮತ್ತು ಸಾಲ ಮನ್ನಾ ಯೋಜನೆ ಅಡಿಯಲ್ಲಿ ಕಡಿಮೆ ವೆಚ್ಚದ ಋಣವು ಅಧಿಕ ವೆಚ್ಚದ ಋಣವನ್ನು ಸ್ಥಳಾಂತರಿಸಲು ಅನುವು ಮಾಡುವ ಋಣ ವಿನಿಮಯದ ಮೂಲಕ ಬಡ್ಡಿ ವೆಚ್ಚ ಕಡಿತಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಾಗುವ ಹುದ್ದೆಗಳನ್ನು ರದ್ದುಗೊಳಿಸುವ ಮೂಲಕ ಹಾಗೂ ಸಾಮಾಜಿಕ ಸೇವೆಗಳ ಹೊರತಾದ ವಲಯಗಳಲ್ಲಿ ಹೊಸ ನೇಮಕಾತಿಗಳ ಮೇಲೆ ನಿಷೇಧ ಹೇರುವ ಮೂಲಕ ಸಂಬಳಗಳ ಮೇಲಾಗುವ ಖರ್ಚನ್ನು ನಿಯಂತ್ರಿಸಲಾಯಿತು. ಇಷ್ಟೇ ಅಲ್ಲದೆ, ಖರೀದಿ ಪ್ರಕ್ರಿಯೆ (procurement) (ಸಂಗ್ರಹಣಾ) ಸುಧಾರಣೆಗಳ ಕುರಿತ ಪ್ರಚಲಿತ ಕಾನೂನು ವೆಚ್ಚ ಸುಧಾರಣೆಗಳ ಒಂದು ಅವಿಭಾಜ್ಯ ಅಂಗವೂ ಸಹ ಆಗಿದೆ. ಟೆಂಡರುಗಳನ್ನು ಆಹ್ವಾನಿಸುವ, ಸಂಸ್ಕರಿಸುವ ಮತ್ತು ಅಂಗೀಕರಿಸುವ ಸಂಬಂಧದಲ್ಲಿ ಕಾರ್ಯವಿಧಾನವನ್ನು ಸಮರ್ಥಗೊಳಿಸುವ ಮೂಲಕ ಸರಕುಗಳ ಸಾರ್ವಜನಿಕ ಸಂಗ್ರಹಣೆ (ಕೊಳ್ಳುವಿಕೆ) ಮತ್ತು ಸೇವೆಗಳಲ್ಲಿ ಪಾರದರ್ಶಕತೆ ಖಾತರಿಗೊಳಿಸಲು ಸಹ ಕಾನೂನಿನಲ್ಲಿ ಉಪಬಂಧ ಕಲ್ಪಿಸಲಾಗಿದೆ.

8. ವೆಚ್ಚ ಸಂಕುಚಿತೀಕರಣ (compression) ಕ್ರಮಗಳಿಂದಾಗಿ ಬಡ್ಡಿ ಸಂದಾಯ ಪ್ರಮಾಣವನ್ನು 2000–01ರಲ್ಲಿದ್ದ ರಾಜ್ಯ ರಾಜಸ್ವಗಳ ಶೇಕಡ 23.5ರಿಂದ 2004–05ರ ವೇಳೆಗೆ ಶೇಕಡ 18.5ಕ್ಕಿಂತಲೂ ಕಡಿಮೆ ಮಾಡಲಾಯಿತು. ಅಲ್ಲದೇ, ಇದೇ ಅವಧಿಯಲ್ಲಿ ಸಂಬಳಗಳ ಮೇಲಿನ ವೆಚ್ಚವು ಒಟ್ಟು ರಾಜಸ್ವ ವೆಚ್ಚದ ಶೇಕಡ 29 ರಿಂದ ಶೇಕಡ 22ಕ್ಕೆ ಇಳಿಯಿತು. 2000–01ರಿಂದ 2007–08ರವರೆಗೆ ವಿತ್ತೀಯ ವರ್ಷಗಳಿಗೆ ಕಡ್ಡಾಯಗೊಳಿಸಲಾದ ಕೊರತೆ ಗುರಿಗಳೆಲ್ಲವೂ ಪ್ರತಿಬಿಂಬಿತವಾಗಿರುವ ವಿತ್ತೀಯ ಕಾರ್ಯಸಾಧನೆಗಳನ್ನು ಈ ಕೆಳಗಿನ ಕೋಷ್ಟಕ – 2 ರಲ್ಲಿ ತೋರಿಸಲಾಗಿದೆ.

ಕೋಷ್ಟಕ–2

ಕೋಟಿ ರೂ.ಗಳಲ್ಲಿ

ಬಾಬು	2001–02	2002–03	2003–04	2004–05	2005–06	2006–07	2007–08	2008–09 BE
ನಾಮಿನಲ್ ಜಿಎಸ್‌ಡಿಪಿ	112846	120888	130989	156254	186209	200922	233802	244043
ವಿತ್ತೀಯ ಕೊರತೆ	5870	5281	4501	3600	3687	4688	5331	7030
ಜಿಎಸ್‌ಡಿಪಿಯ ಶೇಕಡಾವಾರಾಗಿ ವಿತ್ತೀಯ ಕೊರತೆ	5.20	4.37	3.44	2.30	1.98	2.33	2.28	2.88
ರಾಜಸ್ವ ಕೊರತೆ	3284	2253	525	–1673	–2311	–4152	–3776	–1571
ಜಿಎಸ್‌ಡಿಪಿಯ ಶೇಕಡಾವಾರಾಗಿ ರಾಜಸ್ವ ಕೊರತೆ	2.91	1.86	0.40	–1.07	–1.24	–2.07	–1.62	–0.64

9. ವಿತ್ತೀಯ ಪರಿಸ್ಥಿತಿಯ ಸರಿಪಡಿಸಲು ಸರ್ಕಾರವು ಅಳವಡಿಸಿಕೊಂಡ ಮೇಲೆ ವಿವರಿಸಿರುವ ಕ್ರಮಗಳಿಂದ 2004–05ನೇ ಸಾಲಿನಿಂದಲೇ ಕೊರತೆ ಗುರಿಗಳೆರಡನ್ನೂ ನಿಭಾಯಿಸಲು ರಾಜ್ಯಕ್ಕೆ ಸಾಧ್ಯವಾಗಿದೆ. ಅಲ್ಲದೆ ಇದು ತರುವಾಯ ಸುಸ್ಥಿರಗೊಳಿಸಲು ರಾಜ್ಯಕ್ಕೆ ಸಹಾಯಕವಾಗಿದೆ. ಇಂಥ ಎಲ್ಲಾ ಕ್ರಮಗಳು ರಾಜ್ಯದ ವಿತ್ತೀಯ ಸ್ಥಿರತೆಯ ಮೇಲೆ ತಮ್ಮ ಪರಿಣಾಮವನ್ನು ಬೀರಿದ್ದುದಷ್ಟೇ ಅಲ್ಲದೆ ಭಾರತ ಸರ್ಕಾರದಿಂದ ಹನ್ನೆರಡನೇ ಹಣಕಾಸು ಆಯೋಗದ ಶಿಫಾರಸಿನಂತೆ ಋಣ ಸಂಚಯನ ಮತ್ತು ಸಾಲ ಮನ್ನಾ ಯೋಜನೆಯ ರೂಪದಲ್ಲಿ ಗಣನೀಯ ಹಣಕಾಸು ಪ್ರೋತ್ಸಾಹಕಗಳ ಪ್ರತಿಫಲಗಳನ್ನು ಸಹ ಪಡೆದಿವೆ. ಈ ಸಂದರ್ಭದಲ್ಲಿ ಕೋಷ್ಟಕ–3 ಯೋಜನೆಯಡಿ ರಾಜ್ಯವು ಪಡೆದ ಪ್ರೋತ್ಸಾಹಕಗಳನ್ನು ತೋರಿಸುತ್ತದೆ.)

ಕೋಷ್ಟಕ – 3

XIIನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಋಣ ಸಂಚಯನ

ಕೋಟಿ ರೂ.ಗಳಲ್ಲಿ

ವರ್ಷ	ಸಂಚಯನಕ್ಕೆ ಮೊದಲು		ಸಂಚಯನದ ನಂತರ		ಉಳಿತಾಯ		ಸಾಲ ಮನ್ನಾ
	ಮೂಲ ಧನ	ಬಡ್ಡಿ	ಮೂಲ ಧನ	ಬಡ್ಡಿ	ಮೂಲ ಧನ	ಬಡ್ಡಿ	
2005–06	370.56	828.90	358.34	537.51	12.22	291.39	358.33
2006–07	403.57	786.45	358.34	510.63	45.23	275.82	358.33
2007–08	472.32	739.79	358.34	483.75	113.98	256.04	358.33
2008–09	467.72	684.80	358.34	456.88	109.38	227.92	358.33
ಒಟ್ಟು	1714.2	3039.9	1433.4	1988.8	280.81	1051.2	1433.3

10. ವಿತ್ತೀಯ ಗುರಿಗಳು ಮತ್ತು ಋಣ ಸಂಚಯನಗಳಿಗೆ ಅಂಟಿಕೊಳ್ಳುವುದರ ಮೂಲಕ ಹಾಗೆ ಸೃಜಿಸಲಾದ ವಿತ್ತೀಯ ಅವಕಾಶದಿಂದಾಗಿ ಶಿಕ್ಷಣ ಮತ್ತು ಆರೋಗ್ಯ ಹಾಗೂ ಇತರ ಸಾಮಾಜಿಕ ಭದ್ರತಾ ಕ್ರಮಗಳಂಥ ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಿಗೆ ಮಾಡುವ ವೆಚ್ಚಕ್ಕೆ ಮತ್ತೆ ಆದ್ಯತೆ ನೀಡುವುದು ಸರ್ಕಾರಕ್ಕೆ ಸಾಧ್ಯವಾಗಿದೆ. (ಕೋಷ್ಟಕ–4)

ಕೋಷ್ಟಕ – 4
ಸೇವೆಗಳ ಮೇಲಿನ ವೆಚ್ಚ

ಕೋಟಿ ರೂ.ಗಳಲ್ಲಿ

ಸೇವೆಗಳು		2002–03	2003–04	2004–05	2005–06	2006–07	2007–08	2008–09 ಆರ್.ಇ
ಸಾಮಾನ್ಯ ಸೇವೆಗಳು	ರಾಜಸ್ವ	7112.09	9039.13	9900.25	10035.84	10419.42	10871.78	13848.18
	ಬಂಡವಾಳ	75.85	128.43	136.21	217.92	320.94	339.02	364.57
	ಸಾಲ	0.00	0.00	0.00	0.00	0.00	0.00	0.00
	ಒಟ್ಟು	7187.94	9167.56	10036.46	10253.76	10740.36	11210.8	142112.75
ಸಾಮಾಜಿಕ ಸೇವೆಗಳು	ರಾಜಸ್ವ	6326.23	6965.04	7722.75	8898.79	10936.71	13123.67	15931.80
	ಬಂಡವಾಳ	295.30	427.21	486.04	1105.30	1292.62	2147.68	2572.56
	ಸಾಲ	230.03	256.48	238.80	142.72	325.84	594.80	394.20
	ಒಟ್ಟು	6851.56	7648.73	8447.59	10146.81	12555.17	15866.15	18898.57
ಆರ್ಥಿಕ ಸೇವೆಗಳು	ರಾಜಸ್ವ	4802.41	4651.69	6510 .52	7947.33	10440.24	11453.31	9754.70
	ಬಂಡವಾಳ	2564.84	2473.76	4051.44	4498.70	6929.01	6162.24	6497.92
	ಸಾಲ	249.19	754.73	372.60	156.88	31.39	160.43	553.83
	ಒಟ್ಟು	7616.44	7880.18	10934.56	12602.91	17400.64	17775.98	16806.45

11. ಮೇಲ್ಕಂಡ ಕೋಷ್ಟಕದಲ್ಲಿನ ಪ್ರವೃತ್ತಿಗಳು ಕಳೆದ ಕೆಲವು ವರ್ಷಗಳಲ್ಲಿ ಸಾಮಾನ್ಯ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ಅಡಿಯಲ್ಲಿ ಮಾಡಲಾದ ವೆಚ್ಚದಲ್ಲಿನ ಹೆಚ್ಚಳವನ್ನು ತೋರಿಸುತ್ತವೆ. ರಾಜ್ಯವು ತನ್ನ ಐದನೇ ವೇತನ ಆಯೋಗವು 2006-07ನೇ ಸಾಲಿನಲ್ಲಿ ಸಲ್ಲಿಸಿದ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಏರ್ಪಾಟು ಮಾಡಲು ಸಮರ್ಥವಾಗಿದೆ. ರಾಜ್ಯವು, ರೈತರ ಸಾಲ ಮನ್ನಾ ಯೋಜನೆ (2006-07ನೇ ಸಾಲಿನಲ್ಲಿ 500 ಕೋಟಿ ರೂ. ಮತ್ತು 2007-08ನೇ ಸಾಲಿನಲ್ಲಿ 1250 ಕೋಟಿ ರೂ.), ಸಹಕಾರ ಸಾಲ ನೀಡಿಕೆ ಸಂಸ್ಥೆಗಳ ಮೂಲಕ ಶೇಕಡಾ 4ರ ಕಡಿಮೆ ಬಡ್ಡಿ ದರದಲ್ಲಿ ಕೃಷಿ ಸಾಲದ ಏರ್ಪಾಟು (ವರ್ಷಕ್ಕೆ 150 ಕೋಟಿ ರೂ.) ಮತ್ತು ತಿಂಗಳಿಗೆ 200 ರೂಪಾಯಿಗಳಿಂದ 400 ರೂಪಾಯಿಗಳಿಗೆ (2008-09ರಲ್ಲಿ ರೂ. 1,228 ಕೋಟಿ) ಸಾಮಾಜಿಕ ಭದ್ರತಾ ಪಿಂಚಣಿಗಳ ಹೆಚ್ಚಳ ಮೊದಲಾದಂಥ ಪ್ರಧಾನ ನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೇಲೆ ಸಹ ಗಣನೀಯ ವೆಚ್ಚವನ್ನು ಭರಿಸಿದೆ. 2006-07ನೇ ಸಾಲಿನಿಂದ 2008-09ನೇ ಸಾಲಿನವರೆಗೆ 1000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುವರ್ಣ ಗ್ರಾಮೋದಯ ಯೋಜನೆ ಅಡಿ 1200 ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಕೈಗೆತ್ತಿಕೊಂಡಿದೆ. ಅಲ್ಲದೆ, ಹೊಸ ಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯುವುದು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು, ಹೊಸ ವೈದ್ಯಕೀಯ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವುದು ಹಾಗೂ ಕೈಗಾರಿಕೆಗಳಿಗಾಗಿ ಮೂಲ ಸೌಕರ್ಯ ಬೆಂಬಲವನ್ನು ಒಸಗಿಸುವುದು ಇತ್ಯಾದಿಗಳ ಮೇಲಿನ ಅಭಿವೃದ್ಧಿ ವೆಚ್ಚವನ್ನು ಕೂಡ ಗಣನೀಯವಾಗಿ ಹೆಚ್ಚಿಸಲಾಗಿದೆ. ಈ ಹೊಸ ಕಾರ್ಯಕ್ರಮಗಳ ಜೊತೆಗೆ, ರೈಲ್ವೇ ಮತ್ತು ರಸ್ತೆ ಯೋಜನೆಗಳು ಹಾಗೂ ನಗರಾಭಿವೃದ್ಧಿ ಯೋಜನೆಗಳ ಮೇಲಿನ ಭೌತಿಕ ಮೂಲ ಸೌಕರ್ಯದ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ.

ಸಿ. ಮುಂದಿರುವ ಮಾರ್ಗಗಳು ಮತ್ತು ಆರ್ಥಿಕ ಗುರಿಗಳು

12. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮವು ಜಾರಿಗೆ ಬಂದಾಗಿನಿಂದ ರಾಜ್ಯವು ರೂಪಿಸಿದ ಮಧ್ಯಮಾವಧಿ ಆರ್ಥಿಕ ಯೋಜನೆಗಳು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಶಾಸನಾತ್ಮಕ ಉದ್ದೇಶಗಳಲ್ಲಿ ಬಿಂಬಿಸಿರುವಂತೆ ಒಂದು ಸಾಮಾನ್ಯ ಸೂತ್ರ ಹೊಂದಿದೆ. ಸಾಕಷ್ಟು ಅಧಿಕ ಆದಾಯವನ್ನು ಸಂಗ್ರಹಿಸುವ ಮೂಲಕ ಆರ್ಥಿಕ ಸ್ಥಿರತೆಯನ್ನು ಮತ್ತು ತಾಳಿಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸಾಮಾಜಿಕ ಮತ್ತು ಭೌತಿಕ ಮೂಲ ಸೌಲಭ್ಯಗಳನ್ನು ಹಾಗೂ ಮಾನವ ಅಭಿವೃದ್ಧಿಯನ್ನು ಸುಧಾರಿಸಲು ಇರುವ ಅವಕಾಶವನ್ನು ಹೆಚ್ಚಿಸಿಕೊಳ್ಳುವಂತೆ ಈ ಅಧಿನಿಯಮವು ಸರ್ಕಾರದಿಂದ ಅಪೇಕ್ಷಿಸಿದೆ. ಈ ಗುರಿ

ಸಾಧನೆಯ ಮುಂದುವರಿಕೆಗಾಗಿ ಸರ್ಕಾರವು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದ 4ನೇ ಪ್ರಕರಣದಲ್ಲಿ ನಿರೂಪಿಸಿರುವ 17 ಆರ್ಥಿಕ ವ್ಯವಸ್ಥಾಪನಾ ತತ್ವಗಳಿಂದ ಮಾರ್ಗದರ್ಶನ ಪಡೆಯಬೇಕೆಂದು ನಿರೀಕ್ಷಿಸುತ್ತದೆ. ಮೇಲಿನ ಆರ್ಥಿಕ ಗುರಿಗಳು ಹಾಗೂ ಆರ್ಥಿಕ ವ್ಯವಸ್ಥಾಪನೆಯ ತತ್ವಗಳು ಇದುವರೆಗಿನ ಎಲ್ಲ ಮಧ್ಯಮಾವಧಿ ಆರ್ಥಿಕ ಯೋಜನೆಗಳಲ್ಲಿ ಹಾಸುಹೊಕ್ಕಾಗಿವೆ. 2008-09ನೇ ಸಾಲಿನ ತಮ್ಮ ವಿತ್ತೀಯ ಕೊರತೆ ಗುರಿಗಳನ್ನು ಒಂದು ಸಲದ ಕ್ರಮವಾಗಿ ಸಡಿಲಗೊಳಿಸುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಇತ್ತೀಚೆಗೆ ಸಲಹೆ ನೀಡಿದೆ ಮತ್ತು ಹೆಚ್ಚುವರಿ ಸಾಲಗಳನ್ನು ತೆಗೆದುಕೊಳ್ಳಲು ರಾಜ್ಯಗಳಿಗೆ ಹೆಚ್ಚಿನ ಅವಕಾಶ ನೀಡಿದೆ. ಅದರಿಂದ ಬಂದ ಹಣವನ್ನು ಬಂಡವಾಳ ವೆಚ್ಚಗಳಿಗಾಗಿ ಬಳಸಬೇಕಾಗಿದೆ. ಈ ಸಂದರ್ಭದಲ್ಲಿ, ರಾಜ್ಯ ಸರ್ಕಾರವು, ಹೆಚ್ಚುವರಿ ರಾಜಸ್ವವನ್ನು ನಿರ್ವಹಿಸುವಾಗ ಒಂದು ಸಲದ ಕ್ರಮವಾಗಿ 2008-09ನೇ ಸಾಲಿಗೆ ತನ್ನ ಹಣಕಾಸು ಕೊರತೆ ಗುರಿಯನ್ನು ಜಿಎಸ್‌ಡಿಪಿಯ ಶೇ. 3.5 ರಷ್ಟು ಮಾತ್ರ ಸಡಿಲಗೊಳಿಸುತ್ತದೆ, ಅದಕ್ಕಾಗಿ ಹಣಕಾಸು ವಿಧೇಯಕದ ಭಾಗವಾಗಿ ಒಂದು ತಿದ್ದುಪಡಿಯನ್ನು ಮಂಡಿಸಲಿದೆ.

13. ವಿತ್ತೀಯ ಸ್ಥಿರತೆಯ ಹಾದಿಯಲ್ಲಿಯೇ ಉಳಿಯುವುದು ದೀರ್ಘಾವಧಿ ಪ್ರತಿಫಲವನ್ನು ತರುವುದರಿಂದ ಮತ್ತು ಮುಂದಿನ ಸಾಲದ ಹೊಣೆಯನ್ನು ಕಡಿಮೆ ಮಾಡುವ ಮೂಲಕ ಹಾಗೂ ಅಂತರ್ ತಲೆಮಾರು ಈಕ್ವಿಟಿಯನ್ನು ಖಚಿತಪಡಿಸಿಕೊಳ್ಳುವುದರಿಂದ ಹಾಗೂ ನಾವು ಈಗ ಎದುರಿಸುತ್ತಿರುವ ಈ ಸಂಕಷ್ಟದ ಕಾಲದಲ್ಲಿ ಹೆಚ್ಚಿನ ಸಾಲಗಳಿಗೆ ಅನುಕೂಲಕರ ವ್ಯವಸ್ಥೆಯನ್ನು ಕಲ್ಪಿಸುವುದರಿಂದ ಹಿಂದಿನ ಅನುಭವವು ಮುಂದುವರಿದ ವಿತ್ತೀಯ ವಿವೇಚನೆಯ ಅಗತ್ಯವನ್ನು ಸಹ ಎತ್ತಿ ತೋರಿಸುತ್ತದೆ. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ನಿರೂಪಿಸಿರುವ ವಿವೇಕಯುತ ಆರ್ಥಿಕ ವ್ಯವಸ್ಥೆಯ ಜಾರಿಯ ಪ್ರಯೋಜನಗಳನ್ನು ಪಡೆದ ಬಲದ ಆಧಾರದ ಮೇಲೆ, ಒಂದು ನಿರ್ದಿಷ್ಟ ಮಿತಿಯೊಳಗೆ ಕೊರತೆಯನ್ನು ನಿರ್ಬಂಧಿಸಲು ಮತ್ತು ಅಧಿಕ ರಾಜಸ್ವವನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿದೆ ಮತ್ತು 2008-09ನೇ ಸಾಲಿನಲ್ಲಿ ಮಾಡಿದ ಹೆಚ್ಚುವರಿ ಸಾಲಗಳನ್ನು ಸದ್ಬಳಕೆ ಮಾಡಿಕೊಳ್ಳುವಾಗ ವಿತ್ತೀಯ ಕ್ರೋಢೀಕರಣ ಮಾರ್ಗಕ್ಕೆ ಪುನಃ ಮರಳುವುದು. ಹೆಚ್ಚಿಸಿದ ಬಂಡವಾಳ ವೆಚ್ಚದ ಮೂಲಕ ಸ್ವತ್ತುಗಳನ್ನು ಸೃಜಿಸುವುದಕ್ಕೆ ಹೆಚ್ಚುವರಿ ಸಾಲವನ್ನು ಪೂರ್ಣವಾಗಿ ಬಳಸಲು ಸಹ ಸರ್ಕಾರವು ಬದ್ಧವಾಗಿದೆ. ಹಾಗೆಯೇ ಆರ್ಥಿಕ ಅನುಕೂಲವನ್ನು ಮೂಲ ಸೌಕರ್ಯ ಅಭಿವೃದ್ಧಿಗಾಗಿ, ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಮತ್ತು ಪ್ರಗತಿಯ ಆಧಾರದ ಮೇಲೆ ನಾಗರಿಕರ ಕ್ಷೇಮಾಭ್ಯುದಯಕ್ಕಾಗಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಬಳಸಲಾಗುವುದು.

ಅಧ್ಯಾಯ – 2

ವಿತ್ತೀಯ ಕಾರ್ಯ ನಿರ್ವಹಣೆಯ ಮೌಲ್ಯಮಾಪನ

14. 2004–05ರಲ್ಲಿ ಹೆಚ್ಚುವರಿ ಪ್ರಮಾಣದ ರಾಜಸ್ವ ಸಂಗ್ರಹಣೆಯನ್ನು ಸಾಧಿಸಿದ ತರುವಾಯ, ಕರ್ನಾಟಕ ಸರ್ಕಾರವು ತನ್ನ ವಿತ್ತೀಯ ನಿಗದಿತ ಮಿತಿಗಳನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಬಳಸಿಕೊಳ್ಳಲು ಮತ್ತು ಅಭಿವೃದ್ಧಿಪಡಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಪ್ರತಿವರ್ಷಕ್ಕಾಗಿ ನಿಗದಿಪಡಿಸಲಾದ ವಾಸ್ತವಿಕ ಗುರಿಸಾಧನೆ ಹೋಲಿಕೆಯ ವಿವಿಧ ಸೂಚನೆಗಳಿಗೆ ಸಂಬಂಧಿಸಿದಂತೆ 2005–06ನೇ ಸಾಲಿನಿಂದ ರಾಜ್ಯಗಳ ವಿತ್ತೀಯ ನಿರ್ವಹಣೆಯನ್ನು ಈ ಮುಂದಿನ ಕೋಷ್ಟಕ 5 ರಲ್ಲಿ ತೋರಿಸಲಾಗಿದೆ. 2008–09ಕ್ಕೆ ಸಂಬಂಧಿಸಿದ ಪರಿಷ್ಕೃತ ಅಂದಾಜುಗಳನುಸಾರ ನಿರೀಕ್ಷಿತ ಕಾರ್ಯನಿರ್ವಹಣೆಯನ್ನು, ಬಜೆಟ್ ಅಂದಾಜುಗಳೊಂದಿಗೆ ಹೋಲಿಸಲಾಗಿದೆ. ಕಾರ್ಯ ನಿರ್ವಹಣೆಯು ಲಭ್ಯವಿರುವ ಜಿಎಸ್‌ಡಿಪಿಯ ಇತ್ತೀಚಿನ ದತ್ತಾಂಶದ ಆಧಾರಿತವಾಗಿದೆ.

ಕೋಷ್ಟಕ-5
ವಿತ್ತೀಯ ಚೌಕಟ್ಟು

ರೂ. ಕೋಟಿಗಳಲ್ಲಿ

ಬಾಬುಗಳು	2005-06 ಬಿಇ	2005-06 ಎ/ಸಿ	2006-07 ಬಿಇ	2006-07 ಎ/ಸಿ	2007-08 ಬಿಇ	2007-08 ಎ/ಸಿ	2008-09 ಬಿಇ	2008-09 ಆರ್.ಇ
ರಾಜಸ್ವ ಸ್ವೀಕೃತಿಗಳು	29218	30352	35875	37587	40762	37655	47240	42818
ರಾಜ್ಯ ಒಡೆತನದ ತೆರಿಗೆ ರಾಜಸ್ವಗಳಿಂದ	18680	18632	22534	23301	26691	25987	31876	28764
ತೆರಿಗೆಯೇತರ ರಾಜಸ್ವಗಳು	4090	3875	4088	4098	1857	3358	1932	1906
ಕೇಂದ್ರದಿಂದ ದೊರೆಯುವ ಸಂಪನ್ಮೂಲಗಳು								
– ವರ್ಗಾವಣೆ	3760	4213	4609	5374	6300	6779	7982	7152
–ಅನುದಾನಗಳು	2688	3632	4644	4813	5914	1531	5450	4996
ಅದರ ರಾಜಸ್ವ ವೆಚ್ಚ	28364	28041	34341	33435	39135	37375	45713	42050
ಬಡ್ಡಿ	4029	3765	4366	4236	4818	4506	5278	4778

ವೇತನಗಳು	6169	5750	6724	6545	8547	8667	11403	11440
ನಿವೃತ್ತಿ ವೇತನಗಳು	2427	2237	2666	2496	3416	3241	3500	4200
ಸಹಾಯಧನ (ಆಹಾರ,ಸಾರಿಗೆ, ವಸತಿ ಮತ್ತು ಕೈಗಾರಿಕೆ)	1573	2099	1741	1991	2517	3128	1492	1775
ವಿದ್ಯುತ್ ಸಹಾಯಧನ	1750	1821	1800	2370	2150	2297	2410	1860
ಯುಎಲ್‌ಬಿಗಳಿಗ ವರ್ಗಾವಣೆ	1160	1159	1530	1639	1904	1926	2995	2516
ಪ್ರಮುಖ ಒ ಮತ್ತು ಎಂ (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ)	513	262	1018	1011	810	740	834	729
ಇತರೆ ಒ ಮತ್ತು ಎಂ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ,	2778	2716	3438	3477	8663	4076	8388	2087

ಕೃಷಿ, ಅರಣ್ಯ)								
ಆಡಳಿತಾತ್ಮಕ ವೆಚ್ಚ	559	557	687	559	799	688	921	790
ಇತರೆ ರಾಜಸ್ವ ವೆಚ್ಚ	7406	7677	10372	9112	5511	8107	8492	11875
ಬಂಡವಾಳ ಸ್ವೀಕೃತಿ (ಸಾಲೇತರ)	30	124	45	60	749	298	3070	271
ರಾಜಸ್ವ ಕೊರತೆ	**–854**	**–2311**	**–1535**	**–4152**	**–1627**	**–280**	**–1527**	**–767**
ಬಂಡವಾಳ ಸಂಚಯ	3774	3591	5088	6349	7523	4288	10678	9639
ವಿತ್ತೀಯ ಕೊರತೆ	4714	3687	5211	4688	6305	5331	7030	9357
ಒಟ್ಟು ಸಾಲ ಸಂಗ್ರಹಣೆ	52727	49794	56148	54676	61492	59852	67578	69162
ಬಡ್ಡಿ	4029	3765	4366	4236	4818	4506	5278	4778

ಬಾಬು	2005-06 ಬಿಇ	2005-06 ಎ/ಸಿ	2006-07 ಬಿಇ	2006-07 ಎ/ಸಿ	2007-08 ಬಿಇ	2007-08 ವಾಸ್ತವಿಕ	2008-09 ಬಿಇ	2008-09 ಆರ್‌ಇ
ಸಾಲ ಸೇವೆಗಳು	4925	4576	5320	5986	6117	5756	7085	6510
ವೇತನ+ನಿವೃತ್ತಿ ವೇತನ+ಬಡ್ಡಿ	12625	11751	13756	13278	16780	16413	20181	20418
ಒಟ್ಟು ಬಜೆಟ್ ಸಾಲಗಳು	**899**	**1078**	**845**	**242**	**720**	**103**		
ನಿವ್ವಳ ಬಜೆಟ್ ಸಾಲಗಳು	**–135**	**–816**	**–146**	**–1246**	**–58**	**–1136**	**–679**	**–640**
ಸಂಚಿತ ಬಡ್ಡಿ	4820	4508	5077	5299	5198	4888	5548	5017
ಸಂಚಿತ ರಾಜಸ್ವ ಕೊರತೆ	**–63**	**–1568**	**–824**	**–3089**	**–1247**	**102**	**–1258**	**–528**
ಸಂಚಿತ ಬಂಡವಾಳ ರಚನೆ	4673	4668	5933	6591	8243	4391	10678	9639
ಸಂಚಿತ ವಿತ್ತೀಯ ಕೊರತೆ	**4579**	**2871**	**5064**	**3442**	**6247**	**4196**	**6350**	**8717**
ಸಂಚಿತ ಸಾಲ ಸಂಗ್ರಹಣೆ	59216	56274	61337	59717	66223	63655	70921	72375

ಸಂಚಿತ ರಾಜಸ್ವ ಕೊರತೆ/ಜಿಎಸ್‌ಡಿಪಿ	**–0.04%**	**0.93%**	**0.44%**	**1.54%**	**0.58%**	**0.04%**	**0.52%**	**–0.20%**
ಪ್ರಸಕ್ತ ದರಗಳಲ್ಲಿ ಜಿಎಸ್‌ಡಿಪಿ	166228	170741	186757	188274	220006	215282	244043	268138
ಹಣದುಬ್ಬರ	5.00	5.00	4.00	4.00	5.00	5.00	8.00	4.00
ಜಿಎಸ್‌ಡಿಪಿಯ ವಾರ್ಷಿಕ ವಾಸ್ತವ ಬೆಳವಣಿಗೆ	7.00	7.00	7.00	7.00	8.00	8.00	7.00	9.00
ಜಿಎಸ್‌ಡಿಪಿಗೆ ಶೇಕಡಾವಾರಿನಂತೆ								
ಅದರ ರಾಜಸ್ವ ಸ್ವೀಕೃತಿಗಳು	166228	167975	186757	200922	213503	233802	244043	268138
ರಾಜ್ಯ ಒಡೆತನದ ತೆರಿಗೆ ರಾಜಸ್ವಗಳು	5.00%	5.00%	4.00%	4.00%	5.00%	5.00%	8.00%	4.00%
ತೆರಿಗೇತರ ರಾಜಸ್ವಗಳು	7.00%	7.00%	7.00%	7.00%	8.00%	8.00%	7.00%	9.00%
ಕೇಂದ್ರದಿಂದ ಸಂಪನ್ಮೂಲಗಳು –ವರ್ಗಾವಣೆ	2.26	2.51	2.47	2.67	2.95	2.90	3.27	2.67

–ಅನುದಾನಗಳು	1.62	2.13	2.49	2.40	2.77	0.65	2.23	1.86
ಅದರ ಜಿಎಸ್‌ಡಿಪಿಯ ಶೇಕಡಾವಾರು ರಾಜಸ್ವ ವೆಚ್ಚ	17.06	16.69	18.39	16.64	18.33	15.99	18.73	15.68
ಬಡ್ಡಿ	2.42	2.24	2.34	2.11	2.26	1.93	2.16	1.78
ವೇತನಗಳು	3.71	3.42	3.60	3.26	4.00	3.71	4.67	4.27
ನಿವೃತ್ತಿ ವೇತನಗಳು	1.46	1.33	1.43	1.24	1.60	1.39	1.43	1.57
ಸಹಾಯಧನ (ಆಹಾರ, ಸಾರಿಗೆ, ವಸತಿ ಮತ್ತು ಕೈಗಾರಿಕೆ)	0.95	1.25	0.93	0.99	1.18	1.34	0.61	0.66
ವಿದ್ಯುತ್ ಸಹಾಯಧನ	1.05	1.08	0.96	1.18	1.01	0.98	0.99	0.69
ಯುಎಲ್‌ಟಿಗಳಿಗೆ ವರ್ಗಾವಣೆ	0.70	0.69	0.82	0.82	0.89	0.82	1.23	0.94

ಪ್ರಮುಖ ಓ ಮತ್ತು ಎಂ (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ)	0.31	0.16	0.54	0.50	0.38	0.32	0.34	0.27
ಇತರೆ ಓ ಮತ್ತು ಎಂ (ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ನೀರು ಸರಬರಾಜು, ಕೃಷಿ, ಅರಣ್ಯ)	1.67	1.62	1.84	1.73	4.06	1.74	3.44	0.78
ಆಡಳಿತಾತ್ಮಕ ವೆಚ್ಚ	0.34	0.33	0.37	0.28	0.37	0.29	0.38	0.29
ಇತರೆ ರಾಜಸ್ವ ವೆಚ್ಚ	4.46	4.57	5.55	4.53	2.58	3.47	3.48	4.43
ರಾಜಸ್ವ ಕೊರತೆ	**–0.51**	**–1.38**	**–0.82**	**–2.17**	**–0.76**	**–0.12**	**–0.63**	**–0.29**
ಬಂಡವಾಳ ಸ್ವೀಕೃತಿ (ಸಾಲೇತರ)	0.02	0.07	0.02	0.03	0.35	0.13	1.26	0.10
ಬಂಡವಾಳ ರಚನೆ ಮೇಲಿನ ವೆಚ್ಚ	2.27	2.14	2.72	3.16	3.52	1.83	4.38	3.59
ವಿತ್ತೀಯ ಕೊರತೆ	**2.84**	**2.19**	**2.79**	**2.33**	**2.95**	**2.28**	**2.88**	**3.49**

ಬಜೆಟ್ ಸಾಲಗಳಿಲ್ಲದಿರುವುದು	0.54	0.64	0.45	0.12	0.34	0.04		
ಸಂಚಿತ ರಾಜಸ್ವ ಕೊರತೆ	–0.04	–0.93	–0.44	–1.54	–0.58	–0.04	–0.52	–0.20
ಸಂಚಿತ ಬಂಡವಾಳ ವೆಚ್ಚ	2.81	2.78	3.18	3.08	3.86	1.88	4.38	3.59
ಸಂಚಿತ ವಿತ್ತೀಯ ಕೊರತೆ	2.75	1.71	2.71	1.71	2.93	1.79	2.60	3.25
ಸಂಚಿತ ಸಾಲ ಸಂಗ್ರಹಣೆ	35.62	33.50	32.84	29.72	31.02	27.73	29.06	26.99

15. 2006–07ನೇ ಹಣಕಾಸು ವರ್ಷದಲ್ಲಿ ರಾಜಸ್ವ ಹೆಚ್ಚಳ (Revenue Surplus)ದ ಪರಿಸ್ಥಿತಿಯು 4152 ಕೋಟಿ ರೂಪಾಯಿಗಳಷ್ಟು ತಲುಪಿತು. ತದನಂತರ, ಕ್ರಮೇಣ ಕಡಿಮೆಯಾಗುತ್ತ 2008–09ಕ್ಕೆ ಸಂಬಂಧಿಸಿದಂತೆ 767 ಕೋಟಿ ರೂಪಾಯಿಗಳಿಗೆ ಇಳಿದಿರುವುದು ಕಾಣಬರುತ್ತಿದೆ. ವೇತನ ಆಯೋಗದ ಐತೀರ್ಪಿನ ಜಾರಿಯಿಂದಾಗಿ ವೇತನಗಳು ಮತ್ತು ನಿವೃತ್ತಿ ವೇತನಗಳಿಗೆ ಉಂಟಾದ ಹೆಚ್ಚಳ, ಸಾಮಾಜಿಕ ಭದ್ರತೆ ವೇತನಗಳಂಥ ಕಲ್ಯಾಣ ಕ್ರಮಗಳಿಂದ ಮತ್ತು ಕೃಷಿ ವಲಯಕ್ಕಾಗಿ ಹೆಚ್ಚಿಸಲಾದ ಸಹಾಯ ಧನಗಳಿಂದ ಉಂಟಾದ ವೆಚ್ಚದ ಹೆಚ್ಚಳದ ಪರಿಣಾಮದಿಂದಾಗಿ ರಾಜಸ್ವ ಹೆಚ್ಚಳವು ಇಳಿಮುಖವಾಯಿತು. ಪ್ರಸಕ್ತ ವರ್ಷದಲ್ಲಿ, ಕಷ್ಟಕರ ಸಮಗ್ರ ಆರ್ಥಿಕ ಪರಿಸ್ಥಿತಿಯ ಕಾರಣದಿಂದಾಗಿ ರಾಜಸ್ವ ಸ್ವೀಕೃತಿಗಳಲ್ಲಿ ನಿರೀಕ್ಷಿತ ಬೆಳವಣಿಗೆಗಿಂತ ಕಡಿಮೆ ಪ್ರಮಾಣದಲ್ಲಾದುದರಿಂದ ಕೂಡ ರಾಜಸ್ವ ಬಾಕಿ ಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮವು ಉಂಟಾಯಿತು. ರಾಜಸ್ವ ಹೆಚ್ಚಳದ ಇಳಿಕೆಯು ಬಂಡವಾಳ ವೆಚ್ಚವನ್ನು ಹೆಚ್ಚಿಸುವಲ್ಲಿನ ಸರ್ಕಾರದ ಸಾಮರ್ಥ್ಯದ ಮೇಲೆ ತೀವ್ರ ಪರಿಣಾಮ ಉಂಟು ಮಾಡಿದೆ.

16. 2004–05ರಿಂದ ಪ್ರತಿ ವರ್ಷವು, ವಾಸ್ತವ ರಾಜಸ್ವ ಹೆಚ್ಚಳವು ಆ ವರ್ಷದ ಬಜೆಟ್ ಅಂದಾಜಿಗಿಂತ ಹೆಚ್ಚಿನದಾಗಿರುತ್ತದೆ. ಆದರೆ ವಿತ್ತೀಯ ಕೊರತೆಯು 2007–08ರ ವರೆಗೆ 0.67 ನಿಂದ 0.46 ಶೇಕಡಾವಾರು ಬಜೆಟ್ ಅಂದಾಜಿಗಿಂತ ಕಡಿಮೆ ಪ್ರಮಾಣದಲ್ಲಿದೆ. ಇದೇ ವೇಳೆ, ಬಂಡವಾಳ ವೆಚ್ಚವನ್ನು 2007–08ರ ವರೆಗೆ ಸರಿ ಸುಮಾರು ಬಜೆಟ್ ಅಂದಾಜಿಗನುಸಾರವಾಗಿ ನಿರ್ವಹಿಸಲಾಗುತ್ತಿದೆ. ಎಂಟಿಎಫ್‌ಪಿ ಗುರಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಕಾರ್ಯನಿರ್ವಹಣೆಯು ಬಜೆಟ್ ಅಂದಾಜುಗಳಲ್ಲಿನ ಸಾಂಪ್ರದಾಯಿಕ ದೃಷ್ಟಿಕೋನವನ್ನು ಸೂಚಿಸುತ್ತದೆ.

17. 2008–09ರ ಪರಿಷ್ಕೃತ ಅಂದಾಜು, ಹಿಂದಿನ ಧೋರಣೆಗಿಂತ ಭಿನ್ನವಾದ ಪರಿಸ್ಥಿತಿಯನ್ನು ಸೂಚಿಸುತ್ತಿದೆ. ರಾಜಸ್ವ ಹೆಚ್ಚಳವು ಬಜೆಟ್ ಅಂದಾಜಿನ ರೂ.1527 ಕೋಟಿಯಿಂದ ರೂ.767 ಕೋಟಿಗಳಿಗೆ ಇಳಿಯುವ ನಿರೀಕ್ಷೆ ಇದೆ. ಆದರೆ, ವಿತ್ತೀಯ ಕೊರತೆಯಲ್ಲಿ 7030 ಕೋಟಿಯಿಂದ 9357 ಕೋಟಿ ಹೆಚ್ಚಳ ಉಂಟಾಗಬಹುದೆಂದು ನಿರೀಕ್ಷಿಸಲಾಗಿದೆ. 11627 ಕೋಟಿ ರೂಪಾಯಿಗಳ ಬಜೆಟ್ ಅಂದಾಜಿಗೆ ಹೋಲಿಸಿದರೆ ಬಂಡವಾಳ ವೆಚ್ಚವು 10395 ಕೋಟಿ ರೂ.ಗಳಿಗೆ ಇಳಿಯುವ ನಿರೀಕ್ಷೆ ಇದೆ. ರಾಜಸ್ವ ವೆಚ್ಚವು, ಆಯವ್ಯಯ ಅಂದಾಜಿನಲ್ಲಿರುವ 45713 ಕೋಟಿ ರೂ.ಗಳಿಗಿಂತ ಕಡಿಮೆಯಾಗಲಿದ್ದು ಅದು 42050 ಕೋಟಿ ರೂಪಾಯಿಗಳಷ್ಟು ಆಗುವುದೆಂದು ನಿರೀಕ್ಷಿಸಲಾಗಿದೆ. ಮಧ್ಯಮಾವಧಿ ವಿತ್ತೀಯ ಯೋಜನೆಯ ಗುರಿಗಳನ್ನು ಅನುಸರಿಸುವುದರಿಂದ ಬಂಡವಾಳ ವೆಚ್ಚದ ಮೇಲೆ ತದನುಗುಣವಾಗಿ ಹೆಚ್ಚು ನಿಯಂತ್ರಣ ಸಾಧ್ಯವಾಗುವುದೆಂದು ಅಂದಾಜಿಸಲಾಗಿದೆ.

18. ಪರಿಷ್ಕೃತ ಅಂದಾಜುಗಳಲ್ಲಿ ವಿಧಾನಮಂಡಲದಲ್ಲಿ ಇನ್ನೂ ಮಂಡಿಸಬೇಕಿರುವ ಪೂರಕ ಅಂದಾಜಿನ ಪ್ರಮುಖ ವೆಚ್ಚದ ಅಂಶಗಳನ್ನು

ಒಳಗೊಂಡಿದೆ. ಪೂರಕ ಅಂದಾಜಿನ ವೆಚ್ಚಗಳಿಗೆ ಒಟ್ಟಾರೆ ಉಳಿತಾಯಗಳಿಂದ ಹಣ ಒದಗಿಸಲಾಗುವುದೆಂದುತೆ ನಿರೀಕ್ಷಿಸಲಾಗಿದೆ ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡಾ 0.5ರಷ್ಟು ಹೆಚ್ಚುವರಿ ವಿತ್ತೀಯ ಅವಕಾಶವನ್ನು ಒಂದು ಬಾರಿ ಕ್ರಮವಾಗಿ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಮೂಲಕ ಸೃಜಿಸಲಾಗುವುದು. ಹೊಸ ನೇಮಕಾತಿಗಳ ಮೇಲೆ ನಿಯಂತ್ರಣ, ಭಾರತ ಸರ್ಕಾರದಿಂದ ಋಣ ತೀರಿಕೆ, ಋಣ ಕ್ರೋಢೀಕರಣ ಮತ್ತು ಪರಿಹಾರ ಸೌಲಭ್ಯಗಳು, ವೇತನಗಳು, ನಿವೃತ್ತಿ ವೇತನಗಳು ಮತ್ತು ಬಡ್ಡಿ ಮೇಲಿನ ವೆಚ್ಚದ ಹೆಚ್ಚಳವನ್ನು ನಿರ್ಬಂಧಿಸುವುದಕ್ಕೆ ನೆರವಾಗುವುವು. 5ನೇ ರಾಜ್ಯ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸಿರುವುದರಿಂದ ಸಂಬಳದ ವೆಚ್ಚವು 2005-06ರಲ್ಲಿ ಒಟ್ಟು ರಾಜ್ಯದ ಆಂತರಿಕ ಉತ್ಪನ್ನದ ಶೇಕಡಾ 3.42 ರಿಂದ 2008-09ರ ಪರಿಷ್ಕೃತ ಅಂದಾಜಿನಲ್ಲಿ ಶೇಕಡಾ 4.27 ರಷ್ಟಕ್ಕೆ ಹೆಚ್ಚಾಗುವ ಸಾಧ್ಯತೆ ಇದೆ. ನಿವೃತ್ತಿ ವಯೋಮಿತಿಯನ್ನು 2008-09ನೇ ಸಾಲಿನಲ್ಲಿ 60 ವರ್ಷಗಳಿಗೆ ಹೆಚ್ಚಿಸಲಾಯಿತು. ಈ ಬದಲಾವಣೆಯು ನಿವೃತ್ತಿ ವೇತನ ವೆಚ್ಚದಲ್ಲಿ ಇಳಿಕೆ ಉಂಟು ಮಾಡುವುದೆಂದು ಅಂದಾಜಿಸಲಾಗಿದೆ.

19. ವಿತ್ತೀಯ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ತರುವುದಕ್ಕಾಗಿ ಆಯವ್ಯಯೇತರ ಸಾಲಗಳನ್ನು 2008-09ನೇ ಸಾಲಿನಲ್ಲಿ ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಈ ವ್ಯವಸ್ಥೆಯನ್ನು ಮಧ್ಯಮಾವಧಿ ವಿತ್ತೀಯ ಯೋಜನೆಯ ಅವಧಿಯಲ್ಲಿ ಮುಂದುವರಿಸಲು ಯೋಜಿಸಲಾಗಿದೆ. ರಾಜ್ಯದ ಆಯವ್ಯಯದ ಮೇಲೆ ಅವಲಂಬಿತವಾಗದೆ ತಮ್ಮ ಸ್ವಂತ ಮೂಲಗಳಿಂದಲೇ ಸಾಲ ತೀರಿಸಿಕೊಳ್ಳುವ ಶಕ್ತಿ ಹೊಂದಿರುವ ಸಂಸ್ಥೆಗಳಿಗೆ ಮಾತ್ರ ಸಾಲ ಪಡೆಯಲು ಅನುಮತಿ ನೀಡಲಾಗುವುದೆಂದು ನಿರೀಕ್ಷಿಸಲಾಗಿದೆ.

ಅಧ್ಯಾಯ-3

ಸ್ಥೂಲ ಆರ್ಥಿಕ ದೃಷ್ಟಿಕೋನ

ಎ. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಮುಂನ್ನದಾಜು

20. ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ವಿವಿಧ ವಲಯಗಳು ನೀಡಿರುವ ಕೊಡುಗೆಯನ್ನು ಕೋಷ್ಟಕ 6 ತೋರಿಸುತ್ತದೆ. ಸೇವಾ ವಲಯ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಪ್ರಮುಖ ಕೊಡುಗೆಯನ್ನು ನೀಡುವುದು ಮುಂದುವರಿದಿದೆ. ಕೃಷಿ ವಲಯದ ಕೊಡುಗೆ ಸತತವಾಗಿ ಕಡಿಮೆಯಾಗುತ್ತಿದೆ.

ಕೋಷ್ಟಕ 6

ಮೂಲ ಕೈಗಾರಿಕೆಯಿಂದ ಆಂಶಿಕ ವೆಚ್ಚದಲ್ಲಿ (ಸ್ಥಿರ ಬೆಲೆಗಳು) ರಾಜ್ಯದ ಒಟ್ಟು ಆಂತರಿಕ ಉತ್ಪನ್ನ

ಉದ್ಯಮ	2001–02	2002–03	2003–04	2004–05	2005–06	2006–07	2007–08 ಕ್ಷಿಪ್ರ ಅಂದಾಜು	2008–09 ಮುಂಗಡ ಅಂದಾಜು
ಪ್ರಾಥಮಿಕ	26538	24672	21850	27013	28135	27684	32023	30374
ದ್ವಿತೀಯ	26384	29180	30762	32322	38080	40618	44091	466664
ತೃತೀಯ	52638	56508	61561	66125	73806	80769	89388	97616
ಒಟ್ಟು	**105560**	**110360**	**114173**	**125460**	**140021**	**149071**	**165502**	**174654**
ವಿವಿಧ ವಲಯಗಳ ಶೇಕಡಾವಾರು ಪಾಲು								
ಪ್ರಾಥಮಿಕ	25.1	22.4	19.1	21.5	20.1	18.6	19.3	17.4
ದ್ವಿತೀಯ	25.0	26.4	26.9	25.8	27.2	27.2	26.6	26.7
ತೃತೀಯ	49.9	51.2	53.9	52.7	52.7	54.2	54.1	55.9

ಮೂಲ: ಆರ್ಥಿಕ ಸಮೀಕ್ಷೆ 2008–09, ಅಂಕಿಅಂಶಗಳ ನಿರ್ದೇಶನಾಲಯ

ಬಿ. 2008–09ರಲ್ಲಿ ರಾಜ್ಯದ ಆರ್ಥಿಕ ಉತ್ಪನ್ನದ ಬೆಳವಣಿಗೆ ಮತ್ತು 2009–10ರಲ್ಲಿನ ನಿರೀಕ್ಷೆ:

21. ರಾಜ್ಯದ ವಾಸ್ತವಿಕ ವಾರ್ಷಿಕ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ಗತಿ 2007–08ರಲ್ಲಿ ಶೇಕಡಾ 11 ಇದ್ದು (ಸ್ಥಿರ ದರಗಳಲ್ಲಿ) ಅದು 2008–09ರಲ್ಲಿ ಶೇ. 5.5 (ಸ್ಥಿರ ದರಗಳಲ್ಲಿ) ಆಗಬಹುದೆಂದು ಅಂದಾಜು ಮಾಡಲಾಗಿದೆ. ಆರ್ಥಿಕ ಅಂಕಿಅಂಶಗಳ ನಿರ್ದೇಶನಾಲಯದಲ್ಲಿ ಲಭ್ಯವಿರುವ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ, 2009–10ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆಯ ದರ ಸ್ವಲ್ಪ ಕಡಿಮೆ ಆಗುವ ಸಂಭವ ಕಂಡುಬಂದಿದೆ. 2007–08ರಲ್ಲಿ ಕೃಷಿ ವಲಯ ಶೇ.15.6ರಷ್ಟು ಬೆಳವಣಿಗೆ ಕಂಡಿದ್ದರೆ 2008–09ರಲ್ಲಿ ಮುಂಗಾರು ಮಳೆ ಕಡಿಮೆಯಾಗಿದ್ದರಿಂದ ಅದು ಶೇ. 5.7ರಷ್ಟು ಕಡಿಮೆ ಬೆಳವಣಿಗೆಯನ್ನು ಹೊಂದಬಹುದೆಂದು ಅಂದಾಜು ಮಾಡಲಾಗಿದೆ. ಕೈಗಾರಿಕಾ ವಲಯ, 2007–08ರಲ್ಲಿ ಶೇ. 8.8ರಷ್ಟು ಬೆಳವಣಿಗೆಯನ್ನು ಹೊಂದಿದ್ದು, 2008–09ರಲ್ಲಿ ಈ ಬೆಳವಣಿಗೆ ಶೇ. 5.8ರಷ್ಟು ದರದಲ್ಲಿ ಆಗಬಹುದೆಂದು ನಿರೀಕ್ಷಿಸಲಾಗಿದೆ. ಸೇವಾ ವಲಯದ ಬೆಳವಣಿಗೆ 2007–08ರಲ್ಲಿ ಶೇ. 10.7 ಇದ್ದು, 2008–09ರಲ್ಲಿ ಅದು ಶೇ. 9.2ಕ್ಕೆ ಇಳಿಯಬಹುದೆಂದು ಅಂದಾಜು ಮಾಡಲಾಗಿದೆ. ರಾಷ್ಟ್ರೀಯ ಆರ್ಥಿಕತೆಯಲ್ಲಿ ಇರುವ ಅನಿಶ್ಚಿತತೆಗಳನ್ನು ಗಮನಿಸಿದಾಗ ಇಂಥ ಕಡಿಮೆ ದರದ ಪ್ರಗತಿ ಆಶ್ಚರ್ಯಕರವಲ್ಲ.

22. ಬಾಹ್ಯ ಆರ್ಥಿಕ ದೃಷ್ಟಿಕೋನ ಮತ್ತು ಕೇಂದ್ರ ಸರ್ಕಾರವು 2009–10ಕ್ಕೆ ಮಂಡಿಸಿದ ಸ್ಥೂಲ ಆರ್ಥಿಕ ಚೌಕಟ್ಟಿನ ಹೇಳಿಕೆಯಲ್ಲಿ ವಿವರಿಸಿರುವ ರಾಷ್ಟ್ರದ ಸ್ಥೂಲ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿದರೆ 2009–10ರಲ್ಲಿ ರಾಜ್ಯದ ಆರ್ಥಿಕತೆ ಶೇ. 6ರ ಗತಿಯಲ್ಲಿ ವಾಸ್ತವಿಕವಾಗಿ ಬೆಳವಣಿಗೆ ಹೊಂದಬಹುದೆಂದು ಊಹಿಸಲಾಗಿದೆ. 2009–10ರಲ್ಲಿ ಉಂಟಾಗಬಹುದಾದ ಕಡಿಮೆ ಹಣದುಬ್ಬರದ ಸಾಧ್ಯತೆಗಳನ್ನು ಗಮನಿಸಿದಾಗ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು 2008–09ರಲ್ಲಿ 2,68,138 ಕೋಟಿ ರುಪಾಯಿಗಳಿದ್ದು ಅದಕ್ಕೆ ಪ್ರತಿಯಾಗಿ ಪ್ರಸಕ್ತ ಮಾರುಕಟ್ಟೆ ದರಗಳಲ್ಲಿ 2009–10ರಲ್ಲಿ 294952 ಕೋಟಿ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿದೆ.

23. ರಾಷ್ಟ್ರೀಯ ಮಟ್ಟದಲ್ಲಿ ಸ್ಥೂಲ ಆರ್ಥಿಕ ಪ್ರವೃತ್ತಿಗಳು, ಮುಖ್ಯವಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ತತ್ಪರಿಣಾಮದ ಕಾರಣ ಸಾಧಾರಣ ಆರ್ಥಿಕ ಬೆಳವಣಿಗೆ ಆಗಬಹುದೆಂದು ಸೂಚಿಸುತ್ತವೆ. ಈ ಸಾಧಾರಣ ಬೆಳವಣಿಗೆ ಎಲ್ಲ ವಲಯಗಳಿಗೂ ಅನ್ವಯಿಸುತ್ತದೆ. ಜಾಗತಿಕ ಆರ್ಥಿಕತೆಯಲ್ಲಿ ಉಂಟಾಗಿರುವ ಈ ನಿಧಾನಗತಿ ರಫ್ತು ಆಧಾರಿತ ಕೈಗಾರಿಕೆಗಳ ಮೇಲೆ ಮತ್ತು ಸೇವಾ ವಲಯಗಳ ಮೇಲೆ ಹೆಚ್ಚು ತೀವ್ರವಾಗಿ ಪ್ರತಿಕೂಲ ಪರಿಣಾಮ ಬೀರುತ್ತದೆಂದು ನಿರೀಕ್ಷಿಸಲಾಗಿದೆ. ಈ ಆಘಾತ ಮಧ್ಯಮ ಅವಧಿಯವರೆಗೂ ಮುಂದುವರಿಯುವ ಸಾಧ್ಯತೆ ಇದೆ. ಸೇವಾ ವಲಯದಲ್ಲಿ ಕರ್ನಾಟಕ ಹೆಚ್ಚಿನ ಪಾಲು ಹೊಂದಿರುವುದರಿಂದ ಮಾಹಿತಿ ತಂತ್ರಜ್ಞಾನ ಮತ್ತು

ಜವಳಿ ಆಧರಿತ ಉದ್ಯಮಗಳು ರಾಜ್ಯದ ಆರ್ಥಿಕತೆಯಲ್ಲಿ ಹೆಚ್ಚು ಪರಿಣಾಮವನ್ನು ಉಂಟುಮಾಡುವ ಸಂಭವವಿದೆ. ಆದಾಗ್ಯೂ 2009–10ರ ನಂತರ ಬೆಳವಣಿಗೆಯು ಶೇ.9ರ ಸಾಮರ್ಥ್ಯ ಮಟ್ಟಕ್ಕೆ ಸುಧಾರಣೆಗೊಳ್ಳಬಹುದೆಂಬ ನಿರೀಕ್ಷೆ ಇದೆ.

ಸಿ. ಹಣದುಬ್ಬರ ಪ್ರವೃತ್ತಿಗಳು

24. 2008–09ರ ಬಹುಪಾಲು ಅವಧಿಯಲ್ಲಿ ಇದ್ದ ಅಧಿಕ ಹಣದುಬ್ಬರದ ಪ್ರಮಾಣ ನಿಧಾನಗತಿಯಲ್ಲಿ ಕಡಿಮೆಯಾಗಿದ್ದು ಈಗ 2009ರ ಜನವರಿ 31ಕ್ಕೆ ಕೊನೆಗೊಳ್ಳುವ ವಾರದಲ್ಲಿ ಅದು ಶೇ. 4.34ರಷ್ಟಿದೆ. ತೈಲ ಮತ್ತು ಇತರ ಸಾಮಗ್ರಿಗಳ ಬೆಲೆಗಳಲ್ಲಿನ ಅನಿಶ್ಚಿತತೆಯಿಂದಾಗಿ ಮತ್ತು ತಯಾರಿಕಾ ವಲಯದ ಸರಬರಾಜು ಸರಣಿಯಲ್ಲಿನ ಬೆಲೆ ಏರಿಸುವ ಇತರ ಸಂಬಂಧಿತ ಅಂಶಗಳಿಂದಾಗಿ, 2009–10ನೇ ವರ್ಷದಲ್ಲಿ ಉಂಟಾಗಬಹುದಾದ ಹಣದುಬ್ಬರದ ಗತಿಯನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆದಾಗ್ಯೂ ಕೇಂದ್ರ ಆಯವ್ಯಯದಿಂದ ಮತ್ತು ಕೇಂದ್ರ ಆಯವ್ಯಯಕ್ಕೆ ನಿಗದಿಪಡಿಸಿದ ಕೊರತೆ ಗುರಿಗಳಿಂದ ಸೂಚನೆಯನ್ನು ಪಡೆಯುವುದಾದರೆ ಮಧ್ಯಾವಧಿ ಹಣದುಬ್ಬರ ಶೇ.4ರಷ್ಟು ಎಂದು ಭಾವಿಸಲಾಗಿದೆ.

ಡಿ. ಕಾರ್ಯನೀತಿ ಮಧ್ಯಸ್ತಿಕೆಗಳು

25. ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಬೆಳವಣಿಗೆಯನ್ನು ಸ್ಥಿರಗೊಳಿಸಲು ಎಲ್ಲ ಮೂರು ವಲಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಕಾರ್ಯತಂತ್ರವನ್ನು ಗುರುತಿಸಬೇಕು ಮತ್ತು ಆರ್ಥಿಕ ಸ್ಥಿತಿಯನ್ನು ಶೀಘ್ರವಾಗಿ ಸುಧಾರಿಸುವ ನಿಟ್ಟಿನಲ್ಲಿ ತೀವ್ರ ಬೆಳವಣಿಗೆಗೆ ಅಡ್ಡಿಯಾಗುವ ತೊಂದರೆಗಳನ್ನು ನಿವಾರಿಸಬೇಕು. ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ಮಾಡಲಾದ ಒಂದು ಬಾರಿಯ ತಿದ್ದುಪಡಿಯ ಮೂಲಕ ಪಡೆಯಲಾದ ಹೆಚ್ಚಿನ ಮುಂಗಡವನ್ನು ನ್ಯಾಯಯುತ ಹಣಹೂಡಿಕೆ ಮತ್ತು ಆಸ್ತಿ ಸೃಜನೆ ಮೂಲಕ ಬಂಡವಾಳ ವೆಚ್ಚಕ್ಕಾಗಿ ಬಳಸಿಕೊಳ್ಳಲಾಗುವುದು. ಹಣ ಹೂಡಿಕೆಗೆ ಅತ್ಯುತ್ತಮ ಪರಿಹಾರ ಕಂಡುಹಿಡಿಯಲು ಮತ್ತು ಕನಿಷ್ಠ ಕಾಲಾವಧಿಯಲ್ಲಿ ಬೆಳವಣಿಗೆಯ ಉತ್ತಮ ಗುಣಮಟ್ಟ ಸಾಧಿಸಲು ಸರ್ಕಾರಿ ಸೇವಾ ನಿರ್ವಹಣೆಯಲ್ಲಿ ದಕ್ಷತೆ ಹೆಚ್ಚಿಸುವ ಹಾಗೂ ಆಡಳಿತವನ್ನು ಉತ್ತಮಗೊಳಿಸಬಲ್ಲ ಹಲವಾರು ಸಂಬಂಧಿತ ಸಾಂಸ್ಥಿಕ ಸುಧಾರಣೆಗಳನ್ನು ಪ್ರಾರಂಭಿಸುವುದು ಅವಶ್ಯವಾಗಿದೆ. ಇಂಥ ಕ್ರಮಗಳಲ್ಲಿ ಭೂಮಿ ಖರೀದಿಯನ್ನು ಪರಿಮಿತಗೊಳಿಸುವುದು, ಅನುಮತಿಗಳು ಹಾಗೂ ಶಾಸನಾತ್ಮಕ ಅನುಮೋದನೆಗಾಗಿ ಕಾಲಾವಧಿಯನ್ನು ಕಡಿಮೆ ಮಾಡುವುದು, ಶೀಘ್ರ ವ್ಯಾಜ್ಯ ತೀರ್ಮಾನ, ಪಾಲನಾ ಷರತ್ತುಗಳನ್ನು ಸರಳಗೊಳಿಸುವುದು, ಕೃಷಿಯಲ್ಲಿ ಖಾಸಗಿ ಹಣ ಹೂಡಿಕೆಗೆ ಅವಕಾಶ ಕಲ್ಪಿಸುವುದು, ಖಾಸಗಿ ಸಹಭಾಗಿತ್ವವನ್ನೂ ಒಳಗೊಂಡಂತೆ ಕೌಶಲ್ಯ ಅಭಿವೃದ್ಧಿ ಮುಂತಾದವುಗಳನ್ನು ಒಳಗೊಂಡಿದ್ದು, ಇವೆಲ್ಲವನ್ನೂ ಈ ವರ್ಷಾವಧಿಯಲ್ಲಿ ಶ್ರದ್ಧಾಪೂರ್ವಕವಾಗಿ ಅನುಷ್ಠಾನಗೊಳಿಸಬೇಕಾಗಿದೆ.

ಅಧ್ಯಾಯ-4

ರಾಜಸ್ವ ಸುಧಾರಣೆಗಳು ಮತ್ತು ಮುನ್ನಂದಾಜುಗಳು

ಪ್ರಮುಖ ಸ್ವಂತ ತೆರಿಗೆ ರಾಜಸ್ವಗಳಿಗಾಗಿ ತಂತ್ರ ಮತ್ತು ಮುನ್ನಂದಾಜುಗಳು

26. ರಾಜ್ಯದ ಹಣಕಾಸು ಪರಿಸ್ಥಿತಿಯಲ್ಲಿನ ಸುಧಾರಣೆಯು, ಹೆಚ್ಚಾಗಿ, ವಿತ್ತೀಯ ತಿದ್ದುಪಡಿ ಅವಧಿಯ ತೆರಿಗೆ ರಾಜಸ್ವಗಳ ನಿರಂತರ ಬೆಳವಣಿಗೆಯ ಮೇಲೆ ಅವಲಂಬಿತವಾಗಿರುತ್ತದೆ. ದೂರದೃಷ್ಟಿಯ ತೆರಿಗೆ ನೀತಿಯಿಂದಾಗಿ 2003-04ರಲ್ಲಿ ಶೇ.9.73 ರಷ್ಟು ಇದ್ದ ಜಿಎಸ್‌ಡಿಪಿ ಹಾಗೂ ತೆರಿಗೆಯ ಅನುಪಾತವು 2007-08ರಲ್ಲಿ ಶೇ. 11.11ಕ್ಕೆ ಏರಿತು.

27. ತೆರಿಗೆ ದರವನ್ನು ತಗ್ಗಿಸುವಾಗ ರಾಜ್ಯವು ತೆರಿಗೆಗೊಳಪಡುವವರ ಸಂಖ್ಯೆಯನ್ನು ಪ್ರಜ್ಞಾಪೂರ್ವಕವಾಗಿ ವಿಸ್ತರಿಸಿದೆ. ಕೋಷ್ಟಕ-7ರಲ್ಲಿ, 2002-03ರಿಂದ 2007-08ರ ಅವಧಿಯಲ್ಲಿ ಪ್ರಮುಖ ತೆರಿಗೆಗಳಿಂದ ರಾಜ್ಯವು ರಾಜಸ್ವದಲ್ಲಾದ ಬೆಳವಣಿಗೆಯನ್ನು ತೋರಿಸಲಾಗಿದೆ. ಈವರೆಗೆ ವಾಣಿಜ್ಯ ತೆರಿಗೆ, ಅಬಕಾರಿ, ಮೋಟಾರು ವಾಹನ ತೆರಿಗೆ, ಸ್ಟಾಂಪು ಮತ್ತು ನೋಂದಣಿಗಳ ಸರಾಸರಿ ಬೆಳವಣಿಗೆ ಪ್ರಮಾಣವು ಅನುಕ್ರಮವಾಗಿ ಶೇ. 20.91, ಶೇ.19.26, ಶೇ.20.95 ಮತ್ತು ಶೇ. 29.16ರಷ್ಟು ಇತ್ತು. ಆದರೆ, 2008-09ರ ಅವಧಿಯಲ್ಲಿನ ಆರ್ಥಿಕ ಸ್ಥಿತಿಯ ಕುಸಿತದಿಂದಾಗಿ, ಎಲ್ಲಾ ತೆರಿಗೆ ಮೂಲಗಳಿಂದ ಬರುವ ರಾಜಸ್ವದ ಪ್ರಮಾಣದಲ್ಲಿನ ಬೆಳವಣಿಗೆಯು ಸಹ ಬಹಳಷ್ಟು ಕುಂಠಿತಗೊಂಡು, ಇದರಿಂದ ರೂ.3143 ಕೋಟಿಗಳಷ್ಟು ಖೋತಾ ಆಗಿದೆ. ಇದು ಸಂಪೂರ್ಣವಾಗಿ ಸರ್ಕಾರದ ವಿತ್ತೀಯ ನೀತಿಗಳಿಗೆ ಸಂಬಂಧಿಸದಿರುವ ಬಾಹ್ಯ ಕಾರಣಗಳಿಗಾಗಿ, ಅಂದರೆ ಜಾಗತಿಕ ಬಿಕ್ಕಟ್ಟಿನ ಪರಿಣಾಮವಾಗಿ, ಹಿಂದೆಂದೂ ಅನುಭವಿಸದ ವಿತ್ತೀಯ ಒತ್ತಡಕ್ಕೆ ದಾರಿ ಮಾಡಿಕೊಡುತ್ತದೆ.

ಕೋಷ್ಟಕ-7

ವಾಸ್ತವಿಕ ಅಂಕಿ ಅಂಶಗಳು ಕೋಟಿ ರೂ.ಗಳಲ್ಲಿ

ವರ್ಷ	ವಾಣಿಜ್ಯ ತೆರಿಗೆ			ಅಬಕಾರಿ		
	ವಾಸ್ತವಿಕ ಅಂಕಿ ಅಂಶಗಳು	ಬೆಳವಣಿಗೆ ಪ್ರಮಾಣ	ಸ್ಥಿತಿ ಸ್ಥಾಪಕತೆ (buoyancy)	ವಾಸ್ತವಿಕ ಅಂಕಿ ಅಂಶಗಳು	ಬೆಳವಣಿಗೆ ಪ್ರಮಾಣ	ಸ್ಥಿತಿ ಸ್ಥಾಪಕತೆ (buoyancy
2002–03	6313	3.85%	0.38	2094	5.93%	0.59
2003–04	7733	22.49%	2.68	2334	11.45%	1.37
2004–05	10057	30.05%	2.13	2806	20.20%	1.43
2005–06	11484	14.19%	0.95	3397	21.07%	1.41
2006–07	13714	19.42%	1.89	4495	32.34%	3.15
2007–08	15552	13.40%	0.55	4767	6.03%	0.25
2008–09 ಆರ್‌ಇ	17595	13.14%	0.89	5574	16.94%	1.15

ಬೆಳವಣಿಗೆ ಪ್ರಮಾಣ ಪ್ರವೃತ್ತಿ	18.62%			18.85%		
	ಮೋಟಾರು ವಾಹನ ತೆರಿಗೆ			ಸ್ಟಾಂಪು ಮತ್ತು ನೊಂದಣಿ		
ವರ್ಷ	ವಾಸ್ತವಿಕ ಅಂಕಿ ಅಂಶಗಳು	ಬೆಳವಣಿಗೆ ಪ್ರಮಾಣ	ಸ್ಥಿತಿ ಸ್ಥಾಪಕತೆ (buoyancy)	ವಾಸ್ತವಿಕ ಅಂಕಿ ಅಂಶಗಳು	ಬೆಳವಣಿಗೆ ಪ್ರಮಾಣ	ಸ್ಥಿತಿ ಸ್ಥಾಪಕತೆ (buoyancy)
2002–03	676	–5.15%	–0.51	1115	30.44%	3.00
2003–04	800	18.41%	2.20	1356	21.55%	2.57
2004–05	983	22.86%	1.62	1760	29.81%	2.11
2005–06	1105	12.46%	0.83	2212	25.70%	1.72
2006–07	1374	24.34%	2.37	3206	44.91%	3.71
2007–08	1650	20.05%	0.83	3409	6.33%	0.26
2008–09 ಪ.ಅ	1762	6.77%	0.46	3110	–8.76%	–0.60
ಬೆಳವಣಿಗೆ ಪ್ರಮಾಣ ಪ್ರವೃತ್ತಿ	**18.10%**			**21.79%**		

(i) ವಾಣಿಜ್ಯ ತೆರಿಗೆಗಳು

28. ರಾಜ್ಯ ಸ್ವಂತ ತೆರಿಗೆ ರಾಜಸ್ವಗಳಿಗೆ ಹೆಚ್ಚಿನ ವಂತಿಗೆ ವಾಣಿಜ್ಯ ತೆರಿಗೆಗಳಿಂದ ಬರುತ್ತದೆ. ಅದರಲ್ಲಿ ಸರಕುಗಳ ಮಾರಾಟ ತೆರಿಗೆಯು ಪ್ರಮುಖವಾದ ಅಂಶವಾಗಿದೆ. 2005-06ರ ನಂತರ ರಾಜ್ಯವು ರಾಷ್ಟ್ರೀಯ ವಿನ್ಯಾಸದಂತೆಯೇ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಆದರೆ ಮೌಲ್ಯವರ್ಧಿತ ತೆರಿಗೆ ಪದ್ಧತಿಗೆ ಅಡಿಯಿಟ್ಟ ಕಾರಣದಿಂದಾಗಿ 2005-06ರಲ್ಲಿ ರಾಜಸ್ವ ಬೆಳವಣಿಗೆ ಪ್ರಮಾಣ ಬಹಳ ಕಡಿಮೆ ಇದ್ದರೂ 2006-07ರಲ್ಲಿ ಶೇ.20 ಬೆಳವಣಿಗೆ ಉಂಟಾಯಿತು. 2008-09ನೇ ವರ್ಷದ ಪೂರ್ವಾರ್ಧದಲ್ಲಿ, ಜಾಗತಿಕ ತೈಲ ಬೆಲೆಗಳು ಹೆಚ್ಚಾದರೂ ಸಹ ಭಾರತ ಸರ್ಕಾರವು ಬೆಲೆ ನಿಯಂತ್ರಣ ಮಾಡಿದುದರಿಂದ ರಾಜ್ಯಗಳಿಗೆ ತೆರಿಗೆ ರಾಜಸ್ವದಿಂದ ಹೆಚ್ಚಿನ ಲಾಭಗಳು ಸಿಗಲಿಲ್ಲ. ಹಾಗೂ, ಕೇಂದ್ರ ಸರ್ಕಾರವು ಬೆಲೆಯನ್ನು ಹೆಚ್ಚಿಸಲು ತೀರ್ಮಾನಿಸಿದಾಗ, ರಾಜ್ಯ ಸರ್ಕಾರವು ಜನಸಾಮಾನ್ಯರ ಮೇಲಾಗುವ ಪರಿಣಾಮವನ್ನು ಕಡಿಮೆಗೊಳಿಸಲು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಭಾಗಶಃ ಕಡಿಮೆ ಮಾಡಿದೆ. ಹಾಗೆಯೇ, ತೈಲ ಬೆಲೆ ಕಡಿಮೆಯಾದಾಗ, ಬೆಲೆ ಕುಸಿತದ ಕಾರಣದಿಂದಾಗಿ ಸರ್ಕಾರವು ಸುಮಾರು 300 ಕೋಟಿ ರೂ.ಗಳಷ್ಟು ತೆರಿಗೆ ನಷ್ಟ ಅನುಭವಿಸಿದೆ. ಹಾಗೂ ಸಮೂಹ ಬಳಕೆ ವಸ್ತುಗಳ ಮಾರಾಟವು ಗಣನೀಯವಾಗಿ ಕಡಿಮೆಯಾಗಿದೆ, ಹಾಗೆಯೇ ನಿರ್ಮಾಣ ಉದ್ದಿಮೆಯಿಂದಲೂ ಆದಾಯ ಗಳಿಕೆ ಕಡಿಮೆಯಾಗಿದೆ.

29. ಮೌಲ್ಯವರ್ಧಿತ ತೆರಿಗೆ ಪದ್ಧತಿಯಡಿಯಲ್ಲಿ ಯೋಜಿತ ಪ್ರಮಾಣಕ್ಕಿಂತಲೂ ಕಡಿಮೆಯಾದ ಸಾಮಾನ್ಯ ಅಭಿವೃದ್ಧಿ ಪ್ರಮಾಣದಿಂದಾಗಿ ಉಂಟಾದ ನಷ್ಟವನ್ನು ತುಂಬಿಕೊಡುವಲ್ಲಿ 2008-09ರಿಂದ ಭಾರತ ಸರ್ಕಾರವು ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಬೆಂಬಲ ನೀಡುತ್ತಿಲ್ಲ. ವ್ಯವಸ್ಥೆಯ ಸಮಗ್ರತೆಯನ್ನು ಕಾಪಾಡಲು ಮತ್ತು ಸ್ಪರ್ಧಾತ್ಮಕ ವಿನಾಯಿತಿಗಳನ್ನು ನೀಡಿದ ಮತ್ತು ತೆರಿಗೆ ದರಗಳನ್ನು ನಿಗದಿಪಡಿಸಿದ 2000 ಇಸ್ವಿಯ ಹಿಂದಿನ ಕಾಲ ಮರುಕಳಿಸದಂತೆ ಮಾಡಲು ರಾಜ್ಯ ಹಣಕಾಸು ಸಚಿವರ ಅಧಿಕಾರಯುತ ಸಮಿತಿಯು ಸ್ಪರ್ಧಾತ್ಮಕದರ ಪೈಪೋಟಿಯ ವಿಧಾನಕ್ಕೆ ಮೊರೆ ಹೋಗಬಾರದೆಂದು ಒಮ್ಮತದಿಂದ ಕೈಗೊಂಡ ನಿರ್ಣಯವನ್ನು ಯಥಾರ್ಥವಾಗಿ ಮತ್ತು ಅದರ ಆಶಯವನ್ನು ಮುಂದುವರಿಸುವುದು ಅಗತ್ಯ. ಭಾರತ ಸರ್ಕಾರವು 2008-09ನೇ ಸಾಲಿನಲ್ಲಿ ಸರಕು ಹಾಗೂ ಸೇವಾ ತೆರಿಗೆ (ಜಿಎಸ್‌ಟಿ) ಸಿದ್ಧತೆಯಲ್ಲಿ ಕೇಂದ್ರ ಮಾರಾಟ ತೆರಿಗೆ (ಸಿಎಸ್‌ಟಿ) ಯಲ್ಲಿ ಶೇಕಡಾ 3 ರಿಂದ ಶೇಕಡಾ 2ಕ್ಕೆ ಇಳಿದಿರುವುದು ರಾಜಸ್ವದ ಮೇಲೆ ಪ್ರತಿಕೂಲ ಪರಿಣಾಮವಾಗಿದೆ. ರಾಜ್ಯ ಸರ್ಕಾರವು ಕೇಂದ್ರ ಮಾರಾಟ ತೆರಿಗೆಯಲ್ಲಾದ ನಷ್ಟಕ್ಕಾಗಿ ಕೇಂದ್ರದಿಂದ ನಷ್ಟ ಪರಿಹಾರವನ್ನು ಕೋರಿದೆ.

30. ರಾಷ್ಟ್ರದಲ್ಲಿ ಸಾಮಾನ್ಯ ಮಾರುಕಟ್ಟೆಗೆ ದಾರಿ ಮಾಡಿಕೊಡುವ ಸಮಗ್ರ ಅಪ್ರತ್ಯಕ್ಷ ತೆರಿಗೆ ಸುಧಾರಣೆಗಳ ಭಾಗವಾಗಿ 2010ರ ತರುವಾಯ ಜಾರಿಗೆ ಬರುವ

ಸಂಭವವಿರುವ ಸರಕು ಹಾಗೂ ಸೇವಾ ತೆರಿಗೆಗೆ (ಜಿಎಸ್‌ಟಿ) ಹೊಂದಿಕೊಳ್ಳುವ ಸವಾಲನ್ನು ಎದುರಿಸಲು ಸ್ವಯಂ ಸಿದ್ಧವಾಗಬೇಕಾಗಿದೆ. ಆದರೆ, ನಿರ್ದಿಷ್ಟ ವಿವರಗಳು ಲಭ್ಯವಿಲ್ಲದಿರುವುದರಿಂದ ಜಿಎಸ್‌ಟಿಗೆ ಬದಲಾವಣೆ ಹೊಂದುವುದರಿಂದ ಕರ್ನಾಟಕದಲ್ಲಿ ಪರಿಹಾರದ ದೃಢ ವ್ಯವಸ್ಥೆಯನ್ನು ಮುಂಚಿತವಾಗಿ ಅಳವಡಿಸಿಕೊಳ್ಳದಿದ್ದರೆ ಕರ್ನಾಟಕದ ಮೇಲಾಗುವ ಗಣನೀಯ ಪ್ರತಿಕೂಲ ಆರ್ಥಿಕ ಪರಿಣಾಮಗಳು ಸೇರಿದಂತೆ ಅದರ ಅನುಷ್ಠಾನದ ಪ್ರಾರಂಭದ ವರ್ಷಗಳಲ್ಲಿ ಹೊಂದಾಣಿಕೆಯ ಸಮಸ್ಯೆಗಳನ್ನು ಎದುರಿಸಬೇಕಾಗಬಹುದೆಂಬ ಆತಂಕವಿದೆ. ರಾಜ್ಯವು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ ಹದಿಮೂರನೇ ಹಣಕಾಸು ಆಯೋಗದ ಮುಂದೆಯೂ ರಾಜ್ಯವು. ಈ ಅನಿಶ್ಚಿತತೆಗಳನ್ನು/ ಆತಂಕಗಳನ್ನು ಪ್ರಮುಖವಾಗಿ ಪ್ರತಿಪಾದಿಸಲಾಗಿದೆ.

(ii) ರಾಜ್ಯ ಅಬಕಾರಿ

31. ಸಾರಾಯಿ ಮಾರಾಟದ ಮೇಲೆ ನಿಷೇಧ ವಿಧಿಸಿದ ನಂತರ, ಐಎಂಎಲ್ ಬಳಕೆಯಿಂದ ಕಡಿಮೆ ಬೆಲೆ ಬ್ರಾಂಡ್ ಬಳಕೆಗೆ ಗಮನಾರ್ಹವಾಗಿ ವರ್ಗಾವಣೆಯಾಗಿದೆ. ಮದ್ಯದ ಬೆಲೆಗಳು ಮತ್ತು ಅವುಗಳ ಮೇಲಿನ ವಿವಿಧ ತೆರಿಗೆ / ಸಂಗ್ರಹಣೆಗಳು ಹಾಗೂ ಸಾಮಾಜಿಕ-ಆರ್ಥಿಕ ಪರಿಸರ, ಇವು ಒಟ್ಟಾಗಿ ಆಲ್ಕೋಹಾಲ್ ಬಳಕೆಯನ್ನು ನಿರ್ಧರಿಸುತ್ತವೆ. ಪ್ರಸಕ್ತ ಆರ್ಥಿಕ ಚಿತ್ರಣದಲ್ಲಿ ಅಬಕಾರಿ ಗುರಿಯನ್ನು ಆಯವ್ಯಯದ ಅಂದಾಜಿನಂತೆ ಸಾಧಿಸಬಹುದಾಗಿದೆ ಮತ್ತು 2009-2010ರಲ್ಲಿ ಶೇಕಡಾ 15ರ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.

(iii) ಮುದ್ರಾಂಕ ಮತ್ತು ನೋಂದಣಿ

32. 2007-08ರಲ್ಲಿ ಸುಮಾರು 800 ಕೋಟಿ ರೂಪಾಯಿಗಳ ರಾಜಸ್ವ ಕೊರತೆಗೆ ಕಾರಣವಾದ ಮುದ್ರಾಂಕ ಮತ್ತು ನೋಂದಣಿಯಲ್ಲಿನ ತೀವ್ರ ಕುಸಿತವು ಈ ವರ್ಷವೂ ಮುಂದುವರಿಯುತ್ತಿದೆ. ಆಯವ್ಯಯ ಅಂದಾಜಿಗೆ ಹೋಲಿಸಿದರೆ ಕೊರತೆಯು ಸುಮಾರು 1000 ಕೋಟಿ ರೂ.ಗಳಷ್ಟಾಗುವ ಸಾಧ್ಯತೆಯು ಇದೆ. ಆರ್ಥಿಕತೆಯ ಸಾಮಾನ್ಯ ಹಿಂಜರಿತವು ರಿಯಲ್ ಎಸ್ಟೇಟ್ ಮಾರುಕಟ್ಟೆಯನ್ನು ಒತ್ತಡದಲ್ಲಿ ಸಿಲುಕಿಸಿವೆ. ರಿಸರ್ವ್ ಬ್ಯಾಂಕಿನ ಸಾಲಸಡಿಲಿಕೆ ಕ್ರಮಗಳು ಮತ್ತು ಕೇಂದ್ರ ಸರ್ಕಾರದ ವಿತ್ತೀಯ ಉತ್ತೇಜಕ ಪ್ಯಾಕೇಜುಗಳದ್ದಾಗ್ಯೂ ಬೇಡಿಕೆ ಕುಂಠಿತವಾಗಿಯೇ ಇದೆ. ಸಂಬಂಧಪಟ್ಟ ವಲಯಗಳಾದ ಉಕ್ಕು, ಸಿಮೆಂಟ್, ಮುಂತಾದ ವಲಯಗಳು ಸಹ ಅದೇ ರೀತಿಯ ಪರಿಣಾಮಗಳನ್ನು ಎದುರಿಸುತ್ತಿದ್ದು ಇದು, ವಾಣಿಜ್ಯ ತೆರಿಗೆ ರಂಗಕ್ಕೆ ಸಹ ವಿಸ್ತರಿಸಿದೆ.

(iv) ಮೋಟಾರು ವಾಹನಗಳ ತೆರಿಗೆ

33. 2007-08ರಲ್ಲಿ ಮೋಟಾರು ವಾಹನಗಳ ತೆರಿಗೆ ರಾಜಸ್ವ ಬೆಳವಣಿಗೆಯು ಸಮಾಧಾನಕರವಾಗಿದ್ದು, ಅದು ಆಯವ್ಯಯ ಅಂದಾಜುಗಳನ್ನು ಮೀರಿದೆ. ಆದರೆ, 2008-09ರ ಅವಧಿಯಲ್ಲಿ ಜಾಗತಿಕ ವಿದ್ಯಮಾನಗಳ ಕಾರಣದಿಂದ

ಆಟೋಮೊಬೈಲ್ ಉದ್ಯಮಕ್ಕೆ ಭಾರಿ ಪೆಟ್ಟು ಬಿತ್ತು. ಉದ್ಯಮವನ್ನು ಪುನಃ ಚೇತನಗೊಳಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು 2008ರ ಡಿಸೆಂಬರ್‌ನಲ್ಲಿ ವಿತ್ತೀಯ ಉತ್ತೇಜನಾ ಪ್ಯಾಕೇಜಿನ ಭಾಗವಾಗಿ ಮೋಟಾರು ವಾಹನಗಳ ಉತ್ಪಾದನಾ ಎಕ್ಸೈಸ್ ಸುಂಕವನ್ನು ಶೇ.4ರಷ್ಟು ತಗ್ಗಿಸಿತು. ಆರ್ಥಿಕ ಹಿಂಜರಿತದ ಕಾರಣದಿಂದಾಗಿ ಸಾರ್ವಜನಿಕ ಸಾರಿಗೆ ಆಪರೇಟರ್‌ಗಳು ಕೂಡ ಖರೀದಿಯನ್ನು ಕಡಿಮೆ ಮಾಡಿರುವುದು ಕಂಡು ಬಂದಿದೆ. ಆದರೆ, ಖಾಸಗಿ ವಾಹನಗಳ ಖರೀದಿಯಲ್ಲಿ ಗಣನೀಯವಾದ ಇಳಿಕೆ ಕಂಡುಬಂದಿದೆ ಮತ್ತು 2008-09ರ ಸಾಧನೆಗಳು ಗುರಿಗಿಂತ 300 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗುತ್ತದೆ. ಇದರಿಂದಾಗಿ ಎಕ್ಸೈಸ್ ತೆರಿಗೆಯಲ್ಲಿ ತೆರಿಗೆ ವಿರಾಮ ನೀಡುವ ಮೂಲಕ ಬೆಲೆಗಳನ್ನು ಕಡಿಮೆ ಮಾಡಲು ಕ್ರಮಗಳನ್ನು ಕೈಗೊಂಡಿದಾಗ್ಯೂ, ವಸೂಲಾತಿ ನಿರಾಶಾದಾಯಕವಾಗಿ ಕಂಡುಬಂದಿದ್ದು 2009-10ನೇ ಸಾಲಿಗೆ ಹಳೆಯ ಮುನ್ನಂದಾಜುಗಳಿಗೆ ದಾರಿಯಾಗಿದೆ. ತೆರಿಗೆ ಸಂಗ್ರಹಣೆಯನ್ನು ಹೆಚ್ಚಿಸುವ ವಿಧಾನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಆ ಮೂಲಕ ತೀವ್ರವಾಗಿ ಅಗತ್ಯ ಪುನಃಚೇತರಿಕೆ ನೀಡಲಾಗುತ್ತದೆ.

(v) ಬೃಹತ್ ಮತ್ತು ಸಣ್ಣ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕದಿಂದ (ರಾಯಲ್ಟಿ) ಬರುವ ರಾಜಸ್ವ

34. 2007-08ರಲ್ಲಿ ಸ್ವಾಮ್ಯ ಶುಲ್ಕ ದರ ಪರಿಷ್ಕರಣೆಯಾಗಬೇಕಾಗಿದ್ದ ಬೃಹತ್ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕ ದರಗಳನ್ನು ಕೇಂದ್ರ ಸರ್ಕಾರವು ಪರಿಷ್ಕರಿಸಿರುವುದಿಲ್ಲ. ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ, ವಿಶೇಷವಾಗಿ ಬೀಜಿಂಗ್ ಓಲಂಪಿಕ್ಸ್‌ನ ತರುವಾಯ ಬೇಡಿಕೆಯಲ್ಲಿ ಕುಸಿತ ಕಂಡುಬಂದ ಕಾರಣ 2008-09ರಲ್ಲಿ ಬೃಹತ್ ಮತ್ತು ಸಣ್ಣ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕದಿಂದ ಬರುವ ಸ್ವೀಕೃತಿಗಳಲ್ಲಿ ಕುಸಿತ ಮುಂದುವರಿದಿದೆ. ಆಯವ್ಯಯ ಅಂದಾಜಿಗೆ ಹೋಲಿಸಿದಾಗ 2008-09ರಲ್ಲಿ ರಾಜಸ್ವವು 150 ಕೋಟಿ ರೂಪಾಯಿಗಳಷ್ಟು ಕೊರತೆಯಾಗುವ ಸಾಧ್ಯತೆ ಇದೆ. ಸ್ವಾಮ್ಯ ಶುಲ್ಕದ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಭಾರತ ಸರ್ಕಾರವನ್ನು ಮೇಲಿಂದ ಮೇಲೆ ಕೇಳಿಕೊಳ್ಳಲಾಗಿದೆ. ಸ್ವಾಮ್ಯ ಶುಲ್ಕ ದರಗಳ ಪರಿಷ್ಕರಣೆಯ ತರುವಾಯ ರಾಜ್ಯದ ಅಗತ್ಯತೆಗಳ ಅಭಿವೃದ್ಧಿಗೆ ಗಣನೀಯ ಪ್ರಮಾಣದ ಸಂಪನ್ಮೂಲಗಳು ಒಟ್ಟಾರೆ ಲಭ್ಯವಾಗುತ್ತವೆ. ಭಾರತ ಸರ್ಕಾರವು ಬೃಹತ್ ಖನಿಜಗಳ ಮೇಲಿನ ಸ್ವಾಮ್ಯ ಶುಲ್ಕ ದರಗಳನ್ನು ಪರಿಷ್ಕರಿಸುವುದರಿಂದ, ಶೇ.6.35 ರಾಜಸ್ವದ ಬೆಳವಣಿಗೆಯಾಗುವುದೆಂದು ಭಾವಿಸಲಾಗಿದೆ.

(vi) ಜಮೀನಿನ ಮಾರಾಟದಿಂದ ಬರುವ ಸ್ವೀಕೃತಿಗಳು

35. ರಾಜ್ಯ ವಿಧಾನಮಂಡಲದ ಸಮಿತಿಯ ವರದಿ ಪ್ರಕಾರ ಬೆಂಗಳೂರು ಮತ್ತು ಅದರ ಸುತ್ತ ಮುತ್ತ ಬೃಹತ್ ಪ್ರಮಾಣದ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಮೊದಲನೆಯದಾಗಿ ಅವುಗಳಿಗೆ ಸೂಕ್ತವಾಗಿ ಬೇಲಿ ಹಾಕುವ ಮೂಲಕ ಹಾಗೂ ಭದ್ರಪಡಿಸುವ ಮೂಲಕ ಈ ಅಮೂಲ್ಯ ಆಸ್ತಿಯನ್ನು ರಕ್ಷಿಸುವುದು

ಅತ್ಯಗತ್ಯವಾಗಿದೆ. ಬೆಳವಣಿಗೆ ಸಾಧಿಸಲು, ಉದ್ಯೋಗ ಸೃಜಿಸಲು ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಸಾರ್ವಜನಿಕ ಆಸ್ತಿಯ ಭಾಗವಾಗಿರುವ ಜಮೀನು ಸಂರಕ್ಷಣೆ ಮತ್ತು ಅದರ ವಿಲೇವಾರಿಯ ಅಗತ್ಯವಿದೆ. ಪ್ರಸ್ತುತದ ಮತ್ತು ಭವಿಷ್ಯತ್ತಿನ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾರ್ವಜನಿಕ ಉದ್ದೇಶಗಳಿಗಾಗಿ ಈ ಜಮೀನುಗಳನ್ನು ಉಪಯೋಗಿಸಿಕೊಳ್ಳುವುದು ಅಗತ್ಯವಿದೆ.

36. ಎಂಟಿಎಫ್‌ಪಿ 2008–12– ಇದು ಅಭಿವೃದ್ಧಿಗೆ ಹಣಕಾಸು ಒದಗಿಸುವುದಕ್ಕಾಗಿ ಭೂ ಸ್ವತ್ತುಗಳ ಸಂಭಾವ್ಯ ಮೌಲ್ಯವನ್ನು (potential value) ಹೊರಗೆಡವಲು ಬೆಂಗಳೂರು ಮತ್ತು ಅದರ ಸುತ್ತ ಮುತ್ತಲಿನ ಸರ್ಕಾರಿ ಜಮೀನಿನ ಮಾರಾಟವನ್ನು ನಿರೀಕ್ಷಿಸಿದೆ. ರಿಯಲ್ ಎಸ್ಟೇಟ್ ವಲಯದಲ್ಲಿನ ಸಾಮನ್ಯ ಮಂದಗತಿಯ ಕಾರಣದಿಂದ ಅದಕ್ಕೆ ಪ್ರಾಮುಖ್ಯತೆ ಬಂದಿಲ್ಲ. 2009–10 ರಲ್ಲಿ 29500 ಕೋಟಿ ರೂಪಾಯಿಗಳ ಯೋಜನಾ ಗಾತ್ರದೊಂದಿಗೆ ಈ ಪ್ರಮುಖ ಸ್ವತ್ತುಗಳನ್ನು ಬಂಡವಾಳೀಕರಿಸಲಾಗಿದೆ ಮತ್ತು ರೂಪಿಸಲಾದಂತೆ ಗುರಿಗಳನ್ನು ಸಾಧಿಸಲು ಗಣನೀಯ ಪ್ರಮಾಣದ ನಿಧಿಗಳು ಲಭ್ಯವಾಗಿದೆಯೆಂದು ಸ್ಪಷ್ಟವಾಗುತ್ತದೆ. 2008–09ಕ್ಕೆ 3000 ಕೋಟಿ ರೂಪಾಯಿಗಳ ಗುರಿಯನ್ನು ಹೊಂದಿದ್ದರೂ ಸಹ 200 ಕೋಟಿ ರೂಪಾಯಿಗಳಷ್ಟನ್ನು ಮಾತ್ರ ನಿರೀಕ್ಷಿಸಬಹುದಾಗಿದೆ. 2009–10ಕ್ಕೆ 1900 ಕೋಟಿ ರೂಪಾಯಿಗಳ ಗುರಿಯನ್ನು ಹೊಂದಲಾಗಿದೆ ಮತ್ತು ಹೊಸದಾಗಿ ರೂಪಿಸಿದ ಕರ್ನಾಟಕ ಜಮೀನು ಎಸ್ಟೇಟ್ ನಿಗಮವು ಜಮೀನನ್ನು ವಿಲೇ ಮಾಡುವಲ್ಲಿ ತ್ವರಿತವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರವಿರುವ ಸರ್ಕಾರಿ ಜಮೀನಿನ ದೀರ್ಘಾವಧಿ ಗುತ್ತಿಗೆ ಅವಧಿಯನ್ನು ಸಹ 2009–10ರಲ್ಲಿಯೇ ಯೋಜಿಸಲಾಗಿದೆ.

ಅಧ್ಯಾಯ 5

ವೆಚ್ಚ ನಿರ್ವಹಣೆ ಮತ್ತು ಮುನ್ನಂದಾಜುಗಳು

37. ಎಂಟಿಎಫ್‌ಪಿ 2008–12ರಲ್ಲಿ ತಿಳಿಸಿರುವಂತೆ, ಉತ್ಪಾದನಾ/ಆದ್ಯತಾ ವಲಯಗಳಿಗಾಗಿ ಹೆಚ್ಚಿಸಿರುವ ಹಂಚಿಕೆಯಿಂದ ಹಣದ ಮೌಲ್ಯವನ್ನು ಪಡೆಯಬೇಕಾದರೆ ಉತ್ತಮ ಫಲಿತಾಂಶ ಹಾಗೂ ಮಾಹಿತಿಗಳನ್ನು ಪಡೆಯಲು ವೆಚ್ಚದ ಗುಣಮಟ್ಟದಲ್ಲಿ ನಿರಂತರವಾದ ಸುಧಾರಣೆ ಮಾಡುವ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ, ರಾಜ್ಯವು ಪ್ರಸ್ತುತ ವರ್ಷದ ಅವಧಿಯಲ್ಲಿ ಎರಡು ಪ್ರಮುಖ ಕಾರ್ಯಾರಂಭಗಳನ್ನು ಅಂದರೆ, ಮಾಸಿಕ ಕಾರ್ಯಕ್ರಮ ಅನುಷ್ಠಾನ ಕ್ಯಾಲೆಂಡರ್ (ಎಂಪಿಐಸಿ) ಮತ್ತು ಕಾರ್ಯಕ್ರಮ ನಿರ್ವಹಣಾ ಬಜೆಟಿಂಗ್ (ಪಿಪಿಬಿ) ಇದನ್ನು ಎಂಟಿಎಫ್‌ಪಿ 2009–13ರ 6ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

38. ಈ ಮೊದಲು ವಿವರಿಸಿರುವಂತೆ, ರಾಜ್ಯವು, ಉತ್ತಮ ವೆಚ್ಚ ನಿರ್ವಹಣೆಗಾಗಿ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅದು ಸಾಮಾಜಿಕ ಹಾಗೂ ಆರ್ಥಿಕ

ಸೇವೆಗಳಿಗೆ ಅನುಕೂಲ ಕಲ್ಪಿಸಲು ತನ್ನ ವೆಚ್ಚವನ್ನು ಮರುಕ್ರಮಗೊಳಿಸುವಲ್ಲಿ ಸಮರ್ಥವಾಗಿದೆ. ಸಾಮಾಜಿಕ ಸೇವೆಗಳ ಮೇಲಿನ ವೆಚ್ಚದ ಜಿಎಸ್‌ಡಿಪಿಯ ಶೇಕಡಾವಾರು 2002–03 ರಲ್ಲಿ ಶೇ.5.71ರಿಂದ 2008–09ರಲ್ಲಿ ಶೇ.8–6ರ ವರೆಗೆ (ಬಿಇ) ಹೆಚ್ಚಾಗಿದೆ. ಅದೇ ರೀತಿಯಲ್ಲಿ ಆರ್ಥಿಕ ಸೇವೆಗಳ ಮೇಲಿನ ವೆಚ್ಚದ ಜಿಎಸ್‌ಡಿಪಿಯ ಶೇಕಡಾವಾರು ಅದೇ ಅವಧಿಯಲ್ಲಿ ಶೇ.6.34ರಿಂದ ಶೇ.7.84ರವರೆಗೆ ಹೆಚ್ಚಾಗಿದೆ. ರಾಜ್ಯವು ವೇತನ ವೆಚ್ಚ ಹೆಚ್ಚಾಗದಂತೆ ನೋಡಿಕೊಳ್ಳಲು ಅನೇಕ ಕ್ರಮಗಳನ್ನು ಸಹ ತೆಗೆದುಕೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕು ತನ್ನ ವರದಿಯೊಂದರಲ್ಲಿ, (ರಾಜ್ಯ ಹಣಕಾಸು–ರಾಜ್ಯ ಮುಂಗಡ ಪತ್ರಗಳ ಒಂದು ಅಧ್ಯಯನ, 2007–08) ಕರ್ನಾಟಕದಲ್ಲಿ ವೇತನಗಳ ಮೇಲಿನ ವೆಚ್ಚವು ಕರ್ನಾಟಕದ ಒಟ್ಟು ರಾಜಸ್ವ ವೆಚ್ಚದ, ಎಲ್ಲಾ ರಾಜ್ಯ ಸರಾಸರಿಯಾದ ಶೇ. 29ಕ್ಕೆ ಹೋಲಿಸಿದಾಗ, ಅತ್ಯಂತ ಕಡಿಮೆಯಾಗಿದೆಯೆಂದು ತಿಳಿಸಿದೆಯೆಂಬುದನ್ನು ಗಮನಿಸುವುದು ಸೂಕ್ತ.

39. ತನ್ನ ವೆಚ್ಚ ಕಾರ್ಯತಂತ್ರದ ಒಂದು ಭಾಗವಾಗಿ, ರಾಜ್ಯವು ಹೆಚ್ಚಿನ ಆದ್ಯತೆಯುಳ್ಳ ವಿವಿಧ ಅಭಿವೃದ್ಧಿ ವಲಯಗಳಲ್ಲಿ ಹೆಚ್ಚಿನ ವೆಚ್ಚಗಳಿಗೆ ಮೀಸಲಿಡಲು ಪ್ರಯತ್ನಿಸುತ್ತಿದೆ. ಈ ಕೆಳಗಿನ ವಿಭಾಗದಲ್ಲಿ ಆದ್ಯತೆಯ ಅಭಿವೃದ್ಧಿ ವಲಯಗಳ ವೆಚ್ಚ ಕಾರ್ಯತಂತ್ರವನ್ನು ಸ್ಥೂಲವಾಗಿ ನಿರೂಪಿಸಲಾಗಿದೆ.

40. ಅಧ್ಯಾಯ–3ರಲ್ಲಿ ತೋರಿಸಿರುವಂತೆ, ಒಟ್ಟು ರಾಜ್ಯದ ಆಂತರಿಕ ಉತ್ಪನ್ನದಲ್ಲಿ ಕೃಷಿ ವಲಯದ ಕೊಡುಗೆಯು ಕಡಿಮೆಯಾಗುತ್ತಿದ್ದು, ಅದರ ಬೆಳವಣಿಗೆಯು, ಅರ್ಥ ವ್ಯವಸ್ಥೆಯಲ್ಲಿಯ ಇತರ ವಲಯಗಳ ಬೆಳವಣಿಗೆಯೊಂದಿಗೆ ಸಮಾನವಾಗಿ ಸಾಗಲು ಸಮರ್ಥವಾಗಿರುವುದಿಲ್ಲ. ಆದಾಗ್ಯೂ ಕೃಷಿಯನ್ನು ಅವಲಂಬಿಸಿರುವವರ ಸಂಖ್ಯೆ ಕಡಿಮೆಯಾಗಿಲ್ಲದಿರುವುದರಿಂದ ತಲಾ ಆದಾಯದ ಮಟ್ಟಗಳಲ್ಲಿ ಸ್ಥಗಿತತೆಯುಂಟಾಗಲು ಕಾರಣವಾಗಿದೆ. ಆದ್ದರಿಂದ ಕೃಷಿ ಉತ್ಪಾದಕತೆಯು, ರಾಜ್ಯ ಸರ್ಕಾರ ಗಮನ ನೀಡಬೇಕಾಗಿರುವ ಪ್ರಮುಖ ಕ್ಷೇತ್ರಗಳ ಪೈಕಿ ಒಂದಾಗಿದೆ. 2007–08ರ ಆರ್ಥಿಕ ಸಮೀಕ್ಷೆಯ ಅನುಸಾರ ಪ್ರಾಥಮಿಕ ವಲಯದ ಶೇ.85ರಷ್ಟನ್ನು ನೀಡುವಂತಹ ಕೃಷಿಯು 2008–09ರ ಅವಧಿಯಲ್ಲಿ ಬೆಳವಣಿಗೆಯ ದರ ಶೇ.5.7ರಷ್ಟು ಕಡಿಮೆಯಾಗಿದೆ. ಇಂತಹ ತೀವ್ರ ಇಳಿಕೆ ಪ್ರಮಾಣವನ್ನು ನಿಭಾಯಿಸಲು ಕೃಷಿಗೆ ಗಣನಾರ್ಹ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಹಂಚಿಕೆ ಮಾಡಬೇಕಾಗಿದೆಯಷ್ಟೇ ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗವನ್ನು ತಡೆಗಟ್ಟಲು ಇದನ್ನು ಹೆಚ್ಚಿಸುವ ಅವಶ್ಯಕತೆ ಇದೆ.

41. ತೋಟಗಾರಿಕಾ ವಲಯಕ್ಕೆ ನಿರ್ದಿಷ್ಟ ಪ್ರೋತ್ಸಾಹಕಗಳನ್ನು ಒದಗಿಸಲು ಅಧಿಕಾರಿಗಳ ತಂಡದ ಶಿಫಾರಸುಗಳ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ ಲಭ್ಯವಿರುವ ನಿಧಿಗಳನ್ನು ರಾಜ್ಯಗಳ ಸ್ವಂತ ಸಂಪನ್ಮೂಲಗಳ ಮುಖಾಂತರ ನೇರವಾಗಿ, ಪ್ರಜ್ಞಾಪೂರ್ವಕವಾಗಿ ಒಟ್ಟಿಗೆ ಸೇರಿಸುವ

ಮೂಲಕ ವಿಸ್ತಾರಣಾ ಚಟುವಟಿಕೆಗಳಿಗಾಗಿ ಸ್ಕೀಮುಗಳನ್ನು ಯೋಜಿಸಲಾಗಿದೆ ಮತ್ತು ಸಮಯೋಚಿತ ಸಾಲ ಹಾಗೂ ಐಇಸಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. 10 ಎಚ್‌ಪಿ ಗಿಂತ ಕಡಿಮೆಯಿರುವ ಐಪಿ ಸೆಟ್‌ಗಳನ್ನು ಬಳಸಿ ರೈತರಿಗೆ ಉಚಿತ ವಿದ್ಯುಚ್ಛಕ್ತಿಯನ್ನು ಒದಗಿಸುವುರದ ಜೊತೆಗೆ ನೀರಾವರಿ ಪ್ರದೇಶವನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

42. ಕೌಶಲ್ಯವನ್ನು ಅಭಿವೃದ್ಧಿಪಡಿಸುವ ಅಥವಾ ಹೆಚ್ಚಿಸುವ ಸ್ಕೀಮುಗಳನ್ನು ಬಳಸಿ ಹೆಚ್ಚು ಗಳಿಸುವಂಥ ವೃತ್ತಿಗಳನ್ನು ಜನರು ಅವಲಂಬಿಸುವಂತೆ ಮಾಡಲು ಕೈಗೊಳ್ಳಲಾಗುವ ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ರೈತರು ಕೃಷಿ ಚಟುವಟಿಕೆಗಳ ವೈವಿಧ್ಯತೆಯನ್ನು ಕೈಗೊಂಡ ಹೊರತು ಅಥವಾ ಆಧುನಿಕ ವಿಧಾನಗಳನ್ನು ಬಳಸಿದ ಹೊರತು, ನ್ಯಾಯವಾದ ಲಾಭಗಳನ್ನು ಗಳಿಸವುದು ವಾಸ್ತವವಾಗಿ ಕಷ್ಟಕರ ಕೆಲಸವಾಗಿ ಕಂಡು ಬರುತ್ತದೆ. ಅದಕ್ಕೆ ಮತ್ತೆ ಸಾಕಷ್ಟು ಬಂಡವಾಳ ಹೂಡಿಕೆ ಅಗತ್ಯವಾಗಿ ಬೇಕಾಗುತ್ತದೆ.

ಕೋಷ್ಟಕ 8

ಕೃಷಿ ಮತ್ತು ತೋಟಗಾರಿಕೆ, ಗ್ರಾಮೀಣಾಭಿವೃದ್ಧಿಯ ಅಡಿಯಲ್ಲಿ ರೂಪರೇಖೆ

ವರ್ಷಗಳು	ಕೃಷಿ ಮತ್ತು ತೋಟಗಾರಿಕೆ	ಬೆಳವಣಿಗೆ	ಗ್ರಾಮೀಣಾಭಿವೃದ್ಧಿ	ಬೆಳವಣಿಗೆ
2004–05	787		1326	
2005–06	674	–14.36%	1639	23.60%
2006–07	874	29.74%	2016	23.00%
2007–08	1264	44.62%	2549	26.44%
2008–09(ಆರ್‌ಇ)	1506	19.15%	2831	11.06%
2009–10(ಬಿಇ)	1685	11.89%	3064	8.23%

ಬಿ. ಗ್ರಾಮೀಣಾಭಿವೃದ್ಧಿ

43. ರಸ್ತೆ ಸಂಪರ್ಕ ವ್ಯವಸ್ಥೆ ಮತ್ತು ಸ್ವಚ್ಛ ನಿರಂತರ ಹಾಗೂ ಶುದ್ಧ ಕುಡಿಯುವ ನೀರನ್ನು ಒದಗಿಸುವ ಘೋಷಿತ ಗುರಿಯನ್ನು ಗಮನದಲ್ಲಿರಿಸಿಕೊಂಡು ಗ್ರಾಮಗಳಿಗೆ ರಸ್ತೆ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಇನ್ನಷ್ಟು ಲಕ್ಷ್ಯ ಹರಿಸಲಾಗುವುದು. ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ನಿರಂತರ ಜ್ಯೋತಿ, ಮುಖ್ಯಮಂತ್ರಿಯವರ ಗ್ರಾಮೀಣ ಯೋಜನೆ, ಎನ್‌ಆರ್‌ಇಜಿಎ, ಸಂಪೂರ್ಣ

ನೈರ್ಮಲ್ಯ ಆಂದೋಳನ ಮುಂತಾದ ಯೋಜನೆಗಳನ್ನು ಗ್ರಾಮಗಳ ಅಭಿವೃದ್ಧಿಗೆ ನೆರವಾಗುವಂತೆ ಗುರಿ ಸಾಧನೆಯನ್ನು ರೂಪಿಸಲಾಗುತ್ತದೆ.

ಸಿ. ವಿದ್ಯುತ್

44. ಕೇವಲ ವಿದ್ಯುತ್ ಕೊರತೆಯಿರುವ ಕಾರಣದಿಂದಷ್ಟೇ ಅಲ್ಲ ಪ್ರಸರಣ/ವಿತರಣೆಗಳಲ್ಲಿ ಶೇ 25ಕ್ಕಿಂತಲೂ ಹೆಚ್ಚು ಗಣನೀಯ ನಷ್ಟವುಂಟಾಗಿರುವುದರಿಂದ ವಿದ್ಯುತ್ ವಲಯದಲ್ಲಿ ಉತ್ಪಾದನೆ ಹಾಗೂ ಪ್ರಸರಣೆ ಇವೆರಡಲ್ಲೂ ಸಾಕಷ್ಟು ಬಂಡವಾಳ ಹೂಡಿಕೆ ಅಗತ್ಯವಾಗಿದೆ. ಈ ಕ್ಲಿಷ್ಟಪರಿಸ್ಥಿತಿಯನ್ನು ಗುರುತಿಸಿ ಸರ್ಕಾರವು ಕರ್ನಾಟಕ ವಿದ್ಯುತ್ ನಿಗಮಕ್ಕೆ 500 ಕೋಟಿ ರೂಗಳ ಈಕ್ವಿಟಿಯನ್ನು ನೀಡಲು ನಿರ್ಧರಿಸಿದೆ. ಕರ್ನಾಟಕ ಸರ್ಕಾರವು ಸ್ವತಃ ತಾನೇ ಅಥವಾ ಖಾಸಗಿ ವಲಯದವರ ಸಹಭಾಗಿತ್ವದೊಂದಿಗೆ ವಿವಿಧ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ದೀರ್ಘಾವಧಿ ದೂರದರ್ಶಿತ್ವದ ಬಗ್ಗೆ ಇನ್ನಷ್ಟು ಆಲೋಚಿಸಲಾಗುತ್ತಿದೆ.

ಡಿ. ಆರೋಗ್ಯ ಮತ್ತು ಶಿಕ್ಷಣ

45. ರಾಜ್ಯದ ಅಭಿವೃದ್ಧಿಯಲ್ಲಿ ಆರೋಗ್ಯ ಹಾಗೂ ಶಿಕ್ಷಣವಲಯಗಳು ಅತ್ಯಂತ ಮಹತ್ವ ಹೊಂದಿವೆ. ಕೋಷ್ಟಕ 9ರಲ್ಲಿ ಆರೋಗ್ಯ ಮತ್ತು ಶಿಕ್ಷಣ ವೆಚ್ಚಗಳನ್ನು ತೋರಿಸಲಾಗಿದೆ. ರಾಜ್ಯದ ಜನರು ಆರೋಗ್ಯವಾಗಿ ಸುಶಿಕ್ಷಿತರಾಗಿದ್ದರೆ ಮಾತ್ರ ಮಾನವಸಂಪನ್ಮೂಲದ ಪ್ರಯೋಜನವನ್ನು ರಾಜ್ಯವು ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ, ರಾಜ್ಯವು ಈ ಎರಡೂ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡುತ್ತಿದೆ. ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಗಳ ಮೇಲೆ ಮಾಡಲಾಗುವ ವೆಚ್ಚಗಳಲ್ಲಿ ಕ್ರಮವಾಗಿ ಅವುಗಳಲ್ಲಿ ಈಗ ಇರುವ ಶೇ.3.7 ಮತ್ತು ಶೇ.1ರಷ್ಟು ಜಿಎಸ್‌ಡಿಪಿ ಮಟ್ಟಗಳಿಂದ ಶೇ.5 ಮತ್ತು ಶೇ.1.5ರಷ್ಟಕ್ಕೆ ಹೆಚ್ಚಿಸುವ ಅವಶ್ಯಕತೆ ಇರುವುದನ್ನು ಮನಗಂಡಿದೆ. ಈ ಸಂಬಂಧವಾಗಿ ಅಗತ್ಯವಾಗುವ ಬೃಹತ್ ವೆಚ್ಚವನ್ನು ಪರಿಗಣಿಸಿ ಸರ್ಕಾರವು ಹದಿಮೂರನೇ ಹಣಕಾಸು ಆಯೋಗದಿಂದ ವಿಶೇಷ ಅನುದಾನವನ್ನು ಕೋರಿದೆ.

46. ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರವಲ್ಲದೆ ಪ್ರೌಢ ಶಿಕ್ಷಣ ಮತ್ತು ಕಾಲೇಜು ಶಿಕ್ಷಣಕ್ಕೂ ಒತ್ತು ನೀಡಲಾಗುತ್ತಿದೆ. ಇದು ಕಾರ್ಯನೀತಿಯ ನಿರ್ಧಾರವಾಗಿರುವುದರಿಂದ ಸರ್ಕಾರವು ವಿವಿಧ ಜಿಲ್ಲೆಗಳಲ್ಲಿ ಬಹುಸಂಖ್ಯೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಿದೆ. ಈ ಸಂಸ್ಥೆಗಳಲ್ಲಿ ವಿಜ್ಞಾನವನ್ನು ಒಂದು ಅಭ್ಯಾಸ ವಿಷಯವನ್ನಾಗಿ ಕಲ್ಪಿಸುವುದಕ್ಕೆ ಒತ್ತು ನೀಡಲಾಗಿದೆ. ಪ್ರತಿಭಾವಂತರಾದ ಆದರೆ ಹಣಕಾಸಿನ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಶಿಕ್ಷಣ ಸಾಲಕ್ಕೆ ಬಡ್ಡಿ ಸಹಾಯಧನವನ್ನು ಸಹ ನೀಡಲಾಗುತ್ತಿದೆ. ಪ್ರೌಢ ಶಾಲೆಯಲ್ಲಿ ಉತ್ತೀರ್ಣನಾಗುವುದು ಅಥವಾ ಪದವಿಯನ್ನು ಪಡೆಯುವ ಸಾಧನೆಯೊಂದೇ ಮಾತ್ರವಲ್ಲದೇ, ಉದ್ಯೋಗಾರ್ಹತೆ, ಜೀವನೋಪಾಯದ ಗಳಿಕೆ ಮತ್ತು ಜೀವನ ಕೌಶಲ್ಯ ಕಲಿಕೆಗಳ ನಿರ್ಧಾರಕ ಮಾನದಂಡವಾದ ಉತ್ತಮ ಗುಣಮಟ್ಟದ ಶಿಕ್ಷಣ ಈಗಿರುವ

ಸವಾಲಾಗಿದೆ. ಈಗಿನ ಯುವ ಕಾರ್ಯದಳವನ್ನು ಉತ್ಪಾದನಾದಾಯಕವನ್ನಾಗಿ ನಿಯೋಜಿಸುವಲ್ಲಿ ಯಾವ ರೀತಿಯ ಅಗತ್ಯವಾದ ಕೌಶಲ್ಯಗಳನ್ನು ಅವರಿಗೆ ನೀಡಬೇಕು ಎಂಬುದನ್ನು ನಿರ್ಧರಿಸುವುದು ಅಗತ್ಯವಿದೆ. ವಿದ್ಯಾರ್ಥಿಯು ಸರ್ಕಾರದ ನೇರವಾದ ಸಹಾಯ ಅಥವಾ ಕೈಗಾರಿಕಾ ವಲಯದೊಂದಿಗಿನ ಸಹಭಾಗಿತ್ವದ ಮೂಲಕ ಕಲಿಯುವುರಿಂದ ಕೆಲಸದಲ್ಲಿ ತೊಡಗಲು ಸಮರ್ಥ ವ್ಯಕ್ತಿಯನ್ನಾಗಿ ರೂಪಿಸಬಹುದಾಗಿದೆ. ಈ ಪ್ರಯತ್ನದಲ್ಲಿ ಜ್ಞಾನ ಆಯೋಗ ಮತ್ತು ಕೌಶಲ್ಯ ಮಿಷನ್‌ಗಳು ಮುಂಚೂಣಿಯಲ್ಲಿವೆ.

ಕೋಷ್ಟಕ 9

ಆರೋಗ್ಯ ಮತ್ತು ಶಿಕ್ಷಣಕ್ಕೆ ಮಾಡಿದ ವೆಚ್ಚ

ಕೋಟಿ ರೂ.ಗಳಲ್ಲಿ

ವರ್ಷಗಳು	ಆರೋಗ್ಯ	ಬೆಳವಣಿಗೆ	ಶಿಕ್ಷಣ	ಬೆಳವಣಿಗೆ
2004–05	1044		4286	
2005–06	1147	9.81%	4793	11.83%
2006–07	1353	18.02%	5631	17.50%
2007–08	1769	30.75%	6859	21.81%
2008–09 (ಆರ್‌ಇ)	2202	24.48%	8643	26.01%
2009–10 (ಬಿಇ)	2281	3.59%	8888	2.83%

ಇ. ಪ್ರಾದೇಶಿಕ ಅಸಮತೋಲನಗಳ ನಿವಾರಣೆ

47. ಡಾ॥ ನಂಜುಂಡಪ್ಪ ಸಮಿತಿಯ ವರದಿಯೆಂದೇ ಜನಪ್ರಿಯವಾದ ಪ್ರಾದೇಶಿಕ ಅಸಮತೋಲನಗಳನ್ನು ಕುರಿತ ಉನ್ನತಾಧಿಕಾರ ಸಮಿತಿಯ ವರದಿ(ಎಚ್‌ಪಿಸಿಆರ್‌ಆರ್‌ಐ) ಯಂತೆ ರಾಜ್ಯದ ಹಿಂದುಳಿದ ಪ್ರದೇಶಗಳಿಗಾಗಿ ಯೋಜನಾ ಹಂಚಿಕೆಯಾಗಿ 2007–08ರ ಬಜೆಟ್‌ನಲ್ಲಿ 2611 ಕೋಟಿ ರೂಪಾಯಿಗಳನ್ನು ಮೀಸಲಿರಿಸುವ ಮೂಲಕ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ)ಯನ್ನು ಆರಂಭಿಸಲಾಗಿದೆ. 2008–09ರಲ್ಲಿ, ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ) ಯಡಿಯಲ್ಲಿ 2547 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿತ್ತು. ಈ ಹಂಚಿಕೆಯನ್ನು ಪ್ರಮುಖವಾಗಿ ಗ್ರಾಮೀಣ ಅಭಿವೃದ್ಧಿ, ವಿದ್ಯುತ್ತು, ಸಾರಿಗೆ, ಕೃಷಿ ಮತ್ತು ನೀರಾವರಿ ಕ್ಷೇತ್ರಗಳಿಗೆ ಮಾಡಲಾಗಿದೆ. ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲನಗಳ ನಿವಾರಣೆಗೆ ಇರುವ ಹಣಕಾಸು ಅಗತ್ಯತೆಯನ್ನು ಪರಿಗಣಿಸಿದ ಸರ್ಕಾರವು ವಿಶೇಷ

ಅನುದಾನಕ್ಕಾಗಿ ಹದಿಮೂರನೆಯ ಹಣಕಾಸು ಆಯೋಗದ ಮುಂದೆ ಕೋರಿಕೆಯೊಂದನ್ನು ಕೂಡ ಇಟ್ಟಿದೆ. ವಿಷಯ ಶೀರ್ಷಿಕೆಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ)ಗಳನ್ನು ಸುಲಭವಾಗಿ ಗುರುತಿಸುವುದಕ್ಕಾಗಿ ವಿಶಿಷ್ಟ ಸಂಖ್ಯೆಯ ಲೆಕ್ಕ ಶೀರ್ಷಿಕೆಯ ಕೋಡ್ ಕೊಡಲಾಗಿದೆ. ಉನ್ನತಾಧಿಕಾರ ಸಮಿತಿಯು ನಿರಂತರವಾಗಿ ಈ ಯೋಜನೆಗಳ ಕಾರ್ಯಾನುಷ್ಠಾನದ ಉಸ್ತುವಾರಿ ನಡೆಸುತ್ತದೆ.

ಎಫ್. ಬಡ್ಡಿ ಸಂದಾಯಗಳು, ವೇತನಗಳು, ನಿವೃತ್ತಿ ವೇತನಗಳು ಮತ್ತು ಸಹಾಯ ಧನಗಳು

48. ಬಡ್ಡಿ ಸಂದಾಯಗಳು, ವೇತನಗಳು, ನಿವೃತ್ತಿ ವೇತನಗಳು ಮತ್ತು ಸಹಾಯಧನದ ಮೇಲಿನ ವೆಚ್ಚವು, 2008-09ರ ರಾಜಸ್ವ ವೆಚ್ಚದಲ್ಲಿನ ಜಿಎಸ್‌ಡಿಪಿಯ 8.28 ಶೇಕಡಾವಾರು ಪ್ರಮಾಣದಲ್ಲಿರುವುದೆಂದು ನಿರೀಕ್ಷಿಸಲಾಗಿದೆ. 2002-03ರಲ್ಲಿದ್ದ ಶೇಕಡಾ 9 ರಿಂದ ಇಳಿಮುಖವಾಗಿ 2012-13ನೇ ವರ್ಷದವರೆಗೆ, ಈ ವೆಚ್ಚಗಳು ಶೇಕಡಾ 8.19 ರೊಳಗೆ ಇರುವುದಾಗಿ ಅಂದಾಜು ಮಾಡಲಾಗಿದ್ದು, ಅಭಿವೃದ್ಧಿ ವೆಚ್ಚಕ್ಕಾಗಿ ಹೆಚ್ಚಿನ ವಿತ್ತೀಯ ಅವಕಾಶ ನೀಡಲಾಗಿದೆ.

ಅಧ್ಯಾಯ 6

ಸಾರ್ವಜನಿಕ ಹಣಕಾಸು ನಿರ್ವಹಣೆ ಮತ್ತು ವ್ಯವಸ್ಥಿತ ಸುಧಾರಣೆಗಳು

49. ರಾಜ್ಯದ ಖಜಾನೆಯಲ್ಲಿ 7 ವರ್ಷಗಳ ಹಿಂದೆ ಅನುಷ್ಠಾನಗೊಂಡ "ಖಜಾನೆ" ಯೋಜನೆಯು ಖಜಾನೆಯಲ್ಲಿನ ಕಾರ್ಯವನ್ನು ಯಾಂತ್ರೀಕೃತಗೊಳಿಸುವಲ್ಲಿ ನೆರವಾಯಿತು. ಸರ್ಕಾರ ರಾಜ್ಯದ ಹಣಕಾಸುಗಳನ್ನು ಸಮರ್ಥವಾಗಿ ನಿರ್ವಹಿಸಲು ಬೇಕಾಗಿರುವ ಸದ್ಯದ ಅಗತ್ಯಗಳು ಖಜಾನೆ ಯೋಜನೆಯ ಸಾಮರ್ಥ್ಯವನ್ನು ಮೀರಿ ಬೆಳೆದಿದೆ. ಮುಂದಿನ ವರ್ಷದಲ್ಲಿ, ರಾಜ್ಯ ಹಣಕಾಸುಗಳ ಸಮಗ್ರ ನಿರ್ವಹಣೆಗಾಗಿ ಮಾಹಿತಿ ತಂತ್ರಜ್ಞಾನವನ್ನಾಧರಿಸಿದ ಒಂದು ಬೃಹತ್ ಯೋಜನೆಯನ್ನು ಕೈಗೊಳ್ಳಲು ಯೋಜಿಸಿದೆ. ಮತ್ತು ಈ ಯೋಜನೆಯು, ಸಾರ್ವಜನಿಕರು, ಬ್ಯಾಂಕುಗಳು, ಕಾರ್ಯವಾಹಿ ಇಲಾಖೆಗಳು ಮತ್ತು ಮಹಾಲೇಖಪಾಲರಂತಹ ಎಲ್ಲ ಫಲಾನುಭವಿಗಳಿಗೆ ಅಧಿಕಾರ ನೀಡಿಕೆ ನಿಧಿಗಳು ಮತ್ತು ಮಾಹಿತಿಗಳು ವಿದ್ಯುನ್ಮಾನ ಮಾಧ್ಯಮದ ಮೂಲಕ ದೊರೆಯುವಂತೆ ಮಾಡುವ ಗುರಿ ಹೊಂದಿದೆ. ಖಜಾನೆಯಲ್ಲಿನ ಕಾರ್ಯವಿಧಾನವನ್ನು ಸುಧಾರಿಸುವುದು ಅಷ್ಟೇ ಅಲ್ಲದೆ ಫಲಾನುಭವಿಗಳಿಗೆ ಸುಲಭ ಹಾಗೂ ಸ್ಥಿರವಾದ ಸೇವೆ ದೊರೆಯುವಂತೆ ಮಾಡುವುದಕ್ಕೂ ಗಮನ ನೀಡಲಾಗುತ್ತದೆ.

50. ಆರ್ಥಿಕ ವರ್ಷದ ಕೊನೆಯ ತಿಂಗಳಲ್ಲಿ ವೆಚ್ಚದ ಹೆಚ್ಚಳವನ್ನು ತಪ್ಪಿಸಬಹುದಾಗಿದ್ದರೂ ಹಾಗೆ ತಪ್ಪಿಸದಿರುವುದರಿಂದ ವೆಚ್ಚದ ಗುಣಮಟ್ಟ ಕಡಿಮೆಯಾಗುತ್ತದೆ ಹಾಗೂ ವೈಯಕ್ತಿಕ ಠೇವಣಿ ಖಾತೆಗಳಲ್ಲಿ ನಿಧಿಗಳನ್ನು ಇಡಲು ಕಾರಣವಾಗಿದ್ದು ಇದು ವರ್ಷದಲ್ಲಿ ವೆಚ್ಚ ಹೆಚ್ಚಾಗಿದೆಯೆಂಬ ಭ್ರಮೆಯನ್ನುಂಟು ಮಾಡುತ್ತದೆ. ಎಂಟಿಎಫ್‌ಪಿ 2007-08 ಮತ್ತು ಎಂಟಿಎಫ್‌ಪಿ 2008-09ರಲ್ಲಿನ

ಬದ್ಧತೆಯನುಸಾರ, ಸರ್ಕಾರವು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎಲ್ಲ ಯೋಜನೆಗಳಿಗಾಗಿ ಡಿಸೆಂಬರ್ 2008ರಿಂದ ಜಾರಿಗೆ ಬರುವಂತೆ ಮಾಸಿಕ ಯೋಜನಾ ಅನುಷ್ಠಾನ ಕ್ಯಾಲೆಂಡರ್‌ನ್ನು ಆರಂಭಿಸಿದೆ. ಎಂಪಿಐಸಿಯು ಯೋಜನಾ ಕಾರ್ಯಕ್ರಮಗಳ ಮೇಲ್ವಿಚಾರಣೆಗೆ ಬಳಸುವ ಈಗಿರುವ ಎಂಎಂಆರ್ ಪ್ರಪತ್ರವನ್ನು ಬಳಸಿಕೊಳ್ಳುವುದೇ, ಎಂಪಿಐಸಿಯು ಅಲ್ಲದೆ ಪ್ರತಿಯೊಬ್ಬ ಕಾರ್ಯಕ್ರಮ ವ್ಯವಸ್ಥಾಪಕನಿಗೆ, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದವರೆಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಸೇರಿರುವ ಕಾರ್ಯ ವಿಧಾನಗಳ ಮೇಲ್ವಿಚಾರಣೆ ಮಾಡುವುದು ಸಾಧ್ಯವಾಗುವಂತೆ ಮಾಡುತ್ತದೆ. ಎಂಪಿಐಸಿಯ ಪ್ರಮುಖ ಗುರಿಯು ಗುಣಮಟ್ಟ ಮತ್ತು ವೆಚ್ಚದ ಗತಿಯನ್ನು ಸುಧಾರಿಸುವುದಾಗಿದೆ ಮತ್ತು ರಾಜಸ್ವ ಮತ್ತು ವೆಚ್ಚದ ಅಸಮ ಪ್ರಮಾಣವನ್ನು ಆದಷ್ಟು ಕಡಿಮೆ ಮಾಡುವುದಾಗಿದೆ. ಡಿಸೆಂಬರ್ 2008ರಲ್ಲಿ ಹೊರಡಿಸಿದ ಮಾರ್ಗಸೂಚಿಗಳು ವ್ಯಾಪಕ ಸಮಾಲೋಚನೆಗಳ ತರುವಾಯ ರೂಪಿಸಲಾದುದಾಗಿದೆ. ನಿರ್ದಿಷ್ಟ ಇಲಾಖೆಗಳ ಪ್ರಮುಖ ಅಧಿಕಾರಿಗಳಿಗೆ ಗೊತ್ತುಪಡಿಸಿದ ಪ್ರಪತ್ರಗಳನ್ನು ಬಳಸಲು ಸಮಗ್ರ ತರಬೇತಿಯನ್ನು ನೀಡಲಾಯಿತು. ನೂತನ ಮೇಲ್ವಿಚಾರಣಾ ಸಾಧನವನ್ನು ಕಾರ್ಯವಾಹಿ ಇಲಾಖೆಗಳು 2009-10ನೇ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ಇದು ಉತ್ತಮ ಬಜೆಟ್ ನಿರ್ವಹಣೆಗೆ ನೆರವಾಗುತ್ತದೆ.

51. ಹಾಗೆಯೇ, ಸರ್ಕಾರವು ಎಲ್ಲ ಇಲಾಖೆಗಳಲ್ಲಿ ಕಾರ್ಯಕ್ರಮ ನಿರ್ವಹಣಾ ಆಯವ್ಯಯವನ್ನು (ಪಿಪಿಬಿ) ಜಾರಿ ಮಾಡಲು ಉದ್ದೇಶಿಸಿದೆ. ಪ್ರಸ್ತುತ ಇರುವ ಕಾರ್ಯಕ್ರಮ ನಿರ್ವಹಣಾ ಆಯವ್ಯಯ ನಮೂನೆಗಳನ್ನು ಇನ್ನೂ ಹೆಚ್ಚು ಬಳಕೆದಾರ-ಸ್ನೇಹಿಯನ್ನಾಗಿ ಮಾಡುವ ಸಲುವಾಗಿ ಅದನ್ನು ಸರಳೀಕರಿಸಲು ಕ್ರಮ ಕೈಗೊಳ್ಳಲಾಗಿದೆ. ಪಿಪಿಬಿ ನಮೂನೆಗಳನ್ನು ಸರಳೀಕರಿಸುವುದಕ್ಕೆ ಮತ್ತು 2009-10ರಿಂದ ಪ್ರಾರಂಭಿಸಿ ಈ ಇಲಾಖೆಗಳಲ್ಲಿ ಕಾರ್ಯಕ್ರಮ ನಿರ್ವಹಣಾ ಆಯವ್ಯಯವನ್ನು ಅನುಷ್ಠಾನಗೊಳಿಸುವುದಕ್ಕೆ ಹತ್ತು ಪ್ರಮುಖ ವೆಚ್ಚ ಇಲಾಖೆಗಳಿಂದ ನಾಮನಿರ್ದೇಶಿಸಲಾದ ನೋಡಲ್ ಅಧಿಕಾರಿಗಳು ಈ ತಂಡದ ಭಾಗವಾಗಿದ್ದಾರೆ. ಅತಿ ಹೆಚ್ಚು ಸಂಖ್ಯೆಯ ಯೋಜನೆಗಳಿಂದಾಗಿ ಗಮನವು ವಿಕೇಂದ್ರೀಕೃತವಾಗಿ ಪರಿಣಾಮಕಾರಿ ಅನುಷ್ಠಾನ ಮತ್ತು ಸೇವಾ ನೀಡಿಕೆ ಸಾಮರ್ಥ್ಯದಲ್ಲಿ ಹೊಂದಾಣಿಕೆ ಮಾಡಿಕ್ಕೊಳ್ಳಬೇಕಾಗುತ್ತದೆ. ಅಲ್ಲದೆ, ಹೆಚ್ಚಿನ ಸಂಖ್ಯೆಯ ಯೋಜನೆಗಳಿಂದಾಗಿ ಕಡಿಮೆಯಿರುವ ಸಂಪನ್ಮೂಲಗಳನ್ನು ಅಲ್ಪ ಪ್ರಮಾಣದಲ್ಲಿ ಹಂಚಿಕೆ ಮಾಡುವಂತಾಗುತ್ತದೆ, ಆ ಮೂಲಕ ಕೇಂದ್ರೀಕೃತ ಕ್ಷೇತ್ರಗಳಿಗೆ ಕಡಿಮೆ ಹಣಕಾಸು ಹಂಚಿಕೆ ಮಾಡಬೇಕಾಗುತ್ತದೆ. ಈ ಸಮಸ್ಯೆಯನ್ನು ನಿವಾರಿಸುವ ಕ್ರಮವಾಗಿ, ಯೋಜನೆಗಳನ್ನು ಕಾರ್ಯಕ್ರಮಗಳನ್ನಾಗಿ ಕ್ರೋಢೀಕರಿಸಲು ಮತ್ತು ಕಾರ್ಯಕ್ರಮ ಅನುಷ್ಠಾನವನ್ನು ಮೂಲಪರಿಕರ, ಪ್ರತಿಫಲ ಮತ್ತು ಫಲಶೃತಿಗಳನ್ನಾಗಿ ಹೊಂದಾಣಿಕೆ ಮಾಡಲು ಕಾರ್ಯಕ್ರಮ ನಿರ್ವಹಣಾ ಆಯವ್ಯಯವನ್ನು ಬಳಸಲಾಗುತ್ತದೆ.

52. ವಿವಿಧ ಆಯವ್ಯಯ ಶೀರ್ಷಿಕೆಗಳ ಅಡಿಯಲ್ಲಿ ನಿಧಿಗಳ ಬಿಡುಗಡೆಗಾಗಿನ ಕಾರ್ಯವಿಧಾನಗಳನ್ನು ವಿಸ್ತರಿಸುವ ಮತ್ತು ಏಕರೂಪಗೊಳಿಸುವ ಸಲುವಾಗಿ, ರಾಜಸ್ವ ಮತ್ತು ಬಂಡವಾಳ ವೆಚ್ಚಕ್ಕೆ ನಿಧಿಗಳ ಬಿಡುಗಡೆ ಮಾಡುವ ಸಂದರ್ಭದಲ್ಲಿ ಮತ್ತು ವೆಚ್ಚಕ್ಕೆ ಆಡಳಿತಾತ್ಮಕ್ಕೆ ಮಂಜೂರಾತಿ ನೀಡುವುದಕ್ಕಾಗಿ ಸರ್ಕಾರವು ಹೆಚ್ಚಿನ ಅಧಿಕಾರಗಳನ್ನು ಪ್ರತ್ಯಾಯೋಜಿಸಿದೆ. ವೆಚ್ಚದ ಪ್ರಗತಿಯನ್ನು ಅಂದಾಜುಮಾಡುವುದಕ್ಕೆ ಪರಿಣಾಮಕಾರಿ ದೂರದರ್ಶಿತ್ವ ಆಡಳಿತಯಂತ್ರವನ್ನು ಹೊಂದಲು ಹಾಗೂ ವೆಚ್ಚ ಮಾಡುವ ಪ್ರವೃತ್ತಿಯ ಬಗ್ಗೆ ಮತ್ತು ಆದ್ಯತಾ ಕ್ಷೇತ್ರಗಳಲ್ಲಿ ಸೂಕ್ತವಾಗಿ ಬಳಸುವುದಕ್ಕಾಗಿ ಉಳಿತಾಯಗಳನ್ನು ಗುರುತಿಸುವುದಕ್ಕೆ ಇಲಾಖೆಗಳಿಗೆ ಮಾರ್ಗದರ್ಶನ ನೀಡಲು ಯಾವುದೇ ತಿದ್ದುಪಡಿ ಕ್ರಮ ಕೈಗೊಳ್ಳುವುದು ಸಾಧ್ಯವಾಗುವಂತೆ, ಆರ್ಥಿಕ ವರ್ಷದ ಎರಡನೆ ಭಾಗದಲ್ಲಿ ನಿಧಿಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವುದನ್ನು ಈ ಆದೇಶಗಳು ಕಡ್ಡಾಯಗೊಳಿಸುತ್ತದೆ.

53. ವಿದ್ಯುತ್, ಆಹಾರ ಮತ್ತು ಸಾಮಾಜಿಕ ವಲಯಗಳಲ್ಲಿನ ಗಣನೀಯಪ್ರಮಾಣದ ಯೋಜನೇತರ ಸಹಾಯಧನಗಳು (ಬಹುತೇಕ 5000 ಕೋಟಿ ರೂ) ನಾಗರೀಕರ ಕ್ಷೇಮಾಭಿವೃದ್ಧಿಯ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಆದರೆ ಅಸಮರ್ಪಕ ಆಯ್ಕೆ, ಸೇವಾನೀಡಿಕೆ ವ್ಯವಸ್ಥೆಯಲ್ಲಿನ ಅಸಮರ್ಥತೆ ಮತ್ತು ಜವಾಬ್ದಾರಿಯ ಕೊರತೆಗಳಿಂದಾಗಿ ಆಡಳಿತ ಸಂಬಂಧಿತ ಸಮಸ್ಯೆಗಳು ಇನ್ನಷ್ಟು ಹೆಚ್ಚುತ್ತವೆ ಮತ್ತು ನೈತಿಕ ಮತ್ತು ಆರ್ಥಿಕ ಅಪಾಯವನ್ನು ಉಂಟು ಮಾಡುತ್ತವೆ. ಈ ಅಂಶಗಳನ್ನು ನಿಯಂತ್ರಿಸದಿದ್ದರೆ ಈ ಸದುದ್ದೇಶಪೂರಿತ ಸಹಾಯಧನಗಳು ಭವಿಷ್ಯದಲ್ಲಿ ಭರಿಸಲಾಗದ ಹೊರೆಯಾಗಬಹುದು ಮತ್ತು ಅತ್ಯಗತ್ಯ ಕ್ಷೇತ್ರಗಳಲ್ಲಿ ಸಾರ್ವಜನಿಕ ಹಣದ ಪರಿಣಾಮಕಾರಿ ಬಳಕೆಯನ್ನು ಮಾಡಲಾಗದಂಥ ಪರಿಸ್ಥಿತಿ ಉಂಟಾಗಬಹುದು. ಈ ಸವಾಲುಗಳನ್ನು ಎದುರಿಸಲು ಪಾಯಿಂಟ್ ಆಫ್ ಸೇಲ್ ಇನ್‌ಸ್ಟ್ರುಮೆಂಟ್, ಬಯೋಮೆಟ್ರಿಕ್ಸ್ ಮತ್ತು ಬಳಕೆ ಆಧಾರಿತ ಸಾಧನಗಳ ಮಾನದಂಡಗಳ ಮೂಲಕ ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಅಗತ್ಯ. ಹೊಣೆಗಾರಿಕೆಯನ್ನು ಖಚಿತಪಡಿಸುವಲ್ಲಿ ಮತ್ತು ಹಂಚಿಕೆ ಮಾಡಿದ ಅಥವಾ ಸರಬರಾಜು ಮಾಡಿದ ವಾಸ್ತವಿಕ ಪ್ರಮಾಣಗಳ ಮೇಲ್ವಿಚಾರಣೆ ಮಾಡಲು ಇವು ಸಹಾಯಕವಾಗುತ್ತದೆ. ಈ ಕ್ರಮಗಳಿಂದಾಗಿ ಸಹಾಯಧನಗಳನ್ನು ಪರಿಣಾಮಕಾರಿಯಾಗಿ ಮತ್ತು ಸಮಾನ ರೀತಿಯಲ್ಲಿ ವಿತರಣೆ ಮಾಡಲು, ಈ ರೀತಿಯಾಗಿ ಸಂಚಯಿತವಾದ ಉಳಿತಾಯಗಳ ಮೂಲಕ ಲಭ್ಯವಾಗುವ ವಿತ್ತೀಯ ಅವಕಾಶಗಳನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

ಅಧ್ಯಾಯ –7

ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು 2009–13

ಕೋಟಿ ರೂ.ಗಳಲ್ಲಿ

Item	2007–08	2008–09	2008–09	2009–10	2010–11	2011–12	2012–13
	A/c	BE	RE	BE	Proj.	proj.	proj.
ರಾಜಸ್ವ ಜಮೆಗಳು– ಅವುಗಳಲ್ಲಿ	37655	47240	42818	48389	52772	61998	72936
ರಾಜ್ಯದ ಸ್ವಂತ ತೆರಿಗೆ ರಾಜಸ್ವಗಳು	25987	31876	28764	32721	38252	46067	55318
ತೆರಿಗೆಯೇತರ ರಾಜಸ್ವಗಳು	3358	1932	1906	2130	2308	2517	2748
ಕೇಂದ್ರದಿಂದ ಬರುವ ಸಂಪನ್ಮೂಲಗಳು –ವರ್ಗಾವಣೆ	6779	7982	7152	7645	8769	10058	11502
–ಅನುದಾನಗಳು	1531	5450	4996	5893	6482	7130	7843
ರಾಜಸ್ವ ವೆಚ್ಚ– ಅವುಗಳಲ್ಲಿ	37375	45713	42050	47238	50847	56072	61836
ಬಡ್ಡಿ	4506	5278	4778	5578	6499	7522	8681
ಸಂಬಳಗಳು	8667	11403	11440	11522	11456	12396	13378
ನಿವೃತ್ತಿ ವೇತನಗಳು	3241	3500	4200	4001	5237	5760	6337
ಸಬ್ಸಿಡಿಗಳು (ಆಹಾರ, ಸಾರಿಗೆ, ವಸತಿ ಮತ್ತು ಕೈಗಾರಿಕೆ)	3128	1492	1775	1960	2080	2209	2347
ವಿದ್ಯುತ್ ಸಬ್ಸಿಡಿ	2297	2410	1860	2400	2640	2904	3194
ಯುಎಲ್‌ಬಿಗಳಿಗೆ ವರ್ಗಾವಣೆ	1926	2995	2516	2720	3161	3791	4536

ಭಾರೀ ಓ ಮತ್ತು ಎಂ: (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ)	740	834	729	750	1281	1414	1567
ಇತರೆ ಓ ಮತ್ತು ಎಂ(ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ನೀರು ಸರಬರಾಜು, ಕೃಷಿ, ಅರಣ್ಯ)	4076	8388	2087	4413	4824	5268	5747
ಆಡಳಿತಾತ್ಮಕ ವೆಚ್ಚ	688	921	790	832	877	925	975
ಇತರೆ ರಾಜಸ್ವ ವೆಚ್ಚ	8107	8492	11875	13063	12791	13882	15074
ಬಂಡವಾಳ ಜಮೆ(ಋಣೇತರ)	298	3070	271	1977	585	643	102
ರಾಜಸ್ವ ಕೊರತೆ	**–280**	**–1527**	**–767**	**–1151**	**–1925**	**–5927**	**–11100**
ಬಂಡವಾಳ ನಿರ್ಮಾಣದ ಮೇಲಿನ ವೆಚ್ಚ	4288	10678	9639	10441	11016	16428	23268
ವಿತ್ತೀಯ ಕೊರತೆ	**5331**	**7030**	**9357**	**8493**	**9325**	**10571**	**11983**
ಒಟ್ಟು ಋಣ ಸಂಗ್ರಹ	59852	67578	69162	77177	85688	96259	108242
ಬಡ್ಡಿ	4506	5278	4778	5578	6499	7522	8681
ಋಣ ಸೇವೆಗಳು	5756	7085	6510	7782	11172	14328	17811
ವೇತನ+ನಿವೃತ್ತಿವೇತನ+ಬಡ್ಡಿ	16413	20181	20418	21100	23192	25678	28396
ಒಟ್ಟು ಆಯವ್ಯಯೇತರ ಸಾಲಗಳು	**103**						
ನಿವ್ವಳ ಆಯುವ್ಯಯೇತರ ಸಾಲಗಳು	**–1136**	**–679**	**–640**	**–697**	**–637**	**–580**	**–337**
ಕ್ರೋಡೀಕೃತ ಬಡ್ಡಿ	4888	5548	5017	5870	6607	7593	8683
ಕ್ರೋಡೀಕೃತ ರಾಜಸ್ವ ಕೊರತೆ	**102**	**–1258**	**–528**	**–860**	**–1817**	**–5855**	**–11098**

ಕ್ರೋಡೀಕೃತ ಬಂಡವಾಳ ರಚನೆ	4391	10678	9639	10441	11016	16428	23268
ಕ್ರೋಡೀಕೃತ ವಿತ್ತೀಯ ಕೊರತೆ	**4196**	**6350**	**8717**	**7796**	**8688**	**9991**	**11646**
ಕ್ರೋಡೀಕೃತ ಋಣ ಸಂಗ್ರಹ	63655	70921	72375	80003	89197	99400	111192
ಕ್ರೋಡೀಕೃತ ರಾಜಸ್ವ ಕೊರತೆ/ ರಾಜಸ್ವ ಸ್ವೀಕೃತಿ	**0.27%**	**–2.66%**	**–1.23%**	**–1.78%**	**–3.44%**	**–9.44%**	**15.22%**
ಕ್ರೋಡೀಕೃತ ರಾಜಸ್ವ ಕೊರತೆ/ ಜಿಎಸ್‌ಡಿಪಿ	**0.04%**	**–0.52%**	**–0.20%**	**–0.29%**	**–0.58%**	**–1.66%**	**–2.78%**
ಪ್ರಸಕ್ತ ದರಗಳಲ್ಲಿ ಜಿಎಸ್‌ಡಿಪಿ	233802	244043	268138	294952	310841	352369	399446
ಹಣದುಬ್ಬರ	5.00%	8.00%	4.00%	4.00%	4.00%	4.00%	4.00%
ಜಿಎಸ್‌ಡಿಪಿ ವಾರ್ಷಿಕ ನೈಜ ಬೆಳವಣಿಗೆ	8.00%	7.00%	9.00%	6.00%	9.00%	9.00%	9.00%
ರಾಜಸ್ವ ಸ್ವೀಕೃತಿಗಳು ಅವುಗಳಲ್ಲಿ	16.11%	19.36%	15.97%	16.41%	16.98%	17.59%	18.26%
ಸರ್ಕಾರದ ಸ್ವಂತ ತೆರಿಗೆ ರಾಜಸ್ವಗಳು	11.11%	13.06%	10.73%	11.09%	12.31%	13.07%	13.85%
ತೆರಿಗೆಯೇತರ ರಾಜಸ್ವಗಳು	1.44%	0.79%	0.71%	0.72%	0.74%	0.71%	0.69%
ಕೇಂದ್ರದಿಂದ ಬರುವ ಸಂಪನ್ಮೂಲಗಳು –ವರ್ಗಾವಣೆ	2.90%	3.27%	2.67%	2.59%	2.82%	2.85%	2.88%
–ಅನುದಾನಗಳು	0.65%	2.23%	1.86%	2.00%	2.09%	2.02%	1.96%
ರಾಜಸ್ವ ವೆಚ್ಚ ಅವುಗಳಲ್ಲಿ	15.99%	18.73%	15.68%	16.02%	16.36%	15.91%	15.48%
ಬಡ್ಡಿ	1.93%	2.16%	1.78%	1.89%	2.09%	2.13%	2.17%

O-1055-19

ಸಂಬಳಗಳು	3.17%	4.67%	4.27%	3.91%	3.69%	3.52%	3.35%
ನಿವೃತ್ತಿ ವೇತನಗಳು	1.39%	1.43%	1.57%	1.36%	1.68%	1.63%	1.59%
ಸಬ್ಸಿಡಿಗಳು (ಆಹಾರ, ಸಾರಿಗೆ, ವಸತಿ ಮತ್ತು ಕೈಗಾರಿಕೆಗಳು)	1.34%	0.61%	0.66%	0.66%	0.67%	0.63%	0.59%
ವಿದ್ಯುತ್ ಸಬ್ಸಿಡಿ	0.98%	0.99%	0.69%	0.81%	0.85%	0.82%	0.80%
ಯುಎಲ್‌ಬಿಗಳಿಗೆ ವರ್ಗಾವಣೆ	0.82%	1.23%	0.94%	0.92%	1.02%	1.08%	1.14%
ಭಾರೀ ಓ ಮತ್ತು ಎಂ: (ರಸ್ತೆಗಳು, ಕಟ್ಟಡಗಳು ಮತ್ತು ನೀರಾವರಿ)	0.32%	0.34%	0.27%	0.25%	0.41%	0.40%	0.39%
ಇತರೆ ಓ ಮತ್ತು ಎಂ(ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ನೀರು ಸರಬರಾಜು, ಕೃಷಿ, ಅರಣ್ಯ)	1.74%	3.44%	0.78%	1.50%	1.55%	1.50%	1.44%
ಆಡಳಿತಾತ್ಮಕ ವೆಚ್ಚ	0.29%	0.38%	0.29%	0.28%	0.28%	0.26%	0.24%
ಇತರೆ ರಾಜಸ್ವ ವೆಚ್ಚ	3.47%	3.48%	4.43%	4.43%	4.12%	3.94%	3.77%
ರಾಜಸ್ವ ಕೊರತೆ	**–0.12%**	**–0.63%**	**–0.29%**	**–0.39%**	**–0.62%**	**–1.68%**	**–2.78%**
ಬಂಡವಾಳ ಜಮೆ(ಋಣೇತರ)	0.13%	1.26%	0.10%	0.67%	0.19%	0.18%	0.03%
ಬಂಡವಾಳ ನಿರ್ಮಾಣದ ಮೇಲಿನ ವೆಚ್ಚ	1.83%	4.38%	3.59%	3.54%	3.54%	4.66%	5.82%
ವಿತ್ತೀಯ ಕೊರತೆ	**2.28%**	**2.88%**	**3.49%**	**2.88%**	**3.00%**	**3.00%**	**3.00%**
ರಾಜಸ್ವ ಜಮೆಗಳ ಶೇಕಡಾವಾರಿನಂತೆ ಆಡಳಿತಾತ್ಮಕ ವೆಚ್ಚ	**1.83%**	**1.95%**	**1.85%**	**1.72%**	**1.66%**	**1.49%**	**1.34%**

ಒಟ್ಟು ಋಣ ಸಂಗ್ರಹ	25.60%	27.69%	25.79%	26.17%	27.57%	27.32%	27.10%
ಬಡ್ಡಿ/ ರಾಜಸ್ವ	11.97%	11.17%	11.16%	11.53%	12.32%	12.13%	11.90%
ಋಣ ಸೇವೆಗಳು/ ರಾಜಸ್ವ	15.29%	15.00%	15.20%	16.08%	21.17%	23.11%	24.42%
(ವೇತನ+ನಿವೃತ್ತಿ ವೇತನ+ ಬಡ್ಡಿ) / ರಾಜಸ್ವಗಳು	43.59%	42.72%	47.69%	43.61%	43.95%	41.42%	38.93%
ಋಣ ಸೇವೆಗಳು/ ಜಿಎಸ್‌ಡಿಪಿ	2.46%	2.90%	2.43%	2.64%	3.59%	4.07%	4.46%
(ವೇತನ+ನಿವೃತ್ತಿ ವೇತನ+ಬಡ್ಡಿ)/ ಜಿಎಸ್‌ಡಿಪಿ	7.02%	8.27%	7.61%	7.15%	7.46%	7.29%	7.11%
ಕ್ರೋಢೀಕೃತ ಬಡ್ಡಿ/ ರಾಜಸ್ವ	12.98%	11.74%	11.72%	12.13%	12.52%	12.25%	11.90%
ಆಯವ್ಯಯೇತರ ಸಾಲಗಳು/ ಜಿಎಸ್‌ಡಿಪಿ	0.04%						
ಕ್ರೋಢೀಕೃತ ಬಡ್ಡಿ/ ಜಿಎಸ್‌ಡಿಪಿ	2.09%	2.27%	1.87%	1.99%	2.13%	2.15%	2.17%
ಕ್ರೋಢೀಕೃತ ರಾಜಸ್ವ ಕೊರತೆ/ ಜಿಎಸ್‌ಡಿಪಿ	0.04%	-0.52%	-0.20%	-0.29%	-0.58%	-1.66%	-2.78%
ಕ್ರೋಢಿಕೃತ ಬಂಡವಾಳ ವೆಚ್ಚ/ ಜಿಎಸ್‌ಡಿಪಿ	1.88%	4.38%	3.59%	3.54%	3.54%	4.66%	5.82%
ಕ್ರೋಢಿಕೃತ ವಿತ್ತೀಯ ಕೊರತೆ/ ಜಿಎಸ್‌ಡಿಪಿ	**1.79%**	**2.60%**	**3.25%**	**2.64%**	**2.79%**	**2.84%**	**2.92%**
ಕ್ರೋಢಿಕೃತ ಋಣ ಸಂಗ್ರಹ / ಜಿಎಸ್‌ಡಿಪಿ	**27.23%**	**29.06%**	**26.99%**	**27.12%**	**28.70%**	**28.21%**	**27.84%**

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಎರಡನೇ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್

ಅಧ್ಯಕ್ಷರು

ಕರ್ನಾಟಕ ವಿಧಾನ ಸಭೆ

(ಹದಿಮೂರನೇ ವಿಧಾನಸಭೆ ಎರಡನೇ ಅಧಿವೇಶನ)
ಮಂಗಳವಾರ 24ನೇ ಫೆಬ್ರವರಿ 2009ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ / 11.18 ಗಂಟೆಗೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು / ಶ್ರೀ ಜಗದೀಶ್ ಶೆಟ್ಟರ್ ರವರು
ಪೀಠವನ್ನು ಅಲಂಕರಿಸಿದ್ದರು

11-00 AM

1. ಸಂತಾಪ ಸೂಚನೆ

ವಿಷಯ: ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ಎಸ್.ಕರ್ಜಗಿ ಅವರ ನಿಧನದ ಕುರಿತು.

ಅಧ್ಯಕ್ಷರು: ವಿಧಾನ ಸಭೆಯ ಮಾಜಿ ಸಚಿವರಾಗಿದ್ದ ಶ್ರೀ ವಿ.ಎಸ್.ಕರ್ಜಗಿಯವರು ದಿ:21.2.2009 ರಂದು ನಿಧನರಾಗಿರುವುದನ್ನು ಅತ್ಯಂತ ವಿಷಾದದಿಂದ ಈ ಸದನಕ್ಕೆ ತಿಳಿಸಬಯಸುತ್ತೇನೆ. 1935ರ ಮೇ 18ರಂದು ಜನಿಸಿದ ಶ್ರೀಯುತರು ಕೃಷಿಕರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು, ತುಂಗಭದ್ರಾ ಸಹಕಾರ ಜವಳಿ ಕಾರ್ಖಾನೆ ಹಾಗೂ ರಾಣೆಬೆನ್ನೂರು ಪುರಸಭೆಯ ಅಧ್ಯಕ್ಷರಾಗಿ, ಹಲವಾರು ಸಹಕಾರ ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದ ಶ್ರೀಯುತರು 10ನೇ ವಿಧಾನಸಭೆಗೆ ರಾಣೆಬೆನ್ನೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು. ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ. [ಸದನವು ಒಂದು ನಿಮಿಷ ಮೌನವನ್ನು ಆಚರಿಸಿತು] ಈ ಸದನವು ಅಂಗೀಕರಿಸಿದ ಸಂತಾಪ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

2. ಪ್ರಕಟಣೆ

(i) **ವಿಷಯ:** ಬೀದರ್ ವಿಧಾನಸಭಾಕ್ಷೇತ್ರದಿಂದ 13ನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ವಿಧಾನ ಸಭೆ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿರುವ ಬಗ್ಗೆ-

ಅಧ್ಯಕ್ಷರು: ಬೀದರ್ ವಿಧಾನಸಭಾ ಕ್ಷೇತ್ರದಿಂದ 13ನೇ ವಿಧಾನ ಸಭೆಗೆ ಚುನಾಯಿತರಾಗಿದ್ದ ಶ್ರೀ ಗುರುಪಾದಪ್ಪ ನಾಗಮಾರಪಳ್ಳಿಯವರು ವಿಧಾನಸಭೆ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿದ್ದರು, ಸದರಿ ರಾಜಿನಾಮೆಯನ್ನು ದಿ: 4ನೇ ಫೆಬ್ರವರಿ 2009ರಂದು ಅಂಗೀಕರಿಸಲಾಗಿದೆ ಎಂದು ಈ ಮೂಲಕ ಸದನದ ಗಮನಕ್ಕೆತರಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ[ವಿರೋಧಪಕ್ಷದ ನಾಯಕರು]: ಮಾನ್ಯ ಅಧ್ಯಕ್ಷರೆ, ಅವರು ಯಾವ ಕಾರಣಕ್ಕಾಗಿ ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ಏನಾದರೂ ಹೇಳಿದ್ದಾರೆಯೇ?

ಅಧ್ಯಕ್ಷರು: ಯಾವ ಕಾರಣವನ್ನೂ ಹೇಳಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನಾದರು ಖಾಯಿಲೆ ಬಿದ್ದಿದ್ದಾರೆಯೇ?

ಅಧ್ಯಕ್ಷರು: ಅದನ್ನು ಅವರೇ ಹೇಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಏನು ತೊಂದರೆಯಾಗಿದೆ ಎಂದು ಏನಾದರೂ ಕಾರಣ ಬೇಕಲ್ಲ?

ಅಧ್ಯಕ್ಷರು: ನೀವು ಹೇಳಬೇಕು, ಅವರು ಹೇಳಬೇಕು, ಅವರು ಏನೂ ಕಾರಣವನ್ನು ಹೇಳಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ನಿಮ್ಮಲ್ಲಿಗೆ ರಾಜೀನಾಮೆಯನ್ನು ತಂದು ಕೊಟ್ಟಿದ್ದಾರೆ, ನ್ಯಾಚುರಲಿ, ನೀವು resignation ಗೆ ಕಾರಣವನ್ನು ಕೇಳಬೇಕು. ಒಂದು ಯಾವುದಾದರೂ ರಾಜೀನಾಮೆ ಎಂದರೆ, ಏನು ಖಾಯಿಲೆ ಬಿದ್ದಿದ್ದಾರೊ, insane ಇದ್ದಾರೊ, ಎಲ್ಲಿಯಾದರೂ ನಿಮಾನ್ಸ್‌ನಲ್ಲಿ ಅಡ್ಮಿಟ್ ಮಾಡಿದ್ದಾರೊ, ಏನಾದರೂ ಕಾರಣ ಬೇಕಲ್ಲ? ಅದಕ್ಕೆ ಹೋಗಿದ್ದಾರೆಂದರೆ, ಪಾಪ ತೊಂದರೆಯಲ್ಲಿದ್ದಾರೆಂದು ಸಂತೋಷಪಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ[ಇಂಧನ ಸಚಿವರು]: ಕಾಂಗ್ರೆಸ್ ಪಕ್ಷಕ್ಕೆ ಖಾಯಿಲೆ ಬಂದಿದೆ, ಆ ಕಾಂಗ್ರೆಸ್ ಪಕ್ಷ ಯಾವುದೇ ಕಾರಣಕ್ಕೂ ಈ ರಾಜ್ಯವನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ, ಹಾಗಾಗಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾನು ಕಾಂಗ್ರೆಸ್ ಬಿಟ್ಟು ಬೇರೆ ಕಡೆಗೆ ಹೋಗುತ್ತೇನೆಂದು ನನ್ನ ಹತ್ತಿರ ಹೇಳಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ಖಾಯಿಲೆ ವಾಸಿಯಾಗಬಹುದು, ನಿಮ್ಮಲ್ಲಿರುವ ಖಾಯಿಲೆ ಏಡ್ಸ್ ಇದ್ದಹಾಗೆ, ವಾಸಿಯೂ ಆಗುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ನಮ್ಮಲ್ಲಿ ಯಾರ್ಯಾರು ಬಂದಿದ್ದಾರೋ ಅವರೆಲ್ಲಾ ಫಸ್ಟ್ ಕ್ಲಾಸ್ ಆಗಿ ಇದ್ದಾರೆ, ನಮ್ಮಲ್ಲಿ ಬಂದವರು ಅವರೂ ಆರೋಗ್ಯವಾಗಿದ್ದಾರೆ, ರಾಜ್ಯವನ್ನು ಆರೋಗ್ಯವಾಗಿಟ್ಟಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದಲ್ಲಿ ದೇಶದಲ್ಲಿ ಏನೇನು ಖಾಯಿಲೆಗಳಿದ್ದಾವೆ, ಅವೆಲ್ಲಾ ಖಾಯಿಲೆ ಇದ್ದಾವೆಂದು ಗೊತ್ತಿರುವುದರಿಂದ ಆ ಪಾರ್ಟಿಯನ್ನು ಬಿಟ್ಟು ಬಂದಿದ್ದಾರೆ, ಅದನ್ನು ಸಭಾಧ್ಯಕ್ಷರಿಗೆ ಹೇಳಿದ್ದಾರೆ, ನಮಗಂತೂ ಹೇಳಿಲ್ಲ.

ಶ್ರೀ ಯು.ಟಿ.ಖಾದರ್: ನಿಮ್ಮ ಶಾಸಕರಾದ ಸಂಪಂಗಿಯವರ ಆರೋಗ್ಯ ಬಹಳ ಚೆನ್ನಾಗಿದೆ ಎಂದು ಹೇಳಿ.

(ii) ವಿಷಯ: ವಿಧಾನ ಸಭಾ ಸದಸ್ಯರಾದ ಶ್ರೀ ತನ್ವೀರ್ ಸೇಠ್ ಅವರ ದಸ್ತಗಿರಿ ಬಗ್ಗೆ.

ಅಧ್ಯಕ್ಷರು:- ಇನ್ನೊಂದು ಪ್ರಕಟಣೆ, ದಿ: 13.2.2009ರಂದು ಬೆಳಿಗ್ಗೆ 10.45 ಗಂಟೆಯ ಸಮಯದಲ್ಲಿ ಮೈಸೂರಿನ ಸೆಂಟ್ ಫಿಲೊಮಿನಾ ಕಾಲೇಜಿನ ಆವರಣದಲ್ಲಿ

ಭಯೋತ್ಪಾದನಾ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನಕ್ಕೆ ವಿರೋಧಿಸಿ ಅಭಿಯಾನಕ್ಕೆ ತೆರಳಲು ಸಿದ್ಧರಾಗಿದ್ದ, ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಟೈರಿನ ಗಾಳಿಯನ್ನು ತೆಗೆದು, ಅಭಿಯಾನಕ್ಕೆ ಅಡ್ಡಿಪಡಿಸಿದ್ದರಿಂದ ವಿಧಾನಸಭಾ ಸದಸ್ಯರಾದ ಶ್ರೀ ತನ್ವೀರ್ ಸೇಠ್ ಅವರನ್ನು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 71ರ ಮೇರೆಗೆ ದಸ್ತಗಿರಿ ಮಾಡಿ ನಂತರ ಅದೇ ದಿನ ಮಧ್ಯಾಹ್ನ 1.45 ಗಂಟೆಗೆ ಬಿಡುಗಡೆ ಮಾಡಲಾಗಿದೆಯೆಂದು ಮೈಸೂರು ನಗರ ಪೊಲೀಸ್ ಕಮಿಷನರ್ ಅವರು ತಿಳಿಸಿರುತ್ತಾರೆ.

251 ಶ್ರೀ ಗೋಪಾಲ ಭಂಡಾರಿ.ಹೆಚ್

ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು)

ಅ) ಪಶ್ಚಿಮ ಘಟ್ಟದಲ್ಲಿರುವ ರಸ್ತೆಗಳ ಪೈಕಿ ಆಗುಂಬೆ, ಸೋಮೇಶ್ವರ ರಸ್ತೆಯು ಅತ್ಯಂತ ಚಿಕ್ಕ ರಸ್ತೆಯಾಗಿದ್ದು, ಅಲ್ಲಿ ಭಾರಿ ವಾಹನ ಸಂಚಾರಕ್ಕೆ ಅನುಕೂಲವಾಗಲು ಅಗಲವಾದ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಪಶ್ಚಿಮ ಘಟ್ಟದಲ್ಲಿರುವ ಆಗುಂಬೆ ಸೋಮೇಶ್ವರ ರಸ್ತೆಯು ರಾಜ್ಯ ಹೆದ್ದಾರಿ-1ರ ಭಾಗವಾಗಿದ್ದು, ಅರಣ್ಯ ಘಟ್ಟ ಪ್ರದೇಶದಲ್ಲಿ ಹಾದುಹೋಗುವುದರಿಂದ, ಕ್ಯಾರೇಜ್ ವೇ ಅಗಲವು 5.5 ಮೀ ಇದೆ. ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ ಆಗುಂಬೆ ಘಾಟಿ ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಪಡಿಸುವ ಬಗ್ಗೆ ವಿವರವಾದ ಯೋಜನಾ ವರದಿ(Detailed Project Report) ಯನ್ನು ತಾಂತ್ರಿಕ ಸಲಹೆಗಾರರಿಂದ ಪಡೆಯಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ) ಹಾಗಿದ್ದಲ್ಲಿ, ರಸ್ತೆ ಅಗಲಗೊಳಿಸಲು ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು;

ವಿವರವಾದ ಯೋಜನಾ ವರದಿಯನ್ನಾಧರಿಸಿ, ಕ್ರಮ ಕೈಗೊಳ್ಳಲಾಗುವುದು.

ಇ) ಕಾರ್ಕಳ ತಾಲ್ಲೂಕಿನ ರಾಜ್ಯ ಹೆದ್ದಾರಿ ಪಡುಬಿದ್ರೆ ಚಿಕ್ಕಾಲಗುಡ್ಡ ರಸ್ತೆ, ಮುನಿಯಾಲು ಸೀತಾನದಿ ಮತ್ತು ಮಲ್ಪೆ ಮೊಳಕಾಲ್ಮೂರು ರಸ್ತೆ, ಸೀತಾನದಿ-ಸೋಮೇಶ್ವರ ಮತ್ತು ಬೆಳ್ಮಣ್-ಮುಂಡ್ಕೂರು ರಸ್ತೆಗಳು ಕಿರಿದಾಗಿದ್ದು, ಅದನ್ನು ಅಗಲೀಕರಣಗೊಳಿಸಲು ಕೈಗೊಂಡ ಕ್ರಮಗಳೇನು?

ಮಲ್ಪೆ ಮೊಳಕಾಲ್ಮೂರು ರಾಜ್ಯ ಹೆದ್ದಾರಿ-65 ಕಾರ್ಕಳ ತಾಲ್ಲೂಕಿನ ಸರಪಳಿ 31.60 ರಿಂದ 44.20 ಕಿ.ಮೀವರೆಗಿನ ಹಾದುಹೋಗುತ್ತಿದ್ದು, ಇದನ್ನು ಮಧ್ಯಮ ಪಥಕ್ಕೆ ಅಗಲೀಕರಣ ಮಾಡಲಾಗಿರುತ್ತದೆ.

ಕಾರ್ಕಳ ತಾಲ್ಲೂಕಿನಲ್ಲಿ ಪಡುಬಿದ್ರೆ ಚಿಕ್ಕಲಗುಡ್ಡ ರಾಜ್ಯ ಹೆದ್ದಾರಿ-1 ವಿವಿಧ ಚೈನೇಜ್‌ಗಳಲ್ಲಿ 3.75 ಮೀ. ಮತ್ತು 5.50 ಮೀ ಅಗಲದ ಕ್ಯಾರೇಜ್ ವೇ ಹೊಂದಿದೆ.

ಅದೇ ರೀತಿ ಬೆಳ್ಮಣ್ ಮುಂಡ್ಕೂರು ರಸ್ತೆಯು ರಾಜ್ಯ ಹೆದ್ದಾರಿ–67ರ ಭಾಗವಾಗಿದ್ದು, ಈ ರಸ್ತೆಯು ಸಹ ವಿವಿಧ ಚೈನೇಜ್‌ಗಳಲ್ಲಿ 3.75 ಮೀ ಹಾಗೂ 5.50 ಮೀ ಕ್ಯಾರೇಜ್ ವೇಯನ್ನು ಹೊಂದಿದೆ. ಈ ರಸ್ತೆಗಳ ಕ್ಯಾರೇಜ್ ವೇ ಅಗಲೀಕರಣವನ್ನು ಭವಿಷ್ಯದಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕೈಗೊಳ್ಳಲಾಗುವುದು

3.ಪ್ರಶ್ನೋತ್ತರಗಳು:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು:– ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ. ಮೊದಲನೆಯದಾಗಿ ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ ಮಾನ್ಯ ಸಚಿವರು ನಮ್ಮ ಅನುಮತಿ ತೆಗೆದುಕೊಂಡು ದೆಹಲಿಗೆ ಹೋಗಿದ್ದಾರೆ. ಮಾನ್ಯ ಜಾರಕಿಹೊಳಿಯವರ ಮೂರು ಪ್ರಶ್ನೆಗಳಿವೆ. ಅವರು ಮನವಿ ಮಾಡಿಕೊಂಡಿರುವುದರಿಂದ 27ನೇ ತಾರೀಖು ಈ ಮೂರೂ ಪ್ರಶ್ನೆಗಳನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಘಟ್ಟದ ಮೇಲಿನ ಪ್ರದೇಶಕ್ಕೆ ಬರಲಿಕ್ಕೆ ಬಹುಶಃ ಅತ್ಯಂತ ಪ್ರಾಮುಖ್ಯವಾದಂತಹ ಒಂದು ರಸ್ತೆ ಆಗುಂಬೆ ಘಾಟ್ ರಸ್ತೆ ಇರುವಂಥದ್ದು. ನಮ್ಮಲ್ಲಿರತಕ್ಕಂತಹ ಶಿರಾಡಿ, ಚಾರ್ಮಾಡಿ ಮತ್ತು ಎಲ್ಲಾ ಘಾಟಿಗಳು ಹೆಚ್ಚು ಕಡಿಮೆ 40 ರಿಂದ 50 ಕಿ.ಮಿ. ಉದ್ದ ಇದ್ದರೆ ಇದು ಬರೀ 12 ಕಿ.ಮಿ. ಉದ್ದದಲ್ಲಿದೆ. ಇದರ ಎರಡು ಮೂರು ಸುತ್ತುಗಳನ್ನು ಅಗಲಗೊಳಿಸಿದರೆ ದೊಡ್ಡ ಬಸ್ಸುಗಳು ಅಲ್ಲಿ ಸಂಚಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಅಲ್ಲಿ ಸುಮಾರು 20 ಸೀಟಿನ ಸಣ್ಣ ಬಸ್‌ಗಳು ಮಾತ್ರ ಅಲ್ಲಿ ಸಂಚಾರ ಮಾಡುತ್ತಿವೆ. ಎರಡು ಮೂರು ಜಿಲ್ಲೆ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶೃಂಗೇರಿ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಹೀಗೆ ಅನೇಕ ಜಿಲ್ಲೆಗಳಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಂಪರ್ಕ ಕಲ್ಪಿಸುವಂತಹ ಅತ್ಯಂತ ಪ್ರಾಮುಖ್ಯವಾದ ಜಿಲ್ಲೆ. ಆ ಕಡೆಯಿಂದ ನ್ಯಾಷನಲ್ ಹೈವೇ 13 ಬರುತ್ತಿದೆ, ಉಡುಪಿಯಲ್ಲಿ ನ್ಯಾಷನಲ್ ಹೈವೇ 17 ಹೋಗುತ್ತಿದೆ, ಎರಡನ್ನೂ ಲಿಂಕ್ ಮಾಡಲಿಕ್ಕೆ ಅವಶ್ಯಕತೆ ಇರುವಂತಹ ಬಹಳ ಪ್ರಮುಖವಾದಂತಹ ಇಡೀ ರಾಜ್ಯಕ್ಕೆ ಉಪಯುಕ್ತವಾಗತಕ್ಕಂತಹ ರಸ್ತೆ. ಡೀಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಾಂತ್ರಿಕ ಸಲಹೆಗಾರರಿಂದ ಕೇಳಿದ್ದೇವೆಂದು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆ ವರದಿ ಬಂದ ನಂತರ ಆ ವರದಿಯನ್ನಾಧರಿಸಿ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಯಾವ ತಾಂತ್ರಿಕ ಸಲಹೆಗಾರರಿಗೆ ಮತ್ತು ಯಾವಾಗ ಕೊಟ್ಟಿದ್ದಾರೆ ಎನ್ನುವುದು ನನ್ನ ಪ್ರಶ್ನೆ. ವರದಿ ಯಾವಾಗ ಬರುತ್ತದೆ ಎಂದು ನನಗೆ ಮಾಹಿತಿ

ಕೊಡುವುದರ ಜೊತೆಗೆ, ಇನ್ನೊಂದು ಬಹಳ ಪ್ರಮುಖವಾದುದು ಈ ರಸ್ತೆ state highway ಆಗಿದೆ. ಅಲ್ಲಿ ಪ್ರತಿ ನಿಮಿಷಕ್ಕೆ ಒಂದೆರಡು ವಾಹನಗಳು ಸಂಚಾರ ಮಾಡುತ್ತಿವೆ. ಅಷ್ಟು ವಾಹನದ ದಟ್ಟಣೆ ಇದೆ. ಆದರೆ ಆ ಘಾಟಿಯಿಂದ ಇಳಿದ ತಕ್ಷಣ ಸೋಮೇಶ್ವರದಿಂದ ಸೀತಾ ನದಿಯ ತನಕ ಅಗಲ ಬಹಳ ಕಿರಿದಾದ ರಸ್ತೆ ಇರುವುದರಿಂದ ಅಲ್ಲಿ ಅನೇಕ ಅಪಘಾತಗಳು ಆಗುತ್ತಿವೆ. ಎರಡು ಅಡಿ ಹೊಂಡ ಇದೆ. ಡಾಂಬರ್ ರಸ್ತೆಯಿಂದ ಎರಡು ಅಡಿ ಆಳ ಇದೆ. ಅಲ್ಲಿ ಅನೇಕ ವಾಹನಗಳ ಅಪಘಾತಗಳಾಗಿವೆ. ಒಂದಿಬ್ಬರು ಮೃತರಾದ ವಿಷಯ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಈ ರಸ್ತೆಯನ್ನು ಅಗಲಗೊಳಿಸುವಂತಹ ಕೆಲಸವನ್ನು ಯಾವಾಗ ಮಾಡುತ್ತೀರಿ ಎಂದು ನನಗೆ ಹೇಳಬೇಕು.

ಅಧ್ಯಕ್ಷರು: ನೀವು ಸ್ಪಷ್ಟೀಕರಣ ಕೇಳಬೇಕು. ಯಾವ ಅವಧಿಯಲ್ಲಿ ಮಾಡುತ್ತೀರಿ ಟೈಮ್ ಬೌಂಡ್ ಏನು ಇವೆಲ್ಲಾ ನೀವು ಕೇಳಬೇಕು.

ಶ್ರೀ ಹೆಚ್. ಗೋಪಾಲ ಭಂಡಾರಿ: ರಸ್ತೆಯನ್ನು ಯಾವಾಗ ಅಗಲ ಮಾಡುತ್ತೀರಿ ಎಂದು ಕೇಳುತ್ತಿದ್ದೇನೆ. ಬರೀ 7–8 ಕಿ. ಮಿ. ಉದ್ದದಲ್ಲಿ ಮಾತ್ರ ಇದೆ. ಉಳಿದದ್ದು ಅಗಲವಾಗಿದೆ. ದಯವಿಟ್ಟು ಆ ರಸ್ತೆಯನ್ನು ಯಾವಾಗ ಅಗಲ ಮಾಡುತ್ತೀರಿ ಎಂದು ನನಗೆ ಮಾಹಿತಿ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಒಟ್ಟು 53 ಕಿ.ಮಿ. ರಸ್ತೆಯಲ್ಲಿ 16.6 ಕಿ.ಮಿ. ಮಾತ್ರ 3.75 ಅಗಲದ ರಸ್ತೆಗಳಿವೆ. ಈಗಾಗಲೇ ರಸ್ತೆಗಳನ್ನು ವಿಸ್ತೀರ್ಣ ಮಾಡುವುದರ ಸಲುವಾಗಿ ಡೀಟೇಲ್ ಪ್ರಾಜೆಕ್ಟ್ ರಿಪೋರ್ಟ್ ಮಾಡುವುದಕ್ಕಾಗಿ ತಾಂತ್ರಿಕ ಸಲಹೆಗಾರರ ಟೆಂಡರ್ ಕರೆಯಲಾಗಿದೆ. ಆದರೆ ಟೆಂಡರ್‌ದಾರರು ಒಬ್ಬರೇ ಬಂದಿದ್ದರಿಂದ 42ಲಕ್ಷ ರೂಪಾಯಿ ಅತೀ ಹೆಚ್ಚು ಮೊತ್ತ ಎಂದು ಘೋಷಣೆ ಮಾಡಿದ್ದರಿಂದ ಅದನ್ನು ನಿರಾಕರಣೆ ಮಾಡಿ ಮತ್ತೊಂದು ಟೆಂಡರನ್ನು ಕರೆಯಲಾಗಿದೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ಮಾಡುತ್ತೇವೆ. ಇದರಲ್ಲಿ 16 ತಿರುವುಗಳು ಬರುತ್ತಿರುವುದು ನನಗೆ ಗೊತ್ತಿದೆ. ನಾನು ಈ ರಸ್ತೆಯಲ್ಲಿ ಅನೇಕ ಸಲ ಹೋಗಿ ಬಂದಿರುವುದರಿಂದ ಅತೀ ಶೀಘ್ರದಲ್ಲಿಯೇ ಮಾಡುತ್ತೇನೆ. ತಿರುವುಗಳಲ್ಲಿ ವಿಸ್ತೀರ್ಣ ಮಾಡಬೇಕಾದಾಗ ಕೇಂದ್ರ ಸರ್ಕಾರದ ಈ ರಸ್ತೆಗಳ ಬಗ್ಗೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕಾದ ಅವಶ್ಯಕತೆ ಇದೆ. ಅದನ್ನೆಲ್ಲವನ್ನೂ ಗಮನಿಸಿ ಅತೀ ಶೀಘ್ರದಲ್ಲಿಯೇ ರಸ್ತೆಗಳನ್ನು ಅಗಲಗೊಳಿಸುವ ಕೆಲಸವನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ಗೋಪಾಲ ಭಂಡಾರಿ:- ಮಾನ್ಯ ಅಧ್ಯಕ್ಷರೆ, ತಾವು ಆಗುಂಬೆ ಘಾಟಿ ತಿರುವುಗಳನ್ನು ಅಗಲಗೊಳಿಸುವ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೀರಿ. ಘಾಟಿಯಿಂದ ಕೆಳಗೆ ಸೋಮೇಶ್ವರದಿಂದ ಸೀತಾ ನದಿಯ ತನಕ ಕಿರಿದಾದ ರಸ್ತೆಯನ್ನು ಅಗಲ ಮಾಡತಕ್ಕಂತಹ ವ್ಯವಸ್ಥೆಗೆ, ರಸ್ತೆ ಅಗಲ ಇದೆ, ಡಾಂಬರೀಕರಣ ಬರೀ ಮೂರು ಮೀಟರ್‌ನಲ್ಲಿದೆ, ಅಲ್ಲಿ ವಾಹನದ ದಟ್ಟಣೆ ಹೆಚ್ಚಾಗಿರುವುದರಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಅದನ್ನು ಅಗಲ ಮಾಡುವ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಿಳಿಸಬೇಕು.

ಶ್ರೀ ಸಿ.ಎಂ. ಉದಾಸಿ:- ಹಣಕಾಸಿನ ಲಭ್ಯತೆಯ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎತ್ತಿರತಕ್ಕಂತಹ ಪ್ರಶ್ನೆ ಸಮಯೋಚಿತ ಮಾತ್ರವಲ್ಲ, ಬಹಳ ಮುಖ್ಯವಾದುದು. ನಮ್ಮ ಕರಾವಳಿ ಜಿಲ್ಲೆಗಳು ಒಂದು ದ್ವೀಪ ಆಗುವಂತಹ ಸಾಧ್ಯತೆಗಳು ಇವೆ. ಶಿರಾಡಿ ಘಾಟ್ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ನ್ಯಾಷನಲ್ ಹೈವೇಗೆ ಸಂಬಂಧಪಟ್ಟದ್ದು. ಅದಕ್ಕೆ ಇದುವರೆಗೆ ಯಾವುದೇ ರೀತಿಯಲ್ಲಿ ಪ್ರಾಮುಖ್ಯತೆ ಕೊಡದೇ ಇರುವುದರಿಂದ ತೊಂದರೆಯಾಗಿದೆ. ಬಹಳ ದೊಡ್ಡ ಮಟ್ಟದ ಮೀಟಿಂಗ್ ಆಯಿತು. 200 ಕೋಟಿ ರೂ. ಕೊಡುವುದರಲ್ಲಿ ಕೇವಲ 17 ಕೋಟಿ ರೂ. ಈ ರೀತಿ ಪೀಸ್ ಮೀಲ್ ಕೊಡುವುದರಿಂದ ಏನೂ ಸಮಸ್ಯೆ ಇತ್ಯರ್ಥವಾಗುವುದಿಲ್ಲ. ಇಲ್ಲಾ, ಶಿರಾಡಿ ಘಾಟ್ ರಸ್ತೆಯನ್ನು state highway ಗೆ ಕೊಟ್ಟು state highway ಯನ್ನು BBMP ಲೆವಲ್‌ನಲ್ಲಿ ಆದರೂ ಮಾಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಖಂಡಿತವಾಗಿ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸಚಿವರು ದಯವಿಟ್ಟು ಇದರ ಬಗ್ಗೆ ಉತ್ತರಿಸಬೇಕು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಶಿರಾಡಿ ಘಾಟ್ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಯೋಜನೆ ಅಡಿಯಲ್ಲಿ ಈಗಾಗಲೇ ಕೆಲವು ಪರಿಮಿತಿಗಳಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಮತ್ತೆ ಕೆಲವು ಪರಿಮಿತಿಗಳಲ್ಲಿ ಟಾರ್ ರಸ್ತೆಗಳನ್ನಾಗಿ ಮಾಡುವುದರ ಸಲುವಾಗಿ 180 ಕೋಟಿ ರೂಪಾಯಿಗಿಂತ ಹೆಚ್ಚು ಮೌಲ್ಯದ ಅಂದಾಜು ವೆಚ್ಚದ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಇದೆ. ಅದಕ್ಕೆ ಅತೀ ಶೀಘ್ರದಲ್ಲಿಯೇ ಮಂಜೂರಾತಿ ದೊರೆಯುತ್ತದೆ ಎನ್ನತಕ್ಕಂತಹ ಭಾವನೆ ನನಗೆ ಇದೆ. ಕೇಂದ್ರದ ಉನ್ನತ ಅಧಿಕಾರಿಗಳ ಸಹಿತ ಇತ್ತೀಚೆಗೆ ಒಂದು ವಾರದ ಕೆಳಗೆ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟು ಅದನ್ನು ಆದ್ಯತೆ ಮೇಲೆ ಗಮನಿಸುತ್ತೇವೆ ಎನ್ನುವಂತಹ ಭರವಸೆಯನ್ನು ಕೊಟ್ಟಿದ್ದಾರೆ. ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಕೆಲವೇ ದಿವಸಗಳಲ್ಲಿ

ಆ ಕೆಲಸ ಪ್ರಾರಂಭವಾಗುತ್ತದೆ ಎನ್ನುವಂತಹ ಭರವಸೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ವಿಶ್ವನಾಥ್‌ರವರೆ, ನಿಮ್ಮ ಪ್ರಶ್ನೆ ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆ ಆಗಿದೆ. ಅವರು ಈಗ ಉತ್ತರ ಕೊಡುತ್ತಾರೆ ಉತ್ತರ ನೋಡಿಕೊಂಡು ಈಗಲೇ ಪ್ರಶ್ನೆ ಕೇಳುತ್ತೀರಾ? ಕೇಳಿ.

ಶ್ರೀ ವಿಶ್ವನಾಥ್ ಎಸ್.ಆರ್: ಮಾನ್ಯ ಅಧ್ಯಕ್ಷರೆ, 260ನೇ ಪ್ರಶ್ನೆಗೆ ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರ ಕೊಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ನನಗೆ ಉತ್ತರದ ಪ್ರತಿ ಬಂದಿಲ್ಲ

ಅಧ್ಯಕ್ಷರು: ಅದಕ್ಕಾಗಿ ನಾನು ಮುಂದೆ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ನೀವು ಈಗಲೇ ಕೇಳುತ್ತೇನೆಂದು ಹೇಳಿದಿರಿ.

ಶ್ರೀ ಎಸ್.ಆರ್. ವಿಶ್ವನಾಥ್: ಪ್ರಸ್ತಾವನೆಯನ್ನು ಮಂಡಿಸುತ್ತೇನೆ, ಈಗಲೇ ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಅರ್ಕಾವತಿ ನದಿ ಪುನಶ್ಚೇತನದ ಬಗ್ಗೆ ನನಗೆ ಐದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು: ಮಾನ್ಯ ವಿಶ್ವನಾಥ್‌ರವರೇ ಅವರು ಉತ್ತರ ಏನು ಕೊಟ್ಟಿದ್ದಾರೆ ನೋಡಿಕೊಂಡು ಪ್ರಶ್ನೋತ್ತರ ಕಾಲದಲ್ಲಿ ಏನಾದರೂ ಪ್ರಶ್ನೆಗಳನ್ನು ಕೇಳುವುದು ಅಥವಾ ಸ್ಪಷ್ಟೀಕರಣ ಕೇಳುವಂಥದ್ದು ಆಗಬೇಕು. ವಿವರವಾಗಿ ಮಾತನಾಡುವುದಕ್ಕೆ ಪ್ರಶ್ನೋತ್ತರ ಅವಧಿಯಲ್ಲಿ ಆಗುವುದಿಲ್ಲ.

ಶ್ರೀ ಎಸ್.ಆರ್. ವಿಶ್ವಾನಾಥ್: ಐದು ನಿಮಿಷ ಅವಕಾಶ ಮಾಡಿಕೊಟ್ಟರೆ ಮುಂದಿನ ಪ್ರಶ್ನೋತ್ತರ ಸಮಯದಲ್ಲಿ ಕೇಳುತ್ತೇನೆ.

ಅಧ್ಯಕ್ಷರು: ಆಯಿತು, ನಂತರ ತೆಗೆದುಕೊಳ್ಳೋಣ.

---

268 ಶ್ರೀ ಸುನೀಲ್ ವಿ.ಹೆಗಡೆ

ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು)

ಅ) ಜೋಯಿಡಾ ತಾಲ್ಲೂಕು 87% ಅರಣ್ಯ ಭೂಮಿಯನ್ನು ಹೊಂದಿದ್ದು, ಅಲ್ಲಿ ವಾಸಿಸುವ ಬುಡಕಟ್ಟು ಜನಾಂಗದವರಿಗೆ ನಗರ ರಸ್ತೆ ಸಂಪರ್ಕ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಲ್ಲಿ ವಾಸಿಸುವ ಜನರಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವ ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಹಾಗೂ ಸದರಿ ಕಾಮಗಾರಿಗೆ ಸರ್ಕಾರ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವುದೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು; ವಿವರಗಳನ್ನು ನೀಡುವುದು?

ಈ ಅಂಶವನ್ನು ಗಮನಿಸಿ, ಸರ್ಕಾರಿ ಆದೇಶ ಸಂಖ್ಯೆ: ಲೋಇ 463 ಸಿಆರ್ ಎಂ 2008, ದಿನಾಂಕ: 27-8-2008ರಲ್ಲಿ ಜೋಯಿಡಾ ತಾಲ್ಲೂಕಿನ 93.10 ಕಿ.ಮೀ ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಜೋಯಿಡಾ ತಾಲ್ಲೂಕಿಗೆ 2008-09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 5054ರಡಿಯಲ್ಲಿ ರೂ.190.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

2009-10ನೇ ಸಾಲಿನಲ್ಲಿ ಜೋಯಿಡಾ ತಾಲ್ಲೂಕಿನ ಅತೀ ಅವಶ್ಯಕವಾಗಿ ಕೈಗೊಳ್ಳಬೇಕಾದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅನುದಾನ ಲಭ್ಯತೆಯನ್ನಾಧರಿಸಿ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಸುನಿಲ್ ವಿ. ಹೆಗಡೆ: ಸನ್ಮಾನ್ಯ ಸಭಾಧ್ಯಕ್ಷರೆ, ಜೋಯಿಡಾ ತಾಲ್ಲೂಕು ಗಡಿ ಪ್ರದೇಶ ಆಗಿದ್ದು, ಅಲ್ಲಿ ಮಲೆನಾಡು ಅಭಿವೃದ್ಧಿ ಗಡಿ ಕನ್ನಡ ಪ್ರಾಧಿಕಾರ ಮತ್ತು ಲೋಕೋಪಯೋಗಿ ಇಷ್ಟೆಲ್ಲಾ ಇಲಾಖೆಗಳು ಇದ್ದರೂ ಸಹ ರಸ್ತೆ ಹಾಗೂ ಸಂಪರ್ಕ ಸೇತುವೆಗಳು ಬಹಳ ದುಸ್ಥಿತಿಯಲ್ಲಿವೆ. ಈಗಾಗಲೇ ಅಲ್ಲಿ ಗಡಿ ಕನ್ನಡ ಉತ್ಸವಕ್ಕೆ ಸನ್ಮಾನ್ಯ ಮಂತ್ರಿಗಳು ಬಂದಾಗ ಎಲ್ಲಾ ವಿಷಯಗಳನ್ನು ಅವಲೋಕಿಸಿ ಕೆಲವೊಂದು ಆಶ್ವಾಸನೆಗಳನ್ನು ಕೊಟ್ಟಿದ್ದರು. ಯಾವ ರೀತಿ ಮನೆಯ ರಕ್ಷಣೆಗೆ ಕಾಂಪೌಂಡ್ ಅವಶ್ಯಕತೆ ಇದೆಯೋ ಹಾಗೆ ರಾಜ್ಯದ ರಕ್ಷಣೆಗೆ ಎಲ್ಲಾ ಗಡಿ ಪ್ರದೇಶಗಳ ಸುಧಾರಣೆಯ ಅವಶ್ಯಕತೆ ಇರುವುದರಿಂದ ಈ ದಿಸೆಯಲ್ಲಿ ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ, 891 ಕಿ.ಮಿ. ರಸ್ತೆ ಇನ್ನೂ ಡಾಂಬರೀಕರಣ ಆಗುವಂಥದ್ದು ಬಾಕಿ ಇದ್ದು, ನಂಜುಂಡಪ್ಪ ವರದಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೊಟ್ಟಂತಹ ದುಡ್ಡನ್ನು ಈ ಸಂದರ್ಭದಲ್ಲಿ ವಾಪಸ್ ತೆಗೆದುಕೊಂಡಿದ್ದಾರೆ. ಕಳೆದ ವರ್ಷ ನಬಾರ್ಡಿನಲ್ಲಿ ಗಂಗೋಡಾ ರಸ್ತೆಯನ್ನು ಅಭಿವೃದ್ಧಿಪಡಿಸಲಿಕ್ಕೆ ಕೊಟ್ಟಂತಹ ಅನುದಾನವೂ ವಿತ್‌ಡ್ರಾ ಆಗಿದೆ. ಆ ಕಾರಣದಿಂದ ಈ ಗಂಗೋಡಾ ರಸ್ತೆ ಮತ್ತು ಕುಂಡಲ್ ಬ್ರಿಡ್ಜ್‌ಗಳು. ಡಿಜ್ಜಿಯಲ್ಲಿ 14 ಸೇತುವೆಗಳನ್ನು KRDCL ನವರು ತೆಗೆದುಕೊಂಡು ಕೇವಲ ಐದು ಸೇತುವೆಗಳನ್ನು ಮಾಡಿದ್ದಾರೆ. ಅಷ್ಟೂ ಸೇತುವೆಗಳಿಗೆ ಐದು ಸಾರಿ ಶಂಕುಸ್ಥಾಪನೆ ಆಗಿದೆ. ಕಾರಿಡಾರ್

ಸೇತುವೆ ಆಗಿಲ್ಲ. ಈ ಎಲ್ಲಾ ಕಾರಣಗಳಿಂದ ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಈ ವರ್ಷದ ಅನುದಾನದಲ್ಲಿ ಈ ಎಲ್ಲಾ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ? ಈ ಎಲ್ಲಾ ಬ್ರಿಡ್ಜ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಹೇಗೆ ಎಂದು ಮಾನ್ಯ ಸಚಿವರಿಂದ ನಾನು ತಿಳಿಯುವುದಕ್ಕೆ ಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಜೋಯಿಡಾ ತಾಲ್ಲೂಕು ಅತ್ಯಂತ ಹಿಂದುಳಿದುದು ಎಂದು ಗಮನಿಸಿ 27.08.08ರಲ್ಲಿ ಜೋಯಿಡಾ ತಾಲ್ಲೂಕಿನಲ್ಲಿ 93ಕಿ.ಮಿ. ಗ್ರಾಮೀಣ ರಸ್ತೆಗಳನ್ನು ಮುಖ್ಯ ರಸ್ತೆಗಳಾಗಿ ಪರಿವರ್ತನೆ ಮಾಡಿರುವುದನ್ನು ಅವರ ಉತ್ತರದಲ್ಲಿ ನಾವು ತಿಳಿಸಿ ಆಗಿದೆ.

11-30AM

ಇದರ ಜೊತೆಗೆ ಜೋಯಿಡಾ ರಸ್ತೆಗಳ ಮಧ್ಯೆ 8 ಸೇತುವೆಗಳ ಬಗ್ಗೆ ಅವರು ಮತ್ತೊಂದು ಪ್ರಶ್ನೆಯನ್ನು ಕೇಳಿರುವುದಕ್ಕೆ ಲಿಖಿತವಾಗಿ ಉತ್ತರಗಳು ಅವರಿಗೆ ಲಭ್ಯವಾಗುತ್ತಿದೆ. ಆ ಸೇತುವೆಗಳ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುವ ಸಲುವಾಗಿ ಅತಿ ಶೀಘ್ರದಲ್ಲಿಯೇ ಕ್ರಮ ತೆಗೆದುಕೊಳ್ಳಬೇಕೆಂದು ಕೆ.ಆರ್.ಡಿ.ಸಿ.ಎಲ್.ನವರಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಇದಕ್ಕೆ ಬೇಕಾಗಿರತಕ್ಕಂಥ ಅನುದಾನವನ್ನು 2008-09 ರಲ್ಲಿ 190 ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟು ಕೆಲಸವನ್ನು ಮಾಡಿಸುತ್ತಿದ್ದೇವೆ ಎನ್ನುವುದನ್ನೂ ಕೂಡ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸುನೀಲ್ ವಿ. ಹೆಗಡೆ:- ಮಾನ್ಯ ಅಧ್ಯಕ್ಷರೆ, 93 ಕಿ.ಮೀ. ರಸ್ತೆಯನ್ನು ಕಳೆದ ವರ್ಷ ಅಪ್‌ಗ್ರೇಡೇಶನ್ ಮಾಡಿದ್ದಾರೆ. ಅದಕ್ಕೆ ಇದುವರೆಗೂ ಯಾವುದೇ ಅನುದಾನವೂ ಕೂಡ ಬಂದಿಲ್ಲ. ಮುಖ್ಯರಸ್ತೆಯಾದ ಜೋಯಿಡಾದಿಂದ ಕಾರವಾರದವರೆಗಿನ ಸಂಪರ್ಕ ಆಗುವ ರಸ್ತೆಯನ್ನು ಏನು ಕೇಶಿಪ್‌ನವರಿಗೆ ಕೊಟ್ಟಿದ್ದಾರೆ, ಅದನ್ನು ಕುಂಬಾರವಾಡದಿಂದ 25 ಕಿ.ಮೀ. ವರೆಗೆ ಕಾಮಗಾರಿ ಕಳೆದ ಮೂರ‍್ನಾಲ್ಕು ವರ್ಷದಿಂದ ಆಗಿಲ್ಲ. ಹಲವಾರು ಬಾರಿ ಸಾರ್ವಜನಿಕ ಪ್ರತಿಭಟನೆ ಕೂಡ ಆಗಿದೆ. ಈ ದಿಸೆಯಲ್ಲಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಈ ಬಾರಿಯಾದರೂ ಈ ವರ್ಷದ ಕೊನೆಯೊಳಗಾದರೂ ಈ ಎಲ್ಲಾ ರಸ್ತೆ ಮತ್ತು ಸೇತುವೆಗಳ ಕಾಮಗಾರಿಗಳನ್ನು ಆದ್ಯತೆ ಮೇಲೆ ಮಾಡಿಕೊಟ್ಟಲ್ಲಿ ಇತ್ತೀಚೆಗೆ ನಡೆದ ಗಡಿ ಕನ್ನಡ ಉತ್ಸವಕ್ಕೂ ಕೂಡ ಅರ್ಥ ಬಂದಂತಾಗುತ್ತದೆ ಮತ್ತು ಒಳ್ಳೆಯ ಉದ್ದೇಶ ಸಫಲವಾಗಬಹುದು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರ ಗಮನಕ್ಕೆ ತಂದಿದ್ದೇನೆ. ಸೇತುವೆಗಳ ನಿರ್ಮಾಣ ಮಾಡಬೇಕಾದ ಕೆಲಸವನ್ನು ಪ್ರಗತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. ರಸ್ತೆಗಳ ಪೈಕಿ ಅನುದಾನವನ್ನು ಕೊಟ್ಟಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ, ಆ ರಸ್ತೆಗಳಿಗೆ ಹಣವನ್ನು ಕೊಡಲು ಅವಕಾಶವನ್ನು ಮಾಡಿಕೊಂಡು ಆ ರಸ್ತೆಗಳನ್ನು ಸುಧಾರಣೆ ಮಾಡುವಂಥ ಕೆಲಸವನ್ನು ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು:- ಈ ಪ್ರಶ್ನೆ ಜೋಯಿಡಾ ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರುವ ಪ್ರಶ್ನೆಯಾಗಿರುವುದರಿಂದ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಸಹಕರಿಸಿ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಮಾನ್ಯ ಬಚ್ಚೇಗೌಡರದ್ದು 27 ಕ್ಕೆ ನಿಗದಿಯಾಗಿದೆ. ಈಗ ಜಮೀರ್ ಅಹಮದ್‌ರವರ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

157 ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್.(ಚಾಮರಾಜಪೇಟೆ)

ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

ಅ. ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿಯ ಅವ್ಯವಸ್ಥೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ, ಆದಾಗ್ಯೂ ದುರಸ್ತಿಕಾಮಗಾರಿಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಆ.) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಬೆಂಗಳೂರು ಜಲಮಂಡಳಿಯಿಂದ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ರೂ.38.71 ಲಕ್ಷ ಮೊತ್ತದಲ್ಲಿ ನೀರು ಸರಬರಾಜು ಕೊಳವೆ ಕಾಮಗಾರಿ ಹಾಗೂ ರೂ.104.95 ಲಕ್ಷ ಮೊತ್ತದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇವುಗಳನ್ನು ಹೊರತುಪಡಿಸಿ ತುರ್ತು ಸಮಯದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಮಾಹೆಯಾನ ಸಣ್ಣ ಕಾಮಗಾರಿಗಳನ್ನು ಸಹ ಆಗಿಂದಾಗ್ಗೆ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.

ಇ.) ಈ ಅವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೆ;

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ದಿನಾಂಕ: 30.06.2009ರ ಅಂತ್ಯಕ್ಕೆ ಪೂರ್ಣಗೊಳಿಸಲು ಕಾಲಮಿತಿಯನ್ನು ಹಮ್ಮಿಕೊಳ್ಳಲಾಗಿದೆ.

ಈ.) ನೀರು ಸರಬರಾಜು ಹಾಗೂ ಒಳಚರಂಡಿ ಅವ್ಯವಸ್ಥೆಯ ಕಾಮಗಾರಿಗಳನ್ನು ಸರಿಪಡಿಸಲು ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಇಲ್ಲ; ಮೇಲೆ ತಿಳಿಸಿರುವ ಕಾಮಗಾರಿಗಳಿಗೆ ಅವಶ್ಯವಿರುವ ಹಣವನ್ನು ಬೆಂಗಳೂರು ಜಲಮಂಡಳಿಯು ತನ್ನ ಸ್ವಂತ ಆದಾಯದಿಂದ ಭರಿಸುತ್ತದೆ.

ಉ. ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ನೀಡುವುದು)?

ಉದ್ಭವಿಸುವುದಿಲ್ಲ

ಶ್ರೀ ಜಮೀರ್ ಅಹಮದ್ ಖಾನ್ ಬಿ.ಝಡ್:- ಮಾನ್ಯ ಅಧ್ಯಕ್ಷರೆ, ಉತ್ತರಗಳ್ಯಾವುದೂ ಇದುವರೆಗೆ ಬಂದಿರಲಿಲ್ಲ. ಈಗ ಕೊಟ್ಟಿದ್ದಾರೆ. ಕಳೆದ ಬಾರಿ ಬೆಳಗಾಂನಲ್ಲಿ ನಡೆದ ಅಧಿವೇಶನದ ಸಂದರ್ಭದಲ್ಲಿಯೇ ಮಾನ್ಯ ಸಚಿವರಲ್ಲಿ ನಾನು ಮನವಿಯನ್ನು ಮಾಡಿಕೊಂಡಿದ್ದೆ. ಚಾಮರಾಜಪೇಟೆ ಕ್ಷೇತ್ರದಲ್ಲಿ ನೀರಿನ ಸಮಸ್ಯೆ ವಿಪರೀತವಾಗಿದೆ. ಸ್ಯಾನಿಟರಿ ಪ್ರಾಬ್ಲಂ ಕೂಡ ಇದೆ. ಇತ್ತೀಚೆಗೆ ಎಕ್ಸಿಕ್ಯುಟಿವ್ ಇಂಜಿನಿಯರ್ ವಾರ್ಡ್ ನಂ.30 ಕ್ಕೆ ಬಂದು ಇನ್ನು ಮೂರು ದಿವಸದಲ್ಲಿ ಸಮಸ್ಯೆ ನಿವಾರಿಸುತ್ತೇವೆಂದು ಹೇಳಿ ಹೋಗಿದ್ದಾರೆ. ಈಗಾಗಲೇ 15 ದಿವಸಗಳಾಗಿದ್ದರೂ ಇದುವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಚಾಮರಾಜಪೇಟೆಯ 5 ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಸಿಕ್ಕಾಪಟ್ಟೆ ಇದೆ. ನಾನು ಮಂತ್ರಿಗಳಲ್ಲಿ ವಿನಂತಿ ಮಾಡುವುದಿಷ್ಟೆ, ನೀವು ಅಧಿಕಾರಿಗಳಿಗೆ ಹೇಳಿ ನೀರಿನ ವ್ಯವಸ್ಥೆ ಮತ್ತು ಸ್ಯಾನಿಟರಿ ವ್ಯವಸ್ಥೆಯನ್ನು ಸರಿಯಾಗಿ ಮಾಡಿಸಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಧಿಕಾರಿಗಳು ಮಾನ್ಯ ಶಾಸಕರ ಜೊತೆಯಲ್ಲಿ ಅವರ ಕ್ಷೇತ್ರದಲ್ಲಿ ಪ್ರವಾಸವನ್ನು ಮಾಡಿ ಏನೇನು ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿ ಈಗಾಗಲೇ ಒಂದು ಕ್ರಿಯಾ ಯೋಜನೆಯನ್ನು ರೂಪಿಸಿದ್ದಾರೆ. ಸದ್ಯದಲ್ಲಿಯೇ ಆ ಬಗ್ಗೆ ಟೆಂಡರ್ ಕರೆದು ಆ ಕಾಮಗಾರಿಗಳನ್ನು ಮಾಡಿಸುತ್ತೇವೆ. ಈಗಾಗಲೇ ಯಾವ ಕಾಮಗಾರಿಗಳನ್ನು ನಾವು ಕೈಗೆತ್ತಿಕೊಂಡಿದ್ದೆವೋ ಅದರ ಪೂರ್ಣ ವಿವರಗಳನ್ನು ಮಾನ್ಯ ಶಾಸಕರಿಗೆ ನಾವು ಒದಗಿಸಿದ್ದೇವೆ. ಇನ್ನು ಮುಂದೆ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ಇರುತ್ತದೆ ಎಂದು ಎಲ್ಲರಿಗೂ ಗೊತ್ತಿರುವಂಥ ಸಂಗತಿಯೇ ಆಗಿದೆ. ಬೇಡಿಕೆಗನುಗುಣವಾಗಿ ನಮ್ಮ ಪೂರೈಕೆ ಇಲ್ಲ. ಆದುದರಿಂದ ಬೆಂಗಳೂರಿನ ಎಲ್ಲಾ

ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆದರೆ ಒಳಚರಂಡಿ ವ್ಯವಸ್ಥೆಗೆ ಮತ್ತು ಇತರೆ ಕಾಮಗಾರಿಗಳಿಗೆಲ್ಲದಕ್ಕೂ ನಾವು ಟೆಂಡರ್‌ನ್ನು ಕರೆದಿದ್ದೇವೆ. ಎಲ್ಲಾ ಮೂವತ್ತು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಕೂಡ ಸದ್ಯದಲ್ಲಿಯೇ ಈ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತೇವೆ.

260 ಶ್ರೀ ಎಸ್.ಅರ್.ವಿಶ್ವನಾಥ್

ಅ. ಅರ್ಕಾವತಿ ನದಿಯು ನಂದಿ ಬೆಟ್ಟದಲ್ಲಿ ಹರಿದು ಸುಮಾರು 1200 ಕ್ಕೂ ಹೆಚ್ಚು ಕೆರೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ನದಿಯು ಹರಿಯುವುದರಿಂದ ಕೆರೆಗಳು ತುಂಬಿ ನೀರಿನ ಜಲಮಟ್ಟ ಉತ್ತಮವಾಗಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಅರ್ಕಾವತಿ ನದಿಯ ಪಾತ್ರದಲ್ಲಿರುವ ಹೆಸರುಘಟ್ಟ ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯಗಳು ಬೆಂಗಳೂರು ಜಲ ಮಂಡಳಿಯ ವ್ಯಾಪ್ತಿಗೆ ಒಳಪಡುವುದೆಂದು ಮಂಡಳಿಯು ತಿಳಿಸಿದೆ. ಬಾಕಿ ಉಳಿದಂತೆ ಅರ್ಕಾವತಿ ನದಿಯಲ್ಲಿ ಉತ್ತಮವಾದ ಹರಿವು ಇದ್ದಾಗ ಜಲಾಶಯಗಳು ಮತ್ತು ಕೆರೆಗಳು ತುಂಬಿ ಜಲಮಟ್ಟ ಉತ್ತಮವಾಗುವುದೆಂದು ಸಣ್ಣ ನೀರಾವರಿ ಇಲಾಖೆಯು ತಿಳಿಸಿದೆ.

ಆ ನದಿಯ ಒತ್ತುವರಿ ಮತ್ತು ಅಕ್ರಮ ಕಟ್ಟಡಗಳು ಮತ್ತು ರಾಜ ಕಾಲುವೆ ಒತ್ತುವರಿಯಿಂದ ನದಿಯು ಬತ್ತಿ ಹೋಗಿದ್ದು, ಅದನ್ನು ಪುನಃಶ್ಚೇತನಗೊಳಿಸುವ ವಿಚಾರ ಯಾವ ಹಂತದಲ್ಲಿದೆ.

ಅರ್ಕಾವತಿ ನದಿಯ ಹೆಸರುಘಟ್ಟ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯಗಳನ್ನು ಪುನಃಶ್ಚೇತನಗೊಳಿಸಲು ನಂದಿ ಬೆಟ್ಟದಿಂದ ತಿಪ್ಪಗೊಂಡನಹಳ್ಳಿವರೆವಿಗೂ ನದಿ ಪಾತ್ರದಲ್ಲಿ ಬೆಳೆದಿರುವ ಗಿಡಗಂಟೆ, ಹೂಳಿನ ಪ್ರಮಾಣ, ಉಪ ನಾಲೆಗಳು ಮತ್ತು ಕೆರೆಗಳ ವಿವರ, ಭೂಮಿಯ ಅತಿಕ್ರಮಣ ಹಾಗೂ ಉಪಯೋಗದ ಪರಿವರ್ತನೆ, ಮಳೆನೀರು ಹರಿಯುವಿಕೆಗೆ ಇರುವ ಅಡಚಣೆಗಳು ಇವೆಲ್ಲದರ ಬಗ್ಗೆ ಸಂಪೂರ್ಣ ಸರ್ವೆ ಕಾರ್ಯವನ್ನು ಕೈಗೊಂಡು, ಪುನಃಶ್ಚೇತನಕ್ಕೆ ಕಾರ್ಯಕ್ರಮ ರೂಪಿಸಲಾಗಿದೆ. ಈ ಕಾರ್ಯಕ್ರಮದಂತೆ, ಈ ಕಾರ್ಯಕ್ಕಾಗಿ 2009-10ನೇ ಸಾಲಿನಲ್ಲಿ ರೂ.2.00 ಕೋಟಿಗಳ ಅನುದಾನವನ್ನು ನಗರಾಭಿವೃದ್ಧಿ ಇಲಾಖೆಗೆ ಒದಗಿಸಿದೆ.

ಇ ಈ ನದಿಯ ಪುನಃಶ್ಚೇತನದಿಂದ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆಯು ಸ್ವಲ್ಪ ಮಟ್ಟಿಗೆ ನಿವಾರಣೆಯಾಗುವುದಿಲ್ಲವೇ;

ಹೌದು.

ಈ ಹಾಗಿದ್ದಲ್ಲಿ ಇದನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುವುದು (ಪೂರ್ಣವಾದ ಮಾಹಿತಿಯನ್ನು ನೀಡುವುದು)?

ಅರ್ಕಾವತಿ ನದಿಯ ಪುನಃಶ್ಚೇತನಕ್ಕೆ ಸಂಬಂಧಿಸಿದಂತೆ ವಿವರವಾದ ಸರ್ವೇ ಕಾರ್ಯ ಕೈಗೊಂಡು, ವಿವರವಾದ ಯೋಜನಾ ವರದಿಯನ್ನು ತಯಾರಿಸಿಕೊಂಡ ನಂತರ ಕಾಮಗಾರಿ ಕೈಗೊಳ್ಳವುದನ್ನು ನಿರ್ಧರಿಸಲಾಗುವುದು.

ಶ್ರೀ ಎಸ್.ಆರ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ಒಂದು ಕಾಲದಲ್ಲಿ ಜೀವಂತವಾಗಿದ್ದ ಅರ್ಕಾವತಿ ನದಿ ಇವತ್ತು ಸತ್ತು ಹೋಗುವ ಸ್ಥಿತಿಗೆ ಬಂದಿರುವುದರಿಂದ ಆ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಆ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ನಂದಿಬೆಟ್ಟದಿಂದ ಸಂಗಮದವರೆಗೆ 190 ಕಿ.ಮೀ. ಅರ್ಕಾವತಿ ನದಿ ಒಟ್ಟು ಎಂಟು ತಾಲ್ಲೂಕುಗಳಲ್ಲಿ ಹರಿದುಹೋಗುವಾಗ 1200 ಕೆರೆಗಳನ್ನು ತುಂಬಿಸಿ ಮುಂದೆ ಆ ನದಿಯ ನೀರು ಹರಿದು ಹೋಗುತ್ತಿತ್ತು. ಒಂದು ಕಾಲದಲ್ಲಿ ಈ ರೀತಿಯಲ್ಲಿತ್ತು. ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾ ಹೌದು ಹಿಂದೆ ಅರ್ಕಾವತಿ ನದಿ ಹರಿಯುತ್ತಿದ್ದಾಗ 1200 ಕೆರೆಗಳೂ ಕೂಡ ತುಂಬಿ ಹರಿಯುತ್ತಿತ್ತು ಮತ್ತು ಆಗ ಅಂತರ್ಜಲದ ಗುಣಮಟ್ಟ ಕೂಡ ಸರಿಯಾಗಿತ್ತು ಎಂದು ಹೇಳಿದ್ದಾರೆ. ಇದರ ಜೊತೆಯಲ್ಲಿಯೇ ಇಂದು ನದಿ ಒತ್ತುವರಿ ಮತ್ತು ಅಕ್ರಮ ಕಟ್ಟಡ ಮತ್ತು ರಾಜಕಾಲುವೆಯ ಒತ್ತುವರಿಯಿಂದ ನದಿ ಇಂದು ಬತ್ತಿಹೋಗಿದೆ. ಅದನ್ನು ಪುನಃಶ್ಚೇತನ ಮಾಡಬೇಕೆಂದು ನಾನು ಕೇಳಿದ್ದೆ. ಈ ಬಗ್ಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಬಜೆಟ್ ಮಂಡಿಸುವ ಎರಡು ದಿವಸಗಳ ಹಿಂದೆಯೇ ಭೇಟಿಯಾಗಿ ಅವರಿಗೆ ಮನವಿಯನ್ನು ಕೊಟ್ಟಾಗ ಒಂದು ಕ್ಷಣ ಕೂಡ ಅವರು ಹಿಂದುಮುಂದು ನೋಡದೆ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಆ ಬಗ್ಗೆ ಸರ್ವೆ ಮಾಡಬೇಕು ಎನ್ನುವ ದೃಷ್ಟಿಯಿಂದ ಇವತ್ತು ಬಜೆಟ್‌ನಲ್ಲಿ ಒದಗಿಸಿಕೊಟ್ಟಿದ್ದಾರೆ. ನಾನು ಅವರಿಗೆ ವೈಯಕ್ತಿಕವಾಗಿ ಮತ್ತು ನನ್ನ ಕ್ಷೇತ್ರದ ಜನತೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಚಾರವಾಗಿದೆ. 1895 ರಿಂದ 1933 ರವರೆಗೂ ಬೆಂಗಳೂರಿಗೆ ನೀರನ್ನು ಕೊಟ್ಟಿದ್ದು ಹೆಸರಘಟ್ಟ ಕೆರೆ. ಸತತವಾಗಿ 40 ವರ್ಷಗಳ ಕಾಲ ಬೆಂಗಳೂರಿಗೆ ಹೆಸರುಘಟ್ಟ ಕೆರೆ

ನೀರನ್ನು ಕೊಟ್ಟಿತ್ತು. 1933 ರಿಂದ 1957ರವರೆಗೂ ಎರಡನೆಯ ಹಂತವಾಗಿ ತಿಪ್ಪಗೊಂಡನಹಳ್ಳಿ ಕೆರೆ ಪ್ರಾರಂಭವಾಯಿತು. ಸರ್. ಎಂ. ವಿಶ್ವೇಶ್ವರಯ್ಯನವರು ಈ ಬೆಂಗಳೂರಿನ ಜನಸಂಖ್ಯೆಗನುಗುಣವಾಗಿ . . .

ಅಧ್ಯಕ್ಷರು:- ಮಾನ್ಯ ವಿಶ್ವನಾಥ್‌ರವರೆ, ಈ ಪ್ರಶ್ನೆಯಲ್ಲಿ ಸಂಪೂರ್ಣವಾಗಿ ವಿವರಗಳನ್ನು ನೀಡಿ ಚರ್ಚೆ ಮಾಡುವುದು ಬೇಡ. ನೀವು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆ ಕೇಳಿ ಕೇವಲ ಸ್ಪಷ್ಟೀಕರಣವನ್ನು ಮಾನ್ಯ ಮಂತ್ರಿಗಳಿಂದ ಪಡೆದುಕೊಳ್ಳಬೇಕು. ಏಕೆಂದರೆ ಪ್ರಶ್ನೋತ್ತರ ಅವಧಿಯಲ್ಲಿ ದೀರ್ಘವಾಗಿ ಪ್ರಶ್ನೆ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್.ಆರ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ನನಗೆ ಎರಡೇ ಎರಡು ನಿಮಿಷ ಮಾತನಾಡಲು ಅವಕಾಶವನ್ನು ಕೊಡಿ. ಇವತ್ತು ಬೆಂಗಳೂರು ನಗರಕ್ಕೆ ನೀರಿನ ಪೂರೈಕೆಗೆ ಸಂಬಂಧಪಟ್ಟಂತೆ ಕಾವೇರಿ ಬಿಟ್ಟರೆ ಬೇರೆ ಯಾವುದೇ ಕುಡಿಯುವ ನೀರಿನ ಆಧಾರವಿಲ್ಲವಾಗಿದೆ. ಬೆಂಗಳೂರು ನಗರಕ್ಕೆ ಒಂದು ಕಾಲದಲ್ಲಿ ಹೆಸರಘಟ್ಟ ಕೆರೆ ಮತ್ತು ತಿಪ್ಪಗೊಂಡನಹಳ್ಳಿ ಕೆರೆ 20 ಪರ್ಸೆಂಟ್ ನೀರನ್ನು ಕೊಡುತ್ತಿತ್ತು. ಇವತ್ತು ಏನಾಗಿದೆಯೆಂದರೆ 190 ಕಿ.ಮೀ. ನದಿಯ ವ್ಯಾಪ್ತಿ ಏನಿದೆಯೋ ಅಲ್ಲಿ ಸಂಪೂರ್ಣವಾಗಿ ನದಿ ಒತ್ತುವರಿಯಾಗಿದೆ. ಅಲ್ಲಿ ಮರಳು ತೆಗೆಯುವುದಿರಬಹುದು, ಗಣಿಗಾರಿಕೆ ಇರಬಹುದು, ಒತ್ತುವರಿ ಇರಬಹುದ, ರಾಜಕಾಲುವೆಗಳು ಒತ್ತುವರಿಯಾಗಿರುವುದರಿಂದ ಒಂದು ಕಾಲದಲ್ಲಿ ನೀರು ತುಂಬಿ ಹರಿಯುತ್ತಿದ್ದ ಈ ಐತಿಹಾಸಿಕ ನದಿ ಇವತ್ತು ಸಂಪೂರ್ಣವಾಗಿ ಬತ್ತಿಹೋಗಿದೆ. ಇವತ್ತು ಕೇರಳ ಇರಬಹುದು, ತಮಿಳುನಾಡು ಇರಬಹುದು ಮತ್ತು ರಾಜಸ್ಥಾನದಲ್ಲಿ ಈ ರೀತಿಯಾದಂಥ ನದಿಗಳನ್ನು ಪುನಃಶ್ಚೇತನ ಮಾಡಿ ಇವತ್ತು ಮತ್ತೆ ಆ ನದಿಗಳು ಹರಿಯತಕ್ಕಂಥ ವ್ಯವಸ್ಥೆಯನ್ನು ಮಾಡಿರುವ ಸನ್ನಿವೇಶಗಳನ್ನು ನಾವು ನೋಡುತ್ತಿರುವಾಗ ಇವತ್ತು ಬೆಂಗಳೂರು ನಗರಕ್ಕೆ ನಾಲ್ಕನೇ ಹಂತದ ಕಾವೇರಿ ನೀರನ್ನು ಬಿಟ್ಟರೆ ನೀರಿಗೆ ಬೇರೆ ಯಾವುದೇ ಸೌಲಭ್ಯವಿಲ್ಲದಿರುವುದರಿಂದ ಹಿಂದೆ ಒಂದು ಕಾಲದಲ್ಲಿ ಸುಮಾರು 70 ವರ್ಷಗಳ ಕಾಲ ಸತತವಾಗಿ ಬೆಂಗಳೂರಿಗೆ ನೀರನ್ನು ಕೊಟ್ಟಂಥ ಈ ಅರ್ಕಾವತಿ ನದಿಯ ಬಗ್ಗೆ ಪುನಃಶ್ಚೇತನ ಮಾಡುವುದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಪುನಃಶ್ಚೇತನ ಕೆಲಸವನ್ನು ಮಾಡಬೇಕು. ಈ ಕಾರ್ಯವನ್ನು ಮಾಡಿದರೆ 1200 ಕೆರೆಗಳು ತುಂಬಿ ಹರಿಯುತ್ತವೆ. ಮಳೆ ಪ್ರಮಾಣ ಹಿಂದಿನ ನೂರು ವರ್ಷಗಳಲ್ಲಿ ಅಷ್ಟೇನೂ ಹೆಚ್ಚು ಕಡಿಮೆಯಾಗಿಲ್ಲ. ಶೇಕಡ ಹತ್ತರಷ್ಟು ಮಳೆ ಪ್ರಮಾಣ ಕಡಿಮೆಯಾಗಿರುವುದನ್ನು ಬಿಟ್ಟರೆ ಇವತ್ತಿನವರೆಗೂ ಕೂಡ ಮಳೆ ಪ್ರಮಾಣ ಬಹುತೇಕ ಹಿಂದಿನ ಪ್ರಮಾಣದಲ್ಲಿಯೇ ಇದೆ. ಆದರೆ ನದಿ ಬತ್ತಿಹೋಗಿದೆ

ಮತ್ತು ಕೆರೆಗಳು ಕೂಡ ಬತ್ತಿಹೋಗಿವೆ. 2003 ರಲ್ಲಿ ಸರ್ಕಾರ ಅಧಿಸೂಚನೆಯನ್ನೂ ಕೂಡ ಹೊರಡಿಸಿ ಇದು ಸಂರಕ್ಷಿತ ಪ್ರದೇಶ, ಹೆಸರಘಟ್ಟದಿಂದ ತಿಪ್ಪಗೊಂಡನಹಳ್ಳಿ ಮತ್ತು ಕುಮದ್ವತಿ ನದಿಯ ಪಾತ್ರವೇನಿದೆಯೋ ಅದರ 2 ಕಿ.ಮೀ. ಆಜುಬಾಜಿನಲ್ಲಿ ಯಾವುದೇ ಕೃಷಿ ಮತ್ತು ಕೃಷಿಯೇತರವಾದ ಒಂದು ಚಟುವಟಿಕೆಯನ್ನು ಅಲ್ಲಿ ಮಾಡಬಾರದು ಎಂದು ಸರ್ಕಾರ ಅಧಿಸೂಚನೆಯಲ್ಲಿ ಹೇಳಿದೆ.

ಅಧ್ಯಕ್ಷರು:- ಮಾನ್ಯ ವಿಶ್ವನಾಥ್‌ರವರೆ, ಮಾನ್ಯ ಸಚಿವರು ಈಗಾಗಲೇ ಉತ್ತರವನ್ನೇನು ಕೊಟ್ಟಿದ್ದಾರೆ, ಅದರ ಮೇಲೆ ನೀವು ಉಪ ಪ್ರಶ್ನೆಯನ್ನು ಮಾತ್ರ ಕೇಳಿ ಮಂತ್ರಿಗಳಿಂದ ಉತ್ತರವನ್ನು ಪಡೆಯಬೇಕು. ಅದನ್ನು ಬಿಟ್ಟು ಬೇರೆಯ ವಿಚಾರಗಳನ್ನು ಬಜೆಟ್ ಮೇಲೆ ಭಾಷಣ ಮಾಡುವಾಗ ಹೇಳಿ.

ಶ್ರೀ ಎಸ್.ಆರ್. ವಿಶ್ವನಾಥ್:- ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದಿಷ್ಟೆ. ಇವತ್ತು ಒತ್ತುವರಿ ಹೆಚ್ಚು ಆಗುತ್ತಿದೆ. ನೆಲಮಂಗಲ ರೋಡ್‌ನಲ್ಲಿ ಹೋದರೆ ಸಾಕು. ಎಲ್ಲರಿಗೂ ಕಾಣಿಸುತ್ತದೆ. ನದಿಯನ್ನು ಒತ್ತುವರಿ ಮಾಡಿಕೊಂಡು ದೊಡ್ಡ ದೊಡ್ಡ ಕಾರ್ಖಾನೆಗಳು ಇವೆ. ಇದಲ್ಲದೇ ಎಲ್ಲಾ ತರಹದ ಅಕ್ರಮವಾದ ಚಟುವಟಿಕೆಗಳು ಅಲ್ಲಿ ನಡೆಯುತ್ತಿವೆ. ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುವುದೇನೆಂದರೆ ಈಗಾಗಲೇ ಇಂದಿನ ಬಜೆಟ್‌ನಲ್ಲಿ 2 ಕೋಟಿ ರೂಪಾಯಿಗಳನ್ನು ಸರ್ವೆ ಮಾಡುವುದಕ್ಕೆ ಏನು ಕೊಟ್ಟಿದ್ದಾರೆ, ಈ ಸರ್ವೆ ಕಾರ್ಯಕ್ಕೆ ಸಂಬಂಧಪಟ್ಟಂತೆ 2003 ರಲ್ಲಿಯೇ ಎಲ್ಲಾ ದಾಖಲೆಗಳೂ ಕೂಡ ಇದ್ದು 2003 ರಲ್ಲಿಯೇ ಅಧಿಸೂಚನೆಯನ್ನು ಹೊರಡಿಸಿ ಯಾವುದೇ ಕಟ್ಟಡಗಳನ್ನು ಅಲ್ಲಿ ಕಟ್ಟಬಾರದು ಎಂದು ಹೇಳಲಾಗಿದೆ. 23 ಇಲಾಖೆಗಳಿಗೆ ನೋಟಿಸ್‌ಗಳನ್ನು ಕೊಟ್ಟಿದ್ದರೂ ಕೂಡ ಇಲ್ಲಿಯವರೆವಿಗೂ ಯಾವುದೇ ರೀತಿಯಾದ ಕ್ರಮವನ್ನೂ ಕೂಡ ತೆಗೆದುಕೊಳ್ಳದೇ ಇಂದು ಆ ನದಿ ಸತ್ತು ಹೋಗತಕ್ಕಂಥ ಸ್ಥಿತಿಗೆ ಬಂದಿರುವುದರಿಂದ ದಯವಿಟ್ಟು ನಮ್ಮ ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಿ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಒಂದು ಕಾಲದಲ್ಲಿ ಬೆಂಗಳೂರಿಗೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಅರ್ಕಾವತಿ ನದಿಯಿಂದ ತುಂಬಿರುವಂತಹ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟ ಜಲಾಶಯಗಳಿಂದ ಆಗುತ್ತಿತ್ತು. 1993ರವರೆಗೂ ಕೂಡ ಈ ಕೆರೆಗಳಿಂದ ನೀರು ಬರುತ್ತಿತ್ತು. 1993ರ ನಂತರ ಕೆರೆ ಬತ್ತಿ ಹೋದಮೇಲೆ 28 ಕೊಳವೆ ಬಾವಿಯಿಂದ ನೀರನ್ನು ಸರಬರಾಜು ಮಾಡುವಂತಹ ಒಂದು ವ್ಯವಸ್ಥೆ ಮಾಡಲಾಗಿತ್ತು. ಕಾವೇರಿ 4ನೇ ಹಂತ, ಮೊದಲನೇ ಘಟ್ಟದ ನೀರು ಸರಬರಾಜು ವ್ಯವಸ್ಥೆ ಪ್ರಾರಂಭವಾದ ಮೇಲೆ ಈ ಕೊಳವೆ ಬಾವಿಯಿಂದ ಕೂಡ ನೀರು

ಸರಬರಾಜು ಮಾಡುವಂತಹ ವ್ಯವಸ್ಥೆ ನಿಂತುಹೋಗಿದೆ. ಈ ಮಧ್ಯೆ ಈ ನದಿ ಜಾಗದಲ್ಲಿ ಬಹಳಷ್ಟು ಅಕ್ರಮ ಕಟ್ಟಡಗಳು, ವ್ಯವಸಾಯ ಮತ್ತು ಉಸುಕನ್ನು ಸಾಗಿಸುವಂತಹ ಕೆಲಸ ಯಥೇಚ್ಛವಾಗಿ ಏನು ನಡೆದಿದೆ, ಅದರಿಂದ ಈ ಜಲಾಶಯ ಬತ್ತುವುದಕ್ಕೆ ಕಾರಣವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಇದರ ಸಂಪೂರ್ಣ ಸರ್ವೇ ಮಾಡುವುದಕ್ಕೆ ದುಡ್ಡನ್ನು ಕೊಟ್ಟಿದ್ದಾರೆ. ಅದನ್ನು ಬಳಸಿಕೊಂಡು ನಾವು ಸರ್ವೇ ಮಾಡುವುದಷ್ಟೇ ಅಲ್ಲ, BMRDA ದವರು 2003ರಲ್ಲಿ ಏನು ಆಜ್ಞೆ ಮಾಡಿದ್ದರು, ಆ ಆಜ್ಞೆಯನ್ನು ಸಂಪೂರ್ಣವಾಗಿ ಜಾರಿ ಮಾಡಲು ಕೂಡಲೇ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ. ಅಕ್ರಮ ಕಾರ್ಖಾನೆ, ಕಟ್ಟಡ, ವ್ಯವಸಾಯ ಯಾವುದೇ ರೂಪದಲ್ಲಿದ್ದರೂ ಕೂಡ ಅವರಿಗೆ ಕೂಡಲೇ notice ಅನ್ನು ಕೊಟ್ಟು ಅಲ್ಲಿ ತೆರವುಗೊಳಿಸಿ, ಅಲ್ಲಿ ಯಾವುದೇ ಚಟುವಟಿಕೆ ಆಗಬಾರದು ಎನ್ನುವ ನಿಷೇಧಿತ ಪ್ರದೇಶ ಏನಿದೆ, ನದಿ ಪಾತ್ರದ ಪವಿತ್ರವನ್ನು ಸಂಪೂರ್ಣವಾಗಿ ಉಳಿಸಿಕೊಂಡು, ಅದನ್ನು ಪುನಶ್ಚೇತನ ಮಾಡುವುದಕ್ಕೆ ಸರ್ಕಾರ ಕೂಡಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ. ಆ ಭಾಗದಲ್ಲಿ ಕುಡಿಯುವ ನೀರಿಗೆ ಅನುಕೂಲವಾಗುವ ರೀತಿಯಲ್ಲಿ ಮತ್ತೊಮ್ಮೆ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಜಲಾಶಯಗಳಿಗೂ ಕೂಡ ನೀರು ಸರಬರಾಜು ಮಾಡುವ ಎಲ್ಲಾ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಆರ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಒಂದು ಸಭೆಯನ್ನು ಕರೆಯಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ BDA, BMRDA, BWSSB, RDPR ಈ ಎಲ್ಲಾ ಇಲಾಖೆಗಳು ನದಿಗೆ ಸಂಬಂಧಪಟ್ಟಿರುವುದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಸಭೆಯನ್ನು ಕರೆದರೆ ಖಂಡಿತವಾಗಿ ಭಗೀರಥ ಎನ್ನುವ ಹೆಸರು ಮಾನ್ಯ ಮುಖ್ಯಮಂತ್ರಿಗಳಿಗೆ ಸಿಗುತ್ತದೆ. ಈಗಾಗಲೇ ನಮ್ಮ ಕ್ಷೇತ್ರದ ಜನತೆ ಎರಡು ಕೋಟಿ ರೂಪಾಯಿ ಕೊಟ್ಟಿರುವುದರಿಂದ ಈ ಅರ್ಕಾವತಿ ನದಿ ಪುನಶ್ಚೇತನ ಆಗುತ್ತದೆ ಎಂದು ಆನಂದ ಪಡುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದ ಆಸಕ್ತಿಯನ್ನು ವಹಿಸಿದರೆ ಖಂಡಿತವಾಗಿ ಎಂಟು ತಾಲ್ಲೂಕುಗಳ ಜನ ಸಮೃದ್ಧವಾಗಿ ಇರುತ್ತಾರೆ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಅವರು ಒಪ್ಪಿಕೊಂಡಿದ್ದಾರೆ. ಅವರ ನೇತೃತ್ವದಲ್ಲಿ ಒಂದು ಸಭೆಯನ್ನು ಕರೆಯುತ್ತೇನೆ.

ಅಧ್ಯಕ್ಷರು: ರೇವಣ್ಣನವರು ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣ ಹಾಗೂ ನನ್ನ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು:- ಹೌದು, ಅದಕ್ಕೆ ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೇ, ಅದು ತುಂಬಾ ಸರಳವಾದ ಪ್ರಶ್ನೆ, ಅದಕ್ಕೆ ಸರಳ ಉತ್ತರ ಅಷ್ಟೇ ಸಾಕಾಗಿರುವುದು. ಅದಕ್ಕೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳುವಂತಹ ಅಗತ್ಯವಿಲ್ಲ.

ಅಧ್ಯಕ್ಷರು:- ಸುರೇಶ್ ಕುಮಾರ್‌ರವರೇ, ಇದಕ್ಕೆ ಉತ್ತರವನ್ನು ಯಾವಾಗ ಕೊಡುತ್ತೀರಿ?

ಶ್ರೀ ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಅದಕ್ಕೆ Finance Department ನಿಂದ ಮಾಹಿತಿ ಬರಬೇಕು. ಮಾಹಿತಿ ಬಂದತಕ್ಷಣ ಕೊಡುತ್ತೇನೆ.

ಅಧ್ಯಕ್ಷರು: ಈ ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡಿ.

237 ಶ್ರೀ ಶಿವಶಂಕರ ರೆಡ್ಡಿ. ಎನ್.ಹೆಚ್

ಮಾನ್ಯ ಮುಖ್ಯಮಂತ್ರಿಗಳು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು (ವಿವರ ಒದಗಿಸುವುದು);

ಗೌರಿಬಿದನೂರು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣದ ವಿವರ ಈ ಕೆಳಕಂಡಂತಿದೆ;

ರಾಜ್ಯ ಅರಣ್ಯ	- 8,628.52	ಎಕರೆ
ಮೈನರ್ ಫಾರೆಸ್ಟ್	- 430.26	ಎಕರೆ
ಒಟ್ಟು	- **9,059.38**	ಎಕರೆ

ಆ) ಅರಣ್ಯ ಪ್ರದೇಶದ ಭೂಮಿಯನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ: ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರವು ವಿಧಿಸುವ ದಂಡವೇನು:

ಒಟ್ಟು 104 ಜನ ರೈತರು 212ಎಕರೆ 30 ಗುಂಟೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ದಿನಾಂಕ: 27/04/1978ರ ಪೂರ್ವದ ಒತ್ತುವರಿಯನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ದಿನಾಂಕ: 15/05/1996 ಹಾಗೂ ರಾಜ್ಯ ಸರ್ಕಾರದ ದಿನಾಂಕ: 5/05/1997ರ ಆದೇಶಗಳಲ್ಲಿ ಒಟ್ಟು 14848.726 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 19348 ಕುಟುಂಬಗಳಿಗೆ ಸಕ್ರಮ ಮಾಡಲು, ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲಾಗಿದೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಈ ಮೇಲೆ ಹೇಳಿದ ಎಲ್ಲಾ ಅರಣ್ಯ ಅತಿಕ್ರಮಣಗಳೂ ದಿನಾಂಕ: 27/04/1978ರ ನಂತರದ ಅತಿಕ್ರಮಣ ಪ್ರಕರಣಗಳಾಗಿರುತ್ತವೆ. ಆದುದರಿಂದ ಈ ಅತಿಕ್ರಮಣಗಳನ್ನು ಈ ಮೇಲೆ ತಿಳಿಸಿದ ಆದೇಶಗಳ ಅಡಿಯಲ್ಲಿ ಪರಿಗಣಿಸಲು ಅರ್ಹವಾಗಿರುವುದಿಲ್ಲ.

ಅರಣ್ಯ ಜಮೀನನ್ನು, ಯಾರೇ ಆಗಲೀ ಅನುಮತಿ ಇಲ್ಲದೇ ಅರಣ್ಯೇತರ ಉದ್ದೇಶಕ್ಕೆ ಬಳಸಿದ್ದಲ್ಲಿ, 1963ರ 24ನೇ ನಿಯಮದ ಪ್ರಕಾರ ಹಾಗೂ 1980ರ ಅರಣ್ಯ ಸಂರಕ್ಷಣೆ ಕಾಯ್ದೆಯ 3(ಎ) ವಿಧಿಯ ಪ್ರಕಾರವೂ ದಂಡನೆಯನ್ನು ವಿಧಿಸಬಹುದಾಗಿದೆ.

1963ರ ಕರ್ನಾಟಕ ಅರಣ್ಯ ಕಾಯ್ದೆಯ ಅಧಿನಿಯಮ 64(ಎ) ಪ್ರಕಾರ ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೂ ಕಡಿಮೆ ಇಲ್ಲದ ಅಧಿಕಾರಿಯಿಂದ ವಿಚಾರಣೆಗೆ ಒಳಪಡಿಸಿ ಕ್ರಮ ಕೈಗೊಳ್ಳಬೇಕೆಂದಿದೆ.

ಅತಿಕ್ರಮಣಕಾರರನ್ನು ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಇ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯಲ್ಲಿಯೇ ಬಡ ಕುಟುಂಬಗಳು ಜೀವನೋಪಾಯವನ್ನು ನಡೆಸುತ್ತಿರುವ ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಇದು ಅಕ್ರಮ ಸಾಗುವಳಿಯಾಗಿರುವುದರಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಭಾದ್ಯತೆ ಅಥವಾ ಜವಾಬ್ದಾರಿ ಸರ್ಕಾರಕ್ಕೆ ಇರುವುದಿಲ್ಲ.

ಶ್ರೀ ಎನ್. ಸಂಪಂಗಿ(ಶಿವಶಂಕರ ರೆಡ್ಡಿ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 1997ರವರೆಗೂ 14,848 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 19,348 ಕುಟುಂಬಗಳಿಗೆ ಸಕ್ರಮ ಮಾಡಲು ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ 1978ರ ನಂತರದ ಅತಿಕ್ರಮಣ ಪ್ರದೇಶಗಳ ಪ್ರಕರಣಗಳೇನಿರುತ್ತವೆ, ಅದರ ಬಗ್ಗೆ ಏನು ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ? ಆ ಪ್ರದೇಶಗಳಲ್ಲಿ ಇರುವಂತಹ ಬಡವರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂದು ಕೇಳುತ್ತೇನೆ.

ಡಾ: ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಒಟ್ಟು 104 ಜನ ರೈತರು 212 ಎಕರೆ 30 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಇದರಲ್ಲಿ ಬಹಳಷ್ಟು ಜನ ಜಮೀನು ಇಲ್ಲದಂತಹ ರೈತರು ಇದ್ದಾರೆ. Labourers

ಇದ್ದವರು ಜಮೀನು ಒತ್ತುವರಿ ಮಾಡಿದ್ದಾರೆ. ಆದರೆ ದಿ:27.04.1978ರ ಪೂರ್ವದ ಒತ್ತುವರಿ ಏನಿದೆ, ಅದನ್ನು ಮಾತ್ರ ನಮಗೆ ಸಕ್ರಮ ಮಾಡುವುದಕ್ಕೆ ಅವಕಾಶ ಇದೆ. ಅದನ್ನು recommend ಮಾಡಿ ಕಳುಹಿಸಿಕೊಟ್ಟಿದ್ದೇವೆ. ಹಿಂದೆ unauthorized cultivation ಮಾಡಿದ್ದರೂ ಕೂಡ ಅದಕ್ಕೆ ಪರ್ಯಾಯವಾಗಿ revenue land ಕೊಟ್ಟು ಆ ಬಡವರನ್ನು ಉಳಿಸಿಕೊಳ್ಳಬಹುದಾ ಎನ್ನುವುದಕ್ಕೆ ನಾವು ಅನುಮತಿಯನ್ನು ತೆಗೆದುಕೊಳ್ಳಬೇಕು. ಒಂದು ಗಂಟೆ ಹೊಸದಾಗಿ ಅರಣ್ಯ ಒತ್ತುವರಿ ಮಾಡಿದವರಿಗೆ ರಕ್ಷಣೆ ಕೊಡುವಂತಹ ಪ್ರಶ್ನೆ ಇಲ್ಲ. ಕಾನೂನು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುತ್ತದೆ. ಈಗಿರುವ Supreme Court decision ಪ್ರಕಾರ ದಿನಾಂಕ 27.04.78ರ ಹಿಂದೆ ಇದ್ದವರಿಗೆ ಮಾತ್ರ confirm ಮಾಡಬಹುದು ಹೊರತು ಯಾವುದೇ ಕಾರಣಕ್ಕೂ ಕೂಡ ಆ ದಿನಾಂಕದ ನಂತರ ಒತ್ತುವರಿ ಮಾಡಿಕೊಂಡವರಿಗೆ ಸಕ್ರಮ ಮಾಡುವುದಕ್ಕೆ ಬರುತ್ತಿಲ್ಲ. ಆದರೆ ಮಾನವೀಯತೆ ದೃಷ್ಟಿಯಿಂದ ಅವರು ಕಡುಬಡವರು, ಜಮೀನು ಇಲ್ಲದಿರುವವರು ಇರುವುದರಿಂದ ಅವರಿಗೆ ಬಿಗಿಯಾದ ಕ್ರಮವನ್ನು ಈ ಕೇಸ್‌ನಲ್ಲಿ ತೆಗೆದುಕೊಂಡಿಲ್ಲ. ಆದರೆ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ. ಆದರೆ alternate revenue land ಕೊಡುವುದಕ್ಕೆ ಆಗುತ್ತದೆಯೇ ಎಂದು ಪರಿಶೀಲನೆ ಮಾಡಿ, ಅದಕ್ಕೆ ಕೇಂದ್ರ ಸರ್ಕಾರದ ಹಾಗೂ ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದು ಮಾಡಬೇಕಾಗುತ್ತದೆ. ಸದ್ಯಕ್ಕೆ ಈ ಜಮೀನುಗಳನ್ನು ಅವರಿಗೆ ಖಾಯಂ ಮಾಡುವುದಕ್ಕೆ ಬರುವುದಿಲ್ಲ. ಅವರನ್ನು ಆ ಜಾಗದಿಂದ ಖಾಲಿ ಮಾಡಿಸುವುದೇ ಇರುವಂತಹ ಮಾರ್ಗ. ಆದರೆ ನಾವು ಮಾನವೀಯತೆಯ ದೃಷ್ಟಿಯಿಂದ ಸ್ವಲ್ಪ ನಿಧಾನ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:– ನೋಡಿ ಶರಣ ಪ್ರಕಾಶ್‌ರವರೇ, ಇದು ಗೌರಿಬಿದನೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಚಾರ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:– ಮಾನ್ಯ ಅಧ್ಯಕ್ಷರೇ, ಇದು ಅತಿಕ್ರಮಣಕ್ಕೆ ಸಂಬಂಧಪಟ್ಟಂತಹ ವಿಚಾರ.

ಅಧ್ಯಕ್ಷರು: ಸಂಪಂಗಿಯವರೇ, ಇದಕ್ಕೆ ಏನಾದರೂ ಉಪಪ್ರಶ್ನೆ ಕೇಳುವುದಿದ್ದರೆ ಕೇಳಿ. ಶರಣ ಪ್ರಕಾಶ್‌ರವರೇ ಅವರಿಗೆ ಮಾತನಾಡುವುದಕ್ಕೆ ಅಧಿಕಾರ ಕೊಟ್ಟಿದೆ. ಅವರು ಮಾತ್ರ ಕೇಳಲಿ. ಸಂಪಂಗಿಯವರೇ ನೀವು ಕೇಳುವುದಾದರೆ ಕೇಳಿ, ಇಲ್ಲದಿದ್ದರೆ ಬಿಡಿ. ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಈ ಪ್ರಶ್ನೆ ಗೌರಿಬಿದನೂರು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುವುದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ, ಇದು ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟಂತಹ ವಿಚಾರ ಇದೆ.

ಅಧ್ಯಕ್ಷರು:- ಇಲ್ಲ, ನೀವು ಅದನ್ನು ಬಜೆಟ್‌ಗೆ ಅವಕಾಶ ಕೊಟ್ಟಾಗ ಚರ್ಚೆ ಮಾಡಿ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ಬಡವರಿಗೆ ಅನುಕೂಲವಾಗಲಿ ಎಂದು ಕೇಂದ್ರ ಸರ್ಕಾರ ಈಗ ಹೊಸದಾಗಿ....

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ Forest welfare protection actಎಂದು ಹೊಸ ಕಾನೂನು ಮಾಡಿದ್ದಾರೆ. ಆ ಕಾನೂನಿನ ಅಡಿಯಲ್ಲಿ ಏನಾದರೂ ಇದಕ್ಕೆ ಅವಕಾಶ ಇದೆಯೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ನೀವು ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲ.

ಡಾ: ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಈಗಿರುವಂತಹ ಹೊಸ ಕಾನೂನು ಅಡಿಯಲ್ಲಿರಬಹುದು, ಯಾವುದೇ ಕಾನೂನು ಅಡಿಯಲ್ಲಿರಬಹುದು, ಅರಣ್ಯ ಒತ್ತುವರಿಯನ್ನು ಸಕ್ರಮ ಮಾಡುವುದಕ್ಕೆ ಅವಕಾಶ ಇಲ್ಲ. ಇವತ್ತು ಬಹಳ ಸ್ಪಷ್ಟವಾಗಿ ಎರಡು ಪ್ರಮುಖವಾದ ವಿಷಯಗಳನ್ನು ನಾವು ತೀರ್ಮಾನ ಮಾಡಿರುವುದೇನೆಂದರೆ ಒತ್ತುವರಿ ಪ್ರಕರಣಗಳು ದಿ: 27.04.78ರ ಮೊದಲೇ ಆಗಿರಬೇಕು, ಒತ್ತುವರಿ ಪ್ರದೇಶ ಸಕ್ರಮ ಮಾಡುವುದಾದರೆ ಅವನ ಸ್ವಂತ ಹಿಡುವಳಿ ಸೇರಿ ಅದರ ವಿಸ್ತೀರ್ಣ ಮೂರು ಎಕರೆಗಿಂತ ಮೀರಿರಬಾರದು, ಒತ್ತುವರಿದಾರನ ವಾರ್ಷಿಕ ವರಮಾನ ಎಂಟು ಸಾವಿರ ರೂಪಾಯಿಗಿಂತ ಜಾಸ್ತಿ ಇರಬಾರದು, ಇದು ನಮ್ಮ ರಾಜ್ಯ ಸರ್ಕಾರದ ನಿಯಮಾವಳಿಗಳು. ಆದರೆ ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ ಒತ್ತುವರಿ ಜಮೀನು ಅರಣ್ಯ ಪ್ರದೇಶದ ಮಧ್ಯ ಭಾಗದಲ್ಲಿ ಇರಬಾರದು, ಅತಿಕ್ರಮಣ ಅರಣ್ಯ ಧಾಮ ಅಥವಾ ರಾಷ್ಟ್ರೀಯ ಉದ್ಯಾನ ವನಗಳಲ್ಲಿ ಮಾಡಿರಬಾರದು, ಇಳಿಜಾರು ಪ್ರದೇಶದಲ್ಲಿ ಇರಬಾರದು. ಅದೂ ಕೂಡ 1978ರ ಮೊದಲು ಇರುವುದು. ಈಗಾಗಲೇ ಹೇಳಿದ ಹಾಗೆ ನಾವು ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ನಮ್ಮಲ್ಲಿ surplus revenue land ಏನಿದೆ, ಅದನ್ನು alternative ಆಗಿ ಕೊಡುವುದಕ್ಕೆ ಆಗುತ್ತದೆಯೇ ಎಂದು ಪರಿಶೀಲನೆ ಮಾಡಿ ಕೇಂದ್ರದ ಅನುಮತಿಯನ್ನು ಪಡೆದು ಮಾಡಬೇಕಾಗುತ್ತದೆ. ನಿಜವಾದ landless labourers ಎಸ್‌ಸಿ:ಎಸ್‌ಟಿ ದೊಡ್ಡ ಪ್ರಮಾಣದಲ್ಲಿ ಇದ್ದಾರೆ. ಇದರ ಬಗ್ಗೆ ನಾನು ಇಪ್ಪತ್ತು ವರ್ಷ ಹೋರಾಟ ಮಾಡಿಕೊಂಡು ಬಂದಿರುವುದು ತಮಗೆ ಗೊತ್ತಿದೆ. ಆದರೆ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಆದರೆ ಈಗಿರುವಂತಹ ಕಾನೂನು ಚೌಕಟ್ಟಿನಲ್ಲಿ ಅವಕಾಶ ಇಲ್ಲ. ನಾವು ಕೇಂದ್ರ ಸರ್ಕಾರದ ಮನವೊಲಿಸಿ, alternative land ಕೊಡುತ್ತೇವೆ, ಕಡುಬಡವರಿಗೆ ತೊಂದರೆ ಕೊಡಬೇಡಿ ಎಂದು ಹೇಳಿ ನಾವು

ಪ್ರಯತ್ನ ಮಾಡುತ್ತೇವೆ. ನಾನು ನಿಮ್ಮ ಜೊತೆಗೆ ಇದ್ದೇನೆ. ನನಗೆ ಅವರ ಬಗ್ಗೆ ಸಹಾನುಭೂತಿ ಇದೆ.

61 ಶ್ರೀ ಪಾಟೀಲ್ ಎ.ಎಸ್

ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು)

ಅ) ಬಿಜಾಪುರ ಜಿಲ್ಲೆ ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ ರಸ್ತೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತವೆ(ರಸ್ತೆಗಳ ವಿವರ ಕಿ.ಮೀ ವಾರು ನೀಡುವುದು)

119.60 ಕಿ.ಮೀ ಉದ್ದದ 4 ರಾಜ್ಯ ಹೆದ್ದಾರಿಗಳು

337.21 ಕಿ.ಮೀ ಉದ್ದದ 28 ಜಿಲ್ಲಾ ಮುಖ್ಯ ರಸ್ತೆಗಳು

ರಸ್ತೆವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) ಈ ರಸ್ತೆಗಳ ಸುಧಾರಣೆಗೆ ವಿವಿಧ ಯೋಜನೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು?

ಕ್ಷೇತ್ರಗಳ ಮರುವಿಂಗಡಣೆಯಿಂದ ದೇವರ ಹಿಪ್ಪರಗಿ ಮತಕ್ಷೇತ್ರವು ಅಸ್ತಿತ್ವಕ್ಕೆ ಬಂದಿದ್ದು, 2008-09ನೇ ಸಾಲಿನ ಕಾಮಗಾರಿ ಹಾಗೂ ಅನುದಾನದ ವಿವರಗಳು ಮತ್ತು ಕಾಮಗಾರಿಯ ಹಂತವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಇ) ಕಾಮಗಾರಿಗಳು ಯಾವ ಹಂತದಲ್ಲಿವೆ (ವಿವರ ನೀಡುವುದು);

ಈ) ಈ ರಸ್ತೆಗಳ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರಸ್ತಾಪಿತ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

0-1053-82

ಅನುಬಂಧ–1

ದೇವರ ಹಿಪ್ಪರಗಿ ಮತಕ್ಷೇತ್ರದಲ್ಲಿ ಬರುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ವಿವರ (ಎಲ್.ಎ.ಕ್ಯೂ.61)

ಅ. ನಂ.	ಮತಕ್ಷೇತ್ರ	ರಸ್ತೆಯ ಹೆಸರು	ರಸ್ತೆ ಹಾದು ಹೋಗುವ ತಾಲೂಕು	ರಸ್ತೆ ವರ್ಗ	ರಸ್ತೆ ಸಂಖ್ಯೆ	ಆರಂಭದ ಚೈನೇಜ	ಅಂತ್ಯದ ಚೈನೇಜ	ಒಟ್ಟು ಉದ್ದ
1	2	3	4	5	6	7	8	9
1	ದೇವರಹಿಪ್ಪರಗಿ –27	ಶಿರಾಡೋಣ ಲಿಂಗಸೂರ ರಾಜ್ಯ ಹೆದ್ದಾರಿ–41 (0.50 ಕಿ.ಮೀ. ಓವರ್ ಲ್ಯಾಪ)	ಸಿಂದಗಿ ಬಾಗೇವಾಡಿ	ರಾ.ಹೆ	41.00	71.43	131.18	59.75
2	ದೇವರಹಿಪ್ಪರಗಿ –27	ಹುನಗುಂದ ಸುರಪೂರ ರಾಜ್ಯ ಹೆದ್ದಾರಿ–60	ಮುದ್ದೇ ಬಿಹಾಳ	ರಾ.ಹೆ	60.00	66.51	83.43	16.92
3	ದೇವರಹಿಪ್ಪರಗಿ –27	ಮನಗೂಳಿ ಬಿಚ್ಚಳ ರಾಜ್ಯ ಹೆದ್ದಾರಿ–61	ಮುದ್ದೇ ಬಿಹಾಳ	ರಾ.ಹೆ	61.00	63.60	75.57	11.97
4	ದೇವರಹಿಪ್ಪರಗಿ –27	ಬಾರಖೇಡ ಬೀಳಗಿ ರಾಜ್ಯ ಹೆದ್ದಾರಿ–124	ಸಿಂದಗಿ ಮುದ್ದೇ ಬಿಹಾಳ		124.00	179.44	210.90	31.46
		ಒಟ್ಟು (0.50 ಕಿ.ಮೀ. ಓವರ್ ಲ್ಯಾಪ)						**120.10**

1	ದೇವರಹಿಪ್ಪರಗಿ –27	ತಾಳಿಕೋಟಿ ಗಡಿಸೋಮನಾಳ ತುಂಬಗಿ ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	1.50	17.75	16.25
2	ದೇವರಹಿಪ್ಪರಗಿ –27	ಗೋಟಖಿಂಡಕಿ ಬಂಟನೂರು ಪೀರಾಪೂರ ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	0.00	7.80	7.80
3	ದೇವರಹಿಪ್ಪರಗಿ –27	ಬೇಲೂರ ನಾವದಗಿ ಸಾಲವಾಡಗಿ ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	0.00	12.00	12.00
4	ದೇವರಹಿಪ್ಪರಗಿ –27	ಮಸಕನಾಳ ಕೂಡು ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	0.00	6.47	6.47
5	ದೇವರಹಿಪ್ಪರಗಿ –27	ಬಿಳೆಭಾವಿ ಗುಂಡಕನಾಳ ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	0.00	9.50	9.50
6	ದೇವರಹಿಪ್ಪರಗಿ –27	ಲಕ್ಕುಂಡಿ ಎಸ್.ಎಚ್.60 ಕೂಡು ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	0.00	3.00	3.00
7	ದೇವರಹಿಪ್ಪರಗಿ –27	ಸೆಳ್ಳಗಿ ಎಸ್.ಎಚ್.60 ಕೂಡು ರಸ್ತೆ	ಮುದ್ದೇ ಬಿಹಾಳ	ಜಿ.ಮು.ರ.	–	0.00	2.00	2,00
8	ದೇವರಹಿಪ್ಪರಗಿ –27	ವಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ಬಳಗಾನೂರ ರಸ್ತೆ (0.50	ಬಾಗೇವಾಡಿ	ಜಿ.ಮು.ರ.	–	40.00	67.20	27.20

		ಕಿ.ಮೀ. ಒವ್ಹರ್ ಲ್ಯಾಪ)						
9	ದೇವರಹಿಪ್ಪರಗಿ –27	ಹೂವಿನಹಿಪ್ಪರಗಿ ಕುದರಿಸಾಲವಾಡಗಿ ಕಾಮನಕೇರಿ ರಸ್ತೆ (1.00 ಕಿ.ಮೀ. ಒವ್ಹರ್ ಲ್ಯಾಪ)	ಬಾಗೇವಾಡಿ	ಜಿ.ಮು.ರ.	–	0.00	19.00	19.00
10	ದೇವರಹಿಪ್ಪರಗಿ –27	ಸಾತಿಹಾಳ ಭೈರವಾಡಗಿ ಕಡಕೋಳ ರಸ್ತೆ	ಬಾಗೇವಾಡಿ	ಜಿ.ಮು.ರ.	–	0.00	14.60	14.60
11	ದೇವರಹಿಪ್ಪರಗಿ –27	ಹುಲಿಬೆಂಚಿ ನಾಗರಾಳ ಸಿಂದಗೇರಿ ರಸ್ತೆ (1.00 ಕಿ.ಮೀ. ಒವ್ಹರ್ ಲ್ಯಾಪ)	ಬಾಗೇವಾಡಿ	ಜಿ.ಮು.ರ.	–	0.00	16.60	16.60
12	ದೇವರಹಿಪ್ಪರಗಿ –27	ಹಡಗಲಿ ಯಂಬತ್ನಾಳ ನೆಗಿನಾಳ ಸಾತಿಹಾಳ ರಸ್ತೆ	ಬಾಗೇವಾಡಿ	ಜಿ.ಮು.ರ.	–	4.90	25.50	20.60
13	ದೇವರಹಿಪ್ಪರಗಿ –27	ಬ್ಯಾಕೋಡ ಕ್ರಾಸ ದಿಂದ ಮಡಿಕೇಶ್ವರ ರಸ್ತೆ	ಬಾಗೇವಾಡಿ	ಜಿ.ಮು.ರ.	–	0.00	2.00	2.00
14	ದೇವರಹಿಪ್ಪರಗಿ –27	ಬಿ.ಬಿ.ಇಂಗಳಗಿ ದೇವರಹಿಪ್ಪರಗಿ ರಸ್ತೆ	ಬಾಗೇವಾಡಿ	ಜಿ.ಮು.ರ.	–	6.76	9.91	3.15
15	ದೇವರಹಿಪ್ಪರಗಿ –27	ಹೂವಿನಹಿಪ್ಪರಗಿ ಕರಬಂಟನಾಳ ದಿಂದ ಶಿರಾಡೋಣ ಲಿಂಗಸೂರು	ಬಾಗೇವಾಡಿ	ಜಿ.ಮು.ರ.	–	0.00	7.00	7.00

		ರಸ್ತೆ ಕೂಡು ರಸ್ತೆ						
16	ದೇವರಹಿಪ್ಪರಗಿ –27	ಕನಕಾಲ ನರಸಣಗಿ ರಸ್ತೆ	ಬಾಗೇವಾಡಿ	ಜಿ.ಮು.ರ.	–	0.00	8.00	8.00
17	ದೇವರಹಿಪ್ಪರಗಿ –27	ಬಿ.ಬಿ.ಇಂಗಳಗಿ ದೇವರಹಿಪ್ಪರಗಿ ರಸ್ತೆ	ಸಿಂದಗಿ	ಜಿ.ಮು.ರ.	–	0.00	6.76	6.76
		ಬಿ.ಬಿ.ಇಂಗಳಗಿ ದೇವರಹಿಪ್ಪರಗಿ ರಸ್ತೆ	ಸಿಂದಗಿ	ಜಿ.ಮು.ರ.	–	9.91	25.91	16.00
18	ದೇವರಹಿಪ್ಪರಗಿ –27	ತಿಳಗೂಳ ಕ್ರಾಸ ದಿಂದ ಕಲಕೇರಿ ಅಸ್ಕಿ ರಸ್ತೆ	ಸಿಂದಗಿ	ಜಿ.ಮು.ರ.	–	0.00	14.63	14.63
19	ದೇವರಹಿಪ್ಪರಗಿ –27	ದೇವರಬ್ರಹ್ಮದೇವನಮಡು ರಸ್ತೆ ವಯಾ ಹಂದಿಗನೂರು	ಸಿಂದಗಿ	ಜಿ.ಮು.ರ.	–	0.00	16.60	16.60
		ದೇವರಬ್ರಹ್ಮದೇವನಮಡು ರಸ್ತೆ ವಯಾ ಹಂದಿಗನೂರು	ಸಿಂದಗಿ	ಜಿ.ಮು.ರ.	–	22.60	31.00	8.40
20	ದೇವರಹಿಪ್ಪರಗಿ –27	ಕೊಂಡಗೂಳಿ ಕೊರವಾರ ಕೊಕಟನೂರ ಕನ್ನೋಳ್ಳಿ ರಸ್ತೆ (2.00 ಕಿ.ಮೀ. ಒಪ್ಪರ ಲ್ಯಾಪ)	ಸಿಂದಗಿ	ಜಿ.ಮು.ರ.	–	0.00	15.70	15.70

21	ದೇವರಹಿಪ್ಪರಗಿ –27	ನಾಗಠಾಣ ರಾಮಪೂರ ರಸ್ತೆ ವ್ಹಾಯಾ ಕಡ್ಲೇವಾಡ (1.55 ಕಿ.ಮೀ. ಒವ್ಹರ ಲ್ಯಾಪ)	ಸಿಂದಗಿ	ಜಿ.ಮು.ರ.	–	11.70	26.00	14.30
22	ದೇವರಹಿಪ್ಪರಗಿ –27	ಬಿ.ಬಿ.ಇಂಗಳಗಿ ಕಲಕೇರಿ ರಸ್ತೆ ದಿಂದ ಸಿಂದಗಿ ಶಹಾಪೂರ ರಸ್ತೆ ವ್ಹಾಯಾ ಬೆಕಿನಾಳ ಹೊನ್ನಳ್ಳಿ ಬ್ರಹ್ಮದೇವನಮಡು	ಸಿಂದಗಿ	ಜಿ.ಮು.ರ.	–	0.00	16.00	16.00
23	ದೇವರಹಿಪ್ಪರಗಿ –27	ಡಂಬಳ ಕಲಕೇರಿ ರಸ್ತೆ	ಸಿಂದಗಿ	ಜಿ.ಮು.ರ.	–	4.00	17.50	13.50
24	ದೇವರಹಿಪ್ಪರಗಿ –27	ಕಲಕೇರಿ ಬಿಂಜಲಭಾವಿ ಕೆಸರಟ್ಟಿ ದಿಂದ ತಾಳಿಕೋಟಿ ದೇವರ ಹಿಪ್ಪರಗಿ ಕೂಡು ರಸ್ತೆ	ಸಿಂದಗಿ	ಜಿ.ಮು.ರ.	–	0.00	10.40	10.40
25	ದೇವರಹಿಪ್ಪರಗಿ –27	ಮುಳಸಾವಳಗಿ ಕೂಡು ರಸ್ತೆ	ಸಿಂದಗಿ	ಜಿ.ಮು.ರ.	–	0.00	3.00	3.00
26	ದೇವರಹಿಪ್ಪರಗಿ	ಅಸ್ಕಿ ನೇರಲಗಿ	ಸಿಂದಗಿ	ಜಿ.ಮು.ರ.	–	0.00	6.00	6.00

	–27	ಪೀರಾಪೂರ ರಸ್ತೆ						
27	ದೇವರಹಿಪ್ಪರಗಿ –27	ಗಂಗನಳ್ಳಿ ದಿಂದ ನಾಗಠಾಣ ರಾಮಪೂರ ಕೂಡು ರಸ್ತೆ	ಸಿಂದಗಿ	ಜಿ.ಮು.ರ.	–	0.00	3.00	3.00
28	ದೇವರಹಿಪ್ಪರಗಿ –27	ಶಿವಣಗಿ ಮುಳಸಾವಳಗಿ ಚಿಕ್ಕರೂಗಿ ಬಂಥನಾಳ ರಸ್ತೆ	ಸಿಂದಗಿ	ಜಿ.ಮು.ರ.	–	0.00	23.00	23.00
		ಒಟ್ಟು (5.25 ಕಿ.ಮೀ. ಒವರ್ ಲ್ಯಾಪ)						342.46

ಅನುಬಂಧ-2

2008-2009ನೇ ಸಾಲಿನ ದೇವರ ಹಿಪ್ಪರಗಿ ಮತಕ್ಷೇತ್ರದ ಕಾಮಗಾರಿಗಳ ವಿವರ

ಅ ನಂ	ಕಾಮಗಾರಿ ವಿವರ	ಅಂದಾಜು ಮೊತ್ತ	2008-2009ನೇ ಸಾಲಿಗೆ ನಿಗದಿಪಡಿಸಿದ ಅನುದಾನ	ಶರಾ
1	2	3	4	5
	5054 ಅಪೆಂಡಿಕ್ಸ್ "ಇ" ಕಾಮಗಾರಿ ವಿವರ			
1	ಮುದ್ದೇಬಿಹಾಳ ತಾಲೂಕಿನ ಹುನಗುಂದ ಸೂರಪೂರ ರಾಹೆ-60 (ತಾಳಿಕೋಟಿ ಫೀರಾಪೂರ) ರಸ್ತೆ ಸುಧಾರಣೆ	40.00	12.00	ಗುತ್ತಿಗೆ ಪ್ರಕ್ರಿಯೆಯಲ್ಲಿದೆ.
2	ಸಿಂದಗಿ ತಾಲೂಕಿನ ಶಿರಾಡೋಣ ಲಿಂಗಸೂರ ರಾಹೆ-41 ರಸ್ತೆ ಕಿಮೀ 91.00 ರಿಂದ 100.23ರ ವರೆಗೆ ಸುಧಾರಣೆ ದೇವರ ಹಿಪ್ಪರಗಿಯಿಂದ ಸಾತಿಹಾಳ ಹೋಗುವ ರಸ್ತೆ ಸುಧಾರಣೆ	30.00	9.00	ಗುತ್ತಿಗೆ ಪ್ರಕ್ರಿಯೆಯಲ್ಲಿದೆ.
3	ಬಸವನ ಬಾಗೇವಾಡಿ ತಾಲೂಕಿನ ಮಹಾರಾಷ್ಟ್ರ ಗಡಿ ಹೆದ್ದಾರಿ ಖಜೂರಿ ಕ್ರಾಸದಿಂದ ಬೀಳಗಿ ರಸ್ತೆ ರಾಹೆ-124 ಕಿಮೀ 249.50 ರಿಂದ 755.00ರ ವರೆಗೆ ಸುಧಾರಣೆ	30.00	9.00	ಗುತ್ತಿಗೆ ಪ್ರಕ್ರಿಯೆಯಲ್ಲಿದೆ.
4	ಬಸವನ ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಮರು ಡಾಂಬರೀಕರಣ ಮಾಡುವುದು. ಕಿಮೀ 0.00 ರಿಂದ 6.00	10.21	0.30	ಗುತ್ತಿಗೆ ಪ್ರಕ್ರಿಯೆಯಲ್ಲಿದೆ.

5	ಸಿಂದಗಿ ತಾಲೂಕಿನ ತಿಳಗೋಲ ಕ್ರಾಸದಿಂದ ಕಲಕೇರಿ ಅಸ್ಕಿ ರಸ್ತೆ ಕಿಮೀ 10.50 ರಿಂದ 12.80ರ ವರೆಗೆ ಸುಧಾರಣೆ	20.00	6.00	ಕೆಲಸ ಪ್ರಗತಿ ಯಲ್ಲಿದೆ.
6	ಸಿಂದಗಿ ತಾಲೂಕಿನ ಬಿ.ಬಿ. ಇಂಗಳಗಿ ಕಲಕೇರಿ ಅಸ್ಕಿ ರಸ್ತೆ ಸಿಂದಗಿ ರಾಮೂರ ಕೂಡು ರಸ್ತೆ ಕಿಮೀ 0.00 ರಿಂದ 20.97ರ ವರೆಗೆ ಸುಧಾರಣೆ ಮಾಡುವುದು	80.00	23.70	ಗುತ್ತಿಗೆಯನ್ನು "ಇ" ಪ್ರಾಕ್‌ನಲ್ಲಿ ಅಳವಡಿಸಿ, ಗುತ್ತಿಗೆ ಪ್ರಕ್ರಿಯೇ ಪ್ರಗತಿಯಲ್ಲಿದೆ
7	ಸಿಂದಗಿ ತಾಲೂಕಿನ ಬಾರಖೇಡ ಬೀಳಗಿ ರಸ್ತೆ ಕಿಮೀ 95.70 ರಿಂದ 115.70ರ ವರೆಗೆ ಸುಧಾರಣೆ ಮಾಡುವುದು	150.00	45.00	ಗುತ್ತಿಗೆಯನ್ನು "ಇ" ಪ್ರಾಕ್‌ನಲ್ಲಿ ಅಳವಡಿಸಿ, ಗುತ್ತಿಗೆ ಪ್ರಕ್ರಿಯೇ ಪ್ರಗತಿಯಲ್ಲಿದೆ
8	ಬಸವನ ಬಾಗೇವಾಡಿ ತಾಲೂಕಿನ ಸಾತಿಹಾಳ ಭೈರವಾಡಗಿ ಮಾರ್ಕಹನಳ್ಳಿ ರಸ್ತೆ ಅಭಿವೃದ್ಧಿ ಮಾಡುವುದು	40.00	12.00	ಗುತ್ತಿಗೆ ಪ್ರಕ್ರಿಯೆ ಯಲ್ಲಿದೆ.
	ಒಟ್ಟು		**117.00**	
	5054 ನಬಾರ್ಡ ಆರ್.ಐ.ಡಿ.ಎಫ್.13			
1	ಬಸವನ ಬಾಗೇವಾಗಿ ತಾಲೂಕಿನ ವಡವಸಗಿ ಸಾಸನೂರ ರಸ್ತೆ ಸುಧಾರಣೆ	95.00	95.00	ಖಡೀಕರಣ ಮುಗಿದಿದ್ದು ಕಾಮಗಾರಿ ಪ್ರಗತಿಯಲ್ಲಿದೆ.
	ಒಟ್ಟು		**95.00**	
3034 – ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ				
1	ಸಿಂದಗಿ ತಾಲೂಕಿನ ನಾಗಠಾಣ ರಾಂಪೂರ ರಸ್ತೆ ಕಿಮೀ 11.80 ರಿಂದ 15.00ರ ವರೆಗೆ ಸುಧಾರಣೆ	30.00	0.37	ಕೆಲಸ ಮುಗಿದಿದ್ದು ಕಿಮೀ ಕಲ್ಲು ಹಾಕುವುದು ಬಾಕಿ ಉಳಿದಿದೆ.

O-1053-83

2	ಸಿಂದಗಿ ತಾಲೂಕಿನ ತಾಳಿಕೋಟಿ ದೇವರ ಹಿಪ್ಪರಗಿ ರಸ್ತೆ ಕಿಮೀ 26.00 ರಿಂದ 28.50ರ ವರೆಗೆ ಅಗಲೀಕರಣ ಹಾಗೂ ಡಾಂಬರೀಕರಣ	30.00	4.00	ಕಾಮಗಾರಿ ಪ್ರಗತಿಯಲ್ಲಿದೆ.
3	ಸಿಂದಗಿ ತಾಲೂಕಿನ ತಾಳಿಕೋಟಿ ದೇವರ ಹಿಪ್ಪರಗಿ ರಸ್ತೆ ಕಿಮೀ 28.50 ರಿಂದ 31.00ರ ವರೆಗೆ ಅಗಲೀಕರಣ ಹಾಗೂ ಡಾಂಬರೀಕರಣ	30.00	24.00	ವರ್ಗ–2 ಖಡೀಕರಣ ಮುಗಿದಿದ್ದು ಹಾಗೂ ಕಾಮಗಾರಿ ಪ್ರಗತಿಯಲ್ಲಿದೆ.
4	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 3.80 ರಲ್ಲಿ ಸಿ.ಡಿ. ನಿರ್ಮಾಣ	2.00	1.00	ಕಾಮಗಾರಿ ಪ್ರಗತಿಯಲ್ಲಿದೆ.
5	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 5.70 ರಲ್ಲಿ ಸಿ.ಡಿ. ನಿರ್ಮಾಣ	2.00	1.00	ಕಾಮಗಾರಿ ಪ್ರಗತಿಯಲ್ಲಿದೆ.
6	ಸಿಂದಗಿ ತಾಲೂಕಿನ ಕೊಂಡಗೂಳಿ ಕನ್ನೋಳ್ಳಿ ರಸ್ತೆ ಕಿಮೀ 0.00 ರಿಂದ 1.80ರ ವರೆಗೆ ಸುಧಾರಣೆ	15.00	2.00	ಕೆಲಸ ಪ್ರಗತಿಯಲ್ಲಿದೆ.
7	ಸಿಂದಗಿ ತಾಲೂಕಿನ ಕೊಂಡಗೂಳಿ ಕನ್ನೋಳ್ಳಿ ರಸ್ತೆ ಕಿಮೀ 1.80 ರಿಂದ 6.50 ವರೆಗೆ ಸುಧಾರಣೆ	35.00	25.00	ಕೆಲಸ ಪ್ರಗತಿಯಲ್ಲಿದೆ.
8	ಸಿಂದಗಿ ತಾಲೂಕಿನ ಬಿ.ಬಿ. ಇಂಗಳಗಿ ಕಲಕೇರಿ ಅಸ್ಕಿ ರಸ್ತೆ ಸಿಂದಗಿ ಶಾಪೂರ ಕೂಡು ರಸ್ತೆ ಕಿಮೀ 7.10 ರಿಂದ 9.10 ಹಾಗೂ ಕಿಮೀ 12.80 ರಿಂದ 16.50ರ ವರೆಗೆ ಸುಧಾರಣೆ ಮಾಡುವುದು	19.00	0.58	ಕೆಲಸ ಮುಗಿದಿದೆ.
9	ಸಿಂದಗಿ ತಾಲೂಕಿನ ಬಿ.ಬಿ. ಇಂಗಳಗಿ ಕಲಕೇರಿ ಅಸ್ಕಿ ರಸ್ತೆ ಸಿಂದಗಿ ಶಾಪೂರ	18.00	1.90	ಕೆಲಸ ಮುಗಿದಿದೆ.

	ಕೂಡು ರಸ್ತೆ ಕಿಮೀ 16.50 ರಿಂದ 21.00 ರ ವರೆಗೆ ಸುಧಾರಣೆ ಮಾಡುವುದು			
10	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 3.50 ರಿಂದ 6.00ರ ವರೆಗೆ ಸುಧಾರಣೆ ಮಾಡುವುದು	10.40	2.00	ಕೆಲಸ ಪ್ರಾರಂಭಿಸಲಾಗಿದೆ.
11	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 6.00 ರಿಂದ 8.00ರ ವರೆಗೆ ಸುಧಾರಣೆ ಮಾಡುವುದು	20.00	3.00	ಕೆಲಸ ಪ್ರಾರಂಭಿಸಲಾಗಿದೆ.
12	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 3.40 ರಲ್ಲಿ ಸಿ.ಡಿ. ನಿರ್ಮಾಣ	1.00	1.00	ಕೆಲಸ ಪ್ರಗತಿಯಲ್ಲಿದೆ.
13	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 4.70 ರಲ್ಲಿ ಸಿ.ಡಿ. ನಿರ್ಮಾಣ	2.00	2.00	ಕೆಲಸ ಪ್ರಗತಿಯಲ್ಲಿದೆ.
14	ಸಿಂದಗಿ ತಾಲೂಕಿನ ದೇವರ ಬ್ರಹ್ಮದೇವನ ಮಡು ರಸ್ತೆ ಕಿಮೀ 3.40 ರಲ್ಲಿ ಸಿ.ಡಿ. ನಿರ್ಮಾಣ	1.00	1.00	ಕೆಲಸ ಪ್ರಗತಿಯಲ್ಲಿದೆ.
15	ಸಿಂದಗಿ ತಾಲೂಕಿನ ಡಂಭಳ ಕಲಕೇರಿ ರಸ್ತೆ ಕಿಮೀ 13.00 ರಲ್ಲಿ ರಕ್ಷಣಾ ಗೋಡೆ ನಿರ್ಮಾಣ ಮಾಡುವುದು	2.00	2.00	ಕೆಲಸ ಪ್ರಗತಿಯಲ್ಲಿದೆ.
16	ಸಿಂದಗಿ ತಾಲೂಕಿನ ಡಂಭರಳ ಕಲಕೇರಿ ರಸ್ತೆ ಕಿಮೀ 14.00 ರಲ್ಲಿ ರಕ್ಷಣಾ ಗೋಡೆ ನಿರ್ಮಾಣ ಮಾಡುವುದು	2.00	2.00	ಕೆಲಸ ಪ್ರಗತಿಯಲ್ಲಿದೆ.
17	ಸಿಂದಗಿ ತಾಲೂಕಿನ ಬಿಬಿ ಇಂಗಳಗಿ ದೇವರ ಹಿಪ್ಪರಗಿ ರಸ್ತೆ ಕಿಮೀ 2.09 ರಲ್ಲಿ ಹಂಚಲಿ ಗ್ರಾಮದ ಹತ್ತಿರ ಸಿಡಿ	1.00	1.00	ಕೆಲಸ ಪ್ರಗತಿಯಲ್ಲಿದೆ.

	ನಿರ್ಮಾಣ			
18	ಸಿಂದಗಿ ತಾಲೂಕಿನ ಬಿಬಿ ಇಂಗಳಗಿ ದೇವರ ಹಿಪ್ಪರಗಿ ರಸ್ತೆ ಕಿಮೀ 15.91 ರಲ್ಲಿ ಹಂಚಲಿ ಗ್ರಾಮದ ಹತ್ತಿರ ಸಿಡಿ ನಿರ್ಮಾಣ	1.00	1.00	ಕೆಲಸ ಪ್ರಗತಿಯಲ್ಲಿದೆ.
19	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 42.00 ರಿಂದ 43.00ರ ವರೆಗೆ ಸುಧಾರಣೆ	1.00	0.25	ಕೆಲಸ ಮುಗಿದಿದೆ
20	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 43.00 ರಿಂದ 45.00ರ ವರೆಗೆ ಸುಧಾರಣೆ	2.00	0.25	ಕೆಲಸ ಮುಗಿದಿದೆ.
21	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 45.00 ರಿಂದ 47.00ರ ವರೆಗೆ ಸುಧಾರಣೆ	2.00	0.25	ಕೆಲಸ ಮುಗಿದಿದೆ.
22	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 47.00 ರಿಂದ 49.00ರ ವರೆಗೆ ಸುಧಾರಣೆ	2.00	0.25	ಕೆಲಸ ಮುಗಿದಿದೆ
23	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 49.00 ರಿಂದ 50.00ರ ವರೆಗೆ ಸುಧಾರಣೆ	1.00	0.25	ಕೆಲಸ ಮುಗಿದಿದೆ
24	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 66.00 ರಿಂದ 68.20ರ ವರೆಗೆ ಸುಧಾರಣೆ	1.00	0.25	ಕೆಲಸ ಮುಗಿದಿದೆ
25	ಬ.ಬಾಗೇವಾಡಿ ತಾಲೂಕಿನ	1.00	0.25	ಕೆಲಸ

	ಬಾಗೇವಾಡಿ ಮುದ್ದೇಬಿಹಾಳ ವಯಾ ಕಣಕಾಲ ರಸ್ತೆ ಕಿಮೀ 4.00 ರಿಂದ 5.00ರ ವರೆಗೆ ಸುಧಾರಣೆ ಮಾಡುವುದು			ಮುಗಿದಿದೆ
26	ಬ.ಬಾಗೇವಾಡಿ ತಾಲೂಕಿನ ಬಾಗೇವಾಡಿ ಮುದ್ದೇಬಿಹಾಳ ವ್ಹಾಯಾ ಕಣಕಾಲ ರಸ್ತೆ ಕಿಮೀ 5.00 ರಿಂದ 6.00ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
27	ಬ.ಬಾಗೇವಾಡಿ ತಾಲೂಕಿನ ಬಾಗೇವಾಡಿ ಮುದ್ದೇಬಿಹಾಳ ವ್ಹಾಯಾ ಕಣಕಾಲ ರಸ್ತೆ ಕಿಮೀ 6.00 ರಿಂದ 7.00ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
28	ಬ.ಬಾಗೇವಾಡಿ ತಾಲೂಕಿನ ಬಾಗೇವಾಡಿ ಮುದ್ದೇಬಿಹಾಳ ವ್ಹಾಯಾ ಕಣಕಾಲ ರಸ್ತೆ ಕಿಮೀ 7.00 ರಿಂದ 8.00ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
29	ಬ.ಬಾಗೇವಾಡಿ ತಾಲೂಕಿನ ಸಾತಿಹಾಳ ಭೈರವಾಡಗಿ ಯಾಲವಾರ ಕಡಕೋಳ ರಸ್ತೆ ಕಿಮೀ 0.00 ರಿಂದ 1.00ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
30	ಬ.ಬಾಗೇವಾಡಿ ತಾಲೂಕಿನ ಹಡಗಲಿ ಎಂಭತನಾಳ ರಸ್ತೆ ಕಿಮೀ 16.00 ರಿಂದ 17.00ರ ವರೆಗೆ ಸುಧಾರಣೆ ಮಾಡವುದು	1.00	0.25	ಕೆಲಸ ಮುಗಿದಿದೆ
31	ಬ.ಬಾಗೇವಾಡಿ ತಾಲೂಕಿನ ಹಡಗಲಿ ಎಂಭತನಾಳ ರಸ್ತೆ ಕಿಮೀ 17.00	1.00	0.25	ಕೆಲಸ ಮುಗಿದಿದೆ

	ರಿಂದ 18.00 ರ ವರೆಗೆ ಸುಧಾರಣೆ ಮಾಡುವದು			
32	ಬ.ಬಾಗೇವಾಡಿ ತಾಲೂಕಿನ ಹಡಗಲಿ ಎಂಭತನಾಳ ರಸ್ತೆ ಕಿಮೀ 18.00 ರಿಂದ 19.00 ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
33	ಬ.ಬಾಗೇವಾಡಿ ತಾಲೂಕಿನ ಹಡಗಲಿ ಎಂಭತನಾಳ ರಸ್ತೆ ಕಿಮೀ 19.00 ರಿಂದ 20.00ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
34	ಬ.ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಕಿಮೀ 11.00 ರಿಂದ 13.00 ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
35	ಬ.ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಕಿಮೀ 13.00 ರಿಂದ 14.00ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
36	ಬ.ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಕಿಮೀ 14.00 ರಿಂದ 15.00 ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
37	ಬ.ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಕಿಮೀ 15.00 ರಿಂದ 16.00 ರ ವರೆಗೆ ಸುಧಾರಣೆ	1.00	0.25	ಕೆಲಸ ಮುಗಿದಿದೆ

	ಮಾಡುವುದು			
38	ಬ.ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಕಿಮೀ 16.00 ರಿಂದ 17.00 ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
39	ಬ.ಬಾಗೇವಾಡಿ ತಾಲೂಕಿನ ಹೂವಿನ ಹಿಪ್ಪರಗಿ ಕು.ಸಾಲವಾಡಗಿ ಯಾಳವಾರ ರಸ್ತೆ ಕಿಮೀ 17.00 ರಿಂದ 18.00 ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
40	ಬ.ಬಾಗೇವಾಡಿ ತಾಲೂಕಿನ ಬಾಗೇವಾಡಿ ನಿಡಗುಂದಿ ರಸ್ತೆ ಕಿಮೀ 22.20 ರಿಂದ 24.60ರ ವರೆಗೆ ಸುಧಾರಣೆ ಮಾಡುವದು	1.00	0.25	ಕೆಲಸ ಮುಗಿದಿದೆ
41	ಬ.ಬಾಗೇವಾಡಿ ತಾಲೂಕಿನ ಹುಲಬೆಂಚಿ ನಾಗರಾಳ ರಸ್ತೆ ಕಿಮೀ 16.00 ರಿಂದ 17.00 ರ ವರೆಗೆ ಸುಧಾರಣೆ ಮಾಡುವುದು	1.00	0.25	ಕೆಲಸ ಮುಗಿದಿದೆ
42	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 45.00 ರಿಂದ 50.00 ರ ವರೆಗೆ ಸುಧಾರಣೆ ಮಾಡುವುದು	24.00	24.00	ಡಾಂಬರೀಕರಣ
43	ಬ.ಬಾಗೇವಾಡಿ ತಾಲೂಕಿನ ಬಿಜಾಪೂರ ಉಕ್ಕಲಿ ದಿಂಡವಾರ ಸಾಸನೂರ ರಸ್ತೆ ಕಿಮೀ 62.00 ರಿಂದ 66.00 ರ ವರೆಗೆ ಸುಧಾರಣೆ ಮಾಡುವುದು	22.22	22.22	ಡಾಂಬರೀಕರಣ
44	ಮುದ್ದೇಬಿಹಾಳ ತಾಲೂಕಿನ	12.83	12.83	ಕೆಲಸ

	ತಾಳಿಕೋಟಿಯಿಂದ ಗಡಿಸೋಮನಾಳ ತುಂಬಗಿ ರಸ್ತೆ ಕಿಮೀ 6.00 ರಿಂದ 8.00 ರ ವರೆಗೆ ಸುಧಾರಣೆ ಮಾಡುವುದು			ಪ್ರಗತಿಯಲ್ಲಿದೆ.
45	ಮುದ್ದೇಬಿಹಾಳ ತಾಲೂಕಿನ ಹುನಗುಂದ ಸೂರಪೂರ ರಾಹೆ-60 ರಸ್ತೆ ಕಿಮೀ 70.75 ರಿಂದ 75.75ರ ವರೆಗೆ ಮರು ಡಾಂಬರೀಕರಣ	26.00	0.86	ಕೆಲಸ ಮುಗಿದಿದೆ
46	ಮುದ್ದೇಬಿಹಾಳ ತಾಲೂಕಿನ ಹುನಗುಂದ ಸೂರಪೂರ ರಾಹೆ-60 ರಸ್ತೆ ಕಿಮೀ 81.00 ರಿಂದ 83.43 ರ ವರೆಗೆ ಮರು ಡಾಂಬರೀಕರಣ	18.00	2.93	ಕೆಲಸ ಮುಗಿದಿದೆ
47	ಮುದ್ದೇಬಿಹಾಳ ತಾಲೂಕಿನ ಮನಗೂಳಿ ಬೀಚ್ಚಳ ರಾಹೆ-61 ರಸ್ತೆ ಕಿಮೀ 71.62 ರಿಂದ 74.60ರ ವರೆಗೆ ಮರು ಡಾಂಬರೀಕರಣ	21.00	0.69	ಕೆಲಸ ಮುಗಿದಿದೆ
48	ಮುದ್ದೇಬಿಹಾಳ ತಾಲೂಕಿನ ತಾಳಿಕೋಟಿ ಗಡಿಸೋಮನಾಳ ತುಂಬಗಿ ರಸ್ತೆ ಕಿಮೀ 11.00 ರಿಂದ 17.00 ವರೆಗೆ ಮರು ಡಾಂಬರೀಕರಣ	30.00	9.00	ಟೆಂಡರ ಪ್ರಕ್ರಿಯೇ ಪ್ರಗತಿಯಲ್ಲಿದೆ
49	ಮುದ್ದೇಬಿಹಾಳ ತಾಲೂಕಿನ ಮನಗೂಳಿ ಬೀಚ್ಚಳ ರಾಹೆ-61 ರಸ್ತೆ ಕಿಮೀ 70.00 ರಿಂದ 75.55ರ ವರೆಗೆ ನಾಮ ಫಲಕ ಅಳವಡಿಸುವುದು.	1.00	0.03	ಕೆಲಸ ಮುಗಿದಿದೆ
50	ಬಸವನ ಬಾಗೇವಾಡಿ ತಾಲೂಕಿನ ಹುಲಬೆಂಚಿ ನಾಗರಾಳ ರಸ್ತೆ ಕಿಮೀ 13.00 ರಿಂದ 14.00ರ ವರೆಗೆ ಸುಧಾರಣೆ	1.00	0.25	ಕೆಲಸ ಮುಗಿದಿದೆ
51	ಬಸವನ ಬಾಗೇವಾಡಿ ತಾಲೂಕಿನ ಹುಲಬೆಂಚಿ ನಾಗರಾಳ ರಸ್ತೆ ಕಿಮೀ	1.00	0.23	ಕೆಲಸ ಮುಗಿದಿದೆ

	14.00 ರಿಂದ 15.00ರ ವರೆಗೆ ಸುಧಾರಣೆ			
	ಒಟ್ಟು		153.64	
	3054-12ನೇ ಹಣಕಾಸು ಆಯೋಗ			
1	Maintenance of Nagathan Rampur road from Km 24.35 to 26.15 and repairs to CD's in Km 17.7 to 28.15	5.00	5.00	Work Under progress
2	Maintenance of Dambal Kalakeri road from Km 4.00 to 8.00	2.00	2.00	Work Under progress
3	Maintenance of Dambal Kalakeri road from Km 6.00 to 8.00	2.00	2.00	Work Under progress
4	Maintenance of Dambal Kalakeri road from Km 8.00 to 10.00	2.00	2.00	Work Under progress
5	Maintenance of Dambal Kalakeri road from Km 10.00 to 12.00	2.00	2.00	Work Under progress
6	Maintenance of Dambal Kalakeri road from Km 12.00 to 14.00	1.00	1.00	Work Under progress
7	Maintenance of Dambal Kalakeri road from Km 14.00 to 17.50	2.00	2.00	Work Under progress
8	Repairs to Pavedip in Km 7.00 on Dambal Kalakeri road	5.00	5.00	Work Under progress
9	Maintenance of Tilagol	1.00	1.00	Work

	cross Kalakeri aski road to Brahmadevan madu via Bekinal Saladhalli Honnalli road from Km 0.00 to 2.00			Under progress
10	Maintenance of Tilagol cross Kalakeri aski road to Brahmadevan madu via Bekinal Saladhalli Honnalli road from Km 2.00 to 4.00	1.00	1.00	Work Under progress
11	Maintenance of Tilagol cross Kalakeri aski road to Brahmadevan madu via Bekinal Saladhalli Honnalli road from Km 4.00 to 6.00	1.00	1.00	Work Under progress
12	Maintenance of Tilagol cross Kalakeri aski road to Brahmadevan madu via Bekinal Saladhalli Honnalli road from Km 6.00 to 10.00	2.00	2.00	Work Under progress
13	Maintenance of Tilagol cross Kalakeri aski road to Brahmadevan madu via Bekinal Saladhalli Honnalli road from Km 10.00 to 12.00	1.00	1.00	Work Under progress
14	Maintenance of Tilagol cross Kalakeri aski road to Brahmadevan madu via Bekinal Saladhalli Honnalli road from Km 12.00 to	1.00	1.00	Work Under progress

	14.00			
15	Maintenance of Tilagol cross Kalakeri aski road to Brahmadevan madu via Bekinal Saladhalli Honnalli road from Km 14.00 to 16.00	1.00	1.00	Work Under progress
16	Maintenance of Tilagol cross to Kalakeri aski road from Km 0.00 to 14.63	6.00	6.00	Work Under progress
17	Maintenance of BB Ingalagi Devar Hipparagi road from Km 0.00 to 5.00	2.75	2.75	Work Under progress
18	Repairs to CD's on BB Ingalagi Devar Hipparagi road from Km 0.00 to 6.76 and 9.91 to 25.91	4.00	4.00	Work Under progress
19	Maintenance of Devur Brahmadevanmadu road via Handiganur Yalagod Vandal road from Km 22.80 to 24.80	1.00	1.00	Work Under progress
20	Maintenance of Devur Brahmadevanmadu road via Handiganur Yalagod Vandal road from Km 24.60 to 26.60	1.00	1.00	Work Under progress
21	Maintenance of Devur Brahmadevanmadu road via Handiganur Yalagod Vandal	2.00	2.00	Work Under progress

	road from Km 26.60 to 29.00			
22	Repairs to Pavedip in Km 27.00 of Devur Brahmadevanamadu road	1.00	1.00	Work Under progress
23	Maintenance of Bijapur Ukkali Dindawar Sasanur road Km 43.00 to 48.00	2.00	2.00	Work Under progress
24	Maintenance of Bijapur Ukkali Dindawar Sasanur road Km 48.00 to 53.00	2.00	2.00	Work Under progress
25	Maintenance of Rijapur Ukkali Dindawar Sasanur road Km 58.00 to 62.00	2.00	2.00	Work Under progress
26	Maintenance of Bijapur Ukkali Dindawar Sasanur road Km 62.00 to 65.00	2.00	2.00	Work Under progress
27	Maintenance of Bijapur Ukkali Dindawar Sasanur road Km 65.00 to 67.20	1.00	1.00	Work Under progress
28	Maintenance of Huvin Hipparagi K.Salavadagi Yalawar road Km 0.00 to 3.00	1.00	1.00	Work Under progress
29	Maintenance of Huvin Hipparagi K.Salavadagi Yalawar road Km 12.00 to 15.00	1.00	1.00	Work Under progress
30	Maintenance of Satihal	1.00	1.00	Work Under

	Bhairawadagi Yalawar Kadakol road Km 0.00 to 3.00			progress
31	Maintenance of Satihal Bhairawadagi Yalawar Kadakol road Km 6.00 to 8.00	1.00	1.00	Work Under progress
32	Maintenance of Satihal Bhairawadagi Yalawar Kadakol road Km 8.00 to 10.00	2.00	2.00	Work Under progress
33	Maintenance of Satihal Bhairawadagi Yalawar Kadakol road Km 11.50 to 14.60	1.00	1.00	Work Under progress
34	Maintenance of Hulabenchi Nagaral Sindageri road Km 4.25 to 5.00	1.00	1.00	Work Under progress
35	Maintenance of Hulabenchi Nagaral sindageri road Km 13.00 to 15.00	1.00	1.00	Work Under progress
36	Maintenance of Hulabenchi Nagaral Sindageri road Km 15.00 to 16.10	1.00	1.00	Work Under progress
37	Maintenance of Byakod cross to madikeshwar road Km 0.00 to 2.00	1.00	1.00	Work Under progress
38	Maintenance of NH-13 to Nidagundi Basarakod road Km 0.00 to 1.80	1.00	1.00	Work Under progress

39	Maintenance of Talikoti Devar Hipparagi road Km 6.76 to 9.91	2.00	2.00	Work Under progress
40	Maintenance and repairs to the road from Talikot-Gadisomanal-Tumbagi from 1.50 to 5.00	2.0	2.0	Work Under progress
41	Maintenance and repairs to Talikoti Gadisomanal Tumbagi road and CD from Km 5.00 to 8.50	2.00	2.00	Work Under progress
42	Maintenance and repairs to Talikoti Gadisomanal Tumbagi road and CD from Km 8.5 to 12.00	2.00	2.00	Work Under progress
43	Maintenance and repairs to Talikoti Gadisomanal Tumbagi road and CD from Km 12.00 to 15.50	2.00	2.00	Work Under progress
44	Maintenance and repairs to Talikoti Gadisomanal Tumbagi road and CD from Km 15.50 to 17.75	1.53	1.53	Work Under progress
		79.28	**79.28**	

ಶ್ರೀ ಎ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ 2008-09ನೇ ಸಾಲಿನಲ್ಲಿ ಸನ್ಮಾನ್ಯ ಸಚಿವರನ್ನು ಸ್ವತಃ ನಾನು ಭೇಟಿ ನೀಡಿ ಲೋಕೋಪಯೋಗಿ ಇಲಾಖೆಯಿಂದ ನ್ಯಾಯಯುತವಾಗಿ ನನ್ನ ಮತಕ್ಷೇತ್ರಕ್ಕೆ ಬರಬೇಕಾದಂತಹ ಹಣಕಾಸಿನ ಬಗ್ಗೆ ಮತ್ತು ಅಲ್ಲಿ ಬಹಳ ಮುಖ್ಯವಾಗಿ ಆಗಬೇಕಾದಂತಹ bridgeನ ಬಗ್ಗೆ ಮನವಿಯನ್ನು ಮಾಡಿದ್ದೆನು.
ಆದರೆ ಈ ಸರ್ಕಾರ ಇದಕ್ಕೆ ಯಾವುದೇ ರೀತಿಯಾಗಿ ಸ್ಪಂದಿಸುತ್ತಿಲ್ಲವೆಂಬ ಮಾತನ್ನು ನಾನು ನೋವಿನಿಂದ ಹೇಳಬೇಕಾಗಿದೆ. ಕಾಂಗ್ರೆಸ್ ಪಕ್ಷದ ಶಾಸಕರುಗಳಿರುವಂಥ ಕ್ಷೇತ್ರಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ವಿಶೇಷವಾಗಿ ನನ್ನ ಮತಕ್ಷೇತ್ರಕ್ಕೆ ಯಾವ ರೀತಿಯಾಗಿ ತಾರತಮ್ಯವನ್ನು ಮಾಡಿದ್ದಾರೆನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. 2008-09ರಲ್ಲಿ ನಬಾರ್ಡ್‌ನಲ್ಲಿ ಬಸವನ ಬಾಗೇವಾಡಿ ಮತಕ್ಷೇತ್ರಕ್ಕೆ 220 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಬಿಜಾಪುರ ಮತಕ್ಷೇತ್ರಕ್ಕೆ 200 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ನಾಗಠಾಣ ಮತಕ್ಷೇತ್ರಕ್ಕೆ 180 ಲಕ್ಷ ರೂಪಾಯಿಗಳನ್ನು, ಇಂಡಿ ಮತಕ್ಷೇತ್ರಕ್ಕೆ 170 ಲಕ್ಷ ರೂ.ಗಳು, ಸಿಂಧಗಿ 170 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುತ್ತಾರೆ. ಆದರೆ ಕಾಂಗ್ರೆಸ್ ಪಕ್ಷದ ಶಾಸಕರಾಗಿರುವಂಥ ನನ್ನ ಮತ ಕ್ಷೇತ್ರ ದೇವರಹಿಪ್ಪರಗಿಗೆ ಕೇವಲ 100 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುವಂಥಾದ್ದು, ಇದು ನಬಾರ್ಡ್‌ನಲ್ಲಿ ಆಗಿರುವಂಥ ತಾರತಮ್ಯವಾಗಿದೆ. ಇನ್ನು ಎರಡನೆಯದಾಗಿ ORF (other road formations) ನಲ್ಲಿ ಬಿ.ಜೆ.ಪಿ. ಶಾಸಕರು ಇರುವಂಥ ನಾಗಠಾಣ ಮತಕ್ಷೇತ್ರಕ್ಕೆ 212 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಸಿಂಧಗಿ ಮತಕ್ಷೇತ್ರಕ್ಕೆ 175 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ.

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ ನಿಮ್ಮ ಪ್ರಶ್ನೆ ಏನು ಇದೆ?

ಶ್ರೀ ಎ.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಅವರು ಇಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇದು ಅವರು ಕೊಟ್ಟಿರುವಂಥ ಉತ್ತರ, ಅವರ ಇಲಾಖೆಯವರು ಕೊಟ್ಟಿರುವಂಥ ಉತ್ತರವನ್ನು...

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ, ನಿಮ್ಮ ಕ್ಷೇತ್ರದ ಬಗ್ಗೆ ಪ್ರಶ್ನೆ ಕೇಳಿ.

ಶ್ರೀ ಎ.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಉಳಿದಂತೆ bridge ಶೀರ್ಷಿಕೆ..

..

ಅಧ್ಯಕ್ಷರು:- ಪಾಟೀಲ್‌ರವರೆ, ನಿಮ್ಮ ಪ್ರಶ್ನೆ ಏನು ಇದೆಯೆಂಬುದನ್ನು ನೀವೇ ತಿಳಿದುಕೊಳ್ಳಿ. ಈಗ ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ. ರಸ್ತೆ ಇದೆ? ಈ ರಸ್ತೆಗಳ ಸುಧಾರಣೆಗೆ ವಿವಿಧ ಯೋಜನೆಗಳಲ್ಲಿ ಕಳೆದ 3 ವರ್ಷಗಳಲ್ಲಿ

ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಕಾಮಗಾರಿಗಳು ಯಾವ ಹಂತದಲ್ಲಿವೆ? ಈ ರಸ್ತೆಗಳ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಎಂದು ಇವೆ. ನೀವು bridge ಬಗ್ಗೆ, ಅಕ್ಕಪಕ್ಕದ ತಾಲ್ಲೂಕುಗಳ ಬಗ್ಗೆ ನೀವು ಮಾತನಾಡುವುದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿ. ನಿಮ್ಮ ಪ್ರಶ್ನೆಗಳು ಏನು ಇವೆ, ಅದನ್ನು ನೀವು ಅರ್ಥ ಮಾಡಿಕೊಳ್ಳಿ. ನೀವು ಹೊಸ ಸದಸ್ಯರಿದ್ದೀರಿ. ನಿಮ್ಮದು ಯಾವ ಪ್ರಶ್ನೆಗಳು ಇವೆ, ಯಾವ ಪ್ರಶ್ನೆಗಳನ್ನು ಕೇಳಿದ್ದೀರಿ, ಯಾವ್ಯಾವ ವಿಷಯಗಳು ಇವೆ, ಅವುಗಳಿಗೆ ನೀವು ಸ್ಪಷ್ಟಿಕರಣವನ್ನು ಕೇಳಿ.

ಶ್ರೀ ಎ.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಇರುವ ವಾಸ್ತವಿಕ ಸತ್ಯವನ್ನು ಎಲ್ಲರ ಮುಂದೆ ಇಡುತ್ತಿದ್ದೇನೆ. ನಾನು ತಮ್ಮ ಮುಖಾಂತರ ಹೇಳುವುದೇನೆಂದರೆ, ಏನು ಕ್ರಮವನ್ನು ತೆಗೆದುಕೊಂಡಿಲ್ಲ. ಅದಕ್ಕೆ ಸದನದ ಮುಖಾಂತರವಾಗಿ, ತಮ್ಮ ಮುಖಾಂತರವಾಗಿ ಸನ್ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರುವುದಕ್ಕೆ ನನಗೆ ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು bridge ಬಗ್ಗೆ.. ..

ಅಧ್ಯಕ್ಷರು: ಇಲ್ಲಿ bridge ಬಗ್ಗೆ ಪ್ರಶ್ನೆ ಇಲ್ಲ, ನೀವು bridge ಬಗ್ಗೆ ಕೇಳಬೇಡಿ. ನಿಮ್ಮ ಪ್ರಶ್ನೆ ಏನು ಇದೆ, ಅದಕ್ಕೆ ಸೀಮಿತವಾಗಿ ಕೇಳಿ.

ಶ್ರೀ ಎ.ಎಸ್.ಪಾಟೀಲ್:- ಇದರ ಸುಧಾರಣೆಗೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆಗಳು ಏನು ಇವೆ, ಅದಕ್ಕೆ ಸೀಮಿತವಾಗಿ ಉತ್ತರವನ್ನು ಕೇಳಿ. ಎಲ್ಲವನ್ನೂ ಒಂದೇ ಪ್ರಶ್ನೆಯಲ್ಲಿ ಮುಗಿಸಬೇಕೆಂದರೆ ಹೇಗೆ?

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ತಾವು ಸಲಹೆ ನೀಡಿದ ಹಾಗೆ ಮಾನ್ಯ ಸದಸ್ಯರು ಸೇತುವೆಗಳ ಬಗ್ಗೆ ಪ್ರತ್ಯೇಕವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದರೆ, ಅದಕ್ಕೆ ನಾವು ಮಾಹಿತಿಯನ್ನು ಒದಗಿಸಬಹುದಾಗಿತ್ತೆನ್ನುವ ವಿಚಾರವನ್ನು ಸದನದ ಗಮನಕ್ಕೂ ತಂದಿದ್ದೀರಿ ಮತ್ತು ಮಾನ್ಯ ಸದಸ್ಯರ ಗಮನಕ್ಕೂ ತರುವಂಥ ಕೆಲಸವಾಗಿದೆ. ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 50–50 only other roads formationನಲ್ಲಿ 117 ಲಕ್ಷ ರೂಪಾಯಿಗಳೆಂದರೆ ಸುಮಾರು ಮೂರೂವರೆ ಕೋಟಿ ರೂಪಾಯಿಗಳಿಂತಲೂ ಹೆಚ್ಚು ಹಣ 1/3 ರಷ್ಟು ಅನುದಾನವನ್ನು ಇಟ್ಟರೆ ಮೂರೂವರೆ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವಾಗಿದೆ. ನಬಾರ್ಡ್‌ನಲ್ಲಿ ನೂರು ಲಕ್ಷ ರೂಪಾಯಿಗಳು CMGSYನಲ್ಲಿ 153 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 12ನೇ ಹಣಕಾಸಿನ ಯೋಜನೆಯಲ್ಲಿ 29 ಲಕ್ಷ ರೂಪಾಯಿಗಳ ಬಿಡುಗಡೆ ಏನು ಇದೆ, ಅದರ

ಮೂರು ಪಟ್ಟು ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೆನ್ನುವುದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗಿರುವಂಥ ಸಂದರ್ಭದಲ್ಲಿ ಅಭಿವೃದ್ಧಿಯನ್ನು ಮಾಡಿದ್ದೇವೆ. ಇದರಲ್ಲಿ ಯಾವುದೇ ಪಕ್ಷಪಾತವಿಲ್ಲದೇ ಈ ಕೆಲಸವನ್ನು ಮಾಡುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆಂಬ ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇನ್ನು ಮಾನ್ಯ ಸದಸ್ಯರು ಸೇತುವೆಗಳ ಬಗ್ಗೆ ಅವರೇ ಪ್ರತ್ಯೇಕವಾಗಿ ಬಂದು ನನ್ನ ಬಳಿ ಚರ್ಚಿಸಿ, ಈ ಸೇತುವೆಗಳು ಎಲ್ಲಿ ನಿರ್ಮಾಣವಾಗಬೇಕಾಗಿದೆಯೆಂಬ ಬಗ್ಗೆ ನನಗೆ ಅವರು ಸಲಹೆಯನ್ನು ಕೊಟ್ಟರೆ, ನಾನು ಅದನ್ನು ಕಾರ್ಯಗತಗೊಳಿಸುತ್ತೇನೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು:- ಮಾನ್ಯ ಪಾಟೀಲ್‌ರವರೆ, ನಿಮ್ಮ ಉಪ ಪ್ರಶ್ನೆಗಳು ಏನಾದರೂ ಇದ್ದರೆ ಕೇಳಿ.

ಶ್ರೀ ಎ.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನೀಡಿದ ಹೇಳಿಕೆಯನ್ನು ಸ್ವಾಗತಿಸುತ್ತೇನೆ. ಆದರೆ ನಾನು ಒಂದು ಮನವಿ ಮಾಡುವುದೇನೆಂದರೆ ದೇವರಹಿಪ್ಪರಗಿ ಮತಕ್ಷೇತ್ರವೂ ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಹೊಸದಾಗಿ ಆಗಿರುವಂಥ ಮತಕ್ಷೇತ್ರವಾಗಿದೆ. ಇಲ್ಲಿ ಯಾವುದೇ ಅಧಿಕಾರಿಗಳು, ನಾಳೆ ದಿವಸ ನನ್ನ ಮತಕ್ಷೇತ್ರಕ್ಕೆ ತಾವೂ ಬಂದರೂ ಕೂಡ ಅಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಸರ್ಕಾರಿ ರೂಮ್ ಇಲ್ಲ. ಅಲ್ಲಿ P.W.D.ಯಿಂದ ಒಂದೂ ರೂಮ್ ಇಲ್ಲ, ಅಲ್ಲಿಗೆ ನೀವೂ ಬಂದರೂ ಕೂಡ ಗಿಡದ ಕೆಳಗಡೆ ಕುಳಿತು ಕೊಳ್ಳಬೇಕಾಗುತ್ತದೆ. ಈ ಒಂದು ವಾಸ್ತವ ಸ್ಥಿತಿ ಆ ಕ್ಷೇತ್ರದಲ್ಲಿದೆ. ಈ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಅತೀ ಹೆಚ್ಚು ಉದ್ದವಾಗಿರುವಂಥ P.W.D. Roads ಇಲ್ಲಿದೆ. ಅದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ, ಇದನ್ನು ತಮ್ಮ ಗಮನಕ್ಕೆ ಏಕೆ ತರಲಿಚ್ಛಿಸುತ್ತೇನೆಂದರೆ ಇವತ್ತು ನೀವು ಮೂರೂವರೆ ಕೋಟಿ ರೂಪಾಯಿಗಳನ್ನು bridge and buildings ಗಾಗಿ ಬಿಡುಗಡೆ ಮಾಡಿದ್ದೇವೆಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಇದು ಒಂದನ್ನು ಬಿಟ್ಟರೆ ಉಳಿದ ಎಲ್ಲದರಲ್ಲೂ ಕೂಡ, ನೀವು ನನ್ನ ಕ್ಷೇತ್ರಕ್ಕೆ ಮೂರೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ಬೇರೆ ಮತಕ್ಷೇತ್ರಗಳಿಗೆ ತಮ್ಮ ಶಾಸಕರು ಇರುವಂಥ ಮತಕ್ಷೇತ್ರಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರೆಂಬುದನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ತಾವು ಬಿಜಾಪುರಕ್ಕೆ 4 ಕೋಟಿ 81 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ನಾಗಠಾಣಕ್ಕೆ 5 ಕೋಟಿ 2 ಲಕ್ಷ ರೂ.ಗಳನ್ನು ಕೊಡುತ್ತೀರಿ. ಇಂಡಿ ಮತಕ್ಷೇತ್ರಕ್ಕೆ 4 ಕೋಟಿ 74 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ, ಸಿಂಧಗಿ ಮತಕ್ಷೇತ್ರಕ್ಕೆ 4 ಕೋಟಿ 67 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ದೇವರಹಿಪ್ಪರಗಿ

ಕ್ಷೇತ್ರಕ್ಕೆ ಮಾತ್ರ ಮೂರು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ಈ ರೀತಿ ಏಕೆ? ನಮ್ಮ ಕ್ಷೇತ್ರದ ಜನ ಏನು ಅನ್ಯಾಯ ಮಾಡಿದ್ದಾರೆ? ನಮ್ಮ ಮತಕ್ಷೇತ್ರಕ್ಕೆ ಏಕೆ ತಾರತಮ್ಯವನ್ನು ಮಾಡುತ್ತಿದ್ದೀರಿ? ನಾವು ನಿಮಗೆ ಏನು ಅನ್ಯಾಯ ಮಾಡಿದ್ದೇವೆ? ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕಾಗುತ್ತದೆ. ಈ ರೀತಿಯ ತಾರತಮ್ಯವನ್ನು ನಾವು ಖಂಡಿಸಬೇಕಾಗುತ್ತದೆ.

ಅಧ್ಯಕ್ಷರು: ಆಯಿತು, ಮಾನ್ಯ ಲೋಕೋಪಯೋಗಿ ಸಚಿವರೆ ಉತ್ತರ ಕೊಡಿ.

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಡಹಳ್ಳಿಯವರು ಬಹಳ ಅದೃಷ್ಟವಂತರು, ನಾವು ಹಿಂದೆ ಎರಡೆರಡು ವರ್ಷ ಒಂದು ರೂಪಾಯಿ ಕೂಡ ತೆಗೆದುಕೊಂಡಿರಲಿಲ್ಲ.

ಶ್ರೀ ಆರ್.ಧ್ರುವನಾರಾಯಣ: ಮಾನ್ಯ ಅಧ್ಯಕ್ಷರೆ, ನಮಗೂ ಪ್ರಶ್ನೆ ಕೇಳುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ನಿಮಗೆ ಅವಕಾಶ ಕೊಡುವುದಿಲ್ಲ, ಮಾನ್ಯ ಸದಸ್ಯರು ದೇವರಹಿಪ್ಪರಗಿ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. no, I will not allow. ಮಾನ್ಯ ಲೋಕೋಪಯೋಗಿ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಎ.ಎಸ್.ಪಾಟೀಲ್: ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲವೆಂದು ಘೋಷಣೆ ಮಾಡಿ, ಅರ್ಧಂಬರ್ಧ ಅಭಿವೃದ್ಧಿ ಮಾಡುವುದಾ?

(ಗೊಂದಲ)

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲ್ ನಡಹಳ್ಳಿಯವರು ಮೊದಲ ಬಾರಿಗೆ ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದಾರೆ. ಅವರಿಗೆ ಆತುರದಲ್ಲಿ ಕೆಲಸವಾಗಬೇಕೆಂಬ ಬಯಕೆ ಇರುವಂಥಾದ್ದು ಸ್ವಾಭಾವಿಕ. ಅವರು ಆತುರದಲ್ಲಿ ಮಾತನಾಡಬೇಕಾದಾಗ, ಆವೇಶದಲ್ಲಿ ಮಾತನಾಡುವಾಗ ಕೆಲವೊಂದು ವಿಚಾರಗಳನ್ನು ಗಮನಿಸಬೇಕಾಗಿರುವಂಥಾದ್ದು ಅವಶ್ಯವಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಸದಸ್ಯರು ದೇವರಹಿಪ್ಪರಗಿ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ IB ಇಲ್ಲವೆಂದು ಹೇಳಿದರು. ಆ ಕ್ಷೇತ್ರದಲ್ಲಿ ರಾವುತ್‌ರಾಯ್ ದೇವಸ್ಥಾನದ ಎದುರುಗಡೆ ಒಂದು IB ಇದೆಯಂದು ವಿಚಾರವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಅವರಿಗೆ ಅಲ್ಲಿ IB ಆಗಬೇಕೆಂಬ ಭಾವನೆ ಇದ್ದರೆ, ಅದಕ್ಕೆ ಅವರು ಒಂದು ಬೇಡಿಕೆಯನ್ನು ಇಟ್ಟರೆ, ಅದನ್ನು ನಾವು ಪರಿಶೀಲನೆ ಮಾಡಿ, ಇಲಾಖಾಧಿಕಾರಿಗಳಿಂದ ವರದಿಯನ್ನು ತರಿಸಿ, ಅದನ್ನು ಮಾಡಿಸಿ ಕೊಡುವಂಥ ಕೆಲಸವನ್ನು ಮಾಡುತ್ತೇನೆ.

ಇಲ್ಲಿ ಮಾಡುವುದರ ಜೊತೆಗೆ, ತಾವು ಅನಾವಶ್ಯಕವಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಕೆಲವು ಸಂದರ್ಭಗಳಲ್ಲಿ ಅದನ್ನು ಗಮನದಲ್ಲಿಟ್ಟುಕೊಂಡು ಮಾಡಿರಬಹುದು. ಇದನ್ನು ಮುಂದೆ ಸರಿಪಡಿಸಬೇಕಾದಂಥ ಕೆಲಸದಲ್ಲಿ ನಿಮ್ಮಲ್ಲಿ ಬೇಕಾಗಿರುವ ಬೇಡಿಕೆಗಳ ಬಗ್ಗೆ ನಾವು ಇಲಾಖಾಧಿಕಾರಿಗಳಿಂದ ವರದಿಯನ್ನು ತರಿಸಿ ಅಭಿವೃದ್ಧಿ ಮಾಡಿಸುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ತಾವು ಹಿಂದುಳಿದ ಕ್ಷೇತ್ರಗಳಿಗೆ ಮಾಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಕಳೆದ ಬಾರಿ ನಡೆದ ಅಧಿವೇಶನದಲ್ಲೂ ತಮ್ಮ ಗಮನಕ್ಕೆ ತಂದಿದ್ದೇನೆ. ನಾನು ಬೆಳಗಾಂನಲ್ಲಿ ನಡೆದ ಅಧಿವೇಶನದಲ್ಲಿ ಮಾತನಾಡುವಾಗ ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣವನ್ನು rural developmentನಲ್ಲಿ ಬಿಡುಗಡೆ ಮಾಡಿದ್ದಾರೆ, ಅದೇ ರೀತಿಯಾಗಿ P.W.D. ಇಲಾಖೆಯಲ್ಲೂ ಕೂಡ ಯಾವ್ಯಾವ headನಲ್ಲಿ ಯಾವ ರೀತಿಯಾಗಿ ಹಣವನ್ನು ಬಿಡುಗಡೆ ಮಾಡಿ discrimination ಮಾಡಿದ್ದಾರೆನ್ನುವಂಥ ವಿಚಾರವನ್ನು ನಾವು ತಮ್ಮ ಗಮನಕ್ಕೂ ತಂದಿದ್ದೇವೆ. ಅವರೂ ಕೂಡ ಸಚಿವರು ಇದ್ದರು, ಅವರು ಒಪ್ಪಿಕೊಂಡರು. ನಾನು ಅದನ್ನು ಸರಿಪಡಿಸುತ್ತೇನೆ ಎನ್ನುವ ಮಾತನ್ನು ಅವರು ಹೇಳಿದರು. ಆದರೆ ಈ ಸಾರಿಯೂ ಕೂಡ ಅದನ್ನು ಸರಿಪಡಿಸಲಿಲ್ಲವೆಂದರೆ, ಈಗ ನಾವು ಆರಿಸಿ ಆದರೂ ಏಕೆ ಬರಬೇಕು? ನಾವು ಏನು ಜನ ಪ್ರತಿನಿಧಿಗಳಲ್ಲ? ನೀವು ಈಗ ಒಂದು ರಸ್ತೆಯನ್ನು ಹೆಚ್ಚಿಗೆ ತೆಗೆದುಕೊಂಡಿರಬಹುದು ಅಥವಾ ಇನ್ನೊಬ್ಬರಿಗೆ ಹೆಚ್ಚಿಗೆ ತೆಗೆದುಕೊಂಡಿರಬಹುದು ಅಥವಾ ಇನ್ನೊಬ್ಬರಿಗೆ ಹೆಚ್ಚಿಗೆ ಕೊಟ್ಟಿರಬಹುದು. ಆದರೆ ಬೇರೆ ಕಡೆಯೂ ಕೂಡ ಆದಷ್ಟು ಎಲ್ಲರಿಗೂ ಸರಿಸಮನಾಗಿ ಬರುವ ರೀತಿಯಲ್ಲಿ ನೋಡಿಕೊಳ್ಳುವಂಥ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಅದಕ್ಕೆ ನೀವು ಮಾಡಿದ್ದು ಏನು? ನಿಮ್ಮ ಕಾಲದಲ್ಲಿ ಎರಡು ತೆಗೆದುಕೊಂಡಿರೇನು, ಮೂರು ತೆಗೆದುಕೊಂಡಿರೇನು ಎಂದು ಈ ವಾದ ಮಾಡುವುದಕ್ಕೆ ನೀವು ಇರಬೇಕಾ? ಅದುದರಿಂದ ದಯಮಾಡಿ ಈಗಲಾದರೂ ಸರಿಪಡಿಸಿ ನೀವು ಬೆಳಗಾಂ ಸೆಷನ್‌ನಲ್ಲಿ ಕೊಟ್ಟಂಥ ವಾಗ್ದಾನ ಏನು ಇದೆ, ನೀವು ಸರಿ ಪಡಿಸುತ್ತೇವೆಂಬ ಮಾತನ್ನು ಏನು ಹೇಳಿದ್ದೀರಿ, ಮತ್ತು ಅದೇ ರೀತಿಯಾಗಿ rural development department ನವರು ಕೂಡ ಹೇಳಿದರು. ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನಾನು ಕೇಳಿಕೊಳ್ಳುವುದೇನೆಂದರೆ, ಅವರು ಇದನ್ನು ಸರಿಪಡಿಸಬೇಕು ಇಲ್ಲವೆಂಧರೆ ನಾವು ಪ್ರತಿ ಸಾರಿಯೂ ಇದೇ ವಿಷಯವನ್ನು ಕೇಳುವುದು. ಅವರು ಪ್ರತಿ ಸಲ ಇದೇ

ಉತ್ತರವನ್ನು ಹೇಳುವುದು. ಇದು ಸರಿ ಹೋಗುವುದಿಲ್ಲ, ದಯವಿಟ್ಟು ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಹಿಂದೆ ಆಗಿರುವಂಥ ವಿವರಕ್ಕೆ ಹೋಗುವುದಕ್ಕೆ ಬಯಸುವುದಿಲ್ಲ. 2004 ರಿಂದ 2008ರವರೆಗೆ ಇಡೀ ರಾಜ್ಯದಲ್ಲಿ ಆಗಿರುವಂಥ ವ್ಯತ್ಯಾಸಗಳ ಬಗ್ಗೆ ಹೇಳುವುದಕ್ಕೆ ಹೊರಟಿದ್ದೆ. ಆದರೆ ಹದಿನಾಲ್ಕು ನೂರು ಕೋಟಿ ರೂಪಾಯಿಗಳು ಉತ್ತರ ಭಾಗಕ್ಕೆ ಕಡಿಮೆಯಾಗಿತ್ತೆಂಬ ಭಾವನೆ ನಮಗೆ ಇದೆ. ಆ ಮಾತು ಬೇರೆ, ಇಡೀ ಹಾಸನ ಜಿಲ್ಲೆ ಒಂದಕ್ಕೆ 325 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ 94 ಕೋಟಿ ರೂಪಾಯಿಗಳನ್ನು ಕೊಟ್ಟರೆಂಬ ಮಾತುಗಳು ಇರಬಹುದು.

12-00 PM

94 ಕೋಟಿ ರೂಪಾಯಿಗಳನ್ನು ಒಂದು ವಿಧಾನಸಭಾ ಕ್ಷೇತ್ರಕ್ಕೆ ಕೊಟ್ಟು, 18 ವಿಧಾನಸಭಾ ಕ್ಷೇತ್ರಗಳಿರುವಂಥ ಬೆಳಗಾವಿ ಜಿಲ್ಲೆಗೆ ಅದೇ ಅವಧಿಯಲ್ಲಿ 84 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಹೋಲಿಕೆ ಮಾಡಿಕೊಂಡು ನಾವು defend ಮಾಡಿಕೊಳ್ಳಬೇಕು ಎನ್ನುವಂಥ ವಿಚಾರಕ್ಕೆ ನಾನು ಹೋಗುವುದಿಲ್ಲ ಎನ್ನುವುದನ್ನು ಈಗಾಗಲೇ ನಿಮಗೆ, ಮೊದಲನೇ ಸಲ ನಿಮ್ಮ ಪ್ರಶ್ನೆಗೆ ಉತ್ತರ ಹೇಳುವಾಗ ಹೇಳಿದ್ದೇನೆ. ಈಗ ಸಣ್ಣಪುಟ್ಟ ವ್ಯತ್ಯಾಸಗಳು ಆಗಿರಬಹುದು. ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇವೆ, ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೇವೆ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ಟಿ.ಬಿ.ಜಯಚಂದ್ರರವರು ಮಾತನಾಡಲು ಪ್ರಯತ್ನ ಪಟ್ಟರು)

ಅಧ್ಯಕ್ಷರು: ಈಗ ಅದು ಬೇಡ. ಮತ್ತೆ ಅದನ್ನು ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಹೀಗೆ ಮಾಡುತ್ತಾ ಹೋದರೆ ಇದಕ್ಕೆ end ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದನ್ನು ಅರ್ಥ ಮಾಡಿಕೊಂಡು ಮಾಡಬೇಕು. ಜಯಚಂದ್ರರವರೇ, ಈಗ ನಾನು allow ಮಾಡುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲರ ಪರವಾಗಿ ಹೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ: ನೀವು ಹಾನಗಲ್‌ಗೆ 28 ಕೋಟಿ ರೂಪಾಯಿಗಳನ್ನು ಹಾಕಿಕೊಳ್ಳುತ್ತೀರಿ, ಶಿವಮೊಗ್ಗಕ್ಕೆ 120 ಕೋಟಿ ರೂಪಾಯಿಗಳನ್ನು ಹಾಕುತ್ತೀರಿ ಎಂದು ಹೇಳಿದರೆ ಏನಿದು?

(ಗೊಂದಲ)

ಅಧ್ಯಕ್ಷರು: ಈಗ ಹೆಚ್.ಎಸ್.ಪ್ರಕಾಶ್‌ರವರು ಮಾನ್ಯ ಸಾರಿಗೆ ಸಚಿವರಿಗೆ ಪ್ರಶ್ನೆ ಕೇಳಬೇಕು.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅವು ಸಣ್ಣ ಪುಟ್ಟ ಲೋಪದೋಷಗಳಲ್ಲ.

ಒಬ್ಬ ಮಾನ್ಯ ಸದಸ್ಯರು: ತಾರತಮ್ಯವಾಗಿದೆ, ಸರಿಪಡಿಸುತ್ತೇವೆ ಎಂದು ಹೇಳಲಿ.

ಅಧ್ಯಕ್ಷರು: ಸರಿಮಾಡುತ್ತೇವೆ ಎಂದು ಅವರು ಹೇಳಿದರು. ಪ್ರಕಾಶ್‌ರವರೇ ಪ್ರಶ್ನೆ ಕೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸಣ್ಣಪುಟ್ಟ ಎನ್ನುವುದಕ್ಕೆ define ಮಾಡಿ. ಸಣ್ಣ ಎಂದರೇನು, ಪುಟ್ಟ ಎಂದರೇನು ಎನ್ನುವುದನ್ನು ಸ್ವಲ್ಪ define ಮಾಡಿ.

ಅಧ್ಯಕ್ಷರು: ಉದಾಸಿಯವರೇ, ತಾರತಮ್ಯವನ್ನು ಸರಿಮಾಡುತ್ತೇವೆ ಎಂದು ಹೇಳಿ.

ಶ್ರೀ ಸಿ.ಎಂ.ಉದಾಸಿ: ನಾನು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾರತಮ್ಯವಾಗಿದೆ, ಸರಿಪಡಿಸುತ್ತೇವೆ ಎಂದು ಹೇಳಬೇಕು. ಅದನ್ನು ಬಿಟ್ಟು, ಹೊಳೆನರಸೀಪುರದ ವಿಚಾರವನ್ನು ಹೇಳಿದರೆ, ಅವರಿಗಿಂತ ನೀವು ಏನು ಕಮ್ಮಿ?

ಶ್ರೀ ಸಿ.ಎಂ.ಉದಾಸಿ: ನಾವು ಹಾಗೆ ಮಾಡಿಲ್ಲ. ನಾನು ಏನು ಹೇಳುತ್ತಿದ್ದೆ. . . .

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ: ಅವರು 94 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದರು. ನೀವು ಈಗ 120 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರೇವಣ್ಣನವರು ತಪ್ಪು ಮಾಡಿದ್ದರೆ ಅವರ ಮತ ಕ್ಷೇತ್ರಕ್ಕೆ ಶಿಕ್ಷೆ ಕೊಡಿ. ಈಗ ನೀವು ಏನು ಮಾಡಿದ್ದೀರಿ? 120 ಕೋಟಿ ರೂಪಾಯಿಗಳನ್ನು ಶಿವಮೊಗ್ಗಕ್ಕೆ, 80 ಕೋಟಿ ರೂಪಾಯಿಗಳನ್ನು ನೀವು ತೆಗೆದುಕೊಂಡರೆ, ಬೇರೆಯವರು ಏನು ಮಾಡಬೇಕು? ಏನು ಸರ್ಕಾರ ನಡೆಸುತ್ತೀರಿ?

(ಗೊಂದಲ)

ಅಧ್ಯಕ್ಷರು: ತಾರತಮ್ಯವನ್ನು ಸರಿಮಾಡುತ್ತೇವೆ ಎಂದು ಹೇಳಿ ಉದಾಸಿಯವರೇ.

ಒಬ್ಬ ಮಾನ್ಯ ಸದಸ್ಯರು: ಇವರು 411 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಸಿ.ಎಂ.ಉದಾಸಿ: ಮುಂದೆ ಇದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇನೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ.

ಅಧ್ಯಕ್ಷರು: ಆಯಿತು, ಈಗ ಪ್ರಕಾಶ್‌ರವರು, ಮುಂದಿನ ಪ್ರಶ್ನೆಯನ್ನು ಕೇಳಬೇಕು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದನ್ನು ಸರಿಮಾಡಬೇಕು. ಸರಿಪಡಿಸುತ್ತೇವೆ ಎಂದು ನೀವು ವಾಗ್ದಾನ ಮಾಡಿದ್ದೀರಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರಿಗೆ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಕಳೆದ 10 ವರ್ಷಗಳದ್ದು ಬೇಕಾದರೆ ನೀವು ಚರ್ಚೆ ಮಾಡಬೇಕು ಎಂದು ನೀವು ಇಷ್ಟ ಪಟ್ಟರೆ, ಚರ್ಚೆ ಮಾಡುವುದು ಬೇಡ ಎಂದು ನಾನು ಹೇಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮಿಬ್ಬರ 10 ವರ್ಷಗಳ ಆಡಳಿತ ಎಂದೂ ಹೋಲಿಕೆ ಆಗುವುದಿಲ್ಲ. ನೀವು ಮಾಡಿದಂಥಾದ್ದು, ಹಿಂದೆ ರೇವಣ್ಣನವರು ಮಾಡಿರಬಹುದು, ನಿಮ್ಮಿಬ್ಬರ ಆಡಳಿತವನ್ನು ಬೇರೆಯವರಿಗೆ ಹೋಲಿಕೆ ಮಾಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಸಿ.ಎಂ.ಉದಾಸಿ: ಖರ್ಗೆಯವರ ಕಾಲದಲ್ಲಿ ಏನಾಗಿದೆ ಎನ್ನುವುದನ್ನೂ ಚರ್ಚೆ ಮಾಡೋಣ. ನಾನು ಬೇಡ ಎಂದು ಹೇಳುವುದಿಲ್ಲ. ಈಗ ನಾನು ಸರಿಪಡಿಸುತ್ತೇನೆ ಎಂದು ಹೇಳಿದ ಮೇಲೂ ನೀವು . . . .

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಇದು ಚರ್ಚೆಯಾಗಲಿ.

ಅಧ್ಯಕ್ಷರು: ದಯವಿಟ್ಟು ಪ್ರಕಾಶ್‌ರವರು ಮುಂದಿನ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಪ್ರಕಾಶ್‌ರವರು ಸಾರಿಗೆ ಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳಬೇಕು. ಸಾರಿಗೆ ಮಂತ್ರಿಗಳು ಉತ್ತರ ಕೊಡಬೇಕು.

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಧರಣಿಗೆ ಬಂದರು)

ಅಧ್ಯಕ್ಷರು: ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಸದಸ್ಯರು wellಗೆ ಬರುವುದು ಸರಿಯಲ್ಲ. ಉಳಿದ ಸದಸ್ಯರಿಗೆ ನೀವು ಅನಾನುಕೂಲತೆ ಮಾಡುತ್ತೀರಿ. ಇದು

ಒಳ್ಳೆಯದಲ್ಲ. ಅವರು ದೇವರ ಹಿಪ್ಪರಗಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದಾರೆ. ಉಳಿದವರು ಕೇಳಬೇಕೆಂದರೆ, ನೀವು ಪ್ರತ್ಯೇಕವಾಗಿ notice ಕೊಡಿ. Rule 69 ನಲ್ಲಿ ಪ್ರಶ್ನೆಯನ್ನು ಕೇಳಿ ನೀವು, ಎಲ್ಲರೂ notice ಕೊಡಿ. ನಿಮಗೆ ತಾರತಮ್ಯವಾಗಿದ್ದರೆ ಪ್ರತ್ಯೇಕವಾಗಿ notice ಕೊಡಿ. ಪ್ರತ್ಯೇಕವಾಗಿ, calling Attention ಕೊಡಿ, Rule 69 ನಲ್ಲಿ ಕೊಡಿ, ಬೇರೆ ರೀತಿಯಲ್ಲಿ notice ಕೊಡಿ. ಅದು ಬಿಟ್ಟು, ಈ ರೀತಿ ಪ್ರಶ್ನೋತ್ತರಕ್ಕೆ ಅಡೆತಡೆ ಮಾಡುವುದಂಥಾದ್ದು ಸರಿಯಲ್ಲ, ಇದು ಒಳ್ಳೆಯದಲ್ಲ. ಇನ್ನೂ 3–4 ಜನರ ಶಾಸಕರು ಪ್ರಶ್ನೆ ಕೇಳಬೇಕು. ನೀವು ಈ ರೀತಿ ಅಡೆತಡೆ ಮಾಡಿದರೆ ಹೇಗೆ? ನಿಮ್ಮ ಪ್ರಶ್ನೆಗೆ ಇದೇ ರೀತಿ ಅಡೆತಡೆ ಮಾಡಿದರೆ ಸರಿಯಾಗುತ್ತದೆಯೇ? ಯಾವ ಕಾರಣಕ್ಕೂ ಇದು ಸರಿಯಲ್ಲ, ನೀವು ಪ್ರತ್ಯೇಕವಾಗಿ notice ಕೊಡಿ. ನಿಮಗೆ ಅವಕಾಶ ಮಾಡಿಕೊಡುತ್ತೇನೆ. ನಾಳೆಯೇ subjectಅನ್ನು ಇಡುತ್ತೇನೆ. ನೀವು ನಿಮ್ಮ ನಿಮ್ಮ ಕ್ಷೇತ್ರದ್ದನ್ನು discussion ಮಾಡಿ, ಯಾರು ಬೇಡವೆನ್ನುತ್ತಾರೆ? ಆದರೆ, ಪ್ರಶ್ನೋತ್ತರ ಸಮಯದಲ್ಲಿ ಈ ರೀತಿ wellಗೆ ಬಂದು ಸಮಯವನ್ನು ವ್ಯರ್ಥ ಮಾಡುವಂಥಾದ್ದು ಸರಿಯಲ್ಲ. ಇನ್ನೂ 3–4 ಪ್ರಶ್ನೆಗಳಿವೆ. ದಯವಿಟ್ಟು ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಇದು ಆಗದಿದ್ದರೆ, ನಾನು ಮುಂದೆ ಪ್ರಶ್ನೋತ್ತರವನ್ನು continue ಮಾಡುತ್ತೇನೆ. ಇದು ಒಳ್ಳೆಯ ಪದ್ಧತಿಯಲ್ಲ. ಈಗ ಯಾರು ಪ್ರಶ್ನೆ ಕೇಳಿದ್ದಾರೆ, ಅವರು ತಮ್ಮ ಕ್ಷೇತ್ರಕ್ಕೆ ಸೀಮಿತವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಅದನ್ನು ನೀವು entire stateಗೇ ಅನ್ವಯ ಮಾಡಿದರೆ ಹೇಗೆ? ಎಲ್ಲರೂ ನಿಮ್ಮನಿಮ್ಮ ಕ್ಷೇತ್ರದ್ದು ಕೇಳುತ್ತಾ ಹೋದರೆ question hour ಮುಗಿಯುವುದೇ ಇಲ್ಲ. ಎಲ್ಲರೂ ಕೇಳಿಕೊಂಡು ಕುಳಿತರೆ question houseಅನ್ನು ಮಾಡಲಿಕ್ಕಾಗುತ್ತದೆಯೇ? ಇದು ಒಳ್ಳೆಯದಲ್ಲ. ಎಲ್ಲರೂ ನಿಮ್ಮನಿಮ್ಮ seatಗೆ ಹೋಗಿ ಮಾತನಾಡಿ. ಇಲ್ಲಿ ಯಾರೂ ಮಾತನಾಡಬೇಡಿ. ಅದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ.

(ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಿದ್ದ ಸಮಯದಲ್ಲಿ ಧರಣಿ ನಿರತರು ಬಾವಿಯಿಂದ ಮಾತನಾಡುತ್ತಿದ್ದರು ಮತ್ತು ಸರ್ಕಾರದ ವಿರುದ್ಧ ಧಿಕ್ಕಾರ ಎಂದು ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು: ಪ್ರಕಾಶ್‌ರವರೇ, ನೀವು ಪ್ರಶ್ನೆಯನ್ನು ಕೇಳಿ.

(ಗೊಂದಲ)

ಅಧ್ಯಕ್ಷರು: ಇದು ಒಳ್ಳೆಯ ಪದ್ಧತಿ ಅಲ್ಲ. ಅವರು ದೇವರ ಹಿಪ್ಪರಗಿ ಕ್ಷೇತ್ರಕ್ಕೆ ಸೀಮಿತವಾಗಿ ಪ್ರಶ್ನೆ ಕೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು allow ಮಾಡಿದೆ. ಇಡೀ ರಾಜ್ಯದ ಸಮಸ್ಯೆಯನ್ನು ಅವರು ಹೇಳುತ್ತಾರೆ. ಅವರಿಗೆ

ಹಕ್ಕಿದೆ. ವಿರೋಧ ಪಕ್ಷದ ನಾಯಕರು ನಿಮ್ಮ ಪರವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಹೇಳಿದ್ದಾರೆ. ಅವರು ಉತ್ತರ ಕೊಡದಿದ್ದರೆ ನೀವು ಪ್ರತ್ಯೇಕವಾಗಿ ಕೇಳಿ. ಇದು ಬಜೆಟ್ ಅಧಿವೇಶನ. ಬಜೆಟ್ ಮೇಲೆ ಚರ್ಚೆ ಮಾಡುವಾಗ ಇವುಗಳನ್ನೆಲ್ಲಾ ಕೇಳಿ. ಬೇರೆ ರೀತಿ notice ಕೊಡಿ. ದಯವಿಟ್ಟು ನಿಮ್ಮನಿಮ್ಮ ಸ್ಥಳಗಳಿಗೆ ಹೋಗಿ. ಇದು ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು: ಹೀಗಾದರೆ ಉಳಿದವರು ಪ್ರಶ್ನೋತ್ತರ ಅವಧಿಯಲ್ಲಿ ಭಾಗವಹಿಸಲು ಆಗುವುದಿಲ್ಲ. ಅದಕ್ಕೆ ನೀವೇ ಕಾರಣೀಕರ್ತರಾಗುತ್ತೀರಿ. ಇನ್ನೂ 3–4 ಜನ ಸದಸ್ಯರು ಪ್ರಶ್ನೆ ಕೇಳಬೇಕಾಗಿದೆ. ಅವರ ಹಕ್ಕನ್ನು ನೀವು ಮೊಟಕುಗೊಳಿಸುತ್ತಿದ್ದೀರಿ. ನೀವು ಈ ರೀತಿ ಮಾಡುವುದಾದರೆ, ಬೇರೆ ಯಾವ proceedings ನಡೆಯುವುದು ಬೇಡ. ಪ್ರಕಾಶ್‌ರವರು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಎ.ಎಸ್.ಪಾಟೀಲ್‌ರವರು ಪ್ರಶ್ನೆ ಕೇಳಿದರು. ದೇವರ ಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಅವರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡುವಾಗ, ಅದರಲ್ಲಿ ಏನಾದರೂ ಕೊರತೆಯಾಗಿದ್ದರೆ, ಅದನ್ನು ಸರಿಪಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. How can it become a general topic for discussion. ಇದು ಪ್ರಶ್ನೋತ್ತರ ವೇಳೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಎಸ್.ಸುರೇಶ್ ಕುಮಾರ್: ಅದು ಅಧ್ಯಕ್ಷರಿಗೆ ಬಿಟ್ಟದ್ದು.

(ಗೊಂದಲ)

(ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: Wellಗೆ ಬಂದು ಯಾರೂ ಮಾತನಾಡುವ ಹಾಗಿಲ್ಲ. ನಿಮ್ಮ ಹಿರಿಯ ನಾಯಕರು ಮಾತನಾಡಲಿ. ನೀವು ಇಲ್ಲಿ argument ಮಾಡುವ ಹಾಗಿಲ್ಲ. ನಿಮ್ಮ ಮಾತನ್ನು ನಾನು ಕೇಳುವುದಿಲ್ಲ. ನೀವು ಮಾತನಾಡಿದ್ದು ಯಾವುದೂ ದಾಖಲೆಗೆ ಹೋಗುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ (ತಮ್ಮ ಸ್ಥಾನದಿಂದ): ಮಾನ್ಯ ಅಧ್ಯಕ್ಷರೆ, ಇದು ದೇವರ ಹಿಪ್ಪರಗಿ ಕ್ಷೇತ್ರಕ್ಕೆ ಸೀಮಿತವಾಗಿರತಕ್ಕಂಥ ಪ್ರಶ್ನೆಯಾದರೂ ಕೂಡ, ಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದು ಅವರ ಬಾಯಲ್ಲಿ ಬರಬಾರದಿತ್ತು. ಹಿಂದಿನ ಸರ್ಕಾರದಲ್ಲಿ ಹೊಳೆನರಸೀಪುರ ಕ್ಷೇತ್ರಕ್ಕೆ ಏನು

ಕೊಟ್ಟರು, ಇನ್ನೊಂದು ಕ್ಷೇತ್ರಕ್ಕೆ ಏನು ಕೊಟ್ಟರು ಎಂದು ಹೇಳಿ, ಹಾಗಾಗಿ ನಾವೂ ಇದನ್ನು ಮಾಡಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಮಂತ್ರಿಗಳು ಹೇಳುವುದಾದರೆ, ಇದು ಸರಿಯಾದಂಥ ಉತ್ತರವಾಗುವುದಿಲ್ಲ. ಇದು ಈಗ ಉದ್ಭವಿಸಿದಂಥ ಪ್ರಶ್ನೆಯಲ್ಲ. ಕಳೆದ ಐದಾರು ತಿಂಗಳಿಂದಲೂ ಕೂಡಾ ಎಲ್ಲ ಸದಸ್ಯರೂ ಸರ್ಕಾರಕ್ಕೆ ಮನವಿಯನ್ನು ಅರ್ಪಿಸಿದ್ದಾರೆ. ಅದು ಮಾಧ್ಯಮಗಳ ಮುಖೇನ ಚರ್ಚೆಯಾಗುತ್ತಿದೆ. ಇಷ್ಟೆಲ್ಲ ಆದಾಗ್ಯೂ ಕೂಡ, ಸರಿಪಡಿಸುತ್ತೇನೆ ಎನ್ನುವ ಒಂದು ಮಾತನ್ನೂ ಹೇಳುತ್ತಿಲ್ಲ. ಅವರು ಮಾಡಿದ್ದನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇದು ಯಾವ ನ್ಯಾಯ? ತಪ್ಪು ಮಾಡುವುದಕ್ಕೂ ಒಂದು limit ಇರಬೇಕಾಗುತ್ತದೆ.

ಅಧ್ಯಕ್ಷರು: ಜಯಚಂದ್ರರವರೇ, ಏನು ಮಾಡಬೇಕೆಂದು ಮಾಡಿದ್ದೀರಿ? ಈಗ question hour ನಡೆಸುವುದು ಬೇಡವೇ? ಜಯಚಂದ್ರರವರೇ ಒಂದು ಮಾತನ್ನು ನಾನು ನಿಮ್ಮನ್ನು ಕೇಳುತ್ತಿದ್ದೇನೆ, ಈಗ ಏನು ಮಾಡುವುದು?

ಶ್ರೀ ಟಿ.ಬಿ.ಜಯಚಂದ್ರ: ದಯಮಾಡಿ ಅವರಿಂದ ಉತ್ತರ ಕೊಡಿಸಿ.

ಅಧ್ಯಕ್ಷರು: ಉತ್ತರ ಹೇಳಿ. ಉದಾಸಿಯವರೇ ಮತ್ತೊಮ್ಮೆ ಹೇಳಿ.

ಶ್ರೀ ಟಿ.ಬಿ.ಜಯಚಂದ್ರ: ಶಿವಮೊಗ್ಗಕ್ಕೆ 120 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಉದಾಸಿಯವರ ಕ್ಷೇತ್ರಕ್ಕೆ 28 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ ಎನ್ನುವುದಾದರೆ, ಬೇರೆಯವರು ಏನು ಮಾಡಿದ್ದರು? ಅಂದರೆ ಅವರಿಬ್ಬರಿಗೂ competition ನಡೆಸಿದೆಯೇ? ದಯಮಾಡಿ ಮಂತ್ರಿಗಳು ಅದಕ್ಕೆ ಸರಿಯಾದಂಥ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು: ಉದಾಸಿಯವರೇ, ಏನು ಹೇಳುತ್ತೀರೋ ಹೇಳಿ.

ಶ್ರೀ ಸಿ.ಎಂ.ಉದಾಸಿ: ಮತ್ತೊಮ್ಮೆ ಹೇಳಬೇಕು ಎಂದರೆ ನಾನು ಹೇಳುತ್ತೇನೆ. ಈಗ ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ...

ಶ್ರೀ ಆರ್. ಅಶೋಕ್: ಎ.ಎಸ್. ಪಾಟೀಲ್‌ರವರು ಕೇಳಿರುವ ಪ್ರಶ್ನೆಯಲ್ಲಿ ತಾರತಮ್ಯದ ಪ್ರಶ್ನೆ ಇಲ್ಲ. ದೇವರ ಹಿಪ್ಪರಗಿ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆ ಕೇಳಿದ್ದಾರೆ. ತಾರತಮ್ಯದ ಬಗ್ಗೆ ಉತ್ತರ ಬೇಕೆಂದರೆ ಇವರು ನೇರವಾಗಿ ಬೇರೆ ಪ್ರಶ್ನೆಯನ್ನು ಕೇಳಲಿ. ಅವರು ಪ್ರಶ್ನೆ ಕೇಳಿರುವುದು ಒಂದು, ಇಲ್ಲಿ ಧರಣಿ ಮಾಡುತ್ತಿರುವುದು ಮತ್ತೊಂದು.

ಶ್ರೀ ಸಿ.ಎಂ.ಉದಾಸಿ: ಇನ್ನು ಮೇಲೆ, ಹಿಂದೆ ಅಭಿವೃದ್ಧಿ ಆಗಿರುವಂಥ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು, ಅಭಿವೃದ್ಧಿ ಆಗದೇ ಇರುವಂತ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು, ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇನೆ ಎನ್ನುವ ಮಾತನ್ನು ಆಗಲೇ ನಾನು ಹೇಳಿದೆ. ಹಿಂದೆ ನೀವು ಮಾಡಿರುವಂಥ

ಮಾನದಂಡಗಳನ್ನು ಹಿಡಿದುಕೊಂಡು ನಾವು ಮಾಡಬೇಕು ಎನ್ನುವ ಅಪೇಕ್ಷೆ ಇಲ್ಲ. ಆದರೆ, ಎಲ್ಲಿ ಅಭಿವೃದ್ಧಿಯಾಗಿದೆ, ಅಲ್ಲಿ ಕೈಬಿಡಬೇಕಾದಂಥ ಅವಶ್ಯಕತೆ ಇರುತ್ತದೆ, ಅಭಿವೃದ್ಧಿ ಆಗದೇ ಇರುವಂಥ ಕಡೆಗಳಲ್ಲಿ, ಬೇಡಿಕೆ ಇದ್ದಾಗ ಅದನ್ನು ಸರಿಪಡಿಸಬೇಕಾದಂಥ ಕೆಲಸವನ್ನು ಸಾಮಾನ್ಯವಾಗಿ ಮಾಡಬೇಕಾಗುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ: ಅವರು ಚರ್ಚೆ ಮಾಡಬೇಕೆಂದು ಬಯಸಿದ್ದಾರೆ ಎಲ್ಲೆಲ್ಲಿ ಏನಾಗಿದೆ ಎನ್ನುವುದನ್ನು ಹೇಳುವುದನ್ನು ನಾನು ಒಪ್ಪುತ್ತಿದ್ದೆ.

(ಗೊಂದಲ)

ಅಧ್ಯಕ್ಷರು: ಶಾಸಕರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ, ಈಗ ಎ.ಎಸ್. ಪಾಟೀಲ್‌ರವರು ದೇವರಹಿಪ್ಪರಗಿ ಕ್ಷೇತ್ರಕ್ಕೆ ಸೀಮಿತವಾಗಿ ಪ್ರಶ್ನೆಯನ್ನು ಕೇಳಿದ್ದರು. ಆ ಪ್ರಶ್ನೆಯಲ್ಲಿ ಅವರು ತಾರತಮ್ಯವಾಗಿರುವ ಬಗ್ಗೆ ಎಲ್ಲಿಯೂ ಕೇಳಿರಲಿಲ್ಲ. ಅವರು ಉಪ ಪ್ರಶ್ನೆ ಕೇಳುವ ಸಂದರ್ಭದಲ್ಲಿ ತಾರತಮ್ಯವಾಗಿದೆ ಎನ್ನುವುದನ್ನು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಬೆಳಗಾಂ ಅಧಿವೇಶನದಲ್ಲಿ ಇದರ ಬಗ್ಗೆ 'ನಾನು ಪ್ರಸ್ತಾಪ ಮಾಡಿದ್ದೆ, ಸರ್ಕಾರ ಆ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಲಿಲ್ಲವೆನ್ನುವ' ಮಾತನ್ನು ಹೇಳಿದರು. (ಗೊಂದಲ) ನಾನು ಮಾತನಾಡುವಾಗ ನೀವು ಮಾತನಾಡಬಾರದು. ನೀವೇನು ಧರಣಿ ಮಾಡುತ್ತಿದ್ದೀರಿ ಅದನ್ನು continue ಮಾಡಿ, ನಾನು ಬೇಡವೆಂದು ಹೇಳುವುದಿಲ್ಲ. ಇಡೀ ಸದನವನ್ನು collapse ಮಾಡುವುದಾದರೆ ಮಾಡಿ, ಯಾರೂ ಬೇಡವೆನ್ನುವುದಿಲ್ಲ. ಆದರೆ, ಏನು ವಿಷಯ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ, ಆ ಪ್ರಶ್ನೆ ಏನಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ, ಎ.ಎಸ್. ಪಾಟೀಲ್‌ರವರು ದೇವರಹಿಪ್ಪರಗಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾತ್ರ ಪ್ರಶ್ನೆ ಕೇಳಿದ್ದರು. ನಿಮಗೆ ತಾರತಮ್ಯವಾಗಿದ್ದರೆ ಆ ಬಗ್ಗೆ ಚರ್ಚಿಸಲು Rule 69 ನಲ್ಲಾದರೂ, Rule 60 ನಲ್ಲಾದರೂ ಕೊಡಿ, ಬೇರೆ ಯಾವುದಾದರೂ ರೂಪದಲ್ಲಿ ಪ್ರತ್ಯೇಕವಾಗಿ ನೋಟೀಸ್ ಕೊಡಿ. ಆಗ ನಾನು ನಿಮಗೆ ಮಾತನಾಡುವುದಕ್ಕೆ ಅಲೋ ಮಾಡುತ್ತೇನೆ. ಆಗ ಕೇಳಿ. ಯಾರೋ ಒಬ್ಬರು ಒಂದು ಪ್ರಶ್ನೆ ಕೇಳುತ್ತಾರೆ, ಅದರಲ್ಲಿ ಎಲ್ಲರೂ intervene ಆಗುವುದು, ಮತ್ತೆ ಇಲ್ಲಿ wellಗೆ ಬಂದು proceedings ಎಲ್ಲವನ್ನೂ stay ಮಾಡುವುದು ಸರಿಯಲ್ಲ. ಇದು ಒಳ್ಳೆಯ ಪದ್ಧತಿಯಲ್ಲ. ನಾನು ವಿನಂತಿ ಮಾಡುತ್ತಿದ್ದೇನೆ, ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಈ ರೀತಿಯಾದರೆ, ನಾನು ಪ್ರಶ್ನೋತ್ತರ ಕಾಲವನ್ನು ಮುಕ್ತಾಯ ಮಾಡುತ್ತೇನೆ. ಇದೇ ರೀತಿಯಾಗುವುದಾದರೆ ನಾನು ಪ್ರಶ್ನೋತ್ತರವನ್ನೇ ರದ್ದು ಮಾಡುತ್ತೇನೆ. ಬೇಡವೇ

ಬೇಡ. ಪ್ರಶ್ನೋತ್ತರದಲ್ಲಿ ಏನು ಕೇಳಬೇಕೆನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಿ. ಯಾವುದನ್ನು ಕೇಳಬೇಕು, ಯಾವುದು. ಇಲ್ಲ, ಯಾವ ರೂಲ್‌ನಲ್ಲಿ ಏನು ಕೇಳಬೇಕೆನ್ನುವುದನ್ನು ಮೊದಲು ಅರ್ಥ ಮಾಡಿಕೊಳ್ಳಿ. ಅದು ಬಿಟ್ಟು, ಈ ರೀತಿ ಎಲ್ಲದಕ್ಕೂ ಅಡೆತಡೆ ಮಾಡುವುದು ಸರಿಯಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಸದನದ ಮುಖಾಂತರ ನಾವು ವಿಷಯಗಳನ್ನು ಪ್ರಸ್ತಾಪ ಮಾಡಬಹುದು, ಚರ್ಚೆಯಲ್ಲಿ ಭಾಗವಹಿಸಿ ಸಲಹೆಗಳನ್ನು ಕೊಡಬಹುದು, ಇಲ್ಲವೆಂದರೆ, ಬಂದು ನಿಮಗೆ ನೇರವಾಗಿ ಮನವಿ ಮಾಡಿಕೊಳ್ಳಬಹುದು. ಈ ಮೂರನ್ನೂ ಸಹ ನಾವು ಮಾಡಿದ್ದೇವೆ. Discrimination ಆಗಿದೆ ಎಂದು ಬೆಳಗಾಂ ಅಧಿವೇಶನದಲ್ಲಿ ಒಂದೊಂದಾಗಿ ಯಾವ್ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಹಣ ಬೇರ್ಪಡಿಸಿದ್ದಾರೆ, ಯಾವ ರೀತಿಯಾಗಿ discriminate ಮಾಡಿದ್ದಾರೆನ್ನುವುದನ್ನೂ ನಿಮ್ಮ ಗಮನಕ್ಕೂ ತಂದಿದ್ದೇವೆ, ಸರ್ಕಾರದ ಗಮನಕ್ಕೂ ತಂದಿದ್ದೇವೆ, ಸದನದ ಗಮನಕ್ಕೂ ತಂದಿದ್ದೇವೆ, ಇಡೀ ರಾಜ್ಯದ ಜನತೆಗೂ ತಮ್ಮ ಮುಖಾಂತರ ತಿಳಿಸಿದ್ದೇವೆ. ಇದಾದಮೇಲೂ ಕೂಡ 8 ದಿವಸಗಳ ಹಿಂದೆಯೇ ಬಿಜಾಪುರದಲ್ಲಿಯೇ CMGSY ಯಲ್ಲಿ ಮತ್ತು 12th Finance Commission ನಲ್ಲಿ ಕೇವಲ ಮೂರು ಶಾಸಕರಿಗೆ ಮಾತ್ರ ಹಣ ಕೊಟ್ಟು ಬೇರೆಯವರನ್ನು ಕೈಬಿಟ್ಟರು.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರಲ್ಲಿ ನನ್ನ ಒಂದು ವಿನಂತಿ ಇದೆ. ನೀವು ಮಾತನಾಡಲಿಕ್ಕೆ ನಮ್ಮದೇನೂ ತಕರಾರಿಲ್ಲ. ನೀವು ಪ್ರಸ್ತಾಪ ಮಾಡಿ. ಆದರೆ, ಪ್ರಶ್ನೋತ್ತರ ಸಮಯದಲ್ಲಿ ಬೇಡವೆಂದು ಹೇಳುತ್ತಿದ್ದೇನೆ. ಬೇರೆ ವಿಷಯದ ಮೇಲೆ ಮಾತನಾಡುವಾಗ ಮಾತನಾಡಿ. ಬಜೆಟ್ ವಿಷಯದ ಮೇಲೆ ಮಾತನಾಡುವಾಗ ನೀವೇ ಮಾತನಾಡಿ. ಪ್ರಶ್ನೋತ್ತರ ವೇಳೆಯಲ್ಲಿ ಇದನ್ನೆಲ್ಲ ಚರ್ಚೆ ಮಾಡುವುದಕ್ಕಾಗುತ್ತದೆಯೇ? ನನಗೆ ನೀವೇ ಹೇಳಿ. ನೀವೇ ನನಗೆ ಮಾರ್ಗದರ್ಶನ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಒಪ್ಪಿಕೊಂಡೆ, ಇಲ್ಲ. ಆದಕ್ಕೆ ನಾನೇಕೆ ಹೇಳುತ್ತೇನೆಂದರೆ, ಈ ಚರ್ಚೆಯನ್ನು ಅಲ್ಲಿ ಮಾಡಿದರೂ ಪ್ರಯೋಜನವಾಗಲಿಲ್ಲ. 8 ದಿವಸಗಳಲ್ಲಿ ಈ ರೀತಿಯಾಗಿ ಮಾಡಿದ್ದಾರಲ್ಲ. ಎಷ್ಟು ಸಲ ಹೇಳುವುದು?

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ನಾನು ನಿಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತೇನೆ. ಅಲ್ಲಿ ಅವರಿಗೆ ಅರ್ಥವಾಗಲಿಲ್ಲವೆಂದರೆ, ಅದಕ್ಕೆ ಅರ್ಥವಾಗುವ ಹಾಗೆ ನೀವೇನು ಮಾಡಬೇಕೋ ಮಾಡಿ. ಆದರೆ, ಪ್ರಶ್ನೋತ್ತರ ಸಮಯದಲ್ಲಿ ಬೇಡವೆಂದು ನಾನು ಹೇಳುತ್ತಿದ್ದೇನೆ ಅಷ್ಟೆ. ಬೇರೆ ರೀತಿಯಲ್ಲಿ ಚರ್ಚೆ

ಮಾಡಲು ನೀವು ಯಾವ ರೀತಿ ನೋಟೀಸ್ ಕೊಡುತ್ತೀರಿ, ಯಾವ ರೀತಿ ಚರ್ಚೆ ಮಾಡುತ್ತೀರಿ, ಯಾವ ರೀತಿ protest ಮಾಡುತ್ತೀರಿ ಅದು ನಿಮಗೆ ಬಿಟ್ಟಿದ್ದು. ಮಾಡಿ, ಯಾರು ಬೇಡವೆಂದು ಹೇಳುತ್ತಾರೆ? ಆದರೆ, ಪ್ರಶ್ನೋತ್ತರ ಸಮಯದಲ್ಲಿ ಇಲ್ಲಿ well ಗೆ ಬರುವುದು ಸರಿಯಲ್ಲ. ಇನ್ನೂ ನಾಲ್ಕು ಜನ ಸದಸ್ಯರು ಪ್ರಶ್ನೆ ಕೇಳುವುದು ಇದೆ. ಅದಕ್ಕೆಲ್ಲ ಅಡಚಣೆ ಮಾಡುವುದು ಸರಿಯಲ್ಲ. ನಿಮಗೆ ನಾನು ಮತ್ತೊಂದು ಸಲ ಅವಕಾಶ ಕೊಡುತ್ತೇನೆ. ತಾವು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಮಗೆಲ್ಲ ಗೊತ್ತಿದೆ. ಆದರೆ, ನಾನು . . . .

(ಗೊಂದಲ)

ಅಧ್ಯಕ್ಷರು: ನಾಯ್ಡುರವರೆ, ತಾವು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. (ಗೊಂದಲ) Please ಕುಳಿತುಕೊಳ್ಳಿ. ನೆಹರು ಓಲೇಕಾರ್, ಶ್ರೀಕಾಂತ್ ಕುಲಕರ್ಣಿಯವರೆ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಮ್ಮ ಗಮನಕ್ಕೂ ತಂದಿದ್ದೇವೆ. ಸದನದ ಗಮನಕ್ಕೂ ತಂದಿದ್ದೇವೆ. Discrimination ಆಗಿದೆ ಎಂದು ಹೇಳಿದ ಮೇಲೆಯಾದರೂ ಅವರು ತಿದ್ದುಪಡಿ ಮಾಡಬೇಕಾಗಿತ್ತು. ಆದರೆ, ಮಾಡಿಲ್ಲ. 8 ದಿವಸಗಳ ಹಿಂದೆಯೇ ಬಿಜಾಪುರದಲ್ಲೂ ಕೂಡ ಈ ರೀತಿಯಾಗಿ discrimination ಮಾಡಿದ್ದಾರೆ. ತಾವು ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಆದೇಶ ಕೊಡುತ್ತಿದ್ದೀರಿ. ನಾವು ಒಪ್ಪಿಕೊಳ್ಳುತ್ತೇವೆ. ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆ ಮಾಡೋಣ. ಆದರೆ, ಇವರ ನಡವಳಿಕೆ ಬದಲಾಗಿಲ್ಲ. ಹತ್ತು ಸಲ ಹೇಳಿದರೂ ಪ್ರಯೋಜನವಿಲ್ಲವೆಂದರೆ ಪ್ರಜಾಪ್ರಭುತ್ವದಲ್ಲಿ ಏನು ಮಾಡಬಹುದು?

ಅಧ್ಯಕ್ಷರು: ಏನು ಮಾಡುವುದು ಎಂಬುದರ ಬಗ್ಗೆ ನೀವೇ ವಿಚಾರ ಮಾಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕುಸ್ತಿ ಮಾಡುವುದಕ್ಕಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು: ನೀವು ಹೇಳಬೇಕು. ಇದು ಪ್ರಶ್ನೋತ್ತರ ಸಮಯ. ಪ್ರಶ್ನೋತ್ತರದ ಸಮಯದಲ್ಲಿ ಏನು ಮಾಡುತ್ತೀರಿ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಅವರ ಕಿವಿ ಹಿಂಡಬೇಕು.

ಅಧ್ಯಕ್ಷರು: ಕಿವಿ ಹಿಂಡುವುದು ಬೇರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಪ್ರಜಾಪ್ರಭುತ್ವ, ಇದು dictatorship ಅಲ್ಲ ಇದು Fascist Government ಅಲ್ಲ ಇದು ಪ್ರಜಾಪ್ರಭುತ್ವ, ಚೆನ್ನಾಗಿ ನಡೆಯಿರಿ ಎಂದು ಅವರ ಕಿವಿ ಹಿಂಡಿ. ಅದಕ್ಕೆ ಅಧ್ಯಕ್ಷರೆ, ಇದನ್ನು ನೋಡಿದರೆ, ನನಗೇನು ಅನಿಸುತ್ತದೆಂದರೆ, ಈ ತಾರತಮ್ಯವನ್ನು ಸರಿಪಡಿಸುವ ಮನಸ್ಸು ಶ್ರೀಮಾನ್ ಉದಾಸಿಯವರಿಗಿಲ್ಲ, ಈ ಸರ್ಕಾರಕ್ಕಿಲ್ಲ. ಅದಕ್ಕಾಗಿ ನಾವು ಇದನ್ನು ಪ್ರತಿಭಟಿಸಿ, walk out ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.

ಅಧ್ಯಕ್ಷರು: ಬೇಡ. ದೇವರ ಹಿಪ್ಪರಗಿ ಕ್ಷೇತ್ರದ ಪ್ರಶ್ನೆ ಇದಾಗಿದೆ. ಬಜೆಟ್ ಭಾಷಣ ಮಾಡುವಾಗ ತಾವು ಬೇಕಾದರೆ ಹೇಳಬಹುದು. ಈಗ ಬೇಡ. ಪ್ರಕಾಶ್‌ರವರೆ, ಮುಂದಿನ ಪ್ರಶ್ನೆ ಕೇಳಿ. ರೇವಣ್ಣನವರೆ, ಈಗ ದೇವರ ಹಿಪ್ಪರಗಿ ಕ್ಷೇತ್ರದ ಪ್ರಶ್ನೆಗೆ ಸಂಬಂಧಿಸಿದಂತೆ, ಇಷ್ಟು ಹೊತ್ತು ಇಷ್ಟೊಂದು ರಾದ್ಧಾಂತವಾಯಿತು. ಆದ್ದರಿಂದ, ಬೇಡ.

ಶ್ರೀ ಹೆಚ್.ಡಿ.ರೇವಣ್ಣ: ದಯಮಾಡಿ ಎರಡು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಯಾವ ವಿಚಾರದ ಬಗ್ಗೆಯೂ ಕೂಡ ಇವರಿಗೆ ಚರ್ಚಿಸಲು ಅವಕಾಶವಿದೆ. ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲ. ಕಾಲಹರಣ ಮಾಡುವುದಕ್ಕೆ ಇಷ್ಟವಾಗಿದೆ. ಇವರು ಈ ಸದನದ ಸಮಯವನ್ನು ಹರಣ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ನಾಯ್ಡುರವರೆ, please ಕುಳಿತುಕೊಳ್ಳಿ. ಈಗ ನಾನು ಪ್ರಶ್ನೋತ್ತರವನ್ನು close ಮಾಡುತ್ತೇನೆ..

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಕಳೆದ 20-25 ವರ್ಷಗಳಿಂದ ಯಾರ್ಯಾರ ಬಂಡವಾಳ ಏನಾಗಿದೆ ಎಂಬುದು ಗೊತ್ತಿದೆ. ಎಲ್ಲರ ಬಂಡವಾಳ ಗೊತ್ತಾಗಲಿ. ಸತ್ಯಹರಿಶ್ಚಂದ್ರರ ಮೊಮ್ಮಕ್ಕಳು ಯಾರೂ ಅಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಹೊಳೆನರಸೀಪುರದಲ್ಲಿ 94 ಕೋಟಿ ರೂಪಾಯಿಗಳ ಕೆಲಸದ ಬಗ್ಗೆ ವಿಧಾನಪರಿಷತ್ತಿನಲ್ಲಿ ಹೇಳಿದ್ದಾರೆ ಮತ್ತು ಇಲ್ಲಿ ಹೇಳಿದ್ದಾರೆ. PWD Minister ರವರಿಗೆ ತಾಕತ್ತಿದ್ದರೆ ಹಿಂದಿನ ವರ್ಷಗಳಲ್ಲಿ ಏನು ಕೊಟ್ಟಿದ್ದಾರೆ ಮತ್ತು

ಈಗ ಏನು ಕೊಟ್ಟಿದ್ದಾರೆ ಮತ್ತು ಹಾವೇರಿಗೆ ಏನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಚರ್ಚೆಗೆ ಇಡುವುದಕ್ಕೆ ಹೇಳಿ. ಇವರನ್ನು ಯಾರಾದರೂ PWD Minister ಎಂದು ಹೇಳುತ್ತಾರೆಯೇ? (ಗೊಂದಲ) ನಾಚಿಕೆಗೇಡು, ಇವರು PWD Minister ಆಗಿದ್ದಾರೆ.

(ಗೊಂದಲ)

ಅಧ್ಯಕ್ಷರು: ತಾವು notice ಕೊಡಿ. (ಗೊಂದಲ) ಪ್ರತ್ಯೇಕವಾದ ಚರ್ಚೆಗೆ ಅವಕಾಶ ಕೊಡುತ್ತೇನೆ. (ಗೊಂದಲ) ರೇವಣ್ಣನವರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಯಾವಾಗ ಅವಕಾಶ ಕೊಡುತ್ತೀರಿ.?

ಅಧ್ಯಕ್ಷರು: ನಾಳೆ, ನಾಡಿದ್ದರಲ್ಲಿ ಅವಕಾಶ ಕೊಡುತ್ತೇನೆ. ನೀವು ಒಂದು ನೋಟೀಸ್ ಕೊಡಿ.

(ಗೊಂದಲ)

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ರೇವಣ್ಣನವರು ನಾಚಿಕೆಗೇಡು ಎನ್ನುವ ಪದ ಬಳಸಿದ್ದಾರೆ. ಆ ಪದವನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಅಧ್ಯಕ್ಷರುಳ ದಯವಿಟ್ಟು ಕುಳಿತುಕೊಳ್ಳಿ. (ಗೊಂದಲ) ಸಿದ್ದುಸವದಿಯವರೆ, ವಲ್ಯಾಪುರೆಯವರೆ please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾವು ಚರ್ಚೆ ಮಾಡಲಿಕ್ಕೆ ready ಇದ್ದೇವೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಅದಕ್ಕೆ ಉದಾಸಿಯವರು ಉತ್ತರ ಕೊಡುತ್ತಾರೆ. (ಗೊಂದಲ) Please ಕುಳಿತುಕೊಳ್ಳಿ. ಸಿದ್ದುಸವದಿಯವರೆ, ಕುಳಿತುಕೊಳ್ಳಿ. (ಗೊಂದಲ) ಅವರಿಗೆ ತಾಕತ್ತು ಇರುತ್ತದೆ. ನೀವೆಲ್ಲ ಹೇಳುವುದು ಬೇಕಾಗಿಲ್ಲ. ಅವರು ತಾಕತ್ತಿನ ಪ್ರಶ್ನೆ ಕೇಳಿದರೆ ಆ ತಾಕತ್ತು ಬಗ್ಗೆ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವೇನೂ ತಾಕತ್ತು ತೋರಿಸುವುದು ಬೇಕಾಗಿಲ್ಲ. ಎಲ್ಲದಕ್ಕೂ ಎದ್ದು ನಿಲ್ಲುವ ಪದ್ಧತಿ ಸರಿಯಲ್ಲ. ಇಲ್ಲಿ ಏನು ನಡೆಯುತ್ತಿದೆ? ಏನು ಪದಗಳಿವು? ಅದಕ್ಕೆ ಮಂತ್ರಿಗಳು ಹೇಳುತ್ತಾರೆ. ಎಲ್ಲದಕ್ಕೂ ಎದ್ದು ನಿಲ್ಲುವುದರಿಂದ proceedings ಏನೂ ನಡೆಸುವ

ಹಾಗಿಲ್ಲ. ಅವರು ತಾಕತ್ತು ಬಗ್ಗೆ ಕೇಳಿದರೆ ಮಂತ್ರಿಗಳು ತಾಕತ್ತು ಬಗ್ಗೆ ಹೇಳುತ್ತಾರೆ. ಎಲ್ಲ ಸದಸ್ಯರಿಗೂ ಹೇಳಬೇಕೇನು? (ಗೊಂದಲ) ದಯವಿಟ್ಟು ಕುಳಿತುಕೊಳ್ಳಿ. ಬೆಳಿಗ್ಗೆಯಿಂದ ಇದೇ ಆಯಿತು. (ಗೊಂದಲ) ಒಂದೊಂದು ಶಬ್ಧಕ್ಕೂ ಎದ್ದು ನಿಲ್ಲುತ್ತೀರಿ.

263 ಶ್ರೀ ಪ್ರಕಾಶ್ ಹೆಚ್.ಎಸ್.

ಮಾನ್ಯ ಸಾರಿಗೆ ಸಚಿವರು.

ಅ) ಹಾಸನ ನಗರ ಮತ್ತು ಹೊಳೆನರಸೀಪುರ ಮಾರ್ಗದ ಚನ್ನಪಟ್ಟಣ ಬಳಿ ಹೊಸ ಹೈಟೆಕ್ ಬಸ್‌ನಿಲ್ದಾಣದ ಕಾಮಗಾರಿಯನ್ನು ಪ್ರಾರಂಭ ಮಾಡಿದ್ದು ಯಾವಾಗ; ಈ ಕಾಮಗಾರಿಯನ್ನು ಮುಕ್ತಾಯ ಗೊಳಿಸುವುದು ಯಾವಾಗ; ಇದಕ್ಕಾಗಿ ಮೀಸಲಿಟ್ಟ ಅಂದಾಜು ವೆಚ್ಚವೆಷ್ಟು ಹಾಗೂ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು;

3.5.2007.

ಮೇ–2009 (ಟೆಂಡರ್ ಕರಾರಿನಂತೆ ದಿನಾಂಕ: 2.11.08ರಂದು ಮುಕ್ತಾಯಗೊಳಿಸಬೇಕಾಗಿತ್ತು) ಅನುಮೋದನೆಯಾದ ಮೊತ್ತವು 2633.50ಲಕ್ಷ ರೂ.ಗಳಾಗಿರುತ್ತದೆ.

ಇಲ್ಲಿಯವರೆಗೆ 2037.00ಲಕ್ಷ ರೂ.ಗಳನ್ನು ಯೋಜನೆಗಾಗಿ ವೆಚ್ಚ ಮಾಡಲಾಗಿದೆ.

ಆ) ಸಾರ್ವಜನಿಕರ ಉಪಯೋಗಕ್ಕೆ ಬಸ್ ನಿಲ್ದಾಣವನ್ನು ಮುಕ್ತಗೊಳಿಸುವುದು ಯಾವಾಗ ಹಾಗೂ ಪ್ರತಿನಿತ್ಯವೂ ಬಂದು ಹೋಗುವ ಸರ್ಕಾರಿ ಬಸ್ಸುಗಳೆಷ್ಟು; ಮಾಹಿತಿ ನೀಡುವುದು;

2009

2061 ಸರ್ಕಾರಿ ಬಸ್ಸುಗಳು.

ಇ) ಹಾಸನ ಜಿಲ್ಲೆಯ ಆಲೂರಿನಲ್ಲಿ ಬಸ್ ಡಿಪೋ ತೆರೆಯಲು ಸರ್ಕಾರ ಮಂಜೂರಾತಿ ನೀಡಿದೆಯೇ; ಹಾಗಿದ್ದಲ್ಲಿ, ಬಸ್ ಡಿಪೋ ತೆರೆಯಲು ಕೈಗೊಂಡಿರುವ ಕ್ರಮಗಳೇನು?

ಇಲ್ಲ.

ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಪ್ರಕಾಶ್: ಹಾಸನದಲ್ಲಿ ಈ ಕಾಮಗಾರಿಗೆ 26 ಕೋಟಿ 33 ಲಕ್ಷ ರೂ.ಗಳ ಅನುಮೋದನೆ ಆಗಿದ್ದು ಕೆಲಸ ಪ್ರಾರಂಭವಾಗಿದೆ.

ಇಲ್ಲಿಯವರೆಗೆ 20 ಕೋಟಿ 37 ಲಕ್ಷ ರೂ.ಗಳ ಖರ್ಚಾಗಿದೆ. ಅದು 2008ರಲ್ಲಿ ಮುಕ್ತಾಯವಾಗಬೇಕಾಗಿತ್ತು. ಆದರೆ, ಇಲ್ಲಿಯವರೆಗೂ ಮುಕ್ತಾಯವಾಗಿಲ್ಲ. ಅದಕ್ಕೆ, ದಯವಿಟ್ಟು ಸಚಿವರು ಉದ್ಘಾಟನೆ ಮಾಡದಿದ್ದರೂ ಶಂಕುಸ್ಥಾಪನೆಗಾದರೂ ನಮ್ಮ ಜಿಲ್ಲೆಗೆ ಬನ್ನಿ ಎಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಆರ್. ಅಶೋಕ್: ಹಾಸನ ಬಸ್ ನಿಲ್ದಾಣವನ್ನು ಹೈಟೆಕ್ ಬಸ್ ನಿಲ್ದಾಣವಾಗಿ ಮಾಡುತ್ತಿದ್ದೇವೆ. ಒಟ್ಟು 26 ಕೋಟಿ ರೂ.ಗಳ ಅಂದಾಜು ವೆಚ್ಚ ಇದೆ. ಅದರಲ್ಲಿ 20 ಕೋಟಿ ರೂ.ಗಳನ್ನು ಈಗ್ಗಾಗಲೇ ಖರ್ಚು ಮಾಡಲಾಗಿದೆ. ಅದಕ್ಕೆ 17 ಎಕರೆ ಜಮೀನು ಬೇಕಾಗಿದೆ. ಹಳೆಯ ಬಸ್ ನಿಲ್ದಾಣದಲ್ಲಿ 12 bus bay ಇತ್ತು. ಈಗ ಒಂದೇ ಸಾರಿಗೆ 85 bus bay ಗಳನ್ನು ಅಲ್ಲಿ ನಾವು ಮಾಡುತ್ತಿದ್ದೇವೆ. 2 ಲಕ್ಷ sq.ft. area ಇದೆ, ಅಂದರೆ ನಮ್ಮ International Airport ನ ಎಷ್ಟು plinth area ಇದೆ almost all ಅಷ್ಟೇ plinth area ಇದೆ. ಕರ್ನಾಟಕದಲ್ಲಿಯೇ ಅತಿ ದೊಡ್ಡದಾದ ಬಸ್ ನಿಲ್ದಾಣ ಇದಾಗುತ್ತದೆ. ಇದರ ಕೆಲಸ ನವೆಂಬರ್ ನಲ್ಲಿ ಮುಗಿಯಬೇಕಾಗಿತ್ತು. ಅದು ಕೆರೆ ಪ್ರದೇಶವಾಗಿರುವುದರಿಂದ ಮಳೆ ಮತ್ತು ನೀರು ಜಾಸ್ತಿ ಇದ್ದುದ್ದರಿಂದ ಸ್ವಲ್ಪ ಮುಂದೂಡಲಾಗಿದೆ. ಇನ್ನು 3 ತಿಂಗಳೊಳಗೆ ಇದನ್ನು ಉದ್ಘಾಟನೆ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿ ಇಲ್ಲಿ ಸುಮಾರು 1455 ಬಸ್‌ಗಳು ಬರುತ್ತವೆ. ಸುಮಾರು 2061 ಬಂದು ಹೋಗುವ ಬಸ್‌ಗಳು ಇವೆ. Roof ಮತ್ತು painting ಇವೆರಡು ಕೆಲಸಗಳು ಮಾತ್ರ ಬಾಕಿ ಇವೆ. ಇದನ್ನು 3 ತಿಂಗಳೊಳಗೆ complete ಮಾಡುತ್ತೇವೆ. ಆದಷ್ಟು ಶೀಘ್ರವಾಗಿ ಮಾಡುತ್ತೇವೆ. ಏಕೆಂದರೆ, ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ಬಹಳಷ್ಟು ಬಸ್‌ಗಳು ಈ route ನಲ್ಲಿಯೇ ಹೋಗುವುದರಿಂದ ಆದಷ್ಟು ಶೀಘ್ರವಾಗಿ ಈ ಬಸ್ ನಿಲ್ದಾಣವನ್ನು ಹಾಸನ ಜನತೆಗೆ ಕೊಡುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದಷ್ಟು ಬೇಗ ಇದನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಆಲೂರು ಕೂಡ taluk head quarter ಆಗಿದೆ. ಈ ಪಟ್ಟಣ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ಬರುತ್ತದೆ. ಆಲೂರಿನಿಂದ ಹಾಸನಕ್ಕೆ 20 ಕಿ.ಮೀ. ಆಗುತ್ತದೆ. ಆ ಭಾಗದ ರಸ್ತೆಯ ಮೇಲಿನ ಒತ್ತಡ ತುಂಬಾ ಇದೆ. ಹೀಗಾಗಿ ಅಲ್ಲಿಗೆ ಒಂದು ಡಿಪೋ ಅವಶ್ಯಕತೆ ತುಂಬಾ ಇದೆ. ನಾವು, ತಹಶೀಲ್ದಾರರು ಅಲ್ಲಿ inspection ಮಾಡಿ 4 ಎಕರೆ ಸರ್ಕಾರಿ ಜಾಗ ಕೊಡುವುದು ಎಂದು ಹೇಳಿದ್ದೆವು. ಆದರೆ, ಆಲೂರು ಪಟ್ಟಣದಿಂದ ಆ ಜಾಗಕ್ಕೆ ಎರಡೂ ಕಾಲು ಕಿಲೋ ಮೀಟರ್ ದೂರವಾಗುತ್ತದೆ. ಅಲ್ಲಿ ಬಸ್ ಡಿಪೊ ಮಾಡಿದರೆ ಡೀಸೆಲ್ ಖರ್ಚು ಹೆಚ್ಚು ಬರುತ್ತದೆ, ಅದಕ್ಕೆ ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲವೆಂದು

ಅಧಿಕಾರಿಗಳು ಕುಂಟುನೆಪ ಹೇಳುತ್ತಿದ್ದಾರೆ. ತಮಗೂ ಅಲ್ಲಿಯೂ ಸಮಸ್ಯೆ ಗೊತ್ತಿದೆ. ಯಾವುದೇ ಪಟ್ಟಣದ head quarter ನಲ್ಲಿ ಖಾಸಗಿ, ಸರ್ಕಾರಿ ಜಾಗ ಇರಬಹುದು, ಎಲ್ಲಿ ಖಾಲಿ ಜಾಗವಿದೆ? ನಾವು ದೂರ ಹೋಗಲೇ ಬೇಕಾಗುತ್ತದೆ. ದಯಮಾಡಿ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾನ್ಯ ಸಚಿವರು ಆಲೂರಿಗೆ ಹೊಸ bus depot ಮಂಜೂರು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಅಶೋಕ್: ಆಲೂರು ಬಸ್ ನಿಲ್ದಾಣ ತೆರೆಯಬೇಕೆಂದು ಮಾನ್ಯ ಸದಸ್ಯರು ವಿನಂತಿ ಮಾಡಿದ್ದಾರೆ. ಅಲ್ಲಿ ಜಾಗವನ್ನು ಇನ್ನೂ ನಮಗೆ handover ಮಾಡಿಲ್ಲ. ಅಲ್ಲಿಯ ತಹಶೀಲ್ದಾರ್ ಹತ್ತಿರ ಮತ್ತು D.C. ಹತ್ತಿರ ಮಾತನಾಡಿದ್ದೇನೆ. ಅಲ್ಲಿ 4 ಎಕರೆ ಜಾಗ ಇದೆ ಎಂದು ಹೇಳುತ್ತಾರೆ. ಆ ಜಾಗ ನಮಗೆ hand over ಆದ ತಕ್ಷಣ ಅದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮಂಜೂರು ಮಾಡುವುದಕ್ಕೆ ನಮಗೇನೂ ಮುಜುಗರವಿಲ್ಲ. ಈಗಾಗಲೇ ಹಾಸನದಲ್ಲಿ ದೊಡ್ಡ ಬಸ್ ನಿಲ್ದಾಣವಾಗುತ್ತಿದೆ. 12 bus bay ಇದ್ದದ್ದನ್ನು 85 bus bay ಗೆ ಏರಿಸುತ್ತಿದ್ದೇವೆ. ಆಲೂರಿನಲ್ಲೂ ಮಾಡುವುದಕ್ಕೆ ನಮಗೇನೂ ಸಮಸ್ಯೆ ಇಲ್ಲ. ಏಕೆಂದರೆ, ಆ route ನಲ್ಲಿ ಸುಮಾರು 4000 trips ಹೋಗುವುದರಿಂದ ಮಾಡುವುದಕ್ಕೆ ಸಮಸ್ಯೆ ಇಲ್ಲ. ಅದನ್ನು ಮಂಜೂರು ಮಾಡುವುದರಲ್ಲಿ ನಾನು ನಮ್ಮ ಅಧಿಕಾರಿಗಳ ಜೊತೆ ಚರ್ಚಿಸಿ ಅದಕ್ಕೆ ಸೂಕ್ತ ಪರಿಹಾರವನ್ನು ದೊರಕಿಸಿಕೊಡಲಾಗುವುದು.

234 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ

ಲೋಕೋಪಯೋಗಿ ಸಚಿವರು

ಅ) ಮಂಡ್ಯ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಎಷ್ಟು;

ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ರೂ.5337.50 ಲಕ್ಷಗಳ ವೆಚ್ಚದಲ್ಲಿ ಒಟ್ಟು 67 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಆ) ಅವುಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಪ್ರಸಕ್ತ ಸಾಲಿಗೆ ಲೆಕ್ಕಶೀರ್ಷಿಕೆ 5054 ಓಆರ್ಎಫ್ ಅಡಿಯಲ್ಲಿ 54 ಕಾಮಗಾರಿಗಳಿಗೆ ರೂ.1184.50 ಲಕ್ಷಗಳು ಹಾಗೂ ಸಿಆರ್ಎಫ್ ಮತ್ತು ನಬಾರ್ಡ್ ಯೋಜನೆಗಳಡಿಯಲ್ಲಿ 13 ಕಾಮಗಾರಿಗಳಿಗೆ ಒಟ್ಟು ರೂ.1452.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಇ) ಶ್ರೀರಂಗಪಟ್ಟಣ ತಾಲ್ಲೂಕಿನಾದ್ಯಂತ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಯಾವುವು ಮತ್ತು ಅವುಗಳಿಗೆ ಒದಗಿಸಿರುವ ಅನುದಾನ ಎಷ್ಟು;

ಶ್ರೀರಂಗಪಟ್ಟಣ ತಾಲ್ಲೂಕಿಗೆ 2008-09ನೇ ಸಾಲಿನ ಆಯವ್ಯಯದಲ್ಲಿ ರೂ.275.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 7 ಹೊಸ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿವರಗಳು ಅನುಬಂಧದಲ್ಲಿವೆ.

ಈ) ಶ್ರೀರಂಗಪಟ್ಟಣ ತಾಲ್ಲೂಕಿನಾದ್ಯಂತ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಅನುಬಂಧದಲ್ಲಿ ತಿಳಿಸಲಾಗಿರುವ ಜಿಲ್ಲಾ ಮುಖ್ಯ ರಸ್ತೆಗಳು ಅಭಿವೃದ್ಧಿ ಕಾಮಗಾರಿಗಳಲ್ಲದೆ ಲೆಕ್ಕಶೀರ್ಷಿಕೆ 3054 ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿಗೆ ರು.103.50 ಲಕ್ಷ ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ರಸ್ತೆ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ರೂ.108.04 ಲಕ್ಷಗಳ ಅನುದಾನದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಸಹ ಕೈಗೊಂಡು ರಸ್ತೆಗಳನ್ನು ಸುಸ್ಥಿತಿಯಲ್ಲಿಡಲಾಗಿದೆ.

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ರಮೇಶ್ ಬಂಡಿಸಿದ್ದೇಗೌಡರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 234ಕ್ಕೆ ಉತ್ತರ

2008-09ನೇ ಸಾಲಿನ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕಾಮಗಾರಿಗಳ ವಿವರ

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಕಾಮಗಾರಿ ಪ್ರಗತಿ
1.	ಹುಂಜನಕೆರೆಯಿಂದ ಶ್ರೀರಂಗಪಟ್ಟಣ ಗಾಮನಹಳ್ಳಿಗೆ ತಡಗವಾಡಿ ಮುಖಾಂತರ ಹೋಗುವ ರಸ್ತೆ ಅಭಿವೃದ್ಧಿ ಸ.1.00ರಿಂದ 3.30 ಕಿ.ಮೀ	50.00	ಟೆಂಡರ್ ಅನುಮೋದನೆಗೊಂಡಿದೆ. ದಿ:28-1-2009ರಂದು ಕಾರ್ಯಾದೇಶ ನೀಡಲಾಗಿದೆ

2.	ಚಿನ್ನಾಯಕನಹಳ್ಳಿ ತೂಬಿನಕೆರೆ ಶ್ರೀರಂಗಪಟ್ಟಣ ರಸ್ತೆ ಅಭಿವೃದ್ಧಿ ಸ.4.00 ರಿಂದ 6.30 ಕಿ.ಮೀ	20.00	ಟೆಂಡರ್ ಅನುಮೋದನೆಗೊಂಡಿದೆ.
3.	ಅರಕೆರೆ ಮಂಡ್ಯ ಬನ್ನೂರು ರಸ್ತೆ ಅಭಿವೃದ್ಧಿ(ಆಯ್ದಭಾಗಗಳಲ್ಲಿ) ಸ.1.00 ರಿಂದ 7.90 ಕಿ.ಮೀ	30.00	ಟೆಂಡರ್ ಅನುಮೋದನೆಗೊಂಡಿದೆ. ದಿ:28-1-2009ರಂದು ಕಾರ್ಯಾದೇಶ ನೀಡಲಾಗಿದೆ.
4.	ಮೈಸೂರು ಕೊತ್ತತ್ತಿ ರಸ್ತೆ ಸ.6.90ರಿಂದ 17.60 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ(ಆಯ್ದ ಭಾಗಗಳಲ್ಲಿ)	50.00	ಟೆಂಡರ್ ಅನುಮೋದನೆಗೊಂಡಿದೆ. ದಿ:28-1-2009ರಂದು ಕಾರ್ಯಾದೇಶ ನೀಡಲಾಗಿದೆ.
5.	ಮಂಡ್ಯ ಅರಕೆರೆ ರಸ್ತೆಯಿಂದ ಮಹದೇವಪುರ ಬನ್ನೂರು ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿ	50.00	ಟೆಂಡರ್ ಅನುಮೋದನೆಗೊಂಡಿದೆ.
6.	ಬಿಎನ್ ರಸ್ತೆಯಿಂದ ಸಬ್ಬನಕುಪ್ಪೆ ಮಾರ್ಗವಾಗಿ ಆರತಿಉಕ್ಕಡಕ್ಕೆ ಸೇರುವ ರಸ್ತೆ ಅಭಿವೃದ್ಧಿ	50.00	ಟೆಂಡರ್ ಅನುಮೋದನೆಗೊಂಡಿದೆ.
7.	ಬಿಎನ್ ರಸ್ತೆಯಿಂದ ಕೊಡಿಯಾಲ ರಸ್ತೆ ಅಭಿವೃದ್ಧಿ	25.00	ಟೆಂಡರ್ ಅನುಮೋದನೆಗೊಂಡಿದೆ.
	ಒಟ್ಟು	**275.00**	

ಶ್ರೀ ಸುನೀಲ್ ವಿ. ಹೆಗಡೆ (ಶ್ರೀ ಎ.ಬಿ. ರಮೇಶ ಬಂಡಿಸಿದ್ದೇಗೌಡರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ, ನಮ್ಮ ಶಾಸಕರ ನೋವು ಏನಿದೆ ಎಂದರೆ, ಶಾಸಕರು ಈಗಾಗಲೇ ಹಲವಾರು ಬಾರಿ ಕೆಲವೊಂದು ರಸ್ತೆಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಿದ್ದಾರೆ, ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಆದೇಶ ಮಾಡಿದ್ದಾರೆ, ಆದರೂ ಸಹ ಆ ಕೆಲಸಕಾರ್ಯಗಳು ಆಗಿಲ್ಲ. ಅದರ ಹೊರತಾಗಿ ಬೇರೆ ಬೇರೆ ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಿಲ್ಲದ ಕೆಲವೊಂದು ರಸ್ತೆ ಕಾಮಗಾರಿಗಳನ್ನು

ತೆಗೆದುಕೊಂಡಿದ್ದಾರೆನ್ನುವುದು ನಮ್ಮ ಶಾಸಕರ ಆಂಬೋಣ. ಮಂಡ್ಯ ಜಿಲ್ಲೆಯ ರಾಜ್ಯ ಹೆದ್ದಾರಿ 17 ಅನ್ನು KSHIP ನಲ್ಲಿ ತೆಗೆದುಕೊಂಡಿದ್ದನ್ನು drop ಮಾಡಿದ್ದಾರೆ. ಮಂಡ್ಯ-ಬಸರಾಳು-ಕೊಪ್ಪ ರಸ್ತೆ ಪೂರ್ತಿ ಹದಗೆಟ್ಟಿದ್ದು ಶಾಸಕರು ಇದರ ಬಗ್ಗೆ ಬಹಳಷ್ಟು ಸಲ ಮನವಿ ಕೊಟ್ಟರೂ ಕೆಲಸ ಆಗಲಿಲ್ಲ. ಮಂಡ್ಯ-ಮದ್ದೂರು, ಮೇಲುಕೋಟೆ-ಶ್ರೀರಂಗಪಟ್ಟಣ-ನಾಗಮಂಗಲ ರಸ್ತೆ, ಕೆ.ಆರ್.ಪೇಟೆ, ಮಳವಳ್ಳಿ ರಸ್ತೆ ಕೆಲಸ ಆಗಲಿಲ್ಲ. ಅದೇ ರೀತಿ ಶ್ರೀರಂಗಪಟ್ಟಣ ವ್ಯಾಪ್ತಿಯ ಮಂಡ್ಯ-ಚೀರನಹಳ್ಳಿ ರಸ್ತೆ ಕೆಲಸ ಆಗಲಿಲ್ಲ. CRF ನಲ್ಲಿ ಟಿ.ಎಂ. ಹೊಸೂರು ರಸ್ತೆ ತೆಗೆದುಕೊಂಡಿದ್ದನ್ನು ಕೈಬಿಡಲಾಗಿದೆ. ಹೀಗೆ ಹತ್ತು ಹಲವಾರು ಶ್ರೀರಂಗಪಟ್ಟಣ ಮತ್ತು ಮಂಡ್ಯ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಬಗ್ಗೆ ಶಾಸಕರು ಹಲವಾರು ಸಲ ಮನವಿ ಕೊಟ್ಟರೂ ಸಹ ಮಾನ್ಯ ಮುಖ್ಯಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಆದೇಶ ಕೊಟ್ಟರೂ ಸಹ ಹಲವಾರು ಕಾಮಗಾರಿಗಳು ಆಗಲಿಲ್ಲ. ಅದೇ ರೀತಿ ಶಾಸಕರ ಶಿಫಾರಸ್ಸಿನ ಕಾಮಗಾರಿಗಳಿಗೆ ಆದ್ಯತೆ ಸಿಗಲಿಲ್ಲವೆನ್ನುವ ಮಾತನ್ನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳಲಿಕ್ಕೆ ಬಯಸುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ: ಮಂಡ್ಯ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆ ಕೈಗೊಂಡ ಕಾಮಗಾರಿ ವಿವರಗಳ ಬಗ್ಗೆ ಉತ್ತರವನ್ನು ಕೊಡಲಾಗಿದೆ. ತಮಗೆ ಗೊತ್ತಿರುವ ಹಾಗೆ, ಈ ವಿಧಾನಸಭಾ ಕ್ಷೇತ್ರದಲ್ಲಿ 53 ಕೋಟಿ 37 ಲಕ್ಷ ರೂಪಾಯಿಗಳ 67 ಕಾಮಗಾರಿಗಳು ನಡೆಯುತ್ತಿವೆ. ಅದರಲ್ಲಿ ಲೆಕ್ಕ ಶೀರ್ಷಿಕೆ 5054 ORF ಅಡಿಯಲ್ಲಿ 38 ಕೋಟಿ 75 ಲಕ್ಷ ರೂಪಾಯಿಗಳು, CRF ನಲ್ಲಿ 8 ಕೋಟಿ 50 ಲಕ್ಷ ರೂಪಾಯಿಗಳ 5 ಕೆಲಸ ಹಾಗೂ NABARD ಅಡಿಯಲ್ಲಿ 6 ಕೋಟಿ 12 ಲಕ್ಷ ರೂಪಾಯಿಗಳ 8 ಕೆಲಸ ನಡೆಯುತ್ತಿದೆ. ಇಷ್ಟೊಂದು ಕೆಲಸಕಾರ್ಯಗಳು ನಡೆಯುತ್ತಿದ್ದರೂ ಸಹ ಅವರು ಇನ್ನೂ ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವರು ಬೇಡಿಕೆಗಳನ್ನು ಇಟ್ಟಿರುವ ಸಂದರ್ಭದಲ್ಲಿ ಅವೆಲ್ಲವನ್ನೂ ಏಕ ಕಾಲಕ್ಕೆ ಮಾಡಲಿಕ್ಕೆ ಸಾಧ್ಯವಾಗದಿರಬಹುದು. ಆದ್ಯತೆ ಮೇಲೆ ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಾವು ಈ ಕೆಲಸಕಾರ್ಯಗಳನ್ನು ಮಾಡಿಸುತ್ತೇವೆ ಎನ್ನುವ ಭರವಸೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಇದು ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಪ್ರಶ್ನೆ. (ಗೊಂದಲ) ವಲ್ಯಾಪುರೆಯವರೆ, ಕುಳಿತುಕೊಳ್ಳಿ. ಯಾರು ಏನು ಮಾತನಾಡಬೇಕೆಂದು ನಾನು decide ಮಾಡುತ್ತೇನೆ. ನೀವು ಸುಮ್ಮನೆ ಕುಳಿತುಕೊಳ್ಳಿ. ವಲ್ಯಾಪುರೆರವರೆ, ನೀವು ಏನು ಮಾತನಾಡಬೇಕೆಂದಿದ್ದೀರಿ?

ಶ್ರೀ ಹೆಚ್.ಡಿ. ರೇವಣ್ಣ: ಮಂಡ್ಯ ಜಿಲ್ಲೆಯಲ್ಲಿ KSHIP-2 ನಲ್ಲಿ 585 ಕಿಲೋ ಮೀಟರ್ ರಸ್ತೆ ಕೆಲಸ ತೆಗೆದುಕೊಳ್ಳಲಾಗಿತ್ತು. ಕೇಂದ್ರ ಸರ್ಕಾರ ಮತ್ತು ಬೇರೆ ಕಡೆಯಿಂದ ಅದಕ್ಕೆ ಎಲ್ಲಾ ತರಹದ ಅನುಮತಿ ಸಿಕ್ಕಿತ್ತು. ಮೊನ್ನೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಬಂದಮೇಲೆ ಅದನ್ನು change ಮಾಡಿ ಅವರ ವಿಧಾನಸಭಾ ಕ್ಷೇತ್ರಕ್ಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರಕ್ಕೆ ಹಾಕಿರುವುದು ನಿಜವೋ? ಇಲ್ಲವೋ? ಎನ್ನುವುದನ್ನು ದಯಮಾಡಿ ಹೇಳಲಿ.

ಶ್ರೀ ಸಿ.ಎಂ. ಉದಾಸಿ: ಇದರ ಬಗ್ಗೆ ಅವರು ಪ್ರತ್ಯೇಕವಾದ ಪ್ರಶ್ನೆ ಕೇಳಲಿ. ಅದಕ್ಕೆ ನಾನು ಉತ್ತರವನ್ನು ಕೊಡಲಿಕ್ಕೆ ಬಯಸುತ್ತೇನೆ. 3411 ಕಿಲೋ ಮೀಟರ್ ರಸ್ತೆಯನ್ನು 2ನೇ ಹಂತದಲ್ಲಿ KSHIP ನಲ್ಲಿ ತೆಗೆದುಕೊಳ್ಳಬೇಕಾದಾಗ ಆದ್ಯತೆಗಳಲ್ಲಿ ಇವು ಇವೆ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಮಂಡ್ಯ ಜಿಲ್ಲೆಯ ಬಗ್ಗೆಯೇ ಪ್ರಶ್ನೆ ಕೇಳುತ್ತಿದ್ದೇನೆ. ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಎಂದು ನೀವೇ ಹೇಳುತ್ತಿದ್ದೀರಿ. ಎರಡನೇ ಹಂತದ ಕೆಲಸವನ್ನು ಯಾವ ಉದ್ದೇಶಕ್ಕೆ change ಮಾಡಿದಿರಿ? ಕಾರಣವೇನು? ಮಂಡ್ಯ ಜನ ಅನ್ಯಾಯ ಮಾಡಿದ್ದಾರೆಯೇ? ನಿಮಗೆ ಓಟ್ ಹಾಕಿಲ್ಲವೆಂದೇನಾದರೂ change ಮಾಡಿದ್ದೀರಾ? ದಯಮಾಡಿ ಹೇಳಿ. ಯಾವ ಉದ್ದೇಶಕ್ಕಾಗಿ change ಮಾಡಿದ್ದೀರಿ? KSHIP-2 ನಲ್ಲಿ ಇದ್ದುದನ್ನು ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದ್ದನ್ನು ಯಾವ ಉದ್ದೇಶಕ್ಕೆ change ಮಾಡಿದ್ದಾರೆ? Road ಅನ್ನು ರಾಜಕೀಯಕ್ಕೆ ಏನಾದರೂ ಉಪಯೋಗ ಮಾಡಿಕೊಳ್ಳುತ್ತಿದ್ದಾರೆಯೇ?

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ: ರೇವಣ್ಣನವರ ಕಾಲದಲ್ಲಿ ಯಾವ್ಯಾವ ರಸ್ತೆಗಳು change ಆದವು ಎಂದು ಸ್ವಲ್ಪ ಹೇಳಲಿ.

(ಗೊಂದಲ)

ಅಧ್ಯಕ್ಷರು: ವಿಶೇಷ ಚರ್ಚೆಗೆ ಅವಕಾಶ ಕೊಟ್ಟಾಗ ಆಗ ತಾವು ವಿಷಯ raise ಮಾಡಿ. ತಾರತಮ್ಯದ ಬಗ್ಗೆ ಆಮೇಲೆ ಚರ್ಚೆ ಮಾಡುತ್ತೇವೆಲ್ಲಾ ಆಗ ಚರ್ಚೆ ಮಾಡಿ. ಪ್ರತ್ಯೇಕವಾಗಿ ಒಂದು ತಾಸಿನ ಚರ್ಚೆಗೆ ಅವಕಾಶ ಕೇಳಿದ್ದೀರಿ. ಆ ಸಂದರ್ಭದಲ್ಲಿ ಇದರ ಬಗ್ಗೆಯೂ ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ತಾವು time fix ಮಾಡಿ.

ಅಧ್ಯಕ್ಷರು: ಈ ಅಧಿವೇಶನ ಮುಗಿಯುವುದರೊಳಗೆ ಅವಕಾಶ ಕೊಡುತ್ತೇನೆ. ಸುನೀಲ್ ವಿ.ಹೆಗಡೆಯವರೆ, ಮತ್ತೇನಾದರೂ ಕೇಳುವುದಿದ್ದರೆ ಕೇಳಿ. (ಗೊಂದಲ) ನರೇಂದ್ರ ಸ್ವಾಮಿಯವರೆ, ಈಗ ಬೇಡ, ಮತ್ತೆ ಪ್ರತ್ಯೇಕವಾಗಿ ಚರ್ಚೆ ಮಾಡುವಾಗ

ಅವರಿಗೆ ನಾನು ಅವಕಾಶ ಕೊಡುತ್ತೇನೆ. ಅವಕಾಶ ಕೊಡುತ್ತೇನೆ, ರೇವಣ್ಣನವರೆ, ತಾವು ಇವತ್ತೇ ನೋಟೀಸ್ ಕೊಡಿ. ನಾಳೆ ಅಜೆಂಡಾದಲ್ಲಿ ಅದನ್ನು ಸೇರಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಂಡ್ಯ ಜಿಲ್ಲೆಗೆ ಕೊಟ್ಟಂಥ ರಸ್ತೆಯನ್ನು KSHIP-2 ಅಡಿಯಲ್ಲಿ . . .

ಅಧ್ಯಕ್ಷರು: Further ಚರ್ಚೆ ಮಾಡುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಪ್ರಶ್ನೆ ಇದೆಯಲ್ಲ ಸರ್.

ಅಧ್ಯಕ್ಷರು: ಸರಿ. ಆದರೆ, ಈಗ ನಾನು ಹೇಳುತ್ತಿದ್ದೇನೆ, ಪ್ರತ್ಯೇಕವಾಗಿ ಅದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. (ಗೊಂದಲ) ಲೋಕೋಪಯೋಗಿ ಸಚಿವರು ಉತ್ತರ ಕೊಡುತ್ತಾರೆ. ಇದನ್ನು ನಾನು Further ಬೆಳೆಸಲಿಕ್ಕೆ ಹೋಗುವುದಿಲ್ಲ.

(ಗೊಂದಲ)

12–30 PM

(ಈ ಹಂತದಲ್ಲಿ ಜೆ.ಡಿ.ಎಸ್. ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅವರು ಪ್ರಚಾರಕ್ಕಾಗಿ ಈ ರೀತಿಯಾಗಿ ಮಾಡುತ್ತಿದ್ದಾರೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ: ನಾನು ಮಂಡ್ಯ ಜಿಲ್ಲೆಯ ಪ್ರತಿನಿಧಿಯಾಗಿ ಒಂದು ವಿಚಾರವನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಹಿಂದೆ ಮಂಡ್ಯ ಪ್ಯಾಕೇಜ್‌ನಲ್ಲಿ ಸಾಕಷ್ಟು ಅನ್ಯಾಯ ಮಾಡಿದ್ದರು. ನಾನು ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಕ್ಕೆ ತಂದಾಗ ಅವರು ಇದನ್ನು ಸರಿಪಡಿಸಿರುತ್ತಾರೆ. ಇದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಸದಸ್ಯರು ಸತ್ಯಹರಿಶ್ಚಂದ್ರರ ಮೊಮ್ಮಗ, ಯಾರಿಗೂ ಅನ್ಯಾಯ ಮಾಡಿಲ್ಲ, ಯಾರಿಗೂ ತಾರತಮ್ಯ ಮಾಡಿಲ್ಲ, ಯಾವುದರಲ್ಲಿಯೂ ತಪ್ಪು ಮಾಡಿಲ್ಲ.

ಅಧ್ಯಕ್ಷರು: ಆಯಿತು ಬಿಡಿ. ಈಗ ಪ್ರಕಾಶ್ ಹುಕ್ಕೇರಿಯವರು. ಅವರು ಬಂದಿಲ್ಲ. ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ ತಾವು ಈಗ ಅವರಿಗೆ ನೋಟಿಸ್ ಕೊಡಿ ಎಂದು ಕೇಳಿದಿರಿ. ನೋಟಿಸ್ ಏಕೆ ಕೊಡಬೇಕೆನ್ನುವುದಕ್ಕೆ ಧರಣಿ ಮಾಡುತ್ತಿದ್ದಾರೆ. ಅಂದರೆ ಇವರು ನಿಮ್ಮ ವಿರುದ್ಧವಾಗಿ ಧರಣಿ ಮಾಡುತ್ತಿದ್ದಾರೆ. ಅವರೇನು ಹೇಳಿದರು, ನೋಟಿಸ್ ಕೊಡಿ ಎಂದರು. ಇದು ಯಾವ ಸೀಮೆ ನ್ಯಾಯ? ನಾವಂತೂ ಇದನ್ನು ನೋಡಿಲ್ಲ. ನೋಟಿಸ್ ಕೊಡಿ ಎಂದು ಹೇಳಿದರೆ, ನೋಟಿಸ್ ಏಕೆ ಕೊಡಬೇಕು, ಹಾಗೆ ಚರ್ಚೆ ಮಾಡಿ ಎಂದು ಧರಣಿ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಶಿವಲಿಂಗೇಗೌಡರವರೆ, ಅಲ್ಲಿ ನಿಂತು ವಾದ ಮಾಡುವುದಕ್ಕೆ ಹೋಗಬೇಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್.ಡಿ.ರೇವಣ್ಣನವರು ಪುನಃ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಹೆಚ್.ಡಿ.ರೇವಣ್ಣ: ಮಂಡ್ಯ ಜಿಲ್ಲೆಯಲ್ಲಿ ಕೆ–ಶಿಪ್–2 ನಲ್ಲಿ ಮೊದಲನೇ ಹಂತದಲ್ಲಿ 585 ಉದ್ದದ ಕಿ.ಮೀ.ರಸ್ತೆ ಮಂಜೂರಾತಿಯಾಗಿತ್ತಲ್ಲ, ಅದನ್ನು ಚೇಂಜ್ ಮಾಡಿದ್ದೀರೋ ಇಲ್ಲವೋ ದಯಮಾಡಿ ಸಭೆಗೆ ತಿಳಿಸಿ. ಪ್ರಶ್ನೆ ಇರುವುದರಿಂದಲೇ ನಾನು ಕೇಳುತ್ತಿರುವುದು, ಬೇಕಾದರೆ ಈ ಪ್ರಶ್ನೆ ತಡೆಹಿಡಿಯಿರಿ.

ಶ್ರೀ ಕೆ.ಎಸ್.ಈಶ್ವರಪ್ಪ: ತಾವು ಪ್ರಶ್ನೆಯನ್ನು ಯಾವ ರೂಪದಲ್ಲಿ ಕೇಳುವುದಕ್ಕೆ ಅವಕಾಶವಿದೆ, ಮಾನ್ಯ ಸಭಾಧ್ಯಕ್ಷರು ನಿಮಗೋಸ್ಕರ ಅವಕಾಶ ಮಾಡಿ ಕೊಡುತ್ತೇನೆಂದು ಹೇಳಿದ್ದಾರೆ. ಆ ಪ್ರಶ್ನೆ ಯಾವಾಗ ಬರಬೇಕು, ಅದಕ್ಕೆ ನೀವು ನೋಟಿಸ್ ಕೊಡಿ. ಆಗ ಚರ್ಚೆಯಾಗುತ್ತದೆ. ಯಾವಾಗ ಬೇಕೋ ಆಗ ಚರ್ಚೆಗೆ ತೆಗೆದುಕೊಂಡು ಬಿಡುವುದೆ? ಚರ್ಚೆ ಎಂದ ತಕ್ಷಣ ಇಲ್ಲಿ ಚರ್ಚೆಯಾಗಿ ಬಿಡಬೇಕು. ನಿಮಗೆ ಯಾವ ಟೈಂನಲ್ಲಿ ಚರ್ಚೆ ಮಾಡುತ್ತೀರೊ ಅದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಇರುವುದು. ನೀವು ಹೀಗೆ ಮಾಡಿದ್ದೀರಾ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಯಾರ್‍ಯಾರ ಕಾಲದಲ್ಲಿ ಯಾವ್ಯಾವ ಏರಿಯಾಗಳಿಗೆ ಅನ್ಯಾಯವಾಗಿದೆ ಎಂದು ಸದನದಲ್ಲಿ ಚರ್ಚೆ ಮಾಡಲಿ. ಇದಕ್ಕೆ ಉತ್ತರ ಕೊಡಲು ಸರ್ಕಾರ ಸಿದ್ಧವಿದೆ. ನಿಮ್ಮ ಕಾಲದಲ್ಲಿ ಯಾವ ಭಾಗಕ್ಕೆ ಅನ್ಯಾಯವಾಗಿದೆ? ಯಾವ ಭಾಗಕ್ಕೆ ಹೆಚ್ಚಿಗೆ ಕೊಟ್ಟಿದ್ದೀರಿ? ಈ ಸಾರಿ ಏನಾಗಿದೆ? ಎಂಬುದರ ಬಗ್ಗೆ ಎಲ್ಲವೂ ಚರ್ಚೆಯಾಗಲಿ, ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ. South zone ಗೆ ಎಷ್ಟು ಕೊಟ್ಟಿದ್ದೀರಿ? North zone ಗೆ ಎಷ್ಟು

ಕೊಟ್ಟಿದ್ದೀರಿ? ಯಾವ್ಯಾವ ಕೆಲಸ ಕೊಟ್ಟು ಯಾವ್ಯಾವ ಕೆಲಸ ಮಾಡಿಲ್ಲ? ಯಾವ್ಯಾವುದು in time ನಲ್ಲಿ ಕೊಟ್ಟಿದ್ದೀರಿ? ಎಲ್ಲಾ ಚರ್ಚೆಯಾಗಲಿ. ಈ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲಿ, ಇದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಸಿದ್ದವಿದೆ. ಈ ತರಹದ ಬೆದರಿಕೆಗೆ ಹೆದರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನೀವು ಇಷ್ಟು ಹೇಳಿದರೂ ಅವರು ಧರಣಿ ಮಾಡುತ್ತಾರೆಂದರೆ, ಅವರು ತಮ್ಮ ಪೀಠಕ್ಕೆ ಗೌರವ ಕೊಡಲಿಲ್ಲ. ಅವರಿಗೆ ಏನಾಗಿದೆ ಎಂದರೆ, ಹೇಗಾದರೂ ಮಾಡಿ ಪ್ರಚಾರ ತೆಗೆದುಕೊಳ್ಳಬೇಕು ಎನ್ನುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ.

ಶ್ರೀ ಎಂ.ಪಿ.ನರೇಂದ್ರ ಸ್ವಾಮಿ: ನಿಮ್ಮ ಕಾಲದಲ್ಲಿ ಮಂಡ್ಯ ಪ್ಯಾಕೇಜ್‌ನಲ್ಲಿ ಮಳವಳ್ಳಿ ಏಕೆ ತೆಗಿದಿರಿ? ಮಳವಳ್ಳಿ ಮಂಡ್ಯದಲ್ಲಿ ಇಲ್ಲವೆ?

ಅಧ್ಯಕ್ಷರು: ರೇವಣ್ಣನವರೆ, ನಾನು ನಿಮಗೆ ಏನು ಹೇಳಿದೆ? ನಿಮಗೇನು ರಿಕ್ವೆಸ್ಟ್ ಮಾಡಿದೆ? ಈ ರೀತಿಯಾದರೆ ಇದಕ್ಕೆ there is no end at all. ಇದಕ್ಕೆ ಅಂತ್ಯ ಎಂಬುದು ಇರುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅವರ ಕಾಲದಲ್ಲಿ ಏನೇನು ಆಗಿದೆ ಎಂಬ ಬಣ್ಣ ಬಯಲಾಗಲಿ ಚರ್ಚೆ ಮಾಡಿ ಎಲ್ಲರಿಗೂ ಗೊತ್ತಾಗಲಿ.

ಅಧ್ಯಕ್ಷರು: ನಾನು ನಿಮಗೆ ಏನು ಹೇಳಿದ್ದೆ, ನಾಳೆ ಅಥವಾ ನಾಡಿದ್ದು ಅಜೆಂಡಾದಲ್ಲಿ ಫಿಕ್ಸ್ ಮಾಡಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ನಿಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಎಲ್ಲರ ಕಾಲದಲ್ಲಿ ಏನೇನು ಆಗಿದ ಎಂಬುದರ ಬಗ್ಗೆ ಚರ್ಚೆಯಾಗಲಿ, ನಾನು ಚರ್ಚೆಗೆ ರೆಡಿ ಇದ್ದೇನೆ. ಯಾರಿಗೇನು ಹೆದರುವ ಅವಶ್ಯಕತೆಯಿಲ್ಲ. ಚರ್ಚೆ ಮಾಡಿ ಇದಕ್ಕೆ ನಮ್ಮದೇನೂ ಅಡ್ಡಿಯಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ದಯಮಾಡಿ ನೀವು ಎಲ್ಲರೂ ನಿಮ್ಮ ಸ್ಥಳಕ್ಕೆ ಹೋಗಿ, ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಮಗೆ ಡೆಫನೇಟ್ಲಿ ಅವಕಾಶ ಕೊಡುತ್ತೇನೆ. ನೀವು ಪ್ರತ್ಯೇಕವಾದ ನೋಟಿಸ್ ಕೊಡಿ ನಾಳೆ ನಾಡಿದ್ದು ಅಜೆಂಡಾದಲ್ಲಿ ಫಿಕ್ಸ್ ಮಾಡಿ ನಿಮಗೆ ಅವಕಾಶ ಕೊಡುತ್ತೇನೆ. ಹೀಗಿರುವಾಗ ಸುಮ್ಮನೆ ಏಕೆ ಪ್ರಶ್ನೋತ್ತರ ವೇಳೆಯನ್ನು ಹಾಳು ಮಾಡುವುದು? ನಾನು ತಮಗೆ ಎಷ್ಟು ಸಾರಿ ಹೇಳಿದ್ದೇನೆ. ದಯಮಾಡಿ ನೀವು ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ. ನಾವೇನು ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದಿಲ್ಲ. ನೀವು

ಪ್ರತ್ಯೇಕವಾಗಿ ನೋಟಿಸ್ ಕೊಟ್ಟು ಎಲ್ಲಾ ವಿವರವನ್ನು ಕೇಳಿ. ಇದಕ್ಕೆ ಯಾರು ಬೇಡವೆನ್ನುತ್ತಾರೆ?

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಚರ್ಚೆ ಮಾಡಲಿ ಎಲ್ಲಾ ಬಯಲಿಗೆ ಬರುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ನಾನೇನು ಬಯಲಿಗೆ ಬರುತ್ತದೆಂದು ಹೆದರಿಕೊಂಡು ಕುಳಿತಿಲ್ಲ. ನನಗೆ ಚರ್ಚೆ ಮಾಡುವುದಕ್ಕೆ ಗೊತ್ತಿದೆ. ಇವರು ನಮಗೆ ವಿಷಯ ಮಾತನಾಡುವುದಕ್ಕೆ ಬಿಡುತ್ತಿಲ್ಲ ಎಂದರೆ ಹೇಗೆ? ಇದರಲ್ಲಿ ಮುಚ್ಚುಮರೆ ಮಾಡುವಂಥದ್ದು ಏನಿದೆ?

(ಗೊಂದಲ)

ಶ್ರೀ ಸಿದ್ದು ಸವದಿ: ಹೈದರಾಬಾದ್-ಕರ್ನಾಟಕ, ಉತ್ತರ ಕರ್ನಾಟಕದ ಭಾಗದಲ್ಲಿ ಇವರ ಕಾಲದಲ್ಲಿ ಏನೇನು ಕೊಟ್ಟರು ಎಂಬುದು ಚರ್ಚೆಯಾಗಲಿ ಅವರು ಮಂತ್ರಿಗಳಾಗಿದ್ದವರು.

ಅಧ್ಯಕ್ಷರು: ನೋಡಿ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ? ಸುಮ್ಮನೆ ಟೈಂ ವೇಸ್ಟ್ ಆಗುತ್ತದೆ. ನಾನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಮಾತನಾಡುವಾಗ ಅವರೇಕೆ ಮಾತನಾಡುತ್ತಾರೆ? ನಾನು ಚರ್ಚೆ ಮಾಡಿದ ಮೇಲೆ ಉತ್ತರ ಕೊಡುವುದಕ್ಕೆ ಮಾನ್ಯ ಮಂತ್ರಿಗಳಿಗೆ ಶಕ್ತಿ ಇದೆ.

(ಗೊಂದಲ)

ಅಧ್ಯಕ್ಷರು: ನೆಹರೂ ಓಲೇಕಾರ್‌ರವರೆ, ಸುನೀಲ್ ವಲ್ಲಾಪುರೆಯವರೆ, ನಿಮಗೆ ನಂತರ ಅವಕಾಶ ಕೊಡುತ್ತೇನೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಂತರ ನೀವು ಹೇಳಿ. ಸುಮ್ಮನೆ ಟೈಂ ಏಕೆ ವೇಸ್ಟ್ ಮಾಡುತ್ತೀರಿ? ಇರುವುದೇ ಎರಡು-ಮೂರು ದಿವಸ ಹಾಳು ಮಾಡಿ ಇಡುತ್ತೀರಿ.

ಶ್ರೀ ಹೆಚ್.ಡಿ.ರೇವಣ್ಣ: ಸ್ವಾಮಿ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ನಾನು ಆಮೇಲೆ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನೀವು ಮಂತ್ರಿಗಳಾಗಿದ್ದವರು. ಯಾವ್ಯಾವ ಸಂದರ್ಭದಲ್ಲಿ ಏನೇನು ಮಾತನಾಡಬೇಕೆಂದು ನಿಮಗೆ ಗೊತ್ತಿದೆ. ನಾವು ಕೂಡ ನೀವು ಪ್ರಶ್ನೆ ಕೇಳಿದ ತಕ್ಷಣ ಅಧಿಕಾರಿಗಳ ಹತ್ತಿರ ಆ ಡಾಕ್ಯುಮೆಂಟ್ಸ್ ತರಿಸಿಕೊಂಡು

ಇರುತ್ತೇವೆ. ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ, ಏಕೆ ಈ ರೀತಿ ಮಾಡುತ್ತೀರಿ?

ಅಧ್ಯಕ್ಷರು: ನೋಡಿ ಸುಮ್ಮನೆ ಸಮಯ ವೇಸ್ಟ್ ಆಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ನಾನೇನು ಬದಲಿ ಕೇಳುತ್ತಿಲ್ಲ. ಇದೇ ಪ್ರಶ್ನೆಯಲ್ಲಿ ಇದೆ. ನಾನೇನು ಬೇರೆ ಕೇಳುತ್ತಿಲ್ಲ.

ಅಧ್ಯಕ್ಷರು: ರೇವಣ್ಣನವರೆ, ಎಲ್ಲಾ ವಿವರ ಕೊಡಿ ನಾಳೆ ನಾಡಿದ್ದು ನಿಮಗೆ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೇನೆ ಅಲ್ಲವೆ? ಆಗ ವಿವರವಾಗಿ ಚರ್ಚೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ನಾಯ್ಡುರವರು ಏಕೆ ಮಾತನಾಡುತ್ತಾರೆ? ಅವರೇನು ಈ ಇಲಾಖೆಯ ಸಚಿವರೆ? ಬೆಂಗಳೂರು ಅಭಿವೃದ್ಧಿ ವಿಷಯದ ಬಗ್ಗೆ ಮಾತನಾಡಲಿಕ್ಕೆ ಹೇಳಿ ಬಾಕಿ ವಿಷಯ ಅವರಿಗೆ ಏಕೆ ಬೇಕು?

ಅಧ್ಯಕ್ಷರು: ನಾಯ್ಡುರವರೇ, ನೀವು ಕುಳಿತುಕೊಳ್ಳಿ, ರೇವಣ್ಣನವರೇ, ಇದಕ್ಕೆ ಬಹಳ ಸಮಯ ಕಳೆಯುವುದು ಬೇಡ, ನೀವು ಪ್ರತ್ಯೇಕವಾಗಿ ನೋಟಿಸ್ ಕೊಡಿ, ನಾಳೆ ನಾಡಿದ್ದು ಅಜೆಂಡಾದಲ್ಲಿ ಫಿಕ್ಸ್ ಮಾಡುತ್ತೇವೆ. ನಿಮಗೆ ಅವಕಾಶ ಕೊಡುತ್ತೇನೆ, ಏಕೆ ಸುಮ್ಮನೆ ಹೀಗೆ ಮಾಡುತ್ತೀರಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಯಾವ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಾವು ನಿರ್ಧರಿಸಿ ತೀರ್ಮಾನ ಮಾಡಬೇಕು. ಅವರು ತೀರ್ಮಾನ ಮಾಡುವುದಲ್ಲ. ಅವರು ಹೇಳಿದ ಹಾಗೆ ಕೇಳುವುದಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ನಿಮ್ಮ ಸ್ಥಾನಕ್ಕೆ ಹೋಗಿ. ನಾಯ್ಡುರವರೆ, ನೀವು ಸುಮ್ಮನೆ ಕುಳಿತುಕೊಳ್ಳಿ ನಾನು ತೀರ್ಮಾನ ಮಾಡುತ್ತೇನೆ. ಎಲ್ಲರೂ ಈ ರೀತಿಯಾಗಿ ವಾದ ಮಾಡಿಕೊಂಡು ಹೋದರೆ ಸದನ ಹೇಗೆ ನಡೆಸಬೇಕು? ಮಾನ್ಯ ಮಂತ್ರಿಗಳು ಮೊದಲು ದಯಮಾಡಿ ಕುಳಿತುಕೊಳ್ಳಿ, ರೇವಣ್ಣನವರೆ ನಾನು ನಿಮಗೆ ರಿಕ್ವೆಸ್ಟ್ ಮಾಡಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ನನಗೆ ಎರಡು ನಿಮಿಷ ಅವಕಾಶ ಕೊಡಿ.

ಶ್ರೀ ಸುನೀಲ್ ವಲ್ಯಾಪುರೆ: ನಮಗೂ ಅವಕಾಶ ಕೊಡಿ.

ಅಧ್ಯಕ್ಷರು: ನಿಮಗೂ ಅವಕಾಶ ಕೊಡುತ್ತೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ವಲ್ಯಾಪುರೆಯವರೆ, ನೀವು ಏನಾದರೂ ಹೇಳುವುದಾದರೆ ಅವರದಾದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ, ಆಗ ತಾವು ಮಾತನಾಡಿ. ನೋಡ್ರಿ, ಯಾವ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೋ ಬಿಡಬೇಕೋ ಎನ್ನುವುದು

ಅದು ನನಗಿರುವ ಅಧಿಕಾರ. ಇದನ್ನು ನೀವು ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ. ನೀವು ಮಾತನಾಡುವುದಕ್ಕೆ ಅವಕಾಶ ಕೇಳಿ ನಾನು ಕೊಡುತ್ತೇನೆ. ನಿಮಗೆ ನಾನು ಕರೆದಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಶ್ರೀನಿವಾಸರವರೆ, ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ. ಅವರು ಮಾತನಾಡಿದ ಮೇಲೆ ಯಾರಾದರೂ ಮಾತನಾಡುವುದಿದ್ದರೆ ಮಾತನಾಡಿ. ಇದಕ್ಕೆ ನಾನು ಅವಕಾಶ ಕೊಡುತ್ತೇನೆ. ಅದು ಬಿಟ್ಟು ಈ ರೀತಿ ಒಬ್ಬರ ನಿಂತಾಗ ಮತ್ತೊಬ್ಬರು ಮಾತನಾಡುವುದು ಎಂದರೆ ಹೇಗೆ? ಇದೇನು ಸದನವೆ? ಸಂತೆಯಾಗಬೇಕಾಗುತ್ತದೆ. ನಮ್ಮನ್ನು ನೋಡಿದ ಜನ ಏನಂತಾರೆ?

ಶ್ರೀ ಎಂ.ಶ್ರೀನಿವಾಸ: ಬೆಳಗಾಂನಲ್ಲೂ ಮೂರು ದಿವಸ ಹೀಗೆ ಗದ್ದಲವಾಗಿ ಮೂರು ದಿವಸ ಹಾಳಾಗಿ ಹೋಯಿತು, ಹೌಸ್ ಏನು ಅವರ ಪ್ರಾಪರ್ಟಿಯೆ?

ಅಧ್ಯಕ್ಷರು: ಶ್ರೀನಿವಾಸರವರೆ ದಯವಿಟ್ಟು ಕುಳಿತುಕೊಳ್ಳಿ. ಒಬ್ಬರಾದ ಮೇಲೆ ಒಬ್ಬರು ಮಾತನಾಡಿ. ವಲ್ಯಾಪುರೆಯವರೆ, ಅವರಾದಾದ ಮೇಲೆ ನೀವು ಮಾತನಾಡಿ.. ದಯವಿಟ್ಟು ಕುಳಿತುಕೊಳ್ಳಿ, ನೆಹರೂರವರೆ, ನಾನು ಎಲ್ಲಾ ನೋಡಿ ಹೇಳುತ್ತೇನೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಪ್ರಶ್ನೋತ್ತರ ಮಾಡಿ, ಈ ಸಮಯದಲ್ಲಿ ಚರ್ಚೆಗೆ ಹೇಗೆ ಅವಕಾಶ ಕೊಡುತ್ತೀರಿ?

ಶ್ರೀ ಹೆಚ್.ಡಿ.ರೇವಣ್ಣ: ನಾನು ಪಿಡಬ್ಲ್ಯೂಡಿ ಮಿನಿಸ್ಟ್ರು ಆಗಿದ್ದಾಗ ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ..

ಅಧ್ಯಕ್ಷರು: ರೇವಣ್ಣನವರೆ, ನೇರವಾಗಿ ವಿಷಯಕ್ಕೆ ಬಂದುಬಿಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಿಮ್ಮ ಕಾಲದಲ್ಲಿ ಆಗಿರುವುದು.

ಶ್ರೀ ಹೆಚ್.ಡಿ.ರೇವಣ್ಣ: ನಾನು ನಿಮ್ಮಿಂದ ಕಲಿಯಬೇಕಾಗಿಲ್ಲ.

ಅಧ್ಯಕ್ಷರು: ನಾಯ್ಡು ರವರೆ ನೀವು ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಿಮ್ಮಂತೆ ನಾನು ಆಗಲಿಲ್ಲ. ನಿಮ್ಮ ಮರ್ಜಿಯಿಂದ ನಾನೇನು ಎಂಎಲ್ಎ ಆಗಲಿ ಮಂತ್ರಿಯಾಗಲಿ ಆಗಿಲ್ಲ. ನಿಮ್ಮ ಮೆಹರ್‌ಬಾನಿಯಿಂದ ನಾವು ಗೆದ್ದಿಲ್ಲ. ಅವರೇನು ಹೀಗೆ ಮಾತನಾಡುತ್ತಾರೆ? ಅವರು ನನಗೆ ಬೆಂಗಳೂರಿಗೆ ಮಾತ್ರ ಸೀಮಿತ ಎನ್ನುವುದಾದರೆ ಅವರು ಹಾಸನಕ್ಕೆ ಮಾತ್ರ ಸೀಮಿತವಾಗಲಿ. ನಮ್ಮನ್ಯಾಕೆ ಬೆಂಗಳೂರಿಗೆ ಸೀಮಿತವಾಗಲಿ ಎಂದು ಅವರು ಹೇಳುತ್ತಾರೆ?

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಕುಳಿತುಕೊಳ್ಳಿ, ಅವರು ಮಾತನಾಡಿದ ಮೇಲೆ ಮಾತನಾಡಿ. ಮಂತ್ರಿಗಳು ನೀವು ಕುಳಿತುಕೊಳ್ಳಿ, ಅವರು ಮಾತನಾಡುವಾಗ ನೀವು

ಮಾತನಾಡಬೇಕೆಂದು ಇದೆಯೆ? ದಯವಿಟ್ಟು ಕುಳಿತುಕೊಳ್ಳಿ. ನೋಡಿ ನಾಯ್ಡುರವರೆ, ನಾನೇನು ಹೇಳುತ್ತಿದ್ದೇನೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದಿಲ್ಲವೆ? ದಯವಿಟ್ಟು ನೀವು ಕುಳಿತುಕೊಳ್ಳಿ. ನೋಡಿ ನಾನು ಹೇಳುವುದೇನೆಂದರೆ, ಒಬ್ಬರು ಮಾತನಾಡುವಾಗ ಮತ್ತೊಬ್ಬರು ಮಾತನಾಡುವುದು ಬೇಡ ಎಂದು ಮೊದಲಿನಿಂದಲೂ ನಾನು ಹೇಳುತ್ತಿದ್ದೇನೆ. ಸಿದ್ದು ಸವದಿಯವರಿಗೆ, ವಲ್ಯಾಪುರೆಯವರಿಗೆ ನಾನು ಅದನ್ನೇ ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಬೆಂಗಳೂರಿಗೆ ಸೀಮಿತವಾಗಿ ಎಂದು ಹೇಳುವುದಕ್ಕೆ ಅವರ್ಯಾರು ಸಾರ್? Who is he?

ಅಧ್ಯಕ್ಷರು: ಸಭಾಧ್ಯಕ್ಷರು ಮಾತನಾಡುವಾಗ ನೀವು ಮಂತ್ರಿಗಳಾಗಿ ಮಾತನಾಡುವುದು ಒಳ್ಳೆಯದಲ್ಲ. ಸಭಾಧ್ಯಕ್ಷರು ಮಾತನಾಡುವಾಗ ದಯವಿಟ್ಟು ನೀವು ಕುಳಿತುಕೊಳ್ಳಿ. ದಯವಿಟ್ಟು ಅರ್ಥ ಮಾಡಿಕೊಳ್ಳಿ. ಏನು ಅರ್ಥಾನೇ ಮಾಡಿಕೊಳ್ಳುತ್ತಿಲ್ಲವಲ್ಲರೀ, ನೀವು ಸೀನಿಯರ್ ಏನ್ರೀ? ನಾನು ಏನು ಹೇಳುತ್ತಿದ್ದೇನೆ, ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಧ್ಯದಲ್ಲಿ ಮಾತನಾಡಿದರೆ ಯಾರು ಮಾತನಾಡಿದ್ದು ಕೇಳುವುದಿಲ್ಲ. ಅವರೇನು ಹೇಳುತ್ತಾರೆ, ಎರಡು ನಿಮಿಷದಲ್ಲಿ ಹೇಳಲಿ. ಆಮೇಲೆ ನೀವು ಅದಕ್ಕೆ ಪ್ರತಿಯಾಗಿ ಏನಾದರೂ ಹೇಳುವುದಿದ್ದರೆ ಹೇಳಿ. ಆಮೇಲೆ ವಲ್ಯಾಪುರೆಯವರು ಏನು ಹೇಳುತ್ತಾರೆ ಹೇಳಲಿ, ಸಿದ್ದು ಸವದಿಯವರು ಏನು ಹೇಳುತ್ತಾರೆ ಹೇಳಲಿ, ಅದು ಬಿಟ್ಟು ಒಬ್ಬರು ಎದ್ದು ನಿಂತಾಗ ಎಲ್ಲರೂ ಚೀರುವುದು, ಎಲ್ಲರೂ ಮಾತನಾಡುವುದು, ಇದೇನು ಸಭೆಗೆ ಗೌರವ ತರುತ್ತದೆಯೆ? ಎಲ್ಲರಿಗೂ ಅವಕಾಶ ಕೊಡುತ್ತೇನೆ. ರೇವಣ್ಣನವರೆ ನೀವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರನ್ನು ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಕೇಳುತ್ತಿದ್ದೇನೆ. ಮಂಡ್ಯ ಜಿಲ್ಲೆಯ ಎಲ್ಲಾ ಲೆಕ್ಕ ಶೀರ್ಷಿಕೆಯಡಿಯಲ್ಲಿ ಎಂದು ಅವರೇ ಉತ್ತರಿಸಿದ್ದಾರೆ. ಅದರಲ್ಲಿ ನಾನು ಕೇಳುತ್ತಿರುವುದು, ಕೆ-ಶಿಪ್-2 ನಲ್ಲಿ ಮೊದಲನೇ ಹಂತದಲ್ಲಿ 585 ಉದ್ದದ ಕಿ.ಮೀ. ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ, ಶಿರಾ, ಪಾವಗಡ, ಈ ಹಿಂದುಳಿದ ತಾಲ್ಲೂಕುಗಳು.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಈ ವಿಷಯವನ್ನು ಡಿಟೇಲ್ ಆಗಿ ಹೇಳುವುದಕ್ಕೆ ನಾನು ಅನುಮತಿ ಕೊಡುತ್ತೇನೆ. ಈಗ ಪ್ರಶ್ನೋತ್ತರ ವೇಳೆಯಲ್ಲಿ ಬೇಡ.

ಶ್ರೀ ಹೆಚ್.ಡಿ.ರೇವಣ್ಣ: ಹಾಗಾದರೆ, ಈ ಪ್ರಶ್ನೆಯನ್ನು ಮುಂದೂಡಿ. ಆನಂತರ ಡಿಟೇಲ್ ಆಗಿ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು:- ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಚರ್ಚೆಗೆ ಅವಕಾಶ ಕೊಟ್ಟಾಗ ಇದರ ಬಗ್ಗೆ ಡಿಟೇಲ್ ಆಗಿ ಚರ್ಚೆ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಹಾಗಾದರೆ, ಸದರಿ ಪ್ರಶ್ನೆಯನ್ನು ತಡೆಹಿಡಿದು ಮುಂದಕ್ಕೆ ಹಾಕಿ ಬೇಡವೆಂದು ನಾವೇನು ಹೇಳುವುದಿಲ್ಲ.

ಅಧ್ಯಕ್ಷರು: ಪ್ರಶ್ನೆಯನ್ನು ಕೇಳಿರುವ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಈಗ ಅವಕಾಶ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಸದರಿ ಪ್ರಶ್ನೆಯನ್ನು ತಡೆಹಿಡಿಯಿರಿ. ಈ ಪ್ರಶ್ನೆಗೆ ನಾಳೆ ದಿವಸ ಮಂತ್ರಿಗಳು ಉತ್ತರ ಕೊಡಲಿ. 585 ಕಿ.ಮೀ.ರಸ್ತೆ ಎಲ್ಲಿಯವರೆಗೆ ಯಾವ ಕಾರಣಕ್ಕಾಗಿ ಬದಲಾವಣೆ ಆಯಿತೆಂಬುದರ ಬಗ್ಗೆ ಈಗ ಮಾನ್ಯ ಮಂತ್ರಿಗಳ ಹತ್ತಿರ ಉತ್ತರ ಇಲ್ಲದಿದ್ದರೆ ನಾಳೆ ಬೆಳಿಗ್ಗೆ ಉತ್ತರ ಕೊಡಲಿ. ಇದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಈ ಪ್ರಶ್ನೆಯನ್ನು ಈಗ ತಡೆಹಿಡಿಯಿರಿ. ನಾಳೆ ಬೆಳಿಗ್ಗೆ ಇದಕ್ಕೆ ಉತ್ತರ ಕೊಡಲಿ.

ಅಧ್ಯಕ್ಷರು: ನೀವು ಕೇಳುತ್ತಿರುವ ಪ್ರಶ್ನೆ ಏನು?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಎಷ್ಟು ಎಂಬ ಪ್ರಶ್ನೆಯ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ. ಕೆಶಿಪ್-2ರಲ್ಲಿ 585 ಕಿ.ಮೀ. ರಸ್ತೆಗೆ ಅನುಮತಿ ಕೊಟ್ಟಿದ್ದರೂ ಕೂಡ ಈಗ ಯಾವ ಕಾರಣಕ್ಕಾಗಿ ಬದಲಾವಣೆಯಾಗಿದೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳ ಹತ್ತಿರ ಈಗ ಮಾಹಿತಿ ಇಲ್ಲದಿದ್ದರೆ ಇಲಾಖೆಯ ಅಧಿಕಾರಿಗಳಿಂದ ತರಿಸಿ ನಾಳೆ ಬೆಳಿಗ್ಗೆ ಕೊಡಲಿ. ಸದರಿ ಪ್ರಶ್ನೆಯನ್ನು ನಾಳೆಗೆ ಮುಂದೂಡಿ. ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ಆಯಿತು. ಮಾನ್ಯ ಉದಾಸಿಯವರೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿ ತೆಗೆದುಕೊಂಡು ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಹೇಳಿ.

(ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಜೆಡಿಎಸ್ ಸದಸ್ಯರು ಈ ಹಂತದಲ್ಲಿ ತಮ್ಮಗಳ ಸ್ಥಾನಕ್ಕೆ ಹೋದರು)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಅಬಕಾರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರು):- ಮಾನ್ಯ ಅಧ್ಯಕ್ಷರೆ, ಸಭೆಯ ಕಲಾಪಗಳು ಸರಿಯಾಗಿ

ನಡೆಯಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇಲ್ಲಿ ಯಾರಿಗೂ ಆತಂಕ ಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ. ಪ್ರಶ್ನೋತ್ತರ ವೇಳೆಯ ಸಂದರ್ಭದಲ್ಲಿ ಹಿಂದೆ ಕಲಾಪಗಳು ಯಾವರೀತಿಯಾಗಿ ನಡೆದುಕೊಂಡು ಬಂದಿವೆ ಎಂದು ತಮಗೂ ಕೂಡ ಗೊತ್ತಿದೆ. ಏಕೆಂದರೆ ತಾವೂ ಕೂಡ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಆ ಭಾಗದಲ್ಲಿ ನಾವು ಕುಳಿತುಕೊಂಡಿದ್ದಾಗ ಯಾವ ರೀತಿಯಾಗಿ ನಡೆದಿತ್ತೆಂದು ತಮಗೂ ಕೂಡ ಗೊತ್ತಿದೆ. ಈಗ ನಾವು ಹೇಳುವುದೇನೆಂದರೆ, ಪ್ರಶ್ನೋತ್ತರ ವೇಳೆಯಲ್ಲಿ ಕೇವಲ ಪ್ರಶ್ನೋತ್ತರಕ್ಕೆ ಮಾತ್ರ ಸೀಮಿತವಾಗಿ ಇದರ ಬಗ್ಗೆ ತಮ್ಮ ತೀರ್ಮಾನವಾದ ನಂತರ ಅವರು ಬೇಕಾದರೆ ಬೇರೆ ನೋಟಿಸ್ ಕೊಟ್ಟು ಮತ್ತೆ ಚರ್ಚೆ ಮಾಡಲಿ ಎಂಬುದು ನನ್ನ ಮೊದಲ ವಿನಂತಿ. ಎರಡನೆಯದು, ಏಕೆಂದರೆ, ಸಂವಿಧಾನದ ಪ್ರಕಾರ ನಾನು ಬೆಂಗಳೂರಿಗೆ ಮಾತ್ರ ಮಂತ್ರಿಯಾಗಿದ್ದೇನೆಯೇ ಅಥವಾ ಕರ್ನಾಟಕ ರಾಜ್ಯಕ್ಕೆ ಮಂತ್ರಿಯಾಗಿದ್ದೇನೆಯೆ ಎಂಬುದರ ಬಗ್ಗೆ ತಾವು ತೀರ್ಮಾನ ಮಾಡುತ್ತೀರಿ. ಯಾರ ಮರ್ಜಿಯ ಮೇಲೂ ನಾವು ಗೆದ್ದು ಬಂದಿಲ್ಲ. ಮತ್ತೆ ಇಲ್ಲಿ ಯಾರೂ ಕೂಡ ಪಾಳೇಗಾರಿಕೆಯನ್ನು ತೆಗೆದುಕೊಂಡಿಲ್ಲ. ಯಾರ ಪಾಳೇಗಾರಿಕೆಯ ಅಡಿಯಲ್ಲಿಯೂ ಕೂಡ ನಾವು ಇಲ್ಲ. ಇದರ ಬಗ್ಗೆ ಮಾನ್ಯ ಅರ್ಥವಾಗಿರಬೇಕು. ಒಟ್ಟಿನಲ್ಲಿ ನನಗೆ ಇದರ ಬಗ್ಗೆ ಸ್ಪಷ್ಟೀಕರಣ ಬೇಕು. ನಾವು ಬೆಂಗಳೂರು ನಗರದ ಶಾಸಕರಾಗಿರುವುದರಿಂದ ನಾವು ಕೇವಲ ಬೆಂಗಳೂರು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಬೇಕೆಂದು ಏನಾದರೂ ಸಂವಿಧಾನ ಪುಸ್ತಕದಲ್ಲಿ ಬರೆದಿದ್ದರೆ ಅದು ಎಲ್ಲರಿಗೂ ಅನ್ವಯವಾಗುತ್ತದೆ. ನಾನಂತೂ ಕರ್ನಾಟಕ ರಾಜ್ಯದ ಮಂತ್ರಿಯಾಗಿದ್ದು, ವಿಚಾರ ಬಂದಾಗ ಮಾತನಾಡತಕ್ಕಂಥದ್ದು ನನ್ನ ಹಕ್ಕು. ಆದರೆ, ನಾನು ಬೆಂಗಳೂರಿಗೆ ಮಾತ್ರ ಸೀಮಿತವಾಗಬೇಕೆಂದು ಹೇಳುವುದಕ್ಕೆ ಇವರ್ಯಾರಿಗೂ ಅಧಿಕಾರ ಇಲ್ಲ. He is not a person to supposed to talk like that. ಆದ್ದರಿಂದ, ಆ ವಿಚಾರವನ್ನು ಕಡತದಿಂದ ತೆಗೆದು ಹಾಕಬೇಕು. ಬೆಂಗಳೂರಿಗೆ ಸೀಮಿತವಾಗಿ ಮಾತನಾಡಬೇಕೆಂದು ಹೇಳುವುದಕ್ಕೆ ಇವರಿಗೆ ಹಕ್ಕಿಲ್ಲ. ಆದರೆ, ತಾವು ಏನು ಬೇಕಾದರೂ ಹೇಳುವುದಕ್ಕೆ ತಮಗೆ ಹಕ್ಕಿದೆ, ತಮ್ಮ ಮಾತುಗಳನ್ನು ಕೇಳುವುದು ನಮ್ಮ ಧರ್ಮ. ಮತ್ತೆ ಉತ್ತರ ಕೊಡತಕ್ಕಂಥದ್ದು ನಮ್ಮ ಧರ್ಮವಾಗಿದೆ. ಆದರೆ, He is neither having the authority nor having the morality. He has no right to speak like this. This is a nonsense thing. ಆದ್ದರಿಂದ, ಅದನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾವ ರೀತಿಯಾಗಿ ನಡೆದುಕೊಳ್ಳಬೇಕೆಂದು ಇವರಿಂದ ನಾನೇನು ಕಲಿಯಬೇಕಾಗಿಲ್ಲ. ನಾನು ಇಲ್ಲಿ 20

ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಆದ್ದರಿಂದ, ಇವರಿಂದ ನಾನು ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಮಾನ್ಯ ಯಡಿಯೂರಪ್ಪನವರ ನಾಯಕತ್ವದಲ್ಲಿ ನಾವು ಪಾಠ ಕಲಿತಿದ್ದೇವೆ. ಇವರಿಂದ ನಾವೇನು ಕಲಿಯಬೇಕಾಗಿಲ್ಲ. ಇವರ ತರಹ ನಾವು ದುಂಡಾವರ್ತನೆ ಮಾಡುವುದಿಲ್ಲ. ನಾವು ನ್ಯಾಯವಾಗಿಯೇ ನಡೆದುಕೊಳ್ಳುತ್ತೇವೆ. ನಿಮ್ಮಿಂದ ನಾವೇನು ಕಲಿಯಬೇಕಾಗಿಲ್ಲ. ನೀವು ಗೂಂಡಾ ತರಹ ಮಾತನಾಡುತ್ತೀರಿ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಿದ್ದು ಸವದಿಯವರೆ, ತಾವು ಮಾತನಾಡಿ.

ಶ್ರೀ ಸಿದ್ದು ಸವದಿ:- ಮಾನ್ಯ ಅಧ್ಯಕ್ಷರೆ, ನಾನು ಎರಡನೇ ಬಾರಿಗೆ ಆಯ್ಕೆಯಾಗಿ ಇಲ್ಲಿಗೆ ಬಂದಿದ್ದೇನೆ. ಮೊದಲನೇ ಬಾರಿ ಆಯ್ಕೆಯಾಗಿ ಬಂದಾಗ ಸುಮಾರು 20 ತಿಂಗಳವರೆಗೆ ಅವರ ಸಮ್ಮಿಶ್ರ ಸರ್ಕಾರ ಇತ್ತು. ನಮ್ಮ ಕ್ಷೇತ್ರಗಳಿಗೆ ಆ ಅವಧಿಯಲ್ಲಿ ಎಷ್ಟೊಂದು ಅನ್ಯಾಯ ಮಾಡಿದ್ದಾರೆ ಎನ್ನುವ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆ ವಿಷಯ ಬಂದಾಗ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ದು ಸವದಿ:- ಈಗ ಮಾತನಾಡುವವರು ಹಿಂದೆ ಮಂತ್ರಿಯಾಗಿದ್ದರು. ಆಗ ಅವರು ಕೇವಲ ಹಾಸನ ಅಥವಾ ಮಂಡ್ಯ ಜಿಲ್ಲೆಗೆ ಮಾತ್ರ ಮಂತ್ರಿಯಾಗಿದ್ರಾ? ಇಡೀ ಕರ್ನಾಟಕ ರಾಜ್ಯಕ್ಕೆ ಮಂತ್ರಿಯಾಗಿದ್ದೇವೆಂದು ಹೇಳಬೇಕಾಗುತ್ತದೆ. ಉತ್ತರ ಕರ್ನಾಟಕ ಭಾಗಗಳಿಗೆ ಒಂದು ರೀತಿಯಾದರೆ ಹಾಸನ ಮತ್ತು ಮಂಡ್ಯ ಜಿಲ್ಲೆಗೆ ಒಂದು ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಆಗ ಕೆಶಿಪ್‌ನಲ್ಲಿ 500 ಕಿ.ಮೀ.ವರೆಗೆ ಕೆಲಸ ಕೊಟ್ಟಿದ್ದರು. ಆದರೆ, ನಮ್ಮ ಜಿಲ್ಲೆಯಲ್ಲಿ ಆಗ ಎಷ್ಟು ಕಿ.ಮೀ.ವರೆಗೆ ಕೊಟ್ಟಿದ್ದಾರೆಂಬುದರ ಬಗ್ಗೆ ಉತ್ತರ ಹೇಳಬೇಕಲ್ಲವೇ? ನಮ್ಮ ಕ್ಷೇತ್ರಕ್ಕೆ ಕೆಶಿಪ್‌ನಲ್ಲಿ 50 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆದರೆ, ಒಂದು ಕೆಲಸವನ್ನು ತೆಗೆದುಕೊಂಡಿಲ್ಲ. ಉತ್ತರ ಮತ್ತು ದಕ್ಷಿಣ ಕರ್ನಾಟಕ ಜಿಲ್ಲೆಗಳಿಗೆ ಒಟ್ಟು 3500 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಕೇವಲ 1500 ಕೋಟಿ ಕೊಟ್ಟಿದ್ದಾರೆ. ಈ ರೀತಿಯಾದ ತಾರತಮ್ಯವನ್ನು ಏಕೆ ಮಾಡಿದರು?

ಅಧ್ಯಕ್ಷರು: ಇದೇ ವಿಷಯದ ಬಗ್ಗೆ ಮಾತನಾಡುವುದಾದರೆ, ಸದರಿ ವಿಷಯ ಬಂದಾಗ ತಮಗೆ ಅವಕಾಶ ಕೊಡುತ್ತೇನೆ. (ಗೊಂದಲ) ನಾಳೆ ಇದರ ಬಗ್ಗೆ ಚರ್ಚೆ

ಮಾಡೋಣ. ಈಗ ಆ ವಿಷಯ ಮುಕ್ತಾಯವಾಗಿದೆ. ಪ್ರಶ್ನೋತ್ತರ ಅವಧಿ ಈಗ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:**

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರ, ಪೌರಾಡಳಿತ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಈ ದಿನ 2ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 106 ಪ್ರಶ್ನೆಗಳ ಪೈಕಿ 90 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು:- ಆ ಪ್ರಶ್ನೆ ಮುಗಿಯಿತು. ನೀವು ಆ ಸಂದರ್ಭದಲ್ಲಿ ಬಂದಿರಲಿಲ್ಲ. ಮತ್ತೆ ನಿಮ್ಮ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಮಾನ್ಯ ಸಚಿವರು ಸಮಯ ತೆಗೆದುಕೊಂಡಿದ್ದಾರೆ. ಈ ಅಧಿವೇಶನದ ಅವಧಿಯಲ್ಲಿಯೇ ಉತ್ತರ ಕೊಡಬೇಕೆಂದು ಮಾನ್ಯ ಸಚಿವರಿಗೆ ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ಆರ್ಥಿಕ ಇಲಾಖೆಯಿಂದ ಮಾಹಿತಿಯನ್ನು ತರಿಸಿಕೊಂಡು ಒಂದು ವಾರದೊಳಗೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಒಂದು ವಾರವೆಂದರೆ ಹೇಗೆ? ಅಷ್ಟರೊಳಗೆ ಅಧಿವೇಶನ ಮುಗಿದು ಹೋಗುತ್ತದೆ.

ಅಧ್ಯಕ್ಷರು:- ಈ ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡಬೇಕೆಂದು ಹೇಳಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಅಷ್ಟರೊಳಗೆ ಅಸೆಂಬ್ಲಿ ಮುಗಿದು ಹೋಗುತ್ತದೆ. ಬೇಕಾದರೆ, ಈ ವಿಷಯಕ್ಕೆ ಸಂಬಂಧಪಟ್ಟಂತ ಮಾಹಿತಿಯನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು:- ಅವರೇ ಮಾಹಿತಿ ಕೊಡುತ್ತಾರಂತೆ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ(ಸಿವಿಲ್) ವರದಿಯನ್ನು ಸಭೆಯ ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ವರದಿಯನ್ನು(ವಾಣಿಜ್ಯ) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

ಅಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಗಳು. ಈಗ ಶ್ರೀ ಹೆಚ್.ಎಸ್.ಮಹದೇವಪ್ರಸಾದ್‌ರವರ ಗಮನ ಸೆಳೆಯುವ ಸೂಚನೆ. ಅವರು ಬಂದಿಲ್ಲ ಹಾಗಾದರೆ, ಮುಂದಿರುವ ಮಾನ್ಯ ಅಮರೇಶ್‌ರವರದು, ಅವರೂ ಕೂಡ ಬಂದಿಲ್ಲ. ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ವೆಂಕಟರಾವ್ ನಾಡಗೌಡರವರದು.

5. <u>ಗಮನ ಸೆಳೆಯುವ ಸೂಚನೆ</u>

ಅ) ವಿಷಯ:- ರಾಯಚೂರು ನಗರದಲ್ಲಿರುವ ಓಪೆಕ್ ಆಸ್ಪತ್ರೆಯನ್ನು ಅಪೋಲೋ ಆಸ್ಪತ್ರೆಗೆ ಗುತ್ತಿಗೆ ನೀಡಿದ್ದು, ಸರಿಯಾಗಿ ಕೆಲಸ ನಿರ್ವಹಿಸದಿರುವುದರಿಂದ ಬಡ ರೋಗಿಗಳಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ(ಸಿಂಧನೂರು):- ಮಾನ್ಯ ಅಧ್ಯಕ್ಷರೆ, ರಾಯಚೂರು ನಗರದಲ್ಲಿರುವ ಓಪೆಕ್ ಆಸ್ಪತ್ರೆಯನ್ನು ಅಪೋಲೊ ಆಸ್ಪತ್ರೆಗೆ ಗುತ್ತಿಗೆ ನೀಡಿದ್ದು, ಸರಿಯಾಗಿ ಕೆಲಸ ನಿರ್ವಹಿಸದಿರುವುದರಿಂದ ಬಡ ರೋಗಿಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಕರ್ನಾಟಕ ರಾಜ್ಯದ ಉತ್ತರ ಭಾಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸಲು ಸರ್ಕಾರವು ಒಪೆಕ್ (OPEC – Organisation of Petroleum Exporting Countries) ನೆರವಿನೊಂದಿಗೆ 350 ಹಾಸಿಗೆಗಳ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ರಾಯಚೂರಿನಲ್ಲಿ ಸ್ಥಾಪಿಸಿದೆ. ಈ ಆಸ್ಪತ್ರೆಯನ್ನು ನಡೆಸಲು ಸರ್ಕಾರವು ಹತ್ತು ವರ್ಷಗಳ ಅವಧಿಗೆ ಒಂದು ಸೇವಾ ಒಪ್ಪಂದವನ್ನು ಅಪೋಲೋ ಆಸ್ಪತ್ರೆಯೊಂದಿಗೆ ಮಾಡಿಕೊಂಡಿದೆ. ಸದರಿ ಸೇವಾ ಒಪ್ಪಂದವು 1ನೇ ಜುಲೈ 2001 ರಿಂದ ಜಾರಿಗೆ ಬಂದಿದೆ. ಸೇವಾ ಒಪ್ಪಂದದ ಪ್ರಕಾರ, ಆಸ್ಪತ್ರೆಯ ಸಾಮಾನ್ಯ ವಾರ್ಡ್‌ನಲ್ಲಿ ಒಟ್ಟು 140 ಹಾಸಿಗೆಗಳನ್ನು ರೋಗಿಗಳಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ನೀಡುವ ಸಲುವಾಗಿ ಮೀಸಲಿಟ್ಟು ಆರೋಗ್ಯ ಸೇವೆಯನ್ನು ಒದಗಿಸಬೇಕು.

ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು ಸದರಿ ಆಸ್ಪತ್ರೆಗೆ ಇತ್ತೀಚೆಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಈ ಆಸ್ಪತ್ರೆಯಲ್ಲಿ ಹೊರ ಮತ್ತು ಒಳ ರೋಗಿಗಳಾಗಿ ಚಿಕಿತ್ಸೆಗಳನ್ನು ಪಡೆದ ಬಡತನ ರೇಖೆಗಿಂತ ಕೆಳಗಿರುವ ಜನರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗಮನಿಸಲಾಗಿದೆ. ಇದಕ್ಕೆ ಕೆಲವು ಮುಖ್ಯ ಕಾರಣಗಳೆಂದರೆ:

(1) ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಪೋಲೋ ಸಂಸ್ಥೆ ರಾಯಚೂರಿನಿಂದ ಬೆಂಗಳೂರಿಗೆ ಆರೋಗ್ಯ ಇಲಾಖೆಯ ಒಪ್ಪಿಗೆ ಪಡೆಯದೆ ಸ್ಥಳಾಂತರಿಸಿರುವುದು.

(2) ಕೆಲವು ಪ್ರಮುಖ ಸೂಪರ್ ಸ್ಪೆಷಾಲಿಟಿ ವಿಭಾಗಗಳಲ್ಲಿ ಅಂದರೆ Cardiothoracic, Nephrology and Plastic Surgery ತಜ್ಞ ವೈದ್ಯರ ಕೊರತೆ ಇರುವುದು; ಹಾಗೂ

(3) ರಾಯಚೂರು ಸರ್ಕಾರಿ ಆಸ್ಪತ್ರೆಯ ಹೊರ ರೋಗಿ ವಿಭಾಗದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದು.

ಈ ಆಸ್ಪತ್ರೆಯನ್ನು ನಡೆಸಲು ವೈದ್ಯಕೀಯ ಶಿಕ್ಷಣ ಇಲಾಖೆ ಮುಂದೆ ಬಂದಿದ್ದು ಆ ಕುರಿತು ಸಲ್ಲಿಸಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಆಸ್ಪತ್ರೆಯ Governing Council ಸಭೆಯನ್ನು ಸದ್ಯದಲ್ಲೇ ಕರೆದು ಈ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವೆಂಕಟರಾವ್ ನಾಡಗೌಡ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿರುವ ಹಾಗೆ O.P.E.C. ಆಸ್ಪತ್ರೆ ನಮ್ಮ ಭಾಗಕ್ಕೆ ಬಹಳ ದೊಡ್ಡ ಕೊಡುಗೆ ಎಂದು ನಾವೆಲ್ಲಾ ಭಾವಿಸಿದ್ದೇವೆ. ಬೆಂಗಳೂರಿನಲ್ಲಿರುವ ಆಸ್ಪತ್ರೆಗಳು ಬಿಟ್ಟರೆ ನಮ್ಮಲ್ಲಿನ ಆಸ್ಪತ್ರೆ ಎಲ್ಲಾ ರೀತಿಯಲ್ಲಿ ಒಂದು ಒಳ್ಳೆಯ ಆಸ್ಪತ್ರೆಯಾಗಬೇಕೆಂಬ ಭಾವನೆಯಿಂದ OPEC ನೆರವಿನಿಂದ ಸ್ಥಾಪನೆಯಾಗಿರುವ ಈ ಆಸ್ಪತ್ರೆಯನ್ನು ಸರ್ಕಾರ ನಡೆಸುವುದಕ್ಕೆ ಕಷ್ಟವಾಗುತ್ತದೆ ಎಂಬ ಉದ್ದೇಶದಿಂದ ಹಿಂದಿನ ಸರ್ಕಾರದ ಅವಧಿಯಲ್ಲಿ ಅಪೋಲೋ ಜೊತೆ ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಅಪೋಲೋ ಜೊತೆ

ಒಪ್ಪಂದ ಮಾಡಿಕೊಂಡ ಮೇಲೆ ಕೆಲವು ದಿನ ಈ ಆಸ್ಪತ್ರೆ ನಮ್ಮೆಲ್ಲರ ನಿರೀಕ್ಷೆಯ ಮಟ್ಟದಲ್ಲಿ ಕೆಲಸ ಮಾಡುತ್ತಿತ್ತು.

ಈಗ ಅಲ್ಲಿ ಸುಮಾರು 7 ಪ್ರಮುಖ ವೈದ್ಯರ ಹುದ್ದೆಗಳು ಖಾಲಿ ಇದೆ. Urologist ಇಲ್ಲ, Gastroenterologist ಇಲ್ಲ, Nephrology, Gastromologist, Plastic Surgery, Vascular Surgery, Cardiac Thoracic Surgery, ಅದಲ್ಲದೆ ICUನಲ್ಲಿ Duty doctors ಸುಮಾರು 5 ಜನರು ಇರಬೇಕಾಗಿದ್ದು ಅಲ್ಲಿ ಇಲ್ಲ. ಇದಾದ ಮೇಲೆ ಅಲ್ಲಿ ಏನಾಗಿದೆ ಎಂದರೆ, Executive Assistant Managers postಗಳಲ್ಲಿಯೂ ಕೂಡ 8 vacancy ಇವೆ. Bio Medical Equipmentsಗಳು ಅಲ್ಲಿ ಅರ್ಧಕ್ಕಿಂತ ಹೆಚ್ಚು equipmentಗಳು ಹಾಳಾಗಿ ಹೋಗಿವೆ, ಅವುಗಳು ಈಗ ಉಪಯೋಗಕ್ಕೆ ಬರುತ್ತಿಲ್ಲ. ನನಗೆ ಬಂದ ಮಾಹಿತಿಯ ಪ್ರಕಾರ ಅಲ್ಲಿಗೆ ಕಾರ್ಯದರ್ಶಿಗಳು ಬಂದಾಗ ಅವರಿಗೆ ಕೊಟ್ಟಿರುವಂತಹ ಮಾಹಿತಿ ಅವುಗಳನ್ನು ರಿಪೇರಿ ಮಾಡಿಸುವುದಕ್ಕೆ ಹೋದರೆ ಹೊಸದನ್ನು ತೆಗೆದುಕೊಳ್ಳುವಷ್ಟು ಹಣ ಖರ್ಚಾಗುತ್ತದೆ ಎಂದು ಹೇಳಿ ಅದನ್ನು ರಿಪೇರಿಯನ್ನು ಮಾಡಿಸದೆ ಹಾಗೆಯೇ ಬಿಟ್ಟಿದ್ದಾರೆ. ಅಲ್ಲಿ ವೆಂಟಿಲೇಟರ್‌ಗಳ ಕೊರತೆಯೂ ಕೂಡ ಇದೆ. ನಾನು ಖುದ್ದಾಗಿ ಹೋಗಿ ನೋಡಿದ್ದೇನೆ. ಒಂದು ಪೇಷಂಟ್‌ನ್ನು ಅವರು ಹೈದರಾಬಾದ್‌ಗೆ ರೆಫರ್ ಮಾಡಿ ಅಲ್ಲಿ ಟ್ರೀಟ್‌ಮೆಂಟ್‌ನ್ನು ಮಾಡಿಕೊಂಡು ವಾಪಸ್ಸು ಅಲ್ಲಿಗೆ ಬಂದರೆ ವೆಂಟಿಲೇಷನ್ ಹಾಕುವುದಕ್ಕೆ ಅವರ ಹತ್ತಿರ ವೆಂಟಿಲೇಟರ್ ಇಲ್ಲದೆಯೇ ಹ್ಯಾಂಡ್ ವೆಂಟಿಲೇಟರ್ ಮೇಲೆ ಆ ಪೇಷಂಟ್‌ನ್ನು ಅಲ್ಲಿಟ್ಟಿದ್ದರು. ನಾನು ಹೋಗಿ ಬೇರೆ ಆಸ್ಪತ್ರೆಯಿಂದ ವೆಂಟಿಲೇಟರ್‌ನ್ನು ತರಿಸಿಕೊಟ್ಟು ಆ ಪೇಷಂಟ್‌ಗೆ ಹಾಕಿಸಿ ಬಂದಿದ್ದೇನೆ. ಈ ಪರಿಸ್ಥಿತಿ ಆ ಆಸ್ಪತ್ರೆಯಲ್ಲಿ ನಿರ್ಮಾಣವಾಗಿದೆ. ಈಗ ಆ ಆಸ್ಪತ್ರೆಯನ್ನು ಸರಿಪಡಿಸುವುದರ ಬಗ್ಗೆ ಏನು ಹೇಳಿದ್ದಾರೆಂದರೆ ಇದನ್ನು ಏಕಾಏಕಿ ರಾಯಚೂರು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಬೇಕೆಂಬುದನ್ನು ಇಲ್ಲಿ ತೋರಿಸಿದ್ದಾರೆ. Governing Council ಮುಂದೆ ಇದು ಬರುತ್ತದೆ. ಅಲ್ಲಿ ಚರ್ಚೆ ಮಾಡಿ ತೀರ್ಮಾನವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಆಸ್ಪತ್ರೆಗೆ ಹಾಕಿದರೆ ಒಂದು ವೇಳೆ ನೀವು ಏನಾದರೂ ವೈದ್ಯಕೀಯ ಶಿಕ್ಷಣ ಇಲಾಖೆಗೆ ಇದನ್ನು ಕೊಟ್ಟರೆ ಖಂಡಿತವಾಗಿಯೂ ಈಗ ನಾನು ನಡೆಯುತ್ತಿದೆ, ಇದು ಕೂಡ ನಡೆಯುವುದಿಲ್ಲ. ಅಲ್ಲಿ specialized doctorಗಳು ಸಿಗುವುದಿಲ್ಲ. ಹಾಗಾಗಿಯೇ ಇದರ ಬಗ್ಗೆ ಚರ್ಚೆ ಮಾಡಿ ಅಪೋಲೋದವರಿಗೆ ಕೊಟ್ಟಿರುವುದು. ಅವರು ತಮ್ಮ ಹೈದರಾಬಾದ್ ಮತ್ತು ಪಕ್ಕದ ಜಿಲ್ಲೆಗಳಿಂದ ಡಾಕ್ಟರ್‌ಗಳನ್ನು ಕೊಡುತ್ತಾರೆನ್ನುವ ಉದ್ದೇಶದಿಂದ ಅದನ್ನು ಅಪೋಲೋದವರೊಂದಿಗೆ ಒಪ್ಪಂದವನ್ನು ಮಾಡಿತ್ತು. ಇದನ್ನು ತಾವು ರಿವ್ಯೂ

ಮಾಡಬೇಕು, ಅಲ್ಲಿ ಡಾಕ್ಟರ್‌ಗಳ ವೇಕೆನ್ಸಿ ಏನು ಇದೆ, ಅದನ್ನು ಮಾಡುವುದರ ಜೊತೆಗೆ ಏನು equipmentಗಳು ಹಾಳಾಗಿ ಹೋಗಿವೆ, ಆ equipmentಗಳನ್ನು ತಾವು ಸರಿಪಡಿಸಬೇಕು. ಹೊಸದನ್ನು ಕೊಡಿಸುತ್ತೀರೋ ಅಥವಾ ಅದನ್ನೇ ರಿಪೇರಿ ಮಾಡುತ್ತೀರೋ? ಅದನ್ನು ಸರಿಪಡಿಸಿ, ಅವೆಲ್ಲಾ equipmentಗಳನ್ನು ಕೊಟ್ಟು ಇವರ ಜೊತೆಗೆ ಚರ್ಚೆ ಮಾಡಿ. ಈಗ ಅಲ್ಲಿರುವಂತಹ ಡಾಕ್ಟರ್‌ಗಳು ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇರುವುದಿಲ್ಲ. ಅವರಿಗೆ ಹೊಂದಾಣಿಕೆ ಇಲ್ಲದೆಯೇ ಹಾಗಾಗಿ ಅಲ್ಲಿ ರೋಗಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬುದಕ್ಕೆ ಕಾರಣ ಅಲ್ಲಿ ಏನು fecilitiesನ್ನು ಕೊಡುತ್ತಿದ್ದರೋ ಅದು ಒಂದೊಂದಾಗಿ ನಿಂತು ಹೋಗುತ್ತಿರುವುದರಿಂದ ಅಲ್ಲಿ ರೋಗಿಗಳು ಹೋಗುವುದು ಕಡಿಮೆ ಯಾಗುತ್ತಿದೆ. ನೀವು ಇವುಗಳೆಲ್ಲವನ್ನು ಸರಿಪಡಿಸಬೇಕು. ಇದನ್ನು ತಾವು ಮತ್ತೆ re-think ಮಾಡಬೇಕು. ಎಲ್ಲರ ಜೊತೆ ತಾವು ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳಬೇಕು. ತಾವು ಏಕಾಏಕಿಯಾಗಿ ಅದನ್ನು Medical Collegeಗೆ transfer ಮಾಡಿದರೆ ಈಗ ನಡೆಯುತ್ತಿರುವುದು ಸಹ ನಡೆಯುವುದಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ವೆಂಕಟರಾವ್ ನಾಡಗೌಡ ರವರು ಕೇಳಿದಂತಹ ಪ್ರಶ್ನೆ ಸರಿಯಾಗಿದೆ. ಏಕೆಂದರೆ ಇತ್ತೀಚೆಗೆ ನಮ್ಮ ಒಪೆಕ್ ಆಸ್ಪತ್ರೆ ರಾಯಚೂರಿನಲ್ಲಿ ಏನು ಕಾರ್ಯನಿರ್ವಹಿಸುತ್ತಿದೆ., 2008–09ನೇ ಸಾಲಿನಲ್ಲಿ ಸುಮಾರಾಗಿ ಬಿಪಿಎಲ್ ಪಡೆದಿರುವಂತಹ ರೋಗಿಗಳು 1224 ಮಂದಿ ಅದರಲ್ಲಿ 50 ಮಂದಿ ಚಿಕಿತ್ಸೆಯನ್ನು ಪಡೆದಿದ್ದಾರೆ. ಅಲ್ಲಿ ಸಾಕಷ್ಟು ಮಂದಿ ತಜ್ಞರ ಕೊರತೆಯ ವಿಷಯವಾಗಿರಬಹುದು. ಅಲ್ಲಿ ಎಲ್ಲಾ ವಿಷಯಗಳ ಬಗ್ಗೆ ಆದಷ್ಟು ಬೇಗನೆ Council Meetingನ್ನು ಕರೆದು ನಿಮ್ಮನ್ನು ಕೂಡ ಆ ಸಭೆಗೆ ಕರೆದು ಏನೇನು ಅಪೋಲೋ ಆಸ್ಪತ್ರೆಯಲ್ಲಿ ಸರಿಪಡಿಸಬಹುದು, ಅಲ್ಲಿ ತಜ್ಞರ ಕೊರತೆ ಇದೆ, ಎಲ್ಲಾ ಸಂಪೂರ್ಣವಾಗಿ ಈ ಉತ್ತರ ಕರ್ನಾಟಕದ ಭಾಗದಲ್ಲಿ ಆ hospital ಬಹಳ ಚೆನ್ನಾಗಿ ಕೆಲಸವನ್ನು ಮಾಡುತ್ತಿದೆ. ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಾ ವಿಷಯಗಳ ಬಗ್ಗೆ ಆದಷ್ಟು ಬೇಗನೆ Governing Meeting Councilನ್ನು ಕರೆದು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಸರ್ಕಾರದ ಗಮನವನ್ನು ಸೆಳೆಯಬೇಕು.

ಆ) ವಿಷಯ: ಬಿಜಾಪುರ, ಬಾಗಲಕೋಟೆ, ಜಮಖಂಡಿ, ಅಥಣಿ, ಹಾಗೂ

ರಬಕವಿ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನೀರಿನ ಕೊರತೆ
ಉಂಟಾಗಿರುವುದರಿಂದ ಕೊಯಿನಾ ಜಲಾಶಯದಿಂದ
ಮೂರು ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ):- ಮಾನ್ಯ ಅಧ್ಯಕ್ಷರೇ, ಬಿಜಾಪುರ, ಬಾಗಲಕೋಟೆ, ಜಮಖಂಡಿ, ಅಥಣಿ ಹಾಗೂ ರಬಕವಿ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಿರುವುದರಿಂದ ಕೊಯಿನಾ ಜಲಾಶಯದಿಂದ ಮೂರು ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು):- ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ ಹಿಪ್ಪರಗಿ ಜಲಾಶಯದಲ್ಲಿ ದಿನಾಂಕ:21-02-09 ರಂದು ನೀರಿನ ಮಟ್ಟ ಹಾಗೂ ನೀರಿನ ಸಂಗ್ರಹ ಸಾಮರ್ಥ ಕ್ರಮವಾಗಿ 523.50 ಮೀ. ಹಾಗೂ 4.75 ಟಿಎಂಸಿ ಇದ್ದು, ಇದರಲ್ಲಿ 3.95 ಟಿಎಂಸಿ ಉಪಯೋಗಿಸಬಹುದಾಗಿದೆ. ಕಳೆದ ಸಾಲಿನಲ್ಲಿ ದಿನಾಂಕ:21.02.2008 ರಂದು ಹಿಪ್ಪರಗಿ ಜಲಾಶಯದ ನೀರಿನ ಮಟ್ಟ ಹಾಗೂ ಉಪಯೋಗಿಸಬಹುದಾದ ನೀರಿನ ಪರಿಮಾಣ ಕ್ರಮವಾಗಿ 521.10 ಮೀಟರ್ ಹಾಗೂ 1.908 ಟಿಎಂಸಿ ಮಾತ್ರಿ ಇತ್ತು. ಪ್ರಸಕ್ತ ಸಾಲಿನಲ್ಲಿ ಜಲಾಶಯದ ನೀರಿನ ಸಂಗ್ರಹಣೆ ತೃಪ್ತಿಕರವಾಗಿದ್ದು, ಮೇ ತಿಂಗಳವರೆಗೆ ಸಾಕಾಗಬಹುದಾಗಿದೆ.

ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ ಕೃಷ್ಣಾ ನದಿಯು ಬಾಗಲಕೋಟೆ ಜಿಲ್ಲೆಯ ಜಮಖಂಡಿ ಹಾಗೂ ಬೀಳಗಿ ತಾಲೂಕುಗಳಲ್ಲಿ ಹರಿಯುತ್ತದೆ. ಪ್ರತಿ ವರ್ಷ ಬೇಸಿಗೆ ಸಮಯದಲ್ಲಿ ಕೃಷ್ಣಾ ನದಿಯು ಬತ್ತಿ ಕೃಷ್ಣಾ ನದಿಯ ಅವಲಂಬಿತ ಜಮಖಂಡಿ/ರಬಕವಿ ನಗರಗಳಿಗೆ ಕುಡಿಯುವ ನೀರಿನ ತೊಂದರೆ ಆಗುವ ಸಂಭವವಿರುತ್ತದೆ. ಇದಲ್ಲದೆ ಜಮಖಂಡಿ ತಾಲೂಕಿನ ಕೃಷ್ಣಾ ನದಿಯ ದಡದಲ್ಲಿರುವ ಗ್ರಾಮಗಳಲ್ಲಿನ ಜನ-ಜಾನುವಾರುಗಳಿಗೂ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಂಭವವಿರುತ್ತದೆ. ಆದರೆ, ಈಗ ಸಧ್ಯಕ್ಕೆ ಜಮಖಂಡಿ ತಾಲೂಕಿನ ಹಿಪ್ಪರಗಿ ಬ್ಯಾರೇಜಿನಲ್ಲಿ 4.75 ಟಿ.ಎಂ.ಸಿ ಸಂಗ್ರಹವಿದ್ದು, ಮುಂಬರುವ ಬೇಸಿಗೆಯಲ್ಲಿ ಕೃಷ್ಣಾ ನದಿಯಲ್ಲಿ ನೀರಿನ ಹರಿವು ಕಡಿಮೆ ಆಗಿ ಹಿಪ್ಪರಗಿ ಜಲಾಶಯದ ನೀರಿನ ಸಂಗ್ರಹಣೆ ಸಹ ಸಾಕಾಗದೇ ಇದ್ದ ಸಂದರ್ಭದಲ್ಲಿ, ಮಹಾರಾಷ್ಟ್ರದ ಸರ್ಕಾರದ ಜೊತೆಗೆ ಸಮಾಲೋಚಿಸಿ ಮುಂಜಾಗ್ರತಾ ಕ್ರಮವಾಗಿ ಕೊಯಿನಾ ಜಲಾಶಯದಿಂದ ನೀರು ಬಿಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ವಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಸ್ತುತ ಆಲಮಟ್ಟಿ ಜಲಾಶಯದಿಂದ ನೀರಿನ ಪ್ರಮಾಣ ಸಾಕಷ್ಟಿದ್ದು, ವಿಜಾಪೂರ ಜಿಲ್ಲೆಯಲ್ಲೂ ಕೃಷ್ಣಾ ನದಿ ಪಾತ್ರದಲ್ಲಿ ನೀರು ಇರುತ್ತದೆ. ಹೀಗಾಗಿ ವಿಜಾಪೂರ ಜಿಲ್ಲೆಗೆ ಕೋಯ್ನಾ ಜಲಾಶಯದಿಂದ ಸಧ್ಯ ನೀರು ಹರಿಸುವ ಅವಶ್ಯಕತೆ ಇರುವುದಿಲ್ಲ. ಆದಾಗ್ಯೂ, ಮಾನ್ಯ ಶಾಸಕರು ಪ್ರಸ್ತಾಪಿಸಿರುವಂತೆ, ಕೋಯ್ನಾದಿಂದ ಕೃಷ್ಣಾ ನದಿಯಲ್ಲಿ ನೀರು ಬಿಡಿಸಿಕೊಂಡಲ್ಲಿ ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲೆಯ ಪಟ್ಟಣ ಮತ್ತು ಹಳ್ಳಿಗಳಿಗೆ ನೀರು ಒದಗಿಸಿದ ನಂತರ ಇನ್ನೂಳಿದ ನೀರು ಆಲಮಟ್ಟಿ ಜಲಾಶಯಕ್ಕೆ ಬಂದು ಸೇರುತ್ತದೆ. ಇದಲ್ಲದೇ, ಬೇಸಿಗೆ ಕಾಲದಲ್ಲಿ, ಅವಶ್ಯಕತೆ ಎನಿಸಿದಲ್ಲಿ, ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ನೀರನ್ನು ಕಾಲುವೆಗಳಲ್ಲಿ ಹರಿಸಿ ಕುಡಿಯುವ ನೀರಿಗಾಗಿ ಬಳಸಿಕೊಳ್ಳಬಹುದಾಗಿದೆ.

ಶ್ರೀ ಶ್ರೀಕಾಂತ್ ಕುಲಕರ್ಣಿ(ಜಮಖಂಡಿ): ಮಾನ್ಯ ಅಧ್ಯಕ್ಷರೆ, ಸರ್ಕಾರದ ಹವಾಮಾನ ಇಲಾಖೆಯವರು ಕೊಟ್ಟಿರುವಂತಹ ವರದಿಯ ಪ್ರಕಾರ ಈ ವರ್ಷ ಬೇಸಿಗೆಯಲ್ಲಿ ಉಷ್ಣಾಂಶ ತುಂಬಾ ಹೆಚ್ಚಾಗುವಂತಹ ಸಾಧ್ಯತೆ ಇದೆ. ಹೀಗಾಗಿ ಹಿಪ್ಪರಗಿ ಜಲಾಶಯದಲ್ಲಿ ನೀರು ಇದ್ದರೂ ಸಹ ಸಾರ್ವಜನಿಕರಿಗೆ ಇರುವ ಭಯ ಏನೆಂದರೆ, ಫೆಬ್ರವರಿ–ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಈ ವರ್ಷ ವಿಶೇಷವಾದಂತಹ ಬಿಸಿಲು ಬಂದು ನೀರಿನ ಕೊರತೆ ಆಗುವಂತಹ ಸಂಭವವಿದೆ. ಒಂದು ಕಡೆ ಕೃಷಿಗೂ ಕೂಡ ನೀರು ಬೇಕು. ಇನ್ನೊಂದು ಕಡೆ ಕುಡಿಯುವುದಕ್ಕೂ ಸಹ ನೀರು ಬೇಕಾಗಿದೆ. ಬಾಗಲಕೋಟೆ ಹಾಗೂ ಬಿಜಾಪುರ ಅಖಂಡ ಜಿಲ್ಲೆಯ 3–4 ದೊಡ್ಡದೊಡ್ಡ ಪಟ್ಟಣಗಳು ಇರಬಹುದು ಅದು ಅಥಣಿ ಇರಬಹುದು, ಜಮಖಂಡಿ ಇರಬಹುದು, ರಬಕವಿ ಹಾಗೂ ಬನಹಟ್ಟಿ ಇರಬಹುದು. ವಿಜಾಪುರಕ್ಕೂ ಕೂಡ ಒಂದೊಂದು ಸಾರಿ ನೀರಿನ ಸಮಸ್ಯೆಯಾಗುವಂಥದ್ದು ಇದೆ. ಅದು ಅಲ್ಲದೆ ಹೊಳೆದಂಡೆಯಲ್ಲಿರುವಂತಹ ನೂರಾರು ಗ್ರಾಮಗಳಿಗೂ ಕೂಡ ಕುಡಿಯುವ ನೀರಿನ ಸಮಸ್ಯೆಗಳೂ ಆಗಬಹುದು. ಇದರ ಜೊತೆಗೆ ಕೃಷಿಯೂ ಕೂಡ ನಿಂತುಹೋಗುವಂತಹ ಸಾಧ್ಯತೆಯೂ ಇದೆ. ಹೀಗಾಗಿ ನನ್ನದೊಂದು ಸರ್ಕಾರಕ್ಕೆ ಸಲಹೆ ಏನೆಂದರೆ, ಯಾವ ರೀತಿಯಾಗಿ ಮಹಾರಾಷ್ಟ್ರದಲ್ಲಿರುವಂತಹ ದೂದ್‌ಗಂಗಾ ಜಲಾಶಯದಿಂದ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಕ್ಕೆ ಒಂದು ಒಡಂಬಡಿಕೆಯಾಗಿ ಆ ದೂದ್‌ಗಂಗಾದಿಂದ ಪ್ರತಿವರ್ಷ 4 ಟಿಎಂಸಿ ನೀರನ್ನು ಕೃಷಿಗಾಗಿ ಬಳಸುವ ಸಲುವಾಗಿಯೇ ನೀರನ್ನು ಬಿಡುವಂತಹ ಒಪ್ಪಂದ ಇದೆಯೋ, ಅದೇ ರೀತಿಯಾದಂತಹ ಒಪ್ಪಂದವು ಕೂಡ ಮಹಾರಾಷ್ಟ್ರದಲ್ಲಿರುವಂತಹ ಕೊಯಿನಾ ಜಲಾಶಯದೊಂದಿಗೆ ಕರ್ನಾಟಕ ಸರ್ಕಾರವು ಮಾಡಿಕೊಳ್ಳಬೇಕೆಂದು ಹೇಳಿ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಏಕೆಂದರೆ ಕೊಯಿನಾ ಜಲಾಶಯದಿಂದ ಒಂದೊಂದು ಬಾರಿ ನಮಗೆ ನೀರು ಬೇಡವಾದಾಗ ಅವರು ನೀರನ್ನು ಬಿಟ್ಟು ಬಿಡುತ್ತಾರೆ. ಮಳೆಗಾಲದಲ್ಲಿ ವಿಶೇಷವಾಗಿ ಅನೇಕ ಬಾರಿ ಸರ್ಕಾರದ ಗಮನಕ್ಕೆ ತಾರದೆ ನೀರನ್ನು ಬಿಟ್ಟಿದ್ದರಿಂದ ಭಾರಿ ದೊಡ್ಡ ಅನಾಹುತವು ನಮ್ಮ ರಾಜ್ಯದಲ್ಲಿ ಆಗಿದೆ. ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರು ಬೇಕು ಎಂದು ನಾವು ಪ್ರತಿಭಟಿಸುವಂತಹ ಸಂದರ್ಭದಲ್ಲಿ ನಾವು ಎಷ್ಟೇ ಸಲ ವಿನಂತಿಯನ್ನು ಮಾಡಿದರೂ ಕೂಡ ಮಹಾರಾಷ್ಟ್ರ ಸರ್ಕಾರದವರು ಆ ಬಗ್ಗೆ ಸಕಾರಾತ್ಮಕವಾದಂತಹ ಒಂದು ಪ್ರತಿಕ್ರಿಯೆಯನ್ನು ನೀಡದೆ ನೀರನ್ನು ಕೊಡದೆ ಸತಾಯಿಸಿರುವಂತಹ ಒಂದು ಉದಾಹರಣೆಯೂ ಇತಿಹಾಸದಲ್ಲಿ ಇದೆ. ಹೀಗಾಗಿ ಯಾವ ರೀತಿಯಾಗಿ ದೂದ್‌ಗಂಗಾ ಜಲಾಶಯಕ್ಕೆ ಸರ್ಕಾರದಿಂದ ಒಡಂಬಡಿಕೆ ಏನು ಒಪ್ಪಂದ ಇದೆ, ಅದೇ ರೀತಿಯಾಗಿ permanent ಆಗಿ ಒಂದು ವ್ಯವಸ್ಥೆಯಾಗಬೇಕು. ನಮಗೆ ಬೇಸಿಗೆಯಲ್ಲಿ ತೊಂದರೆಯಾಗಬಾರದೆಂಬ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರದವರ ಜೊತೆಗೆ ಪ್ರತಿವರ್ಷ ಬೇಸಿಗೆಯಲ್ಲಿ ಬರುವಂತಹ ವಿಶೇಷವಾದಂತಹ ಪರಿಸ್ಥಿತಿಯಲ್ಲಿ ಕೊಯಿನಾ ಜಲಾಶಯದಿಂದ ನಾವು ಕೇಳುವಂತಹ 2-3-4 ಟಿಎಂಸಿ ನೀರನ್ನು ಬಿಡುವಂತಹ ಒಂದು permanent agreement ಆಗಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಅದರ ಜೊತೆಗೆ ಸನ್ಮಾನ್ಯ ಮಂತ್ರಿಗಳು ಹಿಪ್ಪರಗಿ ಜಲಾಶಯದಲ್ಲಿ ಈ ಬಾರಿ 4.75 ಟಿಎಂಸಿ ನೀರು ಇದೆ ಎಂದು ಹೇಳಿದ್ದಾರೆ. ನನಗೆ ಅನಿಸುವಂತಹ ಮಟ್ಟಿಗೆ ಅಲ್ಲಿ ಚರ್ಚೆಯಾಗುವಂತಹ ವಿಷಯವೆಂದರೆ, ಈ ಹಿಪ್ಪರಗಿ ಜಲಾಶಯಕ್ಕೆ stop water gate ಎನ್ನುವಂತಹ ಒಂದು emergency gateನ್ನು ಮಾಡಬೇಕಾಗಿತ್ತು, ಅದನ್ನು ಅವರು ಮಾಡಲಿಲ್ಲ. ನಾರಾಯಣಪುರ ಜಲಾಶಯದಲ್ಲಿ ಬಹುಶಃ ಒಂದೆರಡು ಮೂರು ವರ್ಷಗಳ ಹಿಂದೆ ಅಲ್ಲಿ stop water gate ಏನಿತ್ತು ಆ ಗೇಟ್ ರಿಪೇರಿ ಇದ್ದುದರಿಂದ ನಮಗೆ ಯಾರಿಗೂ ಗೊತ್ತಾಗಲಿಲ್ಲ. ಸುಮಾರು 44 TMC ನೀರು ಆ ಜಲಾಶಯದಿಂದ ಹರಿದು ಆಂಧ್ರದ ಸಮುದ್ರದ ಕಡೆಗೆ ಹೋಯಿತು. ಅಕಸ್ಮಾತ್ ಆಗಿ ಒಳಹರಿವು ನಮಗೆ ಇರದೇ ಇದ್ದರೆ ಆ ಜಲಾಶಯವೇ ಖಾಲಿ ಖಾಲಿಯಾಗುತ್ತಿತ್ತು ಎನ್ನುವ ಒಂದು ಭಯ ಬರುತ್ತಿತ್ತು.

ಅಧ್ಯಕ್ಷರು: ಮಾನ್ಯ ಕುಲಕರ್ಣಿಯವರೆ, ತಾವು ಈಗ ಸ್ಪಷ್ಟೀಕರಣವನ್ನು ಕೇಳಬೇಕು.

ಶ್ರೀ ಶ್ರೀಕಾಂತ್ ಕುಲಕರ್ಣಿ:- ಆಗಬಹುದು ಸ್ವಾಮಿ, ಚರ್ಚೆ ಇರುವಂತಹ ವಿಷಯವೇನೆಂದರೆ, ಈ ಬಾರಿಗೆ ಈ stop log gateನ್ನು ಹಾಕಬೇಕೆನ್ನುವಂತಹ ನಿರ್ಧಾರವನ್ನು ಸರ್ಕಾರದವರು ಮಾಡಿದ್ದಾರೆಯೇ ಎನ್ನುವಂತಹ ಚರ್ಚೆ ಇದೆ.

ಅಕಸ್ಮಾತ್ ಅದನ್ನು ಮಾಡುವುದಾದರೆ ಹಿಪ್ಪರಗಿ ಜಲಾಶಯದ ನೀರನ್ನು ಖಾಲಿ ಮಾಡಬೇಕಾಗುತ್ತದೆ. ನೀರನ್ನು ಅಲ್ಲಿ ಇಟ್ಟುಕೊಂಡು ಗೇಟನ್ನು ಮಾಡುವುದಕ್ಕಾಗುವುದಿಲ್ಲ. ಅಕಸ್ಮಾತ್ ಫೆಬ್ರವರಿ–ಮಾರ್ಚಿಯ ಮೊದಲನೆಯ ವಾರದಲ್ಲಿ ನೀರನ್ನು ಬಿಟ್ಟರೆ ಮುಂಬರುವಂತಹ ಏಪ್ರಿಲ್–ಮೇ ತಿಂಗಳಲ್ಲಿ ಭಾರಿ ದೊಡ್ಡ ಸಮಸ್ಯೆಯಾಗಬಹುದು ಎಂದು ನಮಗೆಲ್ಲರಿಗೂ ಒಂದು ತರಹ ಭಯವು ನಿರ್ಮಾಣವಾಗಿದೆ. ಅದಕ್ಕಾಗಿ ಸರ್ಕಾರವು ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಂಡು ಮಹಾರಾಷ್ಟ್ರ ಸರ್ಕಾರದ ಮನವನ್ನು ಒಲಿಸಿ ಅದಕ್ಕೆ ಬೇಕಾಗುವಷ್ಟು ಹಣವನ್ನು ಕೊಟ್ಟು ಕೊಯ್ನಾ ಜಲಾಶಯದಿಂದ ನೀರನ್ನು ಬಿಡಿಸುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರವು ಮಾಡಬೇಕೆನ್ನುವಂತಹ ವಿಷಯಕ್ಕೆ ಮಾನ್ಯ ದೊಡ್ಡ ನೀರಾವರಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೆ, ತಾವು ಮಾತನಾಡುವುದು ಬೇಡ. ಇದು ಗಮನಸೆಳೆಯುವ ಸೂಚನೆ. ಯಾರು ಗಮನಸೆಳೆಯುವ ಸೂಚನೆಯನ್ನು ಕೊಟ್ಟಿರುತ್ತಾರೋ ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಇರುತ್ತದೆ. ನೀವು ಬೇರೆ ಸಂದರ್ಭದಲ್ಲಿ ಗಮನವನ್ನು ಸೆಳೆಯಿರಿ.

ಶ್ರೀ ಸಿದ್ದುಸವದಿ: ನನಗೆ ಒಂದೇ ಒಂದು ಅವಕಾಶವನ್ನು ಕೊಡಿ.

ಅಧ್ಯಕ್ಷರು: ಇಲ್ಲಾ, ಇಲ್ಲಾ, ನಾನು ಅವಕಾಶವನ್ನು ಕೊಡುವುದಿಲ್ಲ. No, ಒಂದು ಸಾರಿ ಗಮನ ಸೆಳೆಯುವ ಸೂಚನೆಗೆ ಯಾರು signature ಮಾಡಿರುತ್ತಾರೋ, ಯಾರು ಅದನ್ನು ಕಳುಹಿಸಿರುತ್ತಾರೋ ಅವರಿಗೆ ಮಾತ್ರ ಅವಕಾಶವನ್ನು ಕೊಡುತ್ತೇನೆ. ಮತ್ತೇ ಇದೇ ರೀತಿಯಾದರೆ ಈ ಬಗ್ಗೆ 10 ಮಂದಿ ಮಾತನಾಡುತ್ತಾರೆ. There is no end at all. No. ಇಲ್ಲಾ, ನೀವು ಪ್ರತ್ಯೇಕವಾಗಿ ಕೊಡಿ. ನೀವು ಪ್ರತ್ಯೇಕವಾಗಿ ನೋಟೀಸ್‌ನ್ನು ಕೊಡಿ. ನಾನು ತಮಗೆ ಅವಕಾಶವನ್ನು ಕೊಡುತ್ತೇನೆ. ಅದಕ್ಕೆ ಅಂತ್ಯವೇ ಇಲ್ಲ. ಮತ್ತೆ ಈ ಬಗ್ಗೆ ರೂಲ್ 69ರಲ್ಲಿ ಚರ್ಚೆ ಮಾಡುವಿರಂತೆ. ಅದು ಹಾಗೆಯೇ ಮತ್ತೆ ಚಾಲೋ ಆಗಿ ಬಿಡುತ್ತದೆ. ನೀವು ಬಜೆಟ್ ಮೇಲೆ ಚರ್ಚೆ ಮಾಡುವಾಗ ಮಾತನಾಡಿ. ಈಗ ಮಾತನಾಡುವುದು ಬೇಡ. ನಾನು ತಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ನೀವು ಪ್ರತ್ಯೇಕವಾಗಿ ಕೇಳಿ.

ಶ್ರೀ ಬಸವರಾಜಬೊಮ್ಮಾಯಿ(ಜಲಸಂಪನ್ಮೂಲ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಯಾವ ಸಲಹೆಗಳನ್ನು ಕೊಟ್ಟಿದ್ದಾರೆ, ಈಗಾಗಲೇ ಅದಕ್ಕೆ ಉತ್ತರದಲ್ಲಿ ಹೇಳಲಾಗಿದೆ. ಮೊದಲನೆಯದಾಗಿ, 4.75 ಟಿಎಂಸಿ ನೀರು ಇದೆ,

ಅದರಲ್ಲಿ 3.95 ಉಪಯೋಗಿಸಬಹುದು ಅಂತ. ಕಳೆದ ವರ್ಷ ಕೇವಲ ಅದು 1.90 ಇತ್ತು. ಈ ಸಾರಿ 3.95 ಇದೆ. ಅದರಿಂದಾಗಿ ಅಲ್ಲಿ ಎರಡರಷ್ಟು ನೀರು ಇದೆ. ಇನ್ನು ಎರಡನೆಯದಾಗಿ ಹೇಳುವುದಾದರೆ ಅವರಿಗೆ ಏನು ನೀರು ಬಿಡುತ್ತೇವೆ ಎನ್ನುವ ಆತಂಕವಿದೆ. ಈ ತರಹವಾಗಿ ನೀರನ್ನು ಬಿಡುವುದಿಲ್ಲ. ನೀರನ್ನು ಬಿಡುವುದು ಇದ್ದರೂ ಕೂಡ stop logನ್ನು ಹಾಕಿ ನೀರನ್ನು ಉಳಿಸಿಕೊಂಡೇ ಕೆಲಸವನ್ನು ಮಾಡುತ್ತೇವೆಯೇ ಹೊರತು ನಾವು ಯತೇಚ್ಚವಾಗಿ ಯಾವುದೇ stop log ಇಲ್ಲದೆ ನೀರನ್ನು ಬಿಡುವುದಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೊಯ್ನಾದಿಂದ ನೀರನ್ನು ಏನು ನೀವು permanent basisನಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ, ಅಲ್ಲಿ ಮಹಾರಾಷ್ಟ್ರ ಸರ್ಕಾರದವರು co-operate ಮಾಡುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅದು ಸತ್ಯಕ್ಕೆ ದೂರವಾದುದು. ನಾವು ಯಾವಾಗ ಮಹಾರಾಷ್ಟ್ರ ಸರ್ಕಾರದಿಂದ ನೀರನ್ನು ಕೇಳಿದ್ದೇವೆ, ನಮಗೆ ಅವರು ಬೇಸಿಗೆ ಕಾಲದಲ್ಲಿ ನೀರನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ 2006ರಲ್ಲಿ 2 ಟಿಎಂಸಿ ನೀರನ್ನು ಕೊಟ್ಟಿದ್ದಾರೆ. 2001ರಿಂದ 2006ರವರೆಗೆ ಅವರು ನಮಗೆ ನೀರನ್ನು ಕೊಟ್ಟಿದ್ದಾರೆ. 1993ರಿಂದಲೂ ಸಹ ಅವರು ನಮಗೆ ನೀರನ್ನು ಕೊಟ್ಟಿದ್ದಾರೆ. ಈಗಾಗಲೇ 24 ಕೋಟಿ ರೂಪಾಯಿಗಳು ಖರ್ಚಾಗಿದೆ. ಇದನ್ನು ದುಡ್ಡು ಕೊಟ್ಟು ತರುವಂತಹ ಒಂದು ನೀರು ಇದೆ. ಇದಕ್ಕೆ ಸಂದರ್ಭ ಒದಗಿ ಬಂದರೆ ಖಂಡಿತವಾಗಿ ಆ ಬಗ್ಗೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಸಂದರ್ಭ ಬಂದರೆ ಕೊಯ್ನಾದಿಂದ ನೀರನ್ನು ತಂದು ಜಮಖಂಡಿ ಭಾಗಕ್ಕೆ ನೀರನ್ನು ಒದಗಿಸಿಕೊಡುತ್ತೇವೆ. ಅದೇ ರೀತಿಯಾಗಿ ಬಿಜಾಪುರ ಭಾಗಕ್ಕೂ ಕೂಡ ನಮ್ಮ ಆಲಮಟ್ಟಿ ಮತ್ತು ನಾರಾಯಣಪುರದಿಂದ ಕೆನಾಲ್‌ಗಳ ಮೂಲಕ ನೀರನ್ನು ಹಿಂದೆಯೂ ಬಿಟ್ಟಿದ್ದೇವೆ. ಈ ವರ್ಷ ಅವಶ್ಯಕತೆ ಬಿದ್ದರೆ ನೀರನ್ನು ಒದಗಿಸುತ್ತೇವೆ. ಯಾವುದೇ ಕಾರಣಕ್ಕೆ ಜಮಖಂಡಿ ಆಗಿರಬಹುದು, ವಿಜಾಪುರದ ಯಾವುದೇ ಭಾಗವಾಗಿರಬಹುದು. ಅದು ತೇರದಾಳ ಇರಬಹುದು, ಯಾವುದೇ ಭಾಗಕ್ಕೂ ಕೂಡ ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಮಾನ್ಯ ಡಿ.ಕೆ.ಶಿವಕುಮಾರ್‌ರವರ ಪರವಾಗಿ ಮಾನ್ಯ ಟಿ.ಬಿ.ಜಯಚಂದ್ರರವರು ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತಾರೆ.

(ಇ) ವಿಷಯ: ರಾಮನಗರ ಜಿಲ್ಲೆ ಕನಕಪುರ ಪೇಟೆಯಲ್ಲಿ ಹಾದು ಹೋಗುವ ಕನಕಪುರ ಎಂ.ಜಿ.ರಸ್ತೆಯನ್ನು ಅಗಲಗೊಳಿಸಿ ಮೂಲಭೂತ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):- ರಾಮನಗರ ಜಿಲ್ಲೆ ಕನಕಪುರ ಪೇಟೆಯಲ್ಲಿ ಹಾದು ಹೋಗುವ ಕನಕಪುರ-ಎಂ.ಜಿ.ರಸ್ತೆಯು ರಾಷ್ಟ್ರೀಯ ಹೆದ್ದಾರಿ ರಸ್ತೆ – 209 ಬೆಂಗಳೂರು – ದಿಂಡುಗಲ್ ರಸ್ತೆಯ ಭಾಗವಾಗಿದ್ದು 2.70 ಕಿ.ಮೀ ಉದ್ದವಿರುತ್ತದೆ (ಸಂಪಳಿ 420.90 ರಿಂದ 423.60 ಕಿ.ಮೀ ವರೆಗೆ).

ಕನಕಪುರ ನಗರ ವ್ಯಾಪ್ತಿಯ 2.70 ಕಿ.ಮೀ ಉದ್ದದ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ರೂ. 15.77 ಕೋಟಿಗಳಿಗೆ 2008-09ನೇ ಸಾಲಿನ ಎನ್.ಹೆಚ್.ಓ ಯೋಜನೆಯಲ್ಲಿ ದಿನಾಂಕ: 22.12.2008ರಲ್ಲಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಈ ಅಂದಾಜನ್ನು ಕೇಂದ್ರ ಸರ್ಕಾರವು ಪರಿಷ್ಕೃತ ಹೆಚ್ಚುವರಿ ಯೋಜನೆಯಲ್ಲಿ ಸೇರಿಸಿದ್ದು ಅಂದಾಜು ಪತ್ರಿಕೆಗೆ ಮಂಜೂರಾತಿ ನಿರೀಕ್ಷಿಸಲಾಗಿದೆ.

ಈ ರಸ್ತೆಯ ಅಗಲೀಕರಣಕ್ಕೆ ಅವಶ್ಯವಾದ ಭೂಸ್ವಾಧೀನ ಹಾಗೂ ಕಟ್ಟಡಗಳ ಸ್ವಾಧೀನಕ್ಕೆ ರೂ. 14.60 ಕೋಟಿಗಳ ಅಂದಾಜಿಸಿದ್ದು ಈ ಬಗ್ಗೆ ಕಟ್ಟಡಗಳ ಮೌಲ್ಯಮಾಪನ ಅಂದಾಜು ರೂ. 3.58 ಕೋಟಿಗಳಾಗಿರುತ್ತದೆ. ಈ ಮಧ್ಯೆ ಸ್ವಾಧೀನ ಪರಿಹಾರವಾಗಿ ರೂ. 3.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಸಂಬಂಧಿಸಿದ ಅಧಿಕಾರಿಗಳಿಗೆ ನಿಯಮಾನುಸಾರ ಸ್ವಾಧೀನ ಪರಿಹಾರ ಪಾವತಿ ಮಾಡಲು ಸೂಚನೆ ನೀಡಲಾಗಿದೆ. ಈಗಾಗಲೇ ಕನಿಷ್ಠ ಮೂಲಭೂತ ಸೌಲಭ್ಯ ನೀಡುವ ಸಲುವಾಗಿ ರಸ್ತೆಯ ಕಾಮಗಾರಿ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕನಕಪುರ ಪುರಸಭೆಯು ಟೆಂಡರ್ ಆಹ್ವಾನಿಸಿರುವುದಾಗಿ ತಿಳಿದು ಬಂದಿರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) (ಮಾನ್ಯ ಡಿ.ಕೆ.ಶಿವಕುಮಾರ್‌ರವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಕನಕಪುರ ಪಟ್ಟಣದಲ್ಲಿ ರಸ್ತೆಯನ್ನು ಈಗಾಗಲೇ ಅಗಲೀಕರಣವನ್ನು ಮಾಡಿರುತ್ತಾರೆ. ಅಲ್ಲಿ ಅಗಲೀಕರಣವನ್ನು ಮಾಡಿರುವುದರಿಂದಾಗಿ ಅನೇಕ ಜನರು ಅಲ್ಲಿ ಭೂಮಿಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪರ್ಯಾಯವಾಗಿ ಭೂಮಿಯನ್ನು ಕೊಡುವ ಬಗ್ಗೆ ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಅವಕಾಶವಿದೆ. ಸರ್ವೆನಂ:305ರಲ್ಲಿ ಈಗಾಗಲೇ 4 ಎಕರೆ ಜಮೀನು ಇದೆ. ಅದು ಒಳ್ಳೆಯ ಜಾಗದಲ್ಲಿದೆ, ಅದು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿದೆ. ಬಹುಶಃ ಅಲ್ಲಿ ಭೂಮಿಯನ್ನು ಕಳೆದುಕೊಂಡಿರುವಂತಹವರನ್ನು ಗುರುತಿಸಿ ಪರ್ಯಾಯವಾಗಿ ಅವರಿಗೆ ಅದನ್ನು ಕೊಡುವಂತಹದನ್ನು ಮಾಡಿದರೆ ಬಹುಶಃ ಅವರು compensationನ್ನು ಕೇಳುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ ಇದು ಒಂದು ಮುಖ್ಯವಾಗಿರುವಂತಹ ವಿಚಾರವಾಗಿದೆ. ಇದರ ಬಗ್ಗೆ ಸರ್ಕಾರವು ಗಮನವನ್ನು ಹರಿಸಬೇಕಾಗಿದೆ. ಇನ್ನೊಂದು ವಿಚಾರವೆಂದರೆ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ

ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿರುವುದು ಅದು ಈ ವರ್ಷಕ್ಕೆ. ಮಾರ್ಚಿ ತಿಂಗಳು ಮುಗಿಯುವಂತಹ ಸಂದರ್ಭದಲ್ಲಿ ಅದು ಮಂಜೂರಾತಿ ಆಗುತ್ತದೆಯೇ? ಆ ರೀತಿಯಾಗಿ ತಾವು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತರುತ್ತೀರಾ ಎಂಬ ಪ್ರಶ್ನೆ. ಇನ್ನೊಂದು ಬಹಳ ಮುಖ್ಯವಾಗಿ ಹೇಳುವುದಾದರೆ ಇದು ಎಂಎಂಎಲ್‌ಗೆ ಸಂಬಂಧಿಸಿದಂತಹ ರಸ್ತೆಯಾಗಿದೆ. ಅವರು ಬಹಳಷ್ಟು ಎಂಎಂಎಲ್ ಕಾರ್ಯವ್ಯಾಪ್ತಿ ಬರುವಂತಹ ರಸ್ತೆಯನ್ನು ಉಪಯೋಗಿಸಿ ಹಾಳುಮಾಡಿರುವಂತಹ ಸಂದರ್ಭದಲ್ಲಿ ಅವರ ಹತ್ತಿರ ಸಾಕಷ್ಟು ಹಣವಿದೆ. ಈಗಾಗಲೇ ಆ ಭಾಗದ ಶಾಸಕರು ಕೂಡ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರದ ಮುಖೇನ ಮುಖ್ಯಮಂತ್ರಿಯವರ ಗಮನವನ್ನು ಸೆಳೆದು ಸುಮಾರು 10 ಕೋಟಿ ರೂಪಾಯಿಗಳನ್ನು ರಸ್ತೆ ಅಗಲೀಕರಣದ ಬಗ್ಗೆ ಮೂಲಭೂತ ಸೌಕರ್ಯವನ್ನು ಮಾಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಅದರ ಮೇಲೆ ತಾವು ಒತ್ತಾಯವನ್ನು ತರುವಂತಹ ಕೆಲಸವನ್ನು ಮಾಡುತ್ತೀರಾ? ಈಗಾಗಲೇ ತಾವು ಮುನಿಸಿಪಾಲಿಟಿಯ ವ್ಯಾಪ್ತಿಯಲ್ಲಿ ಚರಂಡಿ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ತಾವು ಸೂಚನೆಯನ್ನು ಕೊಟ್ಟಿದ್ದೀರೆಂದು ಹೇಳುತ್ತೀರಿ. ನೀವು 3 ಕೋಟಿ ರೂಪಾಯಿಗಳನ್ನು ಕೆಆರ್‌ಡಿಸಿಎಲ್‌ಗೆ ಕೊಟ್ಟಿದ್ದೀರಿ. ಆದರೆ ಅವರು ಇದುವರೆಗೂ ಯಾವುದೇ ಹಣವು ಬಂದಿಲ್ಲವೆಂಬ ಮಾತನ್ನು ಪದೇಪದೇ ಹೇಳುತ್ತಿದ್ದಾರೆ. ತಾವು ಕೊಟ್ಟಿರುವ ಸೂಚನೆಯೂ ಇದೆ. ಆದೇಶವೂ ಕೂಡ ಇದೆ. ಇವತ್ತು ಕೆಆರ್‌ಡಿಸಿಎಲ್‌ನಲ್ಲಿ action ಆಗಬೇಕಾಗಿದೆಯೇ ವಿನಃ ಮುನಿಸಿಪಾಲಿಟಿಯ ಪ್ರಶ್ನೆ ಬರುವುದಿಲ್ಲ. ಮುನಿಸಿಪಾಲಿಟಿಯಲ್ಲಿ ಆಗಿರುವಂತಹದ್ದು ಬೇರೆ ರಸ್ತೆಗೆ. ದಯಮಾಡಿ ಅಲ್ಲಿ duplication ಆಗಿದೆ. ಅದನ್ನು ತಾವು ಗಮನಿಸಿ. ಕೆಆರ್‌ಡಿಸಿಎಲ್ ಮುಖೇನ ನೀವು 3 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತೀರಿ. ಅವರು ಮೂಲಭೂತವಾಗಿ ಚರಂಡಿ ಕೆಲಸವನ್ನು ಪ್ರಾರಂಭ ಮಾಡಿದರೆ ಅದು ಸರಿಯಾಗುತ್ತದೆ. ಅವರು ಬಿಟ್ಟು ಬೇರೆಯವರು ಮಾಡಿದರೆ ಅದು ಸರಿಯಾಗುವುದಿಲ್ಲ. ದಯಮಾಡಿ ತಾವು duplication ಆಗುವುದಕ್ಕೆ ಅವಕಾಶವನ್ನು ತಾವು ಕೊಡಬಾರದು. ಇವೆಲ್ಲವನ್ನು ಸರ್ಕಾರವು ಗಮನದಲ್ಲಿಟ್ಟುಕೊಂಡು ಸಮಗ್ರವಾದಂತಹ ಚಿಂತನೆಯನ್ನು ಮಾಡಿ ಉತ್ತರವನ್ನು ತಾವು ಕೊಡಬೇಕು.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಭೂಸ್ವಾಧೀನ ಪ್ರಕರಣದಲ್ಲಿ ಪ್ರತ್ಯೇಕವಾದ 4 ಎಕರೆ ಜಮೀನು ಇದೆ. ಅದನ್ನು ಕೊಡುವುದಕ್ಕೆ ಸಾಧ್ಯವಿದ್ದರೆ ಪರಿಹಾರವನ್ನು ಕೇಳುವುದಿಲ್ಲವೆಂಬ ಪ್ರಸ್ತಾವನೆಯನ್ನು ಇಲ್ಲಿ ಅವರು ಪ್ರಸ್ತಾಪವನ್ನು ಮಾಡುತ್ತಿದ್ದಾರೆ.

ಈ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಚರ್ಚೆಯನ್ನು ಮಾಡುತ್ತೇನೆ. ಅದು ಸಾಧ್ಯವಾಗುವುದಾದರೆ ಆ ರೀತಿಯಾಗಿ ಅವರಿಗೆ 4 ಎಕರೆ ಜಮೀನಿನಲ್ಲಿ ಭೂಮಿಯನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆಂಬುದು ಒಂದು ಮಾತು. ಈ ಪ್ರಸ್ತಾವನೆಯೂ ಕೇಂದ್ರಸರ್ಕಾರದಲ್ಲಿರುವುದನ್ನು ಶೀಘ್ರದಲ್ಲಿ ಅದಕ್ಕೆ ಅನುಮೋದನೆಯೂ ದೊರೆಯುತ್ತದೆ ಎಂಬುದು, ಅದು ಎರಡನೆಯ ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ನಮ್ಮ ಮುಖ್ಯ ಅಭಿಯಂತರರು ಆ ಬಗ್ಗೆ ದೆಹಲಿಗೆ ಹೋಗಿ ಇದರ ಬಗ್ಗೆ ಶೀಘ್ರದಲ್ಲಿ ಅನುಮತಿಯೂ ಚುನಾವಣೆಯ ಹಿನ್ನೆಲೆಯಲ್ಲಿ ಬೇಗ ಸಿಗುತ್ತದೆ ಎಂಬ ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇದರ ಜೊತೆಗೆ ಎಂಎಂಎಲ್ ಬಗ್ಗೆ 10 ಕೋಟಿ ರೂಪಾಯಿಗಳನ್ನು ಅವರು ವ್ಯಯಮಾಡುವುದಕ್ಕೆ ತಯಾರಿದ್ದಾರೆನ್ನುವಂತಹ ಮಾತನ್ನು ಈಗ ತಾವು ನನ್ನೆದುರಿಗೆ ಪ್ರಸ್ತಾಪ ಮಾಡಿದ್ದೀರಿ. ನಾನು ಇಲಾಖಾಧಿಕಾರಿಗಳ ಜೊತೆ ಮತ್ತೊಮ್ಮೆ ಚರ್ಚೆ ಮಾಡಿ ಆ ಬಗ್ಗೆ ವ್ಯವಸ್ಥೆ ಮಾಡುತ್ತೇನೆ. ತಾವು ಗಮನಿಸಿರುವುದು ಏನೆಂದರೆ, ನಗರಸಭೆಯವರಿಗೆ ಸೂಚನೆಯನ್ನು ಕೊಟ್ಟಿರಬೇಕಾದಾಗ ಒಂದೇ ಕೆಲಸಕ್ಕೆ ಎರಡು ಕಡೆಗೆ ಹಣ ಪಾವತಿಯಾಗಬಹುದು, duplication ಆಗಬಹುದು ಎನ್ನುವಂತಹ ಅರ್ಥದಲ್ಲಿ ತಾವು ಮಾತನಾಡಿರುವುದನ್ನು ನನ್ನ ಗಮನಕ್ಕೆ ತಂದಿದ್ದೀರಿ. ಆ ರೀತಿಯಾಗದ ಹಾಗೆ ನೋಡಿಕೊಳ್ಳುವುದು, ಇದರ ಜೊತೆಗೆ 3 ಕೋಟಿ ರೂಪಾಯಿಗಳನ್ನು ಕೆಆರ್‌ಡಿಸಿಎಲ್‌ನಲ್ಲಿ ಹಣವಿದೆ ಎನ್ನುವಂತಹ ಮಾತನ್ನು ತಾವು ಹೇಳಿದ್ದೀರಿ. ಇದನ್ನು ಭೂಸ್ವಾಧೀನಕ್ಕಾಗಿ ಖರ್ಚುಮಾಡುವುದರ ಸಲುವಾಗಿಯೇ ಈ ಹಣವನ್ನು ಇಟ್ಟಿರುವುದು ಎಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅತೀ ಶೀಘ್ರದಲ್ಲಿಯೇ ಈ ರಸ್ತೆಯ ಅಗಲೀಕರಣ ಮಾಡುವಂತಹ ಕೆಲಸಕ್ಕೆ ಆದ್ಯತೆಯನ್ನು ಕೊಟ್ಟು ಕೆಲಸವನ್ನು ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ವಿಷಯ: ಶಾಸಕರ ಭವನದಲ್ಲಿ ಲೋಕಾಯುಕ್ತರು ರೈಡ್ ಮಾಡಿರುವ ಬಗ್ಗೆ

6.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶ್ರೀ ಮಲ್ಲಿಕಾರ್ಜುನ್ ಖರ್ಗೆ (ವಿರೋಧ ಪಕ್ಷದ ನಾಯಕರು):- ಸಭಾಧ್ಯಕ್ಷರೇ, ನಾನು ಒಂದು ನೋಟೀಸನ್ನು ಕೊಟ್ಟಿದ್ದೆ. ಅದು ಶಾಸಕರ ಭವನದಲ್ಲಿ ಲೋಕಾಯುಕ್ತರು ರೈಡ್ ಮಾಡಿ ಅದನ್ನು ಹಿಡಿದು ಕೇಸ್ ರಿಜಿಸ್ಟರ್ ಮಾಡಿದ್ದಾರೆ.

ಅಧ್ಯಕ್ಷರು:- ಶ್ರೀ ಜಯಚಂದ್ರರವರು ಬಂದಿದ್ದರು. ಈ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇವೆಂದು ಹೇಳಿದ್ದರು. ಆದರೆ ಶೂನ್ಯವೇಳೆಯಲ್ಲಿ ಈ ರೀತಿ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಬರುವುದಿಲ್ಲವೆಂದು ನನ್ನ ಅಭಿಪ್ರಾಯ.

ಬೇರೆ ಯಾವುದಾದರೂ ನಿಯಮಗಳಿದ್ದರೆ ಅದರಲ್ಲಿ ಚರ್ಚೆ ಮಾಡೋಣ. ನೀವೇ ಯಾವುದಾದರೂ ರೂಲ್ಸ್ ಇದ್ದರೆ ಪ್ರಸ್ತಾಪ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಬೇರೆ ಇನ್ನಾವ ರೂಲ್‌ನಲ್ಲಿ ಬರುತ್ತದೆಂದು ನೀವೇ ಹೇಳಿ.

ಅಧ್ಯಕ್ಷರು:- ಇಲ್ಲ. ನೀವೇ ಬೇರೆ ಯಾವುದಾದರೂ ರೂಲ್‌ನಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶವಿದ್ದರೆ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಯಾರು ಈ ರೀತಿಯಾಗಿ ಮಾಡುತ್ತಾರೆ, ಸರ್ಕಾರ ಅವರಿಗೆ ಮಣೆ ಹಾಕಿ ಇಂಥದ್ದನ್ನು ಮುಚ್ಚುತ್ತಾರೆ ಎನ್ನುವಂಥ ಪ್ರವೃತ್ತಿ ಇದೆ ಎಂದು ಈಗಾಗಲೇ ಎಲ್ಲಾ ಮಾಧ್ಯಮದಲ್ಲಿಯೂ ಕೂಡ ವರದಿಯಾಗಿದೆ. ಹಾಗಾಗಿ ಯಾರೇ ಇರಲಿ, ಶಾಸಕರ ಸ್ನೇಹಿತರೇ ಇರಲಿ, ನಾವು ನಿಷ್ಪಕ್ಷಪಾತವಾಗಿ ಅಂಥ ವಿಷಯಗಳನ್ನು ಪರಿಗಣಿಸಿ ಅವರಿಗೆ ಶಿಕ್ಷೆ ಆದರೆ ಮುಂದೆ ಇದನ್ನು ಮಾಡಬಾರದೆಂಬ ಭಯ ಭೀತಿ ಬೇರೆಯವರಲ್ಲಿಯೂ ಕೂಡ ಬರುತ್ತದೆ. ಇಲ್ಲವಾದರೆ ಏನಾಗುತ್ತದೆಂದರೆ, ಈಗ ಯಾರೋ ಒಬ್ಬರು ಇವತ್ತು 5.00 ಲಕ್ಷ ಅಥವಾ 10.00 ಲಕ್ಷ ರೂ.ಗಳಿಗೆ ಸಿಕ್ಕಿಬಿದ್ದಿರಬಹುದು. ದಿನವೂ ಐದು ಅಥವಾ ಹತ್ತು ಲಕ್ಷ ರೂ.ಗಳನ್ನು ತೆಗೆದುಕೊಂಡು ಹೋಗುವವರು ಅನೇಕ ಜನರು ಇದ್ದಾರೆ. ನಾವು ಅವರ ಹೆಸರುಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ನೀವು proof ಕೇಳುತ್ತೀರಿ. Proof ದೊರೆತರೆ ನಾನು ತಂದುಕೊಡಬಹುದು. ಆದರೆ ಅನೇಕ ಸಾರಿ ಏನಾಗುತ್ತದೆಂದರೆ ಇವೆಲ್ಲ ಗೊತ್ತಿದ್ದರೂ ಕೂಡ ಇದಕ್ಕೆ ಕನಿಷ್ಠ ಒಂದು ಕಡಿವಾಣ ಹಾಕಿದ ಹಾಗೆ ಆಗುತ್ತದೆ. ಅದಕ್ಕಾಗಿ ನೀವು ಚರ್ಚೆಗೆ ತೆಗೆದುಕೊಂಡರೆ ಈ ವಿಚಾರವನ್ನು ಯಾವ ರೀತಿಯಾಗಿ ಬಗೆಹರಿಸಬಹುದು ಅಥವಾ ಇದನ್ನು disqualify ಮಾಡುವಂಥದ್ದನ್ನು ಮಾಡುವಿರೋ? ಅಥವಾ ಇದೇ ರೀತಿಯಾದಂಥ ಕೇಸುಗಳನ್ನು ಪಾರ್ಲಿಮೆಂಟರಿಯಲ್ಲಿ ಪ್ರಸ್ತಾಪ ಮಾಡಿದಾಗ ಅವರು ಯಾವ ರೀತಿಯಾಗಿ ಕ್ರಮ ಜರುಗಿಸುತ್ತಾರೆ ನೋಡಬೇಕು. ಏಕೆಂದರೆ ಇದು ಇಡೀ ಸದನಕ್ಕೆ ಸಂಬಂಧಪಟ್ಟಂತೆ ವಿಚಾರವಾದ ಕಾರಣ ಮತ್ತು ಒಬ್ಬ ಸದಸ್ಯರ ಪ್ರಶ್ನೆಯೂ ಕೂಡ ಇದರಲ್ಲಿ involve ಆದಕಾರಣ ಅದರ ಬಗ್ಗೆ ಬಹಳ ಗಂಭೀರವಾಗಿ ಚರ್ಚೆ ಮಾಡುವ ಅವಶ್ಯಕತೆ ಇದೆ. ಹಾಗೆಯೇ ಇದರ ಬಗ್ಗೆ ಕ್ರಮವನ್ನು ಜರುಗಿಸುವುದು ಕೂಡ ಬಹಳ ಮುಖ್ಯ. ಯಾರನ್ನೂ isolate ಮಾಡಿ, target ಮಾಡಿ ಅವರ ತೇಜೋವಧೆಯನ್ನು ಮಾಡುವಂಥ ಪ್ರಶ್ನೆ ಇಲ್ಲಿಲ್ಲ, ಆದರೂ ಕೂಡ ಇಂಥ ಒಂದು ವ್ಯವಸ್ಥೆ ಆಡಳಿತದಲ್ಲಿ ನಡೆದರೆ ಅಥವಾ ಶಾಸಕರಿಗೆ ಇಷ್ಟೊಂದು ಧೈರ್ಯ ಬಂದರೆ ಹೇಗೆ? ನಾನು ಆ ಕೇಸುಗಳನ್ನು ವಾಪಸ್ಸು ತೆಗೆಸಿಕೊಡುತ್ತೇನೆ, ನಿಮ್ಮ ಮೇಲೆ ದಬ್ಬಾಳಿಕೆ ನಡೆದಿದ್ದರೆ

ಅದನ್ನು ಸರಿಪಡಿಸುತ್ತೇನೆ, ಅಥವಾ ನಿಮ್ಮ ಕೆಲಸಗಳನ್ನು ಮಾಡಿಸಿಕೊಡುತ್ತೇನೆ, ನಿಮ್ಮ ವರ್ಗಾವಣೆಗಳನ್ನು ಮಾಡಿಸಿಕೊಡುತ್ತೇನೆ. ಇಂಥವು ಅನೇಕವಿರುತ್ತವೆ. ಅದಕ್ಕೆ ನಾನು ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ನೋಟಿಸ್ ಅನ್ನು ತಮಗೆ ಕಳುಹಿಸಿದ್ದೆನು. ಏಕೆಂದರೆ ನೀವು ಇದರ ಬಗ್ಗೆ ರಕ್ಷಣೆ ಮಾಡುವಂಥವರು. ನನಗೆ ಅನ್ನಿಸಿದ ಮಟ್ಟಿಗೆ ನಿಜವಾಗಿಯೂ ನೋಡಿದಾಗ ಇದು ನಿಮ್ಮ ವ್ಯಾಪ್ತಿಗೆ ಬರುತ್ತದೆ. ತಾವು ವಿಧಾನ ಸಭೆ ಹಾಗೂ ಶಾಸಕರ ಭವನದ ಎಲ್ಲಾ ಉಸ್ತುವಾರಿ ನೋಡಿಕೊಂಡು ಹೋಗುವವರು. ನಿಮ್ಮ ಕಣ್ಣೆದುರೇ ನಿಮ್ಮ ಅಧೀನದಲ್ಲಿರುವಂಥ ಶಾಸಕರ ಭವನದಲ್ಲಿ ಈ ರೀತಿ ಘಟನೆ ನಡೆದರೆ ಇದಕ್ಕೆ ಯಾವುದೇ ಒಂದು ಶಿಕ್ಷೆ ಇಲ್ಲ; ಅಥವಾ ಇದಕ್ಕೆ ಯಾವುದೇ ಒಂದು ಕಡಿವಾಣವಿಲ್ಲವೆಂದರೆ ಯಾವ ರೀತಿಯಾಗಿ ನಾವು ನಡೆದುಕೊಳ್ಳಬೇಕೆಂದು ತಾವು ಹೇಳಬೇಕು.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಮಾನ್ಯ ಜಯಚಂದ್ರರವರು ಸಹ ನಮ್ಮ ಛೇಂಬರ್‌ಗೆ ಬಂದು request ಮಾಡಿದ್ದರು. ಆಗಲೂ ಸಹ ಈ ಬಗ್ಗೆ ಶೂನ್ಯವೇಳೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲ. ಏಕೆಂದರೆ ಶೂನ್ಯವೇಳೆಯಲ್ಲಿ ತುರ್ತಾದಂಥ ವಿಷಯಗಳ ಬಗ್ಗೆ ಅದರಲ್ಲಿಯೂ ಸದನ ನಿನ್ನೆ ಮುಗಿದು ಇವತ್ತಿನ ಬೆಳಿಗ್ಗೆ ಮತ್ತೆ ಪ್ರಾರಂಭವಾಗುವುದರೊಳಗೆ ಏನಾದರೂ ಘಟನೆಗಳು ನಡೆದಂಥ ಸಂದರ್ಭದಲ್ಲಿ ಅಂಥ ವಿಷಯಗಳನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬಹುದು, ಸರ್ಕಾರದ ಗಮನ ಸೆಳೆಯಬಹುದು. ಶೂನ್ಯವೇಳೆಯಲ್ಲಿ ಸರ್ಕಾರ ಉತ್ತರ ಹೇಳಬೇಕೆನ್ನುವ ನಿಯಮ ಸಹ ಇಲ್ಲ. ಹೀಗಾಗಿ ಇಂಥ ಪರಿಸ್ಥಿತಿ ಇದ್ದಾಗ ಗಂಭೀರವಾಗಿರುವ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದರೆ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಎಷ್ಟು ಸಾಧ್ಯತೆ ಇದೆಯೆಂಬುದು ತಮ್ಮ ಅವಲೋಕನೆಗೆ ಬಿಡುತ್ತೇನೆ. ಈಗ ಸರ್ಕಾರದವರು ಏನು ಹೇಳುತ್ತಾರೆಯೋ ನೋಡೋಣ. ಆದರೆ ನೀವು ಈ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ಪತ್ರವನ್ನು ಕೊಟ್ಟರೆ ಅದಕ್ಕೆ ನಾವು ಅವಕಾಶ ಕೊಡಬಹುದು ಎಂದು ನನ್ನ ಭಾವನೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ನಮ್ಮ ನಾಯಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಘಟನೆ ಸದನದ ಗೌರವಾನ್ವಿತ ಸದಸ್ಯರಿಗೆ ಸಂಬಂಧಿಸಿದ್ದು ತಮ್ಮ ವ್ಯಾಪ್ತಿಯಲ್ಲಿ ಬರುವಂಥ ಒಂದು ನಿರ್ದಿಷ್ಟವಾದ ಜಾಗದಲ್ಲಿ ಆಗಿರುವಂಥ ಒಂದು ಕೃತ್ಯ. ಇದು ಸಾರ್ವಜನಿಕವಾಗಿ ಮಹತ್ವವಾಗಿರುವ ವಿಚಾರವಾಗಿದೆ. ಇವತ್ತು ಲೋಕಾಯುಕ್ತ ಸಂಸ್ಥೆ ಕೇವಲ ಅಧಿಕಾರಿಗಳು ಅಕ್ರಮವಾಗಿ ಪಡೆಯುವ ಹಣ ಇತ್ಯಾದಿ ವಿಷಯಗಳಲ್ಲಿ ರೈಡ್

ಮಾಡುವುದು, ಶಿಕ್ಷೆ ಕೊಡಿಸುವುದನ್ನು ನೋಡುತ್ತಿದ್ದೇವೆ ಆದರೆ ಶಾಸಕರ ಭವನದಲ್ಲಿ ಬಂದು ಶಾಸಕರನ್ನು ಹಿಡಿಯುವಂಥ ಕೆಲಸವನ್ನು ಮಾಡಿರುವುದು. ಆ ವಿಚಾರವನ್ನು ನಾವು ಪ್ರಸ್ತಾಪ ಮಾಡಬೇಕಾದಾಗ ಯಾವ ನಿಯಮಾವಳಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಉದ್ಭವಿಸಿದರೆ, ಶಾಸಕರು ತಪ್ಪು ಮಾಡಿದರೆ ಅದಕ್ಕೆ ನಿಯಮಾವಳಿಯೇ ಇಲ್ಲವೇ ಎಂಬ ತಪ್ಪು ಸಂದೇಶ ಜನರಿಗೆ ಹೋಗುತ್ತದೆ.

ಅಧ್ಯಕ್ಷರು:- ಜಯಚಂದ್ರರವರೇ, ನಾನು ಚರ್ಚೆ ಮಾಡಬೇಡಿ ಎಂದು ಹೇಳುತ್ತಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ದಯಮಾಡಿ, ಈ ಕೃತ್ಯ ನಡೆದ ನಂತರ ವಿಧಾನ ಸಭೆ ಕಲಾಪ ನಡೆಯುತ್ತಿರುವುದು. ಈ ಸಂದರ್ಭ ಬಿಟ್ಟು ಬೇರೆ ಯಾವ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕಾಗುತ್ತದೆ?

ಅಧ್ಯಕ್ಷರು:- ಇದಕ್ಕೆ ಬೇರೆ ಬೇರೆ ರೂಪಗಳಲ್ಲಿ ಚರ್ಚೆಗೆ ಅವಕಾಶಗಳಿವೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡಬೇಡಿ, ಚರ್ಚೆ ಮಾಡಬೇಡಿ ಎಂದು ನಿಮಗೆ ಹೇಳುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಈ ವಿಚಾರ ತಮ್ಮ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ ಯಾವ ರೀತಿಯಾಗಿ ತಾವು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಿ. ಸಾರ್ವಜನಿಕವಾಗಿ ಮೂಡಿರುವ ಈ ಸಂಶಯವನ್ನು ನಿವಾರಿಸಲೋಸುಗ ಮತ್ತು ಮಾನ್ಯ ಸದಸ್ಯರು ತಪ್ಪಿತಸ್ಥರಾಗಿರುವುದರ ಬಗ್ಗೆ ತಾವು ಯಾವ ರೀತಿ ಕ್ರಮವನ್ನು ತೆಗೆದುಕೊಂಡಿದ್ದೀರಿ? ತಮ್ಮನ್ನು ಈ ಬಗ್ಗೆ ಪ್ರಶ್ನೆ ಮಾಡುತ್ತೇನೆಂಬುದಲ್ಲ. ಸರ್ಕಾರ ಏನು ಕೆಲಸ ಮಾಡಿದೆ ಎನ್ನುವಂಥ ವಿಚಾರವನ್ನಾದರೂ ಇವತ್ತು ಸಭೆಯ ಗಮನಕ್ಕೆ ತಿಳಿಸಬೇಕಾಗುತ್ತದೆ. ಸಾರ್ವಜನಿಕರಿಗೂ ಕೂಡ ಇದರ ಬಗ್ಗೆ ಗೊತ್ತಾಗಬೇಕಾಗುತ್ತದೆ. ಆ ಕಾರಣಕ್ಕೋಸ್ಕರವಾದರೂ ಇವತ್ತು ನಾವು ನೀವು ಕುಳಿತಾಗಲೂ ಸಹ ಯಾವ ನಿಯಮಾವಳಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕು? ಈ ವಿಚಾರ ಸಾರ್ವಜನಿಕವಾಗಿ ಮಹತ್ವವಾಗಿರುವಂಥದ್ದು, ಶಾಸಕರು ಈ ರೀತಿಯಾದ ಕೃತ್ಯದಲ್ಲಿ ಭಾಗವಹಿಸಿರಬೇಕಾದಾಗ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತಾರೆಂದು ಜನ ಇವತ್ತು ನಮ್ಮ ಕಡೆ ನೋಡುತ್ತಿದ್ದಾರೆ. ನಾವು ಇದಕ್ಕೆ support ಮಾಡುತ್ತೇವೆಯೋ ಅಥವಾ reject ಮಾಡುತ್ತೇವೆಯೋ ಎಂಬ ಅನುಮಾನ ಇರುವಂಥ ಸಂದರ್ಭದಲ್ಲಿ ಇದು ಬಹಳ ಮಹತ್ವಾಗಿರುವಂಥ ವಿಚಾರ. ಹಾಗಾಗಿ ಈ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶವನ್ನು ಕೊಡಲೇಬೇಕಾಗುತ್ತದೆ. ಯಾವ ನಿಯಮದಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂಬ ಬಗ್ಗೆ ತಮಗೆ ಪರಮೋಚ್ಛ ಅಧಿಕಾರವಿದೆ. ದಯಮಾಡಿ ತಾವು ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರ ಏನು ಕ್ರಮ

ತೆಗೆದುಕೊಂಡಿದೆ? ಲೋಕಾಯುಕ್ತದವರು ಏನು ಮಾಡಿದ್ದಾರೆ? ಇವೆಲ್ಲಾ ವಿಚಾರಗಳು ಸಹ ಸಾರ್ವಜನಿಕರಿಗೆ ಗೊತ್ತಾಗಬೇಕು. ಅದಕ್ಕೋಸ್ಕರ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಪ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರದಲ್ಲಿ ಎರಡು ಭಾಗವಿದೆ, ಒಂದು ಶಾಸಕರನ್ನು ಬಂಧಿಸಿರುವ ಬಗ್ಗೆ ಮತ್ತೊಂದು ಇಬ್ಬರು ಶಾಸಕರು ಹೋಗಿ ಅನುಚಿತವಾಗಿ ವರ್ತಿಸಿರುವ ಬಗ್ಗೆ. ಸನ್ಮಾನ್ಯ ಸಭಾಧ್ಯಕ್ಷರೇ, ತಾವು ಹೇಳಿದಂತೆ ಇದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವಂಥ ವಿಚಾರವಲ್ಲ. ಇದು ಇಡೀ ರಾಜ್ಯದ ಗಮನವನ್ನು ಸೆಳೆದಿರುವಂಥ ಬಹಳ ಸೂಕ್ಷ್ಮವಾದ ವಿಚಾರ. ಸದನದ ಕಲಾಪ ನಿನ್ನೆ ದಿವಸ ಮುಕ್ತಾಯಗೊಂಡು ಪುನಃ ಇವತ್ತಿನ ದಿವಸ ಮತ್ತೆ ಕಲಾಪ ಪ್ರಾರಂಭವಾಗುವ ವೇಳೆಗೆ ಏನಾದರೂ ಘಟನೆ ಸಂಭವಿಸಿದ್ದರೆ ಅದರ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬಾರದೆಂದು ನಾವು ಹೇಳಿದ್ದೇವೆಯೇ ಹೊರತು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಬಾರದೆಂದೇನೂ ನಾವು ಹೇಳುತ್ತಿಲ್ಲ. ಇಡೀ ರಾಜ್ಯದ ಗಮನ ಸೆಳೆದಿರುವಂಥ ಒಂದು ಗಂಭೀರವಾದ ವಿಚಾರವಾಗಿದ್ದು ಸದನದ ಮರ್ಯಾದೆಯ ಪ್ರಶ್ನೆ ಕೂಡ ಆಗಿದೆ. ಈಗ ಈ ಒಂದು ಪ್ರಕರಣ ನಗರದ 22ನೇ ಅಡಿಷನಲ್ ಸೆಷನ್ಸ್ ನ್ಯಾಯಾಲಯದ ಮುಂದೆ ವಿಚಾರಣಾಧೀನವಾಗಿದೆ. ಒಂದು ಕೇಸು ವಿಚಾರಣಾಧೀನವಾಗಿರುವಾಗ ಇಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡುವುದು ಎಷ್ಟರ ಮಟ್ಟಿಗೆ ಸೂಕ್ತ? ಅದು sub-judice ಆಗುವುದಿಲ್ಲವೆ ಎನ್ನುವುದು ಕೂಡ ಒಂದು ಪ್ರಶ್ನೆ. ಅದನ್ನು ನಾವು ಇವತ್ತು ಯೋಚನೆ ಮಾಡಬೇಕು. ವಿಶೇಷವಾಗಿ ಲೋಕಾಯುಕ್ತ ವ್ಯವಸ್ಥೆ ಬಗ್ಗೆ ಜನತೆಗೆ ಹಾಗೂ ಸರ್ಕಾರಕ್ಕೂ ಕೂಡ ಬಹಳ ಗೌರವವಿದೆ. ಅವರ ಕಾರ್ಯಾಚರಣೆಯ ಬಗ್ಗೆ ಪೂರ್ಣವಾದ ಸ್ವಾತಂತ್ರ್ಯವಿದೆ. ಎರಡನೆಯ ವಿಚಾರವಾಗಿ ಬಿಜೆಪಿಯ ಇಬ್ಬರು ಶಾಸಕರು ಹೋಗಿ ಲೋಕಾಯುಕ್ತರ ಮೇಲೆ ಅನುಚಿತವಾಗಿ ವರ್ತಿಸಿದ್ದಾರೆಂದು ಹೇಳಿದ್ದೀರಿ. ಅದರ ಬಗ್ಗೆ ಯಾವುದೇ ರೀತಿಯ ದೂರು ಕೂಡ ದಾಖಲಾಗಿಲ್ಲ. ಯಾವುದೇ ರೀತಿಯ ಮಾಹಿತಿ ಸರ್ಕಾರಕ್ಕೂ ಬಂದಿಲ್ಲ. ಮಾಧ್ಯಮಗಳಲ್ಲಿ ನಾವು ಓದಿದ್ದೇವೆ. ಇವತ್ತು ಮಾಧ್ಯಮಗಳಲ್ಲಿ ಬಂದಿರುವ ವರದಿಯ ಆಧಾರದ ಮೇಲೆ ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಪ್ರಸ್ತಾಪ ಮಾಡುತ್ತಿದ್ದೀರಿ. ಕೇವಲ ಮಾಧ್ಯಮಗಳಲ್ಲಿ ಬಂದಿರುವುದನ್ನು ಆಧಾರವಾಗಿಟ್ಟುಕೊಂಡು ನಾವು ಚರ್ಚೆ

ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ. ಇವತ್ತು ಈ ವಿಚಾರವನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ. ಪಾರ್ಲಿಮೆಂಟ್‌ನಲ್ಲಿ ಇಂಥ ವಿಚಾರಗಳು ಬಂದಾಗ ಅವರು ಒಂದು Ethics committee ಎಂದು ಮಾಡಿ ಆ ಕಮಿಟಿಯ ಮೂಲಕ ಇಂಥ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿ ಇದನ್ನು ಕೊನೆಗಳಿಸಬೇಕೆಂಬ ಒಂದು ಪದ್ಧತಿ ಇದೆ. ನಮ್ಮ ಸದನದಲ್ಲಿಯೂ ಕೂಡ ತಾವು ಒಂದು ನಿರ್ಣಯವನ್ನು ತೆಗೆದುಕೊಂಡರೆ ಇದನ್ನು ಒಂದು Ethics Committee ಗೆ refer ಮಾಡಬಹುದು. ಏಕೆಂದರೆ ಒಂದು sub-judice ಆಗಿರುವಂಥ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ ಎಂಬುದನ್ನು ಚರ್ಚೆಗೆ ಅವಕಾಶ ಕೊಡುತ್ತೇವೆಂದರೆ ಅದು ಬೇರೆ ಪ್ರಶ್ನೆ. ಆದರೆ ಚರ್ಚೆಗೆ ಅವಕಾಶ ಕೊಡದೆ Ethics Committee ಗೆ ಕೊಡುವುದು ಬಹಳ ಸೂಕ್ತವೆಂದು ನಾನು ಹೇಳಲಿಚ್ಛಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, House Committeeಗಾದರೂ ಕೊಡಿ ಅಥವಾ Ethics Committeeಗಾದರೂ ಕೊಡಿ, ಅದು ಆಮೇಲಿನ ವಿಚಾರ. ಆದರೆ, ಒಂದು ಮಾತನ್ನು ತಾವು ಒಪ್ಪಲೇಬೇಕಾಗುತ್ತದೆ. ಏನೆಂದರೆ, ಈಗ ಇದು sub judice ಆಗುತ್ತದೆ, ಅದು Additional Magistrate Court ನಲ್ಲಿದೆ, ಅದಕ್ಕಾಗಿ ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಆದರೆ, ನನ್ನ ವಾದ ಏನೆಂದರೆ, ಇದು ಸಭಾಧ್ಯಕ್ಷರ ಅಧೀನದಲ್ಲಿ ಅಥವಾ ಅವರ ಕಂಟ್ರೋಲ್‌ನಲ್ಲಿ ಇರತಕ್ಕಂಥ premisesನಲ್ಲಿ ನಡೆದ ಕಾರಣ He has supreme authority to take action ಇದೆ, ಅದು ಒಂದು. ಎರಡನೆಯದಾಗಿ, ಅವರು ತಪ್ಪಿತಸ್ಥರಾಗಿಲ್ಲವೆಂದರೆ, ಬಿ.ಜೆ.ಪಿ. ಅಧ್ಯಕ್ಷರು, ಲೆಜಿಸ್ಲೇಚರ್ ಪಾರ್ಟಿಯಿಂದ ಅವರನ್ನು ನಾವು ಸಸ್ಪೆಂಡ್ ಮಾಡಿದ್ದೇವೆ ಎಂದು ಏಕೆ ಹೇಳುತ್ತಿದ್ದಾರೆ? ಯಾವ ಆಧಾರದ ಮೇಲೆ ನೀವು ಸಸ್ಪೆಂಡ್ ಮಾಡಿದ್ದೀರಿ? ಅಥವಾ ಯಾವ ಆಧಾರದ ಮೇಲೆ ನಿಮ್ಮ ಪಕ್ಷದಿಂದ ಅವರನ್ನು ಅಮಾನತ್ತು ಮಾಡಿದ್ದೀರಿ? ಅಂದರೆ, ಅಲ್ಲಿ ಆಧಾರವಿದೆ, ನೀವು convince ಆಗಿದ್ದೀರಿ, ಲೋಕಾಯುಕ್ತರವರು ಅವರನ್ನು raid ಮಾಡಿದ್ದು ಸರಿ, ಅವರು ಲಂಚವನ್ನು ಸ್ವೀಕಾರ ಮಾಡಿದ್ದು ಸರಿ, ಎಂಬುದು ನಿಮ್ಮ ಮನಸ್ಸಿಗೆ ಒಪ್ಪಿದಾಗ ಮಾತ್ರ ನಿಮ್ಮ ಪಕ್ಷದಿಂದ ಅಮಾನತ್ತು ಮಾಡುವ ಕೆಲಸವನ್ನು ಮಾಡಿದ್ದೀರಿ. ಅದು pending enquiry ಇರಬಹುದು ಅಥವಾ ಬೇರೆ ರೀತಿ ಇರಬಹುದು. ಆದರೆ, ಒಂದು ಸ್ಟೆಪ್ ನೀವು ಮುಂದೆ ಹೋಗಿದ್ದೀರಿ. ಏಕೆಂದರೆ, ನಿಮ್ಮ ಪಕ್ಷದ ಮೇಲೆ ಬರತಕ್ಕಂಥ ಕಳಂಕವನ್ನು ತಪ್ಪಿಸಿಕೊಳ್ಳಬೇಕು, "ಅವರಿಂದ ನಮಗೆ ಕೆಟ್ಟ ಹೆಸರು ಬರುತ್ತದೆ, ನಮ್ಮ ಪಕ್ಷಕ್ಕೆ ತೊಂದರೆಯಾಗುತ್ತದೆ, ಮುಂದೆ ಬರುವ ಯಾವುದೇ

ಚುನಾವಣೆಗಳಲ್ಲಿ ಇದು ಒಂದು ಪ್ರಚಾರದ ಅಸ್ತ್ರವಾಗಬಾರದು, ಆದ್ದರಿಂದ ಈಗಲೇ ನಾವು ಅವರನ್ನು ಸಸ್ಪೆಂಡ್ ಮಾಡಿದ್ದೇವೆ, ನಮಗೆ ಏನೂ ಸಂಬಂಧವಿಲ್ಲ, ನಾವು ಆಕ್ಷನ್ ತೆಗೆದುಕೊಂಡಿದ್ದೇವೆ" ಎಂದು ಹೇಳುವ ದೃಷ್ಟಿಯಿಂದ ತಾವು ಈ ಕೆಲಸವನ್ನು ಮಾಡಿದ್ದೀರಿ. ನೀವೇ ಇವತ್ತಿನ ದಿವಸ he is accused ಎಂದು ಬೆಟ್ಟು ಮಾಡಿ ತೋರಿಸುತ್ತಿದ್ದೀರಿ. ಆದ್ದರಿಂದ, ನಾನು ಅಧ್ಯಕ್ಷರಲ್ಲಿ ಮನವಿ ಮಾಡುವುದೇನೆಂದರೆ, ತಕ್ಷಣ ತಾವು ಆಕ್ಷನ್ ತೆಗೆದುಕೊಳ್ಳಿ. ಯಾವ ರೀತಿಯಲ್ಲಿ ಪಾರ್ಲಿಮೆಂಟ್‌ನಲ್ಲಿ ಆಗಿದೆ, ಅದೇ ರೀತಿಯಲ್ಲಿ ಮಾಡಬಹುದು ಎಂದು ಲೋಕಾಯುಕ್ತ ಮಾನ್ಯ ಸಂತೋಷ್ ಹೆಗಡೆಯವರು ಸ್ವತಃ ಹೇಳಿದ್ದಾರೆ, Mr.Hegde said, the supreme court has clearly laid down that; in cases of corruption, the sanction is automatic, when we have the evidence there should not be any problem. ಅಂದರೆ, ಇದರ ಬಗ್ಗೆ evidence ಇದೆ, ಕೇಸ್ ರಿಜಿಸ್ಟರ್ ಆಗಿದೆ, ಈಗಾಗಲೇ Additional Session Court ನಲ್ಲಿ ನೀವು ಹಾಕಿದ್ದೀರಿ. ನೀವೆಲ್ಲರೂ ಒಪ್ಪಿಕೊಂಡ ಮೇಲೆ, ಇದು automatic ಆಗಿ disqualification ಮಾಡತಕ್ಕಂಥಾದ್ದು ನಿಮ್ಮ ಕೈಯಲ್ಲಿದೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- Sanction for what?

ಶ್ರೀ ಮಲ್ಲಿಕಾರ್ಜುನ ಖರ್ಗೆ:- Sanction is automatic prosecute and to take action ಅದು ಒಂದು.

ಶ್ರೀ ಎಸ್.ಸುರೇಶ್‌ಕುಮಾರ್:- They will do it.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ತಮ್ಮ premises ನಲ್ಲಿ ಇದು ನಡೆದ ಕಾರಣ, ತಾವು ಇದಕ್ಕೆ ತಕ್ಷಣ action ತೆಗೆದುಕೊಂಡು, ಇವತ್ತಿನ ದಿವಸ ಅವರ ಮೇಲೆ disqualification ಮಾಡುವುದನ್ನು ಮಾಡಿ. ಅದನ್ನು ಬಿಟ್ಟು, Additional Court ಎಂದು ಹೇಳುತ್ತೀರಿ. ಕೋರ್ಟ್ ಬೇರೆ, ಏಕೆಂದರೆ, criminal procedure ನಲ್ಲಿ ಏನೇನು ಆಗಬೇಕು, ಅದು ಅಲ್ಲಿ ನಡೆಯುತ್ತದೆ. ಆದರೆ, ಈ ಹೌಸ್‌ಗೆ ಸಂಬಂಧಪಟ್ಟಂತೆ ನಿಮ್ಮ premises ನಲ್ಲಿ ನಡೆದಂಥ ಏನು act ಇದೆ, ಅದರ ಬಗ್ಗೆ ಕ್ರಮವನ್ನು ಜರುಗಿಸುವುದಕ್ಕೆ ನಿಮಗೆ ಅಧಿಕಾರವಿದೆ. ದಯವಿಟ್ಟು ಆ ಅಧಿಕಾರವನ್ನು ಚಲಾಯಿಸಿ. ಮುಂದೆ ನೀವು ಕಮಿಟಿ ಮಾಡಿ, ಇದರ ಹಿಂದೆ ಯಾರ್ಯಾರು ಇದ್ದರು, ಯಾವ ರೀತಿಯಾಗಿ ಬಂದರು, ಏಕೆ ಬಂದರು, ಲೋಕಾಯುಕ್ತರು ಏಕೆ ಬಂದರು, ಅವರ ವ್ಯಾಪ್ತಿ ಏನು, ಬೇರೆ ಪೊಲೀಸ್‌ನವರು ಯಾವ ರೀತಿಯಾಗಿ ವರ್ತನೆ ಮಾಡಿದರು, ನಿಮ್ಮ ಶಾಸಕರು ಅಥವಾ ಕೆಲವು ಬಿ.ಜೆ.ಪಿ. ನಾಯಕರು

ಲೋಕಾಯುಕ್ತರವರ ಹತ್ತಿರ ಯಾವ ರೀತಿಯಾಗಿ ವರ್ತನೆ ಮಾಡಿದರು, ಇದೆಲ್ಲವೂ ಕೂಡ ಹೊರಗಡೆ ಬರುತ್ತದೆ, ಆ ಕಮಿಟಿ ಮುಂದೆ ಇದೆಲ್ಲವೂ ಬರಲಿ. ಏಕೆಂದರೆ, ಅವರು ಇಲ್ಲವೆಂದು ಹೇಳುತ್ತಿದ್ದಾರೆ. ಬಿ.ಜೆ.ಪಿ. ಮುಖಂಡರು ನಿಜವಾಗಲೂ ಅನುಚಿತವಾಗಿ ವರ್ತನೆ ಮಾಡಿಲ್ಲವೆಂದು ಪ್ರಮಾಣ ಮಾಡಿ ಹೇಳಲಿ. ಸುಮ್ಮನೆ deny ಮಾಡಬೇಕು ಎಂದರೆ ಮಾಡಲಿ, ಆ ಮಾತು ಬೇರೆ. ಆದರೆ, ಇವೆಲ್ಲವೂ ಕೂಡ ಕಮಿಟಿ ಮುಂದೆ ಬರಬೇಕು. ತಾವು ಕಮಿಟಿಯನ್ನು constitute ಮಾಡಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ತಕ್ಷಣ ಇದಕ್ಕೆ ತಾವು action ತೆಗೆದುಕೊಳ್ಳುವುದನ್ನು ಮಾಡಬಹುದು.

ಶ್ರೀ ಟಿ.ಬಿ.ಜಯಚಂದ್ರ (ಶಿರಾ):- ಮಾನ್ಯ ಅಧ್ಯಕ್ಷರೆ, ಈ ಕೇಸ್ ಈಗಾಗಲೇ Magistrate Court ನಲ್ಲಿ trail ನಲ್ಲಿ ನಡೆಯುತ್ತಿದೆ ಹಾಗೂ ಈ ಕೇಸನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ, ಚರ್ಚೆ ಮಾಡಿದರೆ Subjudice ಆಗುತ್ತದೆ ಎಂದು ಮಾನ್ಯ ಕಾನೂನು ಸಚಿವರು ಹೇಳಿದರು. ಬಹುಶಃ ನಾವು ಕೇಳಿರುವುದೇನೆಂದರೆ, ಈ ವಿಚಾರ ಸದನದಲ್ಲಿ ಪ್ರಸ್ತಾಪ ಆಗಬೇಕು ಎನ್ನುವುದು, ಏಕೆಂದರೆ, ಇದು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ಚರ್ಚೆಯಾಗಬೇಕು. ಇಂತಹ ಸಂದರ್ಭಗಳು ಈ ಹಿಂದೆ ಅನೇಕ ಸಲ ಬಂದು ಹೋಗಿವೆ. ಅಂತಹ ವಿಶೇಷವಾದ ಸಂದರ್ಭಗಳಲ್ಲಿ ತಾವು ತಮ್ಮ ಪೀಠದಲ್ಲಿ ಕುಳಿತಿದ್ದೀರಿ. ತೀರ್ಪುಗಳು ಬಂದಿರುವುದು, ಅಭಿಪ್ರಾಯಗಳು ಬಂದಿರುವುದನ್ನು ನಾನು ತಮ್ಮ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಸಂದರ್ಭಗಳು ಬಂದಾಗ ಯಾವ ರೀತಿಯಾಗಿ ತೀರ್ಪು ಬಂತು ಎಂದರೆ, "While applying the restrictions regarding the rule of subjudice, care has to be taken to see that the primary right of freedom of speech is not unduly impaired to the prejudice of the legislature. In this context, the speaker ruled:

The rule whether a motion which relates to a matter which is under adjudication by a court of law should be admitted or discussed in the House has to be interpreted strictly. While on the one hand the chair has to ensure that no discussion in the house should prejudice the course of justice. The chair has also to see that the House is not debarred from discussing an urgent matter of public importance on the ground that a similar allied or linked matter is before a court of Law. So, ಈ ರೂಲಿಂಗ್‌ನ ಅನ್ವಯ ಅದನ್ನು ಚರ್ಚೆ ಮಾಡುವುದಕ್ಕೆ ಯಾವ ಬಾಧಕವೂ

ಇಲ್ಲ. ಯಾವುದೇ ರೀತಿಯಲ್ಲಿಯೂ ಕೂಡ judgment ಅನ್ನು influence ಮಾಡುವ ರೀತಿಯಲ್ಲಿ ಚರ್ಚೆಯಾಗಬಾರದು. ಚರ್ಚೆ ಯಾವ ರೂಲ್‌ನಲ್ಲಿ ಪ್ರಸ್ತಾಪವಾಗಬೇಕು, ಪ್ರಸ್ತಾಪವಾಗುವುದೇ ಬೇಡ ಎನ್ನುವ ಧೋರಣೆ ಇದೆಯಲ್ಲಾ, ಅದು ಸರಿಯಾದುದಲ್ಲ. ಏಕೆಂದರೆ, ಇದು ಎಲ್ಲೋ ಒಂದು ಕಡೆಗೆ ಸರಿಯಾದುದಲ್ಲ. ಈ ಸಭೆಯ ಗೌರವಾನ್ವಿತ ಸದಸ್ಯರಾಗಿದ್ದವರು ಅವರು. ಅದು ಏಕೆ ಆಯಿತು? ಏನು ಆಯಿತು? ಅದರ ಹಿನ್ನೆಲೆ ಏನು? ಅದು ನಿಜವಾಗಲೂ ಕೂಡ ನಡೆದಿದೆಯೇ? ಹೌದೇ? ಎಂಬುದು ನೋಡಬೇಕು. ಇದು ಮಾಧ್ಯಮದಲ್ಲಿ ಬಂದಿರುವುದನ್ನು ಬಿಟ್ಟರೆ, ಬೇರೆ ಯಾವ ರೀತಿಯಾಗಿಯೂ ನಮಗೆ ಗೊತ್ತಿಲ್ಲ. ಈ ಸಭೇಯ ಗೌರವಾನ್ವಿತ ಸದಸ್ಯರಾಗಿದ್ದರಿಂದ, ನಮ್ಮೆಲ್ಲರ ಯೋಗಕ್ಷೇಮ ತಮ್ಮ ಕೈಯಲ್ಲಿರತಕ್ಕಂಥ ಸಂದರ್ಭದಲ್ಲಿ ನಾವು ನಿಮ್ಮನ್ನು ಉತ್ತರವನ್ನು ಕೇಳುವುದಕ್ಕೆ ಬಯಸುತ್ತಿದ್ದೇವೆ. ಇಂತಹ ಪ್ರಸಂಗಗಳಲ್ಲಿ ಏನು ಮಾಡುತ್ತೀರಿ? ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ? ಅಥವಾ ಏನು ಉತ್ತರ ಕೊಡುತ್ತೀರಾ? ಇದು ನಿಮ್ಮ ಅಧಿಕಾರ ವ್ಯಾಪ್ತಿಗೆ ಬಿಟ್ಟಿರುವುದು. subjudice ಆಗುತ್ತದೆ ಎನ್ನುವ ಕಾರಣಕ್ಕೋಸ್ಕರ ಚರ್ಚೆ ಮಾಡಬಾರದು ಎಂದು ಹೇಳುವ ವಾದದಲ್ಲಿ ಅರ್ಥವಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ):- ಮಾನ್ಯ ಅಧ್ಯಕ್ಷರೆ, ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು:- ಶರಣ ಪ್ರಕಾಶ್‌ರವರೇ, ಈ matterನಲ್ಲಿ discussion ಮಾಡುವುದಕ್ಕೆ ಅವಕಾಶವಿಲ್ಲ. Zero hour ನಲ್ಲಿ ಕೆಲವು ವಿಷಯಗಳು ಇಲ್ಲಿ ಮಾತನಾಡುವುದಕ್ಕೆ ಬರುತ್ತದೋ, ಇಲ್ಲವೋ ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಪರವಾಗಿ ಲಾ ಮಿನಿಸ್ಟರ್ ಉತ್ತರ ಕೊಟ್ಟಿದ್ದಾರೆ. ಈಗ ನೀವು ಅದರ ಬಗ್ಗೆ ಏನಾದರೂ highlight ಮಾಡುವುದಿದ್ದರೆ ಮಾಡಿ, ಅಡ್ಡಿಯಿಲ್ಲ. ಆದರೆ, ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಚರ್ಚೆ ಪ್ರಾರಂಭ ಮಾಡುವುದಿಲ್ಲ. ಕೇವಲ ಒಂದು ರೂಲಿನ ಬಗ್ಗೆ ಹೇಳುತ್ತೇನೆ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು ಹಾಗೂ ಆ ಶಿಕ್ಷೆ ಮಾಡುವ ಅಧಿಕಾರ ನಮಗಿದೆ. ಇದರಿಂದ ಬೇರೆ ಶಾಸಕರಿಗೂ ಕೂಡ ಭಯ ಹುಟ್ಟುತ್ತದೆ. ಶಾಸಕರ ಭವನದಲ್ಲಿ ನಾವು ಇಂತಹ ಕೆಲಸವನ್ನು ಮಾಡಬಾರದು, ಮಾಡಿದರೆ ನಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುತ್ತೇವೆ ಎನ್ನುವ ಭಯವಿರಬೇಕು. ಇಲ್ಲದಿದ್ದರೆ, ಕಷ್ಟವಾಗುತ್ತದೆ. ಇಡೀ ರಾಜ್ಯದಲ್ಲಿ, ಇಡೀ ದೇಶದಲ್ಲಿ

ಇದು ಮೊದಲನೇ ಕೇಸ್. ರಾಜ್ಯದಲ್ಲಿ ಜನ ಎಲ್ಲಾ ಶಾಸಕರು ಹೀಗೆ ಇರುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ. 224 ಶಾಸಕರ ಮೇಲೆ ಅದು ಒಂದು ಗೂಬೆಯನ್ನು ಕೂರಿಸುತ್ತಾರೆ. ನಾವು ಈ ಪ್ರಶ್ನೆಯನ್ನು ಯಾರಿಗೂ ಹೆದರಿ-ಬೆದರಿ ಕೇಳುತ್ತಿಲ್ಲ. ಇದಕ್ಕೆ ನ್ಯಾಯ ಸಿಗಬೇಕು. ನಾಳೆ ದಿವಸ ಬೇರೆಯವರು ಈ ಕೆಲಸವನ್ನು ಮಾಡಬಾರದು ಎನ್ನುವ ದೃಷ್ಟಿಯಿಂದ ಇದನ್ನು ಕೇಳುತ್ತಿದ್ದೇವೆ. ಅದಕ್ಕೆ ನೀವು Ethics Committeeಗಿಂತಲೂ House Committee ಮಾಡಿ. ಇಲ್ಲಿ ಕಾನೂನು ತಜ್ಞರಿದ್ದಾರೆ, ಅನೇಕ ಹಿರಿಯ ನಾಯಕರಿದ್ದಾರೆ, ಅವರೆಲ್ಲರನ್ನೂ ಸೇರಿಸಿ ಒಂದು ಕಮಿಟಿ ಮಾಡಿ. ಯಾರ್ಯಾರು ತಪ್ಪು ಮಾಡಿದ್ದಾರೆ, ಅವರಿಗೆಲ್ಲಾ ಶಿಕ್ಷೆಯಾಗಬೇಕು. ಅಲ್ಲಿಯವರೆಗೆ ಅವರಿಗೆ ಅಮಾನತ್ತು ಗೊಳಿಸುವಂಥ ಕೆಲಸವನ್ನು ತಾವು ಮಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಪ್ರಾರಂಭ ಮಾಡುವುದಿಲ್ಲ. ಅವರಿಗೆ ಪೂರಕವಾಗಿ, ಸಬ್ಸಿಡಿ ಸಿಗುವಂಥ matter ಅನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ, ಈ ಸದನದ ಗೌರವವನ್ನು ಉಳಿಸುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡಬೇಕಾಗಿದೆ. ಇಂತಹ ಪ್ರಶ್ನೆಗಳು ಬಂದಾಗ, ನೀವು ಕೇವಲ, matter subjudice ಆಗಿದೆ ಎಂದು ಹೇಳಿ, ಈ ಸದನಕ್ಕೆ ಚರ್ಚೆಯಿಂದ ವಂಚನೆ ಮಾಡುವುದು ಇವತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಮಾಡಿದಂತಾಗುತ್ತದೆ. ಈ ಹಿಂದೆಯೂ ಕೂಡ ಲೋಕಾಯುಕ್ತದವರು ಬಹಳಷ್ಟು ಕಡೆ ದಾಳಿ ಮಾಡಿದಾಗ, ಈ ಸದನದಲ್ಲಿ ಅದು ಚರ್ಚೆಯಾಗಿದೆ. ಲೋಕಾಯುಕ್ತದವರು ದಾಳಿ ಮಾಡಿದ ಮೇಲೆ ಆ ವಿಷಯ automatic ಆಗಿ ಕೋರ್ಟ್‌ಗೆ ಹೋಗುತ್ತದೆ. ಹಾಗಾದರೆ, ಲೋಕಾಯುಕ್ತದವರು ಯಾರ್ಯಾರ ಮೇಲೆ ದಾಳಿ ಮಾಡಿದ್ದಾರೆ, ಅದರ ಬಗ್ಗೆ ಸದನದಲ್ಲಿ ನಾವು ಚರ್ಚೆ ಮಾಡುವುದು ಬೇಡವೆಂದರೆ, ಭ್ರಷ್ಟಾಚಾರ ನಿಯಂತ್ರಣ ಮಾಡುವುದು ಹೇಗೆ? ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟಪಡುವುದೇನೆಂದರೆ, ಸರ್ಕಾರ ಕೂಡ ಜವಾಬ್ದಾರಿತನದಿಂದ ವರ್ತಿಸಬೇಕು. ಇವತ್ತು ಇಂತಹ ಘಟನೆಗಳು ನಡೆದಾಗ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಲೋಕಾಯುಕ್ತದವರಿಗೆ ಕೊಟ್ಟಿರುವಂಥ ಅಧಿಕಾರ ವ್ಯಾಪ್ತಿ ಏನಿದೆ ಇವತ್ತು ಹೆಚ್ಚಿಸಬೇಕಾಗಿರುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಇವತ್ತು ಬಹಿರಂಗವಾಗಿ ನಮಗೆ ಮಾಧ್ಯಮಗಳಲ್ಲಿ ಅಧಿಕಾರ ಕೊಡುತ್ತಿಲ್ಲ ಎಂದು ಲೋಕಾಯುಕ್ತದವರು ಹೇಳುತ್ತಿದ್ದಾರೆ.

ಅಧ್ಯಕ್ಷರು:- ಮಾನ್ಯ ಶರಣ್ ಪ್ರಕಾಶ್‌ರವರೇ, ಇವತ್ತು ವಿಷಯಾಂತರ ಮಾಡುವುದು ಬೇಡ.

(ಗೊಂದಲ)

1-30 PM

ಮಾನ್ಯ ವಿರೋಧ ಪಕ್ಷದ ನಾಯಕರು ಎಷ್ಟು ವಿಷಯವನ್ನು ಪ್ರಸ್ತಾಪ ಮಾಡಿದ್ದರು, ಅಷ್ಟಕ್ಕೆ ಮಾತ್ರ ಸೀಮಿತವಾಗಿ, ನೀವು broad ಆಗಿ ಚರ್ಚೆ ಮಾಡಿದರೆ, ನಾನು ಬೇರೆ ಅವಕಾಶ ಕೊಡುತ್ತೇನೆ.

ಡಾ॥ ಶರಣ ಪ್ರಕಾಶ್ ಪಾಟೀಲ್:- ನಾನು ಒಂದೊಂದು word ಅನ್ನು substantiate ಮಾಡುತ್ತೇನೆ. ನಾನು ಏಕೆ ಈ ಮಾತನ್ನು ಹೇಳಿದೆಯೆಂದರೆ, ಈ ಸದನದ ಮೇಲೆ ರಾಜ್ಯದ ಜನತೆಗೆ ಯಾವುದೇ ರೀತಿ ಸಂಶಯ ಬರಬಾರದು. ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವಂತಹ ಲೋಕಾಯುಕ್ತರು ಈ ರಾಜ್ಯದಲ್ಲಿ ನನಗೆ ಅವಕಾಶ ಸಿಗುತ್ತಿಲ್ಲವೆಂದು ಹೇಳುತ್ತಿರುವುದು it will reflect on us.

ಅಧ್ಯಕ್ಷರು:- ಅದು ಬೇರೆಯ ವಿಷಯ ಇಲ್ಲಿ ಏಕೆ ತೆಗೆದುಕೊಂಡು ಬರುತ್ತೀರಿ? ನೀವು ವಿಷಯಾಂತರ ಮಾಡುತ್ತಿದ್ದೀರಿ. ಅದು ಸಾಕು,

ಡಾ॥ ಶರಣ ಪ್ರಕಾಶ್ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಇವತ್ತು ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಒಂದು ವಿಚಾರವನ್ನು ಹೇಳಿದರು. ಏನೆಂದರೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಆದುದರಿಂದ ಬೇರೆ ಎಲ್ಲಾ ಸದಸ್ಯರಿಗೆ ಒಂದು ಎಚ್ಚರಿಕೆಯಾಗಬೇಕು. ಈ ರೀತಿ ಆಗಬಾರದು, ಈ ರೀತಿ ಮಾಡಬಾರದು ಎನ್ನುವ ದೃಷ್ಟಿಯಲ್ಲಿ ಮಾತನಾಡಿದರು. ನಾನು ಅವರ ಕ್ಷಮೆ ಕೇಳುತ್ತೇನೆ. ಎಲ್ಲಾ ಸದಸ್ಯರಿಗೆ ನಾವು ಎಚ್ಚರಿಕೆ ಕೊಡುವುದಕ್ಕೋಸ್ಕರ ಈ ಕ್ರಮ ಆಗಬೇಕಾ? ಎಲ್ಲಾ ಸದಸ್ಯರಿಗೂ ಕೂಡ ಇಲ್ಲಿ ಬಂದಾಗಲೇ ನಾವು ಹೇಗಿರಬೇಕೆಂದು ಗೊತ್ತು. ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಅದಕ್ಕೋಸ್ಕರ ಒಂದು ಪ್ರಕರಣ ಎಚ್ಚರಿಕೆಯಾಗಿ ನಾವು ತಿದ್ದಿಕೊಳ್ಳುವುದು ಸರಿಯಾದ ಲಕ್ಷಣವಲ್ಲ. ನಮಗೆಲ್ಲರಿಗೂ ನಮ್ಮ ಜವಾಬ್ದಾರಿಯ ಅರಿವು ಇರಬೇಕು. ಜನ ನಮ್ಮನ್ನು ಯಾವ ರೀತಿ ನೋಡುತ್ತಿದ್ದಾರೆ ಎನ್ನುವ ಅರಿವೂ ಕೂಡ ನಮಗೆ ಇರಬೇಕು.

ಇನ್ನು ಎರಡನೇ ಪ್ರಶ್ನೆ, ಇವತ್ತು ಈ ಶಾಸನ ಸಭೆಯ ಒಬ್ಬ ಸದಸ್ಯರ ಮೇಲೆ ಒಂದು ಆರೋಪವಿದೆ. ಆರೋಪ ಇದ್ದ ಮಾತ್ರಕ್ಕೆ ಆಪಾದಿತ ಆಗುವುದಿಲ್ಲ. ಒಂದು ಆರೋಪ ಬಂದಿದೆ. ಆರೋಪ ಬಂದ ತಕ್ಷಣ ಅವರು ತಮ್ಮ defence ನಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಅದು ಸರಿಯೋ, ತಪ್ಪೋ, I am not going to the merits. ಅವರ ಮೇಲೊಂದು ಆರೋಪ ಬಂದ ತಕ್ಷಣ, ಅವರೊಂದು

ಹೇಳಿದ್ದಾರೆ, can this house sit an judgment on this? ಖಂಡಿತಾ ಆಗುವುದಿಲ್ಲ. ನಾವು ಕಾನೂನಿನ ಮೇಲೆ ಮತ್ತೆ ಹೇಳುತ್ತಿದ್ದೇವೆ. He is innocent till proved guilty ಎಂದು. ಮೂರು ಜನ ವಕೀಲರಾಗಿ ಇಲ್ಲಿ ಕುಳಿತಿದ್ದೀರಿ. ಎಲ್ಲರಿಗೂ ಗೊತ್ತಿದೆ. ಆದುದರಿಂದ ನಾನು ಆಗಲೇ ಹೇಳಿದ ಮಾತನ್ನು ಮತ್ತೆ insist ಮಾಡುತ್ತೇನೆ. ದಯವಿಟ್ಟು ತಮ್ಮ ವ್ಯಾಪ್ತಿಯಲ್ಲಿ ಬರುವ ಹಾಗೆ ಒಂದು Ethics Committee ಮಾಡಿ. ರಾಜ್ಯದಲ್ಲಿ ಇಂತಹ ಒಂದು ಗಂಭೀರವಾದಂತಹ ಸಮಸ್ಯೆಯನ್ನು ನೋಡುತ್ತಿದ್ದೇನೆ. Ethics committee ಗೆ refer ಮಾಡಿ, ಆ ಕಮಿಟಿ ರಿಪೋರ್ಟ್ ಕೊಡಲಿ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ವಿರೋಧಪಕ್ಷದ ನಾಯಕರು ಇದು ಇತ್ಯರ್ಥವಾಗುವವರೆಗೆ ಅಮಾನತ್ತಿನಲ್ಲಿಡಿ ಎಂಬ ಮಾತನ್ನು ಹೇಳಿದರು. ಲೋಕಾಯುಕ್ತ ವ್ಯಾಪ್ತಿಯಲ್ಲಿ ಶಾಸಕರು ಬಂದಾಗ, ಅಧಿಕಾರಿಗಳ ಮೇಲೆ ಆರೋಪ ಬಂದ ತಕ್ಷಣ, ಅದೇನು prove ಆಗಿಲ್ಲ, ತಕ್ಷಣವೇ suspend ಮಾಡುತ್ತಾರೆ. ಅದೇ ರೀತಿಯಾಗಿ ಶಾಸಕರಿಗೆ ವಿಚಾರದಲ್ಲಿ ಅದೂ ಕೂಡ ಚರ್ಚೆಯಾಗುತ್ತಿದೆ. ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ಸಮಸ್ಯೆ ಏನಿದೆ, ನೀವು ಅವರ ಮೇಲೆ punishment ಮಾಡುತ್ತಿಲ್ಲ, is only asking for suspension from attending the House. ನೀವು ಅಧಿಕಾರಿಗಳಿಗೆ ಒಂದು ರೀತಿ ಅಥವಾ ಸಾರ್ವಜನಿಕ ಪ್ರತಿನಿಧಿಗಳಿಗೆ ಒಂದು ರೀತಿ because both are governed under the same act.

ಶ್ರೀ ಎಸ್.ಸುರೇಶ್ ಕುಮಾರ್:- ಅಧಿಕಾರಿಗಳನ್ನು ಏಕೆ suspend ಮಾಡುತ್ತಾರೆ ಹೇಳಿ? ಅವರು ಇಲ್ಲಿ ಕುಳಿತುಕೊಂಡು tamper ಮಾಡಬಾರದೆಂದು, by attending this House, he is not going to tamper anything ಅದನ್ನು ಅವರು ಮೊದಲು ತಿಳಿದುಕೊಳ್ಳಬೇಕು. ಅದಕ್ಕೋಸ್ಕರ ನಮ್ಮ ವಾದವೇ ಸರಿಯೆಂದು ಹೇಳುವುದಕ್ಕಿಂತ ಇಂತಹ ಗಂಭೀರವಾದ ಪರಿಸ್ಥಿತಿ it is first of its kind in Karnataka Legislature ಬಂದಿರುವುದರಿಂದ ಇದರ ಬಗ್ಗೆ ಸನ್ಮಾನ್ಯ ಅಧ್ಯಕ್ಷರು ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳಲಿ.

ಅಧ್ಯಕ್ಷರು:- ಈಗಾಗಲೇ ಸನ್ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಜಯಚಂದ್ರ ಅವರು, ಪಾಟೀಲ್ ಅವರು, ಕಾನೂನು ಸಚಿವರು ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಇದರ ಬಗ್ಗೆ ನನ್ನ ಅಭಿಪ್ರಾಯವೇನಿದೆ, ಈ ಸಭಾಧ್ಯಕ್ಷರ ಸ್ಥಾನದಿಂದ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು, ಈ ಅಧಿವೇಶನ ಮುಕ್ತಾಯವಾಗುವುದರೊಳಗೆ ನಾನು ಒಂದು ನಿರ್ಣಯವನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅಧಿವೇಶನ ಮುಗಿಯುವುದರೊಳಗೆ ಅಂದರೆ ನಮಗೆ ಹೇಗೆ ಗೊತ್ತಾಗಬೇಕು?

ಅಧ್ಯಕ್ಷರು:- ನಾಳೆಯಾದರೂ ಕೊಡಬಹುದು, ನಾಳಿದ್ದಾದರೂ ಕೊಡಬಹುದು. 27ನೇ ತಾರೀಖಿನವರೆಗೂ ಅಧಿವೇಶನವಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- Pending Enguiry suspend ಮಾಡುವ ಉದ್ದೇಶವೇನೆಂದರೆ, ನೀವು Committee constitute ಮಾಡಿದರೆ, Ethics committee ಯನ್ನೇ ತೆಗೆದುಕೊಳ್ಳಿ, ನಾನು House committee ಎಂದು ಹೇಳುತ್ತೇನೆ. House committee ಎಂದರೆ, ಮೇಲ್ಮನೆ ಎರಡೂ ಸೇರಿ ಮಾಡುವುದು ಅಥವಾ Ethics committee ಯಲ್ಲಿ ಮೇಲ್ಮನೆಯವರು ಇರುತ್ತಾರೋ ಇರುವುದಿಲ್ಲವೋ ನನಗೆ ಗೊತ್ತಿಲ್ಲ. ಆದರೆ, ಇಲ್ಲಿಯವರೆಗೂ ಅದನ್ನು ಮಾಡಿಲ್ಲ. ಈಗ ನೀವು pending enquiry suspension ಮಾಡುವುದಕ್ಕೆ ಏನು ತೊಂದರೆ? ನಿಮಗೆ power ಇದೆ.

ಅಧ್ಯಕ್ಷರು:- ಆಯಿತು, ಮಾನ್ಯ ವಿರೋಧ ಪಕ್ಷ ನಾಯಕರು, ಇಂತಹ ಘಟನೆ ನಡೆದಂತಹ ಸಂದರ್ಭದಲ್ಲಿ ಇರುವಂತಹ ಅಧಿಕಾರ ವ್ಯಾಪ್ತಿ ಬಗ್ಗೆ highlight ಮಾಡಿ ಸ್ವಲ್ಪ ಬೆಳಕನ್ನು ಚೆಲ್ಲಬೇಕು. ಯಾವುದೇ ಇಂತಹ ಘಟನೆ ನಡೆದಾಗ, ಯಾರೋ ಒಬ್ಬ ಸದಸ್ಯನನ್ನು ವಿಧಾನಸಭೆಯ ಈ ಸದನಕ್ಕೆ ನಿರ್ಬಂಧ ಹೇರಲು ಅಧಿಕಾರವಿದೆಯೇ ಎನ್ನುವುದನ್ನು ದಯವಿಟ್ಟು ತಾವು highlight ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇಡೀ ದೇಶದಲ್ಲೇ ಇದು ಮೊದಲನೇ ಸಲ ಈ ರೀತಿಯಾಗಿದೆ, ಅದೂ ನಿಮ್ಮ premises ನಲ್ಲಿಯೇ ಆಗಿದೆ. ಲೋಕಾಯುಕ್ತರು ಕೂಡ ನಿಮ್ಮ permission ತೆಗೆದುಕೊಂಡು ಬಂದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ, ಪೊಲೀಸರು legislature Home enter ಆಗಬೇಕಾದರೆ ನಿಮ್ಮ permission ಇಲ್ಲದೇ ಬರುವುದಿಲ್ಲ. ಹೊರಗಿನವರು, ನಮ್ಮಂತಹವರು, ordinary citizens ಹೋಗಬೇಕಾದರೆಯೇ ನಿಮ್ಮ permission ಬೇಕು. ವಿಶೇಷವಾಗಿ, ಪೊಲೀಸರು ಒಬ್ಬರು ಸದಸ್ಯರ ರೂಮಿಗೆ ಹೋಗಬೇಕಾದರೆ, permisssion ಇತ್ತೋ, ಇಲ್ಲವೋ, ಅದಕ್ಕೆ ನಾನು ಇವೆಲ್ಲವನ್ನೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರೆ, ನೀವು ಮಾತನಾಡಿ, ನಾನು ಬೇಡ ಎನ್ನುವುದಿಲ್ಲ. ಏಕೆಂದರೆ, ಕೆಲವೊಂದು ವಿಷಯಗಳ ಬಗ್ಗೆ ಸ್ಪಷ್ಟನೆಯಾಗಬೇಕಾಗುತ್ತದೆ. ತಾವು ಹಿರಿಯ ನಾಯಕರು, ಒಂಭತ್ತು ಸಲ

ಆಯ್ಕೆಯಾಗಿ ಬಂದಿದ್ದೀರಿ. ಸದನದ ಅನುಭವ ನಮಗಿಂತಲೂ ಹೆಚ್ಚಿಗೆ ನಿಮಗಿದೆ. ಅದಕ್ಕೋಸ್ಕರ ಇಂತಹ ಘಟನೆ ನಡೆದಂತಹ ಸಂದರ್ಭದಲ್ಲಿ ಸಭಾಧ್ಯಕ್ಷರಿಗೆ ಏನು power ಇದೆ ಎನ್ನುವುದನ್ನು highlight ಮಾಡಿದರೆ, ಅಧ್ಯಕ್ಷರ ವ್ಯಾಪ್ತಿ, ವಿಧಾನಸಭೆ, ಅಕ್ಕಪಕ್ಕದ ಅಂಗಳ, ಶಾಸಕರ ಭವನ ಆ ವ್ಯಾಪ್ತಿಯಲ್ಲಿ ಬರುತ್ತದೆಯೋ ಇಲ್ಲವೋ, ಇವೆಲ್ಲವನ್ನೂ ತಾವು highlight ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾವು ಇಲ್ಲಿ ಗಲಾಟೆ ಮಾಡಿದರೆ, ತಾವು suspend ಮಾಡಿ complete 10 ರಿಂದ 15 ದಿವಸದವರೆಗೆ ಹೊರಗಡೆ ಹಾಕುತ್ತೀರಿ. ಅದು ಕೂಡ ಇದೇ ನಾನು ಹೇಳುವುದೇನೆಂದರೆ, Legislator's Home ನಿಮಗೇ ಬರುತ್ತದೆ. ಕೇಸ್ ರಿಜಿಸ್ಟರ್ ಆಗಿದೆ. ಕೇಸ್ ಈಗಾಗಲೇ ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ. ಪೋಲೀಸರು ನುಗ್ಗಿ ಅವರನ್ನು arrest ಮಾಡಿಕೊಂಡು ಹೋಗುವುದನ್ನು ನೀವು ನೋಡಿದ್ದೀರಿ. ಇಂಥವರಿಗೆ ಈ ಕಾರಣಕ್ಕಾಗಿ ನಾವು arrest ಮಾಡಿದ್ದೇವೆಂದು ನಿಮಗೆ inform ಮಾಡಿದ್ದಾರೆ. ಇವೆಲ್ಲಾ ಮಾಡಿದ್ದರೂ ನಮಗೇನು ಗೊತ್ತಿಲ್ಲವೆಂದು ಹೇಗೆ? ನಾವು ಇಲ್ಲಿ ಕೂಗಾಟ ಮಾಡಿದರೆ, ಧರಣಿ ಮಾಡಿದರೆ, ನಮ್ಮನ್ನು ಹೊರಗಡೆ ಹಾಕಲು ನಿಮಗೆ ಅಧಿಕಾರವಿದೆ. ಅನೇಕ ಸಲ 15 ದಿವಸ, ತಿಂಗಳು suspend ಮಾಡುತ್ತೀರಿ, for a session debar ಮಾಡಲು ನಿಮಗೆ ಅಧಿಕಾರವಿದೆ. ನೀವು ಇದನ್ನು 15 ದಿವಸ, 20 ದಿವಸ ಅಥವಾ ಎಷ್ಟೇ ದಿವಸ enquiry ಆಗಲಿ, enquiry ಆಗುವವರೆಗೆ suspend ಮಾಡಿ. Pending enquiry..

ಶ್ರೀ ಟಿ.ಬಿ.ಜಯಚಂದ್ರ:- ಲೋಕಾಯುಕ್ತರು ಈ ಮನೆಯ ಗೌರವಾನ್ವಿತ ಸದಸ್ಯರನ್ನು arrest ಮಾಡುವಂತಹ ಸಂದರ್ಭದಲ್ಲಿ ತಮ್ಮ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. Arrest ಮಾಡುವಾಗ ತಮ್ಮ ಒಪ್ಪಿಗೆಯನ್ನು ಪಡೆದಿದ್ದರೋ, ಇಲ್ಲವೋ ಎನ್ನುವ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಇಂತಹ ವಿಚಾರದಲ್ಲಿ, ನಾವು ಯಾವ ನಿರ್ಧಾರವನ್ನು ಯಾವ ಮಟ್ಟದಲ್ಲಿ ತೆಗೆದುಕೊಳ್ಳಬೇಕೆನ್ನುವ ಪ್ರಶ್ನೆ ಬಂದಾಗ, ಸರ್ಕಾರವು ಕೂಡ ಸಹಕಾರ ಮಾಡಬೇಕಾಗುತ್ತದೆ. ಎಲ್ಲೋ ಒಂದು ಕಡೆ ಅವರು ಬಿ.ಜೆ.ಪಿ. ಶಾಸಕರಾಗಿದ್ದರು ಎನ್ನುವ ಕಾರಣಕ್ಕೋಸ್ಕರ cheat ಮಾಡುತ್ತಾರೆ ಎನ್ನುವ ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಬಾರದು. ಅದರ ಜೊತೆ Prevention of corruption Act, ಕರ್ನಾಟಕದಲ್ಲಿ ಮೊದಲು ಇರಬಹುದು, ಆದರೆ ಈ ದೇಶದ ಇತಿಹಾಸದಲ್ಲಿ, Parliament ನಲ್ಲಿ, ಬೇರೆ ಬೇರೆ ರೀತಿಯಲ್ಲಿ ಆಗಿರುವಂತಹ ನಿದರ್ಶನಗಳಿವೆ. ಸದಸ್ಯರ ಗೌರವವನ್ನು ಎತ್ತಿಹಿಡಿಯುವ ರೀತಿಯಲ್ಲಿ, ಸದಸ್ಯರ ಗೌರವವನ್ನು

ಕಾಪಾಡುವಂತಹ ರೀತಿಯಲ್ಲಿ ಏನೆಲ್ಲಾ ತೀರ್ಮಾನವಾಗಿದೆ ಎನ್ನುವ ಹಿನ್ನೆಲೆಯಲ್ಲಿ ತಮ್ಮ ಒಂದು ತೀರ್ಪು ಬರಲಿ.

ಅಧ್ಯಕ್ಷರು:- ಮಾನ್ಯ ಜಯಚಂದ್ರರವರೆ, ಸನ್ಮಾನ್ಯ ವಿರೋಧ ಪಕ್ಷದವರು ಏನು ಪ್ರಸ್ತಾಪ ಮಾಡಿದ್ದಾರೆ, ವಿಧಾನಸಭೆಯ ಆವರಣದ ಬಗ್ಗೆ definition ಇದೆ. ಆ definition ನಲ್ಲಿ ಏನು ಬರುತ್ತದೆ, ಅದು ನನ್ನ ಅಧೀನದಲ್ಲಿ ಬರತಕ್ಕಂಥದ್ದು. ಯಾವುದೇ ಒಂದು ಪ್ರಕರಣದಲ್ಲಿ ಶಾಸಕರನ್ನು arrest ಮಾಡುವಂತಹ ಸಂದರ್ಭ ಬಂದಾಗ, ಅದು ಲೋಕಾಯುಕ್ತ ಇರಬಹುದು, ಮತ್ತೊಂದು ಇರಬಹುದು, ಅವರು ನನ್ನ permission ಯಾವಾಗ ತೆಗೆದುಕೊಳ್ಳಬೇಕು? ನನ್ನ ಅಧೀನದಲ್ಲಿರುವ ಆ ಒಂದು ವ್ಯವಸ್ಥೆ ಏನಿದೆ, ಸದನದಲ್ಲಿ arrest ಮಾಡುವಾಗ, ನನ್ನ permission ತೆಗೆದುಕೊಳ್ಳಬೇಕು. ಉಳಿದಂತಹ ಪ್ರಕರಣಗಳಲ್ಲಿ, ಸದನದ ಹೊರಗಡೆ ಕೆಲವು ಹೋರಾಟ ಇರಬಹುದು, criminal activities ಇರಬಹುದು, ಅಲ್ಲಿ ಯಾರೋ ಒಬ್ಬ ಶಾಸಕರನ್ನು arrest ಮಾಡಿದಾಗ, arrest ಮಾಡಿದ ನಂತರ, arrest ಮಾಡಿದ್ದೇವೆ ಅನ್ನುವಂತಹ message ನಮಗೆ ಕೊಡುತ್ತಾರೆ, ಇದು ಇಲ್ಲಿ ನಡೆಯುವಂತಹ ವ್ಯವಸ್ಥೆ.

(ಗೊಂದಲ)

ಅಧ್ಯಕ್ಷರು:- ನನಗೆ ಇದರಲ್ಲಿ ಯಾರನ್ನೋ ಉಳಿಸಬೇಕು, ಯಾರನ್ನೋ ರಕ್ಷಣೆ ಮಾಡಬೇಕೆಂದು ಇಲ್ಲ. ನಿಮಗೆ ಏನು bonafide ಇದೆ ಅದೇ ರೀತಿ ಸಭಾಧ್ಯಕ್ಷನಾಗಿ, ಈ ಒಂದು ಸದನದ ಘನತೆಯನ್ನು ಕಾದುಕೊಂಡು ಹೋಗಬೇಕು, ಗೌರವವನ್ನು ಕಾಪಾಡಿಕೊಂಡು ಹೋಗಬೇಕು, ಎಲ್ಲಾ ಶಾಸಕರ ಗೌರವವನ್ನು ಕಾಪಾಡಿಕೊಂಡು ಹೋಗಬೇಕೆಂದು ನನ್ನ ಅಭಿಪ್ರಾಯವಿದೆ. ಅಲ್ಲಿ ಯಾರನ್ನೋ ರಕ್ಷಣೆ ಮಾಡಬೇಕೆಂದು ಕುಳಿತುಕೊಂಡಿಲ್ಲ. ಆದರೆ, ಏನು ನಿಯಮವಿದೆ, powers ಏನಿವೆ, ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ನಾನು ಕೇಳುತ್ತಿದ್ದೇನೆಯೇ ಹೊರತು ಮತ್ತೆ ಇನ್ನೇನು ಇಲ್ಲ. ಇವತ್ತು ನಮ್ಮ ಮುಂದೆ ಕರ್ನಾಟಕ ವಿಧಾನಸಭೆ ಮತ್ತು ನಡವಳಿಕೆ ನಿಯಮ ಎಂದು ಇದೆ. ಅದರಲ್ಲಿ ವಿಧಾನ ಸಭೆಯ ಆವರಣಗಳು ಎಂದು definition ಇದೆ. ವಿಧಾನ ಸಭೆಯ ಆವರಣಗಳು ಎಂದರೆ, ಸಭಾ ಮಂದಿರ, ಲಾಬಿ, ಗ್ಯಾಲರಿಗಳು ಮತ್ತು ಅಧ್ಯಕ್ಷರು ಆಗಿಂದಾಗ್ಗೆ ನಿರ್ದಿಷ್ಟಪಡಿಸುವ ಇತರೆ ಸ್ಥಳಗಳು ಎಂದು ಇದೆ. ಇಲ್ಲಿ ಇರತಕ್ಕದ್ದು ವಿಧಾನ ಮಂಡಲ ಮತ್ತು lobby. ಈ ಒಂದು premises ಈ definition ನಲ್ಲಿ ಬರುತ್ತದೆ. ಆದುದರಿಂದ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಶಾಸಕರ ಭವನ ನನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈ ಒಂದು ಡೆಫನಿಷನ್‌ನಲ್ಲಿ ಬರುವುದಿಲ್ಲವೆಂಬುದು ಸ್ಪಷ್ಟವಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ:- ಹಾಗಾದರೆ ಯಾರ ವ್ಯಾಪ್ತಿಯಲ್ಲಿ ಬರುತ್ತದೆ?

ಅಧ್ಯಕ್ಷರು:- Administration ದೃಷ್ಟಿಯಿಂದ ನನ್ನ ವ್ಯಾಪ್ತಿಯಲ್ಲಿ ಬರುತ್ತದೆ. ಆದರೆ "ವಿಧಾನ ಸಭೆಯ ಆವರಣಗಳು" ಎಂಬ ಡೆಫಿನಿಷನ್ ಅಡಿಯಲ್ಲಿ ಈ ಒಂದು ಸಭಾ ಮಂದಿರ ಮತ್ತು lobby ಮಾತ್ರ ಬರುತ್ತದೆ. ಇದು ನನ್ನ ಅಭಿಪ್ರಾಯ. ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವಿದ್ದರೆ ತಾವು highlight ಮಾಡಿ, ಬೆಳಕುಚೆಲ್ಲಿ. ನನಗೆ ಅಧಿಕಾರ ಇದ್ದರೆ ಅದನ್ನೂ ಮಾಡೋಣವಂತೆ. ಅದನ್ನು ಲೋಕಾಯುಕ್ತರಿಗೆ question ಮಾಡೋಣವಂತೆ. ಆ ಆವರಣ ಇದರಲ್ಲಿ ಬರುತ್ತದೆಂದರೆ ಯಾವ ರೀತಿ permission ನಲ್ಲಿ arrest ಮಾಡಿದ್ದೀರೆಂದು ಅವರನ್ನು ಕೇಳೋಣ.

ಶ್ರೀ ಸಿದ್ದರಾಮಯ್ಯ:- ನಮ್ಮ ನಿಯಮಾವಳಿಯ ಡೆಫನಿಷನ್‌ನಲ್ಲಿ ಇದನ್ನು ಸೇರಿಸಿಲ್ಲವೆಂದು ತಾವು ಹೇಳಿದ್ದೀರಿ. ಅದು ನಿಮಗೆ ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಶಾಸಕರ ಭವನವೇನಿದೆ, ಅದು ಸಂಪೂರ್ಣವಾಗಿ ನಿಮ್ಮ ಅಧೀನದಲ್ಲೇ ಬರುವುದು. ಅದರ ಸಂಪೂರ್ಣ ಜವಾಬ್ದಾರಿ ನಿಮ್ಮ ಅಧೀನದಲ್ಲೇ ಇರುತ್ತದೆ. ಆ ರೂಮ್‌ಗಳನ್ನೆಲ್ಲ ಅಲಾಟ್ ಮಾಡುವವರು ಯಾರು? ಯಾರು Secretary ಬಂದು ಮಾಡುತ್ತಾರೆಯೇ? ಅಲ್ಲಿ ಏನಾದರೂ ತೊಂದರೆಯಾದರೆ ಕ್ರಮ ತೆಗೆದುಕೊಳ್ಳುವವರು ಯಾರು? ನೀವೇ ಅಲ್ಲವೇ? ಆದ್ದರಿಂದ ಶಾಸಕರ ಭವನವೇನಿದೆ, ಅದು ಸಂಪೂರ್ಣವಾಗಿ ನಿಮ್ಮ ಅಧೀನದಲ್ಲೇ ಬರುತ್ತದೆ.

ಅಧ್ಯಕ್ಷರು:- Administration ವಿಚಾರದಲ್ಲಿ ಬರುತ್ತದೆ.

ಶ್ರೀ ಸಿದ್ದರಾಮಯ್ಯ:- ಎರಡೂ ಒಂದೇ. Administration ದೃಷ್ಟಿಯಿಂದ custodian ನೀವಲ್ಲವೇ? an Are you not a custodian of the residential premises?

ಅಧ್ಯಕ್ಷರು:- ತಾವೆಲ್ಲ ಅದನ್ನು ಈ ಡೆಫನಿಷನ್‌ನಲ್ಲಿ ಸೇರಿಸೋಣವೆಂದರೆ ಸೇರಿಸೋಣ.

ಶ್ರೀ ಸಿದ್ದರಾಮಯ್ಯ:- ಸೇರಿಸುವುದು ಬೇರೆ ವಿಚಾರ.

ಅಧ್ಯಕ್ಷರು:- ಇದರಲ್ಲಿ ಅಧ್ಯಕ್ಷರು ಆಗಿಂದಾಗ್ಯೆ ನಿರ್ದಿಷ್ಟಪಡಿಸುವ ಇತರ ಸ್ಥಳಗಳು ಎಂದು ಸಹ ಇದೆ. ಅದು ಇದರಲ್ಲಿ ಬರುತ್ತದೆ.

ಶ್ರೀ ಸಿದ್ದರಾಮಯ್ಯ:- ಹಾಗೆಂದರೆ ಅದೂ ಬರುತ್ತದೆ ಎಂದಾಯಿತು.

ಅಧ್ಯಕ್ಷರು:- ಅದಕ್ಕೆ ಇದನ್ನು ನಾವು ಸೇರಿಸಬೇಕು. ಆದರೆ ನಾವು ಇಲ್ಲಿಯವರೆಗೆ ಇದನ್ನು identify ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ:- Merely because it is not included in that, it does not mean that it is not coming under your purview.

ಅಧ್ಯಕ್ಷರು: ಅದಕ್ಕೆ included ಮಾಡಲು ನಾನು ಇದ್ದೇನೆ.

ಶ್ರೀ ಸಿದ್ದರಾಮಯ್ಯ:- It is coming under your purview, you are the authority. It is definite.

ಅಧ್ಯಕ್ಷರು:- Definitelyಆ ರೀತಿ ಇದ್ದರೆ question ಮಾಡುವಿರಂತೆ.

ಶ್ರೀ. ಸಿದ್ದರಾಮಯ್ಯ: Definitely ಅಲ್ಲ It is definite. ನಿಮ್ಮ premises ನಲ್ಲಿ ನಡೆದಿರುವುದರಿಂದ, ಲೋಕಾಯುಕ್ತರು ನಿಮ್ಮ ವ್ಯಾಪ್ತಿಯಲ್ಲಿ, ಅಧೀನದಲ್ಲಿ ಬರತಕ್ಕ ನೀವು Custodian ಆಗಿರತಕ್ಕ ಜಾಗದಲ್ಲಿ arrest ಮಾಡುತ್ತಿರುವುದರಿಂದ ನಿಮ್ಮ permission ತೆಗೆದುಕೊಂಡಿದ್ದಾರೋ ಇಲ್ಲವೋ ಎಂಬುದು ಒಂದು, ಅಲ್ಲಿಗೆ ಪೊಲೀಸ್‌ನವರು ಹೋಗಿ arrest ಮಾಡಿರುವುದಕ್ಕೆ ನನ್ನ ಪ್ರಕಾರ ನಿಮ್ಮ permission ತೆಗೆದುಕೊಳ್ಳಬೇಕಾಗಿತ್ತು ಆದರೆ, ಅದನ್ನು ತೆಗೆದುಕೊಂಡಿಲ್ಲ ಎಂಬುದು ಒಂದು. ಎರಡನೆಯದು, ನಿಮಗೆ suspend ಮಾಡುವುದಕ್ಕೆ ನನಗೆ powers ಇಲ್ಲ, ಇಲ್ಲಿ lobby ನಲ್ಲಿ ಮಾತ್ರ ನಡೆದಿರುವುದಕ್ಕೆ ಇದೆ ಎನ್ನತಕ್ಕದ್ದು ಸರಿಯಲ್ಲ. ಅಲ್ಲಿ ನಡೆದರೂ ಸಹ ನಿಮಗೆ ಅಧಿಕಾರವಿದೆ. ಅದನ್ನು ತೆಗೆದುಕೊಳ್ಳವುದು ಬಿಡುವುದು ನಿಮಗೆ ಸೇರಿದ ವಿಚಾರ. ಆದರೆ, ನಿಮಗೆ ಅಮಾನತ್ತಿನಲ್ಲಿಡುವ ಅಧಿಕಾರ ಸಂಪೂರ್ಣವಾಗಿ ಇದೆ. Law is very very clear. ಅದನ್ನೇನು ಹುಡುಕಲು ಹೋಗಬೇಕಾಗಿಲ್ಲ. ಅದಕ್ಕೇನು opinion ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ನೀವೇ ಲಾಯರ್ ಆಗಿದ್ದೀರಿ. ಹುಡುಕಲು ಏಕೆ ಹೋಗುತ್ತೀರಿ? ಅದನ್ನು ಸೇರಿಸಿಕೊಂಡು ಬೇಕಾದರೆ ನೀವು ಮಾಡಿ.

ಅಧ್ಯಕ್ಷರು:- ಅದನ್ನು ಸೇರಿಸಿಕೊಂಡು ಮಾಡೋಣ.

ಶ್ರೀ ಸಿದ್ದರಾಮಯ್ಯ ಅನಂತರ ನಿಮಗೆ inherent power ಇದೆ.

ಡಾ: ಬಗಲಿ ಸಾರ್ವಭೌಮ: ಒಬ್ಬ ಅಧಿಕಾರಿಯನ್ನು suspend ಮಾಡಿದರೆ ಆ ಜಾಗಕ್ಕೆ ಇನ್ನೊಬ್ಬರನ್ನು posting ಮಡುತ್ತೀರಿ. ಆದರೆ, ಇಲ್ಲಿ ಒಬ್ಬ ಶಾಸಕರನ್ನು suspend ಮಾಡಿದರೆ ಆ ಜಾಗಕ್ಕೆ ನೀವು ಇನ್ನೋಬ್ಬ ಶಾಸಕರನ್ನು transfer ಮಾಡುವುದಕ್ಕೆ ಬರುವುದಿಲ್ಲ. ಕ್ಷೇತ್ರದ ಜನತೆಯ ಹಿತದೃಷ್ಟಿಯಿಂದ ಆ ಕ್ಷೇತ್ರದ ಜನತೆಗೆ ಮೋಸ ಆಗಬಾರದು. ಅನ್ಯಾಯವಾಗಬಾರದು.

(ಗೊಂದಲ)

ಅಧ್ಯಕ್ಷರು:- ಬಗಲಿಯವರೆ, ನೀವು ಏನು ಮಾತನಾಡುತ್ತೀರಿ?

ಡಾ: ಬಗಲಿ ಸಾರ್ವಭೌಮ: Legislature Home ನಲ್ಲಿ ಏನಾದರೂ ಘಟನೆಯಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ತಮಗೆ ಅಧಿಕಾರ ಇಲ್ಲ.

ಅಧ್ಯಕ್ಷರು: ಬಗಲಿಯವರೆ, ತಾವು ಅದನ್ನು ಬಿಡಿ.

ಶ್ರೀ. ಟಿ.ಬಿ.ಜಯಚಂದ್ರ: ನಮ್ಮ ಸಂಪೂರ್ಣವಾದ ಜವಾಬ್ದಾರಿಕೆ ಅಧ್ಯಕ್ಷರ ಕೈಯಲ್ಲಿದೆಯೆಂದು ನಾವು ತಿಳಿದಿದ್ದೇವೆ. ಅದು ಯಾವುದೇ ಘಟನೆ ಇಲ್ಲಿ ಒಳಗೆ ನಡೆಯಲಿ. ಹೊರಗಡೆ ನಡೆಯಲಿ ರಾಜ್ಯದ ಯಾವುದೇ ಮೂಲೆಯಲ್ಲಿ ಎಲ್ಲೇ ನಡೆದರೂ ಸಹ ನಮ್ಮ ಸಂಪೂರ್ಣವಾದ ರಕ್ಷಣೆ ಮಾಡುವ ಜವಾಬ್ದಾರಿಕೆ ನಿಮ್ಮಲ್ಲಿದೆಯೆಂದು ಇಲ್ಲಿಯವರೆಗೆ ನಾವೆಲ್ಲರೂ ತಿಳಿದುಕೊಂಡು ಬಂದಿದ್ದೇವೆ.ಅದೂ ಶಾಸಕರ ಭವನ. ಶಾಸಕರ ಭವನದಲ್ಲಿ ಆಯಿತು ಎಂದರೆ.., ಒಂದು ಕೆಲಸ ಮಾಡಿ, ತಾವು ತೀರ್ಮಾನ ತೆಗೆದುಕೊಂಡು ತಮ್ಮ ವ್ಯಾಪ್ತಿಗೆ ಅದು ಬರುತ್ತದೆಯೆಂದು ಹೊಸದಾಗಿ ಒಂದು ಬುಲೆಟಿನ್ ಇಶ್ಯೂ ಮಾಡಿ ಇವತ್ತು ಅದು ಸಹ ನಮ್ಮ ವ್ಯಾಪ್ತಿಯಲ್ಲಿ ಬರುತ್ತದೆಯೆಂದು ತೀರ್ಮಾನವನ್ನು ಕೊಡಿ. ಅದರಲ್ಲೇನು ತಪ್ಪಾಗುತ್ತದೆ?

ಅಧ್ಯಕ್ಷರು: ರೂಲ್ಸ್‌ನಲ್ಲಿ ಅದೇ ರೀತಿ ಇದೆ. Mix ಮಾಡುವಂಥದ್ದು ಇದೆ.

ಶ್ರೀ ಟಿ.ಬಿ.ಜಯಚಂದ್ರ: ಅದು ನಮ್ಮ ವ್ಯಾಪ್ತಿಯಲ್ಲಿ ಬರುತ್ತದೆಯೆಂದು ತಾವು ರೂಲಿಂಗ್ ಕೊಟ್ಟರೆ ಮುಗಿದೇ ಹೋಯಿತಲ್ಲಾ? ಇದನ್ನು ಮಾಡುವುದಕ್ಕೆ ತಾವು ಹಿಂದೆ ಮುಂದೆ ಏಕೆ ನೋಡಬೇಕು?

ಅಧ್ಯಕ್ಷರು: ಇದರ ಬಗ್ಗೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯವನ್ನು ಮುಗಿಯುವುದರೊಳಗಾಗಿ ಕೊಡುತ್ತೇನೆ. ಈಗ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ.

ಡಾ: ಶರಣ ಪ್ರಕಾಶ ಪಾಟೀಲ್: ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಅದಕ್ಕೆ ಬೇರೆ ನೋಟೀಸ್ ಕೊಡಿಯೆಂದು ನಾನು ಆಗಲೇ ಹೇಳಿದೆನಲ್ಲಾ? ಚರ್ಚೆ ಮಾಡಬೇಕೆಂದು ಬೇರೆ ನೋಟೀಸ್ ಕೊಡಿ. ಆದ್ದರಿಂದ, ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸಿದ್ದೇನೆ. ಇದಕ್ಕೆ ನಿರ್ಣಯವನ್ನು ನಾನು reserve ಇಟ್ಟಿದ್ದೇನೆ. ಈ ಅಧಿವೇಶನ ಮುಕ್ತಾಯವಾಗುವುದರೊಳಗಾಗಿ ನಾನು ಒಂದು ನಿರ್ಣಯವನ್ನು ಕೊಡುತ್ತೇನೆ. ಇವತ್ತಿನ ಮುಂದಿನ ಕಾರ್ಯಕಲಾಪವನ್ನು

ಊಟದ ನಂತರ ತೆಗೆದುಕೊಳ್ಳೋಣ. ಈಗ ಸದನವನ್ನು ಮಧ್ಯಾಹ್ನ 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ 1 ಗಂಟೆ 48 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿರ್ಧರಿಸಿತು)

[ಸದನವು ಪುನ: ಮಧ್ಯಾಹ್ನ 3.18 ಗಂಟೆಗೆ ಸಮಾವೇಶಗೊಂಡಿತು]

[ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಆ) ವಿಷಯ: ವಕ್ಫ್ ಸಚಿವರು ಶಿವಮೊಗ್ಗದ ಸಮಾರಂಭವೊಂದರಲ್ಲಿ ಮಾನ್ಯ ಶ್ರೀ. ರಾಮುಲು ಅವರನ್ನು 25 ಪ್ರವಾಧಿಗಳ ಪೈಕಿ ಒಬ್ಬರೆಂದು ಹೇಳಿರುವ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಗ್ಗೆ.

ಅಧ್ಯಕ್ಷರು:- ಈಗ Rule 69 ಅಡಿಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಜೆ.ಡಿ.[ಎಸ್] ಪಕ್ಷದಿಂದ ಯಾರಾದರೂ ಮಾತನಾಡುವುದಿದ್ದರೆ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಇಲ್ಲದಿದ್ದರೆ, ನಾನು ಕಾಂಗ್ರೆಸ್ ಪಕ್ಷದವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ನಾನು ಚರ್ಚೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು]:- ಮಾನ್ಯ ಅಧ್ಯಕ್ಷರೆ, ಮೊದಲು ಮಾನ್ಯ ದಿನೇಶ್ ಗುಂಡೂರಾವ್‌ರವರಿಗೆ ನಿಯಮ 69 ರಲ್ಲಿ ಚರ್ಚೆ ಅಡಿ ಅವಕಾಶ ಕೊಡಿ. ಅವರ ಭಾಷಣವಾದ ನಂತರ ಇತರ ಸದಸ್ಯರಿಗೆ ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೆ, ನಾನು ಈಗ ವಿಷಯವೊಂದನ್ನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ನಿನ್ನೆ ಪತ್ರಿಕೆಯಲ್ಲಿ ಸುದ್ದಿಯೊಂದು ಪ್ರಕಟವಾಗಿದೆ. ನಮ್ಮ wakf Ministerರವರು ಪಾಪ! ಸಜ್ಜನರು ಮತ್ತು ಒಳ್ಳೆಯವರು, ಎಲ್ಲಾ ಸರಿ. ಆದರೆ ಅವರು ಶಿವಮೊಗ್ಗದಲ್ಲಿ ಸಮಾರಂಭವೊಂದರಲ್ಲಿ ಮಾತನಾಡುತ್ತಾ ಮಾನ್ಯ ಶ್ರೀರಾಮುಲು ಅವರನ್ನು 25 ಪ್ರವಾದಿಗಳ ಪೈಕಿ ಒಬ್ಬರಂದು ಹೇಳಿ, ಅವರನ್ನು ಮಹಮ್ಮದ್ ಪೈಗಂಬರ್‌ರವರಿಗೆ ಹೋಲಿಸಿದರೆ ಪ್ರಪಂಚ ಏನು ಅನ್ನಬಹುದು? ಈ ದೇಶದಲ್ಲಿ ಜನ ಏನು ಅನ್ನಬಹುದು?

ಅಧ್ಯಕ್ಷರು:- ಆ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣದ ಕೊಡಬೇಕೆನ್ನುತ್ತೀರಾ?

ಈ ಸರ್ಕಾರದಲ್ಲಿ ಎಂತೆಂಥವರನ್ನು ಇಟ್ಟಿದ್ದಾರೆ, ಯಾರು ಹೋಗುತ್ತಾರೆ ಅವರು ಕಲಾವಿದರಿಗೆ ಬೈಯುತ್ತಾರೆ, ಯಾರು ಹೋಗುತ್ತಾರೆ ಪತ್ರಿಕೆಯವರಿಗೆ

ಬೈಯುತ್ತಾರೆ, ಯಾರು ಹೋಗುತ್ತಾರೆ ನೀವು ಪ್ರವಾದಿಗಳೆಂದು ಹೇಳುತ್ತಾರೆ, ಇನ್ನೊಬ್ಬರು ಕಂಡಕ್ಟರ್, ಡ್ರೈವರ್‌ಗೆ ಬೈಯುತ್ತಾರೆ, ಇದೇನಿದು? ಸರ್ಕಾರದಲ್ಲಿ ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡಿದ್ದಾರೋ ಅಥವಾ ಅವರು ಮಂತ್ರಿಗಳಾಗಿದ್ದೇವೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡಿದ್ದಾರೋ?

ಅಧ್ಯಕ್ಷರು: ಮುಖ್ಯಮಂತ್ರಿಗಳು ಬಂದಾಗ ಇದನ್ನು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ, ವಕ್ಫ್ ಸಚಿವರು ಇಲ್ಲೇ ಇದ್ದಾರಲ್ಲ, ಏಕೆ ಈ ರೀತಿ ಹೇಳುವಂಥ ಪ್ರಸಂಗ ಬಂತು? ಒಬ್ಬ ವ್ಯಕ್ತಿಯನ್ನು ಹೊಗಳಬೇಕಾದರೂ ಕೂಡ there is a limit. ಅವರಲ್ಲಿ ದುಡ್ಡು, ಅಧಿಕಾರವಿದೆ ಎಂದಾಕ್ಷಣ ಅವರಿಗೆ ಇವರು ಎಲ್ಲಾ ಸ್ವಾಭಿಮಾನವನ್ನು ಮಾರಿಕೊಳ್ಳುವುದೇ? ನೀನೇ ಇಂದ್ರ, ಚಂದ್ರ, ಅದು ಇದು ಹೇಳಿ ಅದೂ ಒಬ್ಬ ಧರ್ಮ ಗುರುಗಳಿಗೆ ಹೋಲಿಸತಕ್ಕದ್ದು ಸರ್ವಥಾ ತಪ್ಪು, ಪಾಪದ ಕೆಲಸ. ಆ ಪಾಪದ ಕೆಲಸವನ್ನು ಈ ಪುಣ್ಯಾತ್ಮ ಏಕೆ ಮಾಡುವುದಕ್ಕೆ ಹೋಗಿದ್ದಾರೋಗೊತ್ತಿಲ್ಲ. ಇದರಿಂದ ಏನಾಗಿದೆ ಎಂದರೆ, ರಾಜ್ಯದಲ್ಲೆಲ್ಲಾ ಈಗ ಎಜಿಟೇಷನ್ ಶುರುವಾಗಿದೆ, ಪಾಪ, ಅವರಿಗೆ ಘೇರಾವ್ ಮಾಡಿ ಕಪಾಳಮೋಕ್ಷ ಮಾಡಿದರೆಂದು ನನಗೆ ಸುದ್ದಿ ಬಂತು, ಅದು ನಿಜವೋ ಸುಳ್ಳೋ ಅವರೇ ಹೇಳಬೇಕು, ಹೊಡೆಸಿಕೊಂಡವರು ಹೇಳಬೇಕು ನಾನು ಹೇಳುವಂತಿಲ್ಲ. ಆದರೆ ಇದಾಗಬಾರದು, ಸಂಯಮವಿಟ್ಟುಕೊಂಡು ಮಾತನಾಡಬೇಕು, ಎಲ್ಲಿ ಏನು ಮಾತನಾಡಬೇಕೆಂಬ ಸ್ವಲ್ಪ ಪ್ರಜ್ಞೆಯನ್ನಿಟ್ಟುಕೊಂಡು ಮಾತನಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ, ಈ ರೀತಿ ಮಾತನಾಡಬೇಕೆಂಬ ಸ್ವಲ್ಪ ಪ್ರಜ್ಞೆಯನ್ನಿಟ್ಟುಕೊಂಡು ಮಾತನಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ, ಈ ರೀತಿ ಮಾತನಾಡುವುದರಿಂದ ಧರ್ಮಗುರುಗಳಿಗೂ ಅವಮಾನ, ಆ ಸಮಾಜಕ್ಕೂ ಅವಮಾನ, ಅಷ್ಟೇಯಲ್ಲ, ಇಂಥ ಪವಿತ್ರವಾದ ವ್ಯಕ್ತಿಗಳನ್ನು ರಾಜಕಾರಣಿಗಳಿಗೆ ಹೋಲಿಸುವುದು ಸರಿಯಲ್ಲ. ದಯವಿಟ್ಟು ಈ ರೀತಿ ಆಗಬಾರದು, ಅವರು ಈ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಏಕೆಂದರೆ, ನೀವು ಹೇಳಿದ್ದೀರೋ ಹೇಳಿಲ್ಲವೋ ಅಥವಾ ಪತ್ರಿಕೆಯವರೇ ತಪ್ಪಾಗಿ. ಅರ್ಥ ಮಾಡಿಕೊಂಡಿದ್ದಾರೋ ಎಂಬುದು ಈ ಸದನದ ಮುಖಾಂತರವಾದರೂ ಜನರಿಗೆ ಗೊತ್ತಾಗಲಿ. ಏಕೆಂದರೆ, ಏನಾದರೂ ಹೇಳಿದರೆ, ಇವರು ಪತ್ರಿಕೆಯವರ ಮೇಲೆ ಹಾಕುತ್ತಾರೆ, ಇವರನ್ನು ಹೊಗಳುವುದಕ್ಕೆ ಪತ್ರಿಕೆಗಳು ಬೇಕು, ಬಸವಣ್ಣನವರ, ಶಿವರುದ್ರಪ್ಪನವರ, ಕುವೆಂಪುರವರ, ಕನಕದಾಸರ ಇವರೆಲ್ಲರ ಆ ಕೊಟೇಷನ್ಸ್ ಬೇಕು, ಕೆಲಸ ಮಾಡುವುದಕ್ಕೆ ಮಾತ್ರ ಆ ಕೊಟೇಷನ್ಸ್ ಬೇಡ. ಕೊನೆಯಪಕ್ಷ ಅವರು ಏಕೆ ಈ ರೀತಿಯಾಗಿ ವರ್ತನೆ ಮಾಡಿದರು

ಎಂಬುದನ್ನು ಸ್ಪಷ್ಟವಾಗಿ ಸದನದ ಮುಂದೆ ಹೇಳಬೇಕು ಮತ್ತು ಇವತ್ತು ಇಸ್ಲಾಂ ಜನರಿಗೆ ನೋವಾಗಿದೆ, ಆ ಜನತೆಯ ಕ್ಷಮೆಯನ್ನು ಅವರು ಕೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ: ಒಂದು ತಪ್ಪಾಗಿದೆ ಎಂದು ನಾನು ಭಾವಿಸುತ್ತೇನೆ, ನಾವು ಪ್ರಮಾಣವಚನವನ್ನು ಸ್ವೀಕಾರ ಮಾಡಬೇಕಾದರೆ, ಸಂವಿಧಾನದಡಿಯಲ್ಲಿ ಏನಿದೆಯೊ ಆ ರೀತಿ ಪ್ರಮಾಣವಚನ ಸ್ವೀಕಾರ ಮಾಡಬೇಕು. ಬಹಳಷ್ಟು ಸದಸ್ಯರು ಪ್ರಮಾಣವಚನ್ನು ಸ್ವೀಕಾರ ಮಾಡಿದ್ದು ಯಾರ ಹೆಸರಿನಲ್ಲಿ ಎಂದರೆ, ಬಹಳ ಜನ ಅವರ ನಾಯಕರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿರುವಾಗ, ಅವರು ಪ್ರವಾದಿಗಳೆಂದು ಕರೆದರೂ ತಪ್ಪಿಲ್ಲವೆಂದು ಅರ್ಥವೇ? ಬಹುಶಃ ಮೂಲತಃ ತಪ್ಪಾಗಿರುವುದು ಅಲ್ಲಿ ಎಂದು ನಾನು ಭಾವಿಸುತ್ತೇನೆ.

ಪ್ರೊ ಮುಮ್ತಾಜ್ ಆಲಿ ಖಾನ್ [ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾಂತರ ಕಲ್ಯಾಣ ಸಚಿವರು]: ಮಾನ್ಯ ಸಭಾಧ್ಯಕ್ಷರೆ, ಈ ತಿಂಗಳ 22ನೇ ತಾರೀಖಿನಂದು ಬಳ್ಳಾರಿಯಲ್ಲಿ ಸಂಜೆ 6 ಗಂಟೆಗೆ ಒಂದು ಮುಸ್ಲಿಂ ಸಮುದಾಯದ ಸಭೆ ಇತ್ತು. ಆ ಸಭೆಯಲ್ಲಿ ನಾನು ಭಾಗವಹಿಸಿದ್ದೆ, ಶ್ರೀರಾಮುಲುರವರು ಉದಾರ ಸ್ವಭಾವದಿಂದ ಬಡ ಮುಸ್ಲಿಂ ಕುಟುಂಬಗಳಿಗೆ ಒಂದು ಲಕ್ಷ, ಒಂದುವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಿಂದ ನಾನು ಅವರನ್ನು ಅಭಿನಂದಿಸಿ, ಶ್ರೀರಾಮಚಂದ್ರರ ಕೃಪೆ ಇವರ ಮೇಲಿರಬಹುದು, ಬೆಳಕು ಇವರ ಮೇಲೆ ಚೆಲ್ಲಿರಬಹುದು ಆದುದರಿಂದ ಈ ಉದಾರ ಸ್ವಭಾವ ಬಂದಿರಬಹುದೆಂದು ಹೇಳಿದೆ. ಎರಡನೆಯದು, ಅದಕ್ಕೂ ಮೊದಲು ಒಂದು ಸಲ ಹೇಳಿದ್ದೆ, ಇಸ್ಲಾಂ ಪ್ರಕಾರ 1,24,000 ಪ್ರವಾದಿಗಳಿದ್ದಾರೆ, ಕೇವಲ 26 ಹೆಸರುಗಳು ಮಾತ್ರ ಖುರಾನ್ ಷರಿಫ್ ನಲ್ಲಿ ಬಂದಿವೆ, ಇನ್ನು ಒಂದು ಲಕ್ಷ ಪ್ರವಾದಿಗಳು ಯಾರೆಂದು ನನಗೆ ಗೊತ್ತಿಲ್ಲ. ಯಾರು ಇರಬಹುದು, ಯಾರು ಇಲ್ಲದಿರಬಹುದು, ಈ ವಾದವಿವಾದಿಂದ ಹೌದು ಎಂದು ಹೇಳಿಬಿಟ್ಟೆ, ಆದರೆ ಕನ್ನಡಪ್ರಭ ವರದಿಗಾರರು, ಬಳ್ಳಾರಿಯಲ್ಲಿರುವ ವರದಿಗಾರರು ಇದನ್ನು ವರದಿ ಮಾಡಲಿಲ್ಲ. ಯಾರು ಪ್ರತ್ಯಕ್ಷವಾಗಿ ಆ ಸ್ಥಳದಲ್ಲಿದ್ದು ಹೇಳಿದ್ದನ್ನು ಕೇಳಿದರು ಅವರು ಇದನ್ನು ಹೇಳಲಿಲ್ಲ. ಆದರೆ ಬೆಂಗಳೂರಿನಲ್ಲಿರುವ ಕನ್ನಡಪ್ರಭ ವರದಿಗಾರರು ಅವರಿಗೇನು ಜ್ಞಾನೋದಯವಾಯಿತೊ ಗೊತ್ತಿಲ್ಲ. ಅವರು ಈ ರೀತಿ ಹೇಳಿದ್ದಾರೆಂದು ಬರೆದಿದ್ದಾರೆ, ಇದು ನೂರಕ್ಕೆ ನೂರು ಸುಳ್ಳು, ಪ್ರವಾದಿಗಳಿಗೆ ಯಾರನ್ನು ಹೋಲಿಸಲು ಸಾಧ್ಯವಿಲ್ಲ. ಹೋಲಿಸುವುದು ಕೂಡ ಪಾಪ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ನಾನು ಕನ್ನಡಪ್ರಭ ಸಂಪಾದಕರಿಗೆ ಪತ್ರವನ್ನು ಕಳುಹಿಸುತ್ತಿದ್ದೇನೆ. ಈ ರೀತಿ ಅನ್ಯಾಯವಾಗಿ ಅವರು ಬರೆದಿರುವುದರಿಂದ ನನಗೆ ಮಾನಸಿಕ ಒತ್ತಡ ಜಾಸ್ತಿಯಾಗಿದೆ, ನನಗೆ ಯಾರು ಘೇರಾವ್ ಮಾಡಿಲ್ಲ, ಯಾರು ಹೊಡೆಯಲಿಲ್ಲ,

ಸುಳ್ಳು ವರದಿಯಾಗಿದೆ. ಈ ಕನ್ನಡಪ್ರಭ ಬೆಂಗಳೂರಿನ ವರದಿಗಾರರರು ಕನಿಷ್ಠ ಪಕ್ಷ ಅವರಿಂದ ನಾನು ಕ್ಷಮೆ ಕೇಳುತ್ತಿಲ್ಲ, ತಪ್ಪು ಮಾಹಿತಿಯನ್ನು ಕೊಟ್ಟದ್ದೇವೆಂದು ಅಷ್ಟು ಹೇಳಿದರೆ ಸಾಕೆಂದು ಹೇಳುತ್ತಿದ್ದೇನೆ. ಇಷ್ಟನ್ನು ನನ್ನ ಆತ್ಮೀಯರಾದ ವರದಿಗಾರರಲ್ಲಿ ಹೇಳುತ್ತಿದ್ದೇನೆ, ಇಲ್ಲಿಗೆ ಇದು ಮುಗಿಯಬೇಕಾಗಿದೆ. ಸೂಕ್ಷ್ಮವಾದ ಈ ವಿಷಯವನ್ನು ಬೆಳೆಸಿಕೊಂಡು ಹೋದರೆ ಅನೇಕ ರೀತಿಯ ಬಣ್ಣವನ್ನು ಕೊಡುತ್ತಾರೆ.

ಶ್ರೀ. ಎಂ.ಮಲ್ಲಿಕಾರ್ಜುನ ಖರ್ಗೆ: ಬೆಳೆಸಬೇಕೆಂದಿದ್ದರೆ, ಮರುದಿವಸವೇ ಕೌಂಟರ್ ಮಾಡಿ ಎಲ್ಲಾ ಕಡೆ ಹಬ್ಬಿಸುತ್ತಿದ್ದರು, ಬೆಳೆಸುವವರು ನೀವೇ. ಬಿಜೆಪಿಯವರಾದ ನೀವು expert ಇದ್ದೀರಿ, ಎಲ್ಲಿ ಜಗಳವಿರುವುದಿಲ್ಲ ಅಲ್ಲಿ ಚಿವುಟಿ ಜಗಳ ತೆಗೆಯುವವರು, ಕಾಲು ಕೆರೆದುಕೊಂಡು ಜಗಳ ತೆಗೆಯುವವರು ನೀವು, ನಾವಲ್ಲ. ಅದಕ್ಕೆ ನಾವು ನಿಮಗೆ ಕೇಳಿದ್ದು, ನಿಮ್ಮಂಥವರು ಹೋಗಿ ಅದರಲ್ಲಿ ಏಕೆ ಸಿಕ್ಕಿಬಿದ್ದೀರಿ? ಏನು ಆ ಲಕ್ಷ ಪ್ರವಾದಿಗಳಲ್ಲಿ ನಿಮ್ಮನ್ನು ಸೇರಿಸಿದರೊ, 26ನೆಯದಲ್ಲವೆಂದು ಹೇಳಿದಿರಿ. ಆ ಲಕ್ಷದಲ್ಲಿ ಸೇರಿಸಿದರೇನು? ಅಂಥವರ ಬಗ್ಗೆ ಆ ರೀತಿ ಮಾತನಾಡುವುದನ್ನು ಸ್ವಲ್ಪ ನಿಲ್ಲಿಸಿ, ನಿಮ್ಮ ಪಾರ್ಟಿಗೆ ಆರ್ಥಿಕವಾಗಿ ಬೆಂಬಲವನ್ನು ಕೊಟ್ಟಿರಬಹುದು, ಇಡೀ ಸ್ವಾಭಿಮಾನವನ್ನೇ ಅವರಿಗೋಸ್ಕರ ಮಾರಿಕೊಳ್ಳುತ್ತೀರಾ? ಶ್ರೀರಾಮಚಂದ್ರನ ಕೃಪೆ ಇರಬಹುದಂತೆ. ಏನು ಶ್ರೀರಾಮಚಂದ್ರ 14 ವರ್ಷ ವನವಾಸಕ್ಕೆ ಹೋಗಿದ್ದ, ಅವರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಸಿಗಲಿಲ್ಲ, ಆಳ್ವಿಕೆಯನ್ನು ಭರತನೇ ಮಾಡಿದ. ಅದಕ್ಕೆ ನೀವು ಶ್ರೀರಾಮಚಂದ್ರನಿಗೆ ಹೋಲಿಸಿ, ಅವರಿಗೆ ಹೋಲಿಸಿ ಇವರಿಗೆ ಹೋಲಿಸಿ ಮಾತನಾಡಬೇಡಿ. ನಾವೆಲ್ಲರೂ ಸಾಮಾನ್ಯ ಜನರು, ಸಾಮ್ಹಾನ್ಯ ಜನರಂತೆ ಮನುಷ್ಯತ್ವವನ್ನು ಇಟ್ಟುಕೊಂಡು ಕೆಲಸ ಮಾಡಿದರೆ ಸಾಕು, ನೀವು ದೇವರಾಗುವುದು ಬೇಡ. ನಿಮಗೆ ದೇವರಾಗುವ ಯೋಗ್ಯತೆಯೂ ಇಲ್ಲ, ಆಗುವ ಪ್ರಶ್ನೆಯೂ ಇಲ್ಲ. ಆದರೆ ಕನಿಷ್ಠ ನೀವು ಮನುಷ್ಯರಾಗಿಯಾದರೂ ನೀವು ಬಾಳಿರಿ, ಮುನುಷ್ಯರಂತೆ ನಡೆದುಕೊಳ್ಳಿ, ಮನುಷ್ಯರಾಗಿ ಬೇರೆ ಜನರನ್ನು ನೋಡಿ, ಅಷ್ಟನ್ನು ಮಾಡಿದರೆ ಸಾಕು.

ಒಬ್ಬ ಮಾನ್ಯ ಸದಸ್ಯರು:- ಇಂದಿರಾ ಗಾಂಧಿಯವರನ್ನು ಭಾರತ ಮಾತೆ ಎಂದು ಕರೆದಿರುವುದನ್ನು ನೋಡಿದ್ದೇವೆ.

ಶ್ರೀ ಎಂ.ಮಲ್ಲಕಾರ್ಜುನ ಖರ್ಗೆ: ವಾಜಪೇಯಿಯವರೆ ದುರ್ಗಾಮಾತೆ ಎಂದು ಹೇಳಿದರು, ಅಲ್ಲಿ ಹೋಗಿ ಹೇಳಿ.

ಒಬ್ಬ ಮಾನ್ಯ ಸದಸ್ಯರು:- ಸರ್, ವಾಜಪೇಯಿ ಹೇಳುವುದಕ್ಕಿಂತ ಮುಂಚೆ ಇಂದಿರಾ ಗಾಂಧಿಯುವರಿಗೆ ಹೇಳಿದ್ದಾರೆ.....

[ಗೊಂದಲ]

ಶ್ರೀ ದಿನೇಶ್ ಗುಂಡೂರಾವ್: ಸಿ.ಟಿ.ರವಿಯವರೆ, ದುರ್ಗಾಮಾತೆ ಎಂದು ಹೇಳಿದವರು ವಾಜಪೇಯಿಯವರು ಕುಳಿತುಕೊಳ್ಳಿ, ಈಗ ನಿಮ್ಮ ಮುಂದಿನ ಮುಖ್ಯಮಂತ್ರಿ ಶ್ರೀರಾಮಲುರವರ ಬಗ್ಗೆ ಮಾತನಾಡುವುದು ಬೇಡ.

[ಗೊಂದಲ]

ಶ್ರೀ ಸಿ.ಟಿ.ರವಿ: ನೀವಾಗಲಿ ನಾವಾಗಲಿ ತಪ್ಪಿದ್ದಲ್ಲ, ಆನಂದನನ್ನೇ ಹೊಗಳಿದವರು ನೀವು.

ಅಧ್ಯಕ್ಷರು: ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ, ಈಗಾಗಲೇ ಮಂತ್ರಿಗಳು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ ಮತ್ತೆ ಬೆಳೆಸುವುದು ಬೇಡ, ಈಗ ರೂಲ್ 69 ವಿಷಯ ಮಂಡನೆಯ ಮೇಲೆ ಚರ್ಚೆ ಏನು ಆರಂಭವಾಗಿದೆ, ಇದರಲ್ಲಿ ಬಹಳಷ್ಟು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳುತ್ತಿದ್ದಾರೆ. ಆದುದರಿಂದ ಎಲ್ಲರೂ ಹತ್ತಹತ್ತು ನಿಮಿಷದಲ್ಲಿ ಟೈಂ ಲಿಮಿಟ್ ಇಟ್ಟುಕೊಂಡು ಮಾತನಾಡಿದರೆ, ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಲೆಸ್ಟ್ ಅನ್ನು ಮತ್ತೊಂದು ದಿವಸ ಹೇಳುತ್ತೇನೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ನಿಮ್ಮ ನಿಮ್ಮ ಪಕ್ಷದ ಪರವಾಗಿ ಯಾರ್ಯಾರು ಮಾತನಾಡಬೇಕೆಂದು ಒಂದು ಲಿಸ್ಟ್ ಅನ್ನು ಕೊಟ್ಟಿದ್ದಾರೆ, ಆ ಲಿಸ್ಟ್ ಪ್ರಕಾರ ನಾನು ಅವಕಾಶವನ್ನು ಕೊಡುತ್ತೇನೆ. ಆಮೇಲೆ ನನಗೊಂದು ಅವಕಾಸ ಕೊಡಿ ಎಂದು ಕೇಳಿದರೆ ಇಲ್ಲ. ನಿಮ್ಮ ಲಿಸ್ಟ್ ಏನಿದೆ, ಆ ಪ್ರಕಾರ ಕೊಡುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು:– ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಬೆಂಬಲ ಬೆಲೆಯ ಬಗ್ಗೆ ನಾನು ಮಾತನಾಡಬೇಕಾಗಿತ್ತು.

ಅಧ್ಯಕ್ಷರು: ಅದು Zero Hourನಲ್ಲಿ ಬರುವುದಿಲ್ಲ, ಅದನ್ನು ಬೇರೆ ರೂಪದಲ್ಲಿ ಕೊಡಿ, ನಾಳೆ ಅವಕಾಸ ಕೊಡೋಣ, ಈಗ ದಿನೇಶ್ ಗುಂಡುರಾವ್ ಅವರು ರೂಲ್ ಮೇಲೆ ಮಾತನಾಡುವುದು.

7. ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ವಿಷಯ: ಕಾನೂನು ಸುವ್ಯವಸ್ಥೆಯ ಬಗ್ಗೆ.

ಶ್ರೀ ದಿನೇಶ್ ಗುಂಡುರಾವ್[ಗಾಂಧಿನಗರ]: ಮಾನ್ಯ ಅಧ್ಯಕ್ಷರೆ, ನನಗೆ ಈ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ವಂದನೆಗಳು. ಕಾನೂನು ಸುವ್ಯವಸ್ಥೆಯ ಬಗ್ಗೆ ನಮ್ಮ ಹಲವಾರು ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಆಗಿರುವ ಘಟನೆಗಳನ್ನು ಬಹುಶಃ ನೋಡಿದಾಗ ಪ್ರತಿಯೊಬ್ಬ ಕರ್ನಾಟಕ ರಾಜ್ಯದ ಪ್ರಜೆ ತಲೆತಗ್ಗಿಸುವಂಥ ವಿಚಾರಗಳು ನಮ್ಮ ಮುಂದೆ ನಡೆದಿರುವುದು.

ಕಳೆದ 8 ರಿಂದ 9 ತಿಂಗಳುಗಳಲ್ಲಿ ಎಲ್ಲಾ ಹಂತಗಳಲ್ಲಿ ಕೂಡ ಈ ಸರ್ಕಾರದ ಸಂಪೂರ್ಣ ವಿಫಲವಾಗಿದೆ. ಅದರಲ್ಲಿಯೂ ವಿಶೇಷವಾಗಿ ಗೃಹಸಚಿವರಾದ ಸನ್ಮಾನ್ಯ ವಿ.ಎಸ್. ಆಚಾರ್ಯ ಅವರ ಜಿಲ್ಲೆಯಲ್ಲಿ ಆಗಿರತಕ್ಕಂತಹ ಘಟನೆಗಳು ಅವರ Home district ನಲ್ಲಿ ಯಾವ ಪ್ರಮಾಣದಲ್ಲಿ ಆಗಿದೆ ಎಂದು ನೋಡಿದಾಗ ಯಾವ ರೀತಿಯಾಗಿ ನಮ್ಮ ರಾಜ್ಯದ ಕಾನೂನು ಸುವ್ಯವಸ್ಥೆ ಇದೆ ಎಂದು ಎದ್ದು ಕಾಣುತ್ತಿದೆ. ಪ್ರಾರಂಭದಲ್ಲಿ ರೈತರ ಮೇಲೆ ಆಗಿರತಕ್ಕಂತಹ ಗೋಲಿಬಾರ್‌ನಿಂದ ಹಿಡಿದು ಪದ್ಮ ಪ್ರಿಯರವರ ಆತ್ಮಹತ್ಯೆ ಆಗಿರುವ ಘಟನೆ, ಕ್ರಿಶ್ಚಿಯನ್ಸ್ ಮೇಲೆ ಆಗಿರತಕ್ಕಂತಹ ಹಲ್ಲೆ ಇರಬಹುದು, ಚರ್ಚ್‌ಗಳ ಮೇಲೆ ಆಗಿರತಕ್ಕಂತಹ ದಾಳಿಗಳು ಇರಬಹುದು, ಇತ್ತೀಚೆಗೆ ಆಗುತ್ತಿರತಕ್ಕಂತಹ ಘಟನೆಗಳು, ಪಬ್‌ನಲ್ಲಿ ನಡೆದಂತಹ ಘಟನೆ ಇರಬಹುದು, MLA ಯವರ ಮಗಳ ಮೇಲೆ ಆದಂತಹ ಅಪಹರಣದ ಕೃತ್ಯ ಅದೇ ರೀತಿಯಾಗಿ ಜರ್ನಲಿಸ್ಟ್ ಅದ ಮಾನ್ಯ ಸೀತಾರಾಮ್‌ರವರ ಮೇಲೆ ಅಗಿರತಕ್ಕಂತಹ ಹಲ್ಲೆ, ಯಾವ ರೀತಿಯಾಗಿ ಅವರ ಮೇಲೆ ಈ ಸರ್ಕಾರದವರು ಕ್ರಮ ತೆಗೆದುಕೊಂಡರು, ಬೆಂಗಳೂರು ನಗರ, ಇಲ್ಲಿಯ ಸರಣೀಯ ಹತ್ಯೆಗಳು ಮತ್ತು ಕ್ರೈಮ್ ರೇಟ್ ಯಾವ ರೀತಿ ಬೆಳೆಯುತ್ತಿದೆ, ಇವೆಲ್ಲಾ ನೋಡಿದಾಗ ಬಹುಶಃ ಬೇರೆ ಯಾರಾದರೂ ಒಬ್ಬರು ಗೃಹಸಚಿವರಾಗಿದ್ದರೆ ಯಾರ ಒತ್ತಡ ಇಲ್ಲದೆ ಸ್ವಯಂ ಪ್ರೇರಣೆಯಿಂದ ಕೂಡಲೇ ರಾಜೀನಾಮೆ ಕೊಟ್ಟು ಹೋಗುವ ಪರಿಸ್ಥಿತಿ ಉದ್ಭವವಾಗುತ್ತಿತ್ತು. ಏಕೆಂದರೆ ಇದು ಎಲ್ಲೋ ಒಂದು ಕಡೆ incident ಏ ನಡೆದರೆ ಪರವಾಗಿಲ್ಲ. ಅವರವರ ಜಿಲ್ಲೆಗಳಲ್ಲಿ ಅವರವರ ಊರುಗಳಲ್ಲಿ ಆಗುತ್ತಿರತಕ್ಕಂತಹ ಘಟನೆಗಳು. ಇವರು ಒಂದು ಕಡೆ ವಿದ್ಯಾರ್ಥಿಗಳನ್ನೆಲ್ಲಾ ಕರೆದುಕೊಂಡು ಈ ಭಯೋತ್ಪಾದನೆ ನಿವಾರಣಾ ಜಾಗೃತಿ ಸಮಾವೇಶಗಳನ್ನು ಮಾಡುತ್ತಿದ್ದಾರೆ. ಆದರೆ ಇವರ ಅಂಗ ಸಂಸ್ಥೆಗಳು ಭಯವನ್ನು ಉತ್ಪಾದನೆ ಮಾಡತಕ್ಕಂತಹ ಕೆಲಸವನ್ನು ಇನ್ನೊಂದು ಕಡೆ ಮಾಡುತ್ತಿದ್ದಾರೆ. ಒಂದು ಕಡೆ ಭಯೋತ್ಪಾದನೆ ವಿರೋಧ ಮಾಡುತ್ತಿರುವ ಚಟುವಟಿಕೆ ಎಂದು ಹೇಳಿಕೊಂಡು ತಮ್ಮ ಪಕ್ಷದ ಬಲವರ್ಧನೆಗೆ ಪ್ರಯತ್ನ ಮಾಡುವುದು, ಇನ್ನೊಂದು ಕಡೆ ರಾಮಸೇನೆ, ಭಜರಂಗದಳ, ಇವು ಇವರಿಗೆ ಬಹಳ ಹತ್ತಿರದಲ್ಲಿರತಕ್ಕಂತಹ ಸಂಘಟನೆಗಳು. ಇವರು ಭಯ ಉತ್ಪಾದನೆ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ವಿಪರ್ಯಾಸ ಯಾವ ರೀತಿಯಾಗಿ ಅವರು ಮುತಾಲಿಕ್ ಇರಬಹುದು, ಯಾರೇ ಇರಬಹುದು, ಅವರೆಲ್ಲರನ್ನೂ ಕೂಡ ಭಾರತೀಯ ಜನತಾ ಪಕ್ಷದವರು ಉಪಯೋಗಿಸಿ ಕೊಂಡಿದ್ದಾರೆ. ಇವರು ಅಧಿಕಾರಕ್ಕೆ ಬರುವಾಗ ರಾಮಸೇನೆಯವರೂ ಬೇಕಾಗಿತ್ತು. ಮುತಾಲಿಕೂ ಬೇಕಾಗಿತ್ತು ಅಯೋಧ್ಯೆಯ ಶ್ರೀರಾಮ ಬೇಕಾಗಿತ್ತು, ಎಲ್ಲರೂ ಬೇಕಾಗಿತ್ತು. ಅಧಿಕಾರಕ್ಕೆ ಬಂದ

ಮೇಲೆ ಜೈ ಶ್ರೀರಾಮನನ್ನೂ ಮರೆತುಬಿಟ್ಟರು, ಅಯೋಧ್ಯೆಯನ್ನು ಮರೆತು ಬಿಟ್ಟರು, ಮುತಾಲಿಕ್‍ಗೂ ಕೂಡ ಈಗ ಮರೆಯುತ್ತಿದ್ದಾರೆ. ಅವರೆಲ್ಲಾ ಬಲಿಪಶುಗಳಾದರು. ಇವರ ರಾಜಕೀಯ ಸ್ವಾರ್ಥದ ರಾಜಕಾರಣದಿಂದ ಹಿಂದೂ ಧರ್ಮ ಮತ್ತು ಶ್ರೀರಾಮ ಎಲ್ಲರನ್ನೂ ಕೂಡ ಬಲಿಪಶು ಮಾಡಿಕೊಂಡರು. ಅಯೋಧ್ಯೆಯಲ್ಲಿ ಇವತ್ತು ಬಹುಶಃ BJP ಗೆಲ್ಲುವುದಕ್ಕಾಗುತ್ತಿಲ್ಲ. ಅಂತಹ ಪರಿಸ್ಥಿತಿ ಬಂದಿದೆ.

ಶ್ರೀ ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ವೀರಪ್ಪನ್ ಡಾ: ರಾಜ್‍ಕುಮಾರ್‌ರವರಿಗೆ ಹಿಡಿದುಕೊಂಡು ಹೋದಾಗ, ಎಷ್ಟು ಜನ ರಾಜೀನಾಮೆ ಕೊಟ್ಟರು? ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟರಾ, ಎಲ್ಲರೂ ಕೊಟ್ಟರೋ? ಅಂತಹ ದಂಧೆ ಏನೂ ಆಗಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ನಾನು ಯೀಲ್ಡ್ ಆಗಿಲ್ಲ. ನನಗೆ ಕೊಟ್ಟಿರುವುದು 10 ನಿಮಿಷ. ನೀವೂ ಕೂಡ ನಂತರ ಮಾತನಾಡಿ.

ಅಧ್ಯಕ್ಷರು: ಮಾನ್ಯ ಸದಸ್ಯರು ಮಾತನಾಡುವಾಗ ಅವರು ಯೀಲ್ಡ್ ಆದರೆ ಅವಕಾಶ ಕೊಟ್ಟರೆ ಮಾತನಾಡಿ. ಒಂದು ಸಾರಿ ಅವರು ಏನು ಹೇಳಬೇಕು ಹೇಳಿಬಿಡಲಿ. ನಂತರ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ದಿನೇಶ್ ಗುಂಡೂರಾವ್: ಅವರೂ ಕೂಡ ಮಾತನಾಡಲಿ ನಾವೇನೂ ಅಡ್ಡ ಬರುವುದಿಲ್ಲ. ಪ್ರತಿಯೊಂದು ಹಂತದಲ್ಲಿ ಮಾನ್ಯ ಅಧ್ಯಕ್ಷತೆ ಸೀತಾರಾಂ ರವರ ಕೇಸ್ ನೋಡಿದರೆ ಕೋರ್ಟಿನಿಂದಲೇ ಸರ್ಕಾರಕ್ಕೆ ದಂಡ ಹಾಕಿ 10,000 ರೂ. ಕಟ್ಟಬೇಕೆಂದು ಹೇಳಿದ್ದಾರೆ. ಏಕೆಂದರೆ ಅಲ್ಲಿಯ ಪೋಲಿಸ್ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಅವರಿಗೆ ಕಿರುಕುಳ ಕೊಡುತ್ತಿದ್ದಾರೆಂದು ಹೇಳಿ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆಂದರೆ ತಲೆ ತಗ್ಗಿಸತಕ್ಕಂತಹ ವಿಚಾರ. ನೀವು ಏಕೆ ಅವರಿಗೆ ಉದ್ದೇಶಪೂರ್ವಕವಾಗಿ ತೊಂದರೆ ಕೊಟ್ಟಿರಿ, 10,000 ರೂಪಾಯಿ ದಂಡ ಕಟ್ಟಿ ಎಂದರೆ, ಇದರ ಮೂಲ ತಮ್ಮ ಹಿಂದುತ್ವದ ಉಗ್ರವಾದಿಗಳನ್ನು ಒಂದು ಕಡೆ ಬಿಡುತ್ತಾರೆ, ಆ ಉಗ್ರವಾದಿತನದಲ್ಲಿ ಸ್ವಲ್ಪ ಈ ಕಡೆ ಬರುತ್ತಾರೆ ಇವರು. ನಾವು ಅ ಮಟ್ಟದಲ್ಲಿ ಇಲ್ಲವೆಂದು ಜನರಿಗೆ ತೋರಿಸಿಕೊಳ್ಳುವುದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಇವತ್ತು ಪೋಲಿಸರಿಂದ ಕಿರುಕುಳ ಆಗುತ್ತಿದೆ. ಶ್ರೀಮತಿ ಪದ್ಮಪ್ರಿಯರವರ ಕೇಸ್‍ನಲ್ಲಿಯೂ ಕೂಡ ಯಾರೋ ಅತುಲ್‌ರಾವ್ ಎಂದು ಇದ್ದಾರೆ. ಅವರೂ ಕೂಡ ಇವತ್ತು ಉದ್ದೇಶಪೂರ್ವಕವಾಗಿ ನನಗೆ ಪೋಲಿಸ್‌ನವರು ಕಿರುಕುಳ ಕೊಡುತ್ತಿದ್ದಾರೆಂದು statement ಕೊಡುತ್ತಿದ್ದಾರೆ. ಸುಮ್ಮನೆ ಕೇಸ್ ಹಾಕುವುದು ಕರೆಸುವುದು ಮಾಡುತ್ತಿದ್ದಾರೆ. ಈ ರೀತಿಯಾಗಿ ಇವತ್ತು ಪೋಲಿಸ್ ಇಲಾಖೆಯನ್ನು, ಸಂಪೂರ್ಣವಾಗಿ ತಮ್ಮ ಸ್ವಾರ್ಥಕ್ಕೋಸ್ಕರ ಉಪಯೋಗಿಸಿಕೊಂಡು ಅವರು ಕೆಲಸ

ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಬಂದಾಗ ಇವತ್ತು ನಾವು ಯಾರನ್ನು ಬ್ಲೇಮ್ ಮಾಡಬೇಕಾಗುತ್ತದೆ? ಇಡೀ ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಬ್ಬರು ಕೂಡ ಭಾರತ ದೇಶದಲ್ಲಿ ಎಲ್ಲಿಯೋ ಹೋಗಿ, ಪ್ರತಿಯೊಬ್ಬರು ನಿಮ್ಮ ಕರ್ನಾಟಕ ಏನಾಗುತ್ತಿದೆ ಎಂದು ಕೇಳುತ್ತಿದ್ದಾರೆ. ನನಗೆ ಬಹಳ ಹತ್ತಿರ ಇರತಕ್ಕಂತಹ ಅನೇಕ ಕ್ರಿಶ್ಚಿಯನ್ ಸ್ನೇಹಿತರು ಇದ್ದಾರೆ. ನಾನು ಕರ್ನಾಟಕದಲ್ಲಿ ಇರಬೇಕೋ ಬೇಡ ಎಂದು ಚಿಂತನೆ ಮಾಡತಕ್ಕಂತಹ ಪರಿಸ್ಥಿತಿ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ. ಈ ತರಹ ಏಕೆ ಹೇಳುತ್ತಾರೆ? ಯಾವಾಗ ಸರ್ಕಾರದಿಂದ ಅವರಿಗೆ ನಂಬಿಕೆ ಹೊರಟು ಹೋಗುತ್ತದೆ, ಯಾವಾಗ ಸರ್ಕಾರದ ಮೇಲಿನಿಂದ ಭರವಸೆ ಹೊರಟು ಹೋಗುತ್ತದೆ, ನಮಗೆ ರಕ್ಷಣೆ ಕೊಡತಕ್ಕಂತಹ ಶಕ್ತಿ ಈ ಸರ್ಕಾರಕ್ಕೆ ಇದೆಯೋ ಇಲ್ಲವೋ ಎಂಬ ಒಂದು ಅಪನಂಬಿಕೆ ಬಂದಾಗ ಅವರಲ್ಲಿ ಕೂಡ ನಾವು ಇಲ್ಲಿ ಇರಬೇಕೋ ಬೇಡ ಎಂದು ಚಿಂತನೆ ಪ್ರಾರಂಬವಾಗುತ್ತದೆ. ಆ ಭಯದ ವಾತಾವರಣ ನಿರ್ಮಾಣ ಮಾಡತಕ್ಕಂಥದ್ದು ನೀವೇ. ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಜೊತೆಯಲ್ಲಿ ತೆಗೆದುಕೊಂಡು ದೊಡ್ಡ ದೊಡ್ಡ ಸಂಘಟನೆಗಳನ್ನು ಮಾಡುತ್ತಿದ್ದೀರಿ. ಅದರ ಅವಶ್ಯಕತೆ ಇದೆಯೋ ಇಲ್ಲ ಎಂಬ ಪ್ರಶ್ನೆ ಉದ್ಭವವಾಗುತ್ತಿದೆ. ಭಯೋತ್ಪಾದನಾ ನಿವಾರಣೆ ಜಾಗೃತಿ ವೇದಿಕೆಗಳನ್ನು ಮಾಡಿಕೊಂಡಿದ್ದೀರಿ, ಅದರಲ್ಲಿ ಯಾವ ತರಹದ ಬಾಷಣಗಳನ್ನು ನೀವು ಮಾಡುತ್ತಿದ್ದೀರಿ, ಬಹಳ ಎಚ್ಚರಿಕೆಯಿಂದ ಇರಿ, ನಿಮ್ಮ ಪಕ್ಕದಲ್ಲಿರತಕ್ಕಂತಹ ವಿದ್ಯಾರ್ಥಿಗಳ ಮೇಲೆ ಕಣ್ಣು ಇಟ್ಟಿರಿ. ಅವರ ಭಾಷಣಗಳಲ್ಲಿ ಅವರವರಲ್ಲಿಯೇ ಡಿವಿಷನ್ಸ್ ಮಾಡುತ್ತಿದ್ದೀರಿ. ಕೆಲವು ಕಡೆಗಳಲ್ಲಿ ಅದೇ ವೇದಿಕೆಯನ್ನು ಉಪಯೋಗಿಸಿಕೊಂಡು. ರಾಜಕಾರಣ ಮಾಡುತ್ತಿದ್ದೀರಿ. ಕೆಲವು ಕಡೆ ನಾನು ನೋಡಿರುವಂಥದ್ದು ಅಲ್ಲಿರತಕ್ಕಂತಹ speakers ಕೇಂದ್ರ ಸರ್ಕಾರದ ಮೇಲೆ ಟೀಕೆ ಮಾಡುತ್ತಾರೆ. ಕೇಂದ್ರ ಸರ್ಕಾರ ಭಯೋತ್ಪಾದನೆ ಬಗ್ಗೆ ಮೃದು ಧೋರಣೆ ತಾಳಿದೆ. ಸರಿಯಾದ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿ, ಅಲ್ಲಿಯ speakers ಕೂಡ ವಿದ್ಯಾರ್ಥಿ ಜಾಗೃತಿ ಸಮಾವೇಶದಲ್ಲಿ ಕೇಂದ್ರ ಸರ್ಕಾರದ ಬಗ್ಗೆ ಟೀಕೆ ಮಾಡುತ್ತಾರೆ. ಎಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರಿದ್ದಾರೆ, ಅಲ್ಲಿ ಯಾವುದೂ ನಡೆಯುವುದಿಲ್ಲ. ಏಕೆಂದರೆ ಅಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಇರುತ್ತಾರೆ ಅಲ್ಲಿ ನೀವು ಸ್ವಲ್ಪ ಹುಷಾರಾಗಿರುತ್ತೀರಿ. ಎಲ್ಲಿ BJP ಪಕ್ಷದ ಶಾಸಕರು ಇರುತ್ತಾರೆ, ಅಲ್ಲಿ ತಮ್ಮ ಇಷ್ಟಾನುಸಾರ ತಮ್ಮ ತತ್ವದ ಬೆಳವಣಿಗೆಗೋಸ್ಕರ ABVP, RSS, VHP, ಭಜರಂಗದಳದ ಕಾಯಕರ್ತರು ಸೇರಿಕೊಂಡು ಅಲ್ಲಿ ಬೇರೆ ರೀತಿಯ ಭಾಷಣಗಳನ್ನು ಮಾಡುತ್ತಾರೆ. ಭಯೋತ್ಪಾದನೆ ನಿವಾರಣಾ ಜಾಗೃತಿ ವೇದಿಕೆ ಏನು ಮಾಡಿದರು, ಅವರಿಗೆ ನಿಜವಾಗಿಯೂ ಪ್ರಾಮಾಣಿಕತೆ ಇದ್ದಿದ್ದರೆ, ಸರ್ಕಾರದಲ್ಲಿ ಅನೇಕ

ಕಾರ್ಯಕ್ರಮಗಳು ಆಗುತ್ತವೆ. ಅದರಲ್ಲಿ ಯಾರಿಗೆ ಮೆಂಬರ್ಸ್ ಮಾಡಬೇಕು, ಯಾರಿಗೆ ಬಿಡಬೇಕು, ಯಾರನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಹಕ್ಕು ಇರುತ್ತದೆ. ನಾಳೆ ಮೈಸೂರು ಲ್ಯಾಂಪ್ಸ್ ಕಾರ್ಪೊರೇಷನ್‌ಗೆ ಮೆಂಬರ್ ಮಾಡುತ್ತೀರಿ. ನಿಮಗೆ ಇಷ್ಟ ಬಂದವರಿಗೆ ನಿಮ್ಮ ಪಾರ್ಟಿ ಕಾರ್ಯಕರ್ತರಿಗೆ ಯಾರಿಗಾದರೂ ಹಾಕಿಕೊಳ್ಳಿ. ಒಂದು ಆಶ್ರಮ ಸಮಿತಿ ಮಾಡುತ್ತೀರಿ ಅದಕ್ಕೆ ನಿಮ್ಮ ಕಾರ್ಯಕರ್ತರು ಯಾರು ಬೇಕು, ಅವರಿಗೆ ಹಾಕಿಕೊಳ್ಳಿ. ಆದರೆ ಇಲ್ಲಿ ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಮಾತನಾಡಿದರು. ಈ ಸಮಿತಿಯಲ್ಲಿ ಎಲ್ಲರೂ ಕೂಡ ಸೇರಿಕೊಳ್ಳಬೇಕು. ಬಹಳ ಮಹತ್ತರವಾದ ಉದ್ದೇಶ ನಿಮ್ಮದಾಗಿದೆ. ಆದರೆ ಮಾಡಿರುವುದು ಏನು? ಬೇರೆ ಯಾವ ಪಕ್ಷದವರನ್ನೂ ಸೇರಿಸಿಕೊಂಡಿಲ್ಲ. ಇದು ಒಂದು. ಇದು ಬಹಳ. ಬಹಳ ಸೂಕ್ಷ್ಮವಾದ ವಿಚಾರ. ಇವತ್ತಿನ ರಾಷ್ಟ್ರದ ವಾತಾವರಣದ ಭಯೋತ್ಪಾದನೆ ಎಂದರೆ ಬಹಳ ಸೂಕ್ಷ್ಮವಾದ ವಿಚಾರಗಳು. ಅದರಲ್ಲಿ ಧಾರ್ಮಿಕ ವಿಚಾರಗಳಿವೆ. ಬೇರೆ ಬೇರೆ ಸಂಘಟನೆಗಳ ವಿಚಾರಗಳು ಇದರಲ್ಲಿ ಬರುತ್ತವೆ. ಅದಕ್ಕೋಸ್ಕರ ಎಲ್ಲರೂ involvement ಆಗಬೇಕಾಗಿತ್ತು. ಆದರೆ ಅದನ್ನು ಅವರು ಮಾಡಲಿಲ್ಲ. ಈ ಸಮಿತಿಯಲ್ಲಿ ಬಹುಶಃ 100 ರಿಂದ 200 ಜನ ಸದಸ್ಯರಿದ್ದಾರೆ. ಒಬ್ಬ ಮುಸಲ್ಮಾನರಿಗೆ ಹಾಕಿಕೊಂಡಿಲ್ಲ, ಏಕೆ ಹಾಕಿಕೊಂಡಿಲ್ಲ? ನೀವು ಭಯೋತ್ಪಾದನೆ ನಿವಾರಣೆ ವಿಷಯದಲ್ಲಿ ಪ್ರತಿಯೊಬ್ಬರೂ ಭಾಗಿ ಆಗಬೇಕೆಂದು ನಿಮ್ಮ ಆಸೆ ತಾನೆ. ಒಬ್ಬ ಕ್ರಿಶ್ಚಿಯನ್ ಹಾಕಿಕೊಂಡಿಲ್ಲ. ಏಕೆ ಹಾಕಿಕೊಂಡಿಲ್ಲ ನೀವು? ಮೆಸೇಜ್ ಏನು ಹೋಗುತ್ತದೆ ಹೇಳಿ. ಇದರ ಮೀಟಿಂಗ್ ಮಾಡುವಂತಹ ಸಂದರ್ಭದಲ್ಲಿ ಅವರು ಯಾರು ಇರುವುದಿಲ್ಲ. ಈ ಮೀಟಿಂಗನಲ್ಲಿ ಏನು ನಡೆಯಿತು, ಈ ಮೀಟಿಂಗ್‌ನಲ್ಲಿ ಏನು ಚರ್ಚೆ ಆಯಿತು? ಯಾವ ರೀತಿ ಕಾರ್ಯಕ್ರಮ ರೂಪಿಸಬೇಕೆಂದು ನಿಮ್ಮಲ್ಲಿ ಚರ್ಚೆ ಆದಾಗ ಎಲ್ಲಾ ಜನಾಂಗದವರೂ ಇರಬೇಕು ತಾನೇ. ನಾಳೆ ನೀವು ಸಂಪುಟ ಸಭೆ ಮಾಡಿದಾಗ ಸಾಮರಸ್ಯ ಇರಬೇಕೆಂದು ಎಲ್ಲರನ್ನೂ ಕೂಡ ಸೇರಿಸಿಕೊಳ್ಳುತ್ತೀರಿ. ಭಯೋತ್ಪಾದನೆಯಂತಹ ಸೂಕ್ಷ್ಮ ವಿಚಾರದಲ್ಲಿ ನೀವು ಸಾಮರಸ್ಯವನ್ನು ತೋರಿಸದೆ ಹೋದರೆ, ಬೇರೆ ಯಾವ ವಿಚಾರದಲ್ಲಿ ನೀವು ಸಾಮರಸ್ಯವನ್ನು ತೋರಿಸುವುದಕ್ಕಾಗುತ್ತೆ ಹೇಳಿ. ಇದಕ್ಕೆ ನಿಮ್ಮ ಮೇಲೆ ನಂಬಿಕೆ ಕಡಿಮೆ ಆಗುವುದು. ನಿಮ್ಮ ಉದ್ದೇಶ ನಿಮ್ಮ ನಿಯತ್ತಿನಿಂದ ನಮಗೆ ಸಂಶಯ ಆಗತಕ್ಕಂಥದ್ದು. ನಿಮ್ಮ ಮೂಲ ಉದ್ದೇಶಗಳೇನು? ಇದನ್ನು ಹಿಡಿದುಕೊಂಡು ನೀವು ನಿಮ್ಮ ಪಕ್ಷವನ್ನು ಕಟ್ಟತಕ್ಕಂತಹ ಕೆಲಸ ಮಾಡುವ ಪ್ರಯತ್ನ ಮಾಡುತ್ತಿದ್ದೀರಿ. ಆದರೆ ಅಧ್ಯಕ್ಷರೆ, ಖಂಡಿತವಾಗಿ ಹೇಳುತ್ತೇನೆ. ಈ ಒಂದು ವಿಚಾರದಲ್ಲಿ ಭಾರತೀಯ ಜನತಾ ಪಕ್ಷದವರು ಯಾವ ರೀತಿಯಲ್ಲಿ ಹೋಗುತ್ತಿದ್ದಾರೆ ಅವರಿಗೆ ಅದರಲ್ಲಿ ಯಶಸ್ಸು

ಸಿಗುವುದಿಲ್ಲ. ನಮ್ಮ ದೇಶದ ಜನತೆ ಜಾಗೃತರಾಗಿದ್ದಾರೆ. ಮುಂಬಯಿ ಘಟನೆ ಆದ ನಂತರ ಅವರು ಬೇರೆ ಬೇರೆ ರಾಜ್ಯಗಳಲ್ಲಿ ಪ್ರಚಾರ ಕಾರ್ಯಕ್ರಮಗಳಲ್ಲಿ ಭಯೋತ್ಪಾದನೆ ವಿಷಯ ಹಿಡಿದುಕೊಂಡು ದೆಹಲಿ, ರಾಜಸ್ಥಾನಗಳಲ್ಲಿ ಅದನ್ನೇ ದೊಡ್ಡ issue ಮಾಡಿದರು. ಆದರೆ ಅವರಿಗೆ ಗೆಲ್ಲುವುದಕ್ಕಾಗಲಿಲ್ಲ. ಮುಂದೆ ಬರುತ್ತಿರುವ ಲೋಕಸಭಾ ಚುನಾವಣೆ ಏನು ಬರುತ್ತಿದೆ, ಅದರಲ್ಲಿಯೂ ಕೂಡ ನೀವು ನೆಲಕಚ್ಚತಕ್ಕಂಥ ಪರಿಸ್ಥಿತಿ ಬರುತ್ತಿದೆ. ಏಕೆಂದರೆ ನೀವು ಇನ್ನೂ ಕೂಡ ಜನರನ್ನು ಅರ್ಥ ಮಾಡಿಕೊಂಡಿಲ್ಲ. ಜನರು ಬಹಳ ಮುಂದೆ ಹೋಗಿದ್ದಾರೆ. ಆದರೆ ನೀವು ಮುಂದೆ ಹೋಗುತ್ತಿಲ್ಲ. ನೀವು ಜನರನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಜನರಿಗೆ ಏನು ಬೇಕು ಗೊತ್ತೆ. ಜನರಿಗೆ ಶಾಂತಿ, ನೆಮ್ಮದಿ, ಒಳ್ಳೆಯ ಸಾಮರಸ್ಯದ ವಾತಾವರಣ. ಆದರೆ ನೀವು ಅವುಗಳನ್ನು ಕಾಪಾಡುತ್ತಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆದಿರುವ incident ಏನಿದೆಯಲ್ಲಾ, ಅದು ಕೇವಲ ಕರ್ನಾಟಕ ರಾಜ್ಯದ ಮೇಲೆ ಮಾತ್ರ ಪ್ರಭಾವ ಬೀರುವುದಿಲ್ಲ, ಇದು ಇಡೀ ರಾಷ್ಟ್ರದ ಮೇಲೆ ಪ್ರಭಾವ ಬೀರುತ್ತದೆ. ಇಂಥ ಪಕ್ಷದವರು ಕೇಂದ್ರದಲ್ಲಿ ನಾಳೆ ಅಧಿಕಾರಕ್ಕೆ ಬಂದರೆ ಏನಾಗಬಹುದೋ ಎನ್ನುವ ಭಯದ ವಾತಾವರಣ ಜನರಲ್ಲಿ ನಿರ್ಮಾಣವಾಗುತ್ತಿದೆ. ಕೇವಲ ಗುಜರಾತ್‌ನಲ್ಲಿಯ ನರೇಂದ್ರಮೋದಿಯನ್ನು ಮುಂದಿಟ್ಟುಕೊಂಡು ಅಧಿಕಾರ ಮಾಡುವುದಕ್ಕಾಗುವುದಿಲ್ಲ. ಸ್ವಾಮಿ. ಇಡೀ ದೇಶದಲ್ಲಿ ನೀವು ಗೆಲ್ಲಬೇಕು. ಅದಕ್ಕೇ ನಾನು ಹೇಳುತ್ತಿರುವುದು. ಭಾರತೀಯ ಜನತಾ ಪಾರ್ಟಿಯ ಈ ಸರ್ಕಾರ ಇವತ್ತು ಇಂಥ ಒಂದು ವಿಚಾರಗಳಲ್ಲಿ ಮುಂದೆ ನಿಂತುಕೊಂಡು ನಾವು ನಿರ್ದಾಕ್ಷಿಣ್ಯವಾಗಿ ಕೆಲಸವನ್ನು ಮಾಡುತ್ತೇವೆಂದು ಹೇಳಬೇಕಾಗಿತ್ತು. ಆದರೆ ಅವರು ಆ ರೀತಿ ಮಾಡುತ್ತಿಲ್ಲ. ಏಕೆಂದರೆ ಅವರಲ್ಲಿರತಕ್ಕಂಥ ಆಂತರಿಕ ಬಾಂಧವ್ಯವಿದೆಯಲ್ಲಾ, ಅದನ್ನು ಅವರಿಗೆ ಬಿಟ್ಟು ಬರುವುದಕ್ಕಾಗುತ್ತಿಲ್ಲ. ರಾಮಸೇನೆ ಮತ್ತು ಭಜರಂಗದಳದವರ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಆಗುತ್ತಿಲ್ಲ. ಮೇಲ್ನೋಟಕ್ಕೆ ಅವರ ಮೇಲೆ ಕ್ರಮ ತೆಗೆದುಕೊಂಡಂತೆ ಮಾಡುತ್ತಾರೆಯೇ ಹೊರತು ಒಳಗಡೆ ಏನೂ ಕ್ರಮವನ್ನು ಸರ್ಕಾರದವರಿಂದ ಅವರ ಮೇಲೆ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಬಹುಶಃ ಇನ್ನು ಮುಂದೆಯೂ ಇಂಥ ಘಟನೆಗಳು ಈ ರೀತಿ ನಡೆದುಕೊಂಡು ಹೋದರೆ ಖಂಡಿತವಾಗಿಯೂ ಜನರು ನಿಮಗೆ ಪಾಠ ಕಲಿಸುತ್ತಾರೆ. ಮುಂದಿನ ಚುನಾವಣೆಯಲ್ಲಿ ನಿಮಗೇ ಗೊತ್ತಾಗುತ್ತದೆ ನಾವು, ಎಷ್ಟು ದೊಡ್ಡ ತಪ್ಪನ್ನು ಮಾಡಿದ್ದೇವೆಂದು. ಆದುದರಿಂದ ಈ ಸರ್ಕಾರ ಎಲ್ಲಾ ಹಂತಗಳಲ್ಲಿಯೂ ಕೂಡ ಇಂಥ ವಿಚಾರಗಳಲ್ಲಿ ಬಹಳ ಜಾಗೃತವಾಗಿ ಕೆಲಸವನ್ನು ಇಲ್ಲಿ ಇದ್ದಾರೆ. ಅಲ್ಲಿ ಆ ರೀತಿ ಯಾವ ಕಾರಣಕ್ಕೋಸ್ಕರ ಆಯಿತು? ಹೇಗೆ ಆ ಒಂದು ಸಂಘಟನೆಗಳು

ಉದ್ದೇಶಪೂರ್ವಕವಾಗಿ ಹೋಗಿ ಅಂಥ ಜಾಗಗಳಲ್ಲಿ ಗಲಾಟೆ ಎಬ್ಬಿಸತಕ್ಕಂಥ ಕೆಲಸವನ್ನು ಮಾಡುತ್ತಾರೆ. ಒಂದು ಕಡೆ ಪ್ರಚೋದನೆಯನ್ನು ಮಾಡುವುದು. ಸ್ವಲ್ಪ ಏನಾದರೂ incident ನಡೆದಾಗ ಪೋಲಿಸರು ಆಗ ಕ್ರಮ ತೆಗೆದುಕೊಳ್ಳುವುದು. ಈ ರೀತಿಯ ಘಟನೆಗಳು ನಡೆಯುತ್ತಿವೆ. ಇಷ್ಟು ವರ್ಷ ಕರ್ನಾಟಕ ರಾಜ್ಯ ಶಾಂತಿಯ ರಾಜ್ಯವಾಗಿತ್ತು. ಇಷ್ಟು ವರ್ಷ ಇಂಥ ಘಟನೆಗಳು ಎಲ್ಲಿಯೂ ಆಗುತ್ತರಲಿಲ್ಲ. ಆದರೆ ನೀವು ಅಧಿಕಾರಕ್ಕೆ ಬಂದಮೇಲೆ ಪ್ರಾರಂಭವಾಗಿದೆ. ಇಷ್ಟು ವರ್ಷ ಯಾರೂ ಕೂಡ ಹೋಗಿ ಚರ್ಚ್‌ಗಳ ಮೇಲೆ ಏಕೆ ದಾಳಿ ಮಾಡಲಿಲ್ಲ ಹೇಳಿ? ಯಾರೂ ಕೂಡ ಪಬ್ ಗಳಿಗೆ ಹೋಗಿ ಹೆಂಗಸರ ಮೇಲೆ ದಾಳಿ ಮಾಡಲಿಲ್ಲ. ಏಕೆ ಹೇಳಿ? ಏಕೆಂದರೆ ಅಂಥವರಿಗೆ ಗೊತ್ತಿತ್ತು ನಮಗೆ ಇಂಥ ಕೃತ್ಯಗಳನ್ನು ಮಾಡಲು ರಕ್ಷಣೆ ಇಲ್ಲವೆಂದು. ಆದರೆ ಇವತ್ತು ಅಂಥವರಿಗೆ ರೆಕ್ಕೆ ಪುಕ್ಕವೆಲ್ಲಾ ಬಂದುಬಿಟ್ಟಿದೆ. ನೀವು ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ನೀವೇ ತಾನೆ ಅವರನ್ನು ಬೆಳೆಸಿರುವುದು.

ಶ್ರೀ. ಸಿ.ಟಿ. ರವಿ:- 2000ನೇ ಇಸವಿಯಲ್ಲಿ ಮಾನ್ಯ ಖರ್ಗೆ ಸಾಹೇಬರು ಗೃಹ ಸಚಿವರಾಗಿದ್ದಾಗ ಚರ್ಚ್ ಮೇಲೆ ಬಾಂಬ್ ಬ್ಲಾಸ್ಟ್ ಆಗಿದೆ. ನೀವು ಅದನ್ನು ಮರೆತುಬಿಟ್ಟಿದ್ದೀರಿ.

(ಗೊಂದಲ)

ಶ್ರೀ ಆರ್. ದಿನೇಶ್‌ಗುಂಡುರಾವ್:- ಆದರೆ ಇಂದು ಯಾವುದೇ ಭೀತಿಯಿಲ್ಲದೆ ನಿರ್ಭೀತಿಯಿಂದ ...

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಭಯೋತ್ಪಾದನೆಯನ್ನುಸೃಷ್ಟಿಮಾಡುತ್ತಿರತಕ್ಕಂಥವರೇ ನೀವು.

(ಗೊಂದಲ)

ಅಧ್ಯಕ್ಷರು:- ದಿನೇಶ್ ಗುಂಡುರಾವ್‌ರವರೆ, ನಿಮಗೆ ಕೊಟ್ಟ ಸಮಯ ಮುಗಿಯುತ್ತಾ ಬಂದಿದೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ್:- ಮಾನ್ಯ ಅಧ್ಯಕ್ಷರೆ, ಬಹುಶಃ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಬೆಂಗಳೂರಿನ ಪಕ್ಕದಲ್ಲಿಯೇ ಇರತಕ್ಕಂಥ ಕಂಬಾಲಪಲ್ಲಿಯಲ್ಲಿ ಒಂದು ಘಟನೆ ನಡೆಯಿತು. ಹರಿಜನರನ್ನು ಜೀವಂತವಾಗಿ ಮನೆಯಲ್ಲಿ ಕೂಡಿಹಾಕಿ ಸುಟ್ಟರು. ಅದನ್ನೂ ಭಾರತೀಯ ಜನತಾ ಪಾರ್ಟಿಯವರು ಮಾಡಿದರೇನು? ಈ ಬಗ್ಗೆ ಉಪ ನಾಯಕರು ಸಭೆಗೆ ಹೇಳಬೇಕಾಗುತ್ತದೆ. ಈ ದೇಶಕ್ಕೆ

ಸ್ವಾತಂತ್ರ್ಯ ಬಂದನಂತರ ಏನಾದರೂ ದೌರ್ಜನ್ಯಗಳು ಆಗಿದೆಯೆಂದರೆ, ಹರಿಜನ ಗಿರಿಜನರಿಗೆ ರಕ್ಷಣೆ ಇಲ್ಲದೇ ಹೋಗಿದ್ದರೆ ಅದು ಈ ರೀತಿ ಆಗಿರತಕ್ಕಂಥದ್ದು.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡುರಾವ್:- ಮಾನ್ಯ ಅಧ್ಯಕ್ಷರೆ, ಕಂಬಾಲಪಲ್ಲಿಯಲ್ಲಿ ನಡೆದಿರತಕ್ಕಂಥ incident ಬೇರೆ.

ಶ್ರೀ. ಸಿ.ಟಿ. ರವಿ:- ದಲಿತರು ಸತ್ತರೆ ಪಾಪ. ಇವರಿಗೆ ಪರವಾಗಿಲ್ಲ.

ಶ್ರೀ ಆರ್. ದಿನೇಶ್ ಗುಂಡುರಾವ್:- ನಾನು ಅದನ್ನು ಡಿಫೆಂಡ್ ಮಾಡಿಕೊಂಡು ಮಾತನಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ನೋಡಿ ಈ ರೀತಿ ಅವರುಗಳೆಲ್ಲಾ ಒಟ್ಟಿಗೆ ಎದ್ದು ಏನೋ ಒಂದು ಮಾತನಾಡುವುದು. ನೀವುಗಳೆಲ್ಲಾ ಒಟ್ಟಿಗೆ ಏನೋ ಮಾತನಾಡುವುದು. ಇದು ಸರಿಯಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ:- ಓಟ್ ಬ್ಯಾಂಕ್ ರಾಜಕಾರಣ ಮಾಡುತ್ತಿರುವವರು ಕಾಂಗ್ರೆಸ್ಸಿನವರು.

(ಗೊಂದಲ)

ಅಧ್ಯಕ್ಷರು:- ದಿನೇಶ್ ಗುಂಡುರಾವ್‌ರವರೆ, ನೀವು ಮಾತನಾಡಿ, ನಿಮ್ಮ ಸಮಯ ಮುಗಿಯುತ್ತಿದೆ.

ಶ್ರೀ ಆರ್. ದಿನೇಶ್ ಗುಂಡುರಾವ್:- ಮಾನ್ಯ ಅಧ್ಯಕ್ಷರೆ, ಧರ್ಮದ ಹೆಸರಿನಲ್ಲಿ ರಾಜಕಾರಣವನ್ನು ಮಾಡುತ್ತಾರಲ್ಲ, ಯಾವಾಗ ರಾಜಕಾರಣದಲ್ಲಿ ಧರ್ಮ ಬಂದು ಸೇರಿಕೊಳ್ಳುತ್ತದೆಯೋ ಆಗಲೇ ಇಂಥದ್ದು ಶುರುವಾಗುವುದು.

ಶ್ರೀ ಎಂ.ಪಿ. ರೇಣುಕಾಚಾರ್ಯ;- ಭಯೋತ್ಪಾದನೆಯನ್ನು ಅಳಿಸುವುದಕ್ಕೆ ನಾವು ಹೋದರೆ ಭಯೋತ್ಪಾದನೆಯನ್ನು ಉಳಿಸುವುದಕ್ಕೆ ಹೋಗುತ್ತಿದ್ದೀರಿ ನೀವು.

ಅಧ್ಯಕ್ಷರು:- ಈ ರೀತಿ ನೀವು ನೀವುಗಳೇ ಮಾತನಾಡುವುದು. ಅವರು ಹೇಳಿದ್ದಕ್ಕೆ ನೀವು ಉತ್ತರ ಕೊಡುವುದು. ಅವು ಹೇಳಿದ್ದಕ್ಕೆ ನೀವು ಉತ್ತರ ಕೊಡುವುದು ಈ ರೀತಿ ಪರಸ್ಪರ ಡಿಸ್‌ಕಶನ್ ಮಾಡುತ್ತಾ ಹೋದರೆ ಅಂತಿಮವಾಗಿ ಒಳ್ಳೆಯ ರೀತಿಯ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಮೊದಲು ದಿನೇಶ್ ಗುಂಡುರಾವ್‌ರವರು ಏನು ಹೇಳುತ್ತಾರೆ ಹೇಳಲಿ. ಆಮೇಲೆ ನೀವು ಅದಕ್ಕೆ ಉತ್ತರ ಕೊಡುವಿರಂತೆ.

ಶ್ರೀ ಗೋವಿಂದ ಎಂ. ಕಾರ್‌ಜೋಳ್:- ಮಾನ್ಯ ಅಧ್ಯಕ್ಷರೆ, ಅವರು ನರೇಂದ್ರಮೋದಿಯವರ ಹೆಸರನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಹೇಳಬೇಕಾಯಿತಷ್ಟೆ.

ಅಧ್ಯಕ್ಷರು:- ಅದಕ್ಕೆ ನೀವು ಆಮೇಲೆ ಅವರಿಗೆ ಉತ್ತರ ಕೊಡುವಿರಂತೆ, ಅದನ್ನು ಬಿಟ್ಟು ಹೀಗೆ ಒಟ್ಟಿಗೆ ಎಲ್ಲರೂ ಮಾತನಾಡಿದರೆ ಹೇಗೆ. ದಿನೇಶ್ ಗುಂಡುರಾವ್‌ರವರೆ, ಬೇಗ ಮುಗಿಸಿ.

ಶ್ರೀ ಆರ್. ದಿನೇಶ್ ಗುಂಡುರಾವ್:- ಮಾನ್ಯ ಅಧ್ಯಕ್ಷರೆ, ರಾಜಕಾರಣದಲ್ಲಿ ಧರ್ಮದ ಪಾತ್ರವಿರುವುದಿಲ್ಲ. ಆದರೆ ರಾಜಕಾರಣದಲ್ಲಿ ಯಾವಾಗ ಧರ್ಮವನ್ನು ಸೇರಿಸಿ ರಾಜಕಾರಣವನ್ನು ಮಾಡುತ್ತಾರೋ ಆಗಳೆ ಇಂಥದ್ದೆಲ್ಲ ಪ್ರಾರಂಭವಾಗತಕ್ಕಂಥದ್ದು. ಇವತ್ತು ಚುನಾವಣೆ ಹತ್ತಿರ ಬಂತು. ಮತ್ತೆ ಅಯೋಧ್ಯೆ, ಜೈಶ್ರೀರಾಮ್ ಎನ್ನುತ್ತಿದ್ದಾರೆ. ಇಷ್ಟು ವರ್ಷ ಶ್ರೀರಾಮನ ಬಗ್ಗೆ ಇವರಿಗೆ ನೆನಪೇ ಇರಲಿಲ್ಲ. ಮೊನ್ನೆ ಅದ್ವಾನಿಯವರು ಜೈಶ್ರೀರಾಮ್, ಜೈಶ್ರೀರಾಮ್ ಎಂದು ಹೇಳುತ್ತಿದ್ದಾರೆ. ಆದುದರಿಂದ ಧರ್ಮದ ಬಗ್ಗೆ ಜಾತೀಯತೆ ಎಂದು ಹೇಳಿದರೆ, ಇದು ಪ್ರಚೋದನೆ ಇಲ್ಲಿಂದಲೇ ಪ್ರಾರಂಭವಾಗುವುದು. ಮುಸಲ್ಮಾನರು ಇರಬಹುದು. ಕ್ರೈಸ್ತರು ಇರಬಹುದು, ಹಿಂದುಗಳಿರಬಹುದು, ಸಿಖ್‌ರಿರಬಹದು ಅಥವಾ ಯಾರೇ ಇರಬಹುದು ಯಾವಾಗ ಧರ್ಮ ರಾಜಕಾರಣದಲ್ಲಿ ಮಿಕ್ಸ್ ಆಗುತ್ತದೋ ಆ ಮಿಕ್ಸ್ಚರ್ ಬಹಳ ಎಡೇಂಜರಸ್ ಮಿಕ್ಸ್ಚರ್. ಅದರಿಂದ ಸಮಾಜ ಹಾಳಾಗುತ್ತದೆ. ಇವತ್ತು ಏಕೆ ಕರ್ನಾಟಕದಲ್ಲಿ ಈ ರೀತಿಯ ಘಟನೆಗಳು ನಡೆಯುತ್ತಿದೆಯೆಂದರೆ, ಆ ಒಂದು ರಾಜಕಾರಣದಿಂದಲೇ ಇಂಥ ಒಂದು ಘಟನೆಗಳು ಆಗುತ್ತಿರತಕ್ಕಂಥದ್ದು. ಆದುದರಿಂದ ಮಾನ್ಯ ಅಧ್ಯಕ್ಷರೆ, ಇವತ್ತು ಈ ಸರ್ಕಾರ ಕಾನೂನನ್ನು ಕಾಪಾಡತಕ್ಕಂಥದ್ದರಲ್ಲಿ ಮತ್ತು ಜಾತ್ಯಾತೀತ ವ್ಯವಸ್ಥೆಯನ್ನು ಕಾಪಾಡತಕ್ಕಂಥದ್ದರಲ್ಲಿ, ಸಾಮರಸ್ಯವನ್ನು ಕಾಪಾಡತಕ್ಕಂಥದ್ದರಲ್ಲಿ, ಒಂದು ಒಳ್ಳೆಯ ರೀತಿಯ ಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡತಕ್ಕಂಥದ್ದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಯಾವ ನೈತಿಕತೆ ಕೂಡ ಈ ಸರ್ಕಾರಕ್ಕೆ ಇಲ್ಲ. ಅದರೂ ಕೂಡ ಮಾನ್ಯ ಗೃಹಸಚಿವರು ಅದನ್ನು defend ಮಾಡಿಕೊಳ್ಳುವಂತಹ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅವರ ಒಂದೊಂದು ಹೇಳಿಕೆಗಳು ಒಂದೊಂದು ರೀತಿ ಇದೆ. ರೈತ ತೀರಕೊಂಡಾಗ ಅವರು ನೀಡಿರುವಂತಹ ಹೇಳಿಕೆ ನೋಡಿದರೆ ಇದಕ್ಕೆ ರಾಜಕೀಯದ ಹುನ್ನಾರ ಇದೆ ಎಂದು ಹೇಳಿದರು. ಅವರ ಕಾರ್ಯಕರ್ತರಿಗೆ ಅವರೇ ಗುಂಡೇಟು ಹಾಕಿ ಸಾಯಿಸಿದರು, ಅದರ ಹಿಂದೆ ಯಾರದೋ ಪಿತೂರಿ ಇದೆ ಎಂದು ಗೃಹಸಚಿವರು ಹೇಳಿಕೆ ಕೊಡುವುದು. ನರಗುಂದದ ವಿಚಾರ ಬಿಡಿ ಸ್ವಾಮಿ, ನರಗುಂದದ ವಿಚಾರದಲ್ಲಿ ನೀವು ಹೇಳತಕ್ಕಂತ ಮಾತಿನಲ್ಲಿ ದೊಡ್ಡ ಚರ್ಚೆ

ಮಾಡೋಣ. ಚರ್ಚ್ ದಾಳಿ ಆದಮೇಲೆ ಮಾನ್ಯ ಗೃಹಸಚಿವರು ಏನು statement ಮಾಡಿದರು ಗೊತ್ತೆ? 'Why they fuss? Have there been any deaths, not a single person is dead. As a Home Minister, I am passing first class.' ಚರ್ಚ್‌ಗಳನ್ನು ಒಡೆಯುತ್ತಿದ್ದಾರೆ, ಅಮಾನವೀಯವಾದಂತಹ ಘಟನೆಗಳು ನಡೆಯುತ್ತಿವೆ. ಆದರೆ ಅವರು, ಇದರಲ್ಲಿ ಏನಿದೆ ದೊಡ್ಡ ವಿಚಾರ? ಯಾರಾದರೂ ಸತ್ತಿದ್ದಾರೆ? ಯಾರೂ ಸತ್ತಿಲ್ಲವಲ್ಲ ಎಂದು ಗೃಹಸಚಿವರು ಹೇಳಿಕೆ ಕೊಡುವುದು. ಇಂತಹ ಹೇಳಿಕೆಗಳನ್ನು ಕೊಟ್ಟರೆ ಯಾರಿಗಾದರೂ ವಿಶ್ವಾಸ ಬರುತ್ತದೆಯೇ? ದಕ್ಷ ಪೊಲೀಸ್ ಅಧಿಕಾರಿಗಳಿಗೆ ವಿಶ್ವಾಸದಿಂದ, ನಿರ್ಭೀತಿಯಿಂದ ಕೆಲಸ ಮಾಡುವಂತಹ ವಾತಾವರಣ ಇರುತ್ತದೆಯೇ? ಗೃಹಸಚಿವರೇ ಪಕ್ಷಪಾತ ಮಾಡಿದಾಗ ಆ ಒಂದು ಇಲಾಖೆ ಏನಾಗಬಹುದು ನೀವೇ ಹೇಳಿ. ಇವತ್ತು ಸರ್ಕಾರದ ಪ್ರಥಮ ಆದ್ಯತೆ ಕಾನೂನನ್ನು ಕಾಪಾಡುವಂಥಾದ್ದು, Rule of Law apply ಮಾಡುವಂತಾದ್ದಾಗಿದೆ. Rule of Law apply ಮಾಡುವಂತಹ ಜನರೇ favoritism ಮಾಡಿದಾಗ ಮತ್ತೊಂದು ಕಡೆ ಅವರು support ಮಾಡಿದಾಗ ಅಧಿಕಾರಿಗೆ ಹೇಗೆ ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ? ಇವತ್ತು ಅನೇಕ ಒಳ್ಳೊಳ್ಳೆಯ ಅಧಿಕಾರಿಗಳಿಗೆ ಸೂಕ್ಷ್ಮವಾದ ಪ್ರದೇಶಗಳಿಗೆ ಹೋಗುವುದಕ್ಕೆ ಇಷ್ಟವಿಲ್ಲ. ಏಕೆಂದರೆ "ನಮಗೆ ಕೆಲಸ ಮಾಡುವುದಕ್ಕಾಗುವುದಿಲ್ಲ, ಅಲ್ಲಿಗೆ ಹೋದರೆ ನಮಗೆ ಕಷ್ಟವಾಗುತ್ತದೆ, ನಾವು ಸರ್ಕಾರದ ಆದೇಶವನ್ನು ಪಾಲನೆ ಮಾಡುವುದಕ್ಕೆ ಆಗುವುದಿಲ್ಲ" ಎಂದು ಹೇಳುತ್ತಾರೆ. ಈ ರೀತಿಯ ವಾತಾವರಣ ನಮ್ಮ ರಾಜ್ಯದಲ್ಲಿ ಇದೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಿಷ್ಟೇ, ಇವತ್ತು ಕೂಡಲೇ ಅವರು ಗೃಹಸಚಿವರ ರಾಜೀನಾಮೆಯನ್ನು ತೆಗೆದುಕೊಳ್ಳಲಿ. ಪೊಲೀಸ್ ಅಧಿಕಾರಿಗಳಲ್ಲಿ ಸ್ವಲ್ಪ ವಿಶ್ವಾಸ ಮೂಡಿಸಲಿ. ನಾವು ಪಕ್ಷಪಾತ ಮಾಡುವುದಿಲ್ಲ, ನೀವು ಏನೇ ಕ್ರಮ ತೆಗೆದುಕೊಂಡರೂ ಕೂಡ ನಾವು ನಿಮ್ಮ ಜೊತೆಯಲ್ಲಿದ್ದೇವೆ, ಇಂತಹ ಭಜರಂಗದಳ, ರಾಮಸೇನೆ, ಯಾವುದೇ ಹಿಂದುತ್ವವಾದಿ ಇರಬಹುದು, ಇಸ್ಲಾಂವಾದ ಇರಬಹುದು, ಬೇರೆ ಯಾವುದೇ ವಾದ ಇರಬಹುದು, ಅಂತಹವರ ಮೇಲೆ ನಾವು ನಿರ್ದಾಕ್ಷಿಣ್ಯವಾಗಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆಂದು ನೂತನ ಗೃಹಸಚಿವರು ದಕ್ಷತೆ ತೋರಿಸದೇ ಹೋದರೆ ಇದು ನಿರಂತರವಾಗಿ ನಡೆಯುತ್ತದೆ. ಈಗಿನ ಸಚಿವರಲ್ಲ, ಇವರ ಕೈಯಲ್ಲಿ ಆಗುವುದಿಲ್ಲ, ಹೊಸ ಸಚಿವರನ್ನು ನೇಮಕ ಮಾಡಿ, ಜನರಲ್ಲಿ ವಿಶ್ವಾಸ ಮೂಡಿಸಿ. ಈಗ ಕೊನೆಯ ಮಟ್ಟಕ್ಕೆ ನಾವು ಬಂದಿಲ್ಲ. ಆದುದರಿಂದ ಇದು ವಿಫಲವಾಗಿರುವಂತಹ ಸರ್ಕಾರ. ಈ ಸರ್ಕಾರಕ್ಕೆ ಕಾನೂನು ಸುವ್ಯವಸ್ಥೆಯನ್ನು

ಕಾಪಾಡುವುದಕ್ಕೆ ಆಗಿಲ್ಲ. ಇವತ್ತು ರಾಜ್ಯದಲ್ಲಿ ಒಂದು ಕೆಟ್ಟ ವಾತಾವರಣ ನಿರ್ಮಾಣವಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳದೇ ಹೋದರೆ ಅವರ ಮೇಲೆ ನೇರ ಹೊಣೆ ಬರುವಂತಹ ಪರಸ್ಥಿತಿ ಬರುತ್ತದೆ. ಆದುದರಿಂದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ(ಅರಸೀಕೆರೆ): ಮಾನ್ಯ ಅಧ್ಯಕ್ಷರೇ, BJP ಸರ್ಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಮೇಲೆ ಕೆಲವೊಂದು ನಿರ್ದಿಷ್ಟವಾದಂತಹ ಘಟನೆಗಳು ಈ ರಾಜ್ಯದ ಕಾನೂನಿನ ಸುವ್ಯವಸ್ಥೆ ಹದಗೆಡುವುದಕ್ಕೆ ಕಾರಣವಾಗಿದೆ ಎನ್ನುವುದನ್ನು ಪ್ರತಿನಿತ್ಯ ಮಾಧ್ಯಮಗಳ ಮತ್ತು ಸ್ಥಿರವಾದಂತಹ ಸಾಕ್ಷ್ಯಾಧಾರಗಳ ಮುಖಾಂತರ ನಾವು ವಿಚಾರಗಳನ್ನು ಗ್ರಹಿಸಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರೂ ಕೂಡ ಈ ಸದನದಲ್ಲಿ ಚರ್ಚೆ ಮಾಡಿದ್ದಾರೆ. ವಿರೋಧ ಪಕ್ಷದವರು ಮಾತನಾಡುವಾಗ ಆಡಳಿತ ಪಕ್ಷದ ಸದಸ್ಯರು ಮಧ್ಯೆ ಮಧ್ಯೆ ಎದ್ದುನಿಂತು ಉತ್ತರ ಕೊಡಬೇಡಿ. ಏಕೆಂದರೆ ವಿರೋಧ ಪಕ್ಷವಿರುವುದೇ ಆಡಳಿತ ಪಕ್ಷದ ಲೋಪದೋಷಗಳನ್ನು ಎತ್ತಿಹಿಡಿಯುವುದಕ್ಕೆ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇರುವಂತಹ ಒಂದು ಕಾನೂನು ಚೌಕಟ್ಟು ಮತ್ತು ಸಂಪ್ರದಾಯ. ಮನಸ್ಸಿಗೆ ಚುಚ್ಚುವಂತಹ ವಿಚಾರಗಳನ್ನು ನಾವು ಮಾತನಾಡಿದಂತಹ ಸಂದರ್ಭದಲ್ಲಿ ಉತ್ತರ ಕೊಡುವುದಕ್ಕೆ ನಿಮ್ಮ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಅವರು ಉತ್ತರ ಕೊಡುತ್ತಾರೆ. ಮಾನ್ಯ ಸಿ.ಟಿ. ರವಿಯವರು ಯಾವ ಮೂಲದಿಂದ, ಯಾವ ಮಂತ್ರವನ್ನು ಜಪ ಮಾಡಿ ಶಾಸಕರಾಗಿದ್ದಾರೆ ಎಂದು ಈ ರಾಜ್ಯದ ಜನರಿಗೆ ಗೊತ್ತು. T.Vಯಲ್ಲಿ ಪ್ರತಿ ದಿವಸ ನೋಡುವುದಿಲ್ಲವೇ? ಮಾನ್ಯ ಸಿ.ಟಿ. ರವಿ ಬಂದರೆ ಅಲ್ಲಿ ಏನು symptoms ಇರುತ್ತದೆ ಎಂದು ಈ ರಾಜ್ಯದ ಜನರಿಗೆ ಗೊತ್ತಿದೆ. ಯಾರ್‍ಯಾರು ಯಾವ್ಯಾವ ಮಂತ್ರ ಹೇಳಿಕೊಂಡು ಬರುತ್ತಾರೆ ಎಂದು ಅದರ ಬಗ್ಗೆ ಚಿಂತೆ ಬೇಡ ಆದರೆ ನಾವು ನಮ್ಮ ಮಂತ್ರ ಹೇಳಿದ್ದೇವೆ. ನಾವು ಈ ಕಡೆ ಕುಳಿತುಕೊಂಡು ಯಾವ ಮಂತ್ರ ಹೇಳುತ್ತೇವೆಂದು ನೀವು ಕೇಳಿಸಿಕೊಳ್ಳಿ. ಆಮೇಲೆ ನಿಮ್ಮ ಮಂತ್ರ ಹೇಳಿ, ನಾವು ಕೂಡ ನಿಮ್ಮ ಮಂತ್ರಗಳನ್ನು ಕೇಳುತ್ತೇವೆ, ಬೇಡ ಇನ್ನುವುದಿಲ್ಲ. ಆದರೆ ನಾವು ಮಾತನಾಡುವಾಗ ನೀವು ಮಧ್ಯದಲ್ಲಿ ಎದ್ದು ತೊಂದರೆ ಕೊಡಬೇಡಿ, ನಾವು ಹೇಳಬೇಕೆಂದಿರುವ points ಹೋಗಿಬಿಡುತ್ತದೆ. ದಯವಿಟ್ಟು ಮೊದಲು ಕೇಳಿ, ಆಮೇಲೆ ನಾವೇನಾದರೂ ತಪ್ಪು ಮಾತನಾಡಿದರೆ ನಿಮಗೆ ಕೇಳುವುದಕ್ಕೆ ಅಧಿಕಾರ ಇದೆ. ನಾವು ಹಿಂದಕ್ಕೆ ಹೋಗಿ ಈ ದೇಶ ಏನೇನಾಗಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಸ್ತುತ ವಿಚಾರ ಹೇಳುತ್ತೇವೆ. ಮಹಾತ್ಮ ಗಾಂಧೀಜಿಯವರು ಸ್ವತಂತ್ರ ತಂದುಕೊಟ್ಟ ಮೇಲೆ 60 ವರ್ಷದ ಇತಿಹಾಸದಲ್ಲಿ ಅವರು ಹೇಳಿದ್ದನ್ನು ಯಾರ್‍ಯಾರು

ಯಾವ್ಯಾವ ರೀತಿ ಕರ್ಮಕಾಂಡಕ್ಕೆ ಉಪಯೋಗಿಸಿಕೊಂಡಿದ್ದಾರೆ, ಅವರ ಆದರ್ಶಗಳನ್ನು ಯಾರ್ಯಾರು ಉಪಯೋಗಿಸಿಕೊಂಡು ಈ ದೇಶದ ಅವ್ಯವಸ್ಥೆಗೆ ಕಾರಣರಾಗಿದ್ದಾರೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ಗಂಟೆಗಟ್ಟಲೆ, ದಿವಸಗಟ್ಟಲೆ ಸಮಯ ಬೇಕಾಗುತ್ತದೆ. ಆದರೆ BJP ಪಕ್ಷ ಅಧಿಕಾರಕ್ಕೆ ಬರುವುದಕ್ಕೆ RSS, ABVP ರಾಮಸೇನೆ, ಭಜರಂಗದಳ, ಹಿಂದೂ ಪರ ಸಂಘಟನೆಗಳು ಇರಬಹುದು, ಇವೆಲ್ಲ ನಿಮ್ಮ ಅಂಗ ಪಕ್ಷಗಳು. ಇವತ್ತು 60 ವರ್ಷ ಸ್ವಾತಂತ್ರ್ಯ ಭಾರತದಲ್ಲಿ BJP ಸರ್ಕಾರ ಅಧಿಕಾರಿಕ್ಕೆ ಬಂದಿಲ್ಲ. ಕಳೆದ 20 ತಿಂಗಳ ಹಿಂದೆ ಸಮ್ಮಿಶ್ರ ಸರ್ಕಾರ ಇದ್ದು, ಆಗ ಅದು ಬಹಳ ಇಕ್ಕಟ್ಟಿನಲ್ಲಿ ಇತ್ತು, ಅದು ಎರಡು ಸಿದ್ಧಾಂತಗಳ ಮಧ್ಯದಲ್ಲಿ ಹೊಂದಾಣಿಕೆಯಾಗಿತ್ತು. ಆದರೆ ಇವತ್ತು ಏನಾಗಿದೆ ಎಂದರೆ ತಮ್ಮದೇ ಪ್ರತ್ಯೇಕವಾದಂತಹ ಆಡಳಿತ ವ್ಯವಸ್ಥೆ ಬಂದು ಇವತ್ತು ಅಧಿಕಾರದಲ್ಲಿ ಇದೆ. ಇಂತಹ ಸಂದರ್ಭದಲ್ಲಿ 60 ವರ್ಷದಿಂದ ಕೈಕಟ್ಟಿ ಕುಳಿತುಕೊಂಡಂತಹವರಿಗೆ, ಅವರಿಗೂ ಆಸೆ ಆಕಾಂಕ್ಷೆಗಳಿರುತ್ತದೆ, ಅವರದೇ ಆದಂತಹ ನಿಟ್ಟಿನಲ್ಲಿ ಯೋಚನೆ ಮಾಡುವಂತಹ ಅವರದೇ ಆದಂತಹ ಭಾವನೆಗಳು ಇರುತ್ತದೆ. ಆ ಸಂದರ್ಭದಲ್ಲಿ ಅವುಗಳು ಯಾವರೀತಿ ಹೊರ ಹೊಮ್ಮಬೇಕು? ನೀವೆಲ್ಲ ಶಾಸಕರಾಗಿ ಬಂದಿರಿ. ಆದರೆ ಅವರು ತಮ್ಮ ಅಧಿಕಾರವನ್ನು ಚಲಾಯಿಸತಕ್ಕಂಥ ದೃಷ್ಟಿಯಲ್ಲಿ, ನಿಮ್ಮನ್ನು ಅಧಿಕಾರಕ್ಕೆ ತರುವುದಕ್ಕೆ ಹಿಂದೆ ಅವರು ಯಾವ್ಯಾವ ರೀತಿ ಏನು ಕೆಲಸ ಮಾಡುತ್ತಿದ್ದರು, ಅದೇ ಕೆಲಸವನ್ನು ಈಗ ಮಾಡುತ್ತಿದ್ದಾರೆ ಅಷ್ಟೇ.

ಶ್ರೀ ಸಿ.ಟಿ. ರವಿ: ಮಾನ್ಯ ಶಿವಲಿಂಗೇಗೌಡರೇ, ತಾವು ತಪ್ಪು ತಿಳಿದುಕೊಂಡಿದ್ದೀರಿ. ಅವರು ಮಾತ್ರ ಕಾರಣ ಅಲ್ಲ, ನಿಮ್ಮ ನಾಯಕರು ಮೋಸ ಮಾಡಿದ್ದರಿಂದ ನಾವು ಪೂರ್ತಿ ಮೆಜಾರಿಟಿ ಬಂದಿದ್ದು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದೂ ಒಂದು ಕಾರಣ ಇಟ್ಟುಕೊಳ್ಳಿ, ನಾವು ಬೇಡವೆಂದು ಹೇಳುವುದಿಲ್ಲ. ನಿಮ್ಮ ನಾಯಕರು ಮೋಸ ಮಾಡಿದರು, ಅದಕ್ಕೆ ನಾವು ಅಧಿಕಾರಕ್ಕೆ ಬಂದೆವು ಎಂದು ಆಮೇಲೆ ಹೇಳಿ. ಜೈ ಕುಮಾರಸ್ವಾಮಿ ಎನ್ನಿ, ನಾನೇನು ಬೇಡ ಎನ್ನುವುದಿಲ್ಲ. ಅದಕ್ಕೆ ಏಕೆ ಈ ರೀತಿ ಮಾಡುತ್ತೀರಿ? ನನಗೆ ಅದರ ಬಗ್ಗೆ ಯೋಚನೆ ಇಲ್ಲ. ನಾನು ಹೇಳುತ್ತಿರುವುದು, ಇವತ್ತು ಬಹಳ ಕಷ್ಟಪಟ್ಟು ಅಧಿಕಾರಕ್ಕೆ ತಂದಿದ್ದಾರೆ, ನೀವು ಅವರೆಲ್ಲರಿಗೂ ಅಧಿಕಾರ ಕೊಡುವುದಕ್ಕಾಗುತ್ತದೆಯೇ? ನೀವು 116 ಜನ ಅಧಿಕಾರಕ್ಕೆ ಬಂದುಬಿಟ್ಟಿರಿ. ಅದರಲ್ಲೂ ನಮ್ಮವರನ್ನು 5 ಜನರನ್ನು ಎಳೆದುಕೊಂಡು ಏನೇನೋ ಮಾಡಿದಿರಿ. ಈಗ 110 ಜನ ಬಂದಿದ್ದಿರಿ ಎಂದು ಇಟ್ಟುಕೊಳ್ಳಿ. ನಿಮ್ಮನ್ನು ನಂಬಿಕೊಂಡು ಬಂದಿದ್ದಾರೆ ಎಂದು ಇಟ್ಟುಕೊಳ್ಳೋಣ. ನಿಮ್ಮ

ಸಿದ್ಧಾಂತ ನಂಬಿ ಬಂದಿದ್ದಾರೆ ಎಂದು ಇಟ್ಟುಕೊಳ್ಳೋಣ. ಆದ್ದರಿಂದ ಇವತ್ತು ಅವರೆಲ್ಲರಿಗೂ ಅಧಿಕಾರ ಬೇಕು. ಈಗ ನೀವು ಕಾನೂನಿನ ಸುವ್ಯವಸ್ಥೆ ಹದಗೆಟ್ಟಿಲ್ಲ, ಹಾಗಾಗಿಲ್ಲ, ಹೀಗಾಗಿಲ್ಲ ಎಂದು ಹೇಳುತ್ತೀರಿ. ಚರ್ಚ್ ಮೇಲೆ ದಾಳಿ ನಡೆಸಿ, ಈ ರಾಜ್ಯದ ಒಂದು ದೊಡ್ಡ ಟಿ.ವಿ ಚಾನೆಲ್‌ನಲ್ಲಿ ಆ ಚರ್ಚ್ ಅನ್ನು ನಾನೇ ಒಡೆಸಿ ಹಾಕಿದ್ದು, ಅದರ ಮೇಲೆ ನಾನೇ ದಾಳಿ ಮಾಡಿಸಿದ್ದು ಎಂದು ಹೇಳಿ, ನಿಮ್ಮ ಅಂಗ ಪಕ್ಷವಾದ ಭಜರಂಗದಳದ ಅಧ್ಯಕ್ಷರು ನೇರವಾಗಿ ಈ ರಾಜ್ಯಕ್ಕೆ ಸಂದೇಶ ಕೊಡುವುದಾದರೆ, ಅದು ಏನನಿಸುತ್ತದೆ? ಈ ಅವ್ಯವಸ್ಥೆಗೆ ಯಾರು ಕಾರಣರು? ನಾವು ಯಾರನ್ನು ಪ್ರಶ್ನೆ ಮಾಡಬೇಕು? ಇದನ್ನು ನೀವು ಯೋಚನೆ ಮಾಡಬೇಕು. ರಾಮಸೇನೆಯವರು ಪಬ್‌ಗೆ ಹೋಗಿ ಅಲ್ಲಿರುವಂತಹ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಸಗಿದಂತಹ ಸಂದರ್ಭದಲ್ಲಿ, ಅವರು ಬಂದು ಜೈ ಬಿಜೆಪಿ ಎಂದು ಹೇಳಿ ನಿಮಗೆ vote ಹಾಕಿಸುವಾಗ ಅವರು ನಿಮ್ಮ ಪರ ಇರಲಿಲ್ಲವೇ? ಇವತ್ತು ನಮ್ಮ ಮಕ್ಕಳು ತಪ್ಪು ಮಾಡಿದಾಗ, ನಮ್ಮ ಮನೆಯವರು ತಪ್ಪು ಮಾಡಿದಾಗ ನಾವು ಅದರ ಜವಾಬ್ದಾರಿಯನ್ನು ಹೊರಬೇಕಾಗುತ್ತದಲ್ಲಾ. ಅದೇ ರೀತಿ ಇವತ್ತು ರಾಮಸೇನೆಯವರಿಂದ ಇಡೀ ಹಿಂದೂಸ್ಥಾನದಲ್ಲಿ ನಡೆಯುತ್ತಿರುವಂಥ ಮಹಿಳೆಯರ ಮೇಲೆ ಏನು ದೌರ್ಜನ್ಯವನ್ನು ನಡೆಸಿದ್ದಾರೆ, ಅದರ ಹೊಣೆಗಾರಿಕೆಯನ್ನು ಇವತ್ತು ಈ

4-00 PM

ಸರ್ಕಾರ ಹೊರಬೇಕಾಗುತ್ತದೆ. ಅದನ್ನು ಹೊರುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅದೇ ರೀತಿ ABVP ಇರಬಹುದು, ಇಂಥ ಇಲ್ಲಾ ಸಂಘಟನೆಗಳು ಇವತ್ತು ಏನಾದರೂ ತಪ್ಪು ಮಾಡಿದರೆ, ಅದರ ಹೊಣೆಗಾರಿಕೆಯನ್ನು ನೀವು ಹೊರಬೇಕಾಗುತ್ತದೆ. ಇವತ್ತು ಯಾವುದೇ ಒಂದು ಕಾನೂನಿನ ಸುವ್ಯವಸ್ಥೆಯ ಅಡಿಯಲ್ಲಿ ಆಗಿರುವಂಥ ಎಲ್ಲಾ ಅನ್ಯಾಯಕ್ಕೆ ಕಾರಣ ನಿಮ್ಮ ಅಂಗ ಸಂಸ್ಥೆಗಳು ಎನ್ನುವುದನ್ನು ಇವತ್ತು ನೀವು ಯೊಚನೆ ಮಾಡಬೇಕಾಗಿದೆ. ಇದನ್ನು ಯಾರು ಮರೆಮಾಚುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಜೊತೆಗೆ ಇವತ್ತು ಇನ್ನೊಂದು ವಿಚಾರವೆಂದರೆ, ಪೊಲೀಸ್ ಅಧಿಕಾರಿಗಳನ್ನು ಸಿಕ್ಕಾಪಟ್ಟೆ transfer ಮಾಡಿದ್ದೀರಿ. ಅಧಿಕಾರಿಗಳನ್ನು 3 ದಿವಸಕೊಬ್ಬರನ್ನು, 6 ದಿವಸಕೊಬ್ಬರನ್ನು ತಿಂಗಳಿಗೊಬ್ಬ ಅಧಿಕಾರಿಯನ್ನು, ಪೊಲೀಸ್ ಇಲಾಖೆಯಲ್ಲಿ ರಕ್ಷಣೆಯನ್ನು ಕೊಡುವಂಥ ಪೊಲೀಸ್ ಅಧಿಕಾರಿಗಳನ್ನು ನೀವು ವರ್ಗಾವಣೆ ಮಾಡುವುದಾದರೆ ಇದು ಏನು ಕಥೆ? ಕಾನೂನು ವ್ಯವಸ್ಥೆಯನ್ನು ಸುಸೂತ್ರವಾಗಿ ಇಡುವುದಕ್ಕೆ ಸಾಧ್ಯವಾಗುತ್ತದಾ? ಇದು ಒಂದು ಮೂಲಭೂತವಾಗಿ ಮಾಡಿರುವಂಥ ತಪ್ಪು ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಹೊಣೆಗಾರಿಕೆಯನ್ನು ನೇರವಾಗಿ ಸರ್ಕಾರ

ಹೊರಬೇಕಾಗುತ್ತದೆ. ನಾನು ಇದನ್ನು ಪ್ರಸ್ತುತವೆಂದು ಹೇಳಿದ್ದೇನೆ, present ಎಂದು ಹೇಳಿದ್ದೇನೆ, ನಾನು ಹಿಂದಕ್ಕೆ ಹೋಗುವುದಿಲ್ಲವೆಂದು ಹೇಳಿದ್ದೇನೆ. ಇದರ ಚರ್ಚೆ ಬೇಡ, ಹಿಂದಿನ ಸರ್ಕಾರದ ಅಂಕಿ ಅಂಶವನ್ನು ನಾನು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ನೀವು ಇವತ್ತು ಸರ್ಕಾರ ನಡೆಸುತ್ತಿದ್ದೀರಿ, ಸರ್ಕಾರದಲ್ಲಿರುವಂಥ ಲೋಪದೋಷಗಳನ್ನು ಪ್ರಸ್ತಾಪ ಮಾಡಿ, ಅದನ್ನು ತಿದ್ದುಕೊಳ್ಳಿಯೆಂದು ಹೇಳುತ್ತಿದ್ದೇವೆ. ನೀವು ದಯಮಾಡಿ ತಿದ್ದುಕೊಳ್ಳಿ. ಅದರ ಜೊತೆಗೆ ಇವತ್ತು ಭಯೋತ್ಪಾದನೆಯ ವಿಚಾರದಲ್ಲಿ ಈ ರಾಷ್ಟ್ರದ ಪ್ರಧಾನ ಮಂತ್ರಿಯವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಇವತ್ತು ಭಯೋತ್ಪಾದನೆ ನಿಲ್ಲಬೇಕಾಗಿದೆ, ಇದರ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗಿದೆ. ಈ ಜಾಗೃತಿಯನ್ನು ಮೂಡಿಸುವಂಥ ವ್ಯವಸ್ಥೆಯನ್ನು ರಾಜ್ಯ ಸರ್ಕಾರಗಳು ಮಾಡಬೇಕಾಗಿದೆಯೆಂಬ ಮಾತನ್ನು ಹೇಳಿದರು. ಅದಕ್ಕೋಸ್ಕರ ನಾವು ಈ ಭಯೋತ್ಪಾದನೆಯನ್ನು ವ್ಯವಸ್ಥಿತವಾಗಿ ನಿಗ್ರಹ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡತಕ್ಕಂಥ ದೃಷ್ಟಿಯಿಂದ ನಾವು ಕೆಲವೊಂದು ಯೋಚನೆಗಳನ್ನು ಮಾಡಿದೆವೆಂದು ಹೇಳಿದರು. ನಿಜ, ಭಯೋತ್ಪಾದನೆ ಈ ಸದನದಲ್ಲಿ ಅಲ್ಲ, ಈ ಭಯೋತ್ಪಾದನೆಗೆ ಯಾರು ಕಾರಣಕರ್ತರು? ಭಯೋತ್ಪಾದನೆಯನ್ನು ಹುಟ್ಟು ಹಾಕುತ್ತಿರುವಂಥವರು ಯಾರು? ಎಲ್ಲಿಯವರೆಗೆ ಈ ರಾಷ್ಟ್ರದಲ್ಲಿ, ಈ ರಾಜ್ಯದಲಿ ಓಟಿಗೋಸ್ಕರ ಬೇಟೆಯಾಗುತ್ತದೋ, ಎಲ್ಲಿಯವರೆಗೆ ಈ ರಾಜ್ಯದಲ್ಲಿಯಾಗಲಿ,ಈ ರಾಷ್ಟ್ರದಲ್ಲಿಯಾಗಲಿ, ಓಟಿಗೋಸ್ಕರವಾಗಿ ಜಾತೀಯತೆಗಳನ್ನು ಎತ್ತಿ ಕಟ್ಟುವಂಥ ಪ್ರಯತ್ನ ನಿಲ್ಲುವುದಿಲ್ಲವೋ ಅಲ್ಲಿಯವರೆಗೂ ಈ ಭಯೋತ್ಪಾದನೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಭಯೋತ್ಪಾದನೆ ಎಲ್ಲಿಂದ ಹುಟ್ಟಿದೆ? ಯಾರಿಗಾಗಿ ಹುಟ್ಟಿದೆ? ಯಾತಕ್ಕಾಗಿ ಹುಟ್ಟಿದೆ? ಎನ್ನುವಂಥಾದ್ದು ಇಡೀ ರಾಷ್ಟ್ರದ ಜನತೆಗೆ, ಈ ರಾಜ್ಯದ ಜನತೆಗೆ ಗೊತ್ತಿದೆ. ಆದರೆ ನಾವು ಅದನ್ನು ಮರೆಮಾಚಿ ನಾವೆಲ್ಲರೂ ಸಹ ಸತ್ಯವನ್ನು ಮರೆಮಾಚಿ ಅಸತ್ಯವನ್ನು ನುಡಿಯುತ್ತಿದ್ದೇವೆ. ಆದುದರಿಂದ ಇದು ಈ ರಾಷ್ಟ್ರದಲ್ಲಿ ಬಹಳ ಸೂಕ್ಷ್ಮವಾದಂಥ ವಿಚಾರವಾಗಿದೆ. ಇಂಥ ಭಯೋತ್ಪಾದನೆ ಎನ್ನುವ ಸೂಕ್ಷ್ಮವಾದಂಥ ವಿಚಾರವನ್ನು ಇಡೀ ರಾಷ್ಟ್ರದಲ್ಲಿ, ಇಡೀ ರಾಜ್ಯದಲ್ಲಿ, ಇವತ್ತು ಈ ರೀತಿ ಬಹಿರಂಗವಾಗಿ ಜಾತಿ ಜಾತಿಗಳ ಮಧ್ಯೆ ವೈಷಮ್ಯವನ್ನು ತಂದಿಡುವಂಥ ಪ್ರಾಮಾಣಿಕ ಪ್ರಯತ್ನ ಏನು ನಡೆಯುತ್ತಿದೆ. ಇದನ್ನು ನೀವು ನಿಲ್ಲಿಸದೇ ಹೋದರೆ ಈ ರಾಷ್ಟ್ರವನ್ನು ಮತ್ತೊಮ್ಮೆ ಯಾರಿಗೆ ಕೊಡುತ್ತೀರಿ? ಯಾವ ಹಿಂದೂ, ಮುಸಲ್ಮಾನ್, ಕ್ರೈಸ್ತರು, ಒಂದೇ ಎನ್ನುವ ರಾಷ್ಟ್ರಗೀತೆಯನ್ನು ಮಹಾತ್ಮಗಾಂಧೀಜಿಯವರು ಹಾಡಿ ಹೋದರೋ, ಅದಕ್ಕೆ ನೀವೆಲ್ಲಾ ಬದ್ಧರಾಗಿ ನಡೆಯುವುದಕ್ಕೆ ಸಾಧ್ಯವಿದೆಯಾ? ಇವತ್ತು ರಾಷ್ಟ್ರ ಏನಾಗುತ್ತಿದೆ?

ದಯಮಾಡಿ ನಾವು, ನೀವುಗಳೆಲ್ಲಾ ಈ ಭಯೋತ್ಪಾದನೆ ಎನ್ನುವ ವಿಚಾರದಲ್ಲಿ ಇವತ್ತು ಬಹಳ ಸೂಕ್ಷ್ಮವಾಗಿ ಯೋಚನೆಯನ್ನು ಮಾಡಿ. ತಾವು ಇಡೀ ಭಾರತ ದೇಶದಲ್ಲೆಲ್ಲಾ ಇಟ್ಟಿಗೆಗಳನ್ನು ತೆಗೆದುಕೊಂಡು ಹೋಗಿ ಶ್ರೀರಾಮ ಮಂದಿರವನ್ನು ಕಟ್ಟುತ್ತೇವೆಂದು ಇದ್ದದ್ದು ಗೊತ್ತಿಲ್ಲವೇ? ಇದು ಇಡೀ ರಾಷ್ಟ್ರದ ಜನತೆಗೆ ಗೊತ್ತು. ನೀವು ಆ ಇಟ್ಟಿಗೆಗಳಿಂದ ಶ್ರೀರಾಮ ಮಂದಿರವನ್ನು ಕಟ್ಟಿದ್ದಿರಾ? ಅದಕ್ಕೆ ನಾವು ಏನಾದರೂ ಅಡ್ಡ ಬಂದಿದ್ದೆವಾ? ನೀವು ಕಟ್ಟುವುದಕ್ಕೆ ಯಾರು ಅಡ್ಡ ಬಂದಿರುವವರು? ನೀವು ಕಟ್ಟಿದ್ದರೆ ನಿಮ್ಮ point ಮುಗಿಯಿತು, ನಿಮ್ಮ ಸಿದ್ಧಾಂತ ಮುಗಿಯಿತು? ನೀವು ಚುನಾವಣೆ ಬರುವ ಸಮಯಕ್ಕೆ ಸರಿಯಾಗಿ ಶ್ರೀರಾಮನನ್ನು ನೆನಪು ಮಾಡಿಕೊಳ್ಳುತ್ತೀರಿ, ಚುನಾವಣೆ ಮುಗಿದ ಮೇಲೆ ಶ್ರೀರಾಮನನ್ನು ವನವಾಸಕ್ಕೆ ಕಳುಹಿಸುತ್ತೀರಿ.

ಶ್ರೀ ಸಿ.ಟಿ.ರವಿ: ಅಂದರೆ ನಿಮ್ಮ ಪೂರ್ಣ ಬೆಂಬಲವಿದೆ. ಆಯೋಧ್ಯೆಯಲ್ಲಿ ರಾಮ ಮಂದಿರವನ್ನು ಕಟ್ಟುವುದಕ್ಕೆ ಜನತಾದಳದವರ ಪೂರ್ಣ ಬೆಂಬಲವಿದೆ ಎಂದಾಯಿತು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಈ ಕೆಲಸವನ್ನು ಮಾಡಬೇಡಿ, ದಯಮಾಡಿ ಶ್ರೀರಾಮಚಂದ್ರನನ್ನು ಸದಾ ಪೂಜೆ ಮಾಡಿ. ಶ್ರೀರಾಮ ಆದರ್ಶ ಪುರುಷ, ಇತಿಹಾಸ ಪುರುಷ, ಇತಿಹಾಸ ಪುರುಷ, ಆ ಶ್ರೀರಾಮನ ಹೆಸರನ್ನು ಹೇಳಿ ಈ ರಾಷ್ಟ್ರದ ಜನತೆಗೆ ಮೋಸ ಮಾಡಬೇಡಿ. ದಯಮಾಡಿ ತಾವು ಅಲೋಚನೆಯನ್ನು ಮಾಡಿ.

ಶ್ರೀ. ಸಿ.ಟಿ.ರವಿ: ಮಾನ್ಯ ಶಿವಲಿಂಗೇಗೌಡರೆ, ನಿಮಗೆ ಸಪೋರ್ಟ್ ಮಾಡುತ್ತಿದ್ದೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನೀವು ಏನಾದರೂ ಹೇಳುವುದಾದರೆ ಆಮೇಲೆ ಹೇಳಿ. ಇದು ಸಂಸದೀಯ ವ್ಯವಸ್ಥೆಯಲ್ಲ, ಯಾರಿಗೆ ಬೇಕಾದರೂ ಹಕ್ಕು ಇದೆ, ಅವರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಅವರು ಮಾತನಾಡುವಾಗ ವ್ಯಕ್ತಪಡಿಸಬೇಕು. ಈ ರೀತಿ ಮಾಡುವಂಥಾದ್ದಲ್ಲ. ನಾವು ಯಾವ ಜಾತಿ ಹಿಡಿದುಕೊಂಡಿದ್ದೇವೆಂಬುದನ್ನು ಹೇಳಿ, ನಾವು ಯಾವ ದೇವರನ್ನು ಹಿಡಿದುಕೊಂಡಿದ್ದೇವೆಂಬುದನ್ನು ನೀವು ಹೇಳಿ. ನಾವು ಏನೂ ಬೇಡವೆಂದು ಹೇಳುವುದಿಲ್ಲ, ನೀವು ಹಿಡಿದುಕೊಂಡಿರುವುದನ್ನು ನಾವು ಹೇಳುತ್ತೇವೆ, ನೀವು ಹೇಳುವಾಗ ನಮ್ಮದನ್ನು ಹೇಳಿ. ಅದುದರಿಂದ ಈ ಭಯೋತ್ಪಾದನೆಗೆ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಂಡಿದ್ದು ಸರ್ವಥಾ ಅಪರಾಧ, ಈ ವಿದ್ಯಾರ್ಥಿ ಸಮೂಹ ಬಹಳ ಸೂಕ್ಷ್ಮವಾದಂಥಾದ್ದು. ನೀವು ಭಯೋತ್ಪಾದನೆಯ ದೃಷ್ಟಿಯಲ್ಲಿ ಒಂದು ಭಾಷಣವನ್ನು ಮಾಡುವಂಥ ಸಂದರ್ಭದಲ್ಲಿ ಕೆಲವೊಂದು

ಉತ್ಪ್ರೇಕ್ಷೆಯಾದಂಥ ಮಾತುಗಳನ್ನಾಡಿ, ಆ ವಿದ್ಯಾರ್ಥಿ ಸಮೂಹವನ್ನು ನೀವು ಏನಾದರೂ ಕೆಣಕಿದರೆ, ಆ ಸಮೂಹದಲ್ಲಿ ಎಲ್ಲಿಯಾದರೂ ಅಚಾತುರ್ಯ ನಡೆದು ಒಂದು ಕಡೆ ಗಲಾಟೆ ಪ್ರಾರಂಭವಾದರೆ, ಯಾವ ಸರ್ಕಾರದಿಂದಲೂ ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ನಾನು ಇದನ್ನು ಬಹಳ ನೋಡಿದ್ದೇನೆ, ನಾವು ವಿದ್ಯಾರ್ಥಿದಿಶೆಯಿಂದಲೂ ನೋಡಿಕೊಂಡು ಬಂದಿದ್ದೇವೆ. ನೀವು ಆ ವಿದ್ಯಾರ್ಥಿಗಳನ್ನು ಕೆಣಕಬೇಡಿ. ಅವರಲ್ಲಿ ಅವೇಶವನ್ನು ತುಂಬಬೇಡಿ. ಅದರ ಬದಲು ನೀವು ಎಲ್ಲಾ ವಿರೋಧಿ ಪಕ್ಷದವರನ್ನು ಪಕ್ಷದವರನ್ನು, ಎಲ್ಲರನ್ನೂ ಕರೆದು ಇಂಥ ಒಂದು ಭಯೋತ್ಪಾದನೆ ಬರುವುದಕ್ಕೆ ಕಾರಣ ಏನಿದೆ ಎಂಬುದನ್ನು ನೀವು ಮೊದಲು ಗುರುತಿಸಿ ಕ್ರಮ ಕೈಗೊಂಡರೆ ಭಯೋತ್ಪಾದನೆ ಈ ರಾಷ್ಟ್ರದಿಂದ ಓಡಿ ಹೋಗುತ್ತದೆ. ನಾವು ತಿದ್ದುಕೊಳ್ಳದೇ ವಿದ್ಯಾರ್ಥಿಗಳಲ್ಲಿ ಏಕೆ ಮೂಡಿಸಬೇಕು? ಅವರಿಗೆ ಏಕೆ ತಿಳಿಸಬೇಕು? ಅವರು ಅಚ್ಚುಕಟ್ಟಾಗಿ ಪಾಠವನ್ನು ಕೇಳಿಕೊಂಡು ಉತ್ತಮ ಪ್ರಜೆಗಳಾಗಿ ಬೆಳೆಯಲಿ ಎಂಬುದನ್ನು ಬಿಟ್ಟು, ಅವರಿಗೆ ಭಯೋತ್ಪಾದನೆಯನ್ನು ಬೋಧನೆಯನ್ನು ಮಾಡುವಂಥ ಒಂದು ಪರಿಸ್ಥಿತಿಯನ್ನು ತಾವು ತಂದುಕೊಂಡಿದ್ದರಲ್ಲಾ, ಇದು ನಿಜವಾಗಿಯೂ ಭಯೋತ್ಪಾದನೆಯನ್ನು ನಿಲ್ಲಿಸತಕ್ಕಂಥ ವಿಚಾರವೇ ಎಂಬುದನ್ನು ಇವತ್ತು ನೀವು ಅಲೋಚನೆ ಮಾಡಬೇಕಾಗುತ್ತದೆ. ನೀವು ಇದನ್ನು ಸಾಮಾನ್ಯವಾದ ವಿಚಾರವೆಂದು ತಿಳಿದುಕೊಳ್ಳಬೇಡಿ. ನಾನು ಈ ಸದನದಲ್ಲಿ ನಿಂತು ಹೇಳುತ್ತಿದ್ದೇನೆ, ಇದು ಸಾಮಾನ್ಯವಾದಂಥ ವಿಚಾರವಲ್ಲ. ನಿಮಗೆ ಜನ ಸೇರಿದರೆ ಸುಲಭವಾಗಬಹುದು. ನೀವು ಉಪಾಧ್ಯಾಯರಿಗೆ ಹೇಳುತ್ತೀರಿ, ಅವರಿಗೆ ಒಂದು ನೋಟಿಸ್ ಕೊಡುತ್ತೀರಿ, memo ಕೊಡುತ್ತೀರಿ, ಅವರು ಎಲ್ಲಾ ಹುಡುಗರನ್ನು ಕರೆದುಕೊಂಡು ಬಂದು ಬೀದಿಯಲ್ಲಿ ಮೆರವಣಿಗೆಯನ್ನು ಮಾಡುತ್ತಾರೆ, ಅಲ್ಲಿ ಸಭೆಯನ್ನು ಸೇರಿಸುತ್ತಾರೆ. ಅಲ್ಲಿ ನೀವು ಹೋಗಿ ಅವೇಶಭರಿತವಾದಂಥ, ರಾಷ್ಟ್ರಪ್ರೇಮದ ಬಗ್ಗೆ ಭಾಷಣವನ್ನು ಮಾಡುತ್ತೀರಿ. ಯಾರಿಗೆ ರಾಷ್ಟ್ರಪ್ರೇಮ ಇರುವುದಿಲ್ಲ? ಈ ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬ ಪ್ರಜೆಗೂ ರಾಷ್ಟ್ರಪ್ರೇಮ ಬರುತ್ತದೆ. ಆ ರಾಷ್ಟ್ರಪೇಮದ ಬಗ್ಗೆ ನೀವು ಭಾಷಣವನ್ನು ಮಾಡಿ, ಈ ರಾಷ್ಟ್ರಪ್ರೇಮವನ್ನು ಹಾಳು ಮಾಡುತ್ತಿರುವಂಥವರು ಒಂದು ವರ್ಗದ ಜನ, ಒಂದು ಸಮೂದಾಯದ ಜನ ಎನ್ನುವಂಥ ಭಾವನೆಯನ್ನು ಬಿತ್ತರಿಸಿದರೆ ಮುಂದೆ ಏನು ಆಗುತ್ತದೆ? ಈ ಭಾವನೆಗಳನ್ನು ಬಿತ್ತರಿಸಿ ಓಟನ್ನು ಪಡೆಯುವಂಥಾದ್ದು.

ಶ್ರೀ ಬೇಳೂರು ಗೋಪಾಲಕೃಷ್ಣ: ಮಾನ್ಯ ಶಿವಲಿಂಗೇಗೌಡರೆ, ಹಿಂದೂ, ಮುಸಲ್ಮಾನ್, ಎಲ್ಲಾ ಮಕ್ಕಳು ಬಂದಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಯಾರ ಬಗ್ಗೆಯೂ ಹೇಳುತ್ತಿಲ್ಲ, ನಾನು ಪ್ರಾಮಣಿಕವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು: ಅವರು complete ಮಾಡಲಿ, ಅಮೇಲೆ ನೀವು ಹೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ನಾನು ಯಾರ ಬಗ್ಗೆಯೂ ಹೇಳುತ್ತಿಲ್ಲ, ಎಲ್ಲರೂ ಬಂದಿದ್ದರೆ ಸಂತೋಷ. ನಾನು ಭಾಷಣ ಮಾಡಬೇಡಿಯೆಂದು ಹೇಳುತ್ತಿಲ್ಲ. ಆ ವಿದ್ಯಾರ್ಥಿಗಳಿಗೆ ಇವತ್ತಿನ ಕೆಟ್ಟ ಪ್ರವೃತ್ತಿಯ ಈ ಒಂದು ಸೂಕ್ಷ್ಮವಾದಂಥ ಭಯೋತ್ಪಾದನೆಯ ವಿಚಾರವನ್ನು ಅವರಿಗೆ ತುಂಬಬೇಡಿಯೆಂದು ನಾನು ಹೇಳಿದೆ. ನಾನು ನನ್ನ ಸಲಹೆಯನ್ನು ಕೊಟ್ಟೆ, ನನ್ನ ಮನಸ್ಸಿನ ಅಂತರಾಳದಲ್ಲಿದ್ದದ್ದನ್ನು ಹೇಳಿದ್ದೇನೆ. ನೀವು ಬೇಕಾದರೆ ಅದನ್ನು ಖಂಡಿಸಿ, ನಾನು ಏನು ಬೇಡವೆಂದು ಹೇಳುವುದಿಲ್ಲ. ನಾನು ನನ್ನ ವಿಚಾರವನ್ನು ಮಂಡನೆ ಮಾಡಿದ್ದೇನೆ. ಅದನ್ನು ನೀವು ಖಂಡಿಸಿ, ನಾನು ಬೇಡವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ರೀತಿ ನೀವು ಮಾಡಿದ್ದೀರಿ. ಈ ಭಯೋತ್ಪಾದನೆಯ ವಿಚಾರದಲ್ಲಿ ಸಮಿತಿಗಳನ್ನು ರಚನೆ ಮಾಡುವಂಥ ಕಾಲದಲ್ಲಿ ಕ್ಷೇತ್ರದ ಶಾಸಕರನ್ನು ಗಣನೆಗೆ ತೆಗೆದುಕೊಂಡಿರಾ? ನೀವು ಅರಸೀಕೆರೆ ಕ್ಷೇತ್ರದ ಶಾಸಕನನ್ನು ಕರೆದಿರಾ? ನಾನು ಕ್ಷೇತ್ರದಲ್ಲಿದ್ದೇನೆ. ನಾವು ಏನು ಭಯೋತ್ಪಾದನೆಯ ವಿರೋಧಿಗಳಾ? ನಾನು ಅಲ್ಲೇ ಇದ್ದೇನೆ. ನನ್ನ ಪಕ್ಕದಲ್ಲಿ ಇಬ್ಬರು ಪ್ರಿನ್ಸಿಪಾಲರು, ಒಬ್ಬರು ಹೆಡ್ ಮಾಸ್ಟರ್ ಪತ್ರಿಕಾ ಗೋಷ್ಠಿಯನ್ನು ನಡೆಸುತ್ತಾರೆ, ಭಯೋತ್ತಾದನೆಯ ಬಗ್ಗೆ ನಾಳೆ ಸಮಾವೇಶವಿದೆ, ಮೆರವಣಿಗೆ ಇದೆ. ನೀವು ದಯಮಾಡಿ ನಮಗೆ ಸಹಕಾರ ಕೊಡಬೇಕೆಂದು ಪತ್ರಿಕಾ ಮಾಧ್ಯಮದವರನ್ನು ಕೇಳುತ್ತಾರೆ. ನಾನು ಅವರ ಪಕ್ಕದಲ್ಲೆ ಒಬ್ಬ ಶಾಸಕನಿದ್ದೇನೆ, ನನಗೆ ಅದರ ಬಗ್ಗೆ intimation ಇಲ್ಲ, ಏಕೆ? ನಾವು ಏನು ಆ ಸಭೆಗೆ ಬರುತ್ತಿರಲಿಲ್ಲವೇನು? ನಾವು ಆ ಸಭೆಯಲ್ಲಿ ಭಾಗವಹಿಸುತ್ತಿರಲಿಲ್ಲವೇನು? ನೀವು ಏತಕ್ಕೋಸ್ಕರ ನಮ್ಮನ್ನು ಆ ಸಭೆಗೆ ಕರೆಯಲಿಲ್ಲ. ನಮ್ಮನ್ನ ಏಕೆ ದೂರ ಇಟ್ಟಿರಿ? ಇದರಿಂದ ಆ ಕ್ಷೇತ್ರದ ಜನತೆಗೆ ಏನು message ಹೋಗುತ್ತದೆ. ಈ ಕ್ಷೇತ್ರದ ಶಾಸಕರು ಭಯೋತ್ಪಾಕನೆಯ ಪರವಾಗಿ ಇದ್ದಾರೆಂದು ಆಗುತ್ತದೆ. ಇವರು ಭಯೋತ್ಪಾದನೆಯ ವಿರುದ್ಧವಿಲ್ಲವೆಂಬ ಭಾವನೆ ಬರುವುದಿಲ್ಲವೇ? ನೀವು ಏತಕ್ಕೆ ಹೀಗೆಲ್ಲಾ ಮಾಡುತ್ತೀರಿ? ಇಂಥ ಪರಿಸ್ಥಿತಿಯನ್ನು ಏಕೆ ತಂದೊಡ್ಡುತ್ತೀರಿ. ನೀವು ನಮ್ಮನ್ನು ಏಕೆ ಕರೆಯಬಾರದಾಗಿತ್ತು, ನಮ್ಮನ್ನು ಕರೆಯುವಂಥ ದೊಡ್ಡ ಮನಸ್ಸು ನಿಮ್ಮಲ್ಲಿ ಏಕೆ ಇಲ್ಲ. ಇಂಥ ಅನೇಕ ಸಂದಿಗ್ಧವಾದಂಥ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದೀರಿ. ಇದರಿಂದ ಈ ರಾಜ್ಯದ ಜನತೆಗೆ ಒಳ್ಳೆಯುದಾಗುವುದಿಲ್ಲ. ಈ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. ನೀವು ಅಭಿವೃದ್ಧಿ ಮಾಡಿ, ನಾವೂ ಸಂತೋಷ ಪಡುತ್ತೇವೆ. ನೀವು ಒಳ್ಳೆಯ ಕೆಲಸಗಳನ್ನು ಮಾಡಿ,

ನಾವೂ ಸಂತೋಷಪಡುತ್ತೇವೆ. ನಿಜವಾಗಿಯೂ ಬೇರೆ ಅರ್ಥವನ್ನು ಕಲ್ಪಿಸುವುದಿಲ್ಲ. ಆದರ ಇಂಥ ವ್ಯವಸ್ಥಿತವಾಗಿರತಕ್ಕಂಥ ಸಂಚನ್ನು ನಡೆಸಿ, ಪಾರ್ಲಿಮೆಂಟ್ ಚುನಾವಣೆಯಲ್ಲಿ ಗೆಲ್ಲಬೇಕು ಎನ್ನುವ ಒಂದೇ ಒಂದು ಉದ್ದೇಶದಿಂದ, ಮತದಾರರನ್ನು ಸೆಳೆಯತಕ್ಕಂಥ ದೃಷ್ಟಿಯಿಂದ, ಈ ರಾಜ್ಯದ ಹಿತವನ್ನು ಬಲಿ ಕೊಡತಕ್ಕಂಥ ಪ್ರಯತ್ನವನ್ನು ನೀವೇನು ಮಾಡುತ್ತಿದ್ದೀರಿ, ದಯಮಾಡಿ ಅದನ್ನು ನಿಲ್ಲಿಸಿ. ಅದನ್ನು ನಿಲ್ಲಿಸುವ ವ್ಯವಸ್ಥೆಯನ್ನು ನೀವು ಮಾಡದೇ ಹೋದರೆ, ಭಯೋತ್ಪಾದನೆ ವಿರೋಧಿ ಅಭಿಯಾನದ ನೆಪದಲ್ಲಿ ನೀವು ಏನು ಮಾಡುತ್ತಿದ್ದೀರಿ ಎಂದು ಈ ರಾಜ್ಯದ ಜನಗಳಿಗೆ ಗೊತ್ತಾಗುತ್ತದೆ. ನಾವೇನೂ ಸುಮ್ಮನೆ ಕುಳಿತಿರುವುದಿಲ್ಲ. ಎಲ್ಲಾ ಜನಗಳೂ ಅದರ ಬಗ್ಗೆ ಚರ್ಚೆ ಮಾಡುತ್ತಾರೆ. ಇವತ್ತು ಮಾಧ್ಯಮದವರೂ ಬಹಳ ಮುಂದೆ ಇದ್ದಾರೆ. ಎಲ್ಲರೂ ಚರ್ಚೆ ಮಾಡುತ್ತಾರೆ. ಏತಕ್ಕೋಸ್ಕರ ಈ ಭಯೋತ್ಪಾದನೆ ವಿರೋಧಿ ಅಭಿಯಾನಕ್ಕೆ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ಇದು ಸರಿಯೇ, ಅಲ್ಲವೇ ಎನ್ನತಕ್ಕಂಥ ವಿಚಾರದ ಬಗ್ಗೆ ಇಡೀ ರಾಜ್ಯದಲ್ಲಿ ಚರ್ಚೆ ನಡೆಯುಉತ್ತಿದೆ. ಅದಕ್ಕೋಸ್ಕರ ನಾನು ಹೇಳುತ್ತೇನೆ, ದಯಮಾಡಿ ಇದನ್ನು ನಿಲ್ಲಿಸಿ. ನಾನು ಹೇಳುವುದು ಮತ್ಯಾವ ದೃಷ್ಟಿಯಿಂದಲೂ ಅಲ್ಲ. ನಾವೂ ಸಹ ದೇಶಪ್ರೇಮಿಗಳೇ. ನಾವೂ ಈ ಭಾರತ ದೇಶದಲ್ಲಿ ಹುಟ್ಟಿರತಕ್ಕಂಥವರೇ ನಮಗೂ ದೇಶಾಭಿಮಾನ ಇದೆ. ನಾವೇನೂ ಈ ದೇಶವನ್ನು ಬಿಟ್ಟುಕೊಡುವುದಕ್ಕೆ ತಯಾರಿಲ್ಲ. ಈ ದೇಶವನ್ನು ಅರಾಜಕತೆಯಲ್ಲಿಟ್ಟು, ಈ ದೇಶದ ಭವಿಷ್ಯವನ್ನು ಹಾಳು ಮಾಡಲು ನಾವು ತಯಾರಿಲ್ಲ. ಈ ದೇಶದ ಭವಿಷ್ಯತ್ತನ್ನು ಇಟ್ಟುಕೊಂಡು, ಈ ದೇಶದಲ್ಲಿಯೇ ಬಾಳಬೇಕು ಎನ್ನುವ ಇಚ್ಛೆ ಇರತಕ್ಕಂಥ ಜನ ನಾವು. ಆ ಭಾವನೆ ನಮ್ಮಲ್ಲೂ ಇದೆ. ಆದರೆ ನೀವು ವಿಂಗಡಣೆ ಮಾಡುತ್ತಿದ್ದೀರಿ. ಇವರು ದೇಶಪ್ರೇಮಿಗಳಲ್ಲ, ನಾವು ದೇಶಪ್ರೇಮಿಗಳು ಎನ್ನತಕ್ಕಂಥ ಭಾವನೆಯನ್ನು ವ್ಯಕ್ತಪಡಿಸಿಕೊಂಡು ನಮ್ಮನ್ನು ಈ ಭಯೋತ್ಪಾದನಾ ವಿರೋಧಿ ಅಭಿಯಾನ ಚಟುವಟಿಕೆಗಳಿಂದ ದೂರ ಇಡುತ್ತಿದ್ದೀರಿ. ಏತಕ್ಕೋಸ್ಕರ ದೂರ ಇಡುತ್ತಿದ್ದೀರಿ? ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ನಮಗೂ ಅವಕಾಶ ಮಾಡಿಕೊಡಿ. ನಾವೂ ಜನತೆಯ ಮುಂದೆ ಹೇಳುತ್ತೇವೆ, ಭಯೋತ್ಪಾದನೆ ಎಲ್ಲಿ ಪ್ರಾರಂಭವಾಗಿದೆ, ಏತಕ್ಕೋಸ್ಕರ ಪ್ರಾರಂಭವಾಗಿದೆ, ಅದು ಎಲ್ಲಿಂದ ಎಲ್ಲಿ ನಿಲ್ಲಬೇಕು, ಯಾರಿಂದ ನಿಲ್ಲಬೇಕು ಎಂದು ಹೇಳುತ್ತೇವೆ. ಈ ದೇಶದ ಮಹೋದಯರು, ಈ ದೇಶದ ಭವಿಷ್ಯತ್ತನ್ನ ನಿರ್ಮಾಣ ಮಾಡುತ್ತೇವೆ ಎಂದು ಕುಳಿತಿರುವವರೆಲ್ಲರೂ ಸೇರಿ ಒಟ್ಟಿಗೆ ಕುಳಿತುಕೊಂಡು ಒಂದು conclusionಗೆ ಬಂದು ಈ ದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದನೆಯನ್ನು ನಿಲ್ಲಿಸಬೇಕು, ಓಟಿಗೋಸ್ಕರ ಬೇಟೆಯನ್ನು ನಿಲ್ಲಿಸಬೇಕು,

ಓಟಿಗೋಸ್ಕರ ಜಾತೀಯತೆಯನ್ನು ನಿಲ್ಲಿಸಬೇಕು ಎನ್ನತಕ್ಕಂಥ ಪ್ರಾಮಾಣಿಕವಾದಂಥ ವಿಚಾರವನ್ನು ಎಲ್ಲಿಯವರೆಗೆ ಈ ದೇಶದಲ್ಲಿ ನೆನೆಯುವುದಿಲ್ಲವೋ ಅಲ್ಲಿಯವರೆಗೂ ಈ ಭಯೋತ್ಪಾದನೆ ನಿಲ್ಲುವುದಿಲ್ಲ. ಅದಕ್ಕೋಸ್ಕರವಾಗಿ ಇದನ್ನು ನಿಲ್ಲಿಸಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿ, ಈ ಸರ್ಕಾರ 8–9 ತಿಂಗಳಲ್ಲಿ ಎಲ್ಲಾ ವಿಧದಲ್ಲೂ, ಎಲ್ಲಾ ಕ್ಷೇತ್ರಗಳಲ್ಲೂ ವಿಫಲವಾಗಿದೆ. ಕೇವಲ ಒಂದು ಕ್ಷೇತ್ರದಲ್ಲಿ ಅಲ್ಲ ಎಲ್ಲಾ ಕ್ಷೇತ್ರಗಳಲ್ಲಿ ವಿಫಲವಾಗಿದೆ, ಬಜೆಟ್ ಮೇಲೆ ಮಾತನಾಡಲು ಅವಕಾಶ ಸಿಕ್ಕಿ ಮಾತನಾಡುವಾಗ ಹೇಳುತ್ತೇನೆ, ಯಾವಯಾವ ಕ್ಷೇತ್ರದಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನುವ ಭಾವನೆಯನ್ನು ಹೇಳುತ್ತೇನೆ. ಇವತ್ತು ಎಲ್ಲಾ ಕ್ಷೇತ್ರಗಳಲ್ಲಿ ಕಾನೂನು ಸುವ್ಯವಸ್ಥೆಯಲ್ಲಿ, ಎಲ್ಲದರಲ್ಲಿ ಈ ಸರ್ಕಾರ ವಿಫಲವಾಗಿದೆ ಎನ್ನುವ ಮಾತನ್ನು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಯು.ಟಿ. ಖಾದರ್ (ಮಂಗಳೂರು): ಸನ್ಮಾನ್ಯ ಸಭಾಧ್ಯಕ್ಷರೇ, ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕರಾವಳಿ ಪ್ರದೇಶದ ಜನರ ಪ್ರತಿನಿಧಿಯಾಗಿ ಕರಾವಳಿ ಪ್ರದೇಶದಲ್ಲಿ ನಡೆಯುತ್ತಿರುವಂಥ ಕಾನೂನು ಅವ್ಯವಸ್ಥೆ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಸಿಕ್ಕಂಥ ಈ ಸಂದರ್ಭದಲ್ಲಿ ಪ್ರಪ್ರಥಮವಾಗಿ, ಕರ್ನಾಟಕ ಕರಾವಳಿ ಪ್ರದೇಶದಲ್ಲಿ, ವಿಶೇಷವಾಗಿ ಮಂಗಳೂರಿನಲ್ಲಿ ಕೇವಲ ಅಲ್ಪಸಂಖ್ಯಾತರಾದ ಮುಸ್ಲಿಂಮರು ಮತ್ತು ಕ್ರಿಶ್ಚಿಯನ್ನರಿಗೆ ಮಾತ್ರವಲ್ಲ, ಬಹುಸಂಖ್ಯಾತಜನರಿಗೂ ಕೂಡ ಇವತ್ತು ರಕ್ಷಣೆ ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಲಿಚ್ಛಿಸುತ್ತೇನೆ. ಇವತ್ತು ಬಹುಸಂಖ್ಯಾತರಿರಲಿ, ಬುದ್ಧಿಜೀವಿಗಳಿರಲಿ, ಸಮಾಜ ಸೇವಕರಿರಲಿ, ಪತ್ರಕರ್ತರಿರಲಿ, ಯಾರೇ ಇರಲಿ, ಯಾರು ಸರ್ಕಾರದ ವಿರುದ್ಧ ಮಾತನಾಡುತ್ತಾರೆ ಅಥವಾ ಸಂಘ ಪರಿವಾರದ ವಿರುದ್ಧ ಮಾತನಾಡುವವರು, ಭಜರಂಗ ದಳದ ವಿರುದ್ಧ ಮಾತನಾಡುವವರು, ರಾಮಸೇನೆಯ ವಿರುದ್ಧ ಮಾತನಾಡುವವರಾರಿಗೂ ಕೂಡ ರಕ್ಷಣೆ ಇಲ್ಲದಂಥ ವ್ಯವಸ್ಥೆಯಾಗಿದೆ. ಬೇರೆಬೇರೆ ರೀತಿಯ ಯಾವುದಾದರೂ ವಿಚಾರವನ್ನು ತೆಗೆದುಕೊಂಡು ಅವರ ಮೇಲೆ ವಿವಿಧ ರೀತಿಯಲ್ಲಿ ಒತ್ತಡ ತರುವಂಥಾದ್ದು, ದಬ್ಬಾಳಿಕೆ ನಡೆಸುವಂಥ ವಾತಾವರಣ ನಡೆಯುತ್ತಿದೆ. ಯಾರಿಗೂ ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯ, ಮಾತನಾಡುವ ಸ್ವಾತಂತ್ರ್ಯ ಇಲ್ಲದಂಥ ಪರಿಸ್ಥಿತಿಯಾಗಿದೆ. ಏನಾದರೂ ಮಾತನಾಡಿದರೆ ಅದಕ್ಕೆ ಬೇರೆ ರೀತಿಯ ಒಂದು ಬಣ್ಣ ಕಟ್ಟುವಂಥ ವ್ಯವಸ್ಥೆ ಕೂಡ ಅಲ್ಲಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಇದನ್ನು ನಿಮ್ಮ ಮುಖಾಂತರ ಸರ್ಕಾರದ ತರಲು ಇಚ್ಛಿಸುವುದೇನೆಂದರೆ, ಅಲ್ಲಿ ಎಲ್ಲರಿಗೂ ಕೂಡ

ಮಾತನಾಡುವಂಥ ಹಕ್ಕು ಸಿಕ್ಕುವಂಥ ವ್ಯವಸ್ಥೆಯನ್ನು ಕಲ್ಪಿಸುವಂಥ ಅವಕಾಶವನ್ನು ಸರ್ಕಾರ ನಮಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಆ ಪ್ರದೇಶದಲ್ಲಿ ರಾಜ್ಯ ಸರ್ಕಾರ ತನ್ನ ಅಧಿಕಾರವನ್ನು ನಡೆಸುತ್ತಿದೆಯೇ ಅಥವಾ ಆ ಪಕ್ಷದ ಇತರ ಅಂಗ ಸಂಸ್ಥೆಗಳು ಅಥವಾ ಇನ್ನಿತರ ಸಂಘಟನೆಗಳು ಅಲ್ಲಿ ಸರ್ಕಾರ ನಡೆಸುತ್ತಿದೆಯೇ ಎನ್ನುವ ಸಂಶಯಕ್ಕೆ ಇವತ್ತು ಅಲ್ಲಿಯ ಜನರು ಒಳಗಾಗಿದ್ದಾರೆ. ಸಂಬಂಧಪಟ್ಟ ಸಚಿವರು, ಅಧಿಕಾರಿಗಳು ಈ ಬಗ್ಗೆ ಪ್ರಯತ್ನ ಪಟ್ಟರೂ ಕೂಡ, ಆ ಸಂಘಟನೆಗಳು ಅವರ ವಿರುದ್ಧ ನಿಂತು, ಅವರ ಕೈ ಕಟ್ಟಿಹಾಕುವಂಥ ಪರಿಸ್ಥಿತಿ ಇವತ್ತು ಆ ಪ್ರದೇಶದಲ್ಲಿ ನಿರ್ಮಾಣವಾಗಿದೆ ಎಂದು ಹೇಳಲಿಕ್ಕೆ ನಾನು ಇಚ್ಛಿಸುತ್ತೇನೆ. ಇವತ್ತು ಇಂಥ ಸಂಘಟನೆಗಳಿಗೆ ಸರ್ಕಾರ ಒಂದು ರೀತಿಯಲ್ಲಿ ಉಂಬಳಿ ಬರೆದುಕೊಟ್ಟ ರೀತಿಯಲ್ಲಿ ಅಥವಾ Power of Attorney ಕೊಟ್ಟ ರೀತಿಯಲ್ಲಿ ಆ ಪ್ರದೇಶದಲ್ಲಿನ ಜನರು ಭಾವಿಸುವಂಥ ಸಂಶಯಕ್ಕೆ ಒಳಗಾಗಿದ್ದಾರೆ ಎನ್ನುವುದನ್ನು ಕೂಡ ನಾನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಮಾಜದ ಈ ಶಕ್ತಿಗಳಿಗೆ ಇವತ್ತು ಅಲ್ಲಿ ಪೋಲಿಸರ ಭಯ ಇಲ್ಲ. 15–16 ವಾರೆಂಟ್‌ಗಳಿದ್ದವರೂ ಕೂಡ ಪೋಲಿಸ್ ಸ್ಟೇಷನ್‌ಗಳಿಂದ ಹೊರಗೆ ಇರುವಂಥ ವ್ಯವಸ್ಥೆಯಾಗುತ್ತದೆ. ಅವರ ಮೇಲೆ ಕ್ರಿಮಿನಲ್ ವಾರೆಂಟ್‌ಗಳಿವೆ. ಸಿವಿಲ್ ವಾರೆಂಟ್‌ಗಳಿರುವವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಕ್ರಿಮಿನಲ್ ವಾರೆಂಟ್‌ಗಳಿದ್ದವರೂ ಕೂಡ ಇವತ್ತು ಪೊಲೀಸ್ ಜೀಪಿನಲ್ಲಿ ಕುಳಿತುಕೊಂಡು ಅವರ ಜೊತೆ ತಿರುಗಾಡುವಂಥ ವ್ಯವಸ್ಥೆ ಅಲ್ಲಿ ನಿರ್ಮಾಣವಾಗುವುದಾದರೆ, ಅಲ್ಲಿ ಯಾವ ರೀತಿ ಕಾನೂನು ಸುವ್ಯವಸ್ಥೆ ಇದೆ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಯಾರ್ಯಾರ ಮೇಲೆ ವಾರೆಂಟ್‌ಗಳಿವೆ, ಹಾಗಿದ್ದವರಲ್ಲಿ ಎಷ್ಟು ಜನ ಜೈಲಿನಲ್ಲಿದ್ದಾರೆ, ಎಷ್ಟು ಜನ ಹೊರಗಿದ್ದಾರೆ ಎನ್ನುವ ಪಟ್ಟಿಯನ್ನು ನೀವು ನೋಡಬಹುದು. ಇವತ್ತು ಆ ರೀತಿಯ ಒಂದು ವ್ಯವಸ್ಥೆ ಅಲ್ಲಿ ನಿರ್ಮಾಣವಾಗಿದೆ. ಇವತ್ತು ಅಲ್ಲಿ ಪೊಲೀಸಿನವರಿಗೆ ಕೂಡ ಅವರ ಮೇಲಧಿಕಾರಿಗಳ ಹೆದರಿಕೆ ಇಲ್ಲ. ನಾವು ಬೆಂಗಳೂರಿಗೆ ಬಂದು ಆ ಸಮಸ್ಯೆಯ ಬಗ್ಗೆ ಹೇಳಿದಾಗ ಇಲ್ಲಿನವರಿಗೆ ಅವರ ಮೇಲೆ ಯಾವುದೇ ಹಿಡಿತವಿಲ್ಲ. ನಮ್ಮ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ರಾಜ್ಯದಲ್ಲಿರುವ ಅವರಿಗಿಂತ ಮೇಲ್ಪಟ್ಟ ಪೊಲೀಸ್ ಅಧಿಕಾರಿಗಳಿಗೆ ಬೆಲೆಯನ್ನೇ ಕೊಡುವುದಿಲ್ಲ. ಅಲ್ಲಿ ಸಮಾಜದ್ರೋಹಿ ಶಕ್ತಿಗಳಿಗೆ ಜಾಸ್ತಿ ಬೆಲೆ ಇದೆ. ಪೊಲೀಸ್ ಅಧಿಕಾರಿಗಳ ಮಾತಿಗಿಂತ, ಇನ್ನಿತರ ಅಧಿಕಾರಿಗಳ ಮಾತಿಗಿಂತ ಇವತ್ತು ಜಾಸ್ತಿ ಬೆಲೆ ಇರುವುದು ಆ ಪ್ರದೇಶದ ಸಮಾಜದ್ರೋಹಿ ಶಕ್ತಿಗಳಿಗೆ ಎನ್ನುವ ಸಂಶಯ ನಮಗೆ ಬರುತ್ತದೆ. ಈ ರೀತಿಯ ಬೇಕಾದಷ್ಟು ಉದಾಹರಣೆಗಳಿವೆ. O.N.G.C.ಯ ಪ್ರದೇಶಕ್ಕೆ ಸ್ವಾಮೀಜಿಗಳು

ಹೋದಾಗ, ಸ್ವಾಮೀಜಿಗಳ ಮೇಲೆ ಹಲ್ಲೆ ನಡೆಸುವಂಥ ಒಂದು ಪರಿಸ್ಥಿತಿಯಾಯಿತು. ಪೇಜಾವರ ಸ್ವಾಮಿ ಮತ್ತು ಇನ್ನಿತರ ನಾಲ್ಕೈದು ಜನ ಸ್ವಾಮೀಜಿಗಳಿಗೆ ಹಲ್ಲೆ ಮಾಡುವಂಥ ಪ್ರಯತ್ನ ಮಾಡಿದ್ದನ್ನು T.V. ಚಾನಲ್‌ಗಳಲ್ಲಿ ನೋಡಿ ನಮಗೆ ನಾಚಿಕೆಯಾಗುತ್ತದೆ. ಯಾರು ಪತ್ರಕರ್ತರು ಅಲ್ಲಿಗೆ ಹೋಗುತ್ತಾರೆ. ಅವರ ಮೇಲೆ ಹಲ್ಲೆ ನಡೆಯುವಂಥ ಪರಿಸ್ಥಿತಿಯಾಗುತ್ತದೆ. ಪತ್ರಕರ್ತರಿಗೆ ಹೊಡೆಯಲಿಕ್ಕೆ ಹೋಗುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಯಾರು ಕೈ ಎತ್ತುತ್ತಾನೆ, ಯಾರು ದೂರುತ್ತಾನೆ ಎನ್ನುವುದನ್ನು T.V. ಯಲ್ಲಿ ನೋಡಿದರೂ ಕೂಡ ಅವರ ಮೇಲೆ ಯಾವುದೇ ಒಂದು ಕೇಸು ರಿಜಿಸ್ಟರ್ ಆಗುವಂಥ ಪರಿಸ್ಥಿತಿ ಇವತ್ತು ಅಲ್ಲಿ ಇಲ್ಲ. ಚರ್ಚಿನ ಮೇಲೆ ಅಟ್ಯಾಕ್ ಆಯಿತು. ಹಿಂದೆ ಹಾಗೆ ಇತ್ತು, ಮುಂದೆ ಹೀಗೆ ಇರುತ್ತದೆ ಎಂದು ಹೇಳುತ್ತಿದ್ದರು. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಮತಾಂತರಕ್ಕೋಸ್ಕರ ಆಗುವಂಥದ್ದನ್ನು ಸಮರ್ಥಿಸಿದರಲ್ಲ, ಅದನ್ನು ನಾವು ಇವತ್ತು ಖಂಡಿಸಲೇಬೇಕಾಗುತ್ತದೆ. ಅದನ್ನು ನಾವು ಖಂಡಿಸುತ್ತೇವೆ. ಚರ್ಚ್‌ಗಳ ಮೇಲೆ ಅಟ್ಯಾಕ್ ಆದಾಗ ಅದಕ್ಕೆ ಮುತಾಂತರದ ಕಾರಣ ಕೊಟ್ಟು, ಅದನ್ನು ಬೆಂಬಲಿಸುವಂಥ ಕೆಲಸವಾಗಿದೆ. ಪಬ್ ಕಲ್ಚರ್ ಎಂದು ಹೇಳಿ ಪಬ್‌ಗಳಿಗೆ ಹೋದ ಮಹಿಳೆಯರಿಂದ ನಮ್ಮ ಸಂಸ್ಕೃತಿ ಹಾಳಾಗುತ್ತದೆ ಎಂದು ಹೇಳಿ ಅ ಮಹಿಳೆಯರನ್ನು ಹೊಡೆದವರನ್ನು ಬೆಂಬಲಿಸುವಂಥಾದ್ದು ನಡೆದಿದೆ. ನ್ಯಾಯ ಕೊಡುವ ಬದಲು, ಹೊಡೆದವರನ್ನು ಬೆಂಬಲಿಸುವಂಥ ಪ್ರವೃತ್ತಿಯನ್ನು ಒಂದು ಪಕ್ಷದ ಮೇಲೆ ಹೇಳಿ ನಾವು ಟೀಕೆ ಮಾಡುವುದಲ್ಲ. ಹಿಂದೆ ಈ ರೀತಿಯದು ಆಗಿಲ್ಲ ಎಂದು ಹೇಳುವುದಲ್ಲ. ಆದರೆ ಈ ರೀತಿ, ಒಂದು ಸರ್ಕಾರವೇ ಅವರನ್ನು ಬೆಂಬಲಿಸುವಂಥ ಪರಿಸ್ಥಿತಿಯಾಗಿದೆ ಎನ್ನುವುದನ್ನು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಅತೀ ನಾಚಿಕೆಗೇಡಿನ ವಿಷಯ ಎಂದರೆ, ನಮ್ಮ ಪಕ್ಕದ ರಾಜ್ಯದ ಒಂದು ಕ್ಷೇತ್ರದ ಶಾಸಕರ ಮಗಳು ಬಸ್ಸಿನಲ್ಲಿ ಹೋಗುತ್ತಿರುವಾಗ ತನ್ನ ಸಹಪಾಠಿಯೊಂದಿಗೆ ಮಾತನಾಡಿದ್ದಕ್ಕೆ, ಅವಳನ್ನು ಪಬ್ಲಿಕ್ಕಾಗಿ ಬಸ್ಸಿನಿಂದ ಇಳಿಸಿ, ಅವಳನ್ನು ಹೊಡೆದು ಒಂದು ರಿಕ್ಷಾದಲ್ಲಿ ಕೂರಿಸಿಕೊಂಡು ಒಂದು ಮನೆಗೆ ಕರೆದುಕೊಂಡು ಹೋಗಿ ಅಲ್ಲಿಯೂ ಹೊಡೆದು ನಂತರ ಅವರನ್ನು ಬಿಡುವಂಥ ಪ್ರಸಂಗ ನಡೆದಿದೆ ಎಂದರೆ ಒಂದು civilized society ಯಲ್ಲಿ ಈ ರೀತಿಯಾಗಿ ಒಬ್ಬ ಶಾಸಕರ ಪುತ್ರಿಗೆ ಆಗುವುದಾದರೆ ಯಾವ ರೀತಿ ನಡೆಯುತ್ತಿದೆ ಎಂದು ಆಲೋಚನೆ ಮಾಡಿ. ಹೊಡೆದವರಿಗೆ ಶಿಕ್ಷೆಯಾಯಿತೇ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವತ್ತು ಕೊಲೆಗಾರ ಯಾರಿದ್ದಾನೆ, ಅವನು ಬೇಲ್ ಮೇಲೆ ಹೊರಗೆ ಬಂದಿದ್ದಾನೆ. ಕೊಲೆಯಾದ ನಂತರ ನಡೆದ ಸಣ್ಣಪುಟ್ಟ ಗಲಾಟೆಯಲ್ಲಿ ಯಾರು ಒಳಗೆ ಹೋಗಿದ್ದಾನೆ, ಅವನಿಗೆ ಇನ್ನೂ ಬೇಲ್ ಸಿಕ್ಕಿಲ್ಲ, ಅವನ ಮೇಲೆ ಅಷ್ಟೊಂದು

ಕೇಸುಗಳನ್ನು ಹಾಕಿಬಿಟ್ಟಿದ್ದಾರೆ. ಪೊಲೀಸಿನವರು ಕೇಸು ಹಾಕುವುದರಲ್ಲಿಯೂ ಕೂಡ ಯಾವ ರೀತಿಯ ತಾರತಮ್ಯವಿದೆ ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತರಲಿಕ್ಕೋಸ್ಕರ ಈ ವಿಚಾರವನ್ನು ಹೇಳುತ್ತಿದ್ದೇನೆ. ಶಾಸಕರ ಪುತ್ರಿಯ ಮೇಲೆ ಹಲ್ಲೆಯಾದದ್ದು ನಮಗೆ ಇಡೀ ರಾಷ್ಟ್ರಮಟ್ಟದಲ್ಲಿ ನಾಚಿಕೆಪಡುವಂಥಾದ್ದಾದರೆ, ಶಾಸಕರ ಪುತ್ರಿಗೇ ರಕ್ಷಣೆ ಇಲ್ಲದಿದ್ದರೆ, ಹಲ್ಲೆ ಮಾಡಿದಂಥವರು ಜೈಲಿನಿಂದ ಹೊರಗೆ ಬರುತ್ತಾರೆ ಎಂದರೆ ಪೊಲೀಸರು ಯಾವ ರೀತಿಯ ಕೇಸುಗಳನ್ನು ಹಾಕುತ್ತಾರೆ ಎನ್ನುವುದನ್ನು ನಾವು ಆಲೋಚನೆ ಮಾಡುವಂಥ ವಿಷಯವಾಗಿದೆ. ಇವತ್ತು ಬಸ್ಸಿನಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯವರು ಪಿಕ್‌ನಿಕ್ಕಿಗೆ ಹೋಗುವಂಥಾದ್ದು, ಸ್ಟಡಿ ಟೂರ್ ಹೋಗುವಂಥಾದ್ದು, ಸಮುದಾಯದ ಶಾಲೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂಥಾದ್ದು ಇದ್ದು, ಅವರ ಮೇಲೆ ಹಲ್ಲೆ ನಡೆಯುವಂಥ ಪ್ರವೃತ್ತಿ ದಿನೇದಿನೇ ಅಲ್ಲಿ ನಡೆಯುತ್ತಿದೆ. ಯಾರೇ ಒಬ್ಬ ಸೋದರ ಸೋದರಿಯರು ಮಾತನಾಡುತ್ತಿರುವಾಗ ಅವರನ್ನು ಸಂಶಯದ ದೃಷ್ಟಿಯಿಂದ ನೋಡತಕ್ಕಂಥ ಈ ಸಂಘಟನೆಗಳಿಗೆ ನಮ್ಮ ಸಹೋದರಿಯರ ಮೇಲೆ ವಿಶ್ವಾಸವಿಲ್ಲ. ನಮ್ಮ ಹೆಣ್ಣುಮಕ್ಕಳ ಮೇಲೆ ಯಾರಿಗೂ ವಿಶ್ವಾಸ ಬರದ ರೀತಿಯಲ್ಲಿ ಇಂಥ ಚಟುವಟಿಕೆಗಳು ನಡೆಯುತ್ತಿವೆ. ನಾವು ದೆಹಲಿಗೆ ಹೋಗಬೇಕಾಗುತ್ತದೆ, ಹೈದರಾಬಾದಿಗೆ ಹೋಗಬೇಕಾಗುತ್ತದೆ, ಆ ರೀತಿ ಹೋದಾಗ ನಮಗೆ ನಾಚಿಕೆಯಾಗುತ್ತದೆ. ನನ್ನ ಗ್ರಹಚಾರಕ್ಕೆ, ನಾನು ಮಂಗಳೂರು ಶಾಸಕ ಎನ್ನುವ ಹೆಸರು ಬೇರೆ ಇದೆ. ಆದಕಾರಣ. ನಮಗೆ ಸಾಮಾಜಿಕ ಭದ್ರತೆ ಬೇಕು. ಇವತ್ತು ತಾವು ನಮಗೆ ಬಜೆಟ್‌ನಲ್ಲಿ ಏನು ಕೊಡದಿದ್ದರೂ ಬೇಸರವಿಲ್ಲ. ಆದರೆ ಸಾಮಾಜಿಕ ಭದ್ರತೆಯನ್ನು ಕರಾವಳಿ ಪ್ರದೇಶದ ಜನರಿಗೆ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿಗಳಿರಲಿ, ಮಹಿಳೆಯರಿರಲಿ, ಇನ್ನಿತರರು, ಶ್ರೀಮಂತರು, ಒಳ್ಳೆಯ ಸಭ್ಯಸ್ಥರು ಇಲ್ಲರೂ under world ನವರ ಒತ್ತಡದಿಂದ ಮುಕ್ತರಾಗಿಲ್ಲ. ಒಬ್ಬೊಬ್ಬ businessman ಒಂದೊಂದು ರೀತಿಯ ಒತ್ತಡಗಳು under world ಮುಖಾಂತರ ಬರುತ್ತದೆ. ಅವರು ಹೊರಗೆ ಹೋಗುವಂಥ ಪರಿಸ್ಥಿತಿ ಇಲ್ಲ. ಯಾವ ರೀತಿ ಅದನ್ನು control ಮಾಡಬೇಕು ಯಾರ ಬಳಿ ಹೇಳಬೇಕೆಂದು ಪರಿತಪಿಸುತ್ತಿದ್ದಾರೆ. ಇದನ್ನೆಲ್ಲ ಆಲೋಚಿಸಿಕೊಂಡು ಸಮರ್ಪಕವಾಗಿ Police Department ಅನ್ನು ಸುಧಾರಣೆಗೊಳಿಸುವಂಥ ವಿಶೇಷವಾದ ಕಾನೂನನ್ನು ತರಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು, ಕಾಲೇಜುಗಳಲ್ಲಿ ಸಣ್ಣಪುಟ್ಟ ಸಮಸ್ಯೆಯಾದಾಗ, ಭಯೋತ್ಪಾದನೆ ರ್‍ಯಾಲಿ ಪ್ರಾರಂಭಿಸಿದಾಗ ಅದು ಪ್ರಪ್ರಥಮವಾಗಿ ನಮ್ಮ ಜಿಲ್ಲೆಯಲ್ಲಿ ಬಂದಾಗ ಮೀಟಿಂಗ್‌ಗೆ

ನನ್ನನ್ನುಕರೆಯದಿದ್ದರೂ ಕೂಡ ಅವತ್ತು ನಾನು ಖುದ್ದಾಗಿ ಹೋಗಿದ್ದೆ. ಏಕೆಂದರೆ, ಅದು ಉತ್ತಮ ಸಂಕೇತವಾಗಿರುವ ಕಾಯಾಕ್ರಮವೆಂದು ನಾನು ಹೋದಾಗ ಆ stage ನಲ್ಲಿ ನನಗೆ ಬೇಸರವಾಗಿದ್ದುದ್ದು ಏನೆಂದರೆ ಅಲ್ಲಿ ಶಾಸಕರು ಯಾರೂ ಮಾತನಾಡಲಿಕ್ಕಿಲ್ಲ. ಆದರೆ, ಅಲ್ಲಿಗೆ ಬಂದು ಯಾರು ಮಾತನಾಡಿದ್ದಾರೆನ್ನುವುದನ್ನು ಆ ಕಾರ್ಯಕ್ರಮದ ಒಂದು C.D. ಕ್ಯಾಸೆಟ್ ಅವಲೋಕಿಸಿದಾಗ ಅದರ ಪರಿಣಾಮ ವಿದ್ಯಾರ್ಥಿಗಳ ಮೇಲೆ ಎಷ್ಟು ಬೀಳುತ್ತದೆ ಎಂದು ಆಲೋಚನೆ ಮಾಡಬೇಕು. ಇವತ್ತು ನಾವೆಲ್ಲರೂ ಆಲೋಚನೆ ಮಾಡಬೇಕಾಗುತ್ತದೆ. ಅಮೇರಿಕಾದ ಅಧ್ಯಕ್ಷರು ಸಹ ಕುಳಿತುಕೊಂಡು 'ವಿಶ್ವದಲ್ಲಿ ಇವತ್ತು ಶಾಂತಿ, ಸೌಹಾರ್ದತೆ ಬೇಕಾದರೆ ಹಿಂದುಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು, ಯಹೂದಿಗಳು ಒಟ್ಟಾಗಿ ಇರಬೇಕೆಂದು' ಹೇಳಿದರು. ಆದರೆ, ಗ್ರಹಚಾರ ನಮ್ಮ ವೇದಿಕೆಯಲ್ಲಿ ಒಬ್ಬರೇ ಒಬ್ಬ ಮಂತ್ರಿಯಿಂದಲಾದರೂ 'ನಾವು ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಒಟ್ಟಾಗಿ ಇರಬೇಕೆನ್ನುವ ಒಂದೇ ಒಂದು ಮಾತು' ಕೂಡ ಅಲ್ಲಿಂದ ಬರುವುದಿಲ್ಲ. ಭಯೋತ್ಪಾದನೆಗೆ ಜಾತಿ ಇಲ್ಲ, ಭಯೋತ್ಪಾದನೆಗೆ ಧರ್ಮ ಇಲ್ಲ ಎಂದು ಯಾರೂ ಕೂಡ ಭಾಷಣದಲ್ಲಿ ಹೇಳುವಂಥ ಪರಿಸ್ಥಿತಿ ಇಲ್ಲ. ಭಯೋತ್ಪಾದನೆ ಒಂದು ಬೆಂಕಿ ಇದ್ದ ಹಾಗೆ. ಬೆಂಕಿ ಯಾರು ಕೊಡುತ್ತಾರೋ ಅವರನ್ನೇ ಸುಡುತ್ತದೆ, ಆ ಬೆಂಕಿಯನ್ನು ನಾನು ಕೊಟ್ಟಿದ್ದೋ, ಅವನು ಕೊಟ್ಟಿದ್ದೋ, ಯಾರು ಕೊಟ್ಟಿದ್ದು ಎಂದು ನೋಡುವುದಿಲ್ಲ. ಭಯೋತ್ಪಾದಕನ ಉದ್ದೇಶ ಒಂದೇ ಆಗಿರುತ್ತದೆ, ಅದೇನೆಂದರೆ ಈ ದೇಶವನ್ನು ದುರ್ಬಲಗೊಳಿಸಬೇಕೆನ್ನುವ ಒಂದೇ ಉದ್ದೇಶವಾಗಿರುತ್ತದೆ ಎಂದು ನಾವೆಲ್ಲರೂ ಸಹ ಅರ್ಥಮಾಡಿಕೊಳ್ಳಬೇಕು. ಅದರಲ್ಲಿ ಯಾರಾದರೂ ಕೂಡ ರಾಜಕೀಯ ಲಾಭವನ್ನು ಪಡೆದುಕೊಂಡರೆ ಅಂಥವರನ್ನು ದೇವರು ಖಂಡಿತವಾಗಿಯೂ ಕ್ಷಮಿಸುವುದಿಲ್ಲವೆಂದು ನಾನು ಹೇಳುತ್ತಾ ಇವತ್ತು ಟಿ.ವಿ ಮಾಧ್ಯಮವನ್ನು ನೋಡಿದೆ. NDTV ಯಲ್ಲಿ SP ರವರ ಒಂದು Statement ಅನ್ನು ಗಮನಿಸಿದೆ. 'ಏನಾದರೂ ಸಮಸ್ಯೆಯಾದಾಗ ನಾವು ಆರೋಪಿಗಳನ್ನು ಹಿಡಿದರೆ ತಕ್ಷಣ ಅಲ್ಲಿ ಗಲಾಟೆಯಾಗುತ್ತದೆ, ಅದಕ್ಕೆ ನಾವು ಹಿಡಿಯುವುದಿಲ್ಲ' ಎಂದು ಹೇಳಿದ್ದಾರೆ. ಇಂಥ Statement SP ಅವರಿಂದ ಬಂದಿದೆ. ಮತ್ತೆ ಮತ್ತೆ ನಮ್ಮ ಜಿಲ್ಲೆಯಲ್ಲಿ ಇದು continue ಆಗುತ್ತಿದ್ದರೆ ಯಾವ ರೀತಿಯಾಗಿ ಇದನ್ನು control ಮಾಡುತ್ತೀರಿ? ಎನ್ನುವ ಬಗ್ಗೆ ತಾವು ನಮಗೆ ಧೈರ್ಯ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಾ, ಪಬ್‌ನಲ್ಲಿ attack ಮಾಡಿರುವುದನ್ನು ನಾವೂ ಸಹ ಒಪ್ಪಿಕೊಳ್ಳುವುದಿಲ್ಲ. ನಾವೂ ಕೂಡ ವಿರೋಧಿಸುತ್ತೇವೆ. ಅಂದರೆ ಅವರಿಗೆ ದೈಹಿಕ attack ಮಾಡುವುದು, ಸಹೋದರಿಯರಿಗೆ ಹೊಡೆಯುವುದು, ಅವರನ್ನು ಹೊರಗೆ ಎಳೆದು ಹಾಕುವುದು,

ಬೆದರಿಕೆ ಒಡ್ಡುವ ಪ್ರವೃತ್ತಿ ಖಂಡಿತ ನಮ್ಮ ದೇಶದ ಸಂಸ್ಕೃತಿ ಅಲ್ಲ. ಇವತ್ತು ನಮ್ಮ ರಾಜ್ಯದಲ್ಲಿ, ನಮ್ಮ ಈ ಸಮಾಜದಲ್ಲಿ ಸಂಸ್ಕೃತಿ ಉಳಿಯಬೇಕಾದರೆ, ಎಲ್ಲರೂ ನಿರ್ಭಯವಾಗಿ ಜೀವಿಸಬೇಕು. ಯಾವಾಗ ನಿರ್ಭಯವಾಗಿ ಭಯವಿಲ್ಲದೆಯೇ ಜೀವಿಸುತ್ತೇವೆಯೋ ಆಗ ನಮಗೆ ಸಂಸ್ಕೃತಿ, ಆಚಾರ ವಿಚಾರ ಎಲ್ಲವೂ ನೆನಪಿರುತ್ತದೆ. ಏನಾದರೂ ನಾವು ಭಯದ ಸಮಾಜದಲ್ಲಿ ಜೀವಿಸುವುದಾದರೆ ಅಂಥ ಸಂದರ್ಭದಲ್ಲಿ ನಮಗೆ ಯಾವುದೂ ನೆನಪಿರುವುದಿಲ್ಲ. ಎಲ್ಲವೂ ಮರೆತು ಹೋಗುತ್ತದೆ. ಇವತ್ತು ಯಾರಿಗಾದರೂ ನಮ್ಮ ಸಂಸ್ಕೃತಿ ಉಳಿಯಬೇಕೆಂಬ ವಿಶೇಷವಾದ ಕಾಳಜಿ ಇದ್ದರೆ ಪ್ರಪ್ರಥಮವಾಗಿ ಅವರು ಮಾಡಬೇಕಾದ ಕೆಲಸವೇನೆಂದರೆ, ಶಾಂತಿಯುತವಾದ ಸಮಾಜವನ್ನು ನಿರ್ಮಾಣ ಮಾಡುವಂಥ ವಿಶೇಷವಾದ ಕಾಳಜಿ ವಹಿಸಬೇಕೆಂದು ನಿಮ್ಮ ಹತ್ತಿರ ಕಳಕಳಿಯಿಂದ ಕೇಳಿಕೊಳ್ಳುತ್ತಾ, ಈ ಒಂದು ಗಲಾಟೆಯಾದಾಗ, ನಮ್ಮ ಕೇಂದ್ರ ಸಚಿವರಾದ ಶ್ರೀಮತಿ ರೇಣುಕಾಚೌಧರಿಯವರು ಮಹಿಳೆಯರ ಬಗ್ಗೆ ವಿಶೇಷವಾದ ಕಾಳಜಿ ಇಟ್ಟುಕೊಂಡು, ಅವರ ಪರ ತಾಯಂದಿರ ಮನೋಸ್ಥಿತಿಯನ್ನು ಅರಿತುಕೊಂಡು ಒಂದು Statement ಕೊಟ್ಟರೆ ನಮ್ಮ ಮಂಗಳೂರಿನ ಮೇಯರ್ ಆಗಿರತಕ್ಕಂಥವರು, ಆ culture ನಿಂದ ನಮಗೆ ಅವಮಾನವಾಗಿದೆ, ಇದರಿಂದ ತೊಂದರೆಯಾಗಿದೆ ಎಂದು ಹೇಳಬೇಕಾಗಿತ್ತು. ಆ ಜನರಿಗೆ ಆ ತಾಯಂದಿರ ರಕ್ಷಣೆಗೆ ಬರುವ ಬದಲು ಕೇಂದ್ರ ಸಚಿವರ ವಿರುದ್ಧ ಕೇಸ್ ಹಾಕುವುದೆಂದರೆ ಇದು ನಮ್ಮ ಜಿಲ್ಲೆಗೆ ಮಾತ್ರವಲ್ಲ, ಇಡೀ ನಮ್ಮ ರಾಜ್ಯಕ್ಕೆ ಅವಮಾನ. ಇವತ್ತು ನಾನು ಧೈರ್ಯವಾಗಿ ಹೇಳುತ್ತೇನೆ, ಮಂಗಳೂರು ತಾಲಿಬಾನ್ ಅಲ್ಲ, ತಾಲಿಬಾನೀಕರಣವಾಗುತ್ತಿದೆ, ಶ್ರೀಮತಿ ರೇಣುಕಾಚೌಧರಿಯವರ ಮಾತನ್ನು ನಾನು ಇವತ್ತು ಧೈರ್ಯವಾಗಿ ಹೇಳುತ್ತಿದ್ದೇನೆ. ಏಕೆಂದರೆ ತಾಲೀಬಾನ್ ತತ್ವ ಮತ್ತು ನಮ್ಮ ಜಿಲ್ಲೆಯಲ್ಲಿರುವ ಕೆಲವರ ತತ್ವಕ್ಕೆ ಯಾವುದೇ ವ್ಯತ್ಯಾಸವಿಲ್ಲ. ಇವತ್ತು ಆ ಸಂಘಟನೆಯವರು ಸ್ಪಷ್ಟನೆ ನೀಡಬೇಕು. ಅವರ ತತ್ವ ತಾಲೀಬಾನ್ ತತ್ವ ಮತ್ತು ಇವರ ಹಿಂದುತ್ವದ ತತ್ವಕ್ಕೆ ಏನು ವ್ಯತ್ಯಾಸವಿದೆ ಎಂದು ನಮಗೆ ಹೇಳಿದಾಗ ಅರ್ಥವಾಗಬಹುದು. ಆದಕಾರಣ, ಎಲ್ಲಾ ರಾಜಕೀಯ ಪಕ್ಷದವರು ಒಟ್ಟಾಗಿ ಇದ್ದುಕೊಂಡು ಇದನ್ನೆಲ್ಲ serious ಆಗಿ ತೆಗೆದುಕೊಂಡು ವಿಶೇಷವಾದ ಆಲೋಚನೆ ಮಾಡಿ ಇದಕ್ಕೆ ಯಾವುದೇ ರಾಜಕೀಯ ತರದೆ ನಾವು ಸೌಹಾರ್ದತೆಯಿಂದ, ಸಮಾನತೆಯಿಂದ ಬಾಳುವಂತಾಗಬೇಕು. ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳಿದ್ದರು, ಅದೇನೆಂದರೆ ಸಹೋದರತ್ವಕ್ಕೆ Hinduism ಒಂದು ಮಾದರಿಯಾಗಿದ್ದರೆ, Equality ಗೆ Muslims ಒಂದು ಮಾದರಿಯಾಗಿದ್ದರೆ, ಸೇವೆಗೆ christianity ಒಂದು ಮಾದರಿಯಾಗಿದೆ. ಅದಕ್ಕಾಗಿ ನಾವೆಲ್ಲರೂ ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಒಗ್ಗಟ್ಟಿನಿಂದ ಹೋದರೆ

ಮಾತ್ರ ಒಂದು ಶಾಂತಿಯುತ ಸಮಾಜ ನಿರ್ಮಾಣವಾಗುತ್ತದೆ. ಆದ್ದರಿಂದ, ನಾವೆಲ್ಲರೂ ಭಯೋತ್ಪಾದನೆಯನ್ನು ತಡೆಗಟ್ಟುವ ಕೆಲಸವನ್ನು ಮಾಡಬೇಕು. ಯಾವ ಭಯೋತ್ಪಾದಕರನ್ನೂ ಜೈಲಿನಲ್ಲಿಡಬಾರದು. ಯಾರು ಭಯೋತ್ಪಾದಕರೆಂದು ಸ್ಪಷ್ಟವಾಗಿದೆಯೋ ಅವರಿಗೆ ಜೈಲಿನಲ್ಲಿ ಅನ್ನ ಕೂಡ ಕೊಡಬಾರದು. ಅವರನ್ನು ನೇಣಿಗೆ ಏರಿಸುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದೆಲ್ಲವನ್ನೂ ಮಾಡಬೇಕು. ಭಯೋತ್ಪಾದನೆಗೆ ಸಂಬಂಧಿಸಿದಂತೆ ವಿಶೇಷವಾದ ನ್ಯಾಯಾಲಯವನ್ನು ಸ್ಥಾಪಿಸಬೇಕು. ಏಕೆಂದರೆ, ಹಲವಾರು ಜನರನ್ನು ಹಿಡಿದಿದ್ದು ಅದರಲ್ಲಿ ಕೆಲವರು ಶಂಕಿತರು, ಭಾಗಿಯಾಗಿದ್ದಾರೆ ಎಂದು ಹೇಳಿದ್ದಾರೆ. ಅದರ ಬದಲು ವಿಶೇಷವಾದ ನ್ಯಾಯಾಲಯವನ್ನು ಸ್ಥಾಪಿಸಿ ಯಾರು ನಿಜವಾದ ಭಯೋತ್ಪಾದಕರಿದ್ದಾರೆ, ಅವರಿಗೆ ಈ ದೇಶದ ಜೈಲಿನಲ್ಲಿ ಊಟವನ್ನು ಸಹ ಕೊಡಬಾರದು. public ಆಗಿ ಅಂಥವರನ್ನು hang ಮಾಡಿ. ಅದಕ್ಕೆ ನಾವೆಲ್ಲರೂ ಬೆಂಬಲರಾಗಿ ಇದ್ದೇವೆ. ಯಾರಾದರೂ ನಿರಪರಾಧಿ ಇದ್ದರೆ ವಿಶೇಷವಾದ ನ್ಯಾಯಾಲಯದಲ್ಲಿ ಅವರಿಗೆ ಅವಕಾಶ ಸಿಕ್ಕಿ ಅವರು ಸಮಾಜದಲ್ಲಿ ಜೀವಿಸುವುದಕ್ಕೆ ಅವಕಾಶ ಕೊಡಬೇಕೆಂದು ನಿಮ್ಮಲ್ಲಿ ಕಳಕಳಿಯಿಂದ ಕೇಳಿಕೊಂಡು, ಇದು ಆಗಬೇಕಾದರೆ ನನ್ನ ಒಂದೇ ಒಂದು ಸಲಹೆ ಏನೆಂದರೆ, ಪೋಲೀಸ್ ಇಲಾಖೆಯೊಂದಿಗೆ police commission ಅನ್ನು appoint ಮಾಡಿ ಇದನ್ನು ನೋಡಿಕೊಳ್ಳುವಂಥದ್ದಾಗಬೇಕು. ಇಂಥ ಗಲಾಟೆಯಿಂದಾಗಿ, ಭಯೋತ್ಪಾದನೆ ಯಿಂದಾಗಿ ಯಾರಿಗೂ ಕೂಡ ಧೈರ್ಯವಿಲ್ಲದಿರುವ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ, ಈ ರಾಜ್ಯದಲ್ಲಿ police commission ಅನ್ನು ರಚಿಸಿ ಇದಕ್ಕೆ ಬೇಕಾದ ಕಾನೂನು ಸಲಹೆಯನ್ನು ಕೊಡುವುದಕ್ಕೆ ಸಹ ವ್ಯವಸ್ಥೆ ಮಾಡಬೇಕೆಂದು ನಾನು ನಿಮ್ಮ ಹತ್ತಿರ ಕಳಕಳಿಯಿಂದ ಕೇಳಿಕೊಳ್ಳತ್ತಾ, ವಿಶ್ವವಿದ್ಯಾನಿಲಯದಲ್ಲಿ ಸಣ್ಣಪುಟ್ಟ ಗಲಾಟೆಯಾಗಿದ್ದಕ್ಕೆ V.C ಯವರು ಶಿಕ್ಷಕರಿಗೆ ಒಂದು notice ಕಳುಹಿಸುತ್ತಾರೆ. ಇವತ್ತು ನಾವು ಕೇಳುವಂಥದ್ದೇನೆಂದರೆ, ಒಬ್ಬ ಉತ್ತಮವಾದ lecturer ಹಿಂಸೆ ಮಾಡಬೇಡಿ, ಅಹಿಂಸಾವಾದಿಯಾಗಿರಿ ಎಂದು ಹೇಳಿದ್ದಕ್ಕೆ notice ಕಳುಹಿಸುವುದಾದರೆ ಇವತ್ತು ಯಾವ ರೀತಿ ಶಿಕ್ಷಕ ವೃಂದದವರನ್ನು ಸಹ ರಕ್ಷಿಸಿದ್ದೇವೆ, ಅವರ ಅಭಿವ್ಯಕ್ತತೆಗೆ ನಾವು ಯಾವ ರೀತಿ ರಕ್ಷಣೆ ಕೊಡುತ್ತೇವೆನ್ನುವುದನ್ನು ನಾವೆಲ್ಲರು ಆಲೋಚನೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ಉತ್ತಮವಾದ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಒಂದು ಉತ್ತಮವಾದ ಕಾನೂನನ್ನು ತಾವೆಲ್ಲರೂ ರಚಿಸಬೇಕೆಂದು ಕಳಕಳಿಯಿಂದ ಕೇಳೀಕೊಂಡು ದಕ್ಷಿಣ ಕನ್ನಡ ಜಿಲ್ಲೆಗೆ police

commission ಕಛೇರಿಯನ್ನು ತಕ್ಷಣದಲ್ಲಿಯೇ ಅಲ್ಲಿ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಆರ್. ಧ್ರುವನಾರಾಯಣ್(ಸಂತೆಮರಳ್ಳಿ): ಮಾನ್ಯ ಅಧ್ಯಕ್ಷರೆ, ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನೂತನ ಸರ್ಕಾರ ಅಧಿಕಾರಕ್ಕೆ ಬಂದು 9 ತಿಂಗಳು ಕಳೆಯುತ್ತಿದೆ. ಇವತ್ತು ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಹಲವಾರು ಪ್ರಕರಣಗಳನ್ನು ನಾವು ನೋಡಿದಾಗ ನಿಜವಾಗಿಯೂ ಕೂಡ ನಮ್ಮ ರಾಜ್ಯದಲ್ಲಿ ನೂತನವಾಗಿ ಬಂದಿರತಕ್ಕಂಥ ಬಿಜೆಪಿ ಸರ್ಕಾರ ಉತ್ತಮ ಆಡಳಿತವನ್ನು ಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ, ಅದರಲ್ಲಿಯೂ ವಿಶೇಷವಾಗಿ ಕಾನೂನು ಮತ್ತು ಸುವ್ಯವಸ್ಥೆ ಬಹಳಷ್ಟು ಹದಗೆಟ್ಟಿದೆ ಎನ್ನುವಂಥ ಮಾತನ್ನು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ನಾವು ನಡೆದಿರುವ ಪ್ರಕರಣಗಳನ್ನು ತೆಗೆದುಕೊಂಡಾಗ ಅದರಲ್ಲಿಯೂ ಕೂಡ ನಮ್ಮ ರಾಜಧಾನಿಯಾಗಿರುವ ಬೆಂಗಳೂರಿನಲ್ಲಿ ಜನವರಿ ತಿಂಗಳೊಂದರಲ್ಲಿಯೇ ಸುಮಾರು 28 ಕೊಲೆ ಪ್ರಕರಣಗಳಾಗಿವೆ. ಇವತ್ತು ಫೆಬ್ರವರಿ 24ನೇ ತಾರೀಕು, ಈ ತಿಂಗಳಲ್ಲಿ 16 ಪ್ರಕರಣಗಳು ನಡೆದಿವೆ. ಅಂದರೆ, ದಿನಕ್ಕೆ ಸರಾಸರಿ ಒಂದು ಕೊಲೆ ಪ್ರಕರಣ ನಮ್ಮ ಬೆಂಗಳೂರಿನಲ್ಲಿ ನಡೆಯುತ್ತಿದೆ. ಅಂದರೆ, ಇಂಥ ಒಂದು ಒಳ್ಳೆಯ ರಾಜಧಾನಿಯಲ್ಲಿ ಇವರು ಅಧಿಕಾರಕ್ಕೆ ಬಂದ ಮೇಲೆ ಸರಾಸರಿ ಇಷ್ಟೊಂದು ಕೊಲೆ ಪ್ರಕರಣಗಳು ನಡೆಯುತ್ತಿವೆ ಎಂದರೆ ನಿಜಕ್ಕೂ ಕೂಡ ಇನ್ನೂ ಸಹ ಆಡಳಿತ ವ್ಯವಸ್ಥೆ ಹೇಗಿದೆ? ಗೃಹ ಮಂತ್ರಿಗಳಾಗಿ ಸರಿಯಾದ ರೀತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲಿಕ್ಕೆ ಆಗುತ್ತಿದೆಯೇ? ಎನ್ನುವಂಥ ಆತ ವಿಮರ್ಶೆ ಮಾಡಿಕೊಳ್ಳತಕ್ಕಂಥ ಸಮಯ ಇದಾಗಿದೆ. ಈ ಸದನ ನಡೆಯುತ್ತಿರುವ ಸಂದರ್ಭದಲ್ಲಿ ತಾವು ಯೋಚನೆ ಮಾಡಬೇಕು. ಕಳೆದ ಎರಡು ತಿಂಗಳಲ್ಲಿ ಸರಾಸರಿ ದಿನಕ್ಕೊಂದು ಕೊಲೆ ನಡೆಯುತ್ತಿದೆ. ನಿನ್ನೆ ಕೂಡ ಬಳ್ಳಾರಿಯಲ್ಲಿ 2 ಕೊಲೆ ನಡೆದಿದೆ. ಅಂದರೆ, ಕರ್ನಾಟಕ ರಾಜ್ಯದಲ್ಲಿ ದಿನನಿತ್ಯ ಈ ಕೊಲೆಗಳು ನಡೆಯುತ್ತಿರುವುದನ್ನು ನೋಡಿದರೆ ನಿಜವಾಗಿಯೂ ಕೂಡ ಕಾನೂನನ್ನು ಕೈಗೆ ಯಾರು ಎತ್ತಿಕೊಂಡಿದ್ದಾರೆ ಎನ್ನುವುದನ್ನು ನಾವು ಯೋಚನೆ ಮಾಡುವ ಪರಿಸ್ಥಿತಿ ಬಂದಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಗೃಹ ಮಂತ್ರಿಗಳು ಒಂದು Anti Terrorist Cell ಅನ್ನು ತೆರೆಯುತ್ತೇವೆಂದು ಹೇಳಿದ್ದರು. ಆದರೆ, ಅವರು ಇದುವರೆಗೂ Anti Terrorist Cell ಅನ್ನು ತೆರೆದಿಲ್ಲ ಮತ್ತು ಯಾವುದೇ ರೀತಿಯ ಫಂಡ್ ಅನ್ನು allocate ಕೂಡ ಮಾಡಿಲ್ಲ. ದಯಮಾಡಿ, ಉತ್ತಮ ಅಧಿಕಾರಿಗಳು ಇರತಕ್ಕಂಥ ಒಂದು Anti Terrorist Cell ಅನ್ನು ತಕ್ಷಣ

ತಾವು ತೆರೆಯಬೇಕೆನ್ನುವ ಒತ್ತಾಯವನ್ನು ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಈ ಚರ್ಚ್‌ಗಳ ಮೇಲೆ ದಾಳಿ ನಡೆದಿರುವ ಕುರಿತು ನಮ್ಮ ದಿನೇಶ್ ಗುಂಡೂರಾವ್‌ರವರು, ಶಿವಲಿಂಗೇಗೌಡರು ಹೀಗೆ ಬಹಳಷ್ಟು ಜನರು ಮಾಡನಾಡಿದ್ದಾರೆ. ಇದುವರೆಗೆ ಸುಮಾರು 33 ಚರ್ಚ್‌ಗಳ ಮೇಲೆ ದಾಳಿಯಾಗಿ ಸುಮಾರು 50 ರಿಂದ 1 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಆದರೆ, ಸರ್ಕಾರ ಆ ಹಾನಿ ಭರಿಸತಕ್ಕಂಥ ಕೆಲಸವನ್ನು ಕೂಡ ಮಾಡಲಿಲ್ಲ. ಆ ಚರ್ಚ್‌ಗಳ ಪುನರ್ ಅಭಿವೃದ್ಧಿಗೆ ಯಾವುದೇ ರೀತಿಯ ಅನುದಾನವನ್ನೂ ಇದುವರೆಗೂ ಕೂಡ ಬಿಡುಗಡೆ ಮಾಡಿಲ್ಲ. ಜೊತೆಗೆ, ಯಾರು ಆ ಚರ್ಚ್‌ಗಳ ಮೇಲೆ ದಾಳಿ ಮಾಡಿದರೋ ಅವರ ಮೇಲೆ ಮೊಕದ್ದಮೆಯಾಗಲಿ, ಕ್ರಮಗಳನ್ನೂ ಕೂಡ ಇದುವರೆಗೆ ತೆಗೆದುಕೊಂಡಿಲ್ಲವೆಂದರೆ ತಾವು ಯೋಚನೆ ಮಾಡಬೇಕು, ಅದೇನೆಂದರೆ ಅಲ್ಪಸಂಖ್ಯಾತರ ಹಿತವನ್ನು ಕಾಪಾಡಲು ಯಾವ ರೀತಿ ಸರ್ಕಾರ ರಕ್ಷಣೆ ಕೊಡುತ್ತಿದೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಅದೇ ರೀತಿ ಸರ್ಕಾರ ಹೊಸದರಲ್ಲಿ ಬಂದ ತಕ್ಷಣವೇ ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡ ಸರ್ಕಾರ ಆ ನೇಗಿಲ ಯೋಗಿಯ ಮೇಲೆ ಗುಂಡು ಹೊಡೆದಂಥದ್ದೂ ಸೇರಿದಂತೆ ಹಲವಾರು ಪ್ರಕರಣಗಳು ನಡೆಯುತ್ತಾ ಬಂದಿದೆ. ಪದ್ಮಪ್ರಿಯರವರ ಸಾವಿನ ಪ್ರಕರಣದಲ್ಲಿಯೂ ಕೂಡ ಗೃಹಮಂತ್ರಿಗಳ ಹೇಳಿಕೆ ಎಷ್ಟು ವಿವಾದಾತ್ಮಕವಾಗಿತ್ತು ಎಂದರೆ ಪದಪ್ರಿಯರವರು safe ಆಗಿದ್ದಾರೆ, ಕೋಲಾರದಲ್ಲಿದ್ದಾರೆ, ಅವರು ಮರಳಿ ಮನೆಗೆ ಬರುತ್ತಿದ್ದಾರೆಂದು ಹೇಳಿದರು. ಅವರು ಹೇಳಿದ ಮಾರನೆ ದಿವಸವೇ ಅವರ ಸಾವಾಯಿತು. ನಿಜವಾಗಿ ಬಹಳ ಗೊಂದಲಮಯವಾದ ಹೇಳಿಕೆ, ಬೇಜವಾಬ್ದಾರಿಯುತವಾದ ಹೇಳಿಕೆಯನ್ನು ಮಾನ್ಯ ಗೃಹಮಂತ್ರಿಗಳು ಕೊಟ್ಟಿದ್ದಾರೆ. ಇವತ್ತು ಭಯೋತ್ಪಾದನೆ ವಿಚಾರವಾಗಿ ಬಹಳಷ್ಟು ಜನ ಬೆಳಕು ಚೆಲ್ಲಿದ್ದಾರೆ. ನಾನು ಈ ಭಯೋತ್ಪಾದನೆ ರ್‍ಯಾಲಿಯಲ್ಲಿ ಚಾಮರಾಜನಗರದಲ್ಲಿ ಭಾಗವಹಿಸಿದ್ದೆ. ನಾನು ಭಾಗವಹಿಸಿದ್ದ ಸಂದರ್ಭದಲ್ಲಿ ಮುಖ್ಯ ಭಾಷಣಕಾರರನ್ನಾಗಿ ಭಯೋತ್ಪಾದನೆ ರ್‍ಯಾಲಿ ಸಂದರ್ಭದಲ್ಲಿ ಮುಗ್ಧ ವಿದ್ಯಾರ್ಥಿಗಳನ್ನು ಕರೆಯುತ್ತಾರೆ. ಅವರು ಯಾವುದೇ ರಾಜಕೀಯದಲ್ಲಿ, ಅಥವಾ ಬೇರೆ ಯಾವುದರಲ್ಲಾದರೂ ಭಾಗವಹಿಸುತ್ತಿಲ್ಲ. ವಿದ್ಯಾರ್ಥಿಗಳು ಬಹಳ ಮುಗ್ಧತೆಯಿಂದ ಅವರ ವಿದ್ಯಾಭ್ಯಾಸಕ್ಕಷ್ಟೇ ಸೀಮಿತವಾಗಿರುವುದನ್ನು ನಾವು ನೋಡುತ್ತಿದ್ದೇವೆ ಇಂಥ ಪರಿಸ್ಥಿತಿಯಲ್ಲಿ ಮುಖ್ಯ ಭಾಷಣಕಾರರನ್ನಾಗಿ ಸಾಹಿತಿಗಳನ್ನೂ ಕೂಡ ಕರೆಯುತ್ತಾರೆ ಮತ್ತೆ ಅವರದೇ ಪಕ್ಷದ MLC ಗಳನ್ನು, ರಾಜಕೀಯ ಮುಖಂಡರನ್ನು ಮುಖ್ಯ ಭಾಷಣಕಾರರಾಗಿ ಕರೆದಿದ್ದಾರೆ. ನಾನು ಭಾಗವಹಿಸಿದ ಸಭೆಯಲ್ಲಿ ಒಬ್ಬ ಸಾಹಿತಿ ಭಾಷಣಕಾರರಾಗಿದ್ದರು.

ಅವರು ಚಾಮರಾಜನಗರ ಜಿಲ್ಲಾ ಮಟ್ಟದ ಭಯೋತ್ಪಾದನಾ ರ್‍ಯಾಲಿ ಸಭೆಯಲ್ಲಿ ಸಾಹಿತಿಗಳು ಮಾಡಿದ ಭಾಷಣವನ್ನು ನಾನು ವೇದಿಕೆಯ ಮೇಲೆಯೇ ಖಂಡಿಸಿದೆ. ಅವರು ಮಾತನಾಡುವ ಸಂದರ್ಭದಲ್ಲಿ ಭಯೋತ್ಪಾದನೆ ವಿಚಾರವಾಗಿ ಮಾತನಾಡದೆ ನೇರವಾಗಿ ರಾಜಕೀಯವಾಗಿ ಕಾಂಗ್ರಸ್ ಮತ್ತು ಜಾತ್ಯತೀತ ಜನತಾದಳದವರು, ಜನರಿಗೆ ಸರಿಯಾದ ರೀತಿಯಲ್ಲಿ ಆಡಳಿತ ಕೊಡುವುದರಲ್ಲಿ ವಿಫಲರಾದರು, ಭಾರತೀಯ ಜನತಾ ಪಕ್ಷ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಈ ಬಗ್ಗೆಯೇ ಸಾಹಿತಿಗಳಾಂಥವರು ರಾಜಕೀಯ ಭಾಷಣ ಮಾಡಿದ್ದನ್ನು ನಾನು ಅಲ್ಲಿ ವೇದಿಕೆಯ ಮೇಲೆಯೇ ಖಂಡಿಸಿದಾಗ ಮತ್ತೆ ಎಲ್ಲರೂ ಕೂಡ ನೀವು ಭಯೋತ್ಪಾದನೆ ವಿಚಾರವಾಗಿ ವಿದ್ಯಾರ್ಥಿಗಳಿಗೆ ಬೆಳಕು ಚೆಲ್ಲಿ ಎಂದು ತಿಳಿಸಿದ ಮೇಲೆ ಅವರು ಭಯೋತ್ಪಾದನೆ ವಿಚಾರವಾಗಿ ಮಾತನಾಡಲು ಪ್ರಾರಂಭ ಮಾಡಿದರು. ಆದ್ದರಿಂದ, ಮುಗ್ಧರಾದ ವಿದ್ಯಾರ್ಥಿ ಸಮುದಾಯದಲ್ಲಿ, ಅವರ ಮನಸ್ಸಿನ ಮೇಲೆ ಬೇರೆ ರೀತಿಯ ಪರಿಣಾಮ ಬೀರುವುದು ಆಗಬಾರದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ, ನಮ್ಮ ಮಂಗಳೂರಿನ ಶಾಸಕರು ತಿಳಿಸಿದ್ದಾರೆ. ಆದರೂ ಸಹ ಮಂಗಳೂರು ಪಬ್ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ದಿನಾಂಕ:11.2.2009ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ, ಕರಾವಳಿ ಅದರಲ್ಲೂ ಮಂಗಳೂರಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅಪಾಯದಲ್ಲಿದೆ, ಒಂದು ರೀತಿಯ ಪರ್ಯಾಯ ಸರ್ಕಾರದಲ್ಲಿ, ಆಡಳಿತ ರಹಿತವಾದ ಅರಾಜಕತೆ ಸ್ಥಿತಿ ಇದೆ ಎನ್ನುವ ಮಾತನ್ನು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಮತ್ತು ನ್ಯಾಯಮೂರ್ತಿಗಳಾದ ಎಸ್.ಆರ್. ನಾಯಕ್‌ವರು ಹೇಳುವ ಸಂದರ್ಭ ಬಂದಿದೆ. ಮಂಗಳೂರಿನಲ್ಲಿ ನಡೆದ ಘಟನೆಗಳೇನಿವೆ, ಭಯಭೀತರಾದ ಅಲ್ಪಸಂಖ್ಯಾತರೇನಿದ್ದಾರೆ, ಅವರಲ್ಲಿ ಆ ರೀತಿಯ ಭಾವನೆಯನ್ನು ಹೋಗಲಾಡಿಸುವ ಕೆಲಸವನ್ನು ಸರ್ಕಾರ ತಕ್ಷಣ ಮಾಡಬೇಕಾಗಿದೆ. ನಾವೆಲ್ಲರೂ ಕೂಡ ಒಂದೇ ನಾವ್ಯಾರೂ ಬೇರೆಯವರಲ್ಲ. ಹಿಂದೂ, ಅಲ್ಪಸಂಖ್ಯಾತರು ನಾವೆಲ್ಲ ಒಂದೇ ಎನ್ನುವ ಭಾವನೆ ಮೂಡುವುದಾಗಬೇಕು. ಆ ನಿಟ್ಟಿನಲ್ಲಿ ಹಲವಾರು ಈ ರೀತಿಯ ಪ್ರಕರಣಗಳು ಕಳೆದ 9 ತಿಂಗಳ ಆಡಳಿತಾವಧಿಯಲ್ಲಿ ನಡೆದಿದೆ. ಆದ್ದರಿಂದ, ಮುಂದೆಯಾದರೂ ಕೂಡ ತಮ್ಮ ಅವಧಿಯಲ್ಲಿ ಯಾವುದೇ ರೀತಿಯಾದಂಥ ಕಾನೂನಿಗೆ ಚ್ಯುತಿ ಬರದ ಹಾಗೆ ಕಾನೂನು ವ್ಯವಸ್ಥೆ ಕಾಪಾಡುವ ಕೆಲಸವನ್ನು ಮಾಡಬೇಕು. ವಿಶೇಷವಾಗಿ, ಗೃಹ ಮಂತ್ರಿಗಳು ಕಳೆದ 2 ತಿಂಗಳಿನಿಂದ ಬೆಂಗಳೂರು ನಗರದಲ್ಲಿ ಪ್ರತಿ ನಿತ್ಯ ಸರಾಸರಿ ಒಂದು ಕೊಲೆ ನಡೆಯುತ್ತಿದೆ. ಅದನ್ನು ತಪ್ಪಿಸಿ ಉತ್ತಮವಾದ ಆಡಳಿತ ಕೊಡಬೇಕು, ಅದನ್ನು ಕೊಡುವುದರಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎನ್ನುವುದನ್ನ

ಈ ಸಂದರ್ಭದಲ್ಲಿ ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ಇವತ್ತು ಸದನದಲ್ಲಿ ಬಹಳ ಗಂಭೀರವಾದ ವಿಚಾರಗಳು ಚರ್ಚೆಯಾಗುವಾಗ ಮೊದಲು ಬಾರಿಗೆ ಸದನಕ್ಕೆ ಬಂದಿರುವಂಥ ನನ್ನಂಥವರು ಯಾವ ವಿಚಾರದ ಮೇಲೆ ಗಂಭೀರ ಚರ್ಚೆಗಳಾಗಬೇಕು, ಅರ್ಥಪೂರ್ಣ ಚರ್ಚೆಗಳಾಗಬೇಕು ಅಂಥ ವಿಚಾರಗಳನ್ನು ಬಹಳ ಹಗುರವಾಗಿ, ಲಘುವಾಗಿ ತೆಗೆದುಕೊಂಡು ಮಾತನಾಡುತ್ತಿರುವುದನ್ನು ಗಮನಿಸುತ್ತಿದ್ದೇವೆ. ಇವತ್ತು ಚರ್ಚ್‌ಗಳ ಮೇಲೆ ಮತ್ತು ಪಬ್‌ಗಳ ಮೇಲೆ ದಾಳಿ, ರೈತರ ಮೇಲೆ ಹಲ್ಲೆಗಳು, ಶಾಸಕರ ಕುಟುಂಬಗಳಿಗೆ ರಕ್ಷಣೆ ಇಲ್ಲ, ದಿನನಿತ್ಯ ಕೊಲೆ ಸುಲಿಗೆಗಳು ಹೆಚ್ಚಾಗುತ್ತಿವೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲುವಾಗ ಆ ಕಡೆಯ ಸದಸ್ಯರು ಇವರ ಮೇಲೆ ' ನೀವು ಇದ್ದಾಗ ಅಷ್ಟು ಕೊಂದಿದ್ದೀರಿ ಎಂದು. ಇವರು ಇದ್ದಾಗ ಇಷ್ಟು ಕೊಂದಿದ್ದೀರಿ' ಎಂದು ಅಪಾದನೆಗಳನ್ನು ಮಾಡುವುದು ಎಷ್ಟು ಸಮಂಜಸ ಎನ್ನುವುದನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಅವರಿದ್ದಾಗ ಜಾಸ್ತಿಯಾಗಿರುವುದಕ್ಕೆ ಇಲ್ಲಿ ಬಂದು ಕುಳಿತಿದ್ದಾರೆ. ಅವರಿಗಿಂತ ಜಾಸ್ತಿ ಮಾಡಬೇಕೆನ್ನುವ ಭಾವನೆ ಏನಾದರೂ ಇದೆಯೇ ಎನ್ನುವುದು ನಮ್ಮಂಥವರಿಗೆ ಅನಿಸುತ್ತದೆ. ಹಾಗಾಗಿ ಯಾವ ವಿಷಯಗಳ ಮೇಲೆ ಹೆಚ್ಚು ಒತ್ತು ಕೊಟ್ಟು ಮಾತನಾಡುತ್ತಿದ್ದೇವೆ. ವಿಧಾನ ಸಭೆಯೊಳಗೆ ಚರ್ಚೆಯಾಗುವುದು, ನಾವಿಲ್ಲಿ ಎರಡು ದಿವಸ ಚರ್ಚೆ ಮಾಡಿ ರಾಜೀನಾಮೆ ಕೊಡಿ ಎಂದು ಎಲ್ಲಿ ಒತ್ತಾಯ ಮಾಡಿದರೂ ಯಾರೂ ರಾಜೀನಾಮೆ ಕೊಡುವುದಲ್ಲ ಆದರೆ, ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಉದ್ದೇಶಪೂರ್ವಕವಾಗಿ ಇಂಥ ಸಂದರ್ಭಗಳು ನಡೆಯುವುದಿಲ್ಲ. ಈ ಸಂದರ್ಭಗಳು ನಡೆದಾಗ ಇವುಗಳನ್ನು ನಾವು ಹೇಗೆ ಕಡಿಮೆ ಮಾಡಬೇಕು, ಇವುಗಳನ್ನು ನಿಲ್ಲಿಸುವುದಕ್ಕೆ ಏನು ಪ್ರಯತ್ನಗಳು ಆಗಬೇಕೆನ್ನುವ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲುವುದರ ಮೂಲಕ ಚರ್ಚೆಗಳಾಗಬೇಕಾಗುತ್ತದೆ. ಆದರೆ, ಅವುಗಳಿಗೆ ಬೆಳಕನ್ನು ಚೆಲ್ಲದೆ ನಾವು ಚರ್ಚೆ ಮಾಡುತ್ತೇವೆ. ಭಯೋತ್ಪಾದನೆ ಬಗ್ಗೆ ಮಾತನಾಡುವುದು ಬಹಳ ಗಂಭೀರವಾದ ವಿಷಯ. ಭಯೋತ್ಪಾದನೆಗೆ ಕಡಿವಾಣ ಹಾಕುವುದಕ್ಕೆ ಇವತ್ತು ಎಲ್ಲಾ ಶಾಲಾಕಾಲೇಜಿನ ಮಕ್ಕಳನ್ನು ಸೇರಿಸುವುದರ ಮೂಲಕ ಅಲ್ಲಿ ಭಾಷಣ ಮಾಡುವುದರಿಂದ ಏನಾದರೂ ಭಯೋತ್ಪಾದನೆ ಕಡಿಮೆಯಾಗುತ್ತದನ್ನುವ ಭಾವನೆ ಸರ್ಕಾರಕ್ಕಿದ್ದರೆ ಅದು ಎಷ್ಟು ಸಮಂಜಸ ಎನ್ನುವುದನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಭಯೋತ್ಪಾದನೆಗೆ ಮೂಲ ಕಾರಣಗಳೇನು ಎನ್ನುವುದರ ಬಗ್ಗೆ ನಾವು ಒತ್ತು ಕೊಡದೆ ಈ ತರಹದ

ಭಾಷಣಗಳನ್ನು ಮಾಡುವುದರಿಂದ ನಾವು ಭಯೋತ್ಪಾದನೆಗೆ ಕಡಿವಾಣ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ದುಡಿಯುವ ಕೈಗಳಿಗೆ ಎಲ್ಲಿಯವರೆಗೆ ಕೆಲಸ ಕೊಡುವ ಯೋಜನೆಗಳನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಭಯೋತ್ಪಾದನೆ ಅಥವಾ ಕ್ರೈಮ್‌ಗಳನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಯುವಶಕ್ತಿ ಜನ ಇದಕ್ಕೆ ಏಕೆ ಮರುಳಾಗುತ್ತಿದ್ದಾರೆ? ಇದಕ್ಕೆ ಏನು ಕಾರಣ? ಅದರ ಬುಡಕ್ಕೆ ನಾವು ಯೋಚನೆ ಮಾಡಿ ಅ ಒಂದು ಸಮಸ್ಯೆಗಳಿಗೆ ಪರಿಹಾರವನ್ನು ಕಲ್ಪಿಸಿದಾಗ ಮಾತ ಭಯೋತ್ಪದನೆ ತಡೆಯುವುದಕ್ಕೆ ಸಾಧ್ಯತೆಗಳು ಆಗುತ್ತವೆ. ಅದನ್ನು ಚಿಂತನೆ ಮಾಡದೆ ಯಾವುದೋ ಕಾರಣಕ್ಕೆ ವಿದ್ಯಾರ್ಥಿ ಸಮೂಹಗಳನ್ನು ಸೇರಿಸುವ ಮೂಲಕ ಭಾಷಣ ಮಾಡುವುದರಿಂದ ಭಯೋತ್ಪಾದನೆ ಕಡಿಮೆಯಾಗುತ್ತದೆ. ಭಯೋತ್ಪಾದನೆ ನಿಂತುಹೋಗುತ್ತದೆ ಎನ್ನುವ ಭಾವನೆ ಏನಾದರೂ ಸರ್ಕಾರಕ್ಕೆ ಇದ್ದರೆ ಅದು ತಪ್ಪು ಎನ್ನತಕ್ಕಂಥ ಮಾತನ್ನು ಒತ್ತಿ ಹೇಳುವುದಕ್ಕೆ ಬಯುಸುತ್ತೇನೆ. ಎಲ್ಲಿಯವರೆಗೆ ನಾವು ಕೆಲಸ ಮಾಡುವ ಕೈಗಳಿಗೆ ಕೆಲಸ ಕೊಡುವ ಯೋಜನೆಗಳನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಭಯೋತ್ಪಾದನೆ ಕಡೆಗೆ, ಕ್ರೈಮ್ ಕಡೆಗೆ ಬಡತನ ರೇಖೆಗಿಂತ ಕೆಳಗಿರುವವರು ತಿನ್ನಲು ಅನ್ನವಿಲ್ಲದಿದ್ದಾಗ ಏನಾದರೊಂದು ಕೆಲಸವನ್ನು ಮಾಡಬೇಕಾಗುತ್ತದೆ. ಅಂಥ ಕೆಲಸಕ್ಕೆ ಕೈಹಾಕಿ ಇವತ್ತು ಕ್ರಿಮಿನಲ್‌ಗಳಾಗಿದ್ದಾರೆ, ಭಯೋತ್ಪಾದನೆಗೆ ಒಳಗಾಗಿದ್ದಾರೆ. ಅದಕ್ಕೆ ನಾವು ಚಿಂತನೆ ಮಾಡಬೇಕಾಗಿದೆ. ಕೆಲಸ ಕೊಡಬೇಕು. ದುಡಿಯುವ ಕೈಗಳಿಗೆ ಕೆಲಸವಿಲ್ಲದಿದ್ದಾಗ ಜನ ಈ ಕಡೆ ಒಲಿಯುತ್ತಿದ್ದಾರೆ ಎನ್ನುವ ಬಗ್ಗೆ ಹೆಚ್ಚು ಒತ್ತು ಕೊಟ್ಟು ಚಿಂತನೆ ಮಾಡಿ ಆ ಯೋಜನೆಗಳನ್ನು ರೂಪಿಸಿದಾಗ ಮಾತ್ರ ಭಯೋತ್ಪಾದನೆ ಮತ್ತು ಕ್ರೈಮ್ ಅನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಚಿಂತನೆಗಳಾಗಬೇಕು. ಈ ಸದನದಲ್ಲಿ ನನಗಿಂತ ಬಹಳಷ್ಟು ಅನುಭವಿಗಳು, ಹಿರಿಯರು ತಾವಿದ್ದೀರಿ. ಇಲ್ಲಿ ಅದರ ಬಗ್ಗೆ ಚಿಂತನೆಗಳನ್ನು ಮಾಡಿ. ಅದು ಬಿಟ್ಟು ಅವರು ಅಷ್ಟು ಕೊಂದಿದ್ದಾರೆ, ಇವರು ಇಷ್ಟು ಕೊಂದಿದ್ದಾರೆ, ನಿಮ್ಮ ಕಾಲದಲ್ಲಿ ಅದಾಯಿತು, ಇವರ ಕಾಲದಲ್ಲಿ ಇದಾಯಿತು ಎನ್ನುವ ಬಗ್ಗೆ ಯಾರೂ ಕೂಡ ವಾದ ವಿವಾದಕ್ಕೆ ಹೋಗುವುದು ಅರ್ಥಹೀನ. ಆದರೆ, ಆಗಿವೆ. ಆಗಲೂ ಆಗಿವೆ, ಈಗಲೂ ಆಗುತ್ತವೆ, ಮುಂದೆಯೂ ಆಗುತ್ತದೆ. ಇವುಗಳನ್ನು ನಾವು ಹೇಗೆ ನಿಯಂತ್ರಣದಲ್ಲಿಡಬೇಕು, ಹೇಗೆ ಇವುಗಳಿಗೆ ಕಡಿವಾನ ಹಾಕಬೇಕು? ಯಾರು ಇದನ್ನು ಮಾಡುತ್ತಿದ್ದಾರೆ? ಅವುಗಳನ್ನು ನಿಲ್ಲಿಸುವುದಕ್ಕೆ ಏನು ಪ್ರಯತ್ನಗಳು ಆಗಬೇಕು ಎನ್ನುವ ಬಗ್ಗೆ ಹೆಚ್ಚು ಒತ್ತು ಕೊಟ್ಟರೆ ಉಪಯೋಗವಾಗುತ್ತದೆ ಎನ್ನುವ ಮಾತನ್ನು ಸರ್ಕಾರಕ್ಕೆ ಹೇಳಿ ಇದರ ಬಗ್ಗೆ ಯಾವುದೇ ಭಯೋತ್ಪಾದನೆ ಇರಲಿ, ಕ್ರೈಮ್ ಇರಲಿ ಅದು ಯಾವ

ಸರ್ಕಾರದಲ್ಲಾದರೂ ಕೂಡ ಅದು ಚಿಂತನೆಗೊಳಗಾಗಬೇಕು. ಅದರ ಬಗ್ಗೆ ಚಿಂತನೆ ಮಾಡಬೇಕಾದ ಅಗತ್ಯವಿದೆ. ಯಾರೇ ಇವತ್ತು ಸರ್ಕಾರ ನಡೆಸಿದರೂ ಕೂಡ ಇದು ನಿಂತುಹೋಗುತ್ತದೆ, ಅವರು ಬಂದರೆ ಆಗುವುದಿಲ್ಲ, ಇವರು ಬಂದರೆ ಆಗುತ್ತದೆ ಎನ್ನುವುದು ಪ್ರಶ್ನೆಯಲ್ಲ. ಸದಾ ಆಗಿವೆ. ಇವುಗಳಿಗೆ ಕಡಿವಾಣ ಹಾಕುವ ಬಗ್ಗೆ ಯೋಜನೆಗಳನ್ನು ರೂಪಿಸಬೇಕೆನ್ನುವ ವಿನಂತಿಯನ್ನು ಸರ್ಕಾರಕ್ಕೆ ಮಾಡಿ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಈಗ ತಾನೆ ನಮ್ಮ ಬಹಳಷ್ಟು ನಾಯಕರು ಈ ವಿಷಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಈ ವಿಷಯದ ಮೇಲೆ ನಾನು ಜಾಸ್ತಿ ಪ್ರಸ್ತಾಪ ಮಾಡುವುದಿಲ್ಲ ಆದರೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರುವುದರಿಂದ ನಾನು ಖಂಡಿತವಾಗಿಯೂ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ಕೇವಲ ವಿರೋಧ ಪಕ್ಷಗಳು ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿಲ್ಲವೆಂದು ಗೂಬೆ ಕೂರಿಸಲು ಪ್ರಯತ್ನ ಮಾಡುತ್ತಿವೆ ಎಂದು, ಇವತ್ತು ರಾಜಕೀಯವಾಗಿ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ದಿನನಿತ್ಯದ ಪೇಪರ್‌ಗಳನ್ನು ತೆಗೆದು ನೋಡಿದರೆ ಎಲ್ಲಾ ಕಡೆ ಕೊಲೆ, ಸುಲಿಗೆ, ದರೋಡೆ ಕಾನೂನಿನ ಹೆದರಿಕೆ ಯಾವ ಜನರಿಗೂ ಇಲ್ಲ ಎನ್ನುವ ವಾತಾವರಣ ಸೃಷ್ಟಿಯಾಗಿದೆ ಎನ್ನುವುದು ಕಂಡುಬರುತ್ತದೆ. ನಾವು ಬೇರೆ ರಾಜ್ಯಗಳಿಗೆ ಹೋದಾಗ, ದೆಹಲಿಗೆ ಹೋದಾಗ ಅಲ್ಲಿ ಕೇಳುವುದೇನೆಂದರೆ, ಕರ್ನಾಟಕದಲ್ಲಿ ಏನಾಗುತ್ತಿದೆ? ಅಲ್ಲಿ moral policing ಎನ್ನುವುದು ಇಲ್ಲವೇ? ಸಾಮಾನ್ಯ ಜನರ ಮೇಲೆ ತಮ್ಮ ವಿಚಾರ ಧಾರೆಯನ್ನು ಹೇರುವ ಪ್ರಯತ್ನ ಮಾಡುತ್ತಿದ್ದಾರೆ, ಇದಕ್ಕೆ ನೀವು ಯಾವ ರೀತಿಯಾಗಿ ಕಡಿವಾಣ ಹಾಕುತ್ತೀರಿ? ವಿರೋಧ ಪಕ್ಷದವರಾದ ನೀವು ಯಾವ ರೀತಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದೀರಿ ಎಂದು ಕೇಳುತ್ತಾರೆ. ಯಾವ ರೀತಿಯಾಗಿ ಇದಕ್ಕೆ ನಿರ್ಬಂಧ ಹೇರುತ್ತಿದ್ದೀರಿ ಎನ್ನುವ ಪ್ರಶ್ನೆ ಇಡೀ ದೇಶದಲ್ಲಿ ಈ ಒಂದು ವಿಷಯ ಪ್ರಸ್ತಾಪವಾಗುತ್ತಿದೆ. ಕರ್ನಾಟಕ ರಾಜ್ಯದ ಮೇಲೆ ಇದು ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನುವುದನ್ನು ನಾವು ಯೋಚಿಸಬೇಕಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಚಂದ್ರಕಾಂತ ಬೆಲ್ಲದ್‌ರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಕರ್ನಾಟಕ ರಾಜ್ಯ ಯಾವಾಗಲೂ ಪ್ರಗತೀ ಪರವಾಗಿರುವ ರಾಜ್ಯ. ಮತ್ತೊಂದು financial capital ಆಗಿ ಹೊರಹೊಮ್ಮತಕ್ಕಂಥ ರಾಜ್ಯ. ವಿಶೇಷವಾಗಿ

ಬೆಂಗಳೂರು ಬೆಳೆದಿರತಕ್ಕಂಥ ದಾಟಿ, ರೀತಿ, ಇವೆಲ್ಲವನ್ನು ಇವತ್ತು ಉಳಿಸಿಕೊಂಡು ಹೋಗುವುದು ಬಹಳ ಅವಶ್ಯಕವಿದೆ. ಬೆಂಗಳೂರು ನಗರಕ್ಕೆ ಇವತ್ತು ಇಷ್ಟೊಂದು ಪ್ರಾಮುಖ್ಯತೆ ಬಂದಿರುವ ಹಿನ್ನೆಲೆ ಏನು ಇದೆ ಎಂದರೆ, ಬೇರೆ ಬೇರೆ ರಾಜ್ಯದ ರಾಜಧಾನಿಗಳಲ್ಲಿ ಮತ್ತು ಆ ರಾಜ್ಯಗಳಲ್ಲಿ ಇಷ್ಟೊಂದು ಶಾಂತಿ ಇಲ್ಲ ಎನ್ನುವ ಒಂದೇ ಒಂದು ಕಾರಣಕ್ಕಾಗಿ. Southern States ನಲ್ಲಿ ಬೆಂಗಳೂರು ಶಾಂತಿವಾಗಿರತಕ್ಕಂಥ ರಾಜ್ಯದ ರಾಜಧಾನಿಯಾಗಿರುವ ನಗರವಾಗಿದ್ದು ಇಲ್ಲಿ ಶಾಂತಿ ಪ್ರಿಯ ಜನರು ಇರುತ್ತಾರೆ ಎನ್ನುವ ಹಿನ್ನಲೆಯಲ್ಲಿ ನಮ್ಮ ರಾಜ್ಯದ ಬೆಳವಣಿಗೆಯಾಗಲಿಕ್ಕೆ ಸಾಧ್ಯವಾಗಿದೆ. ನಾವು ಇದನ್ನು ಬಲಿ ಕೊಟ್ಟು ಕೇವಲ ರಾಜಕೀಯ ಹಿತಾಸಕ್ತಿಯಿಂದ ಮತ್ತು ನಿಮ್ಮ ಭಾರತೀಯ ಜನತಾ ಪಕ್ಷದ ಅಂಗ ಪಕ್ಷಗಳಾದ ಭಜರಂಗದಳವಾಗಿರಬಹುದು, ಶ್ರೀರಾಮಸೇನೆಯಾಗಿರಬಹುದು, ವಿಶ್ವ ಹಿಂದು ಪರಿಷತ್ ಆಗಿರಬಹುದು, ಆರ್.ಎಸ್.ಎಸ್.ಯಾಗಿರಬಹುದು, ಅದರ ಹಿಂದೆ ಇರುವ ಉದ್ದೇಶ ಏನು ಇದೆ ಎಂಬುದು ನಮಗೆ ಗೊತ್ತಿಲ್ಲ. ಆದರೆ, ಅವರು ಮಾಡತಕ್ಕಂಥ ಕಾರ್ಯದಿಂದ ನಮ್ಮ ರಾಜ್ಯಕ್ಕೆ ಕೆಟ್ಟ ಹೆಸರು ಬರುವ ಕೆಲಸ ಖಂಡಿತವಾಗಿ ಆಗುತ್ತಿದೆ. ಸರ್ಕಾರದಲ್ಲಿ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಜನರು ಇದನ್ನು ನೋಡಬೇಕಾಗುತ್ತದೆ. ಇವತ್ತು ಈ ಸರ್ಕಾರಕ್ಕೆ ಏನು ಇಮೇಜ್ ಇದೆ, ಪಬ್ ಮೇಲೆ ನಡೆದಿರುವ ದಾಳಿ, ಹೆಣ್ಣು ಮಕ್ಕಳ ಮೇಲೆ ಮಾಡಿರತಕ್ಕಂಥ ದೌರ್ಜನ್ಯ ಇದು ಯಾವುದೇ ಸಂಸ್ಕೃತಿಯಲ್ಲಿ ನಡೆದಿಲ್ಲ. ನಮ್ಮ ದೇಸದಲ್ಲಿ ಮಾದರಿಯಾಗಿರತಕ್ಕಂಥ ಕೆಲಸ ಅವರು ಮಾಡಿದ್ದಾರೆ. ಇದನ್ನು ಅವರು ಯಾವ ಲಾಭಕ್ಕಾಗಿ ಮಾಡಿದ್ದಾರೋ ದೇವರಿಗೆ ಗೊತ್ತು. ಆದರೆ, ಇದನ್ನು ಮಾಡಿದ್ದು ಬಹಳ ಖಂಡನೀಯ. ಇದಕ್ಕೆ ಭಾರತೀಯ ಜನತಾ ಪಾರ್ಟಿಯವರು ಕೂಡ proper ಆಗಿ ರಿಯಾಕ್ಟ್ ಮಾಡಬೇಕಾಗಿತ್ತು. ಮಾನ್ಯ ಯಡಿಯೂರಪ್ಪನವರ ಮೇಲೆ ಭಾರತೀಯ ಜನತಾ ಪಾರ್ಟಿಯ ಕೆಲವು ಮುಖಂಡರು ಪಿತೂರಿ ಮಾಡುತ್ತಿದ್ದಾರೆನ್ನುವ ಸಂಶಯ ನನಗೆ ಬರುತ್ತದೆ. ಏಕೆಂದರೆ. ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು, ಈ ಸರ್ಕಾರದಲ್ಲಿರುವರನ್ನು ಏರುಪೇರು ಮಾಡಬೇಕೆಂದು ಮಾಡುತ್ತದ್ದಾರೋಗೊತ್ತಿಲ್ಲ. ಆದರೆ ಖಂಡಿತವಾಗಿ ಈ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿಯನ್ನು ಗಮನಿಸಬೇಕಾಗುತ್ತದೆ. ಮತ್ತೊಂದು ಅಂಶ ಏನೆಂದರೆ, ಇವತ್ತು ಯಾವುದೇ ರಾಜ್ಯದ ಕಾನೂನು ಸುವ್ಯವಸ್ಥೆ ಸರಿಯಾಗಿ ನಡೆಯಬೇಕಾದರೆ ಪ್ರಥಮವಾಗಿ ಆಯಕಟ್ಟಿನ ಸ್ಥಳಗಳಲ್ಲಿ important administrative posts ನಲ್ಲಿ ಯಾವ ಜನ ಕುಳಿತುಕೊಳ್ಳುತ್ತಾರೆನ್ನುವುದು ಬಹಳ ಮುಖ್ಯ. ವಿಶೇಷವಾಗಿ ಪೋಲಿಸ್ ಇಲಾಖೆಯಲ್ಲಿ important posts ನಲ್ಲಿ ಭ್ರಷ್ಟ ಅಧಿಕಾರಿಗಳನ್ನು ಹಾಕಿದರೆ ಖಂಡಿತವಾಗಿ ಕಾನೂನು ಸುವ್ಯವಸ್ಥೆ ಸರಿಯಾಗಿ

ನಡೆಸಲು ಸಾಧ್ಯವಿಲ್ಲ. ಮಾನ್ಯ ಛೇರ್ಮನರವರೆ, ತಾವು ಒಂದೊಂದು ಪೋಲೀಸ್ ಠಾಣೆಯಲ್ಲಿ ಏನೇನು ಆಗಿದೆ ಎಂಬುದನ್ನು ತಾವು ನೋಡಬೇಕು. ಯಾವ ರೀತಿಯಾಗಿ ಕೊಲೆ, ಸುಲಿಗೆ ಮತ್ತು extortion ಮಾಡುತ್ತಿದ್ದಾರೆ. Police Department ನಿಂದ extortion ಆಗುತ್ತಿದೆ. ಬಹಳ ನೋವಿನಿಂದ ನಾನು ಇದನ್ನು ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಪೋಲೀಸ್ ಇಲಾಖೆಯಿಂದಲೇ ಲಾರಿ Owners ಕಡೆಯಿಂದಲೇ ಹಣ ವಸೂಲಿ ಮಾಡುತ್ತಾರೆ. ಇವತ್ತು ಲಾರಿ Owners ರವರು ಓಪನ್ ಆಗಿ ಎಸ್.ಪಿ.ಆಫೀಸ್‌ನಲ್ಲಿ ಹಫ್ತಾ ಕೇಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅಂದರೆ, ಪೋಲಿಸ್ ಇಲಾಖೆಯವರು ಕಾನೂನು ಸುವ್ಯವಸ್ಥೆ ನೋಡುವುದನ್ನು ಬಿಟ್ಟು ಹಾದಿಯಲ್ಲಿ ಹೋಗುವ ವಾಹನಗಳನ್ನು ನಿಲ್ಲಿಸಿ ದುಡ್ಡು ವಸೂಲಿ ಮಾಡುವುದಕ್ಕೆ ನಿಂತರೆ ಯಾವ ರೀತಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ನೋಡುವುದಕ್ಕೆ ಸಾಧ್ಯವಿದೆ? ಕ್ರಿಮಿನಲ್ಸ್ ಜೊತೆಗೆ ಹೊಂದಾಣಿಕೆ ಇದೆ. ಪೋಲಿಸ್ ಸ್ಟೇಷನ್ ಇನ್‌ಚಾರ್ಜ್ ಆಗಿರತಕ್ಕಂಥವರು ಕುಡಿದು ಪೋಲಿಸ್ ಠಾಣೆಗೆ ಬರುತ್ತಾರೆ. ಬೆಳಿಗ್ಗೆಯಿಂದ ಸಂಜೆಯವರೆವಿಗೂ ಅವರು ನಶೆಯಲ್ಲಿರುತ್ತಾರೆ. ಅಂಥವರಿಗೆ ಸರಹದ್ದಿನಲ್ಲಿರುವ ಪೋಲಿಸ್ ಸ್ಟೇಷನ್‌ಗಳನ್ನು ಕೊಟ್ಟರೆ ಯಾವ ರೀತಿಯಾಗಿ ಕಾನೂನು ಸುವ್ಯವಸ್ಥೆ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಿದೆ? ಮಾನ್ಯ ಮುಖ್ಯಮಂತ್ರಿಗಳಿಗೆ ನಾನೊಂದು ಸಲಹೆ ಕೊಡುತ್ತೇನೆ. ನಿಮ್ಮ ನಿಮ್ಮ ಪೋಲಿಸ್ ಸ್ಟೇಷನ್‌ಗೆ evaluation ಮಾಡಿ. ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡಿರುವ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ, ನೀವು ಪೋಲಿಸ್ ಸ್ಟೇಷನ್ ಇನ್‌ಚಾರ್ಜ್ ಮಾಡತಕ್ಕಂಥವರಿಗೆ ಒಳ್ಳೆಯ ಅಧಿಕಾರಿಗಳನ್ನು, ಪ್ರಾಮಾಣಿಕ ಅಧಿಕಾರಿಗಳನ್ನು ಅಲ್ಲಿಗೆ ಹಾಕುವುದಕ್ಕೆ ಪ್ರಯತ್ನ ಮಾಡಿ. ಎಲ್ಲಾ ಕಡೆ ಪ್ರಾಮಾಣಿಕ ಅಧಿಕಾರಿಗಳು ಸಿಗುವುದಿಲ್ಲ. ಆದರೆ, important position ನಲ್ಲಿಯಾದರೂ ಖಂಡಿತವಾಗಿ, ಯಾರು ಭ್ರಷ್ಟರು ಇದ್ದಾರೆ, ಯಾರ ಹಿಂದಿನ ನಡವಳಿಕೆ ಸರಿಯಿಲ್ಲ, ಏಕೆಂದರೆ ಅವರ ನಡವಳಿಕೆ ಸರಿಯಿಲ್ಲವೆಂದು ಹಿಂದಿನ ಸರ್ಕಾರಗಳು ಅಯಕಟ್ಟಿನ ಪ್ರದೇಶಗಳನ್ನು ಯಾರಿಗೆ ಬೇಕೆಂದು ಕೊಟ್ಟಿಲ್ಲವೋ ಅಂಥ ಅಧಿಕಾರಿಗಳಿಗೆ ನೀವು ದಯವಿಟ್ಟು ಅಯಕಟ್ಟಿನ ಸ್ಥಳಕ್ಕೆ ಪೋಸ್ಟಿಂಗ್ ಕೊಡಬೇಡಿ. ವಿಶೇಷವಾಗಿ ಪೋಲಿಸ್ ಠಾಣೆಗಳಿಗೆ ಇನ್‌ಸ್ಪೆಕ್ಟರ್‌ಗಳನ್ನು ಪೋಸ್ಟಿಂಗ್ ಮಾಡುವಾಗ, ಅವರ ವರ್ತನೆ ಯಾವ ರೀತಿ ಇದೆ, ಅವರ ದೌರ್ಜನ್ಯ ಯಾವ ರೀತಿ ಇದೆ, ನೀವು evaluation ಮಾಡಬೇಕು ತಾನೆ? ಯಾರು ಮಾಡುತ್ತಿದ್ದಾರೆ? Home Minister ಒಳ್ಳೆಯವರು ಇರಬಹುದು. ಆದರೆ, ಅವರ ಆಡಳಿತದಲ್ಲಿ ಏನು ನಡೆಯುತ್ತಿವೆ, ಅವೆಕ್ಕಲ್ಲಾ ಅವರೇ ಹೊಣೆಗಾರರಾಗುತ್ತಾರೆ. ನಿಮ್ಮ ಪೋಲಿಸ್ ಇಲಾಖೆ ನಿಮ್ಮ

ಹಿಡಿತದಲ್ಲಿ ಇಲ್ಲ. ನಿಮ್ಮ ಇನ್‌ಸ್ಪೆಕ್ಟರ್‌ಗಳು, ನಿಮ್ಮ ಡಿಎಸ್‌ಪಿಗಳು, ನಿಮ್ಮ ಎಸ್‌ಪಿ ಗಳು ಮಾಡುವ ವರ್ತನೆ ಕಂಡು ನಮಗೆ ನಾಚಿಕೆ ಬರುತ್ತದೆ. ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಕಡೆಗೆ ಗಮನಹರಿಸಬೇಕು. ಯಾವ್ಯಾವ ಜಿಲ್ಲೆಯಲ್ಲಿ ಕ್ರೈಮ್ ರೇಟ್ ಏನು ಇದೆ? ಕನ್‌ವಿಕ್ಷನ್ ರೇಟ್ ಏನು ಇದೆ? ನೀವು ಏನು ಸುಧಾರಣೆ ಮಾಡುತ್ತೀರಿ? ಭಯೋತ್ಪಾದನೆಯನ್ನು ನಿಗ್ರಹಿಸಬೇಕಾದರೆ ನಿರ್ದಿಷ್ಟವಾದ ಕೆಲವು ಸ್ಟೆಪ್ಸ್‌ನ್ನು ತೆಗೆದುಕೊಳ್ಳಬೇಕು. ಪೋಲಿಸ್ ಇಲಾಖೆಗೆ ಆಧುನೀಕರಣ ಮಾಡುವುದಾಗಲಿ, ಒಳ್ಳೆಯ ವೆಪನ್ಸ್ ಕೊಡುವುದಾಗಲಿ ಅಥವಾ ಅಲ್ಲಿರುವ ನ್ಯೂನತೆಗಳನ್ನು ತೆಗೆಯುವುದಾಗಲಿ ಅಥವಾ ನಿರ್ದಿಷ್ಟವಾಗಿರುವ ಸೆಲ್ ಅನ್ನು ಮಾಡಬೇಕಾಗುತ್ತದೆ. ಈಗ ಏನಾಗಿದೆ, ಕಾನೂನು ಸುವ್ಯವಸ್ಥೆ ನೋಡುವವರು ಅವರೇ, ಅಲ್ಲಿ ಇನ್‌ವೆಸ್ಟಿಗೇಷನ್ ಮಾಡುವವರು ಅವರೇ, ರಾಜಕೀಯ ಆಶ್ರಯ ಇಲ್ಲದವರಿಗೆ ನೀವು ಸಿಒಡಿಗೆ, ಇಂಟ್‌ಲಿಜೆನ್ಸ್‌ಗೆ ಪೋಸ್ಟಿಂಗ್ ಮಾಡುತ್ತೀರಿ. ಇಂಟ್‌ಲಿಜೆನ್ಸ್‌ಗೆ ಪೋಸ್ಟಿಂಗ್ ಮಾಡುವುದೆಂದರೆ ಪನಿಷಮೆಂಟ್ ಎಂದು ನಮ್ಮ ರಾಜ್ಯದಲ್ಲಿ ತಿಳಿದುಕೊಳ್ಳುತ್ತಾರೆ. ಈಗ ಸಿಒಡಿ ಗೆ ಹಾಕಿದ್ದಾರೆಂದರೆ ಅವರಿಗೆ ರಾಜಕೀಯ ಬೆಂಬಲ ಇಲ್ಲವೆಂದು ಅರ್ಥ. ನೀವು Law and order maintenance and investigation ಅನ್ನು separate ಮಾಡಬೇಕು. Law and order maintenance ಗೆ ನೀವು ಪ್ರತ್ಯೇಕವಾದ recruitment ಮಾಡಿ. ಇವತ್ತು ಕ್ರೈಮ್ ರೇಟ್ ಜಾಸ್ತಿಯಾಗುವುದಕ್ಕೆ ಏನು ಕಾರಣ? ನಿಮ್ಮ ಕನ್‌ವಿಕ್ಷನ್ ರೇಟ್ ಬಹಳ ಬಹಳ ಕಡಿಮೆ ಇದೆ. ತಮಗೆ ಬಹಳ ಸರ್‌ಪ್ರೈಜ್ ಆಗಬಹುದು. ನಮ್ಮ ರಾಜ್ಯದಲ್ಲಿ ಕನ್‌ವಿಕ್ಷನ್ ರೇಟ್ ಎಷ್ಟು ಲೋ ಇದೆ ಎಂದರೆ, ಕೊಲೆ ಮಾಡುವಂಥವನಿಗೆ, ದರೋಡೆ ಮಾಡುವಂಥವರಿಗೆ ನಮಗೆ ಕನ್‌ವಿಕ್ಷನ್ ಆಗುವುದಿಲ್ಲವೆಂದು ಗೊತ್ತಿದೆ. ಏಕೆ ಆಗುವುದಿಲ್ಲ? ಅದಕ್ಕೆ ಪೋಲಿಸ್ ಸ್ಟೇಷನ್ ಇನ್‌ಚಾರ್ಜ್ ಆಗಿರುತ್ತಾರೆ ಅವರು ಸರಿಯಾಗಿ ಚಾರ್ಜ್‌ಸೀಟ್ ಹಾಕುವುದಿಲ್ಲ. ಒಂದು ಪಕ್ಷ ಚಾರ್ಜ್‌ಸೀಟ್ ಹಾಕಿದರೆ ಅದಕ್ಕೆ ಪ್ರಾಪರ್ ಆಗಿ ಎವಿಡೆನ್ಸ್ ಕೊಡುವುದಿಲ್ಲ. ನೀವು ಈ ಮಾಡಿದರೆ ನಿಮ್ಮ ಕನ್‌ವಿಕ್ಷನ್ ರೇಟ್ ಬಿಲೋ 3–4% ಇದ್ದರೆ ನಿಮಗೆ ಯಾರು ಹೆದರುತ್ತಾರೆ ಹೇಳಿ. ಇವತ್ತು ಪೋಲಿಸ್ ಸ್ಟೇಷನ್‌ಗಳು ಕೇವಲ ಜನರನ್ನು ಹೆದರಿಸಿ ರೊಕ್ಕ ವಸೂಲಿ ಮಾಡುವ ಕೇಂದ್ರ ಮಾಡಬೇಕೆಂದರೆ ಆ ವ್ಯವಸ್ಥೆ ಸರಿಯಾಗಿದೆ. ಆದರೆ, ಈ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ, ಮೆಂಟೇನ್ ಮಾಡಬೇಕಾದರೆ, ಈ ರಾಜ್ಯದಲ್ಲಿ ಸಾಮಾನ್ಯ ಜನರಿಗೆ ಪೋಲಿಸ್ ಸ್ಟೇಷನ್‌ಗೆ ಹೋಗಿ ಎಂದು ಹೇಳಿ ನೋಡೋಣ. ಅವನು ಧೈರ್ಯದಿಂದ ಹೋಗುತ್ತಾನೆಯೇ ನೋಡೋಣ. ಅವನು ಎಷ್ಟೇ ಶ್ರೀಮಂತರಾಗಿದ್ದರೂ ಪೋಲಿಸ್ ಸ್ಟೇಷನ್‌ಗೆ

ಹೋಗಲಿಕ್ಕೆ ಹೆದರುತ್ತಾರೆ. ಏಕೆಂದರೆ, ಅಲ್ಲಿರುವ ಜನರ ದುರ್ವರ್ತನೆ. ಯಾರು ಕಾನೂನು ರಕ್ಷಣೆ ಮಾಡಬೇಕಾಗಿದೆ, ಅವರೇ ಕಾನೂನಿನ ಸರಹದ್ದನ್ನು ಮೀರಿ ವರ್ತಿಸುತ್ತಾರೆ. ಅವರು ಕಾನೂನನ್ನು ಗಾಳಿಗೆ ತೂರಿ ಯಾವುದೇ ಕಾನೂನಿಗೆ ಮರ್ಯಾದೆ ಕೊಡುವುದಿಲ್ಲ. ಕೆಲವೊಂದು ಪೋಲಿಸ್ ಸ್ಟೇಷನ್‌ಗೆ ಹೋದರೆ ಕುಳಿತುಕೊಳ್ಳುವುದಕ್ಕೆ ಕುರ್ಚಿ ಕೂಡ ಹಾಕುವುದಿಲ್ಲ. ಇಷ್ಟೊಂದು ದುರ್ವರ್ತನೆ ನಡೆದಾಗ ಹೇಗೆ ಕಾನೂನು ಸುವ್ಯವಸ್ಥೆ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಿದೆ? ಎಲ್ಲಿ ದೌರ್ಜನ್ಯಗಳು ಹೆಚ್ಚಾಗುತ್ತವೆ, ಅಲ್ಲಿ ಸಾಮಾನ್ಯ ಜನರಿಗೆ ಈ ವ್ಯವಸ್ಥೆಯ ಮೇಲೆ ವಿಶ್ವಾಸವಿರುವುದಿಲ್ಲ. ಖಂಡಿತವಾಗಿ ಆ ಜನರು ತಿರುಗಿ ಬೀಳುತ್ತಾರೆ. ಹೀಗಾಗಿ ಅದೇ ಇವತ್ತು ಭಯೋತ್ಪಾದನೆ, ನಕ್ಸಲಿಸಂಗೆ ಕಾರಣವಾಗುತ್ತದೆ. ಇದು ನಮ್ಮ ರಾಜ್ಯದಲ್ಲಿ ನಡೆಯಬಾರದು ಅದಕ್ಕಾಗಿ ಇರುವ ವ್ಯವಸ್ಥೆಯನ್ನು ಸುಧಾರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ನಡೆಯುತ್ತಿರುವುದನ್ನು ನಾವು ಅವರ ಗಮನಕ್ಕೆ ತಂದಿದ್ದೇವೆ. As an opposition party we are doing our job. ಈಗ ಅದನ್ನು ಸರಿಪಡಿಸಬೇಕು. ಅಥವಾ ಅದನ್ನು ಹೀಗೆ ಮುಂದುವರಿಸಿಕೊಂಡು ಹೋಗಬೇಕು ಎನ್ನುವುದಾದರೆ ಅವರಿಗೆ ಬಿಟ್ಟಿದ್ದು. ಸಮಯ ಬಂದಾಗ ಜನ ಅವರಿಗೆ ಪಾಠ ಕಲಿಸುತ್ತಾರೆ ಎನ್ನುವುದು ನನ್ನ ಅಭಿಪ್ರಾಯ. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ತನ್ವೀರ್ ಸೇಠ್ ರವರು ಇಲ್ಲವೆ? ಕುಮಾರ್ ಸ್ವಾಮಿಯವರು ನೀವು ಮಾತನಾಡಿ.

ಶ್ರೀ ಹೆಚ್.ಕೆ.ಕುಮಾರ್ ಸ್ವಾಮಿ: ಮಾನ್ಯ ಛೇರ್ಮನ್‌ರವರೆ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವಿಫಲಗೊಂಡಂಥ ಹಿನ್ನೆಲೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಸೇರಿದಂತೆ ಅನೇಕ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಯಾವುದೇ ರಾಜ್ಯದ ಒಂದು ಸರ್ವತೋಮುಖ ಪ್ರಗತಿಗೆ ಆ ರಾಜ್ಯದಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಬಹಳ ಮುಖ್ಯವಾಗುತ್ತದೆ. ಹೊರಗಡೆಯಿಂದ ಪ್ರವಾಸೋದ್ಯಮಕ್ಕೆ ಬರುತ್ತಿರತಕ್ಕಂಥವರು ಇರಬಹುದು, ಪ್ರವಾಸಿಗರು ಮತ್ತು ಕೈಗಾರಿಕೋಧ್ಯಮಿಗಳು, ತಮ್ಮ ತಮ್ಮ ಉದ್ದಿಮೆಗಳನ್ನು ಕೈಗೊಳ್ಳಲಿಕ್ಕೆ ಬರತಕ್ಕಂಥವರು ಆ ರಾಜ್ಯದಲ್ಲಿ ಯಾವ ರೀತಿ ಕಾನೂನುಸುವ್ಯವಸ್ಥೆ ಇದೆ, ನಾವು ಎಷ್ಟರ ಮಟ್ಟಿಗೆ ಅಲ್ಲಿ ರಕ್ಷಣೆ ಪಡೆದು ನಮ್ಮ ಉದ್ದಿಮೆಯನ್ನು ಮಾಡಬಹುದು ಎನ್ನುವ ಅಲೋಚನೆ ಮಾಡಿಕೊಂಡು ಬರುತ್ತಾರೆ. ಆದರೆ, ರಾಜ್ಯದಲ್ಲಿ ಈ ಒಂದು ಸುವ್ಯವಸ್ಥೆ ಇಲ್ಲದಿದ್ದಾಗ ಸಹಜವಾಗಿ ರಾಜ್ಯಕ್ಕೆ

ಬರತಕ್ಕಂಥದದ್ದು ಮತ್ತು ಬಂಡವಾಳ ಹೂಡತಕ್ಕಂಥದ್ದಕ್ಕೆ ಹಿಂದೇಟು ಹಾಕುತ್ತಾರೆ ಆದುದರಿಂದ, ರಾಜ್ಯ ಸರ್ಕಾರ ರಾಜ್ಯದಲ್ಲಿ ಆರ್ಥಿಕ ಶಕ್ತಿ ಕೊಡುವುದಕ್ಕೆ ಮತ್ತು ಉದ್ದಿಮೆಯನ್ನು ಕೈಗೊಳ್ಳುವುದಕ್ಕೆ ಮುಂದೆ ಬರತಕ್ಕಂಥವರಿಗೆ ಒಂದು ರೀತಿಯ ತಡೆಯನ್ನು ಉಂಟು ಮಾಡಿದೆ ಎಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಆಗುತ್ತಿರುವ ಘಟನೆಗಳ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಹಿರಿಯ ನಾಗರೀಕರ ಸರಣಿ ಕೊಲೆಗಳು ನಡೆಯುತ್ತಿವೆ. ಪೊಲೀಸ್‌ನವರು ಸದಾ ಅವರನ್ನು ಕಾಯುವುದಕ್ಕೆ ಆಗುತ್ತದೆಯೇ ಅಥವಾ ಪ್ರತಿ ಕುಟುಂಬಕ್ಕೆ ರಕ್ಷಣೆ ಕೊಡುವುದಕ್ಕೆ ಆಗುತ್ತದೆಯೇ ಎಂಬ ವಾದವನ್ನು ಅವರು ಇಡಬಹುದು. ಆದರೆ, ಯಾವುದೇ ಒಂದು ಅಪರಾಧವಾಗುವುದಕ್ಕಿಂತ ಮುಂಚೆ ಅದನ್ನು ತಡೆಯತಕ್ಕಂಥ ಕಾನೂನು ಕ್ರಮಗಳನ್ನು ಮುನ್ನೆಚ್ಚರಿಕೆಯಾಗಿ ಕೈಗೊಂಡು ಕನಿಷ್ಠ ಅಪರಾಧಿಗಳಿಗೆ ಭಯದ ವಾತಾವರಣವನ್ನು ಉಂಟು ಮಾಡಿದಾಗು ಅಪರಾಧಗಳು ಕಡಿಮೆಯಾಗುತ್ತದೆಂದು ನಾವು ಅರಿತುಕೊಳ್ಳಬೇಕು. ಹಿರಿಯ ನಾಗರೀಕರ ಕೊಲೆಗಳು ಆಗುತ್ತಿರುವ ಸಂದರ್ಭದಲ್ಲಿ ಪೊಲೀಸ್‌ನವರು ಅವುಗಳನ್ನು ಸರಿಯಾದ ರೀತಿಯಲ್ಲಿ ಪರಿಗಣಿಸಿಲ್ಲ. ಅಂದರೆ, ಅದನ್ನು ಪತ್ತೆ ಹಚ್ಚುವುದರಲ್ಲಿ ಅಥವಾ ಅವರಿಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಸರ್ಕಾರ ವಿಫಲವಾಗಿದೆ. ಮತ್ತೆ ಮಹಿಳೆಯರಿಗೆ ರಕ್ಷಣೆ ಕೊಡತಕ್ಕಂಥದ್ದರಲ್ಲಿಯೂ ಕೂಡ ಸರ್ಕಾರ ವಿಫಲವಾಗಿದೆ. ಮತ್ತೆ ಮಂಗಳೂರು ಮತ್ತು ಬೆಂಗಳೂರು ಹಾಗೂ ಇತರ ಕಡೆ ಚರ್ಚ್ ಮೇಲೆ ದಾಳಿಯಾಗಿದೆ. ಮತ್ತೆ ಮಂಗಳೂರಿನಲ್ಲಿ ಬಿಜೆಪಿ ಅಂಗಪಕ್ಷವಾದ ರಾಮಸೇನೆ ಕಾರ್ಯಕರ್ತರಿಂದ ಪಬ್ ಮೇಲೆ ದಾಳಿಯಾಗಿದೆ. ಬಹುಶಃ ಅವರಿಗೆ ಯಾರ ಭಯವೂ ಇಲ್ಲದೆ ಇರುವುದರಿಮದ ಅಲ್ಲಿ ಅ ರೀತಿಯಾಗಿ ದಾಳಿ ಮಾಡುವುದಕ್ಕೆ ಸಾಧ್ಯವಾಯಿತು. ರಾಮಸೇನೆ ಸಂಘಟನೆ ಕಾನೂನನ್ನು ಕೈಗೆ ತೆಗೆದುಕೊಂಡು ಅಲ್ಲಿನ ಪಬ್ ಮೇಲೆ ದಾಳಿ ಮಾಡಿದ ರೀತಿಯನ್ನು ನೋಡಿದರೆ ಬಹುಶಃ ಇಲ್ಲಿ ಸರ್ಕಾರ ಇದೆಯೇ ಅಥವಾ ಇಲ್ಲವೇ ಎಂಬ ಅನುಮಾನ ಸಹಜವಾಗಿ ಹುಟ್ಟಿಕೊಳ್ಳುತ್ತದೆ. ಅಲ್ಲಿ ಕಾನೂನು ಬಾಹಿರವಾಗಿ ಮತ್ತು ಅಕ್ರಮವಾಗಿ ಬೇರೆ ಬೇರೆ ರೂಪದಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ದೂರು ಕೊಟ್ಟು ಕಾನೂನನ್ನು ಎತ್ತಿ ಹಿಡಿಯತಕ್ಕಂಥ ಕೆಲಸ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಒಂದು ಸಂಘಟನೆ ನೇರವಾಗಿ ಸರ್ಕಾರದ ವಿರುದ್ಧ ಈ ರೀತಿಯಾಗಿ ಮಾಡಿದಾಗ ಸರ್ಕಾರದ ಬೆಂಬಲ ಪರೋಕ್ಷವಾಗಿದೆ ಎಂಬ ಭಾವನೆ ಸಾರ್ವಜನಿಕರಲ್ಲಿ ಬರುವುದಕ್ಕೆ ಪ್ರಾರಂಭವಾಗಿದೆ. ಮೊನ್ನೆದಿವಸ ನಾಯಕ ಸಮಾಜದವರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಮೈಸೂರಿನಲ್ಲಿನ

ಕಛೇರಿಗಳ ಮುಂದೆ ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದಾಗ ಪೊಲೀಸ್‌ನವರು ಯಾವುದೇ ರೀತಿಯ ಮುನ್ನೆಚ್ಚರಿಕೆ ಇಲ್ಲದೆ ಅಲ್ಲಿದ್ದಂತ ಗುಂಪಿನ ಮೇಲೆ ಮಾಡಿದಂಥ ಹಲ್ಲೆ ಬಹುಶಃ ಸರ್ಕಾರ ರೈತರ ಮೇಲೆ ಮಾಡಿದಂಥ ಅಮಾನುಷ ರೀತಿಯ ದೌರ್ಜನ್ಯ ಈ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರತಕ್ಕಂಥದ್ದವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಅಲ್ಲಿನ ನಗರಪಾಲಿಕೆಯ ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲಿಯೂ ಕೂಡ ಅಹಿತಕರ ಘಟನೆ ನಡೆಯಿತು. ಅಲ್ಲಿ ಜನತಾದಳ ಅಥವಾ ಕಾಂಗ್ರೆಸ್ ಅಥವಾ ಆಡಳಿತರೂಡ ಬಿಜೆಪಿ ಪಕ್ಷದ ಸದಸ್ಯರು ಇರಬಹುದು. ಆದರೆ, ಅವರುಗಳು ಅಲ್ಲಿ ನಡೆದುಕೊಂಡಂಥ ರೀತಿ ನೋಡಿದಾಗಿ ಬಹುಶಃ ಪ್ರಜಾಪ್ರಭುತ್ವಕ್ಕೆ ಒಂದು ರೀತಿಯಲ್ಲಿ ಮಾರಕವಾದಂಥ ಘಟನೆಗಳು ನಡೆಯುತ್ತಿವೆ. ಇಂಥ ಘಟನೆಗಳನ್ನು ಮುನ್ನೆಚ್ಚರಿಕೆಯಾಗಿ ತಡೆಯುವುದರಲ್ಲಿ ಪೊಲೀಸ್‌ನವರು ಕೂಡ ವಿಫಲರಾಗಿದ್ದಾರೆಂಬುದು ಅಲ್ಲಿನ ಸಂಗತಿಯಿಂದ ಅರ್ಥವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ಬಳ್ಳಾರಿ ಮತ್ತು ಧಾರವಾಡದಲ್ಲಿ ಆದಂಥ ಘಟನೆಗಳು ಸಹ ಇರಬಹುದು. ಇವತ್ತಿನದಿವಸ ಸರ್ಕಾರ ವಿದ್ಯಾರ್ಥಿಗಳನ್ನು ಬಳಸಿಕೊಂಡು ಭಯೋತ್ಪದನಾ ವಿರೋಧಿ ಆಂದೋಲನವನ್ನು ಮಾಡುತ್ತಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಎಲ್ಲಾ ವರ್ಗದ ಜನರಲ್ಲಿಯೂ ಕೂಡ ಈ ಜಾಗೃತಿ ಮೂಡಬೇಕಾಗಿದೆ. ಭಯೋತ್ಪಾದನೆಯನ್ನು ಯಾವುದೇ ಪಕ್ಷದವರು ಕೂಡ ಬೆಂಬಲಿಸುತ್ತಿಲ್ಲ ನಾವೆಲ್ಲರೂ ಕೂಡ ರಾಷ್ಟ್ರ ಪ್ರೇಮಿಗಳೇ ಇದ್ದೇವೆ. ಈ ಉದ್ದೇಶ ಇಟ್ಟುಕೊಂಡು ನೀವು ಮ್ಮಾಡಿ. ಆದರೆ, ಯುವಕರಲ್ಲಿ ಅಂದರೆ, ಎಳೆ ಮನಸ್ಸಿನ ಹುಡುಗರಲ್ಲಿ ಏನೊಂದು ಹೇಳಿದರೂ ಕೂಡ ಅದು ಅವರ ತಲೆಗೆ ನೇರವಾಗಿ ಹೋಗದೆ ಬೇರೆ ಬೇರೆ ರೀತಿಯಲ್ಲಿ ಪ್ರಚೋದನೆಗೆ ಒಳಗಾಗುತ್ತಾರೆ. ಈ ವಯಸ್ಸಿನ ಮಕ್ಕಳಲ್ಲಿ ಈ ರೀತಿಯ ಭಾವನೆಯನ್ನು ತುಂಬತಕ್ಕಂಥ ಕೆಲಸವನ್ನು ಸರ್ಕಾರ ಏತಕ್ಕೆ ಮಾಡುತ್ತಿದೆ? ಯಾವ ಕಾರಣಕ್ಕಾಗಿ ಅಲ್ಲಿನ ಕಾಲೇಜು ಮತ್ತು ಪ್ರೌಢಶಾಲೆಯ ಮುಖ್ಯಸ್ಥರ ಮೇಲೆ ಒತ್ತಡ ತಂದು ಈ ಕೆಲಸವನ್ನು ಏತಕ್ಕೆ ಮಾಡಿದ್ದಾರೆ? ಸಕಲೇಶಪುರದಲ್ಲಿ ನನ್ನನ್ನು ಕೂಡ invite ಮಾಡಿದ್ದರು. ಈ ವಿಷಯವನ್ನು ಮಾನ್ಯ ಶಿವಲಿಂಗೇಗೌಡರು ಈಗಾಗಲೇ ಹೇಳಿದ್ದಾರೆ. ನಾನು ಕೂಡ ಆ ಸ್ಥಳದಲ್ಲಿದ್ದೆ, ಅಲ್ಲಿ ಏನು ನಡೆಯುತ್ತಿತ್ತೆಂದರೆ, ಅಂಗಪಕ್ಷಗಳಾದ ಆರ್‌ಎಸ್‌ಎಸ್ ಮತ್ತು ಭಜರಂಗದಳದವರು ಸೇರಿಕೊಂಡು ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಾವೇ ಆಡಳಿತ ಮಾಡುತ್ತಿದ್ದೇವೆ, ಇಲ್ಲಿ ಬೇರೆ ಯಾರು ಇಲ್ಲ ಎನ್ನುವ ರೀತಿಯಲ್ಲಿ

ಅಧಿಕಾರಿಗಳ ಮೇಲೆ ಒತ್ತಡ ತಂದು ಸಭೆಗಳು ಹೀಗೆ ಅಥವಾ ಹಾಗೆಯೇ ಇರಬೇಕೆಂಬ ನಿರ್ದೇಶನಗಳನ್ನು ಕೊಡತಕ್ಕಂಥದ್ದು ಮತ್ತು ಕಾಲೇಜುಗಳಲ್ಲಿ ಹಿನ್ನಲೆಯಾಗಿ ನಿಂತುಕೊಂಡು organization ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿಯಾಗಿ ಮಾಡುವುದಕ್ಕೆ ಅವರಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ? ಇದನ್ನು ಮಾಡುವುದಕ್ಕೆ ಕಾಲೇಜು ಪ್ರಿನ್ಸಿಪಾಲರುಗಳಿಗೆ ತಾವು ಹೇಳಿದ್ದೀರಿ. ಅವರುಗಳು ಇದನ್ನು ಮಾಡುವುದಕ್ಕೆ ನಾವೇನು ಅಡ್ಡಿಪಡಿಸುವುದಿಲ್ಲ. ಆದರೆ, ಈ ರೀತಿಯಾದ ಅಂಗಪಕ್ಷಗಳ ಮೂಲಕ ವಿದ್ಯಾರ್ಥಿಗಳನ್ನು ಮತ್ತು ಬೇರೆಯವರನ್ನು ಉಪಯೋಗಿಸಿಕೊಂಡು ಕೆಲಸ ಮಾಡತಕ್ಕಂಥದ್ದು ಸರಿಯಲ್ಲವೆಂದು ಹೇಳುತ್ತಾ ಈ ಮೂಲಕ ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಯಾವುದೇ ಅಪರಾಧ ನಡೆಯುವುದಕ್ಕಿಂತ ಮುಂಚಿತವಾಗಿ ಮುನ್ನೆಚ್ಚರಿಕೆಯಾಗಿ ಅದನ್ನು ತಡೆಯತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು. ಇಂಥ ಗಲಭೆಗಳು ನಡೆದಾಗ ಮಾನ್ಯ ಗೃಹ ಸಚಿವರು ಕೊಡುತ್ತಿರುವ ಹೇಳಿಕೆ ನಿಜಕ್ಕೂ ಕೂಡ ಮೆಚ್ಚತಕ್ಕಂಥದ್ದಲ್ಲ. ಒಂದು ದಕ್ಷ ಸರ್ಕಾರವಾಗಿ ಅವರನ್ನು ಸಮರ್ಥಿಸಿಕೊಳ್ಳದೆ ಅವರನ್ನು ತಡೆಯತಕ್ಕಂಥ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ ಈ ನಿಟ್ಟಿನಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಮತ್ತೆ ಕಾನೂನನ್ನು ರಕ್ಷಿಸುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್(ತೀರ್ಥಹಳ್ಳಿ):- ಮಾನ್ಯ ಛೇರ್ಮನ್‌ರವರೆ, ಕಾನೂನು ಸುವ್ಯವಸ್ಥೆ ಬಗ್ಗೆ ಈಗಾಗಲೇ ಚರ್ಚೆ ಪ್ರಾರಂಭವಾಗಿ ಅನೇಕ ನಾಯಕರು ಇದರ ಬಗ್ಗೆ ಮಾತನಾಡಿದ್ದಾರೆ. ಈ ಸಮಸ್ಯೆ ಬಗ್ಗೆ ಪ್ರಥಮವಾಗಿ ಶಿವಮೊಗ್ಗ ಜಿಲ್ಲೆಯಿಂದಲೇ ನಾನು ಪ್ರಾರಂಭ ಮಾಡುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದವಾರ ಭಯೋತ್ಪಾದನೆ ವಿರೋಧಿ ಬಗ್ಗೆ ಸಮಾರಂಭ ನಡೆಯಿತು. ಆ ಒಂದು ಸಮಾರಂಭಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮನ್ನು ಕರೆದಿರಲಿಲ್ಲವೆಂಬ ನೇರ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಆ ಸಮಾರಂಭದಲ್ಲಿ ಭಾಷಣ ಮಾಡಿದರು. ತೀರ್ಥಹಳ್ಳಿ ತಾಲ್ಲೂಕಿನಿಂದ ಸುಮಾರು 30 ರಿಂದ 40 ಬಸ್ ನಲ್ಲಿ ಜನರು ಆ ಸಮಾರಂಭಕ್ಕೆ ಹೋಗಿದ್ದರು. ಆ ಸಮಾರಂಭಕ್ಕೆ ಹೋಗಿದ್ದರು. ಆ ಸಮಾರಂಭಕ್ಕೆ ದೇವರದಯೆಯಿಂದ ನಮ್ಮನ್ನು ಆಹ್ವಾನ ಮಾಡಲಿಲ್ಲ. ಅದೇ ರೀತಿಯಲ್ಲಿ ತೀರ್ಥ ಹಳ್ಳಿಯಲ್ಲಿಯೂ ಕೂಡ ಭಯೋತ್ಪಾದನೆ ವಿರೋಧಿ ಕಾರ್ಯಕ್ರಮ ನಡೆಯಿತು. ಆ ದಿನ ನಾನು ಇರುವುದಿಲ್ಲವೆಂದು ಹೇಳಿದರು ಕೂಡ ಭಯೋತ್ಪಾದನೆ ವಿರೋಧಿ ಕಾರ್ಯಕ್ರಮ ನಡೆಯಿತು. ಆ ದಿನ ನಾನು ಇರುವುದಿಲ್ಲವೆಂದು ಹೇಳಿದ್ದರೂ ಕೂಡ ಅದೇ ದಿನ ಸಮಾರಂಭ ಮಾಡಿ ನನ್ನ

ವಿರುದ್ಧ ಧಿಕ್ಕಾರ ಹಾಕಿಸತಕ್ಕಂಥ ಪ್ರಯತ್ನ ಕೂಡ ನಡೆಯಿತು. ಇದು ಕಾನೂನು ಬಗ್ಗೆ ಇರತಕ್ಕಂಥ ಸಮಾರಂಭವಾಗಿದೆ. ಆದರೆ, ನನ್ನ ಅಭಿಪ್ರಾಯದ ಪ್ರಕಾರ ಹೇಳುವುದಾದರೆ, ಈ ದೇಶದ ಯಾವುದೇ ಮಕ್ಕಳಿಗೆ ಮತ್ತು ವಿದ್ಯಾರ್ಥಿಗಳಿಗೆ ಭಯೋತ್ಪಾದನೆ ವಿರುದ್ಧ ಸಂದೇಶ ಮಾಡತಕ್ಕಂಥ ಯಾವ ಅಗತ್ಯವೂ ಇಲ್ಲ. ನಮ್ಮ ಮಕ್ಕಳು ಮತ್ತು ವಿದ್ಯಾರ್ಥಿಗಳು ಖಂಡಿತಾ ಒಳ್ಳೆಯವರಿದ್ದು, ನಿಷ್ಕಳಂಕ ಮನಸ್ಸು ಮತ್ತು ಒಳ್ಳೆಯ ಹೃದಯ ಹೊಂದಿದ್ದಾರೆ. ಆದರೆ, ನಾವು ಅವರನ್ನು ಕರೆದು ಹಾಳು ಮಾಡುತ್ತಿದ್ದೇವೆಂಬುದು ನನ್ನ ವೇದನೆಯಾಗಿದೆ. ಇದು ನನ್ನ ಮನಸ್ಸಿಗೆ ನೋವಾಗುತ್ತಿದೆ. ಈಗ ಏನಾಗಿದೆ ಎಂದರೆ, ಯಾರ ಮನಸ್ಸು ಮತ್ತು ಹೃದಯ ಒಳ್ಳೆಯದಿದೆಯೋ ಅವರನ್ನು ಕರೆದು ಅವರಿಗೆ ನಾವು ಅನ್ಯಾಯವನ್ನು ಮಾಡುತ್ತಿದ್ದೇವೆ. ಸಂದೇಶ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ. ಈ ದೇಶದ ಎಲ್ಲಾ ಜಾತಿಯ ಮತ್ತು ಧರ್ಮದ ಜನರನ್ನು ಒಟ್ಟಾಗಿ ಕರೆದುಕೊಂಡು ಹೋಗಬೇಕೆಂಬ ಮನೋಭಾವನೆಯಲ್ಲಿ ಈ ಕಾರ್ಯಕ್ರಮವನ್ನು ರೂಪಿಸಿಲ್ಲ. ಆದ್ದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಜಾಗ್ರತೆಯನ್ನು ಮೂಡಿಸಬೇಕೆಂಬ ಇಚ್ಛಾಶಕ್ತಿ ಸರ್ಕಾರಕ್ಕೆ ಇದ್ದಿದ್ದರೆ, ಈ ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ವಿರೋದಪಕ್ಷದ ನಾಯಕರು, ಸಭಾಧ್ಯಕ್ಷರು ಸಭಾಪತಿಗಳು ಮತ್ತು ಇತರರೆಲ್ಲರೂ ಕೂಡಿ ಇದನ್ನು ಮಾಡಬೇಕು. ಇಲ್ಲಿ ಯಾರ ವಿರುದ್ಧ ಮಾಡುತ್ತಿಲ್ಲ ಮತ್ತೆ ಸಂಚಿನ ಪ್ರಶ್ನೆ ಇಲ್ಲಿ ಬರುವುದಿಲ್ಲ. ಆದ್ದರಿಂದ, ಎಲ್ಲಾ ಪಕ್ಷದವರು ಸೇರಿ ಪಕ್ಷತೀತಾವಾಗಿ ಈ ಭಯೋತ್ಪಾದನೆ ವಿರೋಧಿ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಆದರೆ, ಈಗಿನ ವಾಸ್ತವದಲ್ಲಿ ಹೇಳುವುದಾದರೆ, ಅಲ್ಲಿನ ಸಮಿತಿಯ ಸದಸ್ಯರನ್ನು ನೋಡಿದಾಗ ಇದು ನೂರಕ್ಕೆ ನೂರರಷ್ಟು ಒಂದು ರಾಜಕೀಯ ಪ್ರೇರಿತ ಎಂದು ಹೇಳಬಹುದಾಗಿದೆ. ಈಗಾಗಲೇ ಗೌರವಾನ್ವಿತ ಸದಸ್ಯರೊಬ್ಬರು ಹೇಳಿರುವ ಪ್ರಕಾರ ಈ ಭಯೋತ್ಪಾದನೆ ವಿರೋಧಿ ಕಾರ್ಯಕ್ರಮದ ಸಮಿತಿಯಲ್ಲಿ ಅಲ್ಪಸಂಖ್ಯಾತರನ್ನು ಸಂಪೂರ್ಣವಾಗಿ ಹೊರಗಿಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಸುಮಾರು 6 ಕೋಟಿ ಜನರಿದ್ದಾರೆ. ಈ 6 ಕೋಟಿ ಜನರಲ್ಲಿ 3 ಅಥವಾ 4ನೇ ಸ್ಥಾನದಲ್ಲಿ ಅಲ್ಪಸಂಖ್ಯಾತರು ಬರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

ಆದರೆ, ಅವರ ಯಾವ ಪ್ರತಿನಿಧಿಯನ್ನು ಆ ಸಮಾರಂಭಕ್ಕೆ ಆಹ್ವಾನ ಮಾಡಿರಲಿಲ್ಲ. ಮತ್ತೆ ಯಾವುದೇ ಸಮಿತಿಯಲ್ಲಿ ಅಲ್ಪಸಂಖ್ಯಾತರು ಇಲ್ಲ. ನಾವು ಮಕ್ಕಳನ್ನು ಕರೆದು ಈ ರೀತಿಯಾಗಿ ಮಾಡಿದರೆ ಏನು ಬರುತ್ತದೆ? ರಾಜ್ಯವನ್ನು ಆಳತಕ್ಕಂಥವರು ಅಲ್ಪಸಂಖ್ಯಾತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೀವು ಅವರ ವಿರುದ್ಧ ಕೆಟ್ಟ

ರೀತಿಯಲ್ಲಿ ನೋಡುತ್ತಿದ್ದೀರಿ. ಮತ್ತೆ ನನಗೆ ಬಹಳ ನೋವಾಗತಕ್ಕಂಥ ವಿಷಯ ಏನೆಂದರೆ, ನಮ್ಮ ತೀರ್ಥಹಳ್ಳಿಯಲ್ಲಿ ಮೊನ್ನೆದಿವಸ ನಕ್ಸಲರು ಡಕಾಯಿತಿ ಮಾಡಿದಂಥ ಘಟನೆ ನಡೆಯಿತು. ದೇವರ ದಯೆಯಿಂದ ಅದರ ಬಗ್ಗೆ ಇಲ್ಲಿಯವರೆಗೆ ತನಿಖೆ ಮಾಡುವುದಕ್ಕೆ ಆಗಿಲ್ಲ. ಆ ಘಟನೆ ನಡೆಯುವುದಕ್ಕಿಂಥ ಪೂರ್ವದಲ್ಲಿ ಸುಮಾರು 8 ದಿನಗಳ ಮುಂಚಿತವಾಗಿ ನಾನೂ ಕೂಡ ಅಲ್ಲಿನ ಒಂದು ಸಮಾರಂಭದಲ್ಲಿ ಭಾಗವಹಿಸಿದ್ದೆ. ಪೇಜಾವರ ಮಠದ ಸ್ವಾಮಿಗಳು ಕೂಡ ಬಂದಿದ್ದರು, ನಮ್ಮ Home Ministry ಏನಿದೆ, ಇವರು ಒಂದು ನಕ್ಸಲ್ ಪ್ಯಾಕೇಜನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಆಗುಂಬೆ ಸಂಪೂರ್ಣ ನಕ್ಸಲ್ ಪೀಡಿತ ಪ್ರದೇಶ ಎನ್ನುವುದು ಈ ನಾಡಿಗೆ ಗೋತ್ತಾಗಿದೆ. ಕಾರ್ಕಳ, ತೀರ್ಥಹಳ್ಳಿ ಈ ಭಾಗದ ಎಲ್ಲಾ ಸಮಸ್ಯೆಗಳು, ಆದರೆ ನಾನು ಇದರ ಬಗ್ಗೆ 100 ಲೆಟರ್‌ಗಳನ್ನು ಬರೆದಿರಬಹುದು. ಅವರಿಗೆ ಕರೆಂಟ್ ಕೊಡಿಸಿ ಎಂದು ಹೇಳಿದೆ, 10 ವರ್ಷದಿಂದ, ಅಲ್ಲಿ ನಕ್ಸಲ್ ಚಟುವಟಿಕ ಅಷ್ಟೊಂದು ನಡೆದರೂ ಕೂಡ 72 ಮನೆಗಳಲ್ಲಿ 42 ಮನೆಗದಳಿಗೆ ಕರೆಂಟ್ ಇರಲಿಲ್ಲ. ನಾನು ಮೊನ್ನೆ ಡಿ.ಸಿ.ಯವರಿಗೆ ಈ ವಿಚಾರವನ್ನು ಹೇಳಿದೆ. ಪೇಜಾವರ ಮಠದಸ್ವಾಮಿಗಳು ಆ ತೀರ್ಥಹಳ್ಳಿಗೆ ಬಂದು 42 ಮನೆಗಳಿಗೆ ತಲಾ 5 ಸಾವಿರ ರೂ.ಗಳಂತೆ ಒಟ್ಟು 3 ಲಕ್ಷ ರೂ.ಗಳನ್ನು ಕೊಟ್ಟು ಆ ಜನರಿಗೆ ಕರೆಂಟ್ ಕೊಡಿಸುವುದಾದರೆ failure ಎಲ್ಲಿ ಆಗಿದೆ, It is a hundred percent failure by the Government. ಸ್ವಾಮಿ ನಕ್ಸಲ್ ಪ್ಯಾಕೇಜ್ ಎಲ್ಲಿ ಹೋಯಿತು. ಅವರಿಗೆ ಕರೆಂಟ್ ಕೊಡಬೇಕು ಎನ್ನತಕ್ಕಂಥದ್ದು ಇಲ್ಲಿ 42 ಮನೆಗಳಿಗೆ ಕರೆಂಟ್ ಇಲ್ಲವೆಂದು ಪೇಜಾವರ ಮಠದಸ್ವಾಮಿಗಳಿಗೆ ಗೊತ್ತಾಗುತ್ತದೆ. ನಮ್ಮ ಗೃಹ ಇಲಾಖೆಯಲ್ಲಿ ನಮ್ಮ ಆಗುಂಬೆ ಭಾಗದ ತೀರ್ಥಹಳ್ಳಿ ಜನರಿಗೆ ಬಹಳ ದೊಡ್ಡ ಸಮಸ್ಯೆ ಏನು ಎಂದು ಹೇಳೀದರೆ ರಾತ್ರಿ ಊಟಕ್ಕೆ ನಕ್ಸಲ್‌ನವರು ಬಂದು ಊಟ ಹಾಕಿ ಎಂದು ಹೇಳುತ್ತಾರೆ. ಹಾಕದಿದ್ದರೆ ಮನೆಯವರನ್ನು ಹೊಡೆಯುತ್ತಾರೆ. ಅವರು ಊಟ ಮಾಡಿಕೊಂಡು ಹೋದ ನಂತರ ಪೊಲೀಸ್‌ನವರು ಬರುತ್ತಾರೆ ನಕ್ಸಲ್‌ನವರು ಊಟಕ್ಕೆ ಬಂದಿದ್ದರು ಎಂದು ಆ ಮನೆಯವರು ಪೊಲೀಸ್‌ನವರಿಗೆ ಹೇಳಿದರೆ ಇವರನ್ನು ತೆಗೆದುಕೊಂಡು ಹೋಗುತ್ತಾರೆ. ಪ್ರತಿ ದಿವಸ ನಮಗೆ 100 ಫೋನ್‌ಗಳು ಬರುತ್ತವೆ. ಹೆಣ್ಣು ಮಕ್ಕಳು ನಮ್ಮನ್ನು ಪೊಲೀಸ್‌ನವರು ಪೊಲೀಸ್ ಸ್ಟೇಷನ್‌ದಲ್ಲಿ ಇಟ್ಟುಕೊಂಡಿದ್ದಾರೆಂದು ಫೋನ್ ಮಾಡುತ್ತಾರೆ. ನಕ್ಸಲ್‌ನವರು ಬರುತ್ತಾರೆಂದು ಹೇಳಿ ನೀವು ಮನೆಯ ಒಳಗೆ ಬರಬಾರದೆಂದರೆ ಅವರು ಹೊಡೆಯುತ್ತಾರೆ. ಸರಿ, ಇವರು ಏನು ಕೊಡುತ್ತಾರೆ. ಈಗಾಗಲೇ ಅರುಣ್ ಕುಮಾರ್ ಮತ್ತು ಕಿರಣ್ ಕುಮಾರ್‌ವರ ಮನೆಯ ಡಕಾಯಿತಿ ಆಗಿದೆ. ಇಲ್ಲಿಯವರೆಗೆ ಅವರಿಗೆ ಯಾವ ಪರಹಾರವೂ ಸಿಕ್ಕಿಲ್ಲ. ASI ರವರ ಒಂದು encounter ಆಯಿತು. ನಕ್ಸಲ್‌ನವರು ಹೊಡೆದರು ಎಂದು ಹೇಳುತ್ತಾರೆ, ಇಲ್ಲಿಯವರೆಗೆ ತನಿಖೆಯಿಂದ

ಏನೂ ಸತ್ಯ ಹೊರಗೆ ಬರಲಿಲ್ಲ. ಆ ASI ಸತ್ತಿರುವುದು ನಕ್ಸಲೈಟ್ಸ್‌ನಿಂದ ಎನ್ನುವುದು ಇನ್ನು prove ಆಗಿಲ್ಲ. ಒಂದು doubt ಇದೆ ಇದು ಪೊಲೀಸ್‌ನವರ ಒಂದು mistake ನಿಂದ ಆಗಿರುವಂಥದ್ದು ಎಂದು. ಇನ್ನುವರೆಗೆ ಆ ತನಿಖೆ ಹೊರಗೆ ಬಂದಿಲ್ಲ. ಜೊತೆಗೆ ಅಲ್ಲಿ ಪ್ರಶ್ನೆ ಏನಾಗಿದೆ ಎಂದರೆ, ಆ ಇಡೀ ಭಾಗದಲ್ಲಿ ಯಾವುದೇ ರೀತಿಯ ನಾಗರೀಕವಾದ ಸೌಲಭ್ಯಗಳು ನಮಗೆ ಸಿಗುತ್ತಿಲ್ಲ. ನಕ್ಸಲ್ ಪ್ಯಾಕೇಜ್ ಎಂದು ಹೇಳುತ್ತಾರೆ. ಅಲ್ಲಿಗೆ ಪೊಲೀಸ್ ಅಧಿಕಾರಿಗಳು ಬಂದರೆ ಅವರು ಜನಪ್ರತಿನಿಧಿಗಳನ್ನು ಸಂಪರ್ಕ ಮಾಡುವುದಿಲ್ಲ. ಅಲ್ಲಿರುವ ಗ್ರಾಮ ಪಂಚಾಯತಿಯ ಸದಸ್ಯರನ್ನು ಕೇಳುವುದಿಲ್ಲ. ಜಿಲ್ಲಾ ಪಂಚಾಯತಿಯ ಸದಸ್ಯರನ್ನು ಕೇಳುವುದಿಲ್ಲ. ಒಬ್ಬ ಶಾಸಕರನ್ನು ಕೇಳುವುದಿಲ್ಲ. ಅಲ್ಲಿ ಏನು ಲಾ ಅಂಡ್ ಆರ್ಡರ್ ಇದೆ, ಪೊಲೀಸ್‌ನವರು ಮತ್ತು ಡಿ.ಸಿ.ಯವರು ಮಾತನಾಡಿಕೊಂಡು ವಾಪಸ್ ಹೋಗುತ್ತಾರೆ. ಇದೆಲ್ಲಾ ಒಂದು ಭಾಗವಾಯಿತು. ಇಡೀ ರಾಜ್ಯದ ಬಗ್ಗೆ ಯೋಚನೆ ಮಾಡಿದರೆ, ಬೆಂಗಳೂರಿನಲ್ಲಿ ನಡೆಯತಕ್ಕಂಥ ಘಟನೆ ನೋಡಿದರೆ ಪ್ರತಿ ದಿನ ಒಂದೊಂದು ಕೊಲೆಗಳು ನಡೆಯುತ್ತಿವೆ. ಸಂಪೂರ್ಣವಾಗಿ ಏನು ಆಡಳಿತ ನಡೆಯುತ್ತಿದೆ, ಅದು ಮಂಗಳೂರಿನ ಬಗ್ಗೆ ಆಗಿರಬಹುದು, ಬೆಂಗಳೂರಿನ ಬಗ್ಗೆ ಆಗಬಹುದು. ಈಗ ಎಲ್ಲವೂ ಆಗಿರುವುದನ್ನು ನೋಡಿದರೆ ಕಾನೂನು ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಖಂಡಿತವಾಗಿ ಮಾನ್ಯ ಗೃಹ ಸಚಿವರ ರಾಜೀನಾಮೆಯನ್ನು ಕೇಳತಕ್ಕಂಥದ್ದು ಬಹಳ ಒಳ್ಳೆಯದು. ಅವರು ವ್ಯಕ್ತಿಗತವಾಗಿ ಒಳ್ಳೆಯವರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಅವರ ನಿಷ್ಠೆ, ಪ್ರಾಮಾಣಿಕತೆಯ ಬಗ್ಗೆ ನಮಗೆ ಯಾರಿಗೂ ಸಂದೇಹ ಇಲ್ಲ. ಆದರೆ ಅವರ ಆಡಳಿತ ನಡೆಸುವುದರ ಬಗ್ಗೆ ಅವರು ವಿಫಲರಾಗಿದ್ದಾರೆ. ಇವತ್ತು ಏನು ದುರಾಡಳಿತ ನಡೆಯುತ್ತಿದೆ, ಅದಕ್ಕೆ ಅವರು ನೇರ ಹೊಣೆಗಾರರು. ಆದ್ದರಿಂದ ನಮ್ಮಲ್ಲಿ ಆಗಿರತಕ್ಕಂಥ ಏನು ಕಾನೂನಿನ ಸುವ್ಯವಸ್ಥೆ ಇದೆ, ಅದಕ್ಕೆ ಸರ್ಕಾರವೇ ನೇರ ಹೊಣೆ. ಆದ್ದರಿಂದ ಮಾನ್ಯ ಗೃಹ ಸಚಿವರು ರಾಜೀನಾಮೆಯನ್ನು ಕೊಡಬೇಕು. ಜೊತೆಗೆ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ದಿಟ್ಟ ಕ್ರಮಗಳನ್ನು ಅವರು ತೆಗೆದುಕೊಳ್ಳಬೇಕು. ಬಹಳ ದುಃಖದ ಸಂಗತಿ ಎಂದರೆ, ಬಹಳಷ್ಟು ಕಡೆ ಇವತ್ತು ಅನಾವಶ್ಯಕವಾಗಿ ಸುಳ್ಳು ಕೇಸುಗಳನ್ನು ಹಾಕತಕ್ಕಂಥ ಕೆಲಸ ಇವತ್ತು ನಡೆಯುತ್ತಿದೆ. ಬಿ.ಜೆ.ಪಿ.ಯ ಕಾರ್ಯಕರ್ತರು ಇತರೆ ಕಾರ್ಯಕರ್ತರ ಮೇಲೆ ಪೊಲೀಸ್ ಸ್ಟೇಷನ್‌ನಲ್ಲಿ ಒಂದು ವ್ಯವಸ್ಥೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ನಿರ್ದೇಶನ ನೀಡಿ ಪೊಲೀಸ್ ಇಲಾಖೆಗಳಿಗೆ ಒಂದು ನಿರ್ದೇಶನ ಕೊಡದಿದ್ದರೆ ಅನಾವಶ್ಯಕವಾಗಿ ಅನಿವಾರ್ಯವಾಗಿ ಅನೇಕ ಸಂಘರ್ಷಗಳು ಹೊರಗಡೆ ಬರುತ್ತವೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಈ ಸಮಯದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ ಆಗಲೇ ನಿಮ್ಮನ್ನು ಮಾತನಾಡಲು ಕರೆದಿದ್ದೆ ನೀವು ಇರಲಿಲ್ಲ. ನೀವು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ (ದೇವರ ಹಿಪ್ಪರಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ಎನ್ನಸತಕ್ಕಂಥ ಸತ್ಯ ಇವತ್ತು ನಗ್ನ ಸತ್ಯವಾಗಿದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬಹುಶಃ ಈ ಸರ್ಕಾರ ಬಂದ ಮೇಲೆ ಮೊಟ್ಟಮೊದಲನೇ ಕೆಲಸ ರೈತರ ಮೇಲೆ ಗುಂಡು ಹಾಕುವುದರ ಮುಖಾಂತರವಾಗಿ ದಬ್ಬಾಳಿಕೆಯ ಆಡಳಿತವನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿತು. ಎರಡನೆಯದಾಗಿ, ಈ ರಾಜ್ಯದಲ್ಲಿರುವ ಸುಮಾರು 40 ಕ್ಕೂ ಹೆಚ್ಚು ಚರ್ಚ್‌ಗಳ ಮೇಲೆ ದಾಳಿ ಮಾಡುವುದರ ಮುಖಾಂತರವಾಗಿ ಎರಡನೆಯ ಆಕ್ರಮಣವನ್ನು ಈ ಸರ್ಕಾರ ಮಾಡತಕ್ಕಂಥ ಕೆಲಸವನ್ನು ಮಾಡಿದೆ. ಮೂರನೆಯದಾಗಿ, ಇಷ್ಟಕ್ಕೆ ನಿಲ್ಲಬಹುದು ಎನ್ನತಕ್ಕಂಥ ಜನರ ಅಭಿಪ್ರಾಯ ಇತ್ತು. ಆದರೆ ನಂತರ ಪಬ್‌ಗಳಿಗೆ ಹೋಗತಕ್ಕಂಥ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಮಾಡತಕ್ಕಂಥ ಕೆಲಸವನ್ನು ಕೂಡ ಈ ಸರ್ಕಾರದಲ್ಲಿ ನಡೆಯಿತು. ಬಹುಶಃ ಇದೆಲ್ಲಾ ಮುಗಿದ ಮೇಲೆ ಜನ ನೆಮ್ಮದಿಯಿಂದ ಬದುಕುವುದಕ್ಕೆ ಬಿಡುತ್ತಾರೆಯೇ ಎನ್ನುವಂಥ ಪ್ರಶ್ನೆ ಮಾಡುವಂಥ ಸಂಧರ್ಭದಲ್ಲಿ ಈ ರಾಜ್ಯದಲ್ಲಿ ಪ್ರೀತಿ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲವೆಂದು ಹೇಳಿ ಇವತ್ತು ಯುವಕರಿಗೆ ನೀವು ಯಾರಾದರೂ ಪ್ರೀತಿ ಮಾಡುವುದು ಇದ್ದರೂ ಕೂಡ ನಿಮಗೆ ಪ್ರೀತಿ ಮಾಡುವ ಹಕ್ಕಿಲ್ಲ, ನೀವು ಪ್ರೀತಿ ಮಾಡಬೇಕಾದರೂ ಕೂಡ ನಮ್ಮ permission ತೆಗೆದುಕೊಳ್ಳಬೇಕು ಎನ್ನತಕ್ಕಂಥ ಸಂದೇಶವನ್ನು ಕೊಡತಕ್ಕಂಥ ವ್ಯಕ್ತಿಗಳು ಇವತ್ತು ಸರ್ಕಾರದ ಜೊತೆಯಲ್ಲಿ ಶಾಮೀಲಾಗಿರತಕ್ಕಂಥವರು ಮತ್ತು ಈ ಒಂದು ಪಕ್ಷವನ್ನು ಆಡಳಿತಕ್ಕೆ ತರುವುದಕ್ಕೆ ಹಗಲಿರುಳು ದುಡಿದಿರತಕ್ಕಂಥ ಈ ಶ್ರೀರಾಮಸೇನೆಯ ಜನ ಇವತ್ತು ರಾಜ್ಯದ ಎಲ್ಲ ಜನರಿಗೆ ಒಂದು ಸಂದೇಶವನ್ನು ಕೊಟ್ಟರು. ಏನೆಂದರೆ, ನೀವು ಪ್ರೀತಿ ಮಾಡಬೇಕೇ? ಸರಿ, ನಮ್ಮ ಪರ್ಮಿಷನ್ ತೆಗೆದುಕೊಳ್ಳಿ. ನೀವು ಪಬ್ಬಿಗೆ ಹೋಗಬೇಕೆ ನಮ್ಮ ಪರ್ಮಿಷನ್ ತೆಗೆದುಕೊಳ್ಳಿ. ಒಂದು ವೇಳೆ ಪ್ರೀತಿ ಮಾಡುವುದಕ್ಕೆ ಕಬ್ಬನ್ ಪಾರ್ಕಿಗೆ ನೀವು ನಮ್ಮನ್ನು ಕೇಳದೆ ಹೋದರೆ, ನಿಮ್ಮನ್ನು ಹಿಡಿದು ಮದುವೆ ಮಾಡುತ್ತೇವೆ ಎನ್ನತಕ್ಕಂಥ ನೀಚಮಟ್ಟದ ಕೆಲಸವನ್ನು ಮಾಡುವುದಕ್ಕೆ ಇವತ್ತು ಶ್ರೀರಾಮಸೇನೆ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭ ಮಾಡಿತು. ಆದರೆ ಇದರೆ ವಿರುದ್ಧವಾಗಿ ಬಹುಶಃ ಇಡೀ ದೇಶದ ಮಾಧ್ಯಮಗಳು ಬಹಳ ಹೆಚ್ಚಿನ ಬೆಳಕನ್ನು ಚೆಲ್ಲತಕ್ಕಂಥ ಕೆಲಸವನ್ನು ಮಾಡಿದವು. ಪಬ್‌ನಲ್ಲಿ ನಡೆದಿರತಕ್ಕಂಥ ದಾಳಿಯ ಸಂದರ್ಭದಲ್ಲಿ ಹೆಣ್ಣು ಮಕ್ಕಳನ್ನು ಹಿಡಿದು ಹೊಡೆಯತಕ್ಕಂಥ ಅಧಿಕಾರಿವನ್ನು ಕೊಟ್ಟವರು ಯಾರು? ಯಾವ ಕಾನೂನಿನಲ್ಲಿ ಇವತ್ತು ಅವರಿಗೆ ಅಧಿಕಾರ ಇದೆ. ಈ ದೇಶದಲ್ಲಿ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಪ್ರತಿಯೊಬ್ಬ ಪ್ರಜೆಯೂ ಕೂಡ ಸಮಾನವಾಗಿ ಬಾಳತಕ್ಕಂಥ ಸಂವಿಧಾನ ಬದ್ಧವಾದ ಹಕ್ಕುಗಳನ್ನು ಪಡೆದಿದ್ದೇವೆ. ಒಬ್ಬ ಹೆಣ್ಣು ಮಗಳು ಪಬ್‌ಗೆ

ಹೋಗಬಾರದೆಂದು ಎಲ್ಲಿಯೂ ಕಾನೂನು ಇಲ್ಲ. ಅದರ ಅರ್ಥ ಎಲ್ಲಾ ಹೆಣ್ಣುಮಕ್ಕಳು ಪಬ್ಬಿಗೆ ಹೋಗಬೇಕೆಂದು ಅಲ್ಲ ಅವರ ವ್ಯಕ್ತಿಗತವಾದಂಥ ವಿಚಾರಗಳು, ವೈಯುಕ್ತಿಕವಾದಂಥ ವಿಚಾರಗಳು, ಈ ಸರ್ಕಾರಕ್ಕೆ ಬೆಂಬಲವಾಗಿ ನಿಂತಿರತಕ್ಕಂಥ ಕೆಲವು ಸಂಘಟನೆಗಳು ಆ ಕಾರ್ಯವನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಾವು ಸರ್ಕಾರದ ಮಂತ್ರಿಗಳ ಹೇಳಿಕೆಗಳನ್ನು ಮತ್ತು ಸಭಾನಾಯಕರ ಹೇಳಿಕೆಗಳನ್ನು ನಾನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ನನ್ನ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕೆ ನಮ್ಮ ಸರ್ಕಾರಕ್ಕೆ ಪಿತೂರಿ ಮಾಡುವುದಕ್ಕೆ ಕೆಲವರು ಈ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿದರು. ಅದರ ಜೊತೆಯಲ್ಲಿ ವಿರೋಧ ಪಕ್ಷದವರು ಕೂಡ ಇದರಲ್ಲಿ ಶಾಮೀಲಾಗಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಪತ್ರಿಕೆಯಲ್ಲಿ ನೋಡಿದ್ದೇವೆ ಮತ್ತು ಟಿ.ವಿ.ಯಲ್ಲಿ ಕೇಳಿದ್ದೇವೆ. ಆದರೆ ಒಂದು ಮಾತನ್ನು ಈ ಸದನದಲ್ಲಿ ಸ್ಪಷ್ಟ ಪಡಿಸಬೇಕಾಗುತ್ತದೆ. ಶ್ರೀರಾಮಸೇನೆ ಯಾರದ್ದು, ಅದನ್ನು ಯಾರು ಹುಟ್ಟು ಹಾಕಿದ್ದು, ಅವರು ಮೊದಲು ಯಾವ ಸಂಘಟನೆಯಲ್ಲಿದ್ದರು. ಮೊದಲು ಪ್ರಮೋದ್ ಮುತಾಲಿಕ್‌ರವರು ಯಾವ ಸಂಘಟನೆಯಿಂದ ಬಂದಿರತಕ್ಕಂಥವರ. ಎಲ್ಲಿಂದ ಬಂದರು, ಅವರ ಮೂಲ ಏನು? ಅವರ ಜೊತೆಯಲ್ಲಿ ಕಟ್ಟಿರತಕ್ಕಂಥ ಸಂಘಟನೆಯಲ್ಲಿರತಕ್ಕಂಥ ಜನ ಯಾರು? ಯಾವ ಸಿದ್ಧಾಂತವನ್ನು ಇಟ್ಟುಕೊಂಡು ಇವತ್ತು ಅವರು ಬೆಳೆದು ಬಂದಿದ್ದಾರೆ. ಆ ಸಿದ್ಧಾಂತಕ್ಕೆ ಹತ್ತಿರವಾಗಿ ಇರತಕ್ಕಂಥವರು ಯಾರು? ಅವರನ್ನು ರಕ್ಷಣೆ ಮಾಡತಕ್ಕಂಥವರು ಯಾರು ಎನ್ನತಕ್ಕಂಥದ್ದು ಇಡೀ ಕರ್ನಾಟಕದ ಜನತೆಗೆ ಗೊತ್ತಿದೆ. ಆದರೆ ಒಂದು ಮಾತನ್ನು ಇವತ್ತು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಏಕೆ ಈ ರಾಜ್ಯದಲ್ಲಿ ಹೆಣ್ಣುಮಕ್ಕಳು ಸ್ವತಂತ್ರವಾಗಿ ಬದುಕುವುದಕ್ಕೆ ಅಧಿಕಾರ ಇಲ್ಲವೆ? ನಿಮ್ಮ ಬಿಜೆಪಿ ಸರ್ಕಾರದಲ್ಲಿ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡತಕ್ಕಂಥ ಕೆಲಸ ನಿಮ್ಮಿಂದ ಮಾಡುವುದಕ್ಕೆ ಸಾಧ್ಯವಿಲ್ಲವೆ ಎನ್ನತಕ್ಕಂಥದ್ದನ್ನು ಈ ಕರ್ನಾಟಕದ ಜನತೆಗೆ ತಾವು ತಿಳಿಸಬೇಕಾಗುತ್ತದೆ. ಒಂದು ವೇಳೆ ತಮ್ಮ ಮಂತ್ರಿಗಳು ಸರ್ಕಾರದಲ್ಲಿರುವಂಥವರು ಹೇಳಿರುವ ಹೇಳಿಕೆಗಳು ನಿಜವಾಗಿದ್ದರೆ ನೀವು ಹೆಣ್ಣುಮಕ್ಕಳ ಮೇಲೆ ಯಾರು ಆಕ್ರಮಣವನ್ನು ಮಾಡಿದ್ದಾರೆ, ಯಾರು ದಾಳಿಯನ್ನು ಮಾಡಿದ್ದಾರೆ, ಅವರನ್ನು ರಕ್ಷಣೆ ಮಾಡುವುದರಲ್ಲಿ ನೀವು ಪ್ರಾಮಾಣಿಕರಾಗಿದ್ದರೆ ಅವರು ಕನಿಷ್ಟ 3–4 ತಿಂಗಳು ಜೈಲಿನಲ್ಲಿರಬೇಕಾಗಿತ್ತು. ಅವರು ಬಳ್ಳಾರಿ ಅಥವಾ ಬೆಂಗಳೂರಿನ ಜೈಲಿನಲ್ಲಿ ಕೊಳೆಯಬೇಕಾಗಿತ್ತು. ಆದರೆ ಅವರು ಎಲ್ಲಿದ್ದಾರೆ. ಇವತ್ತು ಮತ್ತೆ ಒಳಗಡೆ ಹೋಗುತ್ತಾರೆ, ನಾಳೆ ಬೆಳಿಗ್ಗೆ ಹೊರಗಡೆ ಬರುತ್ತಾರೆ. ನಾಡಿದ್ದು ಇನ್ನೊಂದು ಕಡೆ ಹೋಗಿ ದಾಳಿಯನ್ನು ಮಾಡುತ್ತಾರೆ. ಹಾಗಾದರೆ ಇದರ ಅರ್ಥ ಏನು? ಸರ್ಕಾರವೇ ಇವರಿಗೆ ರಕ್ಷಣೆಯನ್ನು ಕೊಡುತ್ತಿದೆ. ಅಲ್ಲಿರುವಂಥ ಗೃಹ ಸಚಿವರು ಅವರನ್ನು ರಕ್ಷಣೆ ಮಾಡತಕ್ಕಂಥ ಒಂದು ವ್ಯವಸ್ಥಿತವಾದಂಥ ಸಂಚು ಅಂದರೆ, ಒಂದು ಕಡೆ ಪಬ್‌ಗಳ ಮೇಲೆ ದಾಳಿ ಮಾಡಿಸತಕ್ಕಂಥದ್ದು ಇನ್ನೊಂದು ಕಡೆಗೆ ನಾವು ಪಬ್ ಮೇಲೆ ದಾಳಿ ಮಾಡಿರತಕ್ಕಂಥವರನ್ನು ಹಿಡಿದ್ದಿದ್ದೇವೆ

ಎನ್ನತಕ್ಕಂಥದ್ದು, ಅದರ ನಂತರ ಮತ್ತೆ ಅವರನ್ನು ಬಿಡಿಸತಕ್ಕಂಥ ಕೆಲಸವನ್ನು ಮಾಡತಕ್ಕಂಥದ್ದು. ಇದು ಸರ್ಕಾರದ ಬೆಂಬಲವಿಲ್ಲದೆ ಆ ವ್ಯಕ್ತಿಗಳು ಇಂತಹ ಒಂದು ವ್ಯವಸ್ಥಿತವಾದಂಥ ಆಕ್ರಮಣವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಹಿಂದಿನ ಯಾವುದೇ ಸರ್ಕಾರದಲ್ಲಿಯೂ ಕೂಡ ಚರ್ಚ್‌ಗಳ ಮೇಲೆ ದಾಳಿಯಾಗಿಲ್ಲ. ಹಿಂದೆ ಯಾವುದೇ ಸರ್ಕಾರದ ಆಡಳಿತವಿದ್ದಾಗಲೂ ಕೂಡ ಪಬ್‌ಗಳ ಮೇಲೆ ದಾಳಿಯಾಗಲಿಲ್ಲ. ಸರಿ, ನಿಮಗೆ ಪಬ್ ಸಂಸ್ಕೃತಿ ಬೇಡವಾಗಿದೆ, ನಿಮಗೆ ಬಹುಮತ ಇದೆ ಸ್ವಾಮಿ, 115 ಜನ ತಾವು ಇದ್ದೀರಿ. ನಿಮಗೆ ಧೈರ್ಯವಿದ್ದರೆ ಘೋಷಣೆ ಮಾಡಿ. ಕರ್ನಾಟಕದಲ್ಲಿರತಕ್ಕಂತಹ ಎಲ್ಲಾ ಪಬ್‌ಗಳ ಲೈಸೆನ್ಸ್‌ಗಳನ್ನು ರದ್ದು ಮಾಡುತ್ತೇವೆಂದು ಘೋಷಣೆಯನ್ನು ಮಾಡಿ ಅದನ್ನು ಮಾಡತಕ್ಕಂತಹ ಸಾಮರ್ಥ್ಯವು ನಿಮ್ಮಲ್ಲಿ ಇಲ್ಲವೇ? ನಿಮಗೆ ಅಧಿಕಾರ ಇದೆಯಲ್ಲಾ, ಜನರು ನಿಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನಿಮಗೆ ಬಹುಮತವಿದೆ, ನೀವು ಇದನ್ನು ಮಾಡಬಹುದು. ಇವತ್ತು ತಾವು ಎಲ್ಲಾ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಿ. ಅದರ ಬದಲು ಪಬ್‌ಗಳಿಗೆ ಹೋಗುವುದು ತಪ್ಪು ಎಂದು ಹೇಳುವುದಕ್ಕೆ ಕಾನೂನಿನಲ್ಲಿ ಅಧಿಕಾರವಿದಯೇ? ಹೆಣ್ಣುಮಕ್ಕಳು ಪಬ್‌ನಲ್ಲಿ ಕೆಲಸವನ್ನು ಮಾಡಬಾರದು ಎಂದು ಯಾರು ಹೇಳಿದರು? ನಿಮಗೆ ಬೇಡವಾಗಿರಬಹುದು, ಆದರೆ ಅನೇಕ ಜನ ಹೆಣ್ಣುಮಕ್ಕಳು ಇವತ್ತು ಅಲ್ಲಿಯೂ ಕೂಡ ಕೆಲಸವನ್ನು ಮಾಡುತ್ತಿದ್ದಾರೆ. ಅದು ವಾಸ್ತವಿಕವಾದ ಸ್ಥಿತಿ, ನಾವು ನೋಡುವಂತಹ ದೃಷ್ಟಿಕೋನಗಳು ಕೂಡ ಬೇರೆಬೇರೆಯಾಗಿದೆ. ಕೆಲವರಿಗೆ ಪಬ್‌ನಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ಕೆಟ್ಟವರಾಗಿ ಕಾಣಬಹುದು. ಈ ಅಧಿವೇಶನವು ನಡೆದಂತಹ ಮೊದಲನೆಯ ದಿನದ ಸಂದರ್ಭದಲ್ಲಿ ನಾನು ಸಾಯಂಕಾಲ ಟಿ.ವಿ.ಯನ್ನು ನೋಡುತ್ತಿರುವಂತಹ ಸಂದರ್ಭದಲ್ಲಿ ಒಂದು ಜಿಲ್ಲೆಯಾದ ಅದು ಚಿಕ್ಕಮಗಳೂರು ಜಿಲ್ಲೆಯಾಗಿರಬಹುದು. ಅಲ್ಲಿ ಒಂದು ಲಾಡ್ಜ್ ಮೇಲೆ ವೇಶ್ಯಾವಾಟಿಕೆಯೂ ನಡೆಯುತ್ತಿದೆ ಎಂದು ಹೇಳಿ ಭಜರಂಗದಳದ ಕಾರ್ಯಕರ್ತರು ಅಲ್ಲಿ ಕಾನೂನುಬಾಹಿರವಾಗಿ ಲಾರ್ಡ್ಜನಲ್ಲಿ ಹೊಕ್ಕು ಅಲ್ಲಿರುವಂತಹ ಜನರ ಮೇಲೆ ಅದರ ಪಕ್ಕದಲ್ಲಿರುವಂತಹ ಫೈನಾನ್ಸ್ ಕಂಪನಿಯ ಮೇಲೆ ಆಕ್ರಮಣವನ್ನು ಮಾಡುತ್ತಾರೆ. ನಿಮ್ಮದೇ ಸರ್ಕಾರವಿದೆ, ನಿಮ್ಮ ಕೈಯಲ್ಲಿಯೇ ಅಧಿಕಾರವಿದೆ, ಭಜರಂಗದಳದವರಿಗೆ ಅಧಿಕಾರವನ್ನು ಕೊಟ್ಟವರು ಯಾರು/ ನಿಮ್ಮ ಪೋಲೀಸ್ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅದರ ಅರ್ಥ ಪರ್ಯಾಯವಾಗಿ ಈ ರಾಜ್ಯದಲ್ಲಿ ಭಜರಂಗದಳ ಮತ್ತು ನಿಮ್ಮ ಪರವಾಗಿರುವಂತಹ ಸಂಘಟನೆಗಳು ಈ ಕಾನೂನನ್ನು ಕೈಗೆ ತೆಗೆದುಕೊಂಡು ಕೆಲಸವನ್ನು ಮಾಡುತ್ತಿದ್ದರೂ ಕೂಡ ಇವತ್ತು ಈ ರಾಜ್ಯ ಸರ್ಕಾರ ಕಣ್ಣು ಕಟ್ಟಿಕೊಂಡು ಕುಳಿತಿದೆ. ಕಣ್ಣು ಇದ್ದರೂ ಕೂಡ ಕುರುಡರಾಗಿದ್ದೀರಿ. ಕಿವಿ ಇದ್ದರೂ ಕೂಡ ನೀವು ಕೇಳತ್ತಿಲ್ಲ. ಕೇವಲ ನಿಮ್ಮ ಹೇಳಿಕೆಗಳು ಬೂಟಾಟಿಕೆಯ ಹೇಳಿಕೆಗಳು ಆಗಿವೆ. ಅದಕ್ಕಾಗಿ ಈ ರಾಜ್ಯದ ಜನರು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಇದು ಬಹಳ ಮುಖ್ಯವಾಗಿರುವಂತಹದ್ದು

ಇಡೀ ರಾಜ್ಯದ ಮಹಿಳೆಯರಿಗೆ, ಇಡೀ ದೇಶದ ಮಹಿಳೆಯರಿಗೆ ಅತ್ಯಂತ ನೋವಾಗಿರುವಂತಹ ಸಂಗತಿ ಏನೆಂದರೆ, ಅದು ಒಂದು ಹೆಣ್ಣುಮುಕ್ಕಳು ವ್ಯಾಲೆಂಟೈನ್ ದಿನ ಹೊರಗಡೆ ಹೋಗಬಾರದು ಎಂದು ಒಂದು ಕಡೆಗೆ ಶ್ರೀರಾಮಸೇನೆಯವರು ಧಮಕಿಯನ್ನು ಕೊಡುತ್ತಾರೆ. ಇನ್ನೊಂದು ಕಡೆಗೆ ಬೆಂಗಳೂರಿನಂತಹ ನಗರದಲ್ಲಿ ಪ್ರಶಾಂತವಾದ ವಾತಾವರಣದಲ್ಲಿ ಪ್ರತಿಯೊಂದು ಮರದ ಕೆಳಗೆ 3–3 ಜನ ಪೊಲೀಸ್‌ನವರಿಗೆ ಬಂಧೂಕುಗಳನ್ನು ಕೊಟ್ಟು ಅಲ್ಲಿಗೆ ಡ್ಯೂಟಿಗೆ ಹಾಕಿಬಿಟ್ಟು ತಾವು ಇಲ್ಲಿ ಬಂಧೂಕಿನಡೆಗೆ ಬಂದು ಪ್ರೀತಿಯನ್ನು ಮಾಡಿ ಎಂದು ಹೇಳಿ ಎಂದು ಹೇಳುವಂತಹ ನಿಮ್ಮ ಸರ್ಕಾರವೇನಿದೆ, ಇದನ್ನು ನೋಡಿ ಈ ರಾಜ್ಯದ ಎಲ್ಲಾ ಮಹಿಳೆಯರು, ಈ ರಾಜ್ಯದ ಪ್ರತಿಭಾವಂತ ಜನರು, ಈ ರಾಜ್ಯದ ಬುದ್ಧಿಜೀವಿಗಳು, ಸಾಹಿತಿಗಳು ಎಲ್ಲರೂ ಕೂಡ ಖಂಡನೆಯನ್ನು ಮಾಡಿ ಇವತ್ತು ಹೋರಾಟಗಳನ್ನು ಮಾಡಿದ್ದಾರೆ. ಅದರ ಅರ್ಥ ನಾವು ಪ್ರೀತಿಯನ್ನು ಮನೆಯಲ್ಲಿ ಮಾಡಬೇಕು, ಹೊರಗಡೆ ಮಾಡಬೇಕು, ಯಾರ ಜೊತೆಯಲ್ಲಿ ಹೊರಗಡೆ ಹೋಗಬೇಕು. ಎಲ್ಲಿಗೆ ಹೋಗಬೇಕು, ಯಾರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕು. ಅದು ಅವರವರ ವೈಯಕ್ತಿಕವಾದಂತಹ ವಿಚಾರವಾಗಿದೆ. ಅದಕ್ಕೆ ನಾವು ಸ್ವಾತಂತ್ರ್ಯ ಎಂದು ಹೇಳುವುದು. ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಲಕ್ಷಾಂತರ ಜನರಿಗೆ ಇವತ್ತು ಈ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಅದು ಎಲ್ಲಿದೆ? ಅದು ಯಾವ ರೂಪದಲ್ಲಿದೆ? ಮೂಲಭೂತವಾದಂತಹ ಹಕ್ಕುಗಳನ್ನು ಕೊಟ್ಟಿದ್ದಾರೆ. ಅದನ್ನು ಕಸಿದುಕೊಳ್ಳುವಂತಹ ದುಷ್ಟಶಕ್ತಿಗಳನ್ನು ಮಟ್ಟ ಹಾಕುವುದಕ್ಕೋಸ್ಕರವಾಗಿಯೇ ಕಾನೂನು ಬದ್ಧವಾಗಿ ಆಡಳಿತವನ್ನು ನಡೆಸುತ್ತೇವೆ. ಕಾನೂನು ಪ್ರಕಾರವಾಗಿ ಸತ್ಯ, ನ್ಯಾಯ ನೀತಿ ಹಾಗೂ ಧರ್ಮದ ಆಧಾರದ ಮೇಲೆ ನಾವೆಲ್ಲರೂ ಕೂಡ ನಿಷ್ಠೆಯಿಂದ ನಿಷ್ಪಕ್ಷಪಾತವಾಗಿ ಆಡಳಿತವನ್ನು ನಡೆಸುತ್ತೇವೆಂದು ಹೇಳಿ ಪ್ರಮಾಣವಚನವನ್ನು ಸ್ವೀಕರಿಸಿ ಒಳಗೆ ಬರುತ್ತೇವೆ. ಆದರೆ ಎಲ್ಲಿ ಕಾನೂನುಬಾಹಿರವಾದಂತಹ ಚಟುವಟಿಕೆಯನ್ನು ಮಾಡುವಂತಹ ಜನರು ಇದ್ದಾರೆ, ಇವತ್ತು ಅವರು ಸಮಾಜದಲ್ಲಿ ಬಹಿರಂಗವಾಗಿ ಓಡಾಡುತ್ತಿದ್ದಾರೆ. ನನ್ನ ಒಬ್ಬ ಮಂಗಳೂರಿನ ಶಾಸಕ ಮಿತ್ರರು ಹೇಳಿದರು. ಅನೇಕ ಜನ ಮಂಗಳೂರಿನಲ್ಲಿ 15–20 ಕೇಸುಗಳು ಇದ್ದಂತಹ ಜನರು ಇವತ್ತು ಬಹಿರಂಗವಾಗಿ ಓಡಾಡುತ್ತಿದ್ದಾರೆ. ಪೊಲೀಸ್ ಜೀಪ್‌ನಲ್ಲಿ ಹೋಗುತ್ತಿದ್ದಾರೆ. ಪೊಲೀಸ್ ಸ್ಟೇಷನ್‌ನಲ್ಲಿಯೇ ಕುಳಿತಿರುತ್ತಾರೆ. ಆದರೆ ಅವರನ್ನು ಹಿಡಿಯತಕ್ಕಂತಹ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಒಂದು ಕಡೆಗೆ ಅನೇಕ ಜನರು ಈ ಒಂದು ಪೊಲೀಸ್ ಇಲಾಖೆಯ ಅವ್ಯವಸ್ಥೆಯ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಒಂದು ಬಾರಿ ಒಬ್ಬ ಹೈ ಲೆವೆಲ್ ಪೊಲೀಸ್ ಆಫೀಸರ್‌ರವರನ್ನು ನಾನು ಭೇಟಿಯಾಗಿ ಈ ಪೊಲೀಸ್ ಅವ್ಯವಸ್ಥೆಯ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ನನಗೆ ಒಂದು ಮಾತನ್ನು ಹೇಳಿದರು. ಈ ರಾಜ್ಯದಲ್ಲಿ ಕೆಲವು ಸ್ಥಳಗಳಲ್ಲಿ ಇವತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು

ಕೈಕಟ್ಟಿಕೊಂಡು ಕುಳಿತುಕೊಳ್ಳುವಂತಹ ಪರಿಸ್ಥಿತಿ ಇದೆ. ಅದರಲ್ಲೂ ವಿಶೇಷವಾಗಿ ಮಂಗಳೂರು, ಅಲ್ಲಿ ಪೊಲೀಸ್ ಇಲಾಖೆಯವರು ಅಲ್ಲಿರುವಂತಹ ಪ್ರಭಾವಿ ಲೀಡರ್‌ಗಳು, ಅಲ್ಲಿರುವಂತಹ ಮಂತ್ರಿಗಳು ಯಾರಿಗೆ ಹೇಳುತ್ತಾರೆ. ಅವರಿಗೆ ಮಾತ್ರ ಅರೆಸ್ಟ್ ಮಾಡಬೇಕು. ಯಾರು ಹೇಳುತ್ತಾರೆ ಅವರ ಮೇಲೆ ಮಾತ್ರ ಕೇಸನ್ನು ಹಾಕಬೇಕು ಒಂದು ವೇಳೆ ಅದನ್ನು ಬಿಟ್ಟು ಬೇರೆಯವರನ್ನು ಒಳಗೆ ಹಾಕುವುದಕ್ಕೆ ಪ್ರಯತ್ನವನ್ನು ಮಾಡಿದರೆ ಅವರು ಅಲ್ಲಿಂದ ಎತ್ತಂಗಡಿಯಾಗುತ್ತಾನೆ. ಸೀತಾರಾಂ ಎನ್ನುವಂತಹ ಒಬ್ಬ ಪತ್ರಕರ್ತರನ್ನು ಕೂಡ ಇವತ್ತು ಈ ಸರ್ಕಾರ ಒಂದು ತಿಂಗಳ ಕಾಲ ಒಳಗೆ ಹಾಕುವುದಕ್ಕೆ ಇವರಿಗೆ ಕಾನೂನಿನಲ್ಲಿ ಅವಕಾಶವಿದೆ, ಆದರೆ ಯಾರು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯವನ್ನು ಮಾಡಿದ್ದಾರೆ, ಯಾರು ಹೆಣ್ಣುಮಕ್ಕಳು ಮೇಲೆ ಹಲ್ಲೆಯನ್ನು ಮಾಡಿದ್ದಾರೆ, ಅವರಿಗೆ ತಿಂಗಳಾನುಗಟ್ಟಲೆ ಒಳಗೆ ಹಾಕುವಂತಹ ಅಧಿಕಾರ, ಒಳಗೆ ಹಾಕುವಂತಹ ಧೈರ್ಯ ಮತ್ತು ಸಾಮರ್ಥ್ಯ ಈ ಸರ್ಕಾರಕ್ಕೆ ಇಲ್ಲ. ಯಾವ ಹೆಣ್ಣುಮಕ್ಕಳಿಗೆ ನೀವು ರಕ್ಷಣೆಯನ್ನು ಕೊಡುವುದಕ್ಕೆ ಆಗುವುದಿಲ್ಲವೋ ಅಂತಹ ಒಂದು ಸರ್ಕಾರದಲ್ಲಿ ಇವತ್ತು ಗೃಹಮಂತ್ರಿಗಳು ನೈತಿಕವಾಗಿ ಗೃಹಮಂತ್ರಿಯಾಗಿ ಮುಂದುವರಿಯುವುದಕ್ಕೆ ಯಾವುದೇ ರೀತಿಯಾದಂತಹ ಅಧಿಕಾರ ಅವರಿಗೆ ಇಲ್ಲ. ತಕ್ಷಣ ನಿರ್ದಾಕ್ಷಿಣ್ಯವಾಗಿ ನಾವೆಲ್ಲರೂ ಕೂಡ ಈ ಬಗ್ಗೆ ವಿಚಾರವನ್ನು ಮಾಡಬೇಕಾಗಿದೆ. ಅಂತಹ ಒಬ್ಬ ಗೃಹಮಂತ್ರಿಗಳು ಇವತ್ತು ನಮ್ಮ ರಾಜ್ಯಕ್ಕೆ ಬೇಕೇ? ಯಾರೇ ಆಗಿರಲಿ, ಶ್ರೀರಾಮಸೇನೆಯಾಗಿರಲಿ ಅಥವಾ ಇನ್ಯಾರೇ ಆಗಿರಲಿ ಅಂತಹವರನ್ನು ಸದೆಬಡಿಯುವಂತಹ ಕೆಲಸವನ್ನು ಯಾವ ಸರ್ಕಾರದವರು ಮಾಡುತ್ತಾರೆ, ಅದನ್ನು ಜನರು ಮೆಚ್ಚುತ್ತಾರೆ. ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಎಲ್ಲಾ ಪತ್ರಿಕೆಗಳ ಸಂಪಾದಕೀಯವನ್ನು ಕೋಟ್ ಮಾಡಿ ಹೇಳಿದರು. ಪ್ರತಿಯೊಂದು ಪತ್ರಿಕೆಯ ಸಂಪಾದಕರು ಅವರೇನು ಕಾಂಗ್ರೆಸ್‌ನವರಲ್ಲವಲ್ಲಾ, ಏನೂ ಅವರು ಕಾಂಗ್ರೆಸ್‌ನವರೇ? ಅವರು ಯಾರು ಜೆಡಿಎಸ್‌ನವರಲ್ಲಾ, ಅವರೆಲ್ಲರೂ ಕೂಡ ಈ ರಾಜ್ಯದಲ್ಲಿರತಕ್ಕಂತಹ ಜವಾಬ್ದಾರಿಯುತವಾದಂತಹ ಪತ್ರಿಕಾರಂಗವನ್ನು ನಡೆಸುವಂತಹವರು ಆಗಿದ್ದಾರೆ. ಪ್ರತಿಯೊಬ್ಬರು ಕೂಡ ಸಂಪಾದಕೀಯದಲ್ಲಿ ಬರೆದಿದ್ದಾರೆ. ಈ ರಾಜ್ಯದಲ್ಲಿ ಮೂಲಭೂತವಾದಂತಹ ಹಕ್ಕುಗಳಿಗೆ ತೊಂದರೆಯಾಗುತ್ತಿದೆ. ಈ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆಯೂ ಇಲ್ಲ. ಇದರ ಬಗ್ಗೆ ಸರ್ಕಾರ ತಕ್ಷಣ ಎಚ್ಚತ್ತುಕೊಳ್ಳಬೇಕೆನ್ನುವಂತಹ ಮಾತನ್ನು ಹೇಳಿದ್ದಾರೆ. ಇದು ಕೇವಲ ನಾವು ವಿರೋಧಪಕ್ಷದಲ್ಲಿದ್ದು ನಾವು ಅಷ್ಟೇ ಹೇಳಿದ್ದೇವೆಂದು ಅಲ್ಲ. ತಾವು ಎಲ್ಲಾ ಪತ್ರಿಕೆಯನ್ನು ಸಹಾ ತೆಗೆದುನೋಡಿ. ಪತ್ರಿಕೆಗಳಲ್ಲಿ ಪ್ರತಿಯೊಂದು ದೊಡ್ಡದೊಡ್ಡ ಲೇಕನಗಳು ಬಂದಿವೆ. ಇದರ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಅಧಿಕಾರದಲ್ಲಿ ಯಾರು ಇರುತ್ತಾರೆ, ಯಾರು ಹೋಗುತ್ತಾರೆಂಬುದು ಮುಖ್ಯವಲ್ಲ. ನಾವು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಈ ರಾಜ್ಯದ ಮೂಲಭೂತವಾದಂತಹ ಹಕ್ಕುಗಳನ್ನು, ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯವನ್ನು ರಕ್ಷಣೆಯನ್ನು ಮಾಡುವುದಕ್ಕೆ

ಯಾವ ಸರ್ಕಾರ ದಿಟ್ಟವಾದಂತಹ ಕ್ರಮಗಳನ್ನು ತೆಗೆದುಕೊಂಡಿದೆ ಎನ್ನುವುದು ಇತಿಹಾಸದಲ್ಲಿ ಉಳಿಯುತ್ತದೆಯೇ ವಿನಃ ಅದು ಕೇವಲ ಯಾರು ಸಂಸ್ಕೃತಿಯ ಹೆಸರಿನಲ್ಲಿ, ಧರ್ಮದ ಹೆಸರನಲ್ಲಿ ಇನ್ನೊಬ್ಬರ ಮೇಲೆ ಅತ್ಯಾಚಾರವನ್ನು ಮಾಡುವಂತಹ ಕೆಲಸವನ್ನಾಗಲಿ, ಅನ್ಯಾಯವನ್ನು ಮಾಡುವಂತಹ ಕೆಲಸವನ್ನಾಗಲಿ, ಹಲ್ಲೆ ಮಾಡುವಂತಹ ಕೆಲಸವನ್ನಾಗಲಿ ಯಾರು ಮಾಡುತ್ತಾರೆ, ಅವರನ್ನು ಸದೆಬಡಿಯುವಂತಹ ಕೆಲಸಗಳು ಆಗಬೇಕು. ಅದರ ಜೊತೆಯಲ್ಲಿ ಇನ್ನೊಂದು ತಾವು ಭಯೋತ್ಪಾದನೆಯ ಬಗ್ಗೆ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾನು ಕೂಡ ವಿದ್ಯಾರ್ಥಿಯಾಗಿದ್ದಾಗ ಎಲ್ಲಾ ವಿದ್ಯಾರ್ಥಿ ಸಂಘಟನೆಯಲ್ಲಿಯೂ ಕೂಡ ಒಡನಾಟವನ್ನು ಇಟ್ಟುಕೊಂಡು ಬಂದಿದ್ದೇನೆ. ನಿಮ್ಮ ABVP ಇರಬಹುದು, ನಿಮ್ಮ SFI ಇರಬಹುದು, NSUI ಇರಬಹುದು, ನಾನು ಎಲ್ಲಾ ಸಂಘಟನೆಗಳನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಆದರೆ ಒಂದು ಮಾತನ್ನು ಇವತ್ತು ವಿದ್ಯಾರ್ಥಿ ಸಮುದಾಯಕ್ಕೆ ಭಯೋತ್ಪಾದನೆ ಬಗ್ಗೆ ನಾವು ನಿಜವಾಗಲೂ ಪಾಠವನ್ನು ಹೇಳಬೇಕಾಗಿದ್ದರೆ ಅದರ ಪಾಠ ಹೇಳತಕ್ಕಂಥದ್ದು ರಾಜಕಾರಣಿಗಳಿಂದ ಅದು ಆಗುವುದಿಲ್ಲ. ಆ ಕೆಲಸ ನಮ್ಮದು ಅಲ್ಲ. ಅದನ್ನು ಹೇಳುವುದಕ್ಕೆ ದೇಶಾಭಿಮಾನವನ್ನು ಬೆಳೆಸುವುದಕ್ಕೆ ದೇಶಪ್ರೇಮವನ್ನು ಬೆಳೆಸುವುದಕ್ಕೆ ಅನೇಕ ಸಂಸ್ಥೆಗಳನ್ನು ಹಿಂದಿನಿಂದಲೂ ಕೂಡ ಹುಟ್ಟು ಹಾಕಿದ್ದಾರೆ. ಒಂದು NSS, NCC, Scouts ನಿಮಗೆ ನಿಜವಾಗಲೂ ವಿದ್ಯಾರ್ಥಿಗಳಿಗೆ ಶಿಸ್ತನ್ನು ತರಬೇಕಾಗಿದ್ದರೆ ವಿದ್ಯಾರ್ಥಿಗಳಲ್ಲಿ ಭಯೋತ್ಪಾದನೆಯ ಬಗ್ಗೆ ಪಾಠವನ್ನು ಕೊಡಬೇಕಾಗಿದ್ದರೆ ಅಂತಹ ಸಂಸ್ಥೆಗಳನ್ನು ಬಲಪಡಿಸುವುದಕ್ಕೆ ತಾವು ಹಣಕಾಸನ್ನು ಒದಗಿಸಿ, ಅನುದಾನವನ್ನು ಒದಗಿಸಿ ಅಲ್ಲಿರುವಂತಹ ಶಿಕ್ಷಕರು ಭಯೋತ್ಪಾದನೆಯ ಬಗ್ಗೆ ಸಮರ್ಥವಾಗಿ ಪಾಠವನ್ನು ಮಾಡುತ್ತಾರೆ. ಅದನ್ನು ಕೇವಲ ನಾವು ಬಸ್‌ಗಳನ್ನು ಕಳುಹಿಸಿ ಅಲ್ಲಿ ಊಟದ ಪ್ಯಾಕೇಟ್‌ಗಳನ್ನು ರೆಡಿ ಮಾಡಿ, ನಾವೆಲ್ಲರೂ ಎಲ್ಲಾ ಪಕ್ಷದವರು ಮಾಡುವಂತಹ ಒಂದು ಕೆಲಸ ಏನಿದೆ. ನಾವೇನು ಪಕ್ಷದ ಸಮಾವೇಶವನ್ನು ಮಾಡುತ್ತೇವೆ. ಅಂತಹ ಒಂದು ಸಮಾವೇಶಗಳನ್ನು ಮಾಡಿ ಒಂದು ದಿನ ನಮ್ಮ ರಾಜಕೀಯ ಭಾಷಣವನ್ನು ಮಾಡಿ ಬಂದುಬಿಟ್ಟರೆ ಅದರಿಂದ ಭಯೋತ್ಪಾದನೆಯೂ ಹೋಗುತ್ತದೆ ಎನ್ನುವಂತಹ ಒಂದು ವಿಚಾರ ಏನಿದೆ, ಅದನ್ನು ನಾವು ದಯಮಾಡಿ ತೆಗೆದುಹಾಕಬೇಕು. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು ಅರವಿಂದ ಲಿಂಬಾವಳಿಯವರು ಅವರು ಕೂಡ ಅಖಿಲಭಾರತ ವಿದ್ಯಾರ್ಥಿ ಪರಿಷತ್‌ನಲ್ಲಿ ಇದ್ದು ಬಂದಿದ್ದಾರೆ. ಅವರು ವಿದ್ಯಾರ್ಥಿಯಾಗಿದ್ದಾಗಲೂ ಕೂಡ ಅವರು ಏನೆಂದು ನನಗೆ ಗೊತ್ತಿದೆ. ಅವರು ಒಳ್ಳೆಯ ಸಂಘಟನಾಕಾರರು ಆಗಿದ್ದರೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ವಿದ್ಯಾರ್ಥಿಗಳ ಬಗ್ಗೆ ಕಳಕಳಿ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ರಾಜಕಾರಣದಲ್ಲಿ ಬಳಸುವಂತಹ ಕೆಲಸವನ್ನೇನೂ ಮಾಡಿದ್ದಾರೆ, ಅದು ನಿಜವಾಗಲೂ ಕೂಡ ಬಹಳ ಕೆಟ್ಟ ಸಂಪ್ರದಾಯಕ್ಕೆ ನಾವು ಕೈಹಾಕಿದಂತಾಗುತ್ತದೆ. ಏಕೆಂದರೆ ನಾವು

ಒಂದು ಸಮೂಹವನ್ನು ಬಿಟ್ಟಿದ್ದೆವು. ಇವತ್ತಿನವರೆಗೆ ರಾಜಕಾರಣದಲ್ಲಿ ಎಲ್ಲರನ್ನೂ ಬಳಸಿಕೊಂಡಿದ್ದೇವೆ. ಇಷ್ಟು ದಿನ ವಿದ್ಯಾರ್ಥಿಗಳನ್ನು ಮಾತ್ರ ಬಿಟ್ಟಿದ್ದೆವು. ಇವತ್ತು ಕಾಲೇಜುಗಳಿಗೆ ಬಸ್ಸುಗಳನ್ನು ಕಳುಹಿಸಿ, ಊಟದ ವ್ಯವಸ್ಥೆ ಮಾಡಿ ಸರ್ಕಾರದ ದುಡ್ಡಿನಲ್ಲಿ ಅವರನ್ನು ಕರೆದುಕೊಂಡು ಬಂದು ನಾವು ಸಮಾವೇಶ ಮಾಡುತ್ತೇವೆ ಅಂದರೆ ಭಾರತೀಯ ಜನತಾ ಪಕ್ಷದ ಸರ್ಕಾರಕ್ಕೆ ಇವತ್ತು ಭಯವಾಗಿದೆ. ನೀವು ಕರೆದರೆ ಜನ ಬರುವುದಿಲ್ಲವೆನ್ನುವ ಭಯ ನಿಮಗಿದೆ. ಒಂದು ವೇಳೆ ನೀವು ಕರೆದರೆ ಜನ ಬರುವುದಿಲ್ಲವೆಂದು ಹೇಳಿ ನೀವು ಏನು ಮಾಡುತ್ತಿದ್ದೀರಿ ಎಂದರೆ ವೈಸ್ ಚಾನ್ಸಲರ್ ಹಾಗೂ ಪ್ರಿನ್ಸಿಪಾಲರುಗಳಿಗೆ ನೋಟಿಸ್ ಕೊಟ್ಟು compulsory ಆಗಿ ನೀವು ಹುಡುಗರನ್ನು ಕರೆದುಕೊಂಡು ಬರಬೇಕು ಎಂದು ಹೇಳಲಾಗಿದೆ. ಏಕೆ ನಿಮಗೆ ತಾಕತ್ತಿಲ್ಲವೇ? ಜನ ಕೂಡಿಸುವಂಥ ತಾಕತ್ತು. ಅದೇಕೆ ನೀವು ಹುಡುಗರನ್ನು ಕರೆದುಕೊಂಡು ಸಮಾವೇಶ ಮಾಡುತ್ತಿದ್ದೀರಿ. ನಿಮಗೆ ನಿಜವಾಗಲೂ ಭಯೋತ್ಪಾದನೆ ಬಗ್ಗೆ ಮಾತನಾಡಲಿಕ್ಕೆ ಸಾಮರ್ಥ್ಯ ಇದ್ದರೆ ಭಯೋತ್ಪಾದನೆಯನ್ನು ತಡೆಯಬೇಕೆಂಬ ಸಾಮರ್ಥ್ಯ ಇದ್ದರೆ ವಿದ್ಯಾರ್ಥಿಗಳಲ್ಲಿ ಭಯೋತ್ಪಾದನೆಯ ಬಗ್ಗೆ ತಿಳುವಳಿಕೆ ಕೊಡಬೇಕೆಂಬ ಸಾಮರ್ಥ್ಯ ಇದ್ದರೆ ಇವತ್ತು ನೀವೇನು ಹಣವನ್ನು ಬಿಡುಗಡೆ ಮಾಡುತ್ತಿದ್ದೀರಿ, ಆ ಉನ್ನತ ಶಿಕ್ಷಣ ಸಚಿವರು ತಾವು ಏನು ಇದ್ದೀರಿ, ತಾವೇನು ಬಜೆಟ್ ಮಂಡನೆ ಮಾಡಿದ್ದೀರಿ, ಅದಕ್ಕೆ ಹತ್ತು ಕೋಟಿ ರೂ.ಗಳನ್ನು ತೆಗೆದಿಡಿ. NSS,NCC,Scouts ಗೆ ಕೊಡಿ. ಒಂದು ವರ್ಷದಲ್ಲಿ ಅದರ ಪ್ರಯೋಗವನ್ನು ನೋಡಿ, ಅದು ಬಿಟ್ಟು ನಾವು ರಾಜಕಾರಣಿಗಳು ಹೋಗಿ ಅಲ್ಲಿ ಭಾಷಣವನ್ನು ಮಾಡುವಂಥ ಕೆಲಸವೇನು ಇರುವುದಿಲ್ಲ. ಅದಕ್ಕೆ ದಯಮಾಡಿ ಅದನ್ನು ನಿಲ್ಲಿಸುವಂಥ ಕೆಲಸವಾಗಬೇಕು. ಇದನ್ನು ಕಾಂಗ್ರೆಸ್ ಪಕ್ಷದವರಾದ ನಾವು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಮುಂದಿನ ದಿನಮಾನಗಳಲ್ಲಿ ಕೂಡ ನೀವು ರಾಜಕಾರಣಿಯ ಒಂದು ಕೆಲಸವನ್ನು ಮಾಡಲಿಕ್ಕೆ ವಿದ್ಯಾರ್ಥಿ ಸಮುದಾಯವನ್ನು ಉಪಯೋಗಿಸಿಕೊಂಡರೆ ಅದನ್ನು ನಾವು ಖಂಡಿಸುತ್ತೇವೆ, ಅದನ್ನು ನಿಲ್ಲಿಸಬೇಕೆಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೇ ಈ ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಪ್ರತಿಪಕ್ಷದ ನಾಯಕರು, ಉಪನಾಯಕರು ಸೇರಿ ಒಟ್ಟು 12 ಜನ ಸುದೀರ್ಘವಾಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ, ಯಾವುದೇ ಸರ್ಕಾರದ ಮೊದಲನೇ ಅದ್ಯ ಕರ್ತವ್ಯ ಕಾನೂನು ಸುವ್ಯವಸ್ಥೆಯನ್ನು ಸರಿಯಾಗಿ ನೋಡಿಕೊಳ್ಳಬೇಕು, ಜನರಿಗೆ ರಕ್ಷಣೆ ಕೊಡಬೇಕು ಇದಕ್ಕೆ ಮೊದಲನೇ ಆದ್ಯತೆ ಇರಬೇಕು. ಇದರ ಬಗ್ಗೆ ಎರಡು ಮಾತಿಲ್ಲ. ಬೆಳಗಾವಿಯ ಅಧಿವೇಶನದ ನಂತರ ಮಂಗಳೂರಿನಲ್ಲಿ ದಿನಾಂಕ: 24.1.2009

O-1053-99

ರಂದು ಪಬ್ ಮೇಲೆ ದಾಳಿ ನಡೆಯಿತು, 27 ಜನರನ್ನು ಬಂಧಿಸಿದೆವು, ಕೇರಳ ಶಾಸಕರ ಮಗಳು ಶೃತಿಯವರ ಮೇಲೆ ಏನು ಘಟನಾವಳಿಗಳು ನಡೆಯಿತು ಕೇವಲ 24 ಗಂಟೆಯಲ್ಲಿ ಅದಕ್ಕೆ ಸಂಬಂಧಪಟ್ಟಂತ ಆರು ಜನರನ್ನೂ ಬಂಧಿಸಿದೆವು, ಯಾವುದೇ ಘಟನಾವಳಿಗಳು ರಾಜ್ಯದಲ್ಲಿ ನಡೆದಾಗ ಅವರ ಮನಸ್ಸಿಗೆ ಅದು ಸರಿ ಕಾಣದಿದ್ದರೆ ಸರ್ಕಾರಕ್ಕೆ ದೂರು ಕೊಡಲಿಕ್ಕೆ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಆದರೆ ಕಾನೂನನ್ನು ಕೈಗೆ ತೆಗೆದುಕೊಂಡು ಈ ನಾಡಿನ ಶಾಂತಿ ಸುವ್ಯವಸ್ಥೆಯನ್ನು ಹದಗಡಿಸುವಂಥ ಒಂದು ಪ್ರಯತ್ನದಲ್ಲಿ ಯಾರೇ ತೊಡಗಿರಲಿ ಅವರ ಮೇಲೆ ಸೂಕ್ತವಾದ ಕ್ರಮವನ್ನು ನಾವು ತೆಗೆದುಕೊಳ್ಳಲ್ಲಿವೆಂದರೆ ನನ್ನ ಕಡೆಗೆ ಬೆರಳು ಮಾಡಿ ನೀವು ತೋರಿಸಬಹುದು. ಆದರೆ ಒಬ್ಬ ಪ್ರಾಮಾಣಿಕ ಗೃಹ ಸಚಿವ 24 ಗಂಟಗಳಲ್ಲಿ ಸ್ಥಳಗಳಿಗೆ ಉನ್ನತ ಪೊಲೀಸ್ ಅಧಿಕಾರಿಗಳ ಜೊತೆ ಹೋಗಿ ಎಲ್ಲರನ್ನು ಬಂಧಿಸಿ ಯಾವುದೇ ಅತಿರೇಕದ ಘಟನಾವಳಿಗಳು ಮರುಕಳಿಸದಂತೆ ಎಚ್ಚರವಹಿಸಿದ ಅಪರೂಪದ ಒಬ್ಬ ಗೃಹ ಸಚಿವರ ಮೇಲೆ ಬೆರಳು ಮಾಡಿ ತೋರಿಸುವಂಥದ್ದು ರಾಜೀನಾಮೆ ಕೇಳುವಂಥದ್ದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆಯನ್ನು ತಾವೇ ಹಾಕಿಕೊಳ್ಳಬೇಕು. ಹಿಂದೆ ಅಧಿಕಾರಾವಧಿಯಲ್ಲಿ ಏನೇನು, ಎಷ್ಟು ಘಟನಾವಳಿಗಳು ನಡೆಯಿತು ಎಂಬ ಬಗ್ಗೆ ವಿವರವನ್ನು ನಾನು ನಿಮಗೆ ಕೊಡುವವನಿದ್ದೇನೆ. ಆದರೆ ಒಂದು ಮಾತನ್ನು ನಾನು ನಿಮಗೆ ಹೇಳಲಿಚ್ಛೆಪಡುತ್ತೇನೆ. ಈ ರೀತಿ ಘಟನಾವಳಿಯಲ್ಲಿ ಭಾಗವಹಿಸಿರುವಂಥವರು ಅವರು ಯಾವುದೇ ಸಂಸ್ಥೆಗೆ ಸೇರಿರಲಿ, ನೀವೆಲ್ಲರೂ ಸಹಕರವನ್ನು ಕೊಟ್ಟರೆ ಗೂಂಡಾ ಕಾಯ್ದೆಯನ್ವಯ ಅವರನ್ನು ಬಂಧಿಸುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ, ಅವನು ಯಾವುದೇ ಸಂಘಟನೆಗೆ ಸೇರಿರಲಿ ಅದರ ಬಗ್ಗೆ ಯಾವುದೇ ಮುಲಾಜಿಗೆ ಒಳಗಾಗುವ ಪ್ರಶ್ನೆಯೇ ಇಲ್ಲ. ಆದರೆ ಅತ್ಯಂತ ವಿನಯದಿಂದ ಒಂದು ಮಾತನ್ನು ಹೇಳುತ್ತೇನೆ. ಶ್ರೀರಾಮಸೇನೆ ಎಂದು ಹೇಳಿಕೊಂಡು ಯಾರೂ ಕಾನೂನನ್ನು ಕೈಗೆತ್ತಿಕೊಂಡು ಗೊಂದಲ ಉಂಟು ಮಾಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಅವರಿಗೂ ನಮ್ಮ ಪಕ್ಷಕ್ಕೂ ನಮ್ಮ ಪರಿವಾರದ ಯಾವುದೇ ಸಂಘಟನೆಗೂ ಯಾವುದೇ ಸಂಬಂಧವಿಲ್ಲ, ಈ ಮಾತನ್ನು ನಾನು ಅತ್ಯಂತ ವಿನಯದಿಂದ ನಾನು ಗಮನಕ್ಕೆ ತರಬಯಸುತ್ತೇನೆ. ಈ ಹಿಂದೆ ಆಡಳಿತ ನಡೆಸಿದಂಥ ಸರ್ಕಾರಗಳು ಅವರ ಅವಧಿಯಲ್ಲಿ ಎಷ್ಟು ಮತೀಯ ಗಲಭೆಗಳು ಆಯಿತು. ಎಷ್ಟು ಜನ ರೈತರ ಮೇಲೆ ಗೋಲಿಬಾರ್ ಪ್ರಕರಣಗಳು ಆಯಿತು, ಆ ಸಂದರ್ಭದಲ್ಲಿ ಎಷ್ಟು ಜನ ಗೃಹ ಸಚಿವರು ರಾಜೀನಾಮೆಯನ್ನು ಕೊಟ್ಟರು, ಇದನ್ನು ಸಹ ನೀವು ಪ್ರಶ್ನೆಯನ್ನು ಹಾಕಿಕೊಂಡು ಉತ್ತರವನ್ನು ಹುಡುಕಿಕೊಳ್ಳಬೇಕಾಗಿದೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಗೋಲಿಬಾರ್ ಪ್ರಕರಣವೊಂದು ನಡೆಯಿತು. 16 ಜನ ಗಾಯಗೊಂಡರು, ಇಬ್ಬರು ಮೃತರಾದರು. ಶ್ರೀ ವೀರಪ್ಪ ಮೊಯಿಲಿಯವರು ಇದ್ದ ಕಾಲದಲ್ಲಿ 8 ಗೋಲಿಬಾರ್ ಪ್ರಕರಣ ನಡೆಯಿತು, 116 ಜನ ಗಾಯಗೊಂಡರು

16 ಜನ ಸಾವನ್ನಪ್ಪಿದರು, ಮಾನ್ಯ ಹಿರಿಯ ನಾಯಕರಾದಂಥ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ 5 ಗೋಲಿಬಾರ್ ಪ್ರಕರಣ ನಡೆಯಿತು, 139 ಜನ ಗಾಯಗೊಂಡರು, 13 ಜನರ ಹತ್ಯೆಯಾಯಿತು, ಶ್ರೀ ಜೆ.ಹೆಚ್. ಪಟೇಲ್‌ರವರ ಕಾಲದಲ್ಲಿ 12 ಗೋಲಿಬಾರ್ ಪ್ರಕರಣವಾಗಿ 52 ಜನ ಗಾಯಗೊಂಡು 39 ಜನರು ಪ್ರಾಣವನ್ನಪ್ಪಿದರು. ಶ್ರೀ ಎಸ್.ಎಂ. ಕೃಷ್ಣರವರ ಕಾಲದಲ್ಲಿ ನಾಲ್ಕು ಗೋಲಿಬಾರ್ ಪ್ರಕರಣ ಆಯಿತು, 81 ಜನ ಗಾಯಗೊಂಡರು, 8 ಜನ ಮೃತರಾದರು, ಶ್ರೀ ಧರ್ಮಸಿಂಗ್‌ರವರ ಕಾಲದಲ್ಲಿ ಒಂದು ಗೋಲಿಬಾರ್ ಪ್ರಕರಣವಾಯಿತು, 10 ಜನ ಗಾಯಗೊಂಡರು, 5 ಜನ ಪ್ರಾನವನ್ನಪ್ಪಿದರು, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯವರಾಗಿದ್ದ ಕಾಲದಲ್ಲಿ 5 ಗೋಲಿಬಾರ್ ಪ್ರಕರಣ ನಡೆಯಿತು, 254ಜನ ಗಾಯಾಳುಗಳಾದರು, 9 ಜನ ಸಾವನ್ನಪ್ಪಿದರು, ಅತ್ಯಂತ ವಿನಯದಿಂದ ಒಂದು ಮಾತನ್ನು ಹೇಳಬಯಸುತ್ತೇನೆ, ಬಿಜೆಪಿಯ ಸರ್ಕಾರದ ಅವಧಿಯಲ್ಲಿ ಕೋಮು ಗಲಭೆಗೆ ಸಂಬಂಧಪಟ್ಟಂತೆ ಯಾವುದೇ ಗೋಲಿಬಾರ್ ಪ್ರಕರಣ ಕಳೆದ 9 ತಿಂಗಳಲ್ಲಿ ನಡೆದಿಲ್ಲ. ಚರ್ಚ್ ಮೇಲಿನ ದಾಳಿ ಪ್ರಕರಣದಲ್ಲಿ 135 ಜನರು ಗಾಯಗೊಂಡಿರುತ್ತಾರೆ, ಆದರೆ ನಾನು ಸ್ವತ: ಗೃಹಮಂತ್ರಿ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಿಗೆ ಭೇಟಿ ಮಾಡಿ ಒಂದೆರಡು ದಿನಗಳಲ್ಲಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಯಿತು. ಸುಮಾರು 260 ಜನರನ್ನು ಬಂಧಿಸಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿದ್ದೇವೆ, ಈ ಬಗ್ಗೆ ನ್ಯಾಯಾಂಗ ತನಿಖೆಯಾಗುತ್ತಿದೆ, ನ್ಯಾಯಾಂಗ ತನಿಖೆ ವರದಿ ಬರುವುದರೊಳಗೆ ನಾನು ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ. ರೈತರ ಸಂಬಂಧಪಟ್ಟ ಗಲಭೆಗಳು, ಮಾನ್ಯ ಗುಂಡೂರಾಯರ ಕಾಲದಲ್ಲಿ 6 ಗೋಲಿಬಾರ್ ಪ್ರಕರಣಗಳು ಆಯಿತು, 342 ಜನಕ್ಕೆ ಗಾಯಗಳಾಯಿತು, 26 ಜನರು ಮೃತಪಟ್ಟರು, ಶ್ರೀ ವೀರೇಂದ್ರಪಾಟೀಲರ ಕಾಲದಲ್ಲಿ ಒಂದು ಗೋಲಿಬಾರ್ ಆಯಿತು, 10 ಜನರು ಗಾಯಗೊಂಡರು, 3 ಜನರು ಮೃತರಾದರು. ಶ್ರೀ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಮೂರು ಗೋಲಿಬಾರ್ ಪ್ರಕರಣವಾಯಿತು, 100 ಜನ ಗಾಯಗೊಂಡರು, 4 ಜನ ಮೃತಪಟ್ಟರು ಶ್ರೀ ಜೆ.ಹಚ್. ಪಟೇಲ್‌ರ ಕಾಲದಲ್ಲಿ ಒಂದು ಗೋಲಿಬಾರ್ ಪ್ರಕರಣ, 5 ಜನ ಗಾಯಗೊಂಡರು, ಒಬ್ಬರು ಮೃತರಾದರು. ಶ್ರೀ ಎಸ್.ಎಂ. ಕೃಷ್ಣರವರ ಕಾಲದಲ್ಲಿ ರೈತರ ಮೇಲೆ ಮೂರು ಗೋಲಿಬಾರ್ ಘಟನೆಗಳು ನಡೆಯಿತು, 86 ಜನ ಗಾಯಗೊಂಡರು, 9 ಜನ ಮೃತಪಟ್ಟರು, ನನ್ನ ಕಾಲಾವಧಿಯಲ್ಲಿ ಒಂದು ಗೋಲಿಬಾರ್ ಪ್ರಕರಣ ನಡೆದಿದೆ. 59 ಜನ ಗಾಯಾಳುಗಳಾದರು, ಹಾವೇರಿ ಬಗ್ಗೆ ನ್ಯಾಯಾಂಗ ತನಿಖೆಯಾಗುತ್ತಿದೆ, ಇಬ್ಬರು ಸಾವನ್ನಪ್ಪಿದರು, ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಕೇಳಿಲಿಚ್ಛೆಪಡುತ್ತೇನೆ. ಮಂಗಳೂರಿನಲ್ಲಿ ನಡೆದಂಥ ಪಬ್ ಮೇಲಿನ ದಾಳಿಯನ್ನು ಅದೇ ದಿನ ನಾವು ಖಂಡನೆ ಮಾಡಿದ್ದೇವೆ. ನಿಮಗೆ ನಾನೀಗಾಗಲೇ

ಸ್ಪಷ್ಟ ಮಾಡಿದ್ದೇನೆ. ಶ್ರೀರಾಮಸೇನೆಗೂ ಮತ್ತು ನಮ್ಮ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ. ದಾಳಿ ನಡೆದ ಕೆಲವೇ ನಿಮಿಷಗಳಲ್ಲಿ ಆರೋಪದಲ್ಲಿದ್ದಂಥ ಸುಭಾಷ್ ಪಡಿಲ್‌ನನ್ನು ದಸ್ತಗಿರಿ ಮಾಡಿದೆವು. ಎರಡು ದಿನಗಳೊಳಗಾಗಿ 27 ಜನರನ್ನು ಬಂಧಿಸಿ ನ್ಯಾಯಾಂಗ ಕಸ್ಟಡಿಗೆ ಕಳುಹಿಸಿದ್ದಾಯಿತು. ರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರನ್ನು ಬಂಧಿಸಿ ನ್ಯಾಯಾಂಗ ಕಸ್ಟಡಿಗೆ ಕಳುಹಿಸಿಕೊಟ್ಟೆವು. ಒಂದು ದುರ್ದೈವ ಎಂದರೆ ಈ ಘಟನಾವಳಿಗಳನ್ನು ತಾವು ಗಮನಿಸಿ, ಪ್ರತಿಯೊಂದು ಸಂದರ್ಭದಲ್ಲಿಯೂ ಕೇಂದ್ರ ಸರ್ಕಾರ ಯಾವ ರೀತಿ ಹಸ್ತಕ್ಷೇಪ ಮಾಡುತ್ತಿದೆ. ಹೇಳಿಕೆಗಳನ್ನು ಕೊಡುತ್ತಿದೆ, ಮತ್ತೆ ಕೇಂದ್ರದ ಸಚಿವರುಗಳೆ ಬಂದು ಹೋಗುವಂಥ ಪ್ರಯತ್ನವನ್ನು ನಡೆಸಿದ್ದಾರೆ. ಸ್ವತ: ಸಚಿವೆಯವರಾದ ಶ್ರೀಮತಿ ರೇಣುಕ ಚೌದರಿಯವರು ಈ ಪ್ರಕರಣವನ್ನೇ ತಾಲಿಬಾನ್ ಹಗರಣಗೊಳಿಸಿ ಅಗ್ಗದ ಪ್ರಚಾರವನ್ನು ಪಡೆದುಕೊಂಡರು. ಈ ದುರದೃಷ್ಟಕರ ಘಟನೆಯ ಬಗ್ಗೆ ನಾನು ದಿನಾಂಕ 09.02.2009 ರಂದು ಪ್ರಧಾನಮಂತ್ರಿಗಳಿಗೆ ನಿಮ್ಮ ಸಚಿವೆಯವರಿಗೆ ಈ ರೀತಿ ಕಾಪಾಡಲಿಕ್ಕೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟಿದ್ದೇವೆ. ಯಾರಿಗೂ ಸಹ ಕಾನೂನನ್ನು ಕೈಗೆತ್ತಿಕೊಳ್ಳಲು ಬಿಡುವುದಿಲ್ಲ. ಕೇರಳದ ಶಾಸಕರ ಪುತ್ರಿ ಶೃತಿಯವರ ಮೇಲೆ ನಡೆದ ಹಲ್ಲೆ. ಅದೇ ದಿನ ಕೇರಳದ ಮುಖ್ಯಮಂತ್ರಿಗಳೊಡನೆ ನಾನು ಮಾತನಾಡಿದೆ, ಅವರು ನನ್ನ ಜೊತೆ ಮಾತನಾಡಿದರು. ದಿನಾಂಕ 06.02.2009 ರಂದು ಮಂಜೇಶ್ವರ ವಿಧಾನಸಭಾ ಸದಸ್ಯರ ಪುತ್ರಿ ಶೃತಿ ಮಂಗಳೂರಿಗೆ ಬಸ್ಸಿನಲ್ಲಿ ಪ್ರಮಾಣ ಮಾಡುತ್ತಿರಬೇಕಾದರೆ ಅವರನ್ನು ಕೆಳಗಿಳಿಸಿ ಶೃತಿ ಹಾಗೂ ಅವರ ಸ್ನೇಹಿತರಾದ ಶಮೀಬ್ ಎಂಬುವವರ ಮೇಲೆ ಹಲ್ಲೆ ಮಾಡಿದ ಬಗ್ಗೆ ಪ್ರಕರಣ ದಾಖಲಾಗಿದೆ, ಆರು ಜನರನ್ನು ಬಂಧಿಸಿದ್ದೇವೆ. ಸ್ವತ: ಕೇರಳದ ಮುಖ್ಯಮಂತ್ರಿ ನಾವು ತೆಗೆದುಕೊಂಡ ಕ್ರಮದ ಬಗ್ಗೆ ಸಮಾಧಾನ ವ್ಯಕ್ತಪಡಿಸಿ ನನ್ನ ಜೊತೆ ಮಾತನಾಡಿದರು, ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಈ ರಾಜ್ಯದ ಮುಖ್ಯಮಂತ್ರಿಯಾಗಿ ಇಲ್ಲಿ ನಿಂತು ಈ ಘಟನೆಯ ಬಗ್ಗೆ ಸತ್ಯವನ್ನು ಬಗ್ಗೆ ಸತ್ಯವನ್ನು ಹೇಳಬೇಕು, ಈ ಘಟನೆಯಲ್ಲಿ ಬಂಧಿತರಾದವರ ಪೈಕಿ ಇಬ್ಬರು ಕೇರಳದವರು, ಇಬ್ಬರು ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಸಿ.ಪಿ.ಐ ಮತ್ತು ಸಿ.ಪಿ.ಎಂ. ಕಾರ್ಮಿಕ ಸಂಘಟನೆಗಳ ಸದಸ್ಯರೂ ಸಹ ಅವರಾಗಿದ್ದಾರೆ. ಈ ವಿಷಯದಲ್ಲಿ ಸಂಬಂಧಪಟ್ಟ ಆರೋಪಿಗಳನ್ನು ಬಂಧಿಸಿದ ತಕ್ಷಣ ನಾವು ತೆಗೆದುಕೊಂಡ ಕ್ರಮ ಹಾಗೂ ಅವರು ಯಾವ ಸಂಘಟನೆಗೆ ಸಂಬಂದಪಟ್ಟಂಥವರು ಎಂಬುದನ್ನು ಪತ್ರ ಬರೆದು ವಿವರವಾಗಿ ಕೇರಳದ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇನೆ. ಪ್ರಧಾನಿಯವರಿಗೂ ಸಹ ಎಲ್ಲಾ ಮಾಹಿತಿಯನ್ನು ತಳಿಸುವಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇಷ್ಟೇಲ್ಲಾ ಘಟನೆಗಳು ನಡೆದಾಗ ಈ ಘಟನೆಗಳ ಬಗ್ಗೆ ಸೂಕ್ತವಾದ ಒಂದು ಕ್ರಮವನ್ನು ತೆಗೆದುಕೊಂಡ ಮೇಲೂ ಸಹ ತಾವು ಈ ಸರ್ಕಾರದ ಮೇಲೆ ಒಂದು ಆರೋಪವನ್ನು ಮಾಡುವಂಥ ಪ್ರಯತ್ನ ಮಾಡುತ್ತಿದ್ದೀರೇನೋ, ಇದು ಎಷ್ಟರಮಟ್ಟಿಗೆ ಸರಿ? ಉದಾಹರಣೆಗೆ ಪ್ರೇಮಿಗಳ ದಿನ.

ಪ್ರೇಮಿಗಳ ದಿನವನ್ನು ಆಚರಿಸಬೇಕೋ ಬೇಡವೋ ಎನ್ನುವಂಥದ್ದು ಅವರವರಿಗೆ ಬಿಟ್ಟಂಥಾದ್ದು. ನಮ್ಮ ಸಂಸ್ಕೃತಿಗೆ ಅದು ಸರಿಹೊಂದುತ್ತದೆಯೋಇಲ್ಲವೋ ಅದು ಬೇರೆ ವಿಷಯ. ಆದರೆ ಇದನ್ನು ಯಾರೋ ಕೆಲವರು ಹೋಗಿ ತಡೆದು, ಅದನ್ನು ಅಡ್ಡಿಪಡಿಸಿ ನಾವು ಹೇಗೆ ಬೇಕಾದರೂ ಗೂಂಡಾಗಿರಿಯನ್ನು ನಡೆಸಬಹುದು ಎನ್ನುವ ಪ್ರವೃತ್ತಿ ಏನಿದೆ, ಇದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆ ಘಟನೆಯ ಹಿನ್ನೆಲೆಯಲ್ಲಿ ಇಡೀ ರಾಜ್ಯದಲ್ಲಿ ಬಂದೋಬಸ್ತು ಮಾಡಿದೆವು. ಯಾವುದೋ ಕಾರಣಕ್ಕಾಗಿ ಒಂದು ಸಣ್ಣ ಘಟನೆ ನಡೆಯಿತು, ಅದಕ್ಕೆ ನಡೆಯಿತು, ಅದಕ್ಕೆ ಕಟ್ಟೆಚ್ಚರವನ್ನು ನಾವು ವಹಿಸಿದೆವು. ಆಪ್ರೇಮಿಗಳ ದನಾಚರಣೆ ರಾಜ್ಯದಲ್ಲಿ ಶಾಂತಿಯುತವಾಗಿ ನಡೆಯಿತು. ಆದರೆ ಪಕ್ಕದ ಆಂಧ್ರಪ್ರದೇಶ, ದೆಹಲಿ, ಮಹಾರಾಷ್ಟ್ರ, ಹರಿಯಾಣ ಇತ್ಯಾದಿ ರಾಜ್ಯಗಳಲ್ಲಿ ಸಾಕಷ್ಟು ಅಹಿತಕರ ಘಟನೆಗಳು ನಡೆದಿದ್ದವು ಎನ್ನುವುದನ್ನು ತಾವು ಪತ್ರಿಕೆಯಲ್ಲಿ ಓದಿರುವಿರಿ. ಸ್ವಾತಂತ್ರ್ಯ ಬಂದ 59–60 ವರ್ಷಗಳ ನಂತರ ನಮ್ಮ ಕರ್ನಾಟದ ರಾಜ್ಯದಲ್ಲಿ ನಾವು ಆಡಳಿತಕ್ಕೆ ಬಂದಿರುವುದು ಕೇಲವ ಈ 9 ತಿಂಗಳ ಹಿಂದೆ ಮಾತ್ರ. ಇವತ್ತು ತಾವೇನಾದರೂ ಈ ರಾಜ್ಯವನ್ನು ಆಳಿದಂಥವರು ಈ ಅಪರಾಧ ರಹಿತ, ಸಾಮರಸ್ಯ ಭರಿತ ಒಂದು ಶೋಷಣೆ ಮುಕ್ತ ಒಂದು ಸಮಾಜವನ್ನು ಕಟ್ಟಿದ್ದರೆ ಈ ರೀತಿ ಜಾಗೃತಿಯನ್ನು ಮೂಡಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಿದ್ದರೆ ಇವತ್ತು ರಾಜ್ಯದಲ್ಲರುವಂಥ ಈ ವಾತಾವರಣ ಏನಿದೆ, ದೇಶದಲ್ಲಿ ಏನು ವಿಷಮತೆ, ವಿಚ್ಛಿದ್ರಕರವಾದ ವಾತಾವರಣ ಏನಿದೆ, ನಾವೆಲ್ಲ ಒಂದೇ ತಾಯಿಯ ಮಕ್ಕಳು ಎಂದು ಭಾವಿಸಿ ಬಾಳಿ ಬದುಕಲಾರದಂಥ ವಿಚಿತ್ರವಾದಂಥ ಸನ್ನಿವೇಶವನ್ನು ಸೃಷ್ಟಿ ಮಾಡುವಂಥ ಶಕ್ತಿಗಳ ಸಂಖ್ಯೆಯೇನು ಜಾಸ್ತಿಯಾಗುತ್ತಿದೆ. ಇದಕ್ಕೆ ಯಾರು ಹೊಣೆ? 8–9 ತಿಂಗಳ ಹಿಂದೆ ಅಧಿಕಾರಕ್ಕೆ ಬಂಧಂಥ ಭಾರತೀಯ ಜನತಾ ಪಕ್ಷದವರಾದ ನಾವು ಕಾರಣವೇ? ನಾನು ಒಂದು ಮಾತನ್ನು ಅತ್ಯಂತ ವಿನಯದಿಂದ ತಮ್ಮಲ್ಲಿ ಹೇಳಬಯಸತ್ತೇನೆ. ನೀವು ಒಂದು ಬೆರಳನ್ನು ನನ್ನ ಕಡೆ ತೋರಿಸಿದರೆ ಉಳಿದ ನಾಲ್ಕು ಬೆರಳುಗಳು ನಿಮ್ಮನ್ನು ನೋಡುತ್ತಿರುತ್ತದೆ. ಇದನ್ನು ಮರೆಯಬೇಡಿ, ನಾವಿಲ್ಲಿ ಇವತ್ತು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಕುಳಿತಿದ್ದೇವೆ ಅಂದರೆ ಇಷ್ಟು ವರ್ಷಗಳ ಆಡಳಿತದಲ್ಲಿ ಕಾನೂನು ಸುವ್ಯವಸ್ಥೆಯ ಬಗ್ಗೆ ಇರಬಹುದು, ರಾಜ್ಯದ ಅಭಿವೃದ್ಧಿಯ ಬಗ್ಗೆ ಇರಬಹುದು, ಯಾವುದೇ ಘಟನಾವಳಿಗಳನ್ನು ತೆಗೆದುಕೊಂಡಾಗ ನೀವು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದ್ದರೆ ನಾವು ಈಗ ಆಡಳಿತ ಪಕ್ಷದಲ್ಲಿ ಕುಳಿತುಕೊಳ್ಳುವ ಪ್ರಶ್ನೆಯೇ ಬರುತ್ತಿರಲಿಲ್ಲ. ಇದ್ದರ ಬಗ್ಗೆ ಕೂಡ ತಾವು ಶಾಂತವಾಗಿ ಯೋಚನೆ ಮಾಡಿ ಚಿಂತನೆಯನ್ನು ಮಾಡಿ. ಉದಾರಣೆಗೆ ಇವತ್ತು ಭಯೋತ್ಪಾದನೆಯ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ಭಯೋತ್ಪಾದನೆಯ ಬಗ್ಗೆ ಪ್ರಧಾನಮಂತ್ರಿಗಳು ಹಿಂದೆಂದೂ ಯಾವುದೇ ಸಂದರ್ಭದಲ್ಲಿ ನಮ್ಮನ್ನು ದೆಹಲಿಗೆ ಕರೆದಿರಲಿಲ್ಲ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಗೃಹಸಚಿವರು ಸೇರಿದಂತೆ ಒಂದು

ದಿವಸ ಚರ್ಚೆ ಮಾಡಿದರು. ಬಹುಶಃ ಯಾವುದೇ ತಪ್ಪಿಲ್ಲದ ಕೇಂದ್ರದ ಗೃಹಸಚಿವರನ್ನು ಆ ಮುಂಬೈ ಘಟನೆ ಹಿನ್ನಲೆಯಲ್ಲಿ ಮನೆಗೂ ಕಳುಹಿಸಲಾಯಿತು, ಆದರೆ ಘಟನಾವಳಿಗೂ ಅಲ್ಲಿಗೆ ಮುಕ್ತಾಯವಾಯಿತೆ? ಅಲ್ಲಿಗೆ ನಿಲ್ಲಲಿಲ್ಲ. ಪ್ರಧಾನಿಯವರ ಸೂಚನೆಯಂತೆ ನಮ್ಮ ಕರ್ತವ್ಯದ ದೃಷ್ಟಿಯಿಂದ ದೇಶದಲ್ಲೇ ಮೊದಲ ಬಾರಿಗೆ ಭಯೋತ್ಪಾದನೆಯ ವಿರುದ್ಧ ಜನಜಾಗೃತಿ ಅಭಿಯಾನವನ್ನು ನಮ್ಮ ಸರ್ಕಾರ ಮಾಡುವುದು ನಿಜ. ಆ ಕಾರ್ಯಕ್ರಮವನ್ನು ಮಾಡಿದ್ದೇವೆ. ತಮ್ಮ ಮನಸ್ಸಿನಲ್ಲಿ ಏನಿದಯೋ ಏನೋ ಗೊತ್ತಿಲ್ಲ. ಇದಕ್ಕೆ ಮೂರು ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡುದ್ದೆವು. 77.00 ಲಕ್ಷ ರೂ.ಗಳು ಇದುವರೆಗೆ ಖರ್ಚಾಗಿದೆ. ಟ್ರೆಜರಿಯಲ್ಲಿ ಬಿಲ್ಲು ಇದೆ, ಇನ್ನೂ ಒಂದೊಂದು 1/4ಕೋಟಿ ರೂ.ಗಳಷ್ಟು ಖರ್ಚಾಗಬಹುದು. ಆದರೆ ಒಂದು ಮಾತನ್ನು ನಿಮಗೆ ಹೇಳಬಯಸುತ್ತೇನೆ, ಅಲ್ಲಿ ಬಂದಂಥ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯನ್ನು ನೋಡಿ ಸಹಿಸಲಿಕ್ಕೆ ಆಗದೇನೇ ಎಲ್ಲೋ ಒಂದು ಕಡೆ ನಿಮಗೆ ಜ್ಞಾನೋದಯವಾಗಿರಬಹುದು. ಅದಕ್ಕೆ ಒಂದೆರಡು ಮೂರು ನೇರ ಉದಾಹರಣೆಯನ್ನು ನಿಮಗೆ ಕೊಡುತ್ತೇನೆ. ತಾಲ್ಲೂಕು ಮಟ್ಟದ ಕಾರ್ಯಕ್ರಮದಲ್ಲಿ, ತಾಲ್ಲೂಕು ಮಟ್ಟದ ಶಾಸಕರ ನೇತೃತ್ವದಲ್ಲಿ ಸಮಿತಿ ಮಾಡಿ ಅವರನ್ನು ಅಹ್ವಾನ ಮಾಡಿದ್ದೇವೆ. ಈಗ ತಾನೇ ಮಾತನಾಡಿದಂಥ ನಮ್ಮ ಹಿರಿಯ ಸ್ನೇಹಿತರುಗಳು, ಮಂಗಳೂರಿನಲ್ಲಿ ಖಾದರ್‌ರವರು ಪ್ರತ್ಯಕ್ಷವಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನರೇಂದ್ರಬಾಬು, ರೋಷನ್ ಬೇಗ್, ಧ್ರುವನಾರಾಯಣ್‌ರವರು ಬೆಂಗಳೂರು, ಕೊಳ್ಳೇಗಾಲ ಈ ಭಾಗದಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ನಿಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದೀರಿ. ಪ್ರತಿಪಕ್ಷದ ನಾಯಕರನ್ನು ಸಹ ಆಹ್ವಾನಿಸಿ, ಆಹ್ವಾನ ಪತ್ರಿಕೆಯನ್ನು ಮುದ್ರಿಸಿದ್ದೆವು. ನಿಮ್ಮ ಅಭಿಪ್ರಾಯಗಳನ್ನು ಆ ಸ್ಥಳೀಯ ಶಾಸಕರನ್ನು ಕರೆಯದೆ ಅಲ್ಲೇನಾದರೂ ಪಕ್ಷಪಾತ ಮಾಡಿದ್ದರೆ,.. ದಯಮಾಡಿ ಮಧ್ಯದಲ್ಲಿ ನೀವು ಒಂದು ಶಬ್ಧವನ್ನು ಮಾತನಾಡಿಬೇಡಿ. ಆಮೇಲೆ ನೀವು ಕ್ಲಾರಿಫಿಕೇಷನ್ ಕೇಳಿದರೆ ಆಮೇಲೆ ನನಗೆ ಗೊತ್ತಿರುವುದನ್ನು ಉತ್ತರಿಸಲಿಕ್ಕೆ ಪ್ರಯತ್ನಿಸುತ್ತೇನೆ. ನೀವು ಆ ಸಮಾರಂಭದಲ್ಲಿ ಬಂದು ನಿಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ ನಂತರ ಜ್ಞಾನೋದಯವಾಗಿ ಇವತ್ತು ನಿಮಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಸುಮಾರು 30 ರಿಂದ 40, 50 ಜನರು ಸೇರಿದ್ದರು. ಬೆಂಗಳೂರಿನಲ್ಲಿ ಒಂದು ಲಕ್ಷ ಜನರನ್ನು ಸೇರಿಸುತ್ತಿದ್ದೇವೆ. ಪ್ರತಿ ಪಕ್ಷದ ನಾಯಕರಾದ ಶ್ರೀ ಲಾಲ್‌ಕೃಷ್ಣ ಅದ್ವಾನಿಯವರನ್ನು ಆ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದೇವೆ. ಆ ಕಾರ್ಯಕ್ರಮಕ್ಕೆ ನಾನೇನು ಹೇಳುತ್ತೇನೆ. ಜಯಚಂದ್ರರವರೇ, ನೀವು ಸ್ವತಂತ್ರವಾಗಿ ಒಂದು ಸರ್ವೆ ಮಾಡಿಸಿ. ಈ ಭಯೋತ್ಪಾದನೆ ವಿರುದ್ಧ ಲಕ್ಷಾಂ:ತರ ಜನ ಯುವಕ ಯುವತಿಯರೇನು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಿ. ಈ ಕಾರ್ಯಕ್ರಮ ಮಾಡಿದ್ದನ್ನು ಸರಿಯೋ ತಪ್ಪೋ ಎಂಬುದರ ಬಗ್ಗೆ

ನೀವೇ ಒಂದು ಸರ್ವೆಯನ್ನು ಮಾಡಿಸಿ. ನನಗೆ ವಿಶ್ವಾಸವಿದೆ ನೂರಕ್ಕೆ ತೊಂಭತ್ತಕ್ಕೂ ಹೆಚ್ಚು ಯುವಕ ಯುವತಿಯರು ಈ ಕಾರ್ಯಕ್ರಮವನ್ನು ಮಾಡಿದ್ದು ಒಳ್ಳೆಯದಾಯಿತು, ಇವತ್ತು ನಮ್ಮ ದೇಶದಲ್ಲಿ ದೇಶಭಕ್ತಿಯನ್ನು ರಾಷ್ಟ್ರಭಕ್ತಿಯನ್ನು ಇವತ್ತಿನ ಪರಿಸ್ಥಿತಿಯಲ್ಲಿ ನಾವು ಯಾವ ರೀತಿ ವ್ಯಕ್ತಪಡಿಸಬೇಕೆಂಬ ಜಾಗೃತಿಯನ್ನು ಮೂಡಿಸಿದರು ಎಂಬ ಅಭಿಪ್ರಾಯ ಬರದೇ ಇದ್ದರೆ ಆಗ ನೀವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇದು ಒಂದು ಮಾತು. ಎರಡನೆಯದಾಗಿ ನೀವು ಯಾವ ಮಟ್ಟಕ್ಕೆ ಇಳಿಯಬೇಕಾಯಿತು, ಮೈಸೂರಿನಲ್ಲಿ ಪ್ರತ್ಯಕ್ಷವಾಗಿ 30–35 ಸಾವಿರ ಭಾಗವಹಿಸಿದ್ದರು. ಅಲ್ಲಿಗೆ ಬರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದ ಬಸ್ಸುಗಳ ಟೈರುಗಳನ್ನು ಅಲ್ಲಿಯ ಶಾಸಕರು ಬೆಂಬಲಿಗರೊಂದಿಗೆ ಸೇರಿ burst ಸೇರಿ ಮಾಡಿ ಗಾಳಿ ತೆಗೆದು ಕಛೇರಿಗೆ ನುಗ್ಗಿ ದಾಂಧಲೆ ಮಾಡಿರುವಂಥ ಘಟನಾವಳಿಗಳು ನಡೆದಿವೆ. ನಾನು ಹೇಳುತ್ತೇನೆ, ಮಂಗಳೂರಿನ ಪಬ್ ದಾಳಿಯನ್ನು ನಾವು ಖಂಡಿಸುತ್ತೇವೆ, ಬೇರೆ ರೀತಿಯ ಘಟನಾವಳಿಗಳನ್ನು ನಾವು ಖಂಡಿಸುತ್ತೇವೆ. ಆದರೆ ಕಾನೂನನ್ನು ಕೈಗೆ ತೆಗೆದುಕೊಳ್ಳುವುದು ಸರಿಯೇ? ನಾನು ಆಗಲೇ ಒಂದು ಸಲಹೆಯನ್ನು ಸಾರ್ವಜನಿಕ ಸಾರ್ವಜನಿಕ ಸಭೆಯ ಮೂಲಕ ಕೊಟ್ಟಿದ್ದೇನೆ. Suppose ನಾವು ಸರ್ಕಾರ ತೆಗೆದುಕೊಂಡ ಈ ಕಾರ್ಯಕ್ರಮ ದೇಶಭಕ್ತಿಯನ್ನು, ರಾಷ್ಟ್ರ ಭಕ್ತಿಯನ್ನು ಮೂಡಿಸುವಂಥ ಈ ಕಾರ್ಯಕ್ರಮ ನಡೆಸುವುದು ನಿಮಗಿಷ್ಟವಿಲ್ಲದಿದ್ದರೆ ಅದರ ವಿರುದ್ಧ ನೀವು ಆಂದೋಲನ ಮಾಡಿ. ನಿಮ್ಮದು ಯೂನಿಯನ್‌ಗಳಿವೆ, ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಘಟನೆಗಳಿವೆ, ಇದು ತಪ್ಪು, ಇದು ಸರಿ, ಇದನ್ನು ಹೇಳಿದ್ದಾರೆ, ಇದನ್ನು ಹೇಳಬಾರದಿತ್ತು, ಈ ರೀತಿ ಜಾಗೃತಿಯನ್ನು ಮೂಡಿಸಲಿಕ್ಕೆ ನಿಮಗೆ ಸ್ವಾತಂತ್ರ್ಯವಿದೆ ಅಥವಾ ಆ ಕಾರ್ಯಕ್ರಮಕ್ಕೆ ನಿಮ್ಮ ಎಲ್ಲಾ ಸಂಘಟನೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕಳುಹಿಸಿದರೆ ಅವರ ಅಭಿಪ್ರಾಯ ವ್ಯಕ್ತಪಡಿಸಲಿಕ್ಕೆ ಅವರಿಗೆ ಅವಕಾಶವಾಗುತ್ತಿತ್ತು. ಪತ್ರಿಕೋದ್ಯಮಿಗಳನ್ನು ಕರೆದಿದ್ದೇವೆ. ಸ್ವಾಮಿಗಳು ಬಂದಿದ್ದರು, ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಯುವಕರು ಬೆಳಿಗ್ಗೆ 9.30–10.00 ಗಂಟೆಗೆ ಬಂದರೆ ಕಾರ್ಯಕ್ರಮಗಳು ಮಧ್ಯಾಹ್ನ 2.30–3.00 ಗಂಟೆಯವರೆಗೆ ನಡೆದು ಒಬ್ಬರು ಆ ಕಡೆ ಈ ಕಡೆ ಕದಲದೆ ಕುಳಿತಿದ್ದರು, ಸ್ವಾತಂತ್ರ್ಯನಂತರ ಕರ್ನಾಟಕದಲ್ಲಿ ಇದು ದೈವಸದೃಶ್ಯ ಸ್ವಾಗತದ ರೀತಿಯಲ್ಲಿ ನಡೆದಂಥ ಒಂದು ಕಾರ್ಯಕ್ರಮವಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ವಿಷಯದ ಬಗ್ಗೆ ಯುವಕರಲ್ಲಿ ಜಾಗೃತಿ ಮೂಡಿಸುತ್ತಿದ್ದಂಥ ಒಂದು ಸಂದರ್ಭದಲ್ಲಿ ಇಲ್ಲಿ ಏನೋ ಬೆಣ್ಣೆಯಲ್ಲಿ ಕಲ್ಲು ಹುಡುಕುವಂಥ ಪ್ರಯತ್ನವನ್ನೇನು ಮಾಡುತ್ತಿದ್ದೀರಿ ಇದು ಎಷ್ಟರಮಟ್ಟಿಗೆ ಸರಿಯೆಂದು ನಾನು ನಿಮ್ಮನ್ನು ಕೇಳಲಿಚ್ಛೆಪಡುತ್ತೇನೆ. ಹಿಂದೆ ಇಂಥ ಘಟನಾವಳಿಗಳು ಸಾಕಷ್ಟು ನಡೆದಿವೆ. ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೆ ಯುವ ಸಮುದಾಯದಲ್ಲಿ, ಜನರಲ್ಲಿ, ದೇಶಭಕ್ತಿ, ರಾಷ್ಟ್ರಭಕ್ತಿಯನ್ನು ಉಂಟು

ಮಾಡುವ ಪ್ರಯತ್ನ ಮಾಡಿದ್ದರೆ, ಇವತ್ತಿನ ದೇಶದ ದಯನೀಯ ಸ್ಥಿತಿ ಬರುತ್ತಾ ಇತ್ತಾ? ಈ ಭಯೋತ್ಪಾದನೆ ಬಗ್ಗೆ ಇಡೀ ಜಗತ್ತು ಅಲ್ಲೋಲ ಕಲ್ಲೋಲ ಆಗಿರುವುದು ನಿಜವಲ್ಲವೇ? ಭಯೋತ್ಪಾದನೆಯನ್ನು ನಿಗ್ರಹ ಮಾಡುವುದಕ್ಕೋಸ್ಕರ ಯುವಕರಲ್ಲಿ, ಯುವ ಪೀಳಿಗೆಯಲ್ಲಿ ದೇಶಭಕ್ತಿಯ ಭಾವನೆಗಳನ್ನು ಮೂಡಿಸುವ ಅಗತ್ಯವಿದೆ ಅಲ್ಲವೇ? ಇದುವರೆಗೆ ಸುಮಾರು ಏಳೂವರೆ ಲಕ್ಷ ಸೋಮಣ್ಣನವರೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಯುವಕರು ಭಾಗವಹಿಸಿದ್ದಾರೆ. ನನಗೆ ಗೊತ್ತಿರುವ ಪ್ರಕಾರ ಸ್ವಾತಂತ್ರ್ಯ ನಂತರ ಇತ್ತೀಚಿನ ವರ್ಷಗಳಲ್ಲಿ ಇಷ್ಟು ದೊಡ್ಡಪ್ರಮಾಣದಲ್ಲಿ ಕೇವಲ ಆರೇಳು ಕಾರ್ಯಕ್ರಮದಲ್ಲಿ ಈ ರೀತಿ.. . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸೋಮಣ್ಣನವರಿಗೇ ಏಕೆ ಹೇಳುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ: ಸೋಮಣ್ಣನವರನ್ನೇ ಏಕೆ ಹೇಳುತ್ತಿದ್ದೇನೆಂದರೆ, ಅವರು ನಿಮ್ಮ ಪಕ್ಷದಲ್ಲಿದ್ದರೂ ಸಹಾ.. . .

(ಗದ್ದಲ)

ಶ್ರೀ ಬಿ.ಸ್. ಯಡಿಯೂರಪ್ಪ: ಸೋಮಣ್ಣನವರು ಬೇಡ. ಬೇಕಾದರೆ, ಮಾನ್ಯ ಶ್ರೀನಿವಾಸ ಪ್ರಸಾದ್ ಅವರು ಹೇಳಲಿ, ಧ್ರುವನಾರಾಯಣ್ ಅವರು ಹೇಳಲಿ, ಏಕೆಂದರೆ, ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ನಿಮ್ಮನ್ನು ಆಹ್ವಾನಿಸದೇ ಇದ್ದಿದ್ದರೆ, ಕಾರ್ಯಕ್ರಮದಲ್ಲಿ ನಿಮಗೆಏನಾದರೂ ಮಾತನಾಡಬೇಕು, ಮಾತನಾಡಬಾರದು ಎಂದು ಯಾರಾದರೂ ಒತ್ತಾಯ ಮಾಡಿದ್ದರೆ, ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅಡ್ಡಿ ಮಾಡಿದ್ದರೆ, ಅಲ್ಲಿ ಕೇವಲ ವಿದ್ಯಾರ್ಥಿಪರಿಷತ್ತಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬರಬಹುದೆಂದು ನಾವು ಹೇಳಿದ್ದರೆ, ನೀವು ನಮ್ಮನ್ನು objection ಮಾಡಿ. ಆದರೆ, ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಕರೆದು, ಎಲ್ಲಾ ಶಾಲಾ ಕಾಲೇಜಿನ Principal ಗಳನ್ನು ಇಂಥ ಭಯೋತ್ಪಾದನೆ ವಿರುದ್ಧ ಜಾಗೃತಿ ಮೂಡಿಸಲು ಶಾಲಾ ಕಾಲೇಜುಗಳನ್ನು ಬಂದ್ ಮಾಡಿ ಕರೆದುಕೊಂಡು ಬರಬೇಕೆಂದು ಹೇಳುವುದು, Vice-chancellor ಇರಬಹುದು, ನಮ್ಮ ಚುನಾಯಿತ ಪ್ರತಿನಿಧಿಗಳ ಕರ್ತವ್ಯ. ನಾವು ಇದನ್ನು ನಿಲ್ಲಿಸುವುದಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ದೇಶಭಕ್ತಿ ಮೂಡಿಸುವುದಕ್ಕೋಸ್ಕರ ಕಾರ್ಯಕ್ರಮವನ್ನು ರೂಪಿಸುತ್ತೇವೆ. ಯಾರು ಬೇಕಾದರೂ ಒಪ್ಪಬಹುದು. ಯಾರು ಬೇಕಾದರೂ ವಿರೋಧ ಮಾಡಬಹುದು. ಯಾರೋ ನಮ್ಮ ಸ್ನೇಹಿತರು ಮಾತನಾಡಿದರು, ಇವತ್ತು ಈ ಅಭಿಯಾನದಲ್ಲಿ ಮುಸ್ಲಿಂ ಮೌಲಿಗಳು, ಧರ್ಮ ಗುರುಗಳು, ಕ್ರಿಶ್ಚಿಯನ್ ಪಾದ್ರಿಗಳು ಮತ್ತು ಹಿಂದು ಧರ್ಮಕ್ಕೆ ಸಂಬಂಧಪಟ್ಟ ಪೂಜ್ಯರು ಭಾಗವಹಿಸಿದ್ದಾರೆ. ಬೇಕಾದರೆ, ಸದಸ್ಯರು ಅದ್ಯಕ್ಷರ ಕೊಠಡಿಗೆ ಬಂದರೆ, ವಿಡಿಯೋ ಕ್ಯಾಸೆಟ್‌ಟನ್ನು ತೋರಿಸುತ್ತೇನೆ. ಸಾವಿರಾರು ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಹೆಣ್ಣು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ನೀವು ನೋಡಿ, ಅಂದರೆ, ಎಲ್ಲೋ ಒಂದು ಕಡೆ ನಿಮಗೆ ಈ ಅಲ್ಪಸಂಖ್ಯಾತರು ನಮ್ಮ ಹತ್ತಿರ

ಬರುತ್ತಿದ್ದಾರೆ ಎನ್ನುವ ಭಯವೇ ಅಥವಾ ಇಷ್ಟು ವರ್ಷ ಈ ಸಮಾಜವನ್ನು ಹೊಡೆದು vote bank ರಾಜಕಾರಣ ಮಾಡಿ ದೂರ ಇರಿಸಿದವರು ನೀವು, ಇವತ್ತು ನಾವು ಒಟ್ಟುಗೂಡಿಸುತ್ತಿದ್ದೇವೆ ಎನ್ನುವ ಗಾಬರಿಯೇ ನಿಮಗೆ? ಅಥವಾ deposit ಕಳೆದುಕೊಳ್ಳುತ್ತಿದ್ದ ಬಿ.ಜೆ.ಪಿ ಅವರು ಇಷ್ಟು ದೊಡ್ಡಪ್ರಮಾಣದಲ್ಲಿ ಗೆಲ್ಲುತ್ತಿದ್ದಾರೆ, ನಾಳೆ ಲೋಕಸಭೆ ಚುನಾವಣೆಯಲ್ಲಿ 28ರಲ್ಲಿ ನಾವು ಮೂರ್‍ನಾಲ್ಕು ಸ್ಥಾನವನ್ನಾದರೂ ಗೆಲ್ಲುವುದಕ್ಕಾಗುತ್ತಿಲ್ಲ ಎನ್ನುವ ಆತಂಕ ನಿಮ್ಮನ್ನು ಈಗಲೇ ಕಾಡಿಸುತ್ತಿದೆಯೇ? ಯಾವ ಕಾರಣದಿಂದ ನೀವು ವಿರೋಧ ಮಾಡುತ್ತಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅತ್ಯಂತ ಪ್ರಮಾಣಿಕವಾಗಿ ನಾನು ಹೇಳುತ್ತಿದ್ದೇನೆ. ಇದರಿಂದ ನಿಮಗೆ ಯಾವುದೇ ರೀತಿಯ ಲಾಭವಾಗುವುದಿಲ್ಲ. ಖಂಡಿತ ಲಾಭವಾಗುವುದಿಲ್ಲ. ಅದರ ಬದಲಿಗೆ, ನಿಮ್ಮನ್ನು ಕಾರ್ಯಕ್ರಮಕ್ಕೆ ಕರೆದಾಗ, ಬೇರೆ ಶಾಸಕರು ಬಂದ ರೀತಿಯಲ್ಲಿ ಪ್ರತಿ ಪಕ್ಷದ ನಾಯಕರೂ ಬಂದ ಅವರ ಭಾವನೆಗಳನ್ನು ವ್ಯಕ್ತಪಡಿಸಿದರು. ಇದು ಸರಿ, ಇದು ತಪ್ಪು, ಇದು ಸರಿಯಲ್ಲ, ಇದು ಸರಿ, ಈ ದೇಶದ ಯುವ ಪೀಳಿಗೆಯಲ್ಲಿ ಈ ಭಾವನೆಯನ್ನು ಮೂಡಿಸದೇ ಇವತ್ತು ಸುಮಾರು 60 ರಿಂದ 70 ವರ್ಷ ದಾಟಿದ ಅಜ್ಜ-ಅಜ್ಜಿಯಂದಿರು ಈ ಹೋರಾಟದಲ್ಲಿ ಭಾಗವಹಿಸಲು ಸಾಧ್ಯವೇ, ಯೋಚನೆ ಮಾಡಿ. ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಯಾವ ರೀತಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ನರು ಒಂದಾಗಿ ಹೋರಾಟವನ್ನು ಮಾಡಿದರೋ, ಎಲ್ಲಾ ಜಾತಿ, ಧರ್ಮ, ಭೇದ-ಭಾವನೆಯನ್ನು ಮರೆತು, ದೇಶಪ್ರೇಮದ ಒಂದು ಭಾವನೆಯನ್ನು ಪ್ರೇರೇಪಣೆ ಮಾಡಿದರೋ, ಅಂತಹ ಸ್ವಾಮಿ ವಿವೇಕಾನಂದರ ಧೀರೋತ್ತಾನ ಭಾರತದ ಒಂದು ಕನಸು ಏನಿತ್ತು, ಆ ಕನಸನ್ನು ನನಸು ಮಾಡಲು ನೀವು ಬರಬೇಕೆಂದು ಹೇಳಿ, ಯುವಕ ಯುವತಿಯರಲ್ಲಿ ರಾಷ್ಟ್ರ ಭಕ್ತಿಯನ್ನು, ನಮ್ಮ ಭಾರತೀಯ ಸಂಸ್ಕೃತಿ ಬಗ್ಗೆ ಜಾಗೃತಿ ಮೂಡಿಸುವಂತಹ, ದೇಶದ ಭಾವೈಕ್ಯತೆಯನ್ನು ಕಾಪಾಡುವ ಪ್ರಯತ್ನದ ಬಗ್ಗೆ ನೀವು ಬೆಟ್ಟು ಮಾಡಿ ತೋರಿಸುತ್ತೀರೆಂದರೆ, ಎಲ್ಲೋ ಒಂದು ಕಡೆ ನಿಮ್ಮ ಮನಸ್ಸಿನಲ್ಲಿ ಭಾರತೀಯ ಜನತಾ ಪಕ್ಷದ ಪರವಾಗಿ ಜನ ಹೋಗುತ್ತಿದ್ದಾರೆ ಎನ್ನುವ ಕಲ್ಪನೆಯನ್ನು ನೀವು ಇಟ್ಟುಕೊಂಡು, ಮುಂದೆ ಬರುವ ದಿವಸಗಳಲ್ಲಿ ಹತ್ತಾರು ವರ್ಷಗಳವರೆಗೆ ನಾವು ವಿರೋಧಪಕ್ಷದಲ್ಲೇ ಇರಬೇಕಾಗುತ್ತದೆ ಎನ್ನುವ ಗಾಬರಿಯಿಂದ ಈ ರೀತಿ ಏನಾದರೂ ಹೇಳಿಕೆಗಳನ್ನು ಕೊಡುವ ಪ್ರಯತ್ನ ಮಾಡುತ್ತಿದ್ದರೆ, ದಯಮಾಡಿ ಮಾಡಬೇಡಿ. ಮುಂದೆ ಬರುವ ದಿವಸಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ನಾವೇನು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ, ಆ ಕಾರ್ಯಕ್ರಮದಲ್ಲಿ ನೀವು ದೊಡ್ಡಪ್ರಮಾಣದಲ್ಲಿ ಬಂದು ಭಾಗವಹಿಸಬೇಕು. ಸಹಕರಿಸಬೇಕು. ಅದು ಅತ್ಯಂತ ಯಶಸ್ವಿಯಾಗುವುದಕ್ಕೆ ನೀವು ಅವಕಾಶ ಮಾಡಿಕೊಡಬೇಕು.

ಮಾನ್ಯ ಅಧ್ಯಕ್ಷರೆ, ಪೊಲೀಸ್ ಅಧಿಕಾರಿಗಳಿಗೆ ಈ ಮನೆಯ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಉದಾಹರಣೆಗೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಹುಬ್ಬಳ್ಳಿ ನ್ಯಾಯಾಲಯದಲ್ಲಿ ಬಾಂಬ್ ಸ್ಫೋಟವಾಯಿತು. ನಮ್ಮ

ಸರ್ಕಾರ ಬಂದ ಮೇಲೆ ಈ ಘಟನೆಯನ್ನು ಪತ್ತೆ ಹಚ್ಚಿ ಐದು ಜನ ಅಪರಾಧಿಗಳನ್ನು ಬಂಧಿಸಿದ್ದೇವೆ. ಈಗ ಅವರು ನ್ಯಾಯಾಲಯದ ಕಸ್ಟಡಿಯಲ್ಲಿದ್ದಾರೆ. ಜುಲೈ 2008ರಲ್ಲಿ ಬೆಂಗಳೂರಿನಲ್ಲಿ ನಡೆದ ಸರಣಿ ಸ್ಫೋಟಕ್ಕೆ ಸಂಬಂಧಿಸಿದಂತೆ, ಒಂಭತ್ತು ಅಪರಾಧಿಗಳನ್ನು ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ಪೊಲೀಸರು ಪತ್ತೆಹಚ್ಚಿ arrest ಮಾಡುವ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಚರ್ಚ್ ಧಾಳಿಗೆ ಸಂಬಂಧಿಸಿದಂತೆ, 250 ಜನರನ್ನು ಬಂಧಿಸಿದ್ದೇವೆ. Retired Judge ಅವರಿಂದ ನ್ಯಾಯಾಂಗ ತನಿಖೆ ಮಾಡಿಸುತ್ತಿದ್ದೇವೆ. ಪಬ್ ದಾಳಿಗೆ ಸಂಬಂಧಿಸಿದಂತೆ 27 ಜನರನ್ನು ಬಂಧಿಸಿದ್ದೇವೆ. ಕೇರಳ ಶಾಸಕ ಪುತ್ರಿ ಘಟನೆಗೆ ಸಂಬಂಧಿಸಿದಂತೆ ಆರು ಜನರನ್ನು ಬಂಧಿಸಿದ್ದೇವೆ. ನಕ್ಸಲ್ ಚಟುವಟಿಕೆಯನ್ನು ಹತ್ತಿಕ್ಕಲು Anti Naxal Force ಅನ್ನು ರಚನೆ ಮಾಡಿದ್ದೇವೆ. ADG, Internal Security ಇವರ ನೇತೃತ್ವದಲ್ಲಿ ಈ ಪಡೆ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಹತ್ತು ವಿಶೇಷ ದಳಗಳನ್ನು ರಚನೆ ಮಾಡಿ ಕ್ಯಾಂಪ್‌ಗಳನ್ನು ಸ್ಥಾಪನೆ ಮಾಡಿದ್ದೇವೆ. ಪ್ರತಿ ಕ್ಯಾಂಪ್‌ನಲ್ಲೂ 50 ರಿಂದ 80 ಜನ ಪೊಲೀಸ್ ಸಿಬ್ಬಂದಿ ಇದ್ದಾರೆ. ಇವರು combing operation ಮಾಡುತ್ತಿದ್ದಾರೆ. ಕಳೆದ ಎರಡು ವಾರಗಳಲ್ಲಿ ಎರಡು ಹೊಸ ಪೊಲೀಸ್ ಸ್ಟೇಷನ್‌ಗಳನ್ನು ಆ ಭಾಗದಲ್ಲಿ ತೆಗೆದಿದ್ದೇವೆ. ನಕ್ಸಲ್ ವಾದಿಗಳ ವಿರುದ್ಧ ನಿರಂತರ ಅದನ್ನು ಹದ್ದುಬಸ್ತಿನಲ್ಲಿಡಲು ಪ್ರಯತ್ನ ನಡೆಯುತ್ತಿದೆ. ಪೊಲೀಸ್ ಸಿಬ್ಬಂದಿಗೆ ನಕ್ಸಲ್‌ರ ವಿರುದ್ಧ ಕಾರ್ಯಾಚರಣೆ ಮಾಡುವ ಬಗ್ಗೆ ವಿಶೇಷ ತರಬೇತಿ ಕೊಡುವ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಕಳೆದ ಆರು ತಿಂಗಳಿನಲ್ಲಿ ಆರು Coastal Security Police Stationಗಳನ್ನು ಆರಂಭ ಮಾಡಿದ್ದೇವೆ. ಈ ರೀತಿ ಒಬ್ಬ ಗೃಹಸಚಿರು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರೆ, ಅಂತಹವರ ರಾಜೀನಾಮೆ ಕೇಳುವುದು ಎಷ್ಟರ ಮಟ್ಟಿಗೆ ಸರಿ? ರಾಜಕಾರಣ ಮಾಡೋಣ, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಇದೇ ವಿಷಯವನ್ನು ಚರ್ಚೆ ಮಾಡೋಣ. ನಾಳೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಏನು ಚರ್ಚೆಯಾಗಬೇಕು, ಭಯೋತ್ಪಾದನೆಯ ಪರ ಯಾರಿದ್ದಾರೆ? ಭಯೋತ್ಪಾದನೆ ವಿರುದ್ಧ ಯಾರಿದ್ದಾರೆ? ಭಯೋತ್ಪಾದನೆಗೆ ಪ್ರೇರಣೆ ಕೊಡುವವರು ಯಾರು? ಭಯೋತ್ಪಾದನೆಯನ್ನು ನಿಗ್ರಹ ಮಾಡಲು ಹೋದವರು ಯಾರು? ಅದು ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು. ಈ ದೇಶದ ಯುವಕರಲ್ಲಿ ದೇಶಭಕ್ತಿಯನ್ನು ನಿರ್ಮಾಣ ಮಾಡುವುದು ತಪ್ಪೋ, ಸರಿಯೋ, ಇದರ ಆಧಾರದ ಮೇಲೆ ಚುನಾವಣೆ ನಡೆಯಲಿ, ಆದುದರಿಂದ ನಾನು ನಿಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುವಂಥದ್ದು, ಎಂತಹ ಕಾಲ ಸ್ವಾಮಿ, ಏನೋ ನಿಮ್ಮ ಪೂರ್ವಜನ್ಮದ ಪುಣ್ಯ ಫಲ, ಮಹಾತ್ಮಾ ಗಾಂಧೀಜಿಯವರು, ಜವಾಹರ್ ಲಾಲ್ ನೆಹರು, ಇಂದಿರಾ ಗಾಂಧಿ ಅವರ ಹೆಸರಿನಲ್ಲಿ ಏನು ಇಮ್ಮ ದೀಪ ಉರಿಯುತ್ತಿತ್ತು, ಆ ಎಣ್ಣೆಯೂ ಖಾಲಿಯಾಗಿದೆ, ಬತ್ತಿಯೂ ಮುಗಿಯುತ್ತಿದೆ. ದಯಮಾಡಿ

ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅತ್ಯಂತ ವಿನಯದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅದು ನಮಗೂ ಅನ್ವಯವಾಗುತ್ತದೆ. ಜನ ಅತ್ಯಂತ ಪ್ರಾಮಾಣಿಕವಾಗಿ ಎಲ್ಲವನ್ನೂ ನೋಡುತ್ತಾರೆ. ಒಂದು ಮಗು ಗಾಳಿಪಟ ಬಿಡಬೇಕಾದರೆ, ಸುಂಟರ ಗಾಳಿ ಅಪ್ಪಳಿಸಿತು. ಹಾಗೆಯೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಮ್ಮನ್ನು ಗಾಳಿಪಟದಂತೆ ಜನ ಹಾರಿಸಿದರು ನೀವು ಹಾರುತ್ತಿದ್ದಿರಿ, ಮೈ ಮರೆತಿರಿ ಕುಂಬಳಕಾಯಿ ಹೊಡೆಯುವ ಹಾಗೆ ನೀವು ಹೊಡೆದು ಹೋದಿರಿ, ನಾಳೆ ನಮ್ಮ ಸ್ಥಿತಿಯೂ ಹಾಗೇಯೇ ಬರಬಹುದು. ನಿಮ್ಮ ಅನುಭವದಿಂದ ನಮ್ಮ ಶಾಸಕರು ಪಾಠ ಕಲಿಯಬೇಕಾಗಿದೆ. ಇದಕ್ಕೆ ಯಾರು ಹೊರತಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಒಂದು ನಿಮಿಷ ಧ್ರುವನಾರಾಯಣ್, ನೀವು ನಮ್ಮ ಜೊತೆಯಲ್ಲಿಯೇ ನಮ್ಮ ಗರಡಿಯಲ್ಲಿ ಬೆಳೆದವರು ಕುಳಿತುಕೊಳ್ಳಿ, ನೀವು ಮಾತನಾಡಿ, ಅತ್ಯಂತ ವಿನಯದಿಂದ ನಾನು ನಿಮ್ಮ ಮಾತುಗಳನ್ನು ಕೇಳಿದ್ದೇನೆ. ನಾನು ಏಕೆ ನಿಮಗೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಿವಿ ಮಾತನ್ನು ಸದನದ ಒಳಗಡೆ ವೇದಿಕೆಯ ಮೇಲೆ ನಿಂತು ಮಾತನಾಡಬಾರದು. ಇನ್ನಾದರೂ ಸಹಾ ಪ್ರತಿ ಪಕ್ಷವಾಗಿರುವ ಸ್ಥಾನವನ್ನು ಆ ಜೆ.ಡಿ.ಎಸ್. ನವರಿಗೆ ಬಿಟ್ಟುಕೊಡುವಂತಹ ಕಾಲ ಬರುತ್ತೋ ಏನೋ ಎನ್ನುವ ಭಯ ನನಗೆ, ಅದಕ್ಕೋಸ್ಕರ ಇನ್ನಾದರೂ ನೀವು ಜಾಗೃತವಾಗಿರಿ, ಎನ್ನುವಂಥದ್ದು ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ನೋಡಿದರೆ, ನಿಮ್ಮ ಪರಿಸ್ಥಿತಿ ಎಲ್ಲಿಗೆ ಬಂದಿದೆ ನೋಡಿ, ಭಾರತೀಯ ಜನತಾ ಪಕ್ಷದ ಬೆಳವಣಿಗೆಯನ್ನು ತಡೆಯುವುದಕ್ಕೆ ಪ್ರತಿ ಪಕ್ಷದ ನಾಯಕರನ್ನೇ ಬದಲಾಯಿಸಿದಿರಿ. ಇಷ್ಟು ವರ್ಷ ಯಾರು ಶ್ರಮ ಹಾಕಿ, ಬೆವರು ಸುರಿಸಿ ಈ ಸಂಘಟನೆಯನ್ನು ಕಟ್ಟಿದರೋ, ಆ ಪರಿಶಿಷ್ಟ ಜನಾಂಗಕ್ಕೆ ಸೇರಿದ ನಾಯಕನನ್ನೇ ಅದಲು ಬದಲು ಮಾಡುವ ಪ್ರಯತ್ನ ಮಾಡಿದಿರಿ. ಅದು ನಿಮ್ಮ ಪಕ್ಷಕ್ಕೆ ಬಿಟ್ಟಿದ್ದು. ನಾನು ಪ್ರಯತ್ನ ಮಾಡುವುದಿಲ್ಲ. ನಾನು ಮಧ್ಯಪ್ರವೇಶ ಮಾಡುವುದಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಅನಾವಶ್ಯಕವಾದ ವಿಚಾರಗಳನ್ನು ಪ್ರಸ್ತಾಪಿಸಬಾರದು. ಅದನ್ನು ಮಾಡಿದರೆ ನಿಮಗೇ ಅದು rebound ಆಗುತ್ತದೆ. ಕುಮಾರಸ್ವಾಮಿಯವರು ಏನು ಹೇಳಿದ್ದರು, ನೀವು ಕೆಲವು ಜನರನ್ನು ತೆಗೆದುಕೊಂಡು ಹೋಗಿ ಮಂತ್ರಿಯನ್ನಾದರೂ ಮಾಡಿ ಎನ್ನುವ ಮಾತು ಏನು ಬಂದಿತ್ತು, ಹಾಗೆ ಬರುತ್ತದೆ, ನಾನು ಇರುತ್ತೇನೋ, ಬಿಡುತ್ತೇನೋ, ಇದು ನನಗೆ ಬಿಟ್ಟ ವಿಚಾರ, ನನ್ನನ್ನು ತೆಗೆಯುತ್ತಾರೋ, ಬಿಡುತ್ತಾರೋ ಎನ್ನುವುದು ನಮ್ಮ ಹೈಕಮಾಂಡ್‌ಗೆ ಬಿಟ್ಟ ವಿಚಾರ ತೆಗೆದ ನಂತರ ನೋಡೋಣ, ನಾನು ಈಗ ಇದ್ದೇನೆ. ಅದಕ್ಕೆ ಉತ್ತರವನ್ನು ಕೊಡುತ್ತೇನೆ. ದಯವಿಟ್ಟು controversial ಆಗಿರುವ ವಿಚಾರಗಳನ್ನು ಮಾತನಾಡಬೇಡಿ. ಅದು ನಿಮಗೂ ಅನ್ವಯಿಸುತ್ತದೆ ಎಂಬ ಮಾತನ್ನು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಸಿ.ಬಾಲಕೃಷ್ಣರವರು ಮಾತನಾಡಲು ಎದ್ದು ನಿಂತರು)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪ್ರತಿಪಕ್ಷದನಾಯಕರಿಗೆ...ಬಾಲಣ್ಣ, ನೀನೇಕೆ ಮಧ್ಯದಲ್ಲಿ ಎದ್ದು ನಿಂತುಕೊಳ್ತೀಯಾ? ಕುಳಿತುಕೋ, ನಾವು ಅವರು ಮಾತನಾಡುತ್ತಿದ್ದೇವೆ. ಒಂದುನಿಮಿಷ. ನೀನು ಸರಿ ಇದ್ದಿದ್ದರೆ ನಿಮ್ಮ ನಾಯಕರಿಗೆ ಬುದ್ಧಿ ಹೇಳಿದ್ದಿದ್ದರೆ, ಇವತ್ತು ಈ ಪರಿಸ್ಥಿತಿ ನಿಮಗೆ ಎಲ್ಲಿ ಬರುತ್ತಿತ್ತು?

ಶ್ರೀ ಹೆಚ್.ಸಿ.ಬಾಲಕೃಷ್ಣ: ಏನೋ ಆಗಿದೆ ಸರ್, ಆಯ್ತು,

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ಸ್ವಲ್ಪ ಹೊತ್ತು ಕುಳಿತುಕೋ. Please wait. ಬಾಲಣ್ಣನವರೆ, ಒಂದು ನಿಮಿಷ, ನಾನು ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆ, ಹಿಂದೆ ಇದ್ದ ಧರ್ಮಸಿಂಗ್‌ರವರ ಬಗ್ಗೆ ಅತ್ಯಂತ ಗೌರವವಿಟ್ಟುಕೊಂಡಿರುವ ವ್ಯಕ್ತಿಯಾಗಿದ್ದೇನೆ. ಏಕೆಂದರೆ, ಅವರ ಅನುಭವ, ಅವರು ಯಾವುದೇ ಪಕ್ಷದಲ್ಲಿರಲಿ, ಅವರ ಬಗ್ಗೆ ಹಗುರವಾಗಿ ಮಾತನಾಡುವ ಪ್ರಯತ್ನ ನಾನು ಮಾಡುವುದಿಲ್ಲ. ನಾಯಕರನ್ನು ಆಯ್ಕೆ ಮಾಡಿಕೊಳ್ಳುವುದು ನಿಮ್ಮ ಪಕ್ಷಕ್ಕೆ ಬಿಟ್ಟ ವಿಚಾರ, ಅದರ ಬಗ್ಗೆಯೂ ನಾನು ಮಧ್ಯೆ ಪ್ರವೇಶಿಸುವುದಕ್ಕೆ ನನಗೇನೂ ಅಧಿಕಾರವಿಲ್ಲ. ಯಾವುದೇ ಪಕ್ಷದಲ್ಲಿರಬಹುದು. ನಿಮಗೆ ಸಂಪೂರ್ಣ ಸ್ವಾತಂತ್ರವಿದೆ. ಆದರೆ, ನೋವು ಏನೆಂದರೆ, ಈ ಎಲ್ಲಾ ಘಟನಾವಳಿ ನಡೆದರೂ ಮೌನ ವಹಿಸುತ್ತಿದ್ದಾರಲ್ಲ ಎಂಬುದು. ನನಗೇನು ಆಸೆ ಇದೆಯೆಂದರೆ, ನೀವು ಅಲ್ಲಿ ಕುಳಿತಿರಬೇಕು. ನಿಮ್ಮ ಅನುಭವದ ಆಧಾರದ ಮೇಲೆ ಒಂದು ದಿನವಾದರೂ ಈ ರಾಜ್ಯದ ಮುಖ್ಯಮಂತ್ರಿಗಳಾಗಬೇಕೆಂದು ಯೋಚನೆ ಮಾಡುವ ವ್ಯಕ್ತಿ ನಾನಾಗಿದ್ದೇನೆ. ಯಾರೇನೂ ಶಾಶ್ವತವಲ್ಲ. ನಾವೇನು ಪರ್ಮನೆಂಟಾಗಿ ಗೂಟ ಬಡಿಸಿಕೊಂಡು ಇಲ್ಲಿರುವುದಕ್ಕಾಗುತ್ತದೆಯೇ? ಸಾಧ್ಯವಿಲ್ಲ. ನಾನು ಏಕೆ ಇಲ್ಲಿ ನೇರವಾಗಿ ಮಾತನಾಡುತ್ತಿದ್ದೇನೆಂದರೆ, ನಾವು ಏನು ಅಧಿಕಾರಕ್ಕೆ ಬಂದಿದ್ದೇವೆ, ನಾನು ಶಾಶ್ವತವಾಗಿರುತ್ತೇವೆಂದು ನಮ್ಮ ಶಾಸಕರು ತಿಳಿದುಕೊಳ್ಳಬಾರದು. ನಿಮ್ಮ ಅನುಭವದಿಂದ ನಮ್ಮ ಶಾಸಕರು ಪಾಠ ಕಲಿತು ನಾವು ಐದು ವರ್ಷಗಳನ್ನು ಪೂರ್ಣಗೊಳಿಸಬೇಕು, ಇನ್ನು ಐದು ವರ್ಷ ಆಡಳಿತಕ್ಕೆ ಬರಬೇಕೆಂದು ನೀವು ಮಾಡಿರುವ ತಪ್ಪು ಮತ್ತೆ ನಮ್ಮ ಕಡೆಯಿಂದ ಆಗದಂತೆ ಎಚ್ಚರ ವಹಿಸಬೇಕೆಂಬ ದೃಷ್ಟಿಯಿಂದ ಈ ಮಾತನ್ನು ಆಡುತ್ತಿದ್ದೇನೆಯೇ ಹೊರತು ನಿಮ್ಮನ್ನು ಕೆಣಕುವುದಕ್ಕಲ್ಲ. ನಮ್ಮ ಶಾಸಕರು ಜಾಗೃತರಾಗಬೇಕೆಂದು ಈ ವೇದಿಕೆಯಿಂದ, ಈ ಪವಿತ್ರವಾದ ಸ್ಥಳದಲ್ಲಿ ನಿಂತು ಆ ಮಾತನ್ನು ಆಡುತ್ತಿದ್ದೇನೆಯೇ ಹೊರತು ಬೇರಾವುದೇ ಭಾವನೆ ನನಗಿಲ್ಲ.

ಆದರೆ, ನಾನು ಏನು ಹೇಳಲು ಹೊರಟಿದ್ದೇನೆಂದರೆ, ಅದು ನಿಮ್ಮ ಪಕ್ಷಕ್ಕೆ ಬಿಟ್ಟಿದ್ದು. ನಾನು ಅದರ ಬಗ್ಗೆ ಚಿಂತೆಯನ್ನು ಮಾಡುವುದಿಲ್ಲ. ಆದರೆ, ಹೇಳಬೇಕಾದ್ದು ಬಹಳ ಇದೆ. ನಾನು ಹೇಳುವುದಿಲ್ಲ. ಆದರೆ, ಒಂದು ವಿನಂತಿ ಮಾಡುತ್ತೇನೆ. ನಾವು

ಆಡಳಿತಕ್ಕೆ ಬಂದು ಒಂಭತ್ತು ತಿಂಗಳಾಗಿದೆ. ಸುಮಾರು 59 ವರ್ಷಗಳ ಕಾಲ ಉಳಿದ ನೀವೆಲ್ಲರೂ ರಾಜ್ಯದಲ್ಲಿ ಮತ್ತು ದೇಶದಲ್ಲಿ ಆಡಳಿತ ನಡೆಸಿದ್ದೀರಿ. ನಾನು ಸವಾಲು ಹಾಕಿ ಹೇಳುತ್ತೇನೆ. ಅತ್ಯಂತ ವಿನಯದಿಂದ, ಈ ನಾಡಿನ ಐದೂವರೆ ಕೋಟಿ ಜನರಿಗೆ ಈ ಸದನದ ಮೂಲಕ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇನ್ನು ಉಳಿದ ನಮ್ಮ 4 1/4 ವರ್ಷಗಳ ಅವಧಿ ಮುಗಿದಾಗ, ಜಯಚಂದ್ರರವರೆ, ನೀವೇ ಹೇಳಬೇಕು. ಯಡಿಯೂರಪ್ಪನವರೆ, ಒಳ್ಳೆಯ ಆಡಳಿತ ಮಾಡುತ್ತೀದ್ದೀರಿ, ಮತ್ತೆ ಐದು ವರ್ಷ ನೀವೇ ಆಡಳಿತ ನಡೆಸಬೇಕೆಂದು ನೀವು ಕಾಂಗ್ರೆಸ್ಸಿನ ಸ್ನೇಹಿತರು, ಜೆ.ಡಿ.(ಎಸ್)ನ ಸ್ನೇಹಿತರು ಹೇಳುವ ರೀತಿಯಲ್ಲಿ ನಾವು ಆಡಳಿತ ನಡೆಸುತ್ತೇವೆ. ಅದು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದರ ಬಗ್ಗೆ ಇರಬಹುದು, ರಾಜ್ಯದ ಅಭಿವೃದ್ಧಿ ಬಗ್ಗೆ ಇರಬಹುದು. ಒಂದು ಕೆಲಸ ಮಾಡೋಣ. ಈ ಅಧಿವೇಶನ ಮುಗಿದ ಮೇಲೆ ನಾನು ನಿಮ್ಮನ್ನು 5-6 ಬಸ್ಸುಗಳಲ್ಲಿ ಸ್ನೇಹಿತರುಗಳಂತೆ ನಾವೆಲ್ಲರೂ ಚಹಾ ಕುಡಿದುಕೊಂಡು ಬೆಂಗಳೂರನ್ನು ಒಂದು ಸುತ್ತು ನೋಡಿಕೊಂಡು ಬರೋಣ. ಒಂಭತ್ತು ತಿಂಗಳಿನಲ್ಲಿ ಏನು ಚಿತ್ರಣ ಬದಲಾವಣೆಯಾಗುತ್ತದೆ, ನಿಮ್ಮ ಕಾಲದಲ್ಲಿ ಏನಾಗಿತ್ತು, ಕರ್ನಾಟಕದ ಯಾವುದೇ ಜಿಲ್ಲೆಗೆ ಹೋಗಿ, ಯಾವುದೇ ತಾಲ್ಲೂಕು ಕೇಂದ್ರಕ್ಕೆ ಹೋಗಿ. ರಾಜ್ಯವನ್ನು ಯಾವ ರೀತಿ ಅಭಿವೃದ್ಧಿ ಪಥದತ್ತ ತೆಗೆದುಕೊಂಡು ಹೋಗುತ್ತಿದ್ದೇವೆ ಎಂಬುದನ್ನು... ತಾವುಗಳು ನೋಡಬೇಕು.

ನಾನು ಏನು ಹೇಳುತ್ತೇನೆಂದರೆ, ನಿಮಗೆ ಯಾವಾಗ ಜ್ಞಾನೋದಯವಾಗುತ್ತದೆಂದರೆ, ಮುಂದಿನ ಲೋಕಸಭಾ ಚುನಾವಣಾ ಫಲಿತಾಂಶ ಬಂದ ಮೇಲೆಯೇ, ಅಲ್ಲಿಯವರೆಗೂ ನಿಮಗೆ ಜ್ಞಾನೋದಯವಾಗುತ್ತದೆಂದು ನನಗೇನು ಅನಿಸುವುದಿಲ್ಲ. ಮೊನ್ನೆ ಎಂಟು ವಿಧಾನಸಭಾ ಚುನಾವಣೆ ಜರುಗಿತು. ನನ್ನ ಬಾಯಿಂದ ಒಂದು ಮಾತಾದರೂ ಸೊಕ್ಕಿನಿಂದ ಬಂದಿದೆಯೇ? ನಾವು ಎಂಟರಲ್ಲಿ ಐದು ಕಡೆ ಗೆದ್ದೆವಲ್ಲ, ನಾಲ್ಕರಲ್ಲಿ ಡಿಪಾಸಿಟ್ ಕಳೆದುಕೊಂಡಿದ್ದೆವು, ಅಂತಹ ಕಡೆಗಳಲ್ಲೂ ನಾವು ಗೆದ್ದಿದ್ದೇವೆ. ಇನ್ನಾದರೂ ನಿಮಗೆ ಜ್ಞಾನೋದಯವಾಗಬೇಕಲ್ಲ, ಅರೆ, ಎಲ್ಲಿಯೋ ಒಂದು ಕಡೆ ಬಿ.ಜೆ.ಪಿ. ಬೆಳೆಯುತ್ತಿದೆ, ಪ್ರತಿ ಪಕ್ಷದಲ್ಲಿದ್ದುಕೊಂಡು ಒಳ್ಳೆಯ ಸಲಹೆ ಕೊಡೋಣ, ಈ ಪ್ರತಿ ಪಕ್ಷದ ನಾಯಕರ ಸ್ಥಾನವನ್ನಾದರೂ ಉಳಿಸಿಕೊಳ್ಳೋಣ, ಇವೆಲ್ಲವನ್ನೂ ನೀವು ಯೋಚನೆ ಮಾಡಬೇಕಲ್ಲ. ನಿಮಗೆಲ್ಲರಿಗೂ ಹೈಕಮಾಂಡ್ ಬಗ್ಗೆ ಗೌರವವಿದೆ. ನಮ್ಮ ಹೈಕಮಾಂಡ್ ಬಗ್ಗೆ ನಾವು ಗೌರವಿಟ್ಟುಕೊಂಡಿದ್ದೇವೆ. ನಾಳೆ ದಿವಸ ನೀವು ದೆಹಲಿಗೆ ಹೋಗಬೇಕಾದರೆ, 4-5 ಸೀಟುಗಳನ್ನಾದರೂ ಗೆದ್ದು ದೆಹಲಿಗೆ ಹೋಗಬೇಕಲ್ಲ. ಅದೂ ಇಲ್ಲದೆ ದೆಹಲಿಗೆ ಹೋಗಿ ನಿಮ್ಮ ನಾಯಕರುಗಳಿಗೆ ನೀವು ಮುಖ ಹೇಗೆ ತೋರಿಸುತ್ತೀರಿ? ಈ ಪ್ರಶ್ನೆ ನಿಮ್ಮ ಮುಂದೆ ಇದೆ. ದಯಮಾಡಿ ನಾನು ಅತ್ಯಂತ ವಿನಯದಿಂದ ಹೇಳುತ್ತೇನೆ. ಮತ್ತೊಮ್ಮೆ ಬೇರೆಯವರು ನುಸುಳುವುದಕ್ಕೆ ಅವಕಾಶ ಕೊಡಬೇಡಿ.

ರಾಷ್ಟ್ರೀಯ ಪಕ್ಷ ಇರಬೇಕು. ಪ್ರಜಾತಂತ್ರ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಈ ದೇಶದಲ್ಲಿ ಕೊನೆಗೆ ಉಳಿಯುವುದು ಕಾಂಗ್ರೆಸ್, ಬಿ.ಜೆ.ಪಿಯಂತಹ ಎರಡು ರಾಷ್ಟ್ರೀಯ ಪಕ್ಷಗಳು ಮಾತ್ರ. ಉಳಿದ ಪಕ್ಷಗಳೆಲ್ಲವೂ ಗಾಳಿಗೆ ತರಗೆಲೆಗಳಂತೆ ಹಾರಿ ಹೊರಟು ಹೋಗುತ್ತವೆ. ಆದುದರಿಂದ, ಇವತ್ತು ನಿಮ್ಮಲ್ಲಿ ವಿನಂತಿ ಮಾಡುತ್ತಿರುವುದೇನೆಂದರೆ ದಯಮಾಡಿ ನೀವು ಸಹಕರಿಸಿ.

(ಗದ್ದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನೀವು ಒಂದು ಕಾಲದಲ್ಲಿ ಎರಡು ಸೀಟುಗಳನ್ನಷ್ಟೆ ಗೆದ್ದಿದ್ದೀರಿ. ನಿಮಗೆ ಎರಡೇ ಸೀಟು ಉಳಿದಿತ್ತು. ಆ ಕಾಲ ಬಿಟ್ಟುಬಿಡಿ. ಅದೆಲ್ಲಾ ಈಗ ಬೇಡ.

ಶ್ರೀ ಹೆಚ್.ಸಿ.ಬಾಲಕೃಷ್ಣ: ದಯಮಾಡಿ ಒಂದು ಮಾತನ್ನು ಹೇಳುತ್ತೇನೆ. ಇವರು ಜೀವನದಲ್ಲಿ ಅಧಿಕಾರಕ್ಕೆ ಬರಲು ಆಗುತ್ತಲೇ ಇರಲಿಲ್ಲ. ನಮ್ಮ ಜೊತೆ ಸೇರಿಕೊಂಡು ಇವತ್ತು ಅಧಿಕಾರಕ್ಕೆ ಬಂದು ನಮ್ಮನ್ನು ಟೀಕಿಸುತ್ತಿರುವುದು ಸರಿಯಲ್ಲ. ದಯಮಾಡಿ ನೀವು ನಮ್ಮ ನಾಯಕರುಗಳ ಫೋಟೋ ಹಾಕಿಕೊಳ್ಳಬೇಕು. ಜೀವನದಲ್ಲಿ ಬಿ.ಜೆ.ಪಿ. ಕತೆ ಮುಗಿದು ಹೋಗಿತ್ತು. ಅದಕ್ಕೆ ಜೀವ ಕೊಟ್ಟವರೇ ನಮ್ಮ ನಾಯಕರು. ಯಾವ ರೀತಿ ಜೀವ ಕೊಟ್ಟರೋ ಗೊತ್ತಿಲ್ಲ. ಒಟ್ಟಿನಲ್ಲಿ ಜೀವ ಕೊಟ್ಟಿದ್ದೇವೆ.

(ಗದ್ದಲ)

ಶ್ರೀ ಎಂ.ಶ್ರೀನಿವಾಸ್: ನೀವು–ನಾವು ಬಿ.ಜೆ.ಪಿ. ಬಿಟ್ಟು ಅಲ್ಲಿಗೆ ಸೇರಿದ್ದರೆ ಇಷ್ಟೊತ್ತಿಗೆ ಗಾಳಿಪಟದಂತೆ ಜೆ.ಡಿ(ಎಸ್) ಮೇಲಕ್ಕೆ ಹೋಗಿಬಿಡುತ್ತಿತ್ತು.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ನೀವು ಜೆ.ಡಿ(ಎಸ್)ನಲ್ಲಿ ಅಲ್ಲವೇ ಇದ್ದದ್ದು.

ಶ್ರೀ ಎಂ.ಶ್ರೀನಿವಾಸ್: ನೀವು–ನಾವು ಬಿ.ಜೆ.ಪಿ. ಬಿಟ್ಟು ಇಲ್ಲಿಗೆ ಬಂದೆವಲ್ಲ, ಅವತ್ತು ಏನು ಮಾಡಿದರೆಂಬುದು ನಿಮಗೂ ಗೊತ್ತು, ನಮಗೂ ಗೊತ್ತು.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಸದನದಲ್ಲಿ ಕುಳಿತಿರುವ ಬಹಳಷ್ಟು ಸದಸ್ಯರು ಜೆ.ಡಿ(ಎಸ್)ನಿಂದ ಬಂದವರೇ. ಸುಮ್ಮನಿರಿ ಸಾಕು. ಯಾರ್‍ಯಾರದು ಎಂಬುದನ್ನು ಲೆಕ್ಕ ಹಾಕಿಕೊಳ್ಳಿ. ಯಾಕ್ರಿ ಮಾತನಾಡುತ್ತೀರಿ? ಎಲ್ಲರೂ ಜೆ.ಡಿ(ಎಸ್)ನಿಂದಲೇ ಬಂದಿರುವವರು. ನೀವು ಜೆ.ಡಿ(ಎಸ್)ನಿಂದಲೇ ಬಂದಿರುವವರಾಗಿದ್ದೀರಿ. ನೀವೇನೋ ಬೇರೆ ಪಕ್ಷದಿಂದ ಬಂದವರಲ್ಲ, ನೀವು ಜನತಾ ದಳದಿಂದಲೇ ಬಂದವರಾಗಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಜೆ.ಡಿ(ಎಸ್) ಶಾಸಕರಿಗೆ ವಿಶೇಷವಾಗಿ ಬಾಲಕೃಷ್ಣರವರಿಗೆ, ಚಲುವರಾಯಸ್ವಾಮಿಯವರು ಇದ್ದಾರೆಯೇ? ಅವರು ಚುನಾವಣೆಯಲ್ಲಿ ಗೆಲ್ಲಲಿಲ್ಲ. ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ಇಲ್ಲಿ ಕುಳಿತುಕೊಳ್ಳಲು ಕಾರಣ ನೀವು. ಇಲ್ಲವೆಂದು ನಾನು ಹೇಳುವುದಿಲ್ಲ. ನಾವೇನಾದರೂ ಅಧಿಕಾರದ ಹುಚ್ಚಿನಿಂದ ನಿಮ್ಮ ಜೊತೆಯಲ್ಲಿ ಏನಾದರೂ ಆಡಳಿತ ನಡೆಸಿದ್ದಿದ್ದರೆ ನಮ್ಮ ಅಡ್ರೆಸ್ ಇರುತ್ತಿರಲಿಲ್ಲ. ನಿಮ್ಮನ್ನು ಬಿಟ್ಟು ನಾವು ಹೊರ ಬಂದೆವು.

ಇವತ್ತು ಈ ನಾಡಿನ ಜನರ ಆಶೀರ್ವಾದ ಸಿಕ್ಕಿತು. ಇಲ್ಲದಿದ್ದರೆ, ನೀವು ನಂಬಿಕೆ ದ್ರೋಹ, ವಿಶ್ವಾಸ ದ್ರೋಹ ಮಾಡದೇ ಇದ್ದಿದ್ದರೆ ಜನರಲ್ಲಿ sympathy ಎಲ್ಲಿ ಬರುತ್ತಿತ್ತು? ಇಷ್ಟು ಒಳ್ಳೆಯ ಕೆಲಸ ಮಾಡುವಂತಹ ಒಬ್ಬ ಉಪ ಮುಖ್ಯಮಂತ್ರಿಯಾಗಿ ಸಹಕಾರ ಕೊಟ್ಟಿರುವವರಿಗೆ ಈ ರೀತಿ ಬೆನ್ನಿಗೆ ಚೂರಿ ಹಾಕಿದರಲ್ಲವೆಂದು ಹೇಳಿ ನಮಗೆ ಆಶೀರ್ವಾದ ಮಾಡಿದ್ದಾರೆ. ನಮಗೆ ಯಾವುದೇ ಕಾರಣಕ್ಕೂ ಆಶೀರ್ವಾದ ಮಾಡಿದ್ದರೂ ನಮ್ಮ ಕಡೆಯಿಂದ ತಪ್ಪಾಗದಂತೆ ಐದು ವರ್ಷಗಳ ಕಾಲ ಒಳ್ಳೆಯ ಆಡಳಿತ ಕೊಟ್ಟು ಮತ್ತೆ ಐದು ವರ್ಷಗಳ ಕಾಲ ಆಡಳಿತಕ್ಕೆ ಬರುವುದಕ್ಕೆ ಮತ್ತು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಸೀಟುಗಳನ್ನಾದರೂ ಗೆಲ್ಲಿಸಿಯೇ ಬರುತ್ತೇವೆಂದು ನಾನು ನಮ್ಮ ನಾಯಕರಿಗೆ ಹೇಳಿದ್ದೇನೆ. ಈ ದಿಕ್ಕಿನಲ್ಲಿ ನಾನು ಪ್ರಯತ್ನ ಮಾಡುತ್ತಿದ್ದೇನೆ. ಚುನಾವಣಾ ಫಲಿತಾಂಶ ಮೇ ಅಂತ್ಯದಲ್ಲಿ ಗೊತ್ತಾಗುತ್ತದಲ್ಲ. ಈಗಲಾದರೂ ನೀವು ಜಾಗೃತರಾಗಿ 4–5 ಜನರು ಗೆದ್ದು ದೆಹಲಿಗೆ ಮುಖ ತೋರಿಸುವಂತೆ ಮಾಡಿಕೊಳ್ಳಿ ಎಂದು ನನ್ನ ಮಾತನ್ನೂ ಕೇಳದಿದ್ದರೆ ನಾನೇನು ಮಾಡುವುದಕ್ಕಾಗುತ್ತದೆ? ಅದು ನಿಮಗೆ ಬಿಟ್ಟಿದ್ದು. ನಿಮ್ಮ ಪಾಲಿಗೆ ಬಿಟ್ಟ ವಿಚಾರ. ನೀವೇನಾದರೂ ಹೊಂದಾಣಿಕೆ ಎಂದು ಹೋದರೆ, ನನಗೇನಾಯಿತೋ, ಅದೇ ಗತಿ ನಿಮಗೂ ಆಗುತ್ತದೆ, ಎಚ್ಚರ ಎನ್ನುವ ಕಿವಿ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಇವತ್ತು ಈ ರಾಜ್ಯದ ಜನರು ಈ ಮಾತುಕತೆಗಳನ್ನು ಕೇಳುತ್ತಿರುತ್ತಾರೆ. ಈ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ರಾಜ್ಯಾದ್ಯಂತ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದಕ್ಕೆ ಪ್ರಥಮ ಆದ್ಯತೆ ನೀಡುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಿಂಸೆಗೆ ಅವಕಾಶ ಕೊಡುವುದಿಲ್ಲ. ಅಹಿಂಸಾತ್ಮಕವಾಗಿ ಯಾರೇ ಹೋರಾಟ ಮಾಡುವುದಕ್ಕೂ ಸಂಪೂರ್ಣ ಸ್ವಾತಂತ್ರ್ಯವಿದೆ. ಆ ಹಕ್ಕನ್ನು ನಮ್ಮ ಸರ್ಕಾರವು ಕಿತ್ತುಕೊಳ್ಳುವ ಪ್ರಶ್ನೆಯೇ ಇಲ್ಲ. ಆದರೆ, ಹಿಂಸಾ ಮಾರ್ಗದ ಮೂಲಕ ಕಾನೂನನ್ನು ಕೈಗೆ ತೆಗೆದುಕೊಂಡು ಯಾರಾದರೂ ಬೆಳೆಯುವ ಪ್ರಯತ್ನ ಮಾಡಿದರೆ, ಆತ ಯಾವುದೇ ಪಕ್ಷದವನಿರಲಿ, ಯಾವುದೇ ಸಂಘ–ಸಂಸ್ಥೆಯವನಾಗಿರಲಿ, ಕಾನೂನನ್ನು ಕೈಗೆ ತೆಗೆದುಕೊಂಡು ಈ ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ನಾವು ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟು ಒಟ್ಟಿನಲ್ಲಿ ನಮ್ಮ ಸರ್ಕಾರ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಹೇಳಿ ಈ ರೀತಿ ಮತ್ತೆ ಮತ್ತೆ ಇಂತಹ ವಿಷಯಗಳನ್ನು ಪ್ರಸ್ತಾಪಿಸಿ ನಿಮ್ಮ ಹಳೆಯ ಅನೇಕ ಘಟನಾವಳಿಯ ವಿವರಗಳನ್ನು ಕೊಡುವುದಕ್ಕೆ ನಾನು ಹೋಗಲಿಲ್ಲ. ಇವತ್ತು ನೋವಾಗಿರುವುದು ಏನೆಂದರೆ, ಮಲ್ಲಿಕಾರ್ಜುನ ಖರ್ಗೆಯವರಂತಹ ಹಿರಿಯ ಅನುಭವಿ ರಾಜಕಾರಣಿಗಳಿದ್ದಾಗ ವಿ.ಎಸ್.ಆಚಾರ್ಯರವರಂತಹ ಒಬ್ಬ ಪ್ರಾಮಾಣಿಕ ವ್ಯಕ್ತಿ, ಗೃಹ ಸಚಿವರಾಗಿ ಒಳ್ಳೆಯ ಕೆಲಸ ಮಾಡುತ್ತಿರುವವರ ರಾಜೀನಾಮೆ ಕೇಳುವುದು...

ಸರಿಯೇ ಬೇರೆ ಯಾರಾದರೂ ಅನುಭವವಿಲ್ಲದವರು ಹೇಳಿದರೆ ನನಗೇನು ಬೇಸರವಿಲ್ಲ. ಆದರೆ, ಒಂದು ರಾಜಕೀಯ ಪಕ್ಷದ ಸ್ಥಾನದಲ್ಲಿ ಕುಳಿತಾಗ ಮುಖಂಡರೆಲ್ಲರೂ ಸೇರಿ ಏನು ಹೇಳುತ್ತಾರೋ, ಪಾಪ! ಅವರಿಗೆ ಮನಸ್ಸಿಲ್ಲದೇ ಹೇಳಿರಬಹುದು. ಬಹುಶ:, ಆ ಮಾತನ್ನು ವಾಪಸ್ಸು ತೆಗೆದುಕೊಂಡು ಸಹಕರಿಸಿ. ಒಳ್ಳೆಯ ಆಡಳಿತ ನಡೆಸೋಣ. ಪ್ರತಿಪಕ್ಷವಾಗಿ ನೀವು ಯಾವುದೇ ಸಂದರ್ಭದಲ್ಲಿ ನಮ್ಮ ತಪ್ಪುಗಳನ್ನು ನೀವು ಕಿವಿ ಹಿಂಡಿ ಹೇಳುವುದಕ್ಕೆ ನಿಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆ ಸ್ಥಾನಕ್ಕೆ ಬಹಳ ಮಹತ್ವವಿದೆ. ನಾನು ಅಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಕುಳಿತು ಕೆಲಸ ಮಾಡಿದ್ದೇನೆ. ನಾವು ಒಂದು ವಿರೋಧ ಪಕ್ಷವಾಗಿ ಆಡಳಿತದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ. ಆಡಳಿತ ಪಕ್ಷಕ್ಕೆ ಸಹಕಾರ ಕೊಟ್ಟಿದ್ದೇವೆ. ಆದರೆ, ವಿರೋಧ ಪಕ್ಷದವರಾದ ನೀವು ಒಂದು ಸಂದರ್ಭದಲ್ಲೂ ಸಹಕಾರ ಕೊಡಲಿಲ್ಲ.

ಬೆಳಗಾವಿ ಮತ್ತು ಅದಕ್ಕೂ ಮುನ್ನ ನಡೆದ ಅಧಿವೇಶನ, ಎರಡೂ ಅಧ್ವಾನವಾಗಿ ಹೋಯಿತು. ಗಣಿಗಾರಿಕೆಗೆ ನಾನು ಒಂದು ಲೈಸೆನ್ಸ್ ಸಹ ಕೊಡಲಿಲ್ಲ. ಅದರ ಬಗ್ಗೆ 2–3 ದಿವಸ ಚರ್ಚೆಯಾಗಿ ಸಮಯ ಹಾಳಾಗಿ ಹೋಯಿತು. ಒಂದು ದಿನ ಈ ನಾಡಿನ ನೆಲ, ಜಲ, ಭಾಷೆಯ ಪ್ರಶ್ನೆ ಬಂದಾಗ ದೆಹಲಿಗೆ ಹೋಗೋಣವೆಂದರೆ, ನಮ್ಮೊಂದಿಗೆ ಬರಲಿಲ್ಲ. ಜನರು ಆಯ್ಕೆ ಮಾಡಿ ಕಳುಹಿಸಿದ್ದರೂ, ನಮ್ಮ ಸರ್ಕಾರವನ್ನು ವೈರಿಗಳಂತೆ ನೋಡಿದಿರಿ. ನಿಮ್ಮ ನಮ್ಮನ್ನು ವೈರಿಗಳಂತೆ ನೋಡಲಿಲ್ಲ. ಆಯ್ಕೆ ಮಾಡಿರುವಂತಹ ಜನರನ್ನು ನೀವು ಈ ರೀತಿ ನೋಡುತ್ತಿದ್ದೀರೇನೋ ಎನ್ನುವ ಭಾವನೆ ಜನರಲ್ಲಿ ಉಂಟಾಗುತ್ತಿದೆ. ಇದಕ್ಕೆ ಅವಕಾಶ ಕೊಡದೇ ದಯಮಾಡಿ ಸಹಕರಿಸಿ. ಬರುವ ದಿವಸಗಳಲ್ಲಿ ಒಳ್ಳೆಯ ಆಡಳಿತವನ್ನು ನಾವು–ನೀವು ಒಟ್ಟಾಗಿ ಸೇರಿ ಜನರಿಗೆ ಒಳ್ಳೆಯದನ್ನು ಮಾಡೋಣ, ಐದು ವರ್ಷಗಳಾದ ಮೇಲೆ ನಾವು ಒಳ್ಳೆಯ ಕೆಲಸ ಮಾಡಿದ್ದರೆ ನಮ್ಮನ್ನು ಇಲ್ಲಿ ಕೂರಿಸುತ್ತಾರೆ, ಇಲ್ಲದಿದ್ದರೆ, ನಿಮಗಾದ ಗತಿಯೇ ನಮಗೂ ಬರುತ್ತದೆನ್ನುವ ಎಚ್ಚರಿಕೆಯೂ ನಮಗಿದೆ.

ಆದುದರಿಂದ, ಅತ್ಯಂತ ಎಚ್ಚರಿಕೆಯಿಂದ ನಾವು ಮುಂದೆ ಹೋಗುತ್ತೇವೆ. ತಪ್ಪು ಮಾಡುವುದಿಲ್ಲ. ಈ ರಾಜ್ಯದ ಜನತೆಗೆ ಕರ್ನಾಟಕ ರಾಜ್ಯ ಈ ದೇಶದಲ್ಲಿ ಮಾದರಿ ರಾಜ್ಯವನ್ನಾಗಿ ಮಾಡುವುದು ನಮ್ಮ ಸಂಕಲ್ಪವಾಗಿದೆ. ಆ ದಿಕ್ಕಿನಲ್ಲಿ ಏನೇನು ಶ್ರಮ ಹಾಕಬೇಕೋ, ಅದನ್ನು ನಾವು ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟು ದಯಮಾಡಿ ತಾವೆಲ್ಲರೂ ಸಹಕರಿಸಬೇಕೆಂಬ ವಿನಂತಿ ಮಾಡುತ್ತಾ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಅವರ ಮನಸ್ಸಿನಲ್ಲಿ ಏನೇನು ಇತ್ತೋ, ಅಥವಾ ಏನೇನು ಕಾರಬೇಕಾಗಿತ್ತೋ, ನಮ್ಮಲ್ಲಿ ವಾಂತಿ ಮಾಡಿಕೊಳ್ಳುವುದು ಎನ್ನುತ್ತಾರೆ, ಅವರು

ಏನೇನು ವಾಂತಿ ಮಾಡಿಕೊಳ್ಳಬೇಕಾಗಿತ್ತೋ ಅದನ್ನು ಈ ಸದನದ ಮೂಲಕ ಮಾಡಿಕೊಂಡಿದ್ದಾರೆ. ಸಂತೋಷ. ಹಿಂದಿನ ಗುಂಡೂರಾವ್‌ರವರ ಇತಿಹಾಸದಿಂದ ಪ್ರಾರಂಭ ಮಾಡಿ, ಗುಂಡೂರಾವ್ ಇದ್ದಾಗ ಇವರು ಇನ್ನು ವಿಧಾನ ಸಭೆಗೆ ಬಂದಿರಲಿಲ್ಲ. ಗುಂಡೂರಾವ್ ರವರ ಕಾಲವಾದ ಮೇಲೆ ಅವರು 1983 ರಲ್ಲಿ ಬಂದರು ಆ ಕಾಲವನ್ನು ನೆನಪು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಅದು ಒಳ್ಳೆಯ ಕಾಲ. ಒಂದರೆಡು ಘಟನೆಗಳು ಈ ಕಾಲದಲ್ಲೂ ನಡೆದಿದೆ, ಹಿಂದಿನ ಕಾಲದಲ್ಲೂ ನಡೆದಿರಬಹುದು. ಆದರೆ, ಒಂದು ಮಾತನ್ನು ಅವರು ಒಪ್ಪಿಕೊಂಡರು. ನಮ್ಮ ಸರ್ಕಾರ ಸಿಂಪಥಿಯಿಂದ ಬಂದಿದೆ, ಆ ಸಿಂಪತಿಯಿಂದಾಗಿ ನಾನು ಇಲ್ಲಿ ಕುಳಿತಿದ್ದೇನೆ ಹೊರತು ನಮ್ಮ ಕೆಲಸದಿಂದಾಗಲಿ, ನಮ್ಮ ಪಕ್ಷದ ತತ್ವವನ್ನು ಮೆಚ್ಚಿ ಜನರು ನಮಗೆ ಓಟನ್ನು ಕೊಟ್ಟಿಲ್ಲ ಎಂಬುದಕ್ಕೆ ಅವರೇ ಸಾಕ್ಷಿಯಾಗಿ ಹೇಳಿದ್ದಾರೆ. ಜನರು ಸಿಂಪಥಿ ತೋರಿಸಿ ಜನ ಜೆ.ಡಿ.ಎಸ್.ರವರು ನನ್ನನ್ನು ವಿಶ್ವಾಸಘಾತ ಮಾಡಿದ್ದಕ್ಕಾಗಿ, ಬೆನ್ನಲ್ಲಿ ಚೂರಿ ಹಾಕಿದ್ದಕ್ಕಾಗಿ ಇವತ್ತು ನಾನು ಅಧಿಕಾರಕ್ಕೆ ಬಂದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅಂದರೆ ಯಾವುದೇ ಒಂದು ತತ್ವ, ರೀತಿ, ನೀತಿ ಅವರ election manifesto ನೋಡಿ ಜನರು ಓಟನ್ನು ಕೊಟ್ಟಿಲ್ಲ, ಇವರಿಗೆ ಸಿಂಪಥಿ ಬಂದು, ಅದರಿಂದಾಗಿ ಇವರು ಇವತ್ತು ಅಲ್ಲಿ ಕುಳಿತಿದ್ದಾರೆ. ಎರಡನೆಯದಾಗಿ, ನಾವು ಅಧಿಕಾರಕ್ಕೆ ಒಂದು ಒಂಭತ್ತು ತಿಂಗಳಾಯಿತು, ಇನ್ನೂ ಕಾದುನೋಡಿ ನಾನು ಏನೇನು ಮಾಡುತ್ತೇನೆಂದು ಹೇಳಿದರು. ಒಂಭತ್ತು ತಿಂಗಳಿಗೆ ಡೆಲಿವರಿಯಾಗುತ್ತದೆ. ಗಂಡೋ ಹೆಣ್ಣೋ ಎಂದು ಗೊತ್ತಾಗುತ್ತದೆ. ದುರ್ದೈವದಿಂದ ಇವತ್ತು ಹೆರಿಗೆಯಾದ ಮೇಲೆ, ಇವರ ಒಂಭತ್ತು ತಿಂಗಳು ಆದಮೇಲೆ ಈ ಕೂಸೂ ಗಂಡೂ ಇಲ್ಲ ಹೆಣ್ಣೂ ಇಲ್ಲ. ಪರಿಸ್ಥಿತಿ ಏನಾಗಿದೆಯೆಂದರೆ, ಏನಾದರೂ result oriented ಇರಬೇಕಲ್ಲಾ? ಗಂಡಾದರೂ ಆಗಬೇಕು ಇಲ್ಲದಿದ್ದರೆ ಹೆಣ್ಣಾದರೂ ಆಗಬೇಕು.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ವಿರೋಧ ಪಕ್ಷದ ನಾಯಕರು ಸುಳ್ಳು ಹೇಳಬಾರದು. ಗಂಡು ಹೆಣ್ಣು ಎರಡೂ ಇಲ್ಲದಿರುವುದನ್ನು ಅವರು ಎಲ್ಲಿ ನೋಡಿದ್ದಾರೆ ಎಂಬುದನ್ನು ಹೇಳಲಿ. ಅವರು ಸದನಕ್ಕೆ ಸುಳ್ಳನ್ನು ಹೇಳುತ್ತಿದ್ದಾರೆ.

ಶ್ರೀ ಸಿ.ಟಿ. ರವಿ: ಅದು ಗೊತ್ತಾಗಬೇಕೆಂದರೆ 18 ವರ್ಷವಾಗಬೇಕಲ್ಲಾ!

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಇವರ ಒಂಭತ್ತು ತಿಂಗಳ ಪ್ರಯತ್ನ ಮತ್ತು ಇವತ್ತು ಬಂದಂಥ resultನ್ನು ನೋಡಿದಾಗ ಇದು ಗಂಡೂ ಅಲ್ಲ ಹೆಣ್ಣೂ ಅಲ್ಲ, ಅಂಥ resultನ್ನು ಇವರು ಕೊಟ್ಟಿದ್ದಾರೆ. ಇವತ್ತು ಸರ್ಕಾರವು ಸಹ ಅದೇ ರೀತಿಯಾಗಿ ನಡೆದಿದೆ. ಗೃಹ ಸಚಿವರು ಬಹಳ ಪ್ರಾಮಾಣಿಕರು, ದಕ್ಷರು ಎಂದು ಅವರು ಹೇಳಿದರು. ನಾವು ಅವರನ್ನು ಅಪ್ರಮಾಣಿಕರು ಎಂದು ಎಲ್ಲಿ ಹೇಳಿದ್ದೇವೆ? inefficient ಎಂದು ಹೇಳಿದ್ದೇವೆ. ಅಪ್ರಮಾಣಿಕರಲ್ಲ. ಅವರು ಪ್ರಾಮಾಣಿಕರೇ ಹೌದು. ಕೆಲಸವನ್ನೇ ಮಾಡಲಿಲ್ಲ, ಡೆಲಿವರಿಯೇ ಆಗಲಿಲ್ಲ, ಗಂಡೂ ಅಲ್ಲ ಹೆಣ್ಣೂ

ಅಲ್ಲವೆಂದರೆ ಉಪಯೋಗವೇನು? ಆದ್ದರಿಂದ ಅರಿಗೆ ದಯವಿಟ್ಟು ರಾಜೀನಾಮೆ ಕೊಡಿಸಿ ಎಂದು ನಾವು ಹೇಳಿದ್ದು. ಅವರು ನಿಮಗೆ ಬಹಳ ಪ್ರೀತಿಗೆ ಪಾತ್ರರಾದವರು. ಬೇಕಾದರೆ ಇನ್ನೊಂದು advisory committee ಎಂದು ಮಾಡಿಕೊಳ್ಳಿ. kitchen cabinetನ್ನು appoint ಮಾಡಿಕೊಂಡು ಅವರ advise ಚೆನ್ನಾಗಿದ್ದರೆತಾವು ತೆಗೆದುಕೊಳ್ಳಿ. ಆದರೆ, ಅದನ್ನು ಬಿಟ್ಟು ತಪ್ಪು ಮಾಡಿದವರನ್ನು ಸಮರ್ಥನೆ ಮಾಡಿಕೊಂಡು, ಈ ಒಂಭತ್ತು ತಿಂಗಳಿನಲ್ಲಿ ತಿಂಗಳಿಗೆ ಒಂದು ಘಟನೆ ಎಲ್ಲಿ ನಡೆಯಿತು? ಎಲ್ಲಾ ಮಂಗಳೂರಿನಲ್ಲಿ ನಡೆಯಿತು. ಪಬ್, ಚರ್ಚ್ ಮೇಲೆದಾಳಿ, ಎಂ.ಎಲ್.ಎ. ಮಗಳನ್ನು ಹೆರಾಸ್‌ಮೆಂಟ್ ಮಾಡುವುದು, ಜಾತಿ ಗಲಭೆಗಳು ಈ ರೀತಿ ಎಲ್ಲವೂ ಮಂಗಳೂರಿನಲ್ಲೆ. ಅನೇಕ ಸಣ್ಣಪುಟ್ಟ ಘಟನೆಗಳು ಹೆಚ್ಚಾಗಿ ಮಂಗಳೂರು ಮತ್ತು ಉಡುಪಿಯಲ್ಲೇ ಆಗಿದೆ. ಇದು ಏಕೆ? ಕೆಲವು ಕಡೆ ಬಿಟ್ಟರೆ ಬೇರೆ ಜಿಲ್ಲೆಗಳಲ್ಲಿ ಅಷ್ಟೇ ಘಟನೆಗಳು ನಡೆದಿವೆಯೇ? ಇಲ್ಲ. ರಸಗೊಬ್ಬರದ ಬಗ್ಗೆ ಹಾವೇರಿ ಗೋಲಿಬಾರ್ ಆಯಿತು, ಅದು ನಿಮ್ಮ ಕಾಲದಲ್ಲೇ ಆಯಿತು ಬಳ್ಳಾರಿಯಲ್ಲಿ ರೈತರು ಭೂಮಿಯನ್ನು ಕೊಡುವುದಿಲ್ಲ ಎನ್ನುವುದರ ಮೇಲೆ ಅಲ್ಲಿ ಲಾಠಿ ಚಾರ್ಜ್ ಆಯಿತು. firing ಆಯಿತು, ಇಂಥ ಘಟನೆಗಳು ನಡೆದಿವೆ. ಆದರೆ, ಇದನ್ನೂ ಹತೋಟಿಯಲ್ಲಿ ಇಡತಕ್ಕ ಪ್ರಯತ್ನವನ್ನು ಒಬ್ಬರು full fledged Home minister ಇದ್ದಾರೆ, Home Minister ನಿಮ್ಮಲಿದ್ದು, ಯಾರೋ state minister ಅವರಿಗೆ ಕೊಟ್ಟು ಇಂಥವರ ಕೈಯಲ್ಲಿ ಕೊಟ್ಟಿದ್ದೇವೆ, ಆದ್ದರಿಂದ ಆಗಲಿಲ್ಲವೆಂದರೆ ಒಪ್ಪಿಕೊಳ್ಳೋಣ. ಆದರೆ, ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೀರಿ, ಸ್ವತಂತ್ರವಾದ Home Minister ರವರೇ ಇದ್ದಾರೆ, ಅದರೂ ಕೂಡ ಏಕೆ ಈ ರೀತಿ ಕಾನೂನು ವೈಫಲ್ಯತೆಯನ್ನು ಆಡಳಿತ ವೈಫಲ್ಯತೆಯನ್ನು ನಾವು ಕಾಣುತ್ತಿದ್ದೇವೆ ಎಂಬುದನ್ನು ಹೇಳಿ.. ಅದನ್ನು ಬಿಟ್ಟು ಗುಂಡೂರಾವ್‌ರವರ, ಜೆ.ಹೆಚ್. ಪಟೇಲರ ಕಾಲದಲ್ಲಿ ಈ ರೀತಿಯಾಯಿತು, ಇವರ ಕಾಲದಲ್ಲಿ ಆ ರೀತಿಯಾಯಿತು ಎಂದು ಹಿಂದಿನದ್ದನ್ನು ಉದಾಹರಣೆ ತೆಗೆದುಕೊಂಡೇ ನನ್ನ ಕಾಲದಲ್ಲಿ ಏಕೆ ಒಂದು firing ಆಗಿ ಒಂದೆರಡು ಸಾಯಬಾರದು ಎಂದು ಹೇಳಿತ್ತೀರಾ? ನೀವು ಸಮರ್ಥನೆ ಮಾಡಿಕೊಳ್ಳತಕ್ಕದ್ದು ನಿಮ್ಮ ಆಡಳಿತದಲ್ಲಿರತಕ್ಕ ಲೋಪದೋಷಗಳಿದ್ದರೆ ಅದನ್ನು ಸರಿಮಾಡಿಕೊಳ್ಳುತ್ತೇನೆ, ನಮ್ಮ ಗೃಹ ಸಚಿವರು ಸರಿ ಇಲ್ಲದಿದ್ದರೆ ಅವರನ್ನು ಬದಲಾವಣೆ ಮಾಡಿ ಬೇರೆಯವರನ್ನು ತರುತ್ತೇನೆ ಇಲ್ಲದಿದ್ದರೆ ನಾನೇ ಅದನ್ನು ಖುದ್ದಾಗಿ ನೋಡುತ್ತೇನೆ ಎಂದು ಹೇಳುವುದನ್ನು ಬಿಟ್ಟು ಅವರ ಬಹಳ ಪ್ರಾಮಾಣಿಕರಿದ್ದಾರೆ, ಚೆನ್ನಾಗಿದ್ದಾರೆ ಎಂದು ಅವರ ಮೇಲೆ ನೀವು ಏಕೆ ಹೇಳುತ್ತೀರಿ? ನಿಮಗೆ ಅವರ ಮೇಲೆ ಏನು ಅಷ್ಟು ಪ್ರೀತಿ? ನಾನು ನಿಮಗೆ ಅನೇಕ ಸಲ ಹೇಳಿದ್ದೇನೆ. ಮೊನ್ನೆ ಸಲ ಹೇಳಿದ್ದೇನೆ. ಕುರುಡುಗಣ್ಣನ್ನು ಮಾಡಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲ. ಕಣ್ಣು ಏನಾದರೂ ಕುರುಡಾಗಿದ್ದರೆ ಸ್ವಲ್ಪ

ಆಪರೇಷನ್ ಮಾಡಿಸಿಕೊಂಡು ಭಸ್ಮಾ ಹಾಕಿಕೊಳ್ಳಿ, ಆಗ ಚೆನ್ನಾಗಿ ಕಾಣುತ್ತದೆ. ನಿಮಗೆ ಅವರ ಬಗ್ಗೆ ಕುರುಡು ನಂಬಿಕೆ. Operation ಮಾಡಿಸಿ. ಆ blind faith ನಿಂದ ಇಂಥ ಅನೇಕ ತಪ್ಪುಗಳಾಗುತ್ತಿದೆ. ಆ blind faith ಬಿಟ್ಟು ನೀವು dispassionate ಆಗಿ ಒಬ್ಬ ಆಡಳಿತಗಾರನಾಗಿ ಇದು ಏನಿದೆ, ನಿಜವಾಗಿಯೂ ಇದು ಏಕೆ ಪದೇ ಪದೇ ಈ ರೀತಿಯಾಗುತ್ತಿದೆ, ಅದರಿಂದ ಮುಖ್ಯಮಂತ್ರಿಗಳಿಗೇ ಕೆಟ್ಟ ಹೆಸರು ಬರತಕ್ಕದ್ದು. ಏನೇ ಬಂದರೂ ಎಲ್ಲರ ಪರವಾಗಿ ನಾನೇ ಹೊತ್ತುಕೊಳ್ಳುತ್ತೇನೆಂದರೆ ಹೊತ್ತುಕೊಳ್ಳಿ. ಆ ಭಾರಕ್ಕೆ ultimately ನೀವೂ ಕುಸಿದು ಬೀಳುತ್ತೀರೇ ಹೊರತು ನಾವಲ್ಲ. ನಮಗೆ ಹೇಳಿದಿರಿ ಇನ್ನೊಂದು 20 ದಿವಸ ಅಲ್ಲಿ ಕೂರುತ್ತೀರಿ, ಹತ್ತು ವರ್ಷ ಇಲ್ಲಿ ಕೂರುತ್ತೀರಿ ಎಂದು ಹೇಳಿದಿರಿ. ಈ ರೀತಿಯಾದ ಆಡಳಿತ ನಿಮ್ಮಿಂದ ನಡೆದರೆ ಬಹುಶ: ನೀವಾಗಿಯೇ ಖಂಡಿತವಾಗಿ ಪಾರ್ಲಿಮೆಂಟ್ ಚುನಾವಣೆಯಾದ ಮೇಲೆ ಕುಸಿದು ಬೀಳುತ್ತೀರಿ. ನಾನು 20 ಸೀಟು 25 ಸೀಟು ತರುತ್ತೇನೆಂದು ಮಾತಿನಲ್ಲಿ ಬಹಳ ಹೇಳಿದಿರಿ. ಹೋದ ಚುನಾವಣೆಗಳಲ್ಲಿ ನಿಮಗೆ ಸಿಂಪಥಿ ಇದ್ದು ಹತ್ತು ಪಾರ್ಲಿಮೆಂಟ್ ಸೀಟ್ ಮೇಲೆ ನೀವು ಮುಂದೆ ಹೋಗಲಿಲ್ಲ. ನಿಮಗೆ ಸಿಂಪಥಿ ಇಲ್ಲ, ಆದರೂ ನಾವು 14 ಸೀಟಿನ ಮೇಲೆ ಮುಂದಿದ್ದೇವೆ. 4 ಪಾರ್ಲಿಮೆಂಟ್ ಸೀಟಿನ ಮೇಲೆ ಜೆ.ಡಿ.ಎಸ್. ನವರು ಮುಂದಿದ್ದಾರೆ. ಆದ್ದರಿಂದ ಇಲ್ಲಿ ಉಪ ಚುನಾವಣೆಯಲ್ಲಿ ಗೆದ್ದ ತಕ್ಷಣವೇ ಎಲ್ಲವೂ ಕೂಡ ನಮ್ಮ ಸ್ವಾಧೀನದಲ್ಲಿ ಬರುತ್ತದೆ ಎಂದು ತಿಳಿದುಕೊಳ್ಳಬೇಡಿ, ನಾನು ದುರಹಂಕಾರವೆಂದು ಹೇಳುವುದಿಲ್ಲ, ಒಂದು ರೀತಿ over confidenceನಲ್ಲಿ ತಾವು ಇರಬಾರದು. Over confidenceನಲ್ಲಿ ತಾವು ಇದ್ದು ಏನೇ ಬಂದರೂ ಕೂಡ ನಾನು 25-30 ಸೀಟು ತರುತ್ತೇನೆಂದು ನಿಮ್ಮ ಹೈಕಮಾಂಡ್‌ಗೆ ನೀವು ಬರೆದುಕೊಟ್ಟರೆ, ನಿಮ್ಮ ಹೈಕಮಾಂಡ್ ಸಹ ಏನು ಕಡಿಮೆ ಇಲ್ಲ, ಮರುದಿವಸವೇ replace ಮಾಡುತ್ತಾರೆ, ಎಷ್ಟೋ ಮಂದಿಗೆ ಮಾಡಿದ್ದಾರೆ ಎಂಬುದು ನಿಮಗೆ ಗೊತ್ತಿದೆ. ಆದ್ದರಿಂದ ಇವತ್ತಿನ ದಿವಸ ಬಹಳ ಹುಷಾರಾಗಿರುವುದು ಬಹಳ ಮುಖ್ಯ. ನಮ್ಮ ಪಕ್ಷ ಖಂಡಿತವಾಗಿ ಬರತಕ್ಕ ಪಾರ್ಲಿಮೆಂಟ್ ಚುನಾವಣೆಯಲ್ಲಿ ಜನರು ನಿಮಗೆ ಬುದ್ಧಿ ಕಲಿಸುತ್ತಾರೆ. ನಾವು ಖಂಡಿತವಾಗಿ ನಿಮಗಿಂತಲೂ ಮೇಲೆ ಇರುತ್ತೇವೆಯೇ ಹೊರತು ನಮ್ಮ ಗ್ರಾಫ್ ಕೆಳಗೆ ಇರುವುದಿಲ್ಲ. ಇದು ಪಾರ್ಲಿಮೆಂಟ್ ಚುನಾವಣೆ. ಇದು ನಿಮ್ಮ ಸಿಂಫಥಿ ಚುನಾವಣೆ ಅಲ್ಲ. ಅವರಿಗೆ ಏಕೆ ಸಿಂಪಥಿ? ನಿಮಗೇನೂ ಸಿಂಪಥಿ, ಅವರು ಮೋಸ ಮಾಡಿದರು, ಅದು ಮಾಡಿದರು, ಇದು ಮಾಡಿದರು ಎಂದು ಸಿಂಪಥಿ ಒಂದು ಕಡೆ, ಇನ್ನೊಂದು ಕಡೆ ಅದರ ಬೋನಸ್‌ನ್ನು ಮಠ ಮಂದಿರಗಳಿಗೆ ಕೊಡುತ್ತಿದ್ದೀರಲ್ಲಾ, ಯಾರ್‍ಯಾರು ನಿಮ್ಮ ಪರವಾಗಿ ಪ್ರಚಾರ ಮಾಡಿಕೊಂಡು ನಿಂತಿದ್ದರೂ ಅವರಿಗೆ giftsನ್ನು ಕೊಡುತ್ತಲೇ ಇದ್ದೀರಲ್ಲಾ, ಅದರ ಬಗ್ಗೆ ನಾನು ಬಜೆಟ್ ಮೇಲೆ ಮಾತನಾಡುವಾಗ ಹೇಳುತ್ತೇನೆ. ಅವರೆಲ್ಲರ ಉಪಕಾರವನ್ನು ತಾವು ತೀರಿಸುತ್ತಲೇ ಇದ್ದೀರಿ. ಅದೇನು

ಈಗ ನಿಂತಿಲ್ಲ. ಇರಲಿ, ಅದನ್ನು ಮಾಡಿಕೊಂಡು ಹೋಗಿ. ಅದಕ್ಕಾಗಿ ನಿಮಗಿಂತಲೂ ನಮ್ಮ ಗ್ರಾಫ್ ಹಿಂದೆಯೂ 2008ರಲ್ಲಿ ಕೂಡ ಜಾಸ್ತಿ ಇತ್ತು, ಮುಂದೆ ಕೂಡ ಜಾಸ್ತಿ ಇರುತ್ತದೆ ಎಂಬುದನ್ನು ತಾವು ನೆನಪಿನಲ್ಲಿ ಇಟ್ಟುಕೊಳ್ಳಿ. ಇನ್ನೊಂದು, democracyಯಲ್ಲಿ ಏಳು ಬೀಳುಗಳು ಇರುತ್ತವೆ. 'ನೀವೆಲ್ಲ ಗಾಂಧೀಜಿಯವರ ಹೆಸರಿನಲ್ಲಿ ಬಂದಿರಿ, ಶ್ರೀಮತಿ ಇಂದಿರಾಗಾಂಧಿಯವರ ಹೆಸರಿನಲ್ಲಿ ಬಂದಿರಿ, ನೆಹರೂಜೀಯವರ ಹೆಸರಿನಲ್ಲಿ ಬಂದಿರಿ, ನಿಮ್ಮದೆಲ್ಲಾ ದಿವಾಳಿ ಎದ್ದಿದೆ, ಈಗ ಎಲ್ಲವೂ ನಮ್ಮದೇ' ಎಂದು ಹೇಳಿಕೊಳ್ಳುತ್ತೀದ್ದೀರಿ. ನಿಮ್ಮ ಆಂಧ್ರದ ರಾಜು ಅವರ 'ಸತ್ಯಂ ಕಂಪೆನಿ' ಇದ್ದ ಹಾಗಿದೆ. ನೀವು 'ಸತ್ಯಂ, ಸತ್ಯಂ' ಎಂದು ಹೇಳುವುದೆಲ್ಲವೂ 'ಅಸತ್ಯಂ' ಆಗಿದೆ. ಆ ಕಂಪೆನಿ ಬುರ್ರೆಂದು ಮೇಲಕ್ಕೆ ಏರಿತು. ಈಗ ಅದು ಕೆಳಕ್ಕೆ ಬಿದ್ದಿದೆ. ಈಗ 'ನಾನು ಆ ಕಂಪೆನಿ ಮೆಂಬರ್ ಅಲ್ಲ', 'ನಾನು ಆ ಕಂಪನಿ ಡೈರೆಕ್ಟರ್ ಅಲ್ಲ' ಎಂದು ಎಲ್ಲರೂ ಓಡಿ ಹೋಗುತ್ತಿದ್ದಾರೆ. ಎಲ್ಲರಂತೆ ನಮ್ಮನ್ನೂ ಕೂಡ ಜೈಲಿಗೆ ಹಾಕುತ್ತಾರೆಂದು ಹೆದರಿಕೊಂಡು ಓಡಿ ಹೋಗುತ್ತಿದ್ದಾರೆ. ನೀವು 'ಸತ್ಯಂ ಕಂಪೆನಿ'ಯಂತೆ ಬುರ್ರೆಂದು, sudden ಆಗಿ ಮೇಲಕ್ಕೆ ಹೋಗಿದ್ದೀರಿ. ನಮ್ಮ ಕಂಪೆನಿ 'Tata Company' ಇದ್ದ ಹಾಗೆ ಗ್ಯಾರಂಟಿಯಾಗಿದೆ. ಇದು ದೇಶಕ್ಕಾಗಿ ದುಡಿಯುವ ಕಂಪೆನಿ. ದೇಶದಲ್ಲಿ ಯಾವುದೇ ಕಂಪೆನಿಗಿಂತ ಟಾಟಾ ಕಂಪೆನಿಯಲ್ಲಿ ಮಾತ್ರವೇ ವೈಯಕ್ತಿಕ asset ಇಲ್ಲ. ಅವರದು ಏನಿದ್ದರೂ ಕೂಡ corporate asset. ಆದರೆ ನಿಮ್ಮ 'ಸತ್ಯಂ ಕಂಪೆನಿ'ಯಲ್ಲಿ ಏನಿದ್ದರೂ ವೈಯಕ್ತಿಕ asset ಮಾಡಿಕೊಂಡು ಕಡೆಗೆ ಹೊರಟು ಹೋಗುವವರೇ ಇದ್ದೀರಿ. ಆದ್ದರಿಂದ ನೀವು ಬಹಳ ಹುಷಾರಾಗಿರಿ. 'ನಿಮ್ಮದು ಗಾಳಿಪಟ, ನಿಮ್ಮದು ಕುಂಬಳಕಾಯಿಯಂತೆ ಒಡೆದು ಹೋಗುತ್ತದೆ' ಎಂದು ನಮಗೆ ಹೇಳಲಿಕ್ಕೆ ಹೋಗಬೇಡಿ. ನಮಗಿಂತಲೂ ನೀವು ಗಾಳಿಪಟದಲ್ಲಿ ಹಾರುತ್ತೀದ್ದೀರಿ. ಏನೋ ಅಚಾನಕ್ ಆಗಿ ಬಂದಿದ್ದೀರಿ, ಅದನ್ನು ಉಳಿಸಿಕೊಂಡು ಪ್ರಾಮಾಣಿಕವಾಗಿ ಹೋಗತಕ್ಕಂಥ ಪ್ರಯತ್ನವನ್ನು ನೀವು ಮಾಡಿ. ಆದರೆ 'ನನಗೆ ಅಧಿಕಾರ ಸಿಕ್ಕಿದೆ, ನಾನು ಏನು ಬೇಕಾದರೂ ಮಾಡಬಹುದು' ಎಂದು ನೀವು ಹೋಗಬಾರದು. Democracyಯಲ್ಲಿ ಸಲಹೆಗಳನ್ನೂ ಕೇಳಬೇಕು, ಅದರಂತೆನೀವು ನಡೆದುಕೊಂಡೂ ಹೋಗಬೇಕು. ಅನೇಕ ಪ್ರಮಾಣಿಕ ವ್ಯಕ್ತಿಗಳೂ ಕೂಡ ರಾಜೀನಾಮೆ ಕೊಟ್ಟಿದ್ದಾರೆ. ಹಿಂದೆ ಮಧುಗಿರಿಯ ರಾಮರಾಯರು ಒಂದು ಸಣ್ಣ incidentಗೇ resignation ಕೊಟ್ಟಿದ್ದರು. ಗಲಾಟೆ ಆಯಿತು, ಲಾಠಿ ಚಾರ್ಜ್ ಆಯಿತು, ಹೆಣ್ಣುಮಗಳೊಬ್ಬಳ ಮೇಲೆ rape ಆಯಿತು ಎಂಬ ಕಾರಣಕ್ಕೆ ಅವರು ರಾಜೀನಾಮೆ ಕೊಟ್ಟಿದ್ದರು. ಅಂತಹ ದಕ್ಷ, ಪ್ರಾಮಾಣಿಕರಾಗಿದ್ದರಿಂದ ಘಟನೆಯಿಂದ ಅವರ ಮನಸ್ಸಿಗೆ ನೀವಾಗಿತ್ತು. ಈಗ ಏನೆಲ್ಲಾ ಘಟನೆಗಳು ನಡೆದಿವೆ, ಅದಕ್ಕಾಗಿ ರಾಜೀನಾಮೆ ಕೊಡಿ ಎಂದು ನೀವು ಗೃಹ ಸಚಿವರಿಗೆ ಹೇಳಿ. ನಿಮ್ಮ ಮನಸ್ಸನ್ನು ನಾವು ನೋಯಿಸುವುದಿಲ್ಲ. ನೀವು 'ನೋಡಪ್ಪ, ನನಗೆ ನೋಯಿಸುವುದು ಬೇಡ,

ಬೇರೆಯವರು ನನ್ನನ್ನು ತಪ್ಪು ತಿಳಿದುಕೊಳ್ಳುವುದು ಬೇಡ, ನೀನು ರಾಜೀನಾಮೆ ಕೊಟ್ಟು ಹೋಗಪ್ಪ, ಪದೇ ಪದೇ ನನ್ನ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿ ಹಾಕಿಸಬೇಡ' ಎಂದು ಮಾನ್ಯ ಆಚಾರ್ಯರವರಿಗೆ ಹೇಳುವುದಕ್ಕೆ ಇರುವ ತೊಂದರೆಯಾದರೂ ಏನು? ನಿಮಗೆ ಧೈರ್ಯದ ಕೊರತೆ ಇದೆಯೇ? ನಿಮಗೆ ಧೈರ್ಯದ ಕೊರತೆ ಇದ್ದರೆ ಹೇಳಿ, ಆ ಧೈರ್ಯವನ್ನು ನಾವು ನಿಮಗೆ ಕೊಡುತ್ತೇವೆ. 'ಒಳ್ಳೆಯದಕ್ಕಾಗಿ ಅವರು ನಿಮ್ಮ ರಾಜೀನಾಮೆಯನ್ನು ಕೊಡಿಸಿದ್ದಾರೆ, ಒಳ್ಳೆಯ ಕೆಲಸಕ್ಕಾಗಿ ಕೊಡಿಸಿದ್ದಾರೆ, ಆದ್ದರಿಂದ ಅವರನ್ನು ಯಾರೂ ಏನೂ ಎಂದು ಬೇಕಾದರೆ ನಾವು ಪ್ರತಿಪಾದನೆ ಮಾಡುತ್ತೇವೆ. ಅಷ್ಟು ಧೈರ್ಯವನ್ನು ನೀವು ತೋರಿಸಿ. ಬಹುಶ: ನೀವು ಏನು ಮುಜುಗರಕ್ಕೆ ಸಿಲುಕಿದ್ದೀರೋ ಗೊತ್ತಿಲ್ಲ. ಈಗ ಉಡುಪಿಯಲ್ಲಿರುವ ಬ್ಯಾಂಕ್‌ಗಳೆಲ್ಲಾ Nationalize ಆಗಿವೆ, ಹೀಗಿರುವಾಗ ನೀವು ಮತ್ತೆ ಏಕೆ ಅವರ ಬೆನ್ನಿಗೆ ಬಿದ್ದಿದ್ದೀರಿ? ಇವತ್ತು ಎಲ್ಲಾ ಬ್ಯಾಂಕ್‌ಗಳು Nationalize ಆಗಿವೆ, ವೈಯಕ್ತಿಕವಾದಂತಹ ಬ್ಯಾಂಕ್‌ಗಳು ಯಾವುವೂ ಉಳಿದಿಲ್ಲ. ಆದರೂ ಕೂಡ ನೀವು ಅವರ ಬೆನ್ನು ಬಿಡುತ್ತಿಲ್ಲ. ದೊಡ್ಡದಾಗಿ, 1 ಲಕ್ಷ ವಿದ್ಯಾರ್ಥಿಗಳನ್ನು Anti –terrorism, patriotic ಭಾವನೆಯನ್ನು ಮೂಡಿಸತಕ್ಕ ಸಲುವಾಗಿ ಕರೆಸುತ್ತಿದ್ದೇವೆಂದು ನೀವು ಹೇಳಿದಿರಿ. ದೇಶ ಪ್ರೇಮ, ದೇಶ ಭಕ್ತಿಯನ್ನು ನೀವು ಯಾರದೇ ಮನಸ್ಸಿನಲ್ಲಿ ಮೂಡಿಸುವುದಕ್ಕಾಗಲಿ, ಆ ಮಕ್ಕಳಿಗೆ ಆ ಒಂದು ವಿದ್ಯೆಯನ್ನು ಕೊಡುವುದಕ್ಕಾಗಲಿ ಅಥವಾ ಅವರಲ್ಲಿ ಆ ನಡವಳಿಕೆಯನ್ನು ತರುವುದಕ್ಕಾಗಲಿ ಯಾರದೂ ವಿರೋಧವಿಲ್ಲ. ನೀವು ಎಷ್ಟು patriotic ಆಗಿದ್ದೀರೋ, ಅದಕ್ಕಿಂತ ಹತ್ತು ಪಟ್ಟು ಹೆಚ್ಚು patriotic ಆಗಿರುವವರು ಈ ಸದನದಲ್ಲಿದ್ದಾರೆ. ಆದ್ದರಿಂದ ಸುಮ್ಮನೆ ನೀವು ಪದೇ ಪದೇ ಅದನ್ನು ಬಳಸಿಕೊಂಡು vote bank ಮಾಡಿಕೊಳ್ಳಲಿಕ್ಕೆ ದಯವಿಟ್ಟು ಹೋಗಬೇಡಿ. ಆ ರೀತಿಯಾಗಿ ಕಾಂಗ್ರೆಸ್‌ನವರು ಪ್ರಯತ್ನ ಮಾಡದೇ ಹೋಗಿದ್ದರೆ, ಜೀವ ಕೊಡದೇ ಹೋಗಿದ್ದರೆ, ಇವತ್ತು ಈ ದೇಶಕ್ಕೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ. 'ನಿಮ್ಮ ದೀಪದಲ್ಲಿರುವ ಎಣ್ಣೆಯೆಲ್ಲಾ ಒಣಗುತ್ತಿದೆ, ನಿಮ್ಮ ಕಥೆಯೆಲ್ಲಾ ಮುಗಿದು ಹೋಯಿತು' ಎಂದು ನೀವು ನಮ್ಮ ಬಗ್ಗೆ ಹೇಳಿದಿರಿ. ನೀವು ಹೊಸದಾಗಿ Golwalkar Guruji ದೀಪ ಹಚ್ಚಿದ್ದೀರಿ, ಮೊನ್ನೆ ತಾನೇ ಎಣ್ಣೆ ಹಾಕಿದ್ದೀರಿ, but ನಿಮ್ಮ ಎಣ್ಣೆ ಬಹಳ ದಿವಸ ಉರಿಯುವುದಿಲ್ಲ. ಏಕೆಂದರೆ, ಇವತ್ತು ದೇಶದಲ್ಲಿರುವ ವಾತಾವರಣವನ್ನು ನೋಡಿದಾಗ, ನೀವು ಮಾಡುತ್ತಿರುವುದಕ್ಕೆ ಮನ್ನಣೆ ಸಿಗುವುದು ಸಾಧ್ಯವಿಲ್ಲ. ಎಲ್ಲಾ ಜನರಿಗೆ ದೇಶದ ಬಗ್ಗೆ ಅಭಿಮಾನವಿದೆ, ಗರ್ವವಿದೆ. ಈ ದೇಶದ ಜನ ಯಾವುದೇ ಸಂದರ್ಭದಲ್ಲೂ ಜಾತಿ, ಮತ್ತು, ಕುಲವನ್ನು ಮರೆತು ದೇಶದ ರಕ್ಷಣೆಗಾಗಿ, ದೇಶದ ಹಿತಕ್ಕಾಗಿ, ದೇಶದ ಐಕ್ಯತೆಗಾಗಿ ತಮ್ಮ ಪ್ರಾಣವನ್ನೇ ಕೊಡಲಿಕ್ಕೆ ಸಿದ್ಧರಿದ್ದಾರೆ. ಅದನ್ನು ನಮ್ಮಲ್ಲಿ ಮಾಡಿ ತೋರಿಸಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಪ್ರಾಣವನ್ನು ಏತಕ್ಕೋಸ್ಕರ ಕೊಟ್ಟರು? ಆಸ್ತಿ ಪಡೆಯಲಿಕ್ಕೆ ಏನಾದರೂ ತಮ್ಮ ಪ್ರಾಣ ಬಲಿ ಕೊಟ್ಟರೇ? ಮಾನ್ಯ

ರಾಜೀವ್ ಗಾಂಧಿಯವರು LTTE ಕೈಯಲ್ಲಿ ಬಲಿಯಾದರು. ಅವರ ಸ್ವಂತ ಆಸ್ತಿಗೋಸ್ಕರ ತಮ್ಮ ಪ್ರಾಣವನ್ನು ಅವರು ಬಲಿ ಕೊಟ್ಟರೇ? ಅನೇಕ ಜನ ಇವತ್ತಿನ ದಿವಸ ದೇಶದ ಐಕ್ಯತೆಗಾಗಿ ತಮ್ಮ ಬಲಿಯನ್ನು ಕೊಟ್ಟಿದ್ದಾರೆ. ಇಲ್ಲಿ ಬಹಳ ಜನ ಹೇಳುವವರಿದ್ದಾರೆ, ಆದರೆ ಆ ರೀತಿ ನಡೆಯತಕ್ಕವರು ಬಹಳ ಕಡಿಮೆ. ಇವತ್ತು ಇಲ್ಲಿಗೆ ಅಡ್ವಾಣಿಯವರನ್ನೇಕೆ ನೀವು ಕರೆದು ತರುತ್ತಿದ್ದೀರಿ? ನಿಮ್ಮ ಸರ್ಕಾರವಿದೆ, ನೀವು ಕಾರ್ಯಕ್ರಮ ಮಾಡುತ್ತೀದ್ದೀರಿ, ಆದರೆ ಲೋಕಸಭೆಯ ವಿರೋಧ ಪಕ್ಷದ ನಾಯಕರನ್ನು ಇಲ್ಲಿಗೆ ಕರೆ ತರತಕ್ಕ ಅವಶ್ಯಕತೆಯಾದರೂ ಏನಿದೆ? ಅವರನ್ನು ಪ್ರಚಾರಕ್ಕಾಗಿ ಇಲ್ಲಿಗೆ ಕರೆತರುತ್ತಿದ್ದೀರಿ. ಮುಂದಿನ ಚುನಾವಣೆಗೆ ಅನುಕೂಲವಾಗಲಿ ಎಂದು, ಭವಿಷ್ಯದ ಪ್ರಧಾನಮಂತ್ರಿಗಳನ್ನು ಕರೆಸಿ ಜನರಿಗೆ ತೋರಿಸುವ ಕೆಲಸ ಮಾಡುತ್ತಿದ್ದೀರಿ. ಆದರೆ ಇಲ್ಲಿ ಇದು anti-terrorist ಆಂದೋಲನ ಎಂದು ಹೇಳುತ್ತಿದ್ದೀರಿ. ಇದೆಲ್ಲಾ ನಿಮ್ಮ Higher Education Ministerರವರ plan ಆಗಿದೆ. 'ಸಾರ್, ಹೀಗೆ ಮಾಡಿದರೆ ಜನ ಸೇರುತ್ತಾರೆ, ನಾವು ಜನರನ್ನು ಸೇರಿಸಲೇಬೇಕು' ಎಂದು ಅವರು ಹೇಳಿದ ತಕ್ಷಣವೇ, ಮಾನ್ಯ ಯಡಿಯೂರಪ್ಪನವರು ತಮ್ಮ ತಲವಾರನ್ನು ತೆಗೆದು 'Yes, ಆ ರೀತಿ ಮಾಡಿಬಿಡಿ' ಎಂದಿದ್ದಾರೆ. ಇವತ್ತು ಚುನಾವಣಾ ತಂತ್ರವಾಗಿ ಇದನ್ನು ಉಪಯೋಗಿಸುತ್ತಿದ್ದೀರಿ. 'ಇಲ್ಲ' ಎಂದು ನೀವು ಎದೆ ಮೇಲೆ ಕೈಯಿಟ್ಟುಕೊಂಡು ಬೇಕಾದರೆ ಹೇಳಿ, ನೋಡೋಣ. ನೀವು ಆ ರೀತಿಯಾದ ಆಂದೋಲನವೊಂದನ್ನು ಮಾಡಲೇಬೇಕೆಂದಿದ್ದರೆ, ನಿಮ್ಮ ಬಿ.ಜೆ.ಪಿ. ಪಕ್ಷ ಅಧಿಕಾರದಲ್ಲಿರುವ ಎಲ್ಲಾ ರಾಜ್ಯಗಳಲ್ಲೂ ಇದನ್ನು ಮಾಡಬೇಕಾಗಿತ್ತಲ್ಲವೇ? ಬಿ.ಜೆ.ಪಿ. ಸರ್ಕಾರವಿರುವ ಕಡೆಗಳಲ್ಲಿ ಎಷ್ಟು ಕಡೆಗಳಲ್ಲಿ ಈ ರೀತಿಯಾಗಿ ಮಾಡಿದ್ದಾರೆ? ನೀವು ಅಧಿಕಾರವಿರುವ ಮಧ್ಯಪ್ರದೇಶ, ರಾಜಾಸ್ಥಾನ್, ಹಿಮಾಚಲ ಪ್ರದೇಶ ಮುಂತಾದ ಕಡೆಗಳಲ್ಲೆಲ್ಲಾ 10-20 ವರ್ಷಗಳಿಂದ ನೀವು ಇದನ್ನೇ ಮಾಡಿಕೊಂಡು ಬಂದಿದ್ದೀರಾ? ಈಗ ಇದನ್ನು ಚುನಾವಣೆಗೋಸ್ಕರ ತಂದಿದ್ದೀರಿ. Parliament ಚುನಾವಣೆ ಬರುತ್ತಿದೆ, ಜನರನ್ನು ಹೇಗೆ ಸೇರಿಸಬೇಕು? ಯುವಕರಿಗೆ ಏನು ಹೇಳಬೇಕು? ಬೇರೆ opposition partyಯವರನ್ನು ಹೇಗೆ ಇಕ್ಕಟ್ಟಿಗೆ ಸಿಲುಕಿಸಬೇಕು?' ಎಂದು ಯೋಚಿಸಿ ಈ ರೀತಿ ಮಾಡಿದ್ದೀರಿ. ನಿಮಗೆ ಧೈರ್ಯವಿದ್ದರೆ ನಿಮ್ಮವರನ್ನು ಕರೆಸಿಕೊಳ್ಳಿ ಎಂದು ಹೇಳುತ್ತೀರಿ. ಅದರ ಅರ್ಥವೇನೆಂದರೆ, 'ಅಲ್ಲಿರತಕ್ಕ ವಿದ್ಯಾರ್ಥಿಗಳು ನಿಮ್ಮವರು, ಅದಕ್ಕೆ ಏನಾದರೂ ವಿರುದ್ಧವಾಗಿ ಹೇಳತಕ್ಕವರು ನಮ್ಮವರು, ಇದ್ದರೆ ಕರೆದುಕೊಂಡು ಬನ್ನಿ'. ಅಂದರೆ ವಿದ್ಯಾರ್ಥಿಗಳಲ್ಲಿ ನೀವು ವಿಭಜನೆ ಮಾಡುತ್ತಿದ್ದೀರಿ, ಒಡಕು ಉಂಟು ಮಾಡುತ್ತೀದ್ದಿರಿ ಎನ್ನುವುದಕ್ಕೆ ನಿಮ್ಮ ಮಾತೇ ಸಾಕ್ಷಿಯಾಗಿದೆ. ದಯವಿಟ್ಟು ಇಂತಹ ಒಡಕಿನ ಮಾತನ್ನು ಆಡಿ ರಾಜ್ಯದಲ್ಲಿ ಸಮಾಜವನ್ನು ಒಡೆಯಬೇಡಿ. ಹೀಗೆಯೇ ನಿಮ್ಮ ಬಜೆಟ್‌ನಲ್ಲಿ grantsಗಳನ್ನು ಕೊಟ್ಟು ಸಮಾಜವನ್ನು ಒಡೆಯತಕ್ಕಂಥ ಕೆಲಸ ಮಾಡಿದ್ದೀರಿ. ಬೇರೆ ಜನ ಸಮಾಜವನ್ನು

ಸೇರಿಸತಕ್ಕದ್ದನ್ನು ಮಾಡಿದ್ದರೆ, ಎಲ್ಲರನ್ನೂ ಕೂಡಿಸತಕ್ಕದ್ದನ್ನು ಮಾಡಿದ್ದರೆ, ನೀವು ಸಮಾಜವನ್ನು ಒಡೆಸತಕ್ಕಂಥ ಪ್ರಯತ್ನವನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದೀರಿ. ಅದು ಕೇವಲ ಓಟಿಗೋಸ್ಕರ, ಓಟ್ ಬ್ಯಾಂಕ್ ಮಾಡಿಕೊಳ್ಳುವುದಕ್ಕೋಸ್ಕರ ಆ ಸ್ಥಿತಿಯನ್ನು ಇವತ್ತು ನೀವು ನಿರ್ಮಾಣ ಮಾಡುತ್ತಿದ್ದೀರಿ. ಆದರೆ ಬೇರೆಯವರಿಗೆ ಮೈನಾರಿಟಿ ಓಟ್ ಬ್ಯಾಂಕ್, ಷೆಡ್ಯೂಲ್ಡ್ ಕ್ಯಾಸ್ಟ್ ಓಟ್ ಬ್ಯಾಂಕ್ ಮಾಡಿಕೊಳ್ಳುತ್ತೀದ್ದೀರಿ ಎಂದು ಹೇಳುತ್ತೀರಿ. ಅವರೆಲ್ಲರೂ ಇವತ್ತು ನಿಮ್ಮ ಕೆಲಸ ನೋಡಿ ನಿಮ್ಮ ಕಡೆಗೆ ಬಂದಿದ್ದಾರೆಂದು ಹೇಳಿಕೊಳ್ಳುತ್ತಿದ್ದೀರಿ. ಅವರೆಲ್ಲಾ ನಿಮ್ಮ ಕೆಲಸ ಅಥವಾ ನಿಮ್ಮ ಮೇಲಿನ ಪ್ರೀತಿಯಿಂದ ನಿಮ್ಮ ಕಡೆಗೆ ಬಂದಿಲ್ಲ, ನಿಮ್ಮ ಕುತಂತ್ರದಿಂದ ಬಂದಿದ್ದಾರೆ. ಯಾವುದೇ ರೀತಿಯಿಂದ ಸಮಾಜವನ್ನು ಒಡೆಯಬೇಕೆಂದು ನೀವು ನೋಡುತ್ತೀದ್ದೀರಿ. ಯ್ಯಾರ ಮತ ಸೆಳೆದುಕೊಳ್ಳಬೇಕಾದರೆ ಯಾರಿಗೆ grant ಕೊಡಬೇಕು? ಯಾವ ಮತ ಗಟ್ಟಿ ಮಾಡಬೇಕೆಂದರೆ ಯಾರನ್ನು ಬಲಿ ಕೊಡಬೇಕು? ಯಾರನ್ನು ಸೇರಿಸಬೇಕು? ಎಂದೆಲ್ಲಾ ನೀವು ಯೋಚಿಸಿದ್ದೀರಿ. ನೀವು ಎಲ್ಲಿಯವರೆಗೂ ಹೋಗಿದ್ದೀರಿ ಎಂದರೆ, Backward Class Commission Report ಇಲ್ಲದೆ, ಯಾವುದೇ ಒಂದು ವರದಿಯಿಲ್ಲದೆ, ಎಲ್ಲಾ ಜನರನ್ನು ಎ ಗ್ರೂಪ್, ಬಿ ಗ್ರೂಪ್, ಸಿ ಗ್ರೂಪ್ ಮತ್ತು ಡಿ ಗ್ರೂಪ್ ಎಂದು ಎಲ್ಲಾ ಕಡೆಗಳಲ್ಲೂ ಸೇರಿಸಿದ್ದೀರಿ. ಅದನ್ನೆಲ್ಲಾ ಯಾವ report ಆಧಾರದ ಮೇಲೆ ನೀವು ಮಾಡಿದ್ದೀರಿ? ಎಂಬುದನ್ನು ಹೇಳಿ ನೋಡೋಣ. Cabinet decision ತೆಗೆದುಕೊಂಡು ಮನಸ್ಸಿಗೆ ಬಂದಂತೆ ಸೇರಿಸಿ ಬಿಟ್ಟಿದ್ದೀರಿ. ಇದಕ್ಕಾಗಿ ಅನೇಕ reportಗಳಿವೆ. ಅನೇಕ ಜನ ಪ್ರಯತ್ನ ಪಟ್ಟು, statistics ಇಟ್ಟು, ಇಡೀ ದೇಶ ಸಂಚಾರ ಮಾಡಿ, ರಾಜ್ಯದಲ್ಲಿ, ರಾಷ್ಟ್ರದಲ್ಲಿ ಇದರ ಬಗ್ಗೆ ಹೋರಾಟ ನಡೆದು, ಅಂತಿಮವಾಗಿ ಕೆಲವು ನಿರ್ಣಯಕ್ಕೆ ಬಂದು, ಇಂತಿಂಥ ಕೋಮುಗಳನ್ನು ಇಂತಿಂಥದ್ದಕ್ಕೆ ಸೇರಿಸಬೇಕೆಂದು ಮಾಡಿರುವುದನ್ನು, ನೀವು ಒಂದೇ ಚಟಾಕಿನಲ್ಲಿ ಬೇರೆಯವರನ್ನೂ ಅದಕ್ಕೆ ಸೇರಿಸಿದ್ದೀರಿ. ಯಾರು deserving ಇದ್ದಾರೆ, ಅವರಿಗೆ ಕೊಡಿ, ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ಆದರೆ whims and fancy ಮೇಲೆ, ಮುಂಜಾನೆ ಒಂದು ಆರ್ಡರ್, ಸಾಯಂಕಾಲ ಒಂದು ಆರ್ಡರ್ ಮಾಡುತ್ತೀದ್ದೀರಿ, ಇದು ಸರಿಯಲ್ಲ. ಇದೆಲ್ಲಾ vote bank ಪಡೆದುಕೊಳ್ಳಲು ಮಾಡಿದ್ದಲ್ಲವೇ? ನೀವು ಮಾಡತಕ್ಕದ್ದು ರಾಜಕಾರಣವಲ್ಲವೇ? ಇಂಥದ್ದೆಲ್ಲವೂ ಕೂಡ ಇವತ್ತು ನಡೆದಿದೆ. ಅದಕ್ಕೆ ಎ.ಎಸ್.ಪಾಟೀಲ್ ಅವರು ಒಂದು ಸಲಹೆಯನ್ನು ಕೊಟ್ಟರು. ನೀವು ನಿಜವಾಗಲೂ ಈ ವಿದ್ಯಾರ್ಥಿಗಳ ಬಗ್ಗೆ, ಅವರಲ್ಲಿ ಸ್ವಾಭಿಮಾನವನ್ನು ಮೂಡಿಸಬೇಕು, ದೇಶಪ್ರೇಮವನ್ನು ಹೆಚ್ಚಿಸಬೇಕು, ಒಗ್ಗಟ್ಟನ್ನು ತರಬೇಕು, ಸಮಾಜ ಐಕ್ಯತೆಯಿಂದ ಇರಬೇಕೆಂದರೆ ಅವರು ಹೇಳಿದಂತೆ ಆ ವಿದ್ಯಾರ್ಥಿಗಳಿಗೆ ಕಂಪಲ್ಸರಿ ಎನ್.ಸಿ.ಸಿ ಟ್ರೈನಿಂಗ್ ಕೊಡಿ, ಸ್ಕೌಟ್ಸ್ ಮಾಡಿಸಿ, ಎನ್.ಎಸ್.ಎಸ್ ಮಾಡಿಸಿ. ಇವೆಲ್ಲಾ ಸರ್ಕಾರದ್ದೆ ಮಾನ್ಯತೆ ಮಾಡಿದ ಸಂಸ್ಥೆಗಳು, ಇದಕ್ಕೆ ಮತ್ತೇ ಬೇರೆ ಏತಕ್ಕೆ ಬೇಕು? ಇದೆಲ್ಲಾ

ಇದ್ದರೂ ಕೂಡ ವಿಪರೀತಕ್ಕೆ ಬೇಕಲ್ಲ, ಏಕೆಂದರೆ, ಇವರ ಸ್ಪೀಕರ್ಸ್ ಬರಬೇಕು, ಇವರ ಜನ ಮಾತನಾಡಬೇಕು, ಇವರ ಐಡಿಯಾಲಜಿ ಆ ಮಕ್ಕಳ ಮೇಲೆ ಬೀರಬೇಕು, ಇವರ ವಿಚಾರಗಳು ಆ ಮಕ್ಕಳ ಮೇಲೆ ಬಿದ್ದರೆ, ಆ ಐಡಿಯಾಲಜಿ ಮೇಲೆ ನಡೆದುಕೊಂಡು ಹೋಗುವಂಥ ವಿದ್ಯಾರ್ಥಿಗಳು ಆ ಮಕ್ಕಳ ಮೇಲೆ ಬಿದ್ದರೆ, ಆ ಐಡಿಯಾಲಜಿ ಮೇಲೆ ನಡೆದುಕೊಂಡು ಹೋಗುವಂಥ ವಿದ್ಯಾರ್ಥಿಗಳು ನಾಳೇ ನಮ್ಮ ಫಾಲೋಯರ್ಸ್ ಆಗುತ್ತಾರೆ, ನಮಗೆ ಮತ ಕೊಡುತ್ತಾರೆ, ನಮ್ಮ ಪ್ರಚಾರಕ್ಕಾಗುತ್ತಾರೆಂದು ಹೇಳಿ ಇವತ್ತಿನ ದಿವಸ ನೀವು ಎನ್.ಎಸ್.ಎಸ್ ಬಿಟ್ಟು ಸ್ಕೌಟ್ ಬಿಟ್ಟು ಮತ್ತೆ ಎನ್‌ಸಿಸಿ ವಿದ್ಯಾರ್ಥಿಗಳನ್ನು ಕಡೆಗಣಿಸಿ ಈ ರೀತಿಯಾಗಿ ಮಾಡುತ್ತೀದ್ದೀರಿ. ಒಂದು ವೇಳೆ ಆ ದೇಶಭಕ್ತಿಯ ಭಾವನೆ ಇದ್ದರೆ ಈ ಎಲ್ಲಾ ವಿದ್ಯಾರ್ಥಿಗಳು ರೆಡಿಯಾಗಿಯೇ ಇದ್ದರಲ್ಲಾ? ಅವರ ಉಪಯೋಗವನ್ನು ಮಾಡಿಕೊಳ್ಳಬಹುದಾಗಿತ್ತು, ಮತ್ತೆ ಅನೇಕ ರೀತಿಯಲ್ಲಿ ಮಕ್ಕಳ ಮೇಲೆ ಪರಿಣಾಮ ಬೀರಲು ಸಾಧ್ಯವಾಗುತ್ತಿತ್ತು, ಅದನ್ನು ಬಿಟ್ಟು ಒಡಕಿನ ಮಾತು ಆಡುವುದು. ವಿರೋಧ ಪಕ್ಷದ ನಾಯಕರನ್ನು ನಾವು ಆಹ್ವಾನಿಸಿದ್ದೆವು ಎಂದು ಹೇಳಿದರು, ಯಾವಾಗ ಆಹ್ವಾನಿಸಿದ್ದರು? ಬೆಳಗಾಂ ಅಧಿವೇಶನ ನಡೆಯುವಾಗ, ನಾನು ಅಧಿವೇಶನದಲ್ಲಿದ್ದೇನೆ, ನನಗೆ ಒಂದು ಕಾರ್ಡ್ ತಂದು ಕೊಡುತ್ತಾರೆ, ಅದನ್ನು ನನ್ನನ್ನು ಕೇಳಿ ಪ್ರಿಂಟ್ ಮಾಡಿದರೇ? ಯಾವ ದಿವಸ ಮಾಡುತ್ತೇವೆಂದು ನನಗೆ ಹೇಳಿದ್ದರಾ? ಅಥವಾ ಎಲ್ಲಿ ಬರಬೇಕು, ಯಾರು ಬರಬೇಕೆಂದು ಅಲ್ಲಿನವರ್ಯಾರಾದರೂ ಬಂದು ನನ್ನನ್ನು ಕೇಳಿದ್ದರೇ? ಸುಮ್ಮನೆ ಪ್ರಿಂಟ್ ಮಾಡುವುದು, ಇವರಿಗೆ ಯಾವಾಗ ಪುರುಸೋತ್ತು ಇರತ್ತದೆಯೊ ಆ ಟೈಂ ಡೇಟ್ ಹಾಕಿಕೊಂಡು ಪ್ರಿಂಟ್ ಮಾಡಿ ಒಯ್ದು ಕೊಟ್ಟುಬಿಡಿ, ಬಂದರೆ ಬರಲಿ, ಹೋದರೆ ಹೋಗಲಿ ಎನ್ನುವುದು. ಈ ರೀತಿಯಾದ ಒಂದು ನಡವಳಿಕೆಗೆ ನಾನೇನು ಹೇಳಬೇಕೆಂಬುದೇ ಅರ್ಥವಾಗುತ್ತಿಲ್ಲ. ಅದಕ್ಕೆ ನಾನು ಇವತ್ತು ಸ್ಪಷ್ಟವಾಗಿ ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ, ದಯವಿಟ್ಟು ನೀವು ಏನೇ ಸಮರ್ಥನೆ ಮಾಡಿಕೊಂಡರೂ ಕೂಡ, ಇದರಲ್ಲಿ ಗೃಹಸಚಿವರು ಎಡವಿದ್ದಾರೆ, ಅವರ ಕೈಯಿಂದ ಸಮರ್ಥವಾಗಿ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅದಕ್ಕಾಗಿ ಅವರನ್ನು ಕೈಬಿಡಬೇಕು ಹೊಸದಾಗಿ ಬೇಕಾದರವನ್ನು ನೀವು ಮಾಡಿಕೊಳ್ಳಿ ನಿಮಗೆ ಡಿಸ್ಕ್ರಿಷನ್ ಇದೆ, ನೀವೇ ಬೇಕಾದರೆ ಆ ಖಾತೆಯನ್ನು ವಹಿಸಿಕೊಳ್ಳಿ, ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ[ಮುಖ್ಯಮಂತ್ರಿಗಳು]: ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪ್ರತಿಪಕ್ಷದ ನಾಯಕರು, ನಮ್ಮ ಪಕ್ಷಕ್ಕೆ ಒಳ್ಳೆಯದಾಗಬೇಕು, ಹೆಚ್ಚು ಕಾಲ ಆಡಳಿತದಲ್ಲಿ ಮುಂದುವರೆಯಬೇಕು ನಾವು ಮಾಡಿದ ತಪ್ಪನ್ನು ಮಾಡಬೇಡಿ, ಎಚ್ಚರಿಕೆಯಿಂದಿರಿ ಎಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ನಾನು ಅತ್ಯಂತ ವಿನಯದಿಂದ ಸ್ವೀಕಾರ ಮಾಡಿದ್ದೇನೆ, ಅದರಲ್ಲಿ ಎರಡನೇ ಮಾತಿಲ್ಲ, ಆದರೆ ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಮ್ಮ ಜನಸಂಘದ ಕಾಲದಲ್ಲಿ ಪಕ್ಷವನ್ನು ಪ್ರಾರಂಭ

ಮಾಡಿದಂಥ ಶ್ಯಾಮಪ್ರಸಾದ್ ಮುಖರ್ಜಿ, ದೀನದಯಾಳ್ ಉಪಾಧ್ಯಾಯ, ಅವರುಗಳ ಬಲಿದಾನವೂ ಸಹ ಆಯಿತು. ಈ ದೇಶಕ್ಕಾಗಿ ಇಂದಿರಾಗಾಂಧಿಯವರಿರಬಹುದು, ಮಹಾತ್ಮ ಗಾಂಧೀಜಿಯವರ ಕಾಲದಿಂದಿಡಿದು, ಸ್ವಾತಂತ್ರ್ಯ ಪೂರ್ವದಲ್ಲಿರಬಹುದು, ನಂತರವಿರಬಹುದು, ಆ ಮಹಾನ್ ನಾಯಕರ ಪರಿಶ್ರಮ, ತ್ಯಾಗ, ಬಲಿದಾನದಿಂದ ಇವತ್ತು ನಾವೆಲ್ಲಾ ಇಲ್ಲಿ ಬಂದು ಕುಳಿತ್ತಿದ್ದೇವೆ, ಆ ಬಗ್ಗೆ ಆ ಪಕ್ಷ ಈ ಪಕ್ಷವೆಂಬ ಪ್ರಶ್ನೆಯಿಲ್ಲ, ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದವರು, ಬಲಿದಾನವಾದಂಥವರನ್ನು ನಾವು ಸ್ಮರಣೆ ಮಾಡಿಕೊಳ್ಳಬೇಕು, ಅದರಲ್ಲಿ ಎರಡನೇ ಮಾತಿಲ್ಲ. ನಾನು ಜೆಡಿಎಸ್ ಸ್ನೇಹಿತರಿಗೆ, ನಿಮ್ಮ ಜೊತೆ ಬಂದ ಮೇಲೆ ಆಡಳಿತ ಅನುಭವವಾಯಿತು, ನಾನು ಹಣಕಾಸಿನ ಸಚಿವನಾಗಿ ಕೊಟ್ಟಂಥ ಎರಡು ಬಜೆಟ್ ಮತ್ತೆ ಅವರು ಮಾಡಿದಂಥ ಅನ್ಯಾಯ ಈ ಎರಡು ನಮ್ಮ ಗೆಲುವಿಗೆ ಅನುಕೂಲವಾಯಿತು ಎಂಬ ಸತ್ಯ ಮಾತನ್ನು ಹೇಳಿದ್ದೇನೆ ಅದರ ಬಗ್ಗೆ ಎರಡು ಮಾತಿಲ್ಲ, ಅದಕ್ಕೆ ನಾನು ಬದ್ಧನಾಗಿದ್ದೇನೆ. ಆದರೆ ಸ್ವಾತಂತ್ರ್ಯ ನಂತರ ನಾವು ಕೊಟ್ಟಂಥ ಚುನಾವಣಾ ಪ್ರಣಾಳಿಕೆ ನೂರಕ್ಕೆ ತೊಂಭತ್ತು ಭಾಗ ಮೊದಲ ಸಾರಿ ರೈತ, ಕೂಲಿ ಕಾರ್ಮಿಕ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರಿಗೆ ಈ ನಾಲ್ಕು ಬಜೆಟ್‌ನಲ್ಲಿ ನಾವೇನು ಮಾಡಿದ್ದೇವೆನ್ನುವ ಬುಕ್‌ಲೆಟ್ ನಿಮಗೆ ಕಳುಹಿಸಿಕೊಡುತ್ತೇನೆ. ಸ್ವಾತಂತ್ರ್ಯ ಬಂದ ಮೇಲೆ ಇವೆಲ್ಲಾ ಮಾಡುವುದಕ್ಕೆ ನಿಮಗೆ ಅವಕಾಶವಿತ್ತು, ನೀವು ಅದನ್ನು ಮಾಡಲಿಲ್ಲ, "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಸಾಮಾಜಿಕ ನ್ಯಾಯ ಈ ಘೋಷಣೆಗಳನ್ನು ಮಾಡಿಕೊಂಡು ನಾವು ಖಾಯಂ ಆಗಿ ಇರುತ್ತೇವೆಂದು ತಿಳಿದುಕೊಂಡಿದ್ದೀರಿ. ನಮ್ಮ ಹೋರಾಟದ ಪರಿಶ್ರಮದಿಂದ ನಾವು ಗೆದ್ದು ಬಂದಿದ್ದೇವೆ. 30 ವರ್ಷ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಇಷ್ಟು ಬೇಗ ನಾವು ಆಡಳಿತಕ್ಕೆ ಬರುತ್ತೇವೆಂದು, ಕನಸು ಮನಸ್ಸಿನಲ್ಲಿ ತಿಳಿದುಕೊಂಡಿರಲಿಲ್ಲ, ಜನರ, ದೇವರ ಆರ್ಶಿವಾದ, ನಿಮ್ಮ ತಪ್ಪುಗಳು ನಮ್ಮನ್ನು ಇಲ್ಲಿ ಕೂರಿಸಿತು, ಅದರಲ್ಲಿ ಎರಡು ಮಾತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬರೀ ಅದನ್ನು ಹೇಳಬೇಡಿ, ಜನರ, ದೇವರ ಆರ್ಶಿರ್ವಾದವಿರಬಹುದು, ಆದರೆ, ಬರೀ ಅರಿಕೆ ಮಾಡಿಕೊಳ್ಳುವುದರಿಂದಲೇ ಮಕ್ಕಳು ಹುಟ್ಟುವುದಿಲ್ಲ, ನಿಮ್ಮ ಪ್ರಯತ್ನವೂ ಇದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: Thank you sir, ಎಂದು ಕ್ಷೇತ್ರಗಳಲ್ಲಿ ವಿಧಾನಸಭೆ ಚುನಾವಣೆಯಾಯಿತು, ನಾವು ಐದು ಜನ ಬಿಜೆಪಿಯವರು ಗೆದ್ದಿದ್ದೇವೆ. ಈ ನಾಡಿನ ಜನ ನಾವು ಮಾಡಿದಂಥ ಅಭಿವೃದ್ಧಿ ಕಾರ್ಯಕ್ಕೆ ಮನ್ನಣೆ ಕೊಟ್ಟು ಜನರು ಆರ್ಶೀರ್ವಾದ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಇನ್ನು ನಾವು ಹೆಚ್ಚು ಎಚ್ಚರಿಕೆಯಿಂದ ನಡೆದುಕೊಳ್ಳಬೇಕೆನ್ನುವ ಖರ್ಗೆಯವರ ಮಾತನ್ನು ನೂರಕ್ಕೆ ನೂರು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ, ಮತ್ತೆ ನಮಗೆ ರಾಜಕೀಯ ಬೇಳೆ ಬೇಯಿಸಿಕೊಳ್ಳಬೇಕೆನ್ನುವುದಿದ್ದರೆ, ಯುವ ಯುವತಿಯರ ರಾಜಕೀಯ ಲಾಭ

ಮಾಡಿಕೊಳ್ಳಬೇಕೆನ್ನುವ ಉದ್ದೇಶ ನಮಗೆ ಇದ್ದಿದ್ದರೆ, ನಾನು ಪ್ರಧಾನಮಂತ್ರಿಯವರಿಗೆ ಪತ್ರವನ್ನು ಬರೆಯುತ್ತಿರಲಿಲ್ಲ. ಅವರಿಗೆ ಬರೆದ ಪತ್ರದ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಪ್ರಧಾನ ಮಂತ್ರಿಗಳಿಗೆ ಅತ್ಯಂತ ವಿನಯದಿಂದ ಪತ್ರವನ್ನು ಬರೆದಿದ್ದೇನೆ. ನೀವು ನಮ್ಮನ್ನು ಕರೆದು ಭಯೋತ್ಪಾದನೆ ವಿರುದ್ಧ ಸಭೆ ಮಾಡಿದ ಪರಿಣಾಮ ಕರ್ನಾಟಕದಲ್ಲಿ ಪ್ರಯೋಗ ಮಾಡಿದ್ದೇವೆ, ಮೊದಲಬಾರಿಗೆ ಲಕ್ಷಾಂತರ ಯುವಕ ಯುವತಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ, ಇಡೀ ದೇಶದಲ್ಲಿ ನಿಮ್ಮ ನೇತೃತ್ವದಲ್ಲಿ ಈ ರೀತಿಯ ಕಾರ್ಯಕ್ರಮವನ್ನು ಮಾಡಿ, ಈ ಭಯೋತ್ಪಾದನೆಯ ವಿರುದ್ಧ ದೇಶಭಕ್ತಿಯ, ರಾಷ್ಟ್ರಭಕ್ತಿಯ ಜನಜಾಗೃತಿ ಮಾಡುವುದಕ್ಕೆ ನಿಮ್ಮ ಸಹಕಾರವನ್ನು ಕೊಡಬೇಕು, ನಿಮ್ಮ ನೇತೃತ್ವ ವಹಿಸಿಬೇಕು, ನಮ್ಮ ರಾಜ್ಯದಲ್ಲಿ ಇಂಥ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ನಿಮ್ಮ ಕಾಂಗ್ರೇಸ್ ಪಕ್ಷದವರೇ ಹುಳಿಹಿಂಡುವಂಥ ಕೆಲಸವನ್ನು ಮಾಡುತ್ತಿದ್ದಾರೆಂದು ಅದನ್ನು ಕೂಡ ಉಲ್ಲೇಖಿಸಿ ನಾನು ಪ್ರಧಾನಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಇವತ್ತು ನಾನು ಮಲ್ಲಿಕಾರ್ಜುನ ಖರ್ಗೆಯವರನ್ನು ಕೇಳುವುದಕ್ಕೆ ಇಚ್ಚೆಪಡುವುದೇನೆಂದರೆ, ತಾವು ಕೂಡ ಇಲ್ಲಿ ಗೃಹ ಸಚಿವರಾಗಿದ್ದಿರಿ, ರಾಜ್‌ಕುಮಾರ್ ಅಪಹರಣ ಯಾರ ಕಾಲದಲ್ಲಾಯಿತು ಸ್ವಾಮಿ? ಏನೇನು ಘಟನಾವಳಿಗಳಾಯಿತು, ತಾವು ರಾಜೀನಾಮೆ ಕೊಟ್ಟರಾ ಸ್ವಾಮಿ? ವಿರೋಧಪಕ್ಷದಲ್ಲಿದ್ದಾಗ ತಾವು ತಮ್ಮ ಕರ್ತವ್ಯವನ್ನು ಮಾಡುತ್ತಿದ್ದೀರಿ, ನನ್ನದೇನೂ ಅಭ್ಯಂತರವಿಲ್ಲ, ಏನು ವಿಷಯ ಇಲ್ಲದಾಗ ರಾಜೀನಾಮೆ ಕೊಡಲಿ ಎಂದು ಹೇಳಿದರೆ, ನೀವು ತಾನೆ ಏನು ಹೇಳಬಹುದು? ಅದನ್ನು ನಾನು ತಪ್ಪೆಂದು ಹೇಳುತ್ತಲೇ ಇಲ್ಲ. ಆದರೆ ನಿಮ್ಮ ಕಾಲದಲ್ಲೂ ಈ ಘಟನಾವಳಿಗಳು ನಡೆಯಿತು, ಆ ಸಂಧರ್ಭದಲ್ಲಿ ಏನು ನಡೆಯಿತೆಂಬುದು ನಿಮಗೆ ಗೊತ್ತಿದೆ. ಮತ್ತೆ ಸೋನಿಯ ಗಾಂಧಿಯವರು ವಿರೋಧಪಕ್ಷದ ನಾಯಕಿಯಾಗಿದ್ದಾಗ ಕರ್ನಾಟಕ ರಾಜ್ಯಕ್ಕೆ ತಮ್ಮ ಪಕ್ಷದಿಂದ ವಿವಿಧ ಕಾರ್ಯಕ್ರಮಕ್ಕೆ ಕರೆಯಿಸಲಿಲ್ಲವೇ? ಬೇಲೂರು ಕಾರ್ಯಕ್ರಮವೇ ಉದಾಹರಣೆ. ಅದೇರೀತಿ ಮುಂದಿನ ಭಾವಿ ಪ್ರಧಾನಿ ಮಂತ್ರಿ, ಪ್ರತಿಪಕ್ಷದ ನಾಯಕರಾದ ಲಾಲ್ ಕೃಷ್ಣ ಅಡ್ವಾಣಿಯವರನ್ನು ಕರ್ನಾಟಕಕ್ಕೆ ಕರೆಯಿಸುತ್ತಿದ್ದೇನೆ. ಲಕ್ಷಾಂತರ ಯುವಕ ಯುವತಿಯರನ್ನು ಸೇರಿಸುವುದಕೋಸ್ಕರ ಅವರನ್ನು ಕರೆಯುತ್ತಿರುವುದು ನಿಜ.

ಶ್ರೀ ಯು.ಟಿ.ಖಾದರ್: ಪಾಕಿಸ್ತಾನದ ಮಹಮದ್ ಆಲಿ ಜಿನ್ನಾರವರನ್ನು ಹೊಗಳಿದವರನ್ನು, ಭಯೋತ್ಪಾದಕ ರಾಷ್ಟ್ರಕ್ಕೆ ಹೋದವರನ್ನು ಕರ್ನಾಟಕಕ್ಕೆ ಕರೆಯಿಸುತ್ತೀದ್ದೀರಿ...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ಇಷ್ಟನ್ನೇ ಹೇಳುವುದಕ್ಕೆ ಇಚ್ಚೇಪಡುತ್ತೇನೆ, ಹಿಂದೆ ಗ್ರಾಮದ ಹೊಲಗಳಲ್ಲಿ ಭಯಂಕರವಾಗಿ ಹುಲ್ಲುಗಲು ಬೆಳೆಯುತ್ತಿದ್ದವು. ಆ ಹುಲ್ಲು ಆ ಬೆಳೆಯನ್ನೇ ಬೆಳೆಯುವುದಕ್ಕೆ ಬಿಡುತ್ತಿರಲಿಲ್ಲ, ಅದಕ್ಕ ಪಾರ್ಥೇನಿಯಂ ಎಂದು ಹೇಳುತ್ತಿದ್ದರು, ಜನ ಸಾಮನ್ಯರು ಕಾಂಗ್ರೆಸ್ ಹುಲ್ಲು

ಎಂದೂ ಕೂಡ ಕರೆಯುತ್ತಿದ್ದರು. ಆದುದರಿಂದ ನಾವು ಅತ್ಯಂತ ಎಚ್ಚರಿಕೆಯಿಂದ ನೀವು ಮಾಡಿದಂಥ ತಪ್ಪುಗಳು ನಮ್ಮಿಂದಾಗದಂತೆ ಎಚ್ಚರಿಕೆಯಿಂದ ಆಡಳಿತವನ್ನು ನಡೆಸುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವತ್ತು ದೇಶಭಕ್ತಿ, ರಾಷ್ಟ್ರಭಕ್ತಿಯ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇವತ್ತು ನಿಮಗಿಲ್ಲ, ಏಕೆಂದರೆ, ಅದು ಇದ್ದಿದ್ದರೆ, ಇವತ್ತು ಬಯೋತ್ಪಾದನೆಯ ವಿರುದ್ಧ ಹೋರಾಟ ಮಾಡುವಂತೆ ಆ ಯುವಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾಲದಲ್ಲಿ, ಹೆಜ್ಜೆಗೆ ಹೆಜ್ಜೆಯನ್ನಿಟ್ಟು ರಾಜಕೀಯವನ್ನು ಬೆರಸದೆ ನಮ್ಮ ಜೊತೆಯಲ್ಲಿ ಹೆಜ್ಜೆಯನ್ನು ಇಡುತ್ತಿದ್ದೀರಿ.

(ಗೊಂದಲ)

ಗಲಾಟೆ ಮಾಡಿ ಟೇಬಲ್ ಕುರ್ಚಿ ಎಳೆದಾಡಿ ತೊಂದರೆ ಮಾಡಿರುವುವುದು ನಿಮ್ಮ ಪಕ್ಷದವರೇ ತಾನೆ. ಮಂಗಳೂರು ಘಟನೆಗೂ ಇಲ್ಲಿಗೂ ಏನು ವ್ಯತ್ಯಾಸ ಇದೆ? ನಾನು ಹೆಚ್ಚು ಮಾತನಾಡಿ ನಿಮಗೆ ನೋವನ್ನುಂಟು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ವಿರೋಧ ಪಕ್ಷದ ಸದಸ್ಯರಿಗೆ ಇಷ್ಟೇ ವಿನಂತಿ ಮಾಡುವುದು, ನೀವು ಏನು ಮಾತನಾಡುತ್ತೀರಿ, ಅದನ್ನು sportive ಆಗಿ ತೆಗೆದುಕೊಳ್ಳೋಣ, ಇದರಲ್ಲಿ ಯಾರನ್ನೂ ಚುಚ್ಚಿ ಮಾತನಾಡಬೇಕೆನ್ನುವ ಭಾವನೆ ನನಗಿಲ್ಲ. ನಾನು ನಿಮಗೆ ಇಷ್ಟೇ ವಿನಂತಿ ಮಾಡುವುದು. ಯಾವುದು ಸರಿ, ಯಾವುದು ತಪ್ಪು ಎನ್ನುವುದು ತೀರ್ಮಾನ ಮಾಡುವುದಕ್ಕೆ ಏಪ್ರಿಲ್ ಮೊದಲನೇ ವಾರದಲ್ಲಿಯೋ ಎರಡನೇ ವಾರದಲ್ಲಿಯೋ ಲೋಕಸಭೆ ಚುನಾವಣೆ ನಡೆಯುತ್ತಿದೆ. ನಾವು ಕರ್ನಾಟಕ ರಾಜ್ಯದಲ್ಲಿ ಮಾಡಿರುವಂತಹ ಅಭಿವೃದ್ಧಿಯನ್ನೇ ಆಧಾರವಾಗಿಟ್ಟುಕೊಂಡು, ನಿಮ್ಮ ವೈಫಲ್ಯತೆಯನ್ನು ಆಧಾರವಾಗಿಟ್ಟುಕೊಂಡು, ಕೇಂದ್ರ ಸರ್ಕಾರದ ವೈಫಲ್ಯತೆಯನ್ನು ಆಧಾರವಾಗಿಟ್ಟುಕೊಂಡು ಚುನಾವಣೆಯಲ್ಲಿ 20 ರಿಂದ 22 ಸೀಟುಗಳನ್ನು ಗೆಲ್ಲುತ್ತೇವೆ. ಮಾನ್ಯ ಲಾಲ್‌ಕೃಷ್ಣ ಅದ್ವಾನಿಯವರನ್ನು ಪ್ರಧಾನ ಮಂತ್ರಿಗಳನ್ನಾಗಿ ಮಾಡಿ ತೋರಿಸುತ್ತೇವೆ. ಈ ನಾಡಿನ ಜನ ನಮಗೆ ಆಶೀರ್ವಾದ ಮಾಡುತ್ತಾರೆನ್ನುವ ವಿಶ್ವಾಸ ನನಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ ಎಂ.: ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಿರಿಟೆಡ್ ಸ್ಪೀಚ್ ಮಾಡಿದರು. ಏಕೆ ಮಾಡಿದರು ಎಂದರೆ, ಅವರು ಜನರಿಗೆ ಹುರಿದುಂಬಿಸುವುದಕ್ಕೆ ಪರಿಸ್ಥಿತಿ ಏನಿದೆ ಎಂದು ಅವರಿಗೆ ಗೊತ್ತಿದೆ. I am not going to yield ಮಾನ್ಯ ಮುಖ್ಯಮಂತ್ರಿಗಳು ಸ್ಪೀಚ್ ಏನಿದೆ, ಅದು ಚುನಾವಣಾ ಪೂರ್ವದ ಸ್ಪೀಚ್. ಏಕೆಂದರೆ first second ಗೆ ನೋಟಿಫಿಕೇಷನ್ ಆಗುತ್ತದೆ. ಈಗ ಅವರಿಗೆ ಬೇರೆ ಯಾವುದೇ ವೇದಿಕೆ ಸಿಗುವುದಿಲ್ಲ. ಏನಾದರೂ ವೇದಿಕೆ ಸಿಕ್ಕರೆ ಮಠ ಮಂದಿರಗಳಲ್ಲಿ ಸಿಗುತ್ತದೆ. ರಾಜಕೀಯ ಮಾತನಾಡುವುದಕ್ಕಾಗುವುದಿಲ್ಲ. ಆದರೂ ಅವರು ಮಾತನಾಡುವುದು ಬಿಡುವುದಿಲ್ಲ. ಅವರು ಹೇಳಿಯೇ ಹೇಳುತ್ತಾರೆ. ನೋಡಿ ಸ್ವಾಮಿಗಳೇ ವಿರೋಧ ಪಕ್ಷದಲ್ಲಿರುವ

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಯಾವ ದಿನಾಂಕದಿಂದ ಜಾರಿಗೆ ಬರುವಂತೆ 58 ವರ್ಷದಿಂದ 60 ವರ್ಷಕ್ಕೆ ಏರಿಸಲಾಗಿದೆ. ಈ ಆದೇಶದ ರೂಪುರೇಷೆಗಳೇನು;

ಸರ್ಕಾರದ ಆದೇಶ ಸಂಖ್ಯೆ; ಸಿಆಸುಇ 44 ಸೇನಿಸಿ 2008 ದಿನಾಂಕ 28.7.2008 ರಲ್ಲಿ ದಿನಾಂಕ 17.7.2008 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58 ವರ್ಷಗಳಿಂದ 60 ವರ್ಷಗಳಿಗೆ ಹೆಚ್ಚಿಸಲಾಗಿದೆ. ಈ ಆದೇಶವು ನ್ಯಾಯಾಂಗ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ (local bodies) ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಅನ್ವಯವಾಗುತ್ತದೆ.

ಆ) ಈ ಏರಿಕೆಯಿಂದಾಗಿ ಪ್ರಸ್ತುತ ಎರಡು ವರ್ಷದಲ್ಲಿ ನಿವೃತ್ತಯಾಗಬೇಕಾಗಿದ್ದ ಸಿಬ್ಬಂದಿ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ದರ್ಜೆವಾರು ವಿವರ ನಿಡುವುದು);

ವಾರ್ಷಿಕವಾಗಿ ಸರಾಸರಿ ವಿವಿಧ ದರ್ಜೆಯ 15,000 ನೌಕರರು ನಿವೃತ್ತರಾಗುತ್ತಾರೆ. ಈ ಆದೇಶದಿಂದಾಗಿ ಸುಮಾರು 30,000 ನೌಕರರ ನಿವೃತ್ತಿಯು ಎರಡು ವರ್ಷಗಳು ಮುಂದಕ್ಕೆ ಹೋಗುತ್ತದೆ.

0-1053-107

ಇ) ಈ ಅವಧಿಯಲ್ಲಿ (ಎರಡು ವರ್ಷದಲ್ಲಿ) ಹೊಸದಾಗಿ ನೇಮಕಗೊಳ್ಳಬೇಕಾದ ಸಿಬ್ಬಂದಿಗಿಂತ ನಿವೃತ್ತಿ ಹೊಂದಬೇಕಾಗಿದ್ದ ಸಿಬ್ಬಂದಿಗೆ ಎಷ್ಟು ಹೆಚ್ಚಿನ ವೇತನ ನೀಡಬೇಕಾಗಿದೆ (ಇಲಾಖಾವಾರು ವಿವರ ನೀಡುವುದು)

ಹೊಸದಾಗಿ ನೇಮಕವಾಗುವ ಸಿಬ್ಬಂದಿಗೆ ನೀಡುವ ವೇತನದ ಎರಡು ಪಟ್ಟು ವೇತನವನ್ನು ನಿವೃತ್ತರಾಗುವ ಸಿಬ್ಬಂದಿಯು ಪಡೆಯುತ್ತಿರುತ್ತಾರೆ. ಆದರೆ ನಿವೃತ್ತರಾಗುವ ಸಿಬ್ಬಂದಿಗೆ ಅವರ ಮೂಲ ವೇತನದ ಅರ್ಧದಷ್ಟನ್ನು ವಿಶ್ರಾಂತಿ ವೇತನವಾಗಿ ನೀಡಲಾಗುತ್ತದೆ. ಅಲ್ಲದೆ ಒಂದು ಬಾರಿಯ ಪಾವತಿಯಾಗಿ ನಿವೃತ್ತಿ ಉಪದಾನವನ್ನು ನೀಡಲಾಗುತ್ತದೆ.

ಈ) ನಿವೃತ್ತಿ ವಯಸ್ಸಿನ ಏರಿಕೆಯಿಂದ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುವುದಿಲ್ಲವೇ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

ಜುಲೈ 2008 ರಲ್ಲಿ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಪರಿಶೀಲಿಸಿದಾಗ ರಾಜ್ಯದ ವಿವಿಧ ಇಲಾಖೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳಿದ್ದವು. ನಿರುದ್ಯೋಗಿ ಯುವಕರು ಅವಕಾಶ ವಂಚಿರಾಗುವುದನ್ನು ತಪ್ಪಿಸಲು ಸರ್ಕಾರಿ ಸೇವೆಗೆ ಸೇರಲು ನಿಗದಿಪಡಿಸಿದ್ದ ಗರಿಷ್ಠ ವಯೋಮಿತಿಯನ್ನು 2 ವರ್ಷಗಳಷ್ಟು ಹೆಚ್ಚಿಸಿ ದಿನಾಂಕ 18.12.08 ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ. ಈ ಎಲ್ಲಾ ಕಾರಣಗಳಿಂದ ನಿರುದ್ಯೋಗ ಸಮಸ್ಯೆಯು ಹೆಚ್ಚಾಗುವ ಅವಕಾಶವಿರುವುದಿಲ್ಲ.

144 ಬಾಲಕೃಷ್ಣ ಹೆಚ್.ಸಿ.(ಮಾಗಡಿ)

ಡಾ||ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ವಿಧಾನಸೌಧದ ಮುಂಭಾಗದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸಲು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಣಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇಲ್ಲ. ದಿವಂಗತ ನೇತಾಜಿ ಸುಭಾಶ್ ಚಂದ್ರ ಬೋಸ್ ಹಾಗೂ ಎಸ್.ನಿಜಲಿಂಗಪ್ಪ ರವರುಗಳ ಸ್ಮಾರಕಗಳನ್ನು ವಿಧಾನಸೌಧದ ಅಸುಪಾಸಿನಲ್ಲಿ ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ವಿಧಾನಸೌಧದ ಸುತ್ತಮುತ್ತ ಈ ರೀತಿಯ ಪ್ರತಿಮೆ, ಪುತ್ಥಳಿ ಇತ್ಯಾಧಿಗಳನ್ನು ಸ್ಥಾಪಿಸದಂತೆ ನಿರ್ಬಂಧಗಳನ್ನು ವಿಧಿಸಿ ರಾಜ್ಯ ಉಚ್ಛ ನ್ಯಾಯಾಲಯವು 2001ನೇ ಸಾಲಿನಲ್ಲಿ ತೀರ್ಪು ನೀಡಿರುತ್ತದೆ. ಈ ಕಾರಣದಿಂದಾಗಿ ಪ್ರತಿಮೆ ಸ್ಥಾಪನೆ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹಾಗಾದರೆ ಈ ಪ್ರತಿಮೆ ಸ್ಥಾಪನೆಗೆ ಎಷ್ಟು ಹಣವನ್ನು ಕಾಯ್ದಿರಿಸಲಾಗಿತ್ತು

ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ವಿಷಯದಲ್ಲಿ ತಜ್ಞರ ಸಲಹೆಯನ್ನು ಪಡೆದು ಈಗಾಗಲೇ ಪ್ರತಿಮೆ ಕೆಲಸ ಪ್ರಾರಂಭವಾಗಿದ್ದಿದ್ದು ನಿಜವೇ

ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಪ್ರತಿಮೆ ಅನಾವರಣದ ಬಗ್ಗೆ ಇಷ್ಟು ವಿಳಂಬವಾಗಲು ಕಾರಣಗಳೇನು;

ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಎಷ್ಟು ದಿನದಲ್ಲಿ ಪ್ರತಿಮೆಯನ್ನು ಅನಾವರಣ ಮಾಡಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

145 ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್
ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಅ) ಸೇಡಂ ಮತಕ್ಷೇತ್ರಕ್ಕೊಳಪಟ್ಟ ವಾಗದಿರಿ-ರಿಬ್ಬನಪಲ್ಲಿ ರಸ್ತೆ (ರಾಜ್ಯ ಹೆದ್ದಾರಿ-10) ಮತ್ತು ವನಮಾರಪಳ್ಳಿ-ರಾಯಚೂರು(ರಾಜ್ಯ ಹೆದ್ದಾರಿ-15) ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಜನರಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ವಾಗದಿರಿ-ರಿಬ್ಬನಪಲ್ಲಿ ರಸ್ತೆ (ರಾಜ್ಯ ಹೆದ್ದಾರಿ-10) ಮತ್ತು ವನಮಾರಪಳ್ಳಿ-ರಾಯಚೂರು ರಸ್ತೆ(ರಾಜ್ಯ ಹೆದ್ದಾರಿ-15) ಈ ಎರಡೂ ರಸ್ತೆಗಳ ಗುಂಡಿಮುಚ್ಚುವ ಕಾಮಗಾರಿಯನ್ನು 3 ವರ್ಷಗಳ ನಿರ್ವಹಣೆಯ ಪ್ಯಾಕೇಜ್ ಅಡಿಯಲ್ಲಿ ಕೈಗೊಳ್ಳಲಾಗಿದೆ. ಈ ರಸ್ತೆಗಳ ಅತೀ ಹೆಚ್ಚು ಹಾಳಾದ ಭಾಗಗಳ ದುರಸ್ತಿಗೆ ವಿಶೇಷ ಅನುದಾನ ಮಂಜೂರಾಗಿದ್ದು, ಸದರಿ ಕಾಮಗಾರಿಗಳು ಸಹ ಪ್ರಗತಿಯಲ್ಲಿದ್ದು, ಈ ಎರಡೂ ರಸ್ತೆಗಳಷ್ಟು ದುರಸ್ತಿಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.

ಆ) ಸೇಡಂ ಮತಕ್ಷೇತ್ರಕ್ಕೆ ಒಳಪಟ್ಟ ಗ್ರಾಮೀಣ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಗಳೆಂದು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನದಲ್ಲಿಯೇ; ಹಾಗಿದ್ದಲ್ಲಿ, ಅವು ಯಾವುವು ಹಾಗೂ ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ?

ಸರ್ಕಾರಿ ಆದೇಶ ಸಂಖ್ಯೆ: ಲೋಇ 579 ಸಿಆರ್‌ಎಂ 2008, ದಿನಾಂಕ: 10-2-2009ರಲ್ಲಿ ಗುಲ್ಬರ್ಗಾ ಜಿಲ್ಲೆ ಸೇಡಂ, ತಾಲ್ಲೂಕಿನ ಒಟ್ಟು 181.50 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

146 ಡಾ॥ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ)
ಡಾ॥ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ, ಚಿಂಚೋಳಿ ಮತ್ತು ಚಿತ್ತಾಪೂರ ತಾಲ್ಲೂಕಿನಲ್ಲಿರುವ ಶಹಾಬಾದ ಕಲ್ಲು ಗಣಿಗಳಲ್ಲಿ ಪ್ರತಿ 100 ಚದರ ಅಡಿಗೆ ರೂ.80/- ರಾಜಸ್ವ ಶುಲ್ಕ ವಸೂಲಿ ಮಾಡುತ್ತಿದ್ದು, ಪಕ್ಕದ ಆಂಧ್ರ ಪ್ರದೇಶದ ತಾಂಡೂರ (ಶಹಾಬಾದ) ಕಲ್ಲುಗಳಿಗೆ ರೂ.30/- ರಾಜಸ್ವ ವಸೂಲಿ ಮಾಡುತ್ತಾರೆಂದು ತಿಳಿದುಬಂದಿದೆ. ಇದರಿಂದ ಇಲ್ಲಿಯ ವ್ಯಾಪಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಶಹಬಾದ ಕಲ್ಲಿಗೆ ಹೋಲಿಕೆಯಾಗುವ ಮೂರು ರೀತಿಯ ಲೈಮ್‌ಸ್ಟೋನ್ ಸ್ಲಾಬ್‌ಗಳು ದೊರಕುತ್ತಿದ್ದು, ಅವುಗಳನ್ನು ಕಲರ್, ವೈಟ್ ಮತ್ತು ಕಪ್ಪು ಎಂದು ವರ್ಗೀಕರಿಸಿ, ಕ್ರಮವಾಗಿ ಪ್ರತಿ 100 ಚದರಡಿಗೆ ರೂ. 60/-, ರೂ. 40/- ಮತ್ತು ರೂ.30/- ರಾಜಧನ ನಿಗದಿಪಡಿಸಲಾಗಿದೆ.

ಕರ್ನಾಟಕದಲ್ಲಿ ದೊರಕುವ ಶಹಾಬಾದ್ ಕಲ್ಲು ಒಂದೇ ಬಣ್ಣದಾಗಿದ್ದು ಸರ್ಕಾರಿ ಆದೇಶ ಸಂಖ್ಯೆ:ಸಿಐ 56 ಎಂಎಂಎನ್ 2006, ದಿ:23-06-07 ರಂತೆ ಪ್ರತಿ 100 ಚದರ ಅಡಿಗೆ ರೂ.80/- ರಾಜಧನ ನಿಗದಿ ಪಡಿಸಿರುತ್ತದೆ.

ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿರುವ ಶಹಬಾದ್ ಕಲ್ಲಿನ ಮೇಲಿನ ರಾಜಧನ ಮೊತ್ತದ ತಾರತಮ್ಯದಿಂದಾಗಿ ರಾಜ್ಯದಲ್ಲಿ ಕರ್ನಾಟಕ ರಾಜ್ಯದ ಶಹಬಾದ್ ಕಲ್ಲಿನ ವ್ಯಾಪಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಹಾಗಿದ್ದಲ್ಲಿ, ಶಹಾಬಾದ ಕಲ್ಲುಗಳಿಗೆ ರಾಜಸ್ವ ಶುಲ್ಕ ರೂ.25/- ಕ್ಕೆ ಇಳಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ;

ಶಹಬಾದ್ ಕಲ್ಲು ಗಣಿಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ಧಕ್ಕೆ ಬಾರದ ರೀತಿಯಲ್ಲಿ ರಾಜಧನ ಪರಿಷ್ಕರಿಸುವ ಕುರಿತು ಸರ್ಕಾರವು ಪರಿಶೀಲಿಸುತ್ತಿದೆ.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಲೈಮ್ ಸ್ಟೋನ್ ಮೈನಿಂಗ್ ಸಲುವಾಗಿ ಪಿಎಲ್ ಮತ್ತು ಎಂ.ಎಲ್. ಗೋಸ್ಕರ್, ಸರ್ಕಾರದ ಮುಂದಿರುವ ಪ್ರಸ್ತಾವನೆ ಗಳೆಷ್ಟು; ಅದರಲ್ಲಿ ಮಂಜೂರು ಮಾಡಿರುವ ಮತ್ತು ಮಂಜೂರು ಮಾಡದೇ ಇರುವ ಪ್ರಸ್ತಾವನೆಗಳ ವಿವರ ನೀಡುವುದು?

ಗುಲ್ಬರ್ಗಾ ಜಿಲ್ಲೆಯ ಲೈಮ್ ಸ್ಟೋನ್ ಮೈನಿಂಗ್ ಸಲುವಾಗಿ ಪಿಎಲ್ (Prospecting License) ಮಂಜೂರಾತಿ ಗಾಗಿ 26 ಅರ್ಜಿಗಳು ಹಾಗೂ ಲೈಮ್ ಸ್ಟೋನ್ ಗಣಿ ಗುತ್ತಿಗೆ ಮಂಜೂರಾತಿಗಾಗಿ (ಎಂ.ಎಲ್.) 72 ಅರ್ಜಿಗಳು ಬಾಕಿ ಇರುತ್ತವೆ. 4 ಪಿಎಲ್‌ಗಳನ್ನು ಹಾಗೂ 12 ಎಂಎಲ್‌ಗಳನ್ನು ಮಂಜೂರು ಮಾಡಲಾಗಿದೆ.

ವಿವರಗಳನ್ನು ಅನುಬಂಧ 1 ರಿಂದ 4 ರಲ್ಲಿ ನೀಡಲಾಗಿದೆ.

ಅನುಬಂಧ-1

ಗುಲ್ಬರ್ಗಾ ಜಿಲ್ಲೆಯಲ್ಲಿ ಮಂಜೂರಾಗಿರುವ ಪಿ.ಎಲ್.(Prospecting Licence)ಗಳ ವಿವರ

ಕ್ರ.ಸಂ.	ಹೆಸರು	ಪಿ.ಎಲ್.ಸಂಖ್ಯೆ	ಸ್ಥಳದ ವಿವರ	ಖನಿಜ	ಅವಧಿ
1.	ಮೆ:ದಾಲ್ಮಿಯಾ ಸಿಮೆಂಟ್ಸ್, (ಭಾರತ್) ಲಿಮಿಟೆಡ್	3363	ಬೀರನಹಳ್ಳಿ ಅರೆಬೊಮ್ಮನ ಹಳ್ಳಿ ಮತ್ತು ಇತರೆ ಗ್ರಾಮಗಳು ಸೇಡಂ ತಾಲ್ಲೂಕು	ಲೈಂ ಸ್ಟೋನ್, ಶೇಲ್, ಕ್ಲೇ	2 ವರ್ಷ 21-08-2007
2.	ಮೆ: ಶ್ರೀ ಸಿಮೆಂಟ್ ಲಿಮಿಟೆಡ್	3364	ಫರಿದಾಬಾದ್ ಬೆಲವಾಡ ಮತ್ತು ಇತರೆ ಗ್ರಾಮಗಳು ಸೇಡಂ ತಾಲ್ಲೂಕು	ಲೈಂ ಸ್ಟೋನ್, ಶೇಲ್, ಕ್ಲೇ	2 ವರ್ಷ 20-11-2007
3.	ಮೆ:ದಿ ಇಂಡಿಯಾ ಸಿಮೆಂಟ್ಸ್, ಲಿಮಿಟೆಡ್	3365	ಗಾಣಪುರ ಬುರಾಪಳ್ಳಿ ಮತ್ತು ಇತರೆ ಗ್ರಾಮಗಳು ಚಿಂಚೋಳಿ ತಾಲ್ಲೂಕು	ಲೈಂ ಸ್ಟೋನ್	2 ವರ್ಷ 7-12-2007
4.	ಮೆ:ಕೇಸೋ ರಾಂ ಇಂಡಸ್ಟ್ರೀಸ್ ಲಿಮಿಟೆಡ್	3367	ಸೇಡಂ ಗ್ರಾಮ ಮತ್ತು ತಾಲ್ಲೂಕು	ಲೈಂ ಸ್ಟೋನ್	2 ವರ್ಷ 11-06-2008

ಅನುಬಂಧ–2

ಗುಲ್ಬರ್ಗಾ ಜಿಲ್ಲೆಯಲ್ಲಿ ಪಿ.ಎಲ್.(Prospecting Licence)ಪ್ರಸ್ತಾವನೆಗಳ ವಿವರ

ಕ್ರಸಂ.	ಹೆಸರು	ಪಿ.ಎಲ್.ಅರ್ಜಿ ಸಂಖ್ಯೆ
1.	ಮೆ:ದಾಲ್ಮಿಯ ಸಿಮೆಂಟ್ಸ್, (ಭಾರತ್)ಲಿಮಿಟೆಡ್	212/06
2.	ಮೆ:ದಾಲ್ಮಿಯಾ ಸಿಮೆಂಟ್ಸ್.	211/06
3.	ಮೆ:ಎಸಿಸಿ ಲಿಮಿಟೆಡ್	69/07
4.	ಮೆ:ಎಸಿಸಿ ಲಿಮಿಟೆಡ್	68/07
5.	ಮೆ:ಎಸಿಸಿ ಲಿಮಿಟೆಡ್	67/07
6.	ಮೆ:ಎಸಿಸಿ ಲಿಮಿಟೆಡ್	60/07
7.	ಮೆ:ಓರೀಯಂಟ್ ಪೇಪರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್	9/08
8.	ಮೆ:ಓರೀಯಂಟ್ ಪೇಪರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್	10/08
9.	ಹೆಚ್. ಎನ್ ಮಂಜುನಾಥ	16/08
10.	ಹೆಚ್. ಎನ್ ಮಂಜುನಾಥ	17/08
11.	ಮೆ: ಪ್ರಿಸಮ್ ಸಿಮೆಂಟ್ಸ್ ಲಿಮಿಟೆಡ್	52/08
12.	ಮೆ: ರತ್ನ ಕಲಶ್ ಟ್ರೇಡರ್ಸ್ ಪ್ರೈವೇಟ್ ಲಿಮಿಟೆಡ್	53/08
13.	ಮೆ: ರತ್ನ ಕಲಶ್ ಟ್ರೇಡರ್ಸ್ ಪ್ರೈವೇಟ್ ಲಿಮಿಟೆಡ್	54/08
14.	ಮೆ: ರತ್ನ ಕಲಶ್ ಟ್ರೇಡರ್ಸ್ ಪ್ರೈವೇಟ್ ಲಿಮಿಟೆಡ್	55/08
15.	ಮೆ: ರತ್ನ ಕಲಶ್ ಟ್ರೇಡರ್ಸ್ ಪ್ರೈವೇಟ್ ಲಿಮಿಟೆಡ್	56/08
16.	ಪ್ರಕಾಶ	59/08
17.	ಪ್ರಕಾಶ	60/08
18.	ಪ್ರಕಾಶ	61/08
19.	ಪ್ರಕಾಶ	62/08

20.	ಪ್ರಕಾಶ	63/08
21.	ಪ್ರಕಾಶ	64/08
22.	ಪ್ರಕಾಶ	65/08
23.	ಪ್ರಕಾಶ	66/08
24.	ಓರಿಂಯಟ್ ಸಿಮೆಂಟ್ಸ್	96/08
25.	ಒರಿಜಿನ್ ಮ್ಯಾನೇಜಮೆಂಟ್ ಸರ್ವಿಸ್ ಪ್ರೈವೇಟ್ ಲಿಮಿಟೆಡ್	102/08
26.	ಲಫರ್ಗ ಇಂಡಿಯಾ ಪ್ರೈವೇಟ್ ಲಿಮಿಟೆಡ್	139./08

ಅನುಬಂಧ-3

ಗುಲ್ಬರ್ಗಾ ಜಿಲ್ಲೆಯಲ್ಲಿ ಮಂಜೂರಾಗಿರುವ ಎಂ.ಎಲ್.(Mining Lease)ಗಳ ವಿವರ

ಕ್ರ.ಸಂ.	ಹೆಸರು	ಎಂ.ಎಲ್.ಸಂಖ್ಯೆ	ಸ್ಥಳದ ವಿವರ	ಖನಿಜ	ಅವಧಿ
1.	ಮೆ: ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ	1339	ಸೇಡಂ ಗ್ರಾಮ ಮತ್ತು ತಾಲ್ಲೂಕು	ಲೈಂ ಸ್ಟೋನ್	10 ವರ್ಷ 3-5-86
2.	ಮೆ: ಸೌತ್ ಇಂಡಿಯಾ ಸಿಮೆಂಟ್ ಲಿ.,	1684	ಮಲ್ಕೇಡ್, ಸೇಡಂ ತಾಲ್ಲೂಕು	ಲೈಂ ಸ್ಟೋನ್	20 ವರ್ಷ 2.8.80
3	ಮೆ.ರಾಜಶ್ರೀ ಸಿಮೆಂಟ್(ಮೆ: ಇಂಡಿಯನ್ ರೇಯನ್ ಇಂಡಸ್ಟ್ರೀಸ್)	1769	ಮಲ್ಕೇಡ್, ಸೇಡಂ ತಾಲ್ಲೂಕು	ಲೈಂ ಸ್ಟೋನ್	20 ವರ್ಷ 4.8.81
4	ಶ್ರೀ ಮೆಹಬೂಬ್ ಅಲಿ	1869	ಯಾದಗಿರಿ, ಗುಲ್ಬರ್ಗಾ ತಾಲ್ಲೂಕು	ಮೌಲ್ಡಿಂಗ್ ಸ್ಯಾಂಡ್	20 ವರ್ಷ 3.3.83
5.	ಮೆ: ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ	1880	ಮಡಕಲ್ ಗ್ರಾಮ ಸೇಡಂ ತಾಲ್ಲೂಕು	ಲೈಂ ಸ್ಟೋನ್,	20 ವರ್ಷ 19.4.82
6.	ಮೆ:ಎ.ಸಿ.ಸಿ. ಲಿಮಿಟೆಡ್	1949	ಇಂಗಳಗಿ ಚಿತ್ತಾಪುರ ತಾಲ್ಲೂಕು	ಲೈಂ ಸ್ಟೋನ್, ಶೇಲ್	20 ವರ್ಷ 19.7.84
7.	ಮೆ: ಸಿಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ	2015	ಸೇಡಂ ಗ್ರಾಮ ಮತ್ತು ತಾಲ್ಲೂಕು	ಲೈಂ ಸ್ಟೋನ್,	10 ವರ್ಷ 3.5.86
8.	ಮೆ: ಜವರ್ ಸಿಮೆಂಟ್ಸ್ ಲಿಮಿಟೆಡ್	2292	ಬಂಕೂರು ಗ್ರಾಮ ಚಿತ್ತಾಪುರ ತಾಲ್ಲೂಕು	ಲೈಂ ಸ್ಟೋನ್, ಶೇಲ್	10 ವರ್ಷ 1.10.85

9.	ಸುಜಾತ ಎಸ್.ಪಾಟೀಲ್	2269	ಕೋನಾಪುರ ಗ್ರಾಮ ಸೇಡಂ ತಾಲ್ಲೂಕು	ಕ್ವಾರ್ಜ್	20 ವರ್ಷ 29.4.2000
10.	ಮೆ:ಕೇಸೋ ರಾಂ ಇಂಡಸ್ಟ್ರೀಸ್ ಲಿಮಿಟೆಡ್	2475	ಇಂಜೆಪಲ್ಲಿ ಸೇಡಂ ತಾಲ್ಲೂಕು	ಲೈಂಸ್ಟೋನ್,	20 ವರ್ಷ 5.10.2007
11.	ಮೆ: ಚಂಬಲ್ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಲಿ.,	2558	ಫಿರೋಜಾಬಾದ್, ಕಿರಾಣಿ ಗ್ರಾಮ, ಗುಲ್ಬರ್ಗಾ ತಾಲ್ಲೂಕು	ಲೈಂಸ್ಟೋನ್,	20 ವರ್ಷ 5.10.2007
12	ಮೆ: ರೇಮಂಡ್ಸ್ ಲಿ.,	2588	ರಾವೂರು ಚಿತ್ತಾಪುರಾ ತಾಲ್ಲೂಕು	ಲೈಂ ಸ್ಟೋನ್,	20 ವರ್ಷ 18.11.2008

ಅನುಬಂಧ-4

ಗುಲ್ಬರ್ಗಾ ಜಿಲ್ಲೆಯಲ್ಲಿ ಎಂ.ಎಲ್.(ಮೈನಿಂಗ್ ಲೀಸ್)ಗಾಗಿ ಬಂದಿರುವ ಪ್ರಸ್ತಾವನೆಗಳ ವಿವರ

ಕ್ರಸಂ.	ಹೆಸರು	ಎಂ.ಎಲ್. ಅರ್ಜಿ ಸಂಖ್ಯೆ
1.	ಮೆ:ದಾಲ್ಮಿಯ ಸಿಮೆಂಟ್ಸ್, ಲಿ.,	1220/05
2.	ಸ್ವಾಂಗ್ಸ್ ಮಿನರಲ್ ಇಂಡಸ್ಟ್ರೀಸ್	1219/05
3.	ಕಾಸ್ಗತೇಶ್ವರ ಮಿನರಲ್ ಇಂಡಸ್ಟ್ರೀಸ್	311/05
4.	ಸ್ವಾಂಗ್ಸ್ ಮಿನರಲ್ ಇಂಡಸ್ಟ್ರೀಸ್	1235/05
5.	ಬಿ.ತಿಪ್ಪಾರೆಡ್ಡಿ	1163/05
6	ಎಂ.ರವೀಚಿದ್ರ	1234/05
7.	ಬಿ.ತಿಪ್ಪಾರೆಡ್ಡಿ	1162/05
8.	ಎಂ.ರವೀಚಿದ್ರ	1233/05
9.	ಶೀಶ ಎಂಟರ್ ಪ್ರೈಸಸ್	885/06
10.	ಜಿಎಸ್‌ಪಿ ವೀರಾರೆಡ್ಡಿ	605/06
11.	ಪೆನ್ನಾ ಸಿಮೆಂಟ್ಸ್ ಇಂಡಿಯಾ ಲಿ.,	436/06
12.	ಗ್ರಾಸಿಮ್ ಇಂಡಸ್ಟ್ರೀಸ್ ಲಿ.,	933/06
13.	ಬಸವರಾಜ್ ನಾಗಯ್ಯ ಬಾಗಲಕೋಟೆ	282/06
14.	ಶ್ರೀಶ ಎಂಟರ್ ಪ್ರೈಸಸ್ ಪ್ರೈ.ಲಿ.,	1231/06
15.	ಇಟ್ಟಿನಾ ಸಿಮೆಂಟ್ಸ್ ಪ್ರೈ.ಲಿ.,	385/06
16.	ಶ್ರೀಶ ಎಂಟರ್ ಪ್ರೈಸಸ್ ಪ್ರೈ.ಲಿ.,	1230/06
17.	ಜಿ ವೈ ಪಿ ಆರ್ ಇಂಜಿನಿಯರ್ಸ್ ಲಿ.,	603/06
18.	ಇಟ್ಟಿನಾ ಪ್ರಾಪರ್ಟೀಸ್	384/06
19.	ಕಾಸ್ಗತೇಶ್ವರ ಮಿನರಲ್ ಇಂಡಸ್ಟ್ರೀಸ್	333/06
20.	ಜಿ.ವೀರಶೇಖರ ರೆಡ್ಡಿ	604/06
21.	ಇಟ್ಟಿನಾ ಸಿಮೆಂಟ್ಸ್ ಪ್ರೈ.ಲಿ.,	1204/06
22.	ಇಟ್ಟಿನಾ ಸಿಮೆಂಟ್ಸ್ ಪ್ರೈ.ಲಿ.,	734/07
23.	ಗ್ರಾಸಿಮ್ ಇಂಡಸ್ಟ್ರೀಸ್ ಲಿ.,	681/07
24.	ಗ್ರಾಸಿಮ್ ಇಂಡಸ್ಟ್ರೀಸ್ ಲಿ..,	383/07
25.	ವೀರೂಪಾಕ್ಷ ರೆಡ್ಡಿ	967/07
26.	ದೇವೇಂದ್ರ ಕುಮಾರ್	625/07

27.	ರಾಜಕುಮಾರ್ ಪಾಟೀಲ್	626/07
28.	ಜವಾರ್ ಸಿಮೆಂಟ್ಸ್ ಪ್ರೈ.ಲಿ.,	29(ಎ)/07
29.	ರಿಜೆನ್ಸಿ ಸಿಮೆಂಟ್ಸ್	740/07
30.	ಜೆನುಬಾ	833/07
31.	ಮುರಳಿ ಇಂಡಸ್ಟ್ರೀಸ್ ಲಿ.,	924/07
32.	ವಿಜಯಲಕ್ಷ್ಮಿ ಮಿನರಲ್ ಇಂಡಸ್ಟ್ರೀಸ್ ಲಿ.,	834/07
33.	ಇಟ್ಟಿನಾ ಸಿಮೆಂಟ್ಸ್ ಪ್ರೈ. ಲಿ.,	733/07
34.	ಮುರಳಿ ಇಂಡಸ್ಟ್ರೀಸ್ ಲಿ.,	731/07
35	ರುಂಗಟಾ ಮೈನ್ಸ್ ಮಿನರಲ್ಸ್	08/08
36.	ರಾಜಕುಮಾರ್ ಪಾಟೀಲ್	162/08
37	ಲಿಮೂಮಿ ಸಿಮೆಂಟ್ಸ್ ಲಿ.,	256/08
38.	ಟ್ರಿಮೆಕ್ಸ್ ಇಂಡಿಯಾ ಲಿ.,	257/08
39.	ಸೆವೆಂಟ್ ಗ್ರಾನೈಟ್ಸ್	337/08
40.	ಬಿ.ಟಿ.ಶ್ರೀಧರ	338/08
41.	ಭಾರತ್ ಶಶಿ	339/08
42.	ಶೇಷಾದ್ರಿ ಇಂಡಸ್ಟ್ರೀಸ್ ಲಿ.,	413/08
43.	ಪಿ.ಸುರೇಶ್ ಮಿನರಲ್ಸ್ ಇಂಡಸ್ಟ್ರೀಸ್	434/08
44.	ರಾಜಕುಮಾರ್ ಪಾಟೀಲ್	525/08
45.	ಟರ್ಮೇಕ್ಸ್ ಇಂಡಿಯಾ ಲಿ.,	539/08
46.	ಡಾ: ಪಿ.ಎಂ. ಮುನಿರೆಡ್ಡಿ	644/08
47.	ದಾಲ್ಮಿಯಾ ಸಿಮೆಂಟ್ಸ್ ಬಾರ್ತ್ ಲಿ.,	736/08
48.	ವಾಣಿವಿಲಾಸ ಮೈನ್ಸ್ ಅಂಡ್ ಮಿನರಲ್ಸ್	998/08
49.	ಪೂರ್ಣ ಸಿಮೆಂಟ್ಸ್ ಲಿ.,	1008/08
50.	ರಾಜಕುಮಾರ್ ಪಾಟೀಲ್	1152/08
51.	ನೂರ್ ಮೈನಿಂಗ್ ಕಂಪನಿ ಪ್ರೈ. ಲಿ.,	1246/08
52.	ಗ್ರಾಸಿಮ್ ಇಂಡಸ್ಟ್ರೀಸ್ ಲಿ.,	1398/08
53.	ಕೇಶೋರಾಂ ಇಂಡಸ್ಟ್ರೀಸ್ ಲಿ.,	1398/08
54.	ತ್ರಿಸೂಲ್ ಡೆವಲಪರ್ಸ್	1414/08
55.	ಪಾರ್ವತಿ ರೆಡ್ಡಿ	1457/08
56.	ಆಫಾ ಅಜೀಜ	1478/08
57.	ಫರಾ ಬೇಗಮ್	1479/08
58.	ಪ್ರೇರಣಾ ಸಿಮೆಂಟ್ಸ್ ಲಿ.,	1481/08

59.	ಎಂ.ಎಂ.ಸಿಮೆಂಟ್ಸ್ ಲಿ.,	1482/08
60.	ಹೆಚ್.ಬಿ. ಸಿಮೆಂಟ್ಸ್ ಪ್ರೈ. ಲಿ.,	1483/08
61.	ನ್ಯೂ ಕಾರ್ಪ್ ಎಂಟರ್ ಪ್ರೈಸಸ್	1499/08
62.	ನ್ಯೂ ಕಾರ್ಪ್ ಎಂಟರ್ ಪ್ರೈಸಸ್	1500/08
63.	ನ್ಯೂ ಕಾರ್ಪ್ ಎಂಟರ್ ಪ್ರೈಸಸ್	1501/08
64.	ಮುಕ್ರಾನ್ ಮೈನಿಂಗ್ ಕಂ.ಪ್ರೈ.ಲಿ.,	1540/08
65.	ವಿಕ್ಟಾ ಸಾಗರ್ ಸಿಮೆಂಟ್ಸ್ ಲಿ.,	1544/08
66.	ಮುಕ್ರಾನ್ ಮೈನಿಂಗ್ ಕಂ.ಪ್ರೈ. ಲಿ.,	1645/08
67.	ವಿರೂಪಾಕ್ಷ ರೆಡ್ಡಿ	1649/08
68.	ಶಿವಕುಮಾರ್ ಪೊದ್ದಾರ್	46/08
69.	ಬನ್ವಾರಿಲಾಲ್ ಪೊದ್ದಾರ್	47/08
70.	ವಿನೋದ್ ಕುಮಾರ್ ಪೊದ್ದಾರ್	48/08
71.	ಮಹೇಂದ್ ಸೋಮಬಾಗ್	72/08
72.	ಬಿ.ಡಬ್ಲ್ಯು.ಕಮಲೇಶ್ ಶುಭಾಗ್	73/08

147 ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)
ಡಾ॥ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) 2008-09 ನೇ ಸಾಲಿನ ಯೋಜನೆಯಲ್ಲಿ (Plan Outlay) ಸುಮಾರು ರೂ.26,000 ಕೋಟಿಯ ಹಣದಲ್ಲಿ ಇಲಾಖಾವಾರು ಹಂಚಿಕೆ ಮಾಡಿದ ಹಣದ ವಿವರ ನೀಡುವುದು.

2008-09ನೇ ಸಾಲಿನ ವಲಯವಾರು ಯೋಜನಾ ವೆಚ್ಚದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಆ) ಜನವರಿ 31 ರ ವರೆಗೆ ಇಲಾಖಾವಾರು ಬಿಡುಗಡೆ ಮಾಡಿದ ಹಣದ ವಿವರ ನೀಡುವುದು;

ಮುಖ್ಯ ನಿಯಂತ್ರಣಾಧಿಕಾರಿಗಳು ಹಣ ತೆಗೆಯುವ ಮತ್ತು ಬಟವಾಡೆ, ಅಧಿಕಾರಿಗಳಿಗೆ ಪ್ರತ್ಯಾಯೋಜಿತ ಆಧಿಕಾರದನ್ವಯ ಹಣವನ್ನು ಬಿಡುಗಡೆ ಮಾಡುವರು. ಪ್ರತ್ಯಾಯೋಜಿತ ಅಧಿಕಾರಕ್ಕಿಂತ ಮೀರಿದಪ್ರಕರಣಗಳಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಡನೆ ಬಿಡುಗಡೆ ಮಾಡಲಾಗುವುದು. ಆದುದರಿಂದ ಹಣ ಬಿಡುಗಡೆಯ ವಿವರಗಳನ್ನು ಕೇಂದ್ರೀಕರಿಸಲಾಗಿಲ್ಲ.

ಇ) ಜನವರಿ 31 ರ ವರೆಗೆ ಇಲಾಖಾವಾರು ಖರ್ಚು ಮಾಡಿದ ಹಣದ ವಿವರ ನೀಡುವುದು;

ವೆಚ್ಚದ ಬಗ್ಗೆ ವಿವರಗಳನ್ನು ಖಜಾನೆಯ ಮುಖಾಂತರ ಪಡೆದು ಕ್ರೋಢೀಕರಿಸಲಾಗುತ್ತಿದ್ದು, ರಾಜ್ಯಾದ್ಯಂತ ಇರುವ ವಿವಿಧ ಖಜಾನೆಗಳು ಮಹಾಲೇಖಪಾಲರು (ಎ ಮತ್ತು ಇ) ಇವರಿಗೆ ಲೆಕ್ಕವನ್ನು ಸಲ್ಲಿಸುತ್ತಿದ್ದು, ಮಹಾಲೇಖಪಾಲರು ಪ್ರತಿ ತಿಂಗಳು ಲೆಕ್ಕವನ್ನು ಕ್ರೋಢೀಕರಿಸುತ್ತಿದ್ದು ಅಂತಿಮ ಲೆಕ್ಕವು ಒಟ್ಟು ವೆಚ್ಚವನ್ನು ತೋರಿಸುತ್ತದೆ. ಮಹಾಲೇಖಾಪಾಲರು ಡಿಸೆಂಬರ್ 2008ರ ಅಂತ್ಯದವರೆಗೆ ಮಾತ್ರ ಲೆಕ್ಕವನ್ನು ಅಂತಿಮಗೊಳಿಸಿರುತ್ತಾರೆ. ಡಿಸೆಂಬರ್ 31, 2008 ರವರೆಗೆ ಆಗಿರುವ ಮುಖ್ಯ ಲೆಕ್ಕ ಶೀರ್ಷಿಕಾವಾರು ಯೋಜನಾ ವೆಚ್ಚವನ್ನು (ರಾಜ್ಯ ಯೋಜನೆ + ಕೇಂದ್ರ ಯೋಜನಾ ಕಾರ್ಯಕ್ರಮಗಳು + ಕೇಂದ್ರ ಪುರಸ್ಕೃತ ಯೋಜನೆಗಳು) ಮಹಾಲೇಖಪಾಲರು ಒದಗಿಸಿರುವಂತೆ ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ANNEXURE – 1
State Plan Allocation

(Rs. In Crores)

	Heads of Development	BE 08-09
1	Crop husbandry	1201.08
2	Soil and Water Conservation	190.68
3	Animal Husbandry	205.00
4	Dairy Development	155.10
5	Fisheries	81.96
6	Forestry	194.82
7	Environmental Forestry and Wild Life	3.50
8	Food, Storage and Warehousing	18.00
9	Agriculture Research & Education	109.00
10	Investment in Agricultural Financial Insitutions	3.00
11	Other Agricultural Programmes, Marketing and Quality Control	11.20
12	Co-operation	318.27
13	Special Programme for Rural Development	936.92
15	Land Reforms	132.11
16	Other Rural Development Programme	134.11
17	Community Development	390.16
18	Hyderabad-Karnataka, Malnad and Border Area Development Programme	181.92
19	Major and Medium Irrigation	2586.33
20	Minor Irrigation	789.31

21	Command Area Development	79.41
22	Flood Control (Including Anti-Sea Erosion, etc.)	13.70
23	Power	2410.73
24	Non-Conventional Source of Energy	3.56
25	Village & Small Industries (including Sericulture)	252.85
26	Major & Medium Industries	99.78
27	Non-Ferrous Mining and Mettallurgical Industries	4.30
28	Ports and Light Houses	6.50
29	Roads and Bridges	2213.95
30	Road Transport	1072.37
31	Pollution Control and Inland Water Transport	1.01
32	Scientific Research	14.33
33	Ecology & Environment	10.96
34	Secretriat Economic Services	2.31
35	Tourism	151.80
36	Census, Survey and Statistics	1.40
37	Other General Economic Services	41.02
59	Information Technology	62.95
60	Infrastrure	481.07
38	General Education	1901.99
39	Technical Education	101.37
40	Art and Culture	142.90
41	Sports and Youth Services	52.74
42	Medical, Public Health & Family Welfare	964.39
43	Water Supply and Sanitation	1267.54
44	Housing	676.43
45	Urban Development	3995.57
46	Information and Publicity	19.10
47	Scheduled Castes and Scheduled Tribes	436.41
48	Backward Class and Minorities	488.75
49	Labour and Employment	153.62
50	Social Security and Welfare	505.34
51	Nutrition and Civil Supplies	115.58
52	Fire Protection Services	1.00
53	Stationery & Printing	16.30
54	Public Works	315.00
56	Training	0.38

58	Administration of Justice	14.32
59	Others	217.63
	Total	25952.82
	(-)IEBR	3654.85
	State Budgetary Support –	22297.97

(Rs. In Crores)

	Annexure-II	
	Actuals upto Dec 2008	
MAJ.	**HEAD OF ACCOUNT**	
Head		**Plan**
	A. GENERAL SERVICES	**42.25**
	a) Organs of State	10.68
2011	State Legislature	
2012	Governor	
2013	Council of Ministers	
2014	Administration of Justice	10.68
2015	Elections	
	b) Fiscal Services	1.99
2020	Colln of Taxes of Inc & Exp.	
2029	Land Revenue	
2030	Stamps and Registration	
2039	State Excise	
2040	SalesTax	1.98
2041	Taxes on Vehicles	0.00
2045	O T & duties on Comm.& Ser	
2047	Other Fiscal Services	
	c) Int Paymt & Servg Debt.	
2048	Appr for Redn or avoid of Debt	
2049	Intereest Payments	
	d) Administrative Services	29.58
2051	Public ServicesCommission	
2052	Secrt General Services	

2053	District Administration	2.61
2054	Treasury and Accts Admn.	0.91
2055	Police	15.00
2056	Jails	
2057	Supplies and Disposals	
2058	Stationery & Printing	0.66
2059	Public works	1.28
2070	Other Admn. Services	9.12
	e) Pensions & Misc.Gen.Ser	
2071	Pens & Other Retirment Ben.	
2075	Misc.Gen Services	
	B) SOCIAL SERVICES	**3146.58**
2202	General Education	984.93
2203	Technical Education	22.88
2204	Sports & Youth services -	12.17
2205	Art & Culture	33.09
2210	Medical & Public Health	281.80
2211	Family Welfare	186.17
2215	Water Supply & Sanitation	78.21
2216	Housing	344.22
2217	Urban Development	180.66
2220	Information & Publicity	2.19
2225	Welfare of SC,ST & OBC	416.18
2230	Labour & Employment	44.84
2235	Social Security & Welfare	446.09
2236	Nutrition	83.04
2245	Releif on acct.of Natl.Cal	
2250	Other Social services	30.71
2251	Secretariat-Social Services	
	C. ECONOMIC SERVICES	**1749.75**
	a) Agri & Allied Activities	**608.20**
2401	Crop Husbandry	299.50
2402	Soil & Water Conservation	58.41
2403	Animal Husbandry	58.39
2404	Dairy Development	42.98

2405	Fisheries	15.95
2406	Forestry & Wildlife	67.38
2408	Food storage & Warehousing	
2415	Agric Research & Education	41.50
2425	Cooperation	24.08
2435	Other Agricultural Programmes	
	b) Rural Development	**359.75**
2501	Spl.Prog.for Rural Dev.	20.38
2505	Rural Employment	48.11
2506	Land Reforms	0.24
2515	Other RD Programmes	291.02
	c) Spl. Area Programmes	**259.65**
2551	Hill Areas	23.50
2575	Legislature Area Development Fund	180.50
2701	Major & Medium Irrigation	2.97
2702	Minor Irrigation	19.10
2705	Command Area Development	33.58
2711	Flood Control	
	e) Energy	**0.73**
2801	Power	0.53
2810	Non.Conv.Sources of Energy	0.20
	f) Industry & Minerals	**70.47**
2815	Village & Small Industries	54.28
2852	Industries	14.44
2853	Non-fers Mining & Met,Inds	1.75
2885	Other Outlays on Ind & Min	
	g) Transport	**371.26**
3051	Ports and Light houses	
3053	Civil Aviation	
3054	Roads & Bridges	371.26
3055	Road Transport	
3056	Inland Water Transport	

	i) Science. Techn & Envion	**10.29**
3425	Other Scientific Research	6.78
3435	Ecology and Envionment	3.51
	i) general Eco.Services	**69.41**
3451	Secretrial Eco. Services	32.61
3452	Tourism	23.49
3454	Census, Surveys & Stats	0.11
3455	Meterology	0.70
3456	Civil Supplies	0.65
3465	Genl Fin. Trading Instns.	
3475	Other Genl Ecom Services	11.86
	D.GIA & CONTRIBUTIONS	**455.43**
3604	Comp. & assign to LB & PRI	455.43
	Total Expendr on Rev. A/c	**5394.01**
	A. Cap A/c of Gen Services	**194.42**
4055	Police	22.00
4059	Public Works	172.42
4070	OtherAdministrative Services	
	B.Cap A/c of Soc. Services	**922.76**
4202	Edn.Spts. arts Cult	72.51
4210	Med and Pub Health	202.97
4211	Family Welfare	
4215	Water Supply & Sani	480.49
4216	Housing	28.06
4217	Urban Development	100.00
4220	Infn & Publicity	1.47
4225	Wel of SC.ST & OBC	36.15
4235	Soc Security & Wel	0.92
4236	Nutrition	
4250	Other Social Serv	0.19

	C. Cap A/c of Eco.Services	**2866.32**
	a) C O of Agr.& Allied Ser	**62.16**
4401	Crop Husbandry	
4402	Soil & water conservation	
4403	Animal Husbandry	15.21
4404	Dairy Development	
4405	Fisheries	1.18
4406	Forestry & Wildlife	0.98
4425	Coop	
4515	Other Rural Dev Prog	44.79
	b) Cap A/c of Irri. Flood Control & Ene	**1813.04**
4701	Maj & Med Irrig	1531.08
4702	Minor Irrigation	162.58
4705	Command Area Development	
4711	Flood Control Proj	9.37
4801	Power Projects	110.00
	c) C.O.of Industs & Minerals	**4.61**
4851	Village & Small Ind	4.08
4860	Consumer Industries	0.52
	d) Cap A/c of transport	**829.32**
5051	Ports & Lighthouses	4.63
5053	Civil Aviation	
5054	Roads and Bridges	749.69
5055	Road Transport	75.00
5056	Inland water Trans	
5075	Other trans services	
	e) Cap A/c of Gen Eco Serv	157.19
5452	Tourism	15.09
5465	Investment in Gen Fin & Trading Inst	137.09
5475	Other Genl Eco.Ser	5.00
	Total Capital Expenditure outside Re	**3983.49**
	E. PUBLIC DEBT	

6003	Intl Debt of State Govt	
6004	Loans and adv from the GOI	
	F LOANS AND ADVANCES	**172.46**
6211	Family Welfare	0.04
6215	Water Sup & Sani	52.50
6216	Housing	
6217	Uban Dev	100.00
6405	Fisheries	
6406	Forest Development Corporation	
6408	Food storage and Warehousg	8.00
6416	Agricultural Financial Inst	3.00
6425	Cooperation	2.00
6801	Power Projects	
6851	Village & Small Industries	
6852	Iron & Steel Ind	
6860	Consumers Industries	
6875	Other Industries	
6885	Other Industries & Minerals	6.93
7610	Govt. servants	
7615	Miscellaneous Loans	
	Total Conslidated Fund	**9549.97**

148 ಡಾ॥ ಶರಣ ಪ್ರಕಾಶ ರುದ್ರಪ್ಪಪಾಟೀಲ್ (ಸೇಡಂ)

ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು)

ಅ) ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿರುವ ರಾಷ್ಟ್ರಕೂಟರ ಕೋಟೆ(ಕನ್ನಡದ ಮೊಟ್ಟೆ ಮೊದಲ ಕೃತಿ ಕವಿರಾಜ ಮಾರ್ಗ ರಚಿತ ನೃಪತುಂಗರ ಆಸ್ಥಾನ) ಜೀರ್ಣೋದ್ಧಾರದ ಸಲುವಾಗಿ ಸರಕಾರ ರೂ.50.00ಲಕ್ಷ ಬಿಡುಗಡೆ ಮಾಡಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದು ನಿಜವೇ;

ಪ್ರವಾಸೋದ್ಯಮ ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಬಿಡುಗಡೆಮಾಡಿ ಜೀರ್ಣೋದ್ಧಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು;

ಉದ್ಭವಿಸುವುದಿಲ್ಲ.

ಇ) 12ನೇ ಶತಮಾನದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರಿಗೆ ಶರಣ ಹರಳಯ್ಯ ದಂಪತಿಗಳು ಅರ್ಪಿಸಿದ ಚಮ್ಮಾವುಗಳ ಐತಿಹಾಸಿಕ ಸ್ಮಾರಕ ಇರುವ ಸೇಡಂ ತಾಲ್ಲೂಕಿನ ಬಿಜನಳ್ಳಿ ಗ್ರಾಮವು ಪ್ರವಾಸೋದ್ಯಮ ಇಲಾಖೆ ಅಡಿ ತೆಗೆದುಕೊಂಡು ಅಭಿವೃದ್ಧಿಪಡಿಸಲಾಗುವುದೇ;

ಪ್ರವಾಸೋದ್ಯಮ ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಈ) ಹಾಗಿದ್ದಲ್ಲಿ. ಯಾವಾಗ ಅಭಿವೃದ್ಧಿಪಡಿಸಲಾಗುವುದು?

ಉದ್ಭವಿಸುವುದಿಲ್ಲ.

149 ಶ್ರೀ ಕರಡಿ ಸಂಗಣ್ಣ ಅಮರಪ್ಪ

ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)

ಅ) ಕೊಪ್ಪಳ ನಗರಕ್ಕೆ ಅತ್ಯಾವಶ್ಯಕವಾಗಿರುವ ವರ್ತುಲ ರಸ್ತೆ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

ಆ) ಹಾಗಿದ್ದಲ್ಲಿ, ವರ್ತುಲ ರಸ್ತೆಯ ಕಾಮಗಾರಿಯನ್ನು ಯಾವಾಗ ಪ್ರಾರಂಬಿಸಲಾಗುವುದು ಈ ಕಾಮಗಾರಿಗೆ ಹಣ ಬಿಡುಗಡೆ ಮಾಡುವ ಮೊತ್ತದ ಪ್ರಮಾಣ ಎಷ್ಟು?

ಉದ್ಭವಿಸುವುದಿಲ್ಲ

151 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

(ಮಾನ್ಯ ಮುಖ್ಯಮಂತ್ರಿಗಳು)

ಅ) ಕೊಪ್ಪಳ ತಾಲ್ಲೂಕು ಬಯಲು ಪ್ರದೇಶವಾಗಿದ್ದು, ಇಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು (ಕೃಷ್ಣಮೃಗಗಳಿರುತ್ತವೆ)

ಆ) ಈ ಜಿಂಕೆಗಳಿಂದ ಸ್ಥಳೀಯ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು. ಬೆಳೆಹಾನಿಯಾಗಿರುವ ಸಂತ್ರಸ್ಥ ರೈತರಿಗೆ ಆದೇಶ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯೂಎಲ್ 2006 ದಿನಾಂಕ: 17/01/2007ರ ಅವಕಾಶದಂತೆ ದಯಾತ್ಮಕ ಧನವನ್ನು ಪಾವತಿಸಲಾಗಿದೆ.

2007-08ನೇ ಸಾಲಿನಲ್ಲಿ ರೈತರ 275 ಪ್ರಕರಣಗಳಿಗೆ ಒಟ್ಟು ರೂ.1.00 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಿದೆ.

ಇ) ಹಾಗಿದ್ದಲ್ಲಿ, ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ವನ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಹಾಗಿದ್ದಲ್ಲಿ, ಎಂದಿನಿಂದ ಜಿಂಕೆ ವನವನ್ನು ತೆರೆಯಲಾಗುವುದು?

152 ಶ್ರೀ ಕರಡಿ ಸಂಗಣ್ಣ ಅಮರಪ್ಪ

ಮಾನ್ಯ ಲೋಕೋಪಯೋಗಿ ಸಚಿವರು

ಅ) ಕೊಪ್ಪಳ ನಗರಕ್ಕೆ ಬೈಪಾಸ್ ರಸ್ತೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಕೇಂದ್ರ ಸರ್ಕಾರದ ಮುಂದಿದೆ.

ಆ) ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಕೇಂದ್ರ ಸರ್ಕಾರದ ಭೂ ಸಾರಿಗೆ ಮಂತ್ರಾಲಯದಿಂದ ಟಿ.ಓ.ಆರ್ ಅನುಮೋದನೆಗೊಂಡಿದ್ದು, ಅಲೈನ್‌ಮೆಂಟ್‌ಗಾಗಿ ಸಮಾಲೋಚಕರನ್ನು ನೇಮಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇ) ಈ ಕಾಮಗಾರಿಗೆ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಅಲೈನ್‌ಮೆಂಟ್ ಅನುಮೋದನೆಗೊಂಡ ನಂತರ ಅಂದಾಜು ಮೊತ್ತ ನಿಗದಿಪಡಿಸಲಾಗುವುದು.

ಈ) ಕೊಪ್ಪಳ ತಾಲ್ಲೂಕಿನಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹೇರಳವಾಗಿರುವುದರಿಂದ ಅತೀ ಹೆಚ್ಚು ಸರಕು ಸಾಗಾಣಿಕೆ ವಾಹನಗಳಿಂದ ರಸ್ತೆಗಳು ಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಕೈಗೊಂಡು ಈ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳಲಾಗಿದೆ.

2008-09ನೇ ಸಾಲಿನ ಲೆಕ್ಕಶೀರ್ಷಿಕೆ 5054 ಯೋಜನೆ ಇತರೆ ರಸ್ತೆ ನಿರ್ಮಾಣ, ಕೇಂದ್ರ ರಸ್ತೆ ನಿಧಿ ಹಾಗೂ ವಿಶೇಷ ಅನುದಾನದ ಅಡಿಯಲ್ಲಿ ಕಲ್ಮಶಾ-ಶಿಗ್ಗಾಂವ ರಾಜ್ಯ ಹೆದ್ದಾರಿ ಹಾಗೂ ಚಿಕ್ಕಹಸರೂರು-ಮುದಗಲ್-ಮುಂಡರಗಿ ರಾಜ್ಯ ಹೆದ್ದಾರಿ ಭಾಗವಾದ ಹಲಗೇರಾ-ಕೇಸ್ಲಾಪೂರ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಗುತ್ತಿಗೆದಾರರನ್ನು ನೇಮಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

ಉ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

159 ಶ್ರೀ ಪ್ರತಾಪಗೌಡ ಪಾಟೀಲ್(ಮಸ್ಕಿ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಮಸ್ಕಿಯ ಹಿರೇಹಳ್ಳಕ್ಕೆ ಹೊಸ ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಮಸ್ಕಿಯ ಹಿರೇಹಳ್ಳಕ್ಕೆ ಹೊಸ ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಹಾಗಿದ್ದಲ್ಲಿ, ಸೇತುವೆ ನಿರ್ಮಾಣ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 4ನೇ ಹಂತದ ಸೇತುವೆ ನಿರ್ಮಾಣ ಯೋಜನೆಯಡಿ ಮಸ್ಕಿಯ ಹಿರೇಹಳ್ಳಕ್ಕೆ ಹೊಸ ಸೇತುವೆಯನ್ನು ನಿರ್ಮಾಣ ಮಾಡುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸೂಚಿಸಲಾಗಿದೆ.

187 ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)

ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

ಅ. ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಪ್ರತಿದಿನ ಪೂರೈಕೆ ಮಾಡುತ್ತಿರುವ ಕುಡಿಯುವ ನೀರಿನ ಪ್ರಮಾಣ ಎಷ್ಟು;

ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಪ್ರತಿದಿನ ಪೂರೈಕೆ ಮಾಡುತ್ತಿರುವ ಕುಡಿಯುವ ನೀರಿನ ಪ್ರಮಾಣ 870 ದಶ ಲಕ್ಷ ಮೀಟರ್.

ಆ. ನೀರು ಪೂರೈಕೆಯ ಪ್ರಮಾಣದಲ್ಲಿ ಬಿಲ್‌ನ ಮೊತ್ತವೆಷ್ಟು;

ಮಾಹೆಯಾನ ನೀರಿನ ಕಂದಾಯ ಸರಾಸರಿ ರೂ. 37 ಕೋಟಿ.

ಇ. ಅಕ್ರಮ ನೀರಿನ ಸಂಪರ್ಕ ಮತ್ತು ಸೋರಿಕೆಯಿಂದ ಪ್ರತಿದಿನವೂ ಜಲಮಂಡಳಿ ಹೊಂದುತ್ತಿರುವ ನಷ್ಟವೆಷ್ಟು;

ಅಕ್ರಮ ನೀರಿನ ಸಂಪರ್ಕ ಮತ್ತು ಸೋರಿಕೆಯಿಂದ ಪ್ರತಿದಿನವೂ ಜಲಮಂಡಳಿ ಹೊಂದುತ್ತಿರುವ ನಷ್ಟ ಸರಾಸರಿ ಶೇ. 32 ರಿಂದ 36.ಅಧಿಕೃತ ಸಂಪರ್ಕಗಳಿಂದ ಬಳಕೆಯಾಗುತ್ತಿರುವ ನೀರಿನ ಪ್ರಮಾಣ ಸರಾಸರಿ ಶೇ.50 ರಿಂದ 52 ಹಾಗೂ ಸಾರ್ವಜನಿಕ ಕೊಳಾಯಿಗಳ ಮೂಲಕ ಸರಬರಾಜಾಗುತ್ತಿರುವ ನೀರಿನ ಪ್ರಮಾಣ ಸರಾಸರಿ ಶೇ.14 ರಿಂದ 16.

ಈ. ಅದನ್ನು ತಡೆಗಟ್ಟಲು ಸರಕಾರದ ಕ್ರಮಗಳೇನು;

ಅಕ್ರಮ ನೀರಿನ ಸಂಪರ್ಕ ಮತ್ತು ಸೋರುವಿಕೆಯಿಂದ ಉಂಟಾಗುತ್ತಿರುವ ನಷ್ಟವನ್ನು ನಿಯಂತ್ರಿಸಲು ಈ ಕೆಳಗೆ ಸೂಚಿಸಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ:-

1. ಹೆಚ್ಚುವರಿ ಗಾತ್ರದ ಕೊಳವೆಗಳನ್ನು ಮೃದು ಉಕ್ಕಿನ ಕೊಳವೆಗಳಿಂದ ಬೆಸುಗೆ ಹಾಕಿ ಜೋಡಿಸುವುದು ಮತ್ತು ಕೊಳವೆ ಜೋಡಣೆಯನ್ನು ರಬ್ಬರ್ ರಿಂಗ್‌ಗಳಿಂದ ಮಾಡುವುದು.
2. ಸಾಲು ಮರದ ಬೇರುಗಳಿಂದ ಸೋರುವಿಕೆಯನ್ನು ತಪ್ಪಿಸಲು ಕೊಳವೆ ಮಾರ್ಗವನ್ನು ಸ್ಥಳಾಂತರಿಸುವುದು.
3. 30 ವರ್ಷಕ್ಕೂ ಮೇಲ್ಪಟ್ಟ ಹಳೆಯದಾದ ತುಕ್ಕು ಹಿಡಿದ ಕೊಳವೆಗಳು, ಗೃಹ ಸಂಪರ್ಕಗಳು, ಹೊಸ ಕೊಳವೆಗಳಿಂದ ಹಂತ ಹಂತವಾಗಿ ಬದಲಾಯಿಸಲು / ಪುನರೂಪಿಸಲು ಜಪಾನ್ ಬ್ಯಾಂಕ್ ಸಹಯೋಗದೊಂದಿಗೆ ಬೃಹತ್ ಯೋಜನೆ ಹಮ್ಮಿಕೊಳ್ಳಲಾಗಿದೆ.
4. ನೀರು ಸೋರುವಿಕೆ ತಡೆಗಟ್ಟಲು ದಿನದ 24 ತಾಸುಗಳು ವಿಶೇಷ ಕಾರ್ಯಪಡೆ ನಿಯೋಜನೆ.
5. ರಸ್ತೆ ಮಧ್ಯದಲ್ಲಿ ಹಾದು ಹೋಗುತ್ತಿರುವ ಕೊಳವೆಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸುವುದು.
6. ಗೃಹಗಳಿಗೆ ನೀರು ಸಂಪರ್ಕ ಕಲ್ಪಿಸುವ ಜಿ.ಐ.ಕೊಳವೆ ಉಪಯೋಗಿಸುವ ಬದಲಾಗಿ Food Grade Medium Density Poly Ethylene (MDPE) ಕೊಳವೆಗೆ GI ಹೊರಕವಚ ಕೊಳವೆಯೊಂದಿಗೆ ಅಳವಡಿಸಲು ಮಾರ್ಪಾಡು ಮಾಡಲಾಗುತ್ತಿದೆ.
7. ಜಲಾಶಯಗಳಿಂದ ಒಳಹರಿವು / ಹೊರ ಹರಿವು ಮತ್ತು 300 ಎಂ.ಎಂ. ವ್ಯಾಸದ ಮೇಲ್ಪಟ್ಟ ಕೊಳವೆಗಳಿಗೆ ನೀರಿನ ಪ್ರಮಾಣ ಲೆಕ್ಕಿಸಲು ಸಗಟು ಮಾಪನ ಅಳವಡಿಸುವುದು.

ಉ ಬೆಂಗಳೂರು ಜಲಮಂಡಳಿಗೆ ಪಾವತಿ ಯಾಗಬೇಕಾಗಿರುವ ಬಾಕಿ ಬಿಲ್ ಪಾವತಿಯ ಮೊತ್ತ ಎಷ್ಟು;

ಜನವರಿ 2009ನೇ ಮಾಹೆಯ ಅಂತ್ಯಕ್ಕೆ ಬೆಂಗಳೂರು ಜಲಮಂಡಳಿಗೆ ಪಾವತಿಯಾಗಬೇಕಾಗಿರುವ ಬಾಕಿ ಬಿಲ್ ಪಾವತಿಯ ಮೊತ್ತ ರೂ.246.47 ಕೋಟಿಗಳು.

ಊ ಬಾಕಿ ಬಿಲ್ ಪಾವತಿಯ ಕುರಿತಾಗಿರುವ ನೀತಿಯಿಂದ ಭಾರೀ ಮೊತ್ತದ ಬಾಕಿ ಹಣದ ಮೊತ್ತ ಉಳಿದುಕೊಂಡಿರುವುದು ನಿಜವಲ್ಲವೆ;

ಇಲ್ಲ

ಋ ಬಾಕಿ ಬಿಲ್ ಹಣ ಪಾವತಿಗೆ ಸಮಗ್ರ ಸರಳ ನೀತಿಯನ್ನು ಅಳವಡಿಸಲು ಸರಕಾರ ಮುಂದಾಗುವುದೇ?

ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಾಗರೀಕರಿಂದ ಬಾಕಿ ಹಣ ಪಾವತಿಸಲು ಅನುಕೂಲವಾಗುವಂತೆ ಅವರಿಂದ ಬರಬೇಕಾಗಿರುವ ನೀರಿನ ಬಾಕಿ ಹಣದ ಮೇಲೆ ವಿಧಿಸಿರುವ ಬಡ್ಡಿಯನ್ನು ಮನ್ನಾ ಮಾಡಲು ಹಾಗೂ ಅಸಲು ಮೊತ್ತವನ್ನು ಸುಲಭ ಕಂತುಗಳಲ್ಲಿ ಪಾವತಿಸಲು ಯೋಜನೆಯೊಂದನ್ನು ರೂಪಿಸಲಾಗುತ್ತಿದೆ.

189 ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)
ಮಾನ್ಯ ಅಬಕಾರಿ ಸಚಿವರು

ಅ. ರಾಜ್ಯದಲ್ಲಿ ಮದ್ಯದಂಗಡಿಗಳಿಗೆ ಪರವಾನಿಗೆ ನೀಡುವ ಕುರಿತಾದ ಸರಕಾರದ ನಿಗದಿತ ಮಾನದಂಡಗಳೇನು?

ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5ರಂತೆ ಸನ್ನದು ಮಂಜೂರು ಮಾಡಲಿರುವ ಮಳಿಗೆಯಿಂದ 100 ಮೀಟರ್ ಅಂತರದಲ್ಲಿ ಯಾವುದೇ ಧಾರ್ಮಿಕ, ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಕಛೇರಿ ಅಥವಾ ಪ್ರಧಾನವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನಾಂಗ ವಾಸಿಸುತ್ತಿರುವ ಸ್ಥಳಗಳು ಇರಬಾರದು ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಗಳ ಮಧ್ಯಭಾಗದಿಂದ 220 ಮೀಟರ್ ವ್ಯಾಪ್ತಿಯೊಳಗಿರಬಾರದು. ಈ ನಿಯಮಾನುಸಾರ ಸನ್ನದುಗಳನ್ನು ಮಂಜೂರು/ನವೀಕರಣ ಮಾಡಲಾಗುತ್ತದೆ. ಸಾರ್ವಜನಿಕರ ನೈತಿಕತೆ, ಶಾಂತಿ, ಸಭ್ಯತೆ ಅಥವಾ ಸುರಕ್ಷತೆಗೆ ಮದ್ಯದಂಗಡಿಗಳಿಂದ ಧಕ್ಕೆ ಉಂಟಾಗುವ ಸಂದರ್ಭಗಳಲ್ಲಿ ಸನ್ನದುದಾರರಿಗೆ ಕಾಲಾವಕಾಶ ನೀಡಿ ಸನ್ನದಿನ ಸ್ಥಳವನ್ನು ಅನಾಕ್ಷೇಪಣಾ ಸ್ಥಳಕ್ಕೆ ಸ್ಥಳಾಂತರಿಸಿ ಕೊಳ್ಳಲು ನಿಯಮಗಳಲ್ಲಿ ಅವಕಾಶವಿರುತ್ತದೆ.

ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ, ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5(2) ಪರಂತುವಿನ ಪ್ರಕಾರ 50ಮೀ. ಮೇಲೆ 100 ಮೀಟರ್ ಒಳಗಡೆ ಯಾವುದೇ ಧಾರ್ಮಿಕ, ಶೈಕ್ಷಣಿಕ ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಕಛೇರಿ ಅಥವಾ ಪ್ರಧಾನವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಜನಾಂಗ, ವಾಸಿಸುತ್ತಿರುವ ಸ್ಥಳಗಳು ಇದ್ದಲ್ಲಿ ಮೇಲಿನ ನಿಯಮವನ್ನು ಸಡಿಲಿಸಿ ಅನುಮತಿ ನೀಡಬಹುದಾಗಿರುತ್ತದೆ.

ಆ. ಮದ್ಯದಂಗಡಿಗಳಿಗೆ ಪರವಾನಗಿ ನೀತಿ ಕುರಿತಾಗಿರುವ ಪದ್ಧತಿಗಳ ಮಾರ್ಪಾಡು ಪ್ರಸ್ತಾವನೆ ಸರಕಾರದ ಮುಂದಿದೆಯೇ (ವಿವರ ನೀಡುವುದು)

– ಇಲ್ಲ –

ಇ. ಅಕ್ರಮ ಮದ್ಯ ಮಾರಾಟ ಹಾಗೂ ಕಳ್ಳಭಟ್ಟಿ ಹಾವಳಿ ತಡೆಗೆ ಸರಕಾರದ ಕಟ್ಟುನಿಟ್ಟಿನ ಕ್ರಮಗಳೇನು?

ಜಾರಿ ಮತ್ತು ತನಿಖೆ ಕಾರ್ಯವನ್ನು ಚುರುಕುಗೊಳಿಸಿ ಪೋಲೀಸ್ ಸಹಯೋಗದೊಂದಿಗೆ ನಿರಂತರ ದಾಳಿ ಕಾರ್ಯ ನಡೆಸಲಾಗುತ್ತಿದೆ. ಈ ಬಗ್ಗೆ ಅಧೀನ ಸಿಬ್ಬಂದಿಗೆ ಮಾರ್ಗದರ್ಶನ ಕೈಪಿಡಿ ನೀಡಿದ್ದು ಅದರಂತೆ ಕಾರ್ಯ ನಿರ್ವಹಿಸಲಾಗುತ್ತಿದೆ. ಪತ್ರಿಕೆಗಳ ಮೂಲಕ ಹಾಗೂ ಸಮೂಹ ಮಾಧ್ಯಮಗಳ ಮೂಲಕ ಕಳ್ಳಭಟ್ಟಿ/ನಕಲಿ ಮದ್ಯ, ಸಾರಾಯಿ ಸೇವನೆಯಿಮದ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ. ಸ್ತ್ರೀಶಕ್ತಿ ಸಂಘಗಳು, ಗ್ರಾಮ ಪಂಚಾಯಿತಿ, ಮಂಡಲ್ ಪಂಚಾಯಿತಿ ಸದಸ್ಯರುಗಳು ಹಾಗೂ ಕಂದಾಯ ಅಧಿಕಾರಿಗಳಿಗೆ ಯಾವುದೇ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಮಾಹಿತಿ ನೀಡಲು ಕೋರಲಾಗಿದೆ. ಅಧೀನ ಸಿಬ್ಬಂದಿಗೆ ಸದಾ ಜಾಗೃತವಾಗಿದ್ದು ನಿರಂತರ ದಾಳಿ ಕಾರ್ಯಗಳನ್ನು ನಡೆಸಿ ಯಾವುದೇ ಕಾರಣಕ್ಕೂ ಅಕ್ರಮ ಕಳ್ಳಭಟ್ಟಿ ಮಾರಾಟ ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ.

ರೂಢಿಗತ ಆರೋಪಿಗಳನ್ನು ಗೂಂಡಾ ಕಾಯಿದೆಯಡಿಯಲ್ಲಿ ಬಂಧಿಸಲು ಅಗತ್ಯ ದಾಖಲಾತಿಗಳನ್ನು ಸಂಗ್ರಹಿಸುತ್ತಿದ್ದು, ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಂಬಂಧಿಸಿದ ಅಬಕಾರಿ ಉಪ ಆಯುಕ್ತರುಗಳಿಗೆ ನಿರ್ದೇಶನ ನೀಡಲಾಗಿದೆ.

190 ಶ್ರೀ ಹ್ಯಾರಿಸ್, ಎನ್.ಎ., ಮಾನ್ಯ ಶಾಸಕರು, ಶಾಂತಿನಗರ ವಿಧಾನ ಸಭೆ, ಬೆಂಗಳೂರು ನಗರ ಜಿಲ್ಲೆ

ಮಾನ್ಯ ಅಬಕಾರಿ ಸಚಿವರು

ಅ ದ್ರಾಕ್ಷಾ ರಸದಿಂದ ತಯಾರಾಗುವ ವೈನ್‌ನ್ನು ಮದ್ಯವಲ್ಲ ಎಂದು ಸರಕಾರ ಪರಗಣಿಸಿದೆಯೇ; ಹೌದಾದಲ್ಲಿ, ಅದಕ್ಕೆ ಸಮರ್ಥನೆ ನೀಡುವ ಅಂಶಗಳು ಯಾವುವು?

ದ್ರಾಕ್ಷಿಯ ರಸದಿಂದ ತಯಾರಾಗುವ ವೈನ್ ರಾಜ್ಯ ಅಬಕಾರಿ ಪರಿಭಾಷೆಯಲ್ಲಿ ಮದ್ಯವಾಗಿರುತ್ತೆ.

ಆ ಸರಕಾರದ ವೈನ್ ನೀತಿಗೆ ರಾಜ್ಯದ ಸಾರ್ವಜನಿಕರು ವಿರೋಧವನ್ನು ವ್ಯಕ್ತಪಡಿಸಿರುವುದು ನಿಜವಲ್ಲವೇ? ಜನಾಭಿಪ್ರಾಯದ ಮೇರೆಗೆ ಸರಕಾರದ ನಿಲುವುಗಳೇನು?

ಹೌದು, ಆದರೆ ಸರ್ಕಾರವು ಎಲ್ಲಾ ಆಕ್ಷೇಪಣೆ ಮತ್ತು ವಿರೋಧಗಳ ಸಾದಕ ಮತ್ತು ಬಾದಕಗಳನ್ನು ಪರಿಶೀಲಿಸಿದ ನಂತರವೇ ಹೊಸ ದ್ರಾಕ್ಷಾರಸ ನಿಯಮಗಳನ್ನು ಅಂತಿಮಗೊಳಿಸಲಾಗಿದೆ.

ಇ ವೈನ್ ಅನ್ನು ಅಬಕಾರಿ ಇಲಾಖಾ ವ್ಯಾಪ್ತಿಯಿಂದ ತೋಟಗಾರಿಕಾ ಇಲಾಖೆಗೆ ವರ್ಗಾಯಿಸುವ ಮೂಲಕ ಅಬಕಾರಿ ಇಲಾಖೆಯ ನೂತನ ನೀತಿಯನ್ನು ಪ್ರತಿಬಿಂಬಿಸುವ ಸರಕಾರದ ಉದ್ದೇಶಗಳೇನು?

ದ್ರಾಕ್ಷಿ ಬೆಳೆಗಾರರ ಹಿತರಕ್ಷಣಾ ದೃಷ್ಟಿಯಿಂದ ದ್ರಾಕ್ಷಿ ಬೆಳೆಗಾರಿಕೆಯನ್ನು ಉತ್ತೇಜಿಸಲು ದ್ರಾಕ್ಷಾ ರಸ ತಯಾರಿಕೆಯನ್ನು ತೋಟಗಾರಿಕೆ ಮತ್ತು ಆಹಾರ ಸಂಸ್ಕರಣ ಕೈಗಾರಿಕೆ ಎಂದು ಪರಿಗಣಿಸಿ, ತೋಟಗಾರಿಕೆ ಇಲಾಖೆಗೆ ವಹಿಸಿದೆ. ಆದರೆ ವೈನ್ ತಯಾರಿಕೆ ಮತ್ತು ಮಾರಾಟ ಅಬಕಾರಿ ಕಾಯ್ದೆಯಡಿಯಲ್ಲಿದ್ದು, ಅಬಕಾರಿ ಇಲಾಖೆಯ ನಿಯಂತ್ರಣದಲ್ಲಿರುತ್ತೆ.

ಈ ರಾಜ್ಯದಲ್ಲಿ ಪ್ರಸ್ತುತ ಉತ್ಪನ್ನವಾಗುತ್ತಿರುವ ವೈನ್ ಪ್ರಮಾಣ ಎಷ್ಟು?

ರಾಜ್ಯದಲ್ಲಿ ಪ್ರಸ್ತುತ ಮಾಸಿಕ ಸರಾಸರಿ 2.0 ಲಕ್ಷ ಬಲ್ಕ್ ಲೀಟರ್ ವೈನ್ ಉತ್ಪತ್ತಿಯಾಗುತ್ತಿದೆ.

192 ಶ್ರೀ.ಸಿದ್ದು ಸವದಿ(ತೆರದಾಳ್)

ಮಾನ್ಯ ಲೋಕೋಪಯೋಗಿ ಸಚಿವರು

ಅ ಕರ್ನಾಟಕ ರಾಜ್ಯ ಅಭಿವೃದ್ಧಿ ಪ್ರಾಧಿಕಾರ (ಕೆಸಿಪ್) ಯೋಜನೆಯಲ್ಲಿ ಇಲ್ಲಿಯವರೆಗೆ ಅಭಿವೃದ್ಧಿಪಡಿಸಿದ ರಸ್ತೆಗಳು ಎಷ್ಟು (ಕಿಲೋಮೀಟರುವಾರು ಮತ್ತು ಆಯಾ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-1 ರಲ್ಲಿ 2414 ಕಿ.ಮೀ.ಗಳನ್ನು ಬಹುತೇಕ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಯೋಜನೆಯು ಜುಲೈ 2001 ರಲ್ಲಿ ಪ್ರಾರಂಭಗೊಂಡು ಅಕ್ಟೋಬರ್ 2007 ರಲ್ಲಿ ಪೂರ್ಣಗೊಂಡಿರುತ್ತದೆ. ಪರಿಸರ ಸಂಬಂಧಿತ ಪರವಾನಗಿ ಕಾರಣ ಒಟ್ಟಾರೆ 72 ಕಿ.ಮೀ.ನ ಕೆಲವೊಂದು ರಸ್ತೆ ಭಾಗಗಳ ಕಾಮಗಾರಿ ಅಪೂರ್ಣಗೊಂಡಿದ್ದು, ಸದರಿ ಕಾಮಗಾರಿಗಳು ಮುಂದುವರೆದಿರುತ್ತದೆ. ರಸ್ತೆಗಳ ವಿವರವನ್ನು ಅನುಬಂಧ-1 ಮತ್ತು ಜಿಲ್ಲಾವಾರು ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಆ ಈ ಯೋಜನೆಯಲ್ಲಿ ಅಭಿವೃದ್ಧಿಪಡಿಸಬೇಕೆಂದಿರುವ ರಸ್ತೆಗಳು ಯಾವುವು ಮತ್ತು ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2 ರಲ್ಲಿ 3411 ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರವು 2006 ರಲ್ಲಿ ತೀರ್ಮಾನಿಸಿದ್ದು ಅಭಿವೃದ್ಧಿಗೆ ಆಯ್ಕೆ ಮಾಡಲಾಗಿರುವ ರಸ್ತೆಗಳ ವಿವರವನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

3411 ಕಿ.ಮೀ. ರಾಜ್ಯ ಹೆದ್ದಾರಿ ಅಭಿವೃದ್ಧಿಯನ್ನು ಒದಗಿ ಬರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಹಂತ ಹಂತವಾಗಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಪ್ರಥಮ ಹಂತದಲ್ಲಿ ವಿಶ್ವ ಬ್ಯಾಂಕ್ 300 ಮಿಲಿಯನ್ ಯು.ಎಸ್. ಡಾಲರ್‌ಗಳ (ರೂ. 1500 ಕೋಟಿ) ಸಾಲದ ನೆರವು ನೀಡಲು ಒಪ್ಪಿದ್ದು ಈ ಮೂಲಕ ಸುಮಾರು 800 ಕಿ.ಮೀ.ಗಳ ಅಭಿವೃದ್ಧಿ ಕೈಗೊಳ್ಳಲು ಯೋಜಿಸಲಾಗಿದ್ದು, ರಸ್ತೆಗಳ ಆಯ್ಕೆ ಪಟ್ಟಿಗೆ ಹಾಗೂ ಮುಂದಿನ ಪ್ರಕ್ರಿಯೆಗಳಿಗೆ ವಿಶ್ವ ಬ್ಯಾಂಕ್ ಅನುಮೋದನೆಯ ನಿರೀಕ್ಷಣೆ ಮಾಡಲಾಗಿದೆ. ಉಳಿದಂತೆ, ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವು ಹಾಗೂ ಖಾಸಗಿ ಪಾಲುದಾರಿಕೆಯಲ್ಲಿ ರಸ್ತೆ ಅಭಿವೃದ್ಧಿ ಕೈಗೊಳ್ಳಲು ಯೋಜಿಸಲಾಗಿದೆ.

ಇ ಮುಧೋಳ-ನಿಪ್ಪಾಣಿ ಮತ್ತು ಜಮಖಂಡಿ – ಕಾಗವಾಡ ರಸ್ತೆಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಮುಧೋಳ-ನಿಪ್ಪಾಣಿವರೆಗಿನ 104 ಕಿ.ಮೀ.ನ ರಸ್ತೆಯ ಅಭಿವೃದ್ಧಿಯನ್ನು Annuity ಗುತ್ತಿಗೆಯಡಿಯಲ್ಲಿ ವಿಶ್ವ ಬ್ಯಾಂಕ್ ನೆರವಿನಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಇದರ ಬಿಡ್ಡಿಂಗ್ ದಸ್ತಾವೇಜುಗಳನ್ನು ಸಿದ್ಧಪಡಿಸಿದ್ದು ವಿಶ್ವ ಬ್ಯಾಂಕ್ ಅನುಮೋದನೆಗೆ ಕಳುಹಿಸಿಕೊಡಲಾಗಿದೆ. ಅನುಮೋದನೆ ದೊರೆತ ಕೂಡಲೇ ಪ್ರಾರಂಭಿಸಲಾಗುವುದು.

ಜಮಖಂಡಿ – ಕಾಗವಾಡವರೆಗಿನ 78 ಕಿ.ಮೀ.ಗಳ ರಸ್ತೆಯನ್ನು ಯೋಜನೆಗೆ ಎಡಿಬಿ/ಖಾಸಗಿ ಆರ್ಥಿಕ ಸಂಸ್ಥೆಗಳಿಂದ ಆರ್ಥಿಕ ನೆರವು ದೊರಕಿದಲ್ಲಿ ಮುಂದಿನ ಹಂತಗಳಲ್ಲಿ ಕೈಗೊಳ್ಳಲಾಗುವುದು.

ಈ ಅಲ್ಲಿಯವರೆಗೆ ಈ ಎರಡೂ ರಸ್ತೆಗಳನ್ನು ಯಾವ ಯೋಜನೆಯಲ್ಲಿ ದುರಸ್ಥಿ ಗೊಳಿಸಲಾಗುವುದು?

ಕೆಷಿಪ್-2 ಯೋಜನೆಯಲ್ಲಿ ರಸ್ತೆ ಅಭಿವೃದ್ಧಿ ಪ್ರಾರಂಭಗೊಳ್ಳುವವರೆಗೆ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ಮೂಲಕ ವಾಹನ ಸಂಚಾರಕ್ಕೆ ಯೋಗ್ಯವಾದ ಸ್ಥಿತಿಯಲ್ಲಿಡಲಾಗುವುದು.

ಅನುಬಂಧ-1

Packagewise and Roadwise Details of Roads Implemented under KSHIP-I

Sl. No.	Package	From	To	Total Length in Kms
1	2	3		4
1	U1*	Kalmala Jn.	Sindhanur	76.7
2	U2*	Sindhanur	Budugumpa	77.54
3	U3*	Hattigudur	Bidar	188.43
4	U4*	Bijapur	Tikota	20.15
5	U5*	AP Border	Kalmala Jn.	31
6	M2*	Tikota	Badachi	42.8
7	M3*	Badachi	Shedbal	49.51
8	M4*	Shedbal	Sankeshwar	55.5
9	M12*	Sindhanur	Lingsugur	51.96
10	M13*	Lingsugur	Hattigudur	67.44
11	U4 Br	Construction of Bridge at Ch. 12.334 of Road from Bijapur to Tikota		
12	U3 Br.	Bridge across Bennethora River		0
13.	M4-R	Improvement of road from Kamatnur cross to NH-4 (Gotur) and Improvement to distress road from Chikodi to Sankeshwar		24.36
14	U6	Sankeshwar	Yaragatti	73.18
15	U7A	Bijapur	Krishna Bridge	48.1
16	U7B	Krishna Birdge	Lokapur	55.64
17	UB*	Hungund	Belgaum	170.31
18	U11*	Hiriyur	Bellary	144

19	M9*	Huliyur	Hiriyur	48.65
20	M14*	Mariyammanahalli	Ittigi	52.95
21	M15	Ittigi	Harihar	53.93
22	M16	Harihar	Honnali	35.37
23	M29*	Yaragatti	Hulikatti	29.6
24	U9 (Reh)	Khanapur	Alna war	35.24
25	U10 (Reh)	Hulikatti	Nargund	20.67
26	BP1	Raichur Bypass		8.00
27	BP2	Bijapur Bypass		7.00
28	M1*	Mudgal	Hungund	39.68
29	M30*	Kalmala Junction	Kavital	50
30	M31*	Kavital	Mudgal	52.46
31	M24*	Alnawar	Yellapur	57.1
32	M25	Yellapur	Sirsi	51
33	M26	Sirsi	Mavingundi	53
34	M27	Kumbarvada	Sadashivgarh	64
35	M28	Ramnagara (Londa)	Kumbarvada	56.85
36	M5*	Srirangapattana	Chinya	32
37	M6*	Chinya	Nelligere	32.9
38	M7*	Nelligere	Kibbanahalli	47
39	M8*	Kibbanahalli	Huliyar	36.46
40	M10*	Bellary	Devinagar	40
41	M11	Devinagar	Sindhnur	42.72
42	M17*	Honnali	Shimoga	41.22
43	M18*	Belur	Chikmagalur	24
44	M19*	Chikmagalur	Tarikere	57.7
45	M32*	Mysore	Kerala Border	58.9

46	M32 A	Mysore	Manathwadi	30.5
47	Br*	Bridges – 9 Nos.		9 Bridges
48	M33 (Add)	Navalgund	Ron	44.36
49	M34 (Add)	Ron	Kushtagi	52.31
50	M4-A	Rehabilitation of road from Kagawada to Maharastra Border and new construction of cause way at Ch.0.600 near Kagawada Junction		2.5
		Deduct 21.260 kms of M4 Contract which is at		21.26
	Grand Total			**2413.43**

ಅನುಬಂಧ-2

Districtwise details of Roads implemented under KSHIP-I

Region	**District**	**KSHIP I**
		District wise total length in Km
1	**2**	**3**
North Karnataka	Bidar	60
	Gulbarga	174
	Raichur	361
	Koppal	79
	Bellary	110
	Bijapur	84
	Bagalkot	172
	Belgaum	380

	Gadag	78
	Dharwad	10
	Uttara Kannada	270
	Haveri	0
	Total	**1779**
South Karnataka	Mysore	92
	Mandya	75
	Tumkur	81
	Chitradurga	160
	Davangere	128
	Shimoga	19
	Hassan	8
	Chikkamagalur	73
	Udupi	-
	Dakshina Kannada	-
	Kodagu	-
	Chamarajanagar	-
	Ramnagar	-
	Chikkaballapur	0
	Bangalore Rural	-
	Bangalore Urban	-
	Kolar	-
	Total	**636**
GRAND TOTAL (Kms)		**2414**

ಅನುಬಂಧ-3

Annexure

Enclosure to Go No.PWD 61 EAP 2006 Bangalore

Dated: 25-11-2006

List of Selected roads for Improvements under KSHIP-II		
Sl. No	**Name of the roads**	**Length (Kms)**
01	Tinthni-Devadurga-Kalmala	74
02	Kushtagi (NH-13)-Tawargera-Sindhanur	64
03	Managoli-Talikota-Devapur	110
04	Mudgal-Kudithini(NH-63)	115
05	Konananur-Hunsur-HD Kote	89
06	Sira-AP Border via Madhugiri-Gowribidanur-Chikaballapura-Chintamani-Srinivasapura-Mulbagal	210
07	Haliyal-Kudalasangama via Dharwad-Soundatti-Ramdurga-Badami-Pattadakal-Kamatgi-NH13	243
08	Hassan-Periyapatna via Arakalagud-Ramanathpura	77
09	Hirekerur-Ranebennur (on NH-4)	58
10	Kudachi-Kabbur-Ghataprabha	50
11	Shikaripura-Anandapuram (on NH-206)	32
12	Kotumachigi-Gaiendragarh	32
13	Goa Border-Soundatti via Khanapur-Bagewadi-Bailhongal	133
14	Mudhol-Nippani via Mahalingapur-Kabbur	104
15	Belur-Kodlipet via Bikkodu-Vatehole-Alur-Magge	72

16	Dvanagere-Birur via Channagiri	104
17	Gangamula-Kottigehara	63
18	Hangal-Haveri(NH-4)	32
19	TN Border (Hunasanahalli)-AP Border via Karnataka-Ramanagara-Magadi-Dobbespet-Koratagere-Madhugiri-Pavagada	220
20	Hole Narsipura to K.R.Nagar via Saligrama	46
21	Shelavadi-Harapanahalli via Gadag-Mundarigi	112
22	Indi-Zalaki (on NH-13)	20
23	Maharastra Border-Gulbarga via Afzalpur	99
24	Hungund-Talikot via Muddebihal	58
25	Gubbi-Mandya via Yediyur-Kowdle	109
26	Jagalur – NH-13	10
27	Hoskote-AP Border via Chintamani	88
28	Belthangadi to Bantwal (on NH 48)	35
29	Ramangaram – Saligrama via Thalavadi-Choulanakuppe-Huliyurdurga-Nagamangala-K.R.Pet Akkihebbal-Berya.	142
30	Malavalli-Koratagere via Maddur-Kunigal-Tumkur	135
31	Shimoga-Tadasa on NH-4 via Savalanga via Shikaripura-Shiralakoppa-Togarsi-Anvatti-Gondi-Hangal	171
32	Jamkhandi-Maharastra Border via Teradal-Kudachi-Managasuli	79
33	Horanadu-Subramanaya via Kalasa-Kottigehara-Mudigere-Sakaleshpura Junction-Vamagur	164
34	Molkalmur to SH 19 (KSHIP 1 Road)	6

35	Bidar-Chincholi via Ekhelli (NH9)	61
36	Padubidri-Karkala	28
37	Kollegala-Tamilnadu Border via Hanur-MM Hills	97
38	Virajpet-Somawarpet via Madikere	71
Total Length(Kms)		**3,411**

ಅನುಬಂಧ-3

District-wise details of roads under KSHIP-2

Region	District	District wise total length in Km
1	**2**	**3**
North Karnataka	Bidar	45
	Gulbarga	152
	Raichur	126
	Koppal	99
	Bellary	56
	Bijapur	133
	Bagalkot	191
	Belgaum	380
	Gadag	88
	Dharwad	59
	Uttara Kannada	8
	Haveri	156
	Total	**1493**
South Karnata	Mysore	142
	Mandya	154
	Tumkur	330

	Chitradurga	6
	Davangere	112
	Shimoga	130
	Hassan	221
	Chikkamagalur	168
	Udupi	28
	Dakshina Kannada	45
	Kodagu	78
	Chamarajanagar	97
	Ramnagar	147
	Chikkaballapur	167
	Bangalore Rural	40
	Bangalore Urban	0
	Kolar	52
	Total	**1917**
GRAND TOTAL (Kms)		**3411**

193 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ ಬನಹಟ್ಟಿ ನಗರಕ್ಕೆ ಕುಡಿಯುವ ನೀರಿನ ಯೋಜನೆ 45 ವರ್ಷಗಳ ಹಿಂದಿನದಿದ್ದು, ಸರಿಯಾಗಿ ನೀರು ಪೂರೈಕೆ ಆಗದೇ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

– ಹೌದು –

ಆ ಹಾಗಿದ್ದಲ್ಲಿ, ಹೊಸಯೋಜನೆಯನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಬನಹಟ್ಟಿ ನಗರಕ್ಕೆ ನೀರು ಸರಬರಾಜು ಸುಧಾರಣೆಗಾಗಿ ರೂ.12.00 ಕೋಟಿಗಳಿಗೆ ಪೂರ್ವಭಾವಿ ಯೋಜನಾ ವರದಿ (PFR) ತಯಾರಿಸಲಾಗಿದ್ದು, ಸರ್ವೆಕಾರ್ಯ ಪ್ರಗತಿಯಲ್ಲಿದೆ.

ಇ ಅಲ್ಲಿಯವರೆಗೆ ಯಾವ ರೀತಿ ನಗರಕ್ಕೆ ನೀರು ಪೂರೈಸಲಾಗುವುದು?

ಬನಹಟ್ಟಿ ನೀರು ಸರಬರಾಜು ನಿರ್ವಹಣೆಯನ್ನು ನಗರಸಭೆಯಿಂದ ನಿರ್ವಹಿಸುತ್ತಿದ್ದು, ಕೃಷ್ಣನದಿ ಮೂಲದಿಂದ 45 ವರ್ಷಗಳಷ್ಟು ಹಳೆಯದಾದ ಫಿಲ್ಟರ್ ಹೌಸ್ ಹಾಗೂ ಜಾಕ್‌ವೆಲ್‌ನಿಂದ ನೀರು ಪೂರೈಕೆ ಮಾಡಲಾಗುತ್ತಿದೆ.

194 ಶ್ರೀ ಸಿದ್ದು ಸವದಿ

ಮಾನ್ಯ ಪೌರಾಡಳಿತ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು

ಅ) ಉತ್ತರ ಕರ್ನಾಟಕದ ಸಣ್ಣ ಪಟ್ಟಣಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಯೋಜನೆಯನ್ನು (ಕೆಯುಐಡಿಎಫ್ ಸಿ) ಎ.ಡಿ.ಬಿ.ಯಿಂದ ಸಾಲ ಪಡೆದು ಅಭಿವೃದ್ಧಿಪಡಿಸುವ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಎ.ಡಿ.ಬಿ.ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದ ಮೊದಲನೇ ಟ್ರ್ಯಾಂಚ್‌ನ ಸಾಲ ಹಾಗೂ ಯೋಜನಾ ಒಪ್ಪಂದಗಳಿಗೆ ಜನವರಿ, 2008ರಲ್ಲಿ ಸಹಿಮಾಡಲಾಗಿದ್ದು, ಸಾಲವು ಏಪ್ರಿಲ್-2008ರಿಂದ ಚಾಲ್ತಿಗೆ ಬಂದಿರುತ್ತದೆ. ಮೊದಲನೇ ಟ್ರ್ಯಾಂಚ್‌ನಲ್ಲಿ ಮೂರು ಪಟ್ಟಣಗಳಾದ ಹೊಸಪೇಟೆ, ಹಾವೇರಿ ಹಾಗೂ ರಾಯಚೂರು ನಗರಗಳನ್ನು ಆಯ್ಕೆಮಾಡಲಾಗಿದೆ.

ಸಮಾಲೋಚಕರು ಸರ್ವೆ ಕಾರ್ಯ ಕೈಗೊಂಡು ವಿಸ್ತೃತ ಯೋಜನಾ ವರದಿಯನ್ನು ತಯಾರಿಸುತ್ತಾರೆ. ಮೊದಲನೇ ಟ್ರ್ಯಾಂಚ್‌ನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) ಹಾಲಿ ಮಂಜೂರಿಯಾದ ಹಣದಲ್ಲಿ ಅಯಾ ನಗರಗಳ ಸಂಪೂರ್ಣ ಅಭಿವೃದ್ಧಿ ಆಗುವುದೇ?

ಲಭ್ಯವಿರುವ ಎಡಿಬಿ ಸಾಲದ ಮೊತ್ತದ ಮಿತಿಗೊಳಪಟ್ಟಂತೆ ಆದ್ಯತೆಯ ಮೇರೆಗೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಇಲ್ಲವಾದಲ್ಲಿ ಯಾವ ರೀತಿ ಇನ್ನುಳಿದ ಕೆಲಸಗಳನ್ನು ಪೂರೈಸಲಾಗುವುದು;

ಈಗಾಗಲೇ 'ಆ' ನಲ್ಲಿ ಉತ್ತರಿಸಿರುವ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) 50 ಸಾವಿರ ಜನಸಂಖ್ಯೆ ಮೇಲ್ಪಟ್ಟು ಇರುವ ನಗರಗಳನ್ನು ಮಾತ್ರ ಎಡಿಬಿಯಲ್ಲಿ ಆಯ್ಕೆ ಮಾಡಿದ್ದು, ಇನ್ನುಳಿದ ಪಟ್ಟಣಗಳ ಅಭಿವೃದ್ಧಿಗೆ ಯಾವ ಕ್ರಮ ಕೈಗೊಳ್ಳಲಾಗುವುದು;

ಇನ್ನುಳಿದ ಪಟ್ಟಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾ ವರದಿ ಸಿದ್ಧಪಡಿಸಲು ಅಧ್ಯಯನ ನಡೆಸಲಾಗುತ್ತಿದೆ.

ಉ) ತೇರದಾಳ ಮತ ಕ್ಷೇತ್ರದಲ್ಲಿ ತೇರದಾಳ ಮತ್ತು ಮಹಾಲಿಂಗಪುರ ಈ ಎರಡು ಪುರಸಭೆಗಳು ಇದ್ದು, ಅವುಗಳನ್ನು ಎಡಿಬಿ ಯಲ್ಲಿ ಯಾವಾಗ ತೆಗೆದುಕೊಳ್ಳಲಾಗುವುದು?

ಎ.ಡಿ.ಬಿ.ನೆರವಿನ ಯೋಜನೆಯಡಿ ಈಗಾಗಲೇ 25 ಪಟ್ಟಣಗಳನ್ನು ಆಯ್ಕೆ ಮಾಡಿ ಅಂತಿಮಗೊಳಿಸಲಾಗಿದ್ದು, ಈ ಹಂತದಲ್ಲಿ ಯಾವುದೇ ಪಟ್ಟಣಗಳನ್ನು ಈ ಯೋಜನೆಯಡಿ ಸೇರಿಸಲು ಅವಕಾಶವಿರುವುದಿಲ್ಲ.

195 ಶ್ರೀ ಸಿದ್ದು ಸವದಿ (ತೆರದಾಳ್)

ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ 2008-09 ರಲ್ಲಿ ಮೀನುಗಾರರಿಗೆ ಎಷ್ಟು ಮತ್ಸ್ಯಾಶ್ರಯ ಮನೆಗಳನ್ನು ಕೊಡಲಾಗಿದೆ (ಜಿಲ್ಲಾವಾರು ಮಾಹಿತಿ ಪೂರೈಸುವುದು)

2008-09ನೇ ಸಾಲಿನಲ್ಲಿ ಇದುವರೆವಿಗೆ ಮತ್ಸ್ಯಾಶ್ರಯ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ.

ಆ ತೇರದಾಳ ಮತಕ್ಷೇತ್ರಕ್ಕೆ ಎಷ್ಟು ಮನೆಗಳನ್ನು ಕೊಡಲಾಗಿದೆ; ಇಲ್ಲವಾದಲ್ಲಿ ಕಾರಣಗಳೇನು;

ಅನ್ವಯಿಸುವುದಿಲ್ಲ.

ಇ ತೇರದಾಳ ಮತಕ್ಷೇತ್ರದಲ್ಲಿ ಎಷ್ಟು ಜನ ಮೀನುಗಾರರಿರುವರು; ಇಲ್ಲಿಯವರೆಗೆ 2008-09 ರಲ್ಲಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ.,

ತೇರದಾಳ ಮತಕ್ಷೇತ್ರದಲ್ಲಿ ಅಂದಾಜು 400-500 ಜನ ಮೀನುಗಾರರು ಇದ್ದಾರೆ.

<u>2008-09ನೇ ಸಾಲಿನಲ್ಲಿ ನೀಡಿರುವ ಸೌಲಭ್ಯಗಳು:</u>

1) 10 ಜನ ಫಲಾನುಭವಿಗಳಿಗೆ ಬಲೆ ಖರೀದಿಗಾಗಿ ತಲಾ ರೂ.1000/- ಸಹಾಯಧನ ಮತ್ತು 12 ಜನ ಫಲಾನುಭವಿಗಳಿಗೆ ಮೀನು ಮಾರಾಟಕ್ಕೆ ಸೈಕಲ್ ಐಸ್‌ಬಾಕ್ಸ್ ಖರೀದಿಗಾಗಿ ತಲಾ ರೂ.1250/- ಸಹಾಯಧನ ಮಂಜೂರು ಮಾಡಿದ್ದು ಸವಲತ್ತನ್ನು ಶೀಘ್ರ ನೀಡಲಾಗುವುದು.
2) ಜಿಲ್ಲಾ ವಿಶೇಷ ಘಟಕ ಯೋಜನೆಯಡಿ ಒಬ್ಬ ಫಲಾನುಭವಿಗೆ ಮೀನುಗಾರಿಕೆ ಸಲಕರಣೆ ಖರೀದಿಗಾಗಿ ರೂ.5000/- ಸಹಾಯಧನ ಮಂಜೂರು ಮಾಡಿದ್ದು ಸವಲತ್ತನ್ನು ಶೀಘ್ರ ನೀಡಲಾಗುವುದು.

3) ತೇರದಾಳ್ ಮೀನುಗಾರರ ಸಹಕಾರ ಸಂಘಕ್ಕೆ 2 ಕೆರೆಗಳ ಗುತ್ತಿಗೆಯನ್ನು 2008-09ನೇ ಸಾಲಿಗೆ ನವೀಕರಿಸಲಾಗಿದೆ.

ಈ ಮೀನುಗಾರರಿಗೆ ಇಲಾಖೆಯಿಂದ ಯಾವ ಯಾವ ಸೌಲಭ್ಯಗಳನ್ನು ಕೊಡಲಾಗುವುದು?

ಒಳನಾಡು ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ರಾಜ್ಯದಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು ಅಥವಾ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿ ಪಡಿಸುವುದು.
- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ
  - ಖಾಸಗಿ ಕ್ಷೇತ್ರದಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ
  - ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ
  - ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯಧನ
  - ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯಧನ
  - ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ
- ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆಯ ಅಭಿವೃದ್ಧಿ.
- ಇದಲ್ಲದೆ ಮಹಿಳಾ ಮೀನುಗಾರರಿಗೆ "ಮತ್ಸ್ಯ ಮಹಿಳಾ ಸ್ವಾವಲಂಬನಾ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

196 ಶ್ರೀ ಸಿದ್ದು ಸವದಿ

ಮಾನ್ಯ ಸಾರಿಗೆ ಸಚಿವರು.

ಅ) ತೇರದಾಳ ಮತಕ್ಷೇತ್ರದಲ್ಲಿ ತೇರದಾಳ, ಮಹಾಲಿಂಗಪುರ ಮತ್ತು ರಬಕವಿ ಬನಹಟ್ಟಿ ನಗರಗಳಲ್ಲಿ ಬಸ್ ಡಿಪೋ ಪ್ರಾರಂಭಿಸಲು ಯೋಚಿಸಲಾಗಿದೆಯೇ; ಈ ಬಗ್ಗೆ ಬೇಡಿಕೆ ಇದು ಅದನ್ನು ಯಾವಾಗ ಪ್ರಾರಂಭಿಸಲಾಗುವುದು;

ಇಲ್ಲ.

ಜಮಖಂಡಿ ಘಟಕವು ತೇರದಾಳ, ರಬಕವಿ ಹಾಗೂ ಬನಹಟ್ಟಿ ನಗರಗಳಿಗೆ ಕ್ರಮವಾಗಿ 35,18, ಹಾಗೂ 14 ಕಿ.ಮೀ. ಅಂತರದಲ್ಲಿದ್ದು ಅಲ್ಲಿಂದಲೇ ವಾಹನಗಳ ಕಾರ್ಯಾಚರಣೆ ಮಾಡಲಾಗುವುದು. ಮಹಾಲಿಂಗಪುರದಲ್ಲಿ ಬಸ್ ಡಿಪೋ ನಿರ್ಮಿಸಲು ಬಸ್ ನಿಲ್ದಾಣದ ಹತ್ತಿರದಲ್ಲಿ ಸೂಕ್ತ ನಿವೇಶನವನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪಡೆದ ನಂತರ ಸಂಸ್ಥೆಯ ಆಯವ್ಯಯದಲ್ಲಿ ಪ್ರಾವಧಾನ ಮಾಡಿಕೊಂಡು ಮತ್ತು ಬಸ್ ಡಿಪೋ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಜಮಖಂಡಿ ಮತ್ತು ಮುಧೋಳ ಡಿಪೋಗಳಲ್ಲಿರುವ 18 ಅವಧಿ ಮೀರಿದ ಬಸ್ಸುಗಳ ಸಂಖ್ಯೆ ಎಷ್ಟು ಹೊಸ ಬಸ್ಸುಗಳನ್ನು ಯಾವಾಗ ಪೂರೈಸಲಾಗುವುದು;

ಜಮಖಂಡಿ ಡಿಪೋದಲ್ಲಿ 34 ಮತ್ತು ಮುಧೋಳ ಡಿಪೋದಲ್ಲಿ 18 ಅವಧಿ ಮೀರಿದ ಬಸ್ಸುಗಳಿರುತ್ತವೆ. ಪ್ರಸಕ್ತ 2008-09ನೇ ಸಾಲಿನಲ್ಲಿ ಜಮಖಂಡಿ ಘಟಕಕ್ಕೆ 4 ಹೊಸ ಬಸ್ಸುಗಳನ್ನು ಮತ್ತು ಮುಧೋಳ ಘಟಕಕ್ಕೆ 2 ಹೊಸ ಬಸ್ಸುಗಳನ್ನು ಪೂರೈಸಲಾಗಿದೆ. ಇನ್ನೂ ಹೆಚ್ಚಿನ ಹೊಸ ಬಸ್ಸುಗಳನ್ನು ಹಂತ-ಹಂತವಾಗಿ ಪೂರೈಸಲಾಗುವುದು.

ಇ) ಅನೇಕ ಗ್ರಾಮಾಂತರ ಬಸ್ಸುಗಳ ಸಂಚಾರವನ್ನು ನಿಲ್ಲಿಸಲಾಗಿದ್ದು ಪುನರ್ ಪ್ರಾರಂಭಿಸಲಾಗುವುದೇ?

ತೇರದಾಳ, ಮಹಾಲಿಂಗಪುರ, ರಬಕವಿ ಹಾಗೂ ಬನಹಟ್ಟಿ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಯಾವುದೇ ಮಾರ್ಗಗಳನ್ನು ರದ್ದು ಪಡಿಸಿರುವುದಿಲ್ಲ.

200 ಶ್ರೀ.ಸುರೇಶ್‌ಬಾಬು ಸಿ.ಬಿ(ಚಿಕ್ಕನಾಯಕನಹಳ್ಳಿ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸೇತುವೆಗಳ ಅವಶ್ಯಕತೆ ಎಷ್ಟಿದೆ ಮತ್ತು ಗುರುತಿಸಲಾಗಿರುವ ಸ್ಥಳಗಳು ಯಾವುವು.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಮುಖವಾಗಿ 15 ಸೇತುವೆಗಳ ಅವಶ್ಯಕತೆಯನ್ನು ಗುರುತಿಸಿದ್ದು ಅವುಗಳ ವಿವರಗಳು ಕೆಳಕಂಡಂತಿದೆ.

ಕೆ.ಆರ್.ಡಿ.ಸಿ.ಎಲ್.ವತಿಯಿಂದ ತೆಗೆದುಕೊಂಡಿರುವ ಸೇತುವೆಗಳ ವಿವರ:

ಹಂತ	ಅನುಮೋದಿತ ಸೇತುವೆಗಳ ಸಂಖ್ಯೆ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ

2	4	120.00 ಲಕ್ಷ
3	4	42.00 ಲಕ್ಷ
4	3	55.00 ಲಕ್ಷ

ಲೋಕೋಪಯೋಗಿ ಇಲಾಖೆ ವತಿಯಿಂದ 15 ಸೇತುವೆಗಳನ್ನು ಗುರುತಿಸಿದ್ದು ಇವುಗಳ ಒಟ್ಟು ಅಂದಾಜು ಮೊತ್ತ 545 ಲಕ್ಷ ರೂ.ಗಳು.ಮೇಲಿನ ಸೇತುವೆಗಳ ಸ್ಥಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ಕಳೆದ ವರ್ಷದ ಮಳೆಗಾಲದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೊರೆಮನೆ ಗ್ರಾಮದ ಹತ್ತಿರ ಹರಿಯುವ ಹಳ್ಳದಲ್ಲಿ ಅಮಾಯಕ ವ್ಯಕ್ತಿಯೊಬ್ಬರು ಹಳ್ಳದಲ್ಲಿ ಕೊಚ್ಚಿ ಹೋದ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ಕಾರದ ಗಮನಕ್ಕೆ ಬಂದಿದೆ

ಇ) ಆ ಜಾಗದಲ್ಲಿ ಸೇತುವೆಯು ಅವಶ್ಯಕತೆಯಿದ್ದು, ಸೇತುವೆ ನಿರ್ಮಾಣಕ್ಕೆ ಸರ್ಕಾರದ ಯಾವ ಕ್ರಮ ಕೈಗೊಂಡಿದೆ?

ಸದರಿ ಸೇತುವೆ ಸ್ಥಳವು ರಾಜ್ಯ ಹೆದ್ದಾರಿ-19 ರಿಂದ ಪ್ರಾರಂಭವಾಗಿ ಗೂಬೆಹಳ್ಳ-ನಿರುವಗಲ್ಲು ಮಾರ್ಗವಾಗಿ ಹಂದನಕೆರೆ-ಬರಗೂರನ್ನು ಸಂಪರ್ಕಿಸುವ ರಸ್ತೆಯಲ್ಲಿ ಇರುತ್ತದೆ. ಸದರಿ ರಸ್ತೆಯ ಗ್ರಾಮೀಣ ರಸ್ತೆಯಾಗಿದ್ದು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದೆ. ಈ ರಸ್ತೆಯಲ್ಲಿರುವ ಗೂಬೆಹಳ್ಳ ಮತ್ತು ನಿರುವಗಲ್ಲು ಮಧ್ಯೆ ಬಲಕ್ಕೆ ಸಾಗುವ ರಸ್ತೆಯ ಸೀಗೆಬಾಗಿ ಬಳಿ ತೊರೆಮನೆ ಗ್ರಾಮವಿರುತ್ತದೆ. ಈ ಸೇತುವೆ ನಿರ್ಮಾಣ ಕಾಮಗಾರಿಯ ರೂ.80.00 ಲಕ್ಷಗಳ ಪ್ರಸ್ತಾವನೆಯನ್ನು ನಬಾರ್ಡ್ ಆರ್ಐಡಿಎಫ್-14ರ ಸಾಲ ಸಹಾಯ ಯೋಜನೆಯಡಿ ಸರ್ಕಾರಕ್ಕೆ ಸ್ವೀಕೃತವಾಗಿದ್ದು, 2008-09ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಈ ಸೇತುವೆ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ ವತಿಯಿಂದ ಪರಿಶೀಲಿಸಲಾಗುವುದು.

ಈ) ಈ ವರ್ಷದ ಯೋಜನೆಗಳಲ್ಲಿ ಅವಶ್ಯಕವಿರುವ ಸೇತುವೆಗಳನ್ನು ನಿರ್ಮಾಣ ಮಾಡಲಾಗುವುದೇ

ಪ್ರಸ್ತುತ ಸಾಲಿನಲ್ಲಿ ಅಂದರೆ 2008-09ನೇ ಸಾಲಿನಲ್ಲಿ ಮೇಲಿನ ಕಾಮಗಾರಿಗಳು ಕ್ರಿಯಾ ಯೋಜನೆಯಲ್ಲಿ ಸೇರಿರುವುದಿಲ್ಲ.

LIST OF BRIDGES TAKEN UP BY KRDCL IN CHIKKANAYAKANAHALLI TALUK

Sl. No.	District/ Taluk	Location of Bridges	SH/ MDR	Est.cost (Rs.in Lakhs)
		Phase-II		
1	C.N. Halli	Re-construction of bridge at 144.90 Km of (near Bellara) Mudigere to State Border road in C.N. Halli Taluk	SH	95.00
2	C.N. Halli	Construction of bridge on Mathighatta-Tiptur road near Bharanapura	SH	10.00
3	C.N. Halli	Construction of bridge across Kupsuru halla	MDR	10.00
4	C.N. Halli	Construction of bridge between Agasarahalla-Sasalu road	MDR	5.00
		Phase-III		
1	C.N. Halli	Construction of bridge on Thirthapura-Doddaramapura road at Km 7.00	MDR	10.00
2	C.N. Halli	Construction of bridge on Bidarammanagudi-Huliyar road at Km 36.00 near Gopalapura	SH	25.00
3	C.N. Halli	Construction of bridge on Bidarammanagudi-Huliyar road at km 28.00 near Mathighatta	SH	5.00
4	C.N. Halli	Construction of bridge on C.N. Halli-Hagalavadi road at Km 1.00, Chikkanayakanahalli town	MDR	2.00

		Phase-IV		
1	C.N. Halli	Reconstruction of bridge at Km 9.00 of chikkanayakanahalli Mathigatta Kanakatte Road C.N. Halli Taluk (Near Kurubarahalli)	MDR	30.00
2	C.N. Halli	Reconstruction of Causeway at Km 20.00 in between Bandrehalli-Kankere of Chikkanayakanahalli – Mathigatta-Kanakatte Road in C.N. Halli Taluk.	MDR	15.00
3	C.N. Halli	Construction of Birdge at Km 23.00 of Chikkanayakanahalli – Mathigatta-Kanakatte Road in C.N. Halli Taluk (Handanakere Village Limits)	MDR	10.00

ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ200ರ ಅನುಬಂಧ.

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	ಮಂಡ್ಯ-ಹಡಗಲಿ ರಾಹೆ-47 ಕಿಮೀ 182.00	25.00
2)	ಸೇತುವೆ ನಿರ್ಮಾಣ	30.00
3)	ಮಂಡ್ಯ-ಹಡಗಲಿ ಕಿಮೀ 185.00 ಸೇತುವೆ	15.00
4)	ನಿರ್ಮಾಣ	20.00
5)	ಹೊಯ್ಸಳಕಟ್ಟೆ-ಪಿಲಾಲಿ ರಸ್ತೆ (ಜಿಮುರ) ಕಿಮೀ 4.00	30.00
6)	ಸೇತುವೆ ನಿರ್ಮಾಣ	30.00
7)	ಸಿಎನ್ ಹಳ್ಳಿ ಹಾಗಲವಾಡಿ ಜಿಮುರ ಕಿಮೀ 8.00	20.00
8)	ರಲ್ಲಿ ಸೇತುವೆ ನಿರ್ಮಾಣ	30.00

9)	ಸಿಎನ್ ಹಳ್ಳಿ ಹಾಗಲವಾಡಿ ಜಿಮುರ ಕಿಮೀ 25.00	25.00
10)	ರಲ್ಲಿ ಸೇತುವೆ ನಿರ್ಮಾಣ	30.00
	ಸಿಎನ್ ಹಳ್ಳಿ ಹಾಗಲವಾಡಿ ಜಿಮುರ ಕಿಮೀ 26.00	
11)	ರಲ್ಲಿ ಸೇತುವೆ ನಿರ್ಮಾಣ	40.00
	ಚಿ.ನಾ.ಹಳ್ಳಿ ಮತಿಘಟ್ಟ-ಕಣಕಟ್ಟೆ (ಜಿಮುರ) ರಸ್ತೆ	
12)	ಕಿಮೀ 24.00 ರಲ್ಲಿ ಸೇತುವೆ ನಿರ್ಮಾಣ	60.00
	ಸಾಲಕಟ್ಟೆ ಬೆಳ್ಳಾರ ಜಿಲ್ಲಾ ಮುಖ್ಯ ರಸ್ತೆ ಕಿಮೀ 12.00	
13)	ರಲ್ಲಿ ಸೇತುವೆ ನಿರ್ಮಾಣ	60.00
14)	ಸಾಲಕಟ್ಟೆ ಬೆಳ್ಳಾರ ಜಿಲ್ಲಾ ಮುಖ್ಯ ರಸ್ತೆ ಕಿಮೀ 20.00	50.00
15)	ರಲ್ಲಿ ಸೇತುವೆ ನಿರ್ಮಾಣ	80.00
	ರಾಹೆ 58 ರಿಂದ ಗಾಣದಾಳು ಮೇಲನಹಳ್ಳಿ ಮುಖೇನ ರಾಹೆ 19 ನ್ನು ಸೇರುವ ಜಿಮುರ ಕಿಮೀ 10.00 ರಲ್ಲಿ ಸೇತುವೆ ನಿರ್ಮಾಣ	
	ಎಸ್.ಬಿ ರಸ್ತೆಯಿಂದ ಗೋಡೆಕೆರೆ-ಕಾಮಗೊಂಡನಹಳ್ಳಿ ಮುಖಾಂತರ ರಾ.ಹೆ 206ನ್ನು ಸೇರುವ ಜಿಲ್ಲಾ ಮುಖ್ಯ ರಸ್ತೆ ಕಿಮೀ 4ರಲ್ಲಿ ಸೇತುವೆ ನಿರ್ಮಾಣ	
	ಚಿ.ನಾ.ಹಳ್ಳಿ ಹೊನ್ನೆಬಾಗಿ ಬುಲ್ಲೇನಹಳ್ಳಿ ಮಾರ್ಗ ರಾಷ್ಟ್ರೀಯ ಹೆದ್ದಾರಿ 206 ನ್ನು ಸೇರುವ ರಸ್ತೆ ಕಿಮೀ 8.00 ರಲ್ಲಿ ಜಿಮುರ ಸೇತುವೆ ನಿರ್ಮಾಣ	
	ಮೂಡಿಗೆರೆ ವೆಂಕಟಗಿರಿಕೋಟೆ ರಸ್ತೆ ರಾಹೆ 58 ಕಿಮೀ 134.00 ರಲ್ಲಿ ಸೇತುವೆ ನಿರ್ಮಾಣ	
	ಮೂಡಿಗೆರೆ ವೆಂಕಟಗಿರಿಕೋಟೆ ರಸ್ತೆ ರಾಹೆ 58 ಕಿಮೀ 135.00 ರಲ್ಲಿ ಸೇತುವೆ ನಿರ್ಮಾಣ	
	ರಾಜ್ಯ ಹೆದ್ದಾರಿ-19ರಿಂದ ಪ್ರಾರಂಭವಾಗಿ ಗೂಬೆಹಳ್ಳ-ನಿರುವಗಲ್ಲು ಮಾರ್ಗವಾಗಿ ಹಂದನಕೆರೆ-ಬರಗೂರನ್ನು ಸಂಪರ್ಕಿಸುವ ರಸ್ತೆಯಲ್ಲಿ ಸೇತುವೆ ನಿರ್ಮಾಣ	
	ಒಟ್ಟು	**545.00**

ಜಲಪಾತಗಳು ಪ್ರವಾಸಿ ತಾಣಗಳಾಗಿ ಪರಿವರ್ತನೆ

202 ಶ್ರೀ ಧ್ರುವನಾರಾಯಣ್.ಆರ್ (ಕೊಳ್ಳೇಗಾಲ)
ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳನ್ನು ಪ್ರಮುಖ ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಭರಚುಕ್ಕಿ ಜಲಪಾತ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಳವಡಿಸಲು ಇಲಾಖೆಯು ಕಾರ್ಯಯೋಜನೆಯನ್ನು ರೂಪಿಸಲಾಗಿದ್ದು, ಇದಕ್ಕಾಗಿ ಕೇಂದ್ರ ಧನಸಹಾಯವಾಗಿ ರೂ.431.85ಲಕ್ಷಗಳು ಮಂಜೂರಾಗಿರುತ್ತದೆ. ರೂ.345.48ಲಕ್ಷಗಳನ್ನು ಮೊದಲ ಕಂತಾಗಿ ಕೇಂದ್ರವು ಬಿಡುಗಡೆ ಮಾಡಿರುತ್ತದೆ. ಈ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಇಲಾಖೆಯು ಗುರುತಿಸಿದ್ದ ಜಮೀನು ದೊರಕಿದ ಕೂಡಲೇಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) ಪ್ರವಾಸಿಗರನ್ನು ಈ ಜಲಪಾತಗಳಿಗೆ ಆಕರ್ಷಿಸಲು ಜಲಪಾತೋತ್ಸವದಂತಹ ಕಾರ್ಯಕ್ರಮಗಳನ್ನು ಯಾವಾಗ ಆಯೋಜಿಸಲಾಗುವುದು;

ಜಲಪಾತೋತ್ಸವವನ್ನು ನಡೆಸುವ ಬಗ್ಗೆ ಜಿಲ್ಲಾಡಳಿತಗಳು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ. ಇಲಾಖೆಯಿಂದ ಈ ಉತ್ಸವಗಳಿಗೆ ಸ್ವಲ್ಪಮಟ್ಟಿನ ಸಹಾಯಧನ ಒದಗಿಸಲಾಗುವುದು.

ಇ) ಹೊಗೇನಕಲ್ ಜಲಪಾತವನ್ನು ಪ್ರವಾಸಿ ತಾಣವಾಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಚಾಮರಾಜನಗರ ಜಿಲ್ಲೆಯ ಹೊಗೇನಕಲ್ ಜಲಪಾತ ಪ್ರದೇಶದಲ್ಲಿ ಸ್ನಾನಗೃಹಗಳು, ಶೌಚಾಲಯ, ಬಟ್ಟೆ ಬದಲಿಸುವ ಕೋಣೆಗಳು, ವಾಹನ ನಿಲ್ದಾಣ, ಪರಗೋಲಗಳ ನಿರ್ಮಾಣ, ಇಂಟರ್ ಪ್ರಿಟೇಷನ್ ಸೆಂಟರ್, ಉಪಹಾರಗೃಹಗಳ ನಿರ್ಮಾಣ, ಬೋಟಿಂಗ್ ಸೌಲಭ್ಯ ಒದಗಿಸಲು ಫ್ಲಾಟ್ ಫಾರಂ ನಿರ್ಮಾಣ, ವಾಚ್ ಟವರ್ ನಿರ್ಮಾಣ ತಂತಿಬೇಲಿ ನಿರ್ಮಾಣ, ಪ್ರವಾಸಿ ಮಾರ್ಗದರ್ಶಿ ಫಲಕಗಳು ಹಾಗೂ ಟ್ರಕ್ಕಿಂಗ್ ಟ್ರಯಲ್ಸ್ ಅಭಿವೃದ್ಧಿಪಡಿಸಲು ರೂ.50.00ಲಕ್ಷಗಳನ್ನು 2008-09ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ

203 ಶ್ರೀ ಆರ್.ಧ್ರುವನಾರಾಯಣ್

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು

ಅ) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕು ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರಕ್ಕೆ ಬಂದಿದೆಯೇ?

ಕೊಳ್ಳೇಗಾಲದಲ್ಲಿನ ನ್ಯಾಯಾಲಯವು ತನ್ನ ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆದರೆ, ಯಳಂದೂರಿನ ನ್ಯಾಯಾಲಯವು ಮಿನಿವಿಧಾನಸೌಧದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ತನ್ನದೇ ಆದ ಕಟ್ಟಡ ಹೊಂದಿಲ್ಲ.

ಆ) ಹಾಗಿದ್ದಲ್ಲಿ, ಈ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಯಾವ ಕ್ರಮ ತೆಗೆದುಕೊಂಡಿದೆ.

ಹೆಚ್ಚುವರಿ ನ್ಯಾಯಾಲಯದ ಕಟ್ಟಡವನ್ನು ನಿರ್ಮಿಸಲು ರಿಜಿಸ್ಟ್ರಾರ್ ಜನರಲ್ ರವರು 2009-10ನೇ ಸಾಲಿನ ಅಪೆಂಡಿಕ್ಸ್-ಇನಲ್ಲಿ ಕಾಮಗಾರಿಗಳನ್ನು ಸೇರಿಸುವ ಪ್ರಸ್ತಾವನೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳ ಪರಿಶೀಲನೆ ನಡೆದಿದ್ದು, ನಿವೇಶನವನ್ನು ಗುರುತಿಸಿಲಾಗಿದೆಯೇ?

ಈ ಬಗ್ಗೆ ಜಿಲ್ಲಾ ಮತ್ತು ಸತ್ರನ್ಯಾಯಾದೀಶರು ಚಾಮರಾಜನಗರ ಇವರಿಂದ ವಿವರವಾದ ಪ್ರಸ್ತಾವನೆ ನಿರೀಕ್ಷಿಸಲಾಗಿದೆ ಎಂದು ರಿಜಿಸ್ಟ್ರಾರ್ ಜನರಲ್ ರವರು ತಿಳಿಸಿರುತ್ತಾರೆ.

ಈ) ಹಾಗಿದ್ದಲ್ಲಿ, ಈ ತಾಲ್ಲೂಕು ನ್ಯಾಯಾಲಯಗಳಿಗೆ ಎಲ್ಲಿ ನಿವೇಶನಗಳನ್ನು ಗುರುತಿಸಲಾಗಿದೆ?

ಯಳಂದೂರು ನ್ಯಾಯಾಲಯದ ಕಟ್ಟಡಕ್ಕಾಗಿ ಭೂಸ್ವಾಧೀನ ಕ್ರಮ ಪ್ರಗತಿಯಲ್ಲಿದೆ.

205 ಶ್ರೀ ಆರ್.ಧ್ರುವನಾರಾಯಣ್.

ಮಾನ್ಯ ಸಾರಿಗೆ ಸಚಿವರು.

ಅ) ಚಾಮರಾಜನಗರ ಜಿಲ್ಲೆಗೆ – ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಕಛೇರಿ ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ;

ಇಲ್ಲ.

ಆ) ಬಿಳಿಗಿರಿ ರಂಗನ ಬೆಟ್ಟದ ಬಸ್ ನಿಲ್ದಾಣಕ್ಕಾಗಿ ಜಾಗ ಲಭ್ಯವಿದ್ದರೂ ಬಸ್‌ನಿಲ್ದಾಣದ ನಿರ್ಮಾಣ ತಡವಾಗುತ್ತಿರುವುದಕ್ಕೆ ಕಾರಣಗಳೇನು;

ಬಿಳಿಗಿರಿರಂಗನ ಬೆಟ್ಟದಲ್ಲಿ ಬಸ್‌ನಿಲ್ದಾಣ ನಿರ್ಮಾಣಕ್ಕಾಗಿ ಕಂದಾಯ ಇಲಾಖೆಗೆ ಸೇರಿದ 24 ಗುಂಟೆ ನಿವೇಶನವನ್ನು ಗುರುತಿಸಲಾಗಿದ್ದು, ಸದರಿ ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ನಿವೇಶನವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಶಕ್ಕೆ ಬಂದ ನಂತರ ಬಸ್‌ನಿಲ್ದಾಣ ನಿರ್ಮಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಕೊಳ್ಳೇಗಾಲ ಹಾಗೂ ಯಳಂದೂರು ಪಟ್ಟಣಗಳಲ್ಲಿ ಬಸ್‌ನಿಲ್ದಾಣಗಳ ನಿರ್ಮಾಣಕ್ಕಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ;

ಕೊಳ್ಳೆಗಾಲ ಹಾಗೂ ಯಳಂದೂರು ಪಟ್ಟಣಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸೂಕ್ತ ನಿವೇಶನಕ್ಕಾಗಿ ಕಂದಾಯ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ. ಸೂಕ್ತ ನಿವೇಶನಗಳು ನಿಗಮದ ವಶಕ್ಕೆ ಬಂದ ನಂತರ ಬಸ್‌ನಿಲ್ದಾಣಗಳನ್ನು ನಿರ್ಮಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಬೆಂಗಳೂರು ಮತ್ತು ಮೈಸೂರಿನಿಂದ ಕೊಳ್ಳೇಗಾಲಕ್ಕೆ ರಾಜಹಂಸ ಬಸ್‌ಗಳು ಸಂಚರಿಸಲು ಸಂಸ್ಥೆಯು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತದೆ?

ಬೆಂಗಳೂರಿನಿಂದ ಹಾಗೂ ಮೈಸೂರಿನಿಂದ ಕೊಳ್ಳೇಗಾಲಕ್ಕೆ ರಾಜಹಂಸ ಸಾರಿಗೆಯನ್ನು ಒದಗಿಸಿಕೊಡುವಂತೆ ಸಾರ್ವಜನಿಕರಿಂದ ಬೇಡಿಕೆ ಬಂದಿರುವುದಿಲ್ಲ.

206 ಶ್ರೀ.ಧ್ರುವನಾರಾಯಣ.ಆರ್. (ಕೊಳ್ಳೇಗಾಲ)

ಮಾನ್ಯ ಲೋಕೋಪಯೋಗಿ ಸಚಿವರು

ಅ. ಲೆಕ್ಕ ಶೀರ್ಷಿಕೆ 5054 (ಅಪೆಂಡಿಕ್ಸ್–E) ರಲ್ಲಿ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ಹಾಗೂ ಕಟ್ಟಡಗಳ ನಿರ್ಮಾಣ ಕಾಮಗಾರಿಗಳಿಗಾಗಿ 2008–09ರಲ್ಲಿ ನಿಗದಿಪಡಿಸಲಾದ ಅನುದಾನವೆಷ್ಟು?

2008–09ನೇ ಸಾಲಿನಲ್ಲಿ ಲೆ.ಶೀ.5054–(ಯೋಜನೆ) (ಅಪೆಂಡಿಕ್ಸ್–ಇ) ಯಡಿ ರಸ್ತೆ ಮತ್ತು ಸೇತುವೆಗಳ ನಿರ್ಮಾಣ ಕಾಮಗಾರಿಗಳಿಗಾಗಿ ರೂ.55743.70ಲಕ್ಷಗಳು ಹಾಗೂ ಕಟ್ಟಡಗಳ ನಿರ್ಮಾಣ ಕಾಮಗಾರಿಗಳಿಗಾಗಿ ರೂ.45429.37ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು ವಿವರವನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಲು ಯಾವ ಮಾನದಂಡವನ್ನು ಅನುಸರಿಸಲಾಗುತ್ತಿದೆ (ವಿಧಾನ ಸಭಾ ಕ್ಷೇತ್ರವಾರು ವಿವರ ಒದಗಿಸುವುದು)

ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನಕ್ಕನುಗುಣವಾಗಿ ಮತ್ತು ಸಚಿವರು, ಶಾಸಕರು, ಸಂಸದರು ಹಾಗೂ ಇನ್ನಿತರ ಗಣ್ಯವ್ಯಕ್ತಿಗಳ ಶಿಫಾರಸ್ಸಿನ ಮೇರೆಗೆ ರಸ್ತೆಗಳ ಸ್ಥಿತಿಗತಿ, ಕಾಮಗಾರಿಗಳ ಅವಶ್ಯಕತೆ ಹಾಗೂ ಅಗತ್ಯತೆಯನ್ನಾಧರಿಸಿ ರಸ್ತೆ, ಸೇತುವೆ ಮತ್ತು ಕಟ್ಟಡ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಲಾಗುವುದು. (ವಿಧಾನ ಸಭಾ ಕ್ಷೇತ್ರವಾರು ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ)

ಇ ಡಾ:ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ ಅತಿ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನವನ್ನು ಹಂಚಿಕೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

2008–09ನೇ ಸಾಲಿನಲ್ಲಿ ಡಾ:ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ ಅತಿ ಹಿಂದುಳಿದ ತಾಲ್ಲೂಕುಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾವತಿಯಿಂದ ಕೈಗೆತ್ತಿಕೊಳ್ಳಲಾಗಿದೆ.

Page 1

ವಿಧಾನಸಭಾ ಸದಸ್ಯರಾದ ಶ್ರೀ ಧೃವನಾರಾಯಣ.ಆರ್. (ಕೊಳ್ಳೇಗಾಲ) ಚುಕ್ಕೆ ಗುರತಿಲ್ಲದ ಪ್ರಶ್ನೆ ಸಂಖ್ಯೆ:206ರ ಅನುಬಂಧ – 1

(ರೂ.ಲಕ್ಷಗಳಲ್ಲಿ)

ಮಂಗಳೂರು ವಿಮಾನ ನಿಲ್ದಾಣದ ವಿಸ್ತರಣೆ ಹಾಗೂ ಅಭಿವೃದ್ಧಿಗಾಗಿ 337,84,40 ಎಕರೆ ಪಟ್ಟಾ ಜಮೀನು ಮತ್ತು 23,86,10 ಎಕರೆ ಸರ್ಕಾರಿ ಜಮೀನನ್ನು ವಿಮಾನ ನಿಲ್ದಾಣಕ್ಕೆ ಹಸ್ತಾಂತರಿಸಲಾಗಿದೆ. 54.21 ಎಕರೆ ಜಮೀನಿಗೆ ಅವಾರ್ಡ್‌ನ್ನು ನೀಡುವುದು ಬಾಕಿ ಇದೆ.

ಆ) ಭೂ ಸ್ವಾಧೀನ ಪ್ರಕ್ರಿಯೆಯಿಂದ ಯಾವ ಯಾವ ರೈತರು ಎಷ್ಟು ಭೂಮಿಯನ್ನು ಕಳೆದುಕೊಳ್ಳಲಿದ್ದಾರೆ (ಸರ್ವೇವಾರು ಮಾಹಿತಿ ನೀಡುವುದು);

ಭೂಸ್ವಾಧೀನ ಪ್ರಕ್ರಿಯೆಯಿಂದ ಸುಮಾರು 20 ಜನ ರೈತರು ಭೂಮಿಯನ್ನು ಕಳೆದುಕೊಳ್ಳಲಿದ್ದಾರೆ. ಸರ್ವೇವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಇರಿಸಿದೆ.

ಇ) ಭೂ ಸ್ವಾಧೀನದಿಂದ ಭೂಮಿ ಕಳೆದುಕೊಂಡ ರೈತರಿಗೆ 1-00 ಎಕರೆಗೆ ಎಷ್ಟು ಹಣವನ್ನು ನೀಡಲಾಗುವುದು;

ಭೂಸ್ವಾಧೀನದಿಂದ ಭೂಮಿ ಕಳೆದುಕೊಂಡ ರೈತರಿಗೆ 1 ಎಕರೆಗೆ ರೂ.4.00 ಲಕ್ಷದಂತೆ ಮತ್ತು ಶೇಕಡ 30 ಸೊಲೇಶಿಯಂ ಸೇರಿದಂತೆ 1 ಎಕರೆಗೆ ರೂ. 5,20,000-00 ಗಳನ್ನು ನೀಡಲಾಗುವುದು. 4 (1) ರ ಅಧಿಸೂಚನೆಯ ದಿನಾಂಕದಿಂದ ಭೂಮಿಯನ್ನು ಭೌತಿಕವಾಗಿ ಸ್ವಾಧೀನಪಡೆಯುವ ದಿನಾಂಕದವರೆಗೆ ಭೂ ಮೌಲ್ಯದ ಮೇಲೆ ಶೇಕಡ 12 ರಷ್ಟು ಹೆಚ್ಚುವರಿ ಮಾರುಕಟ್ಟೆ ದರವನ್ನು ನೀಡಲಾಗುವುದು.

ಈ) ಸರ್ಕಾರ ನೀಡುತ್ತಿರುವ ಹಣ ಕಡಿಮೆಯಾಗಿಲ್ಲವೇ ಈ ವಿಮಾನ ನಿಲ್ದಾಣದ ಎಲ್ಲಾ ಪ್ರಕ್ರಿಯೆಯ

ಹಿಂದಿನ 3 ವರ್ಷಗಳ ಮಾರುಕಟ್ಟೆ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ಭೂ ಸ್ವಾಧೀನವಾದ ಜಮೀನಿನ ಮೌಲ್ಯವನ್ನು ನಿರ್ಧರಿಸಲಾಗುವುದು. ಅನುಮೋದನೆಗೆ ಬಾಕಿ ಇರುವ 54.21 ಎಕರೆ ಜಮೀನಿನ ಅವಾರ್ಡ್ ಅನುಮೋದನೆಯಾದ 2 ವಿಮಾನ ನಿಲ್ದಾಣದ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು.

O-1055-142

ಅನುಬಂಧ–1

54.21 ಎಕ್ರೆ ಭೂಸ್ವಾಧೀನತೆಯಲ್ಲಿ ಜಮೀನು ಕಳಕೊಳ್ಳಲಿರುವ ರೈತರ ವಿವರ

ಜಿಲ್ಲೆ: ದಕ್ಷಿಣ ಕನ್ನಡ ತಾಲ್ಲೂಕು: ಮಂಗಳೂರು ಹೋಬಳಿ: ಸೂರತ್ಕಲ್ ಗ್ರಾಮ: ಮಳವೂರು

ಕ್ರಮ ಸಂಖ್ಯೆ	ಖಾತೆದಾರರ: ಅನುಭವದಾರರ ಅಥವಾ ಗೇಣಿದಾರರ ಅಥವಾ ಹಿತಾಸಕ್ತಿ ಹೊಂದಿರುವ ಇತರ ವ್ಯಕ್ತಿಗಳ ಹೆಸರು	ಸರ್ವೆ ನಂಬರ್	ತರಹೆ	ಅಗತ್ಯವಾದ ಅಂದಾಜು ವಿಸ್ತೀರ್ಣ	ಕಂದಾಯ
1	2	3	4	5	6
1	ಆರ್.ಜೆ.ಆರ್.ನಜ್ರತ್, ಅಂಬ್ರೋಸ್ ಮಸ್ಕರೇಂಞಸ್, ಫೆಲಿಕ್ಸ್ ಮಸ್ಕರೇಂಞಸ್, ಜಾ.ಗೇ, ಮಾಸ್ವಲ್‌ಡಿ ಸೋಜಾ ಬಿನ್ ಬೌತಿಸ್ ರುಡ್ರಿಕ್ಸ್ ಬಿನ್ ದೋರ್ ರುಡ್ರಿಕ್ಸ್	20–3(ಅಂಶ)	ಖುಷ್ಕಿ	1.02	0.61
2	ಕೆ. ಮಂಡಪ್ಪ, ಆನಂದಿ	20–4(ಅಂಶ)	ಖುಷ್ಕಿ	1.84	1.47
3	ಆಂಜಲಿನ್ ಮೊಂತೆರೋ, ಸಿಸಿಲಿಯಾ ಮೊಂತೆರೋ, ರುಪಿನಾ ಮೋಂತೆರೋ, ಲಿಯೋ ಫ್ರಾನ್ಸಿಸ್ ಮೊಂತೆರೋ, ಡೊಲ್ಫಿನ್ ಮೊಂತೆರೋ, ಎ.ಜೆ.ಮೊಂತೆಗೋ ಫಾ: ಲಾರೆನ್ಸ್ ಎಫ್ ಮೊಂತೆರೋ ಡೆನಿಸ್ ಮೊಂತೆರೋ, ಮಾರ್ಗರೇಟ್ ಮೊಂತೆರೋ,	70–5(ಅಂಶ)	ಖುಷ್ಕಿ	0.70	0.56

	ವಿಕ್ಟರ್ ಮೊಂತೆರೂ, ಎವ್ವಲಿನ್ ಮೊಂತೆರೋ				
4	ಲೀನಾಡಿ ಕೋಸ್ತ, ಕೋಂ ಮಾರ್ಸೆಲ್ ಡಿ 'ಕೋಸ್ತ, ಎಸ್‌ಇ. ಪಿರೇರಾ	71-1(ಅಂಶ)	ಖುಷ್ಕಿ	1.84	1.47
5	ವಲೇರಿಯನ್ ಡಿ 'ಕೋಸ್ತ, ಬಿನ್ ಲೂವಿಸ್ ಡಿ' ಕೋಸ್ತ ಡೊಮಿನಿಕ್ ಡಿ ಸೋಜಾ, ಆಲಿಸ್ ಡಿ ಸೋಜಾ ಕ್ರಿಸ್ತೀನ್ ಮಾತಾಯಸ್, D/o ಮೆಗ್ದಲಿನ್ ಪಿರೇರಾ	71-2(ಅಂಶ)	ಖುಷ್ಕಿ	1.64	1.31
6	ಡೊಮಿನಿಕ್ ಡಿ 'ಸೋಜಾ, ಆಲಿಸ್ ಡಿ' ಸೋಜಾ, ಕ್ರಿಸ್ತನ್ ಮತಾಯಸ್, ವಲೇರಿಯನ್ ಡಿ 'ಕೋಸ್ತ ಬಿನ್ ಲೂವಿಸ್ ಡಿ ಕೋಸ್ತ ಎಸ್‌ಇಪಿರೇರಾ	71-3(ಅಂಶ)	ಖುಷ್ಕಿ	7.13	5.70
7	ತೋಮಸ್ ಮೌರಿಸ್ ಡಿಸೋಜಾ ಹಿತಾಸಕ್ತಿದಾರರು; ಪ್ರಿಯಾದ್ ವಲೇರಿಯನ್ ಡಿ ಸೋಜಾ	71-6(ಅಂಶ)	ಖುಷ್ಕಿ	0.28	0.22
8	ಶಕುಂತಲ ಭಟ್ಟ ರವಿಭಟ್ಟ ವಿದ್ಯಾ ಭಟ್ಟ, ಸುಧಾಕುಕ್ಕಿಲ್ಲಾಯ, ವಿದ್ಯಾಮೂರ್ತಿ ಶ್ರೀಮತಿ ಭಟ್ಟ, ಬಿನ್ ಕೃಷ್ಣ ಭಟ್ಟ	72-1(ಅಂಶ)	ಖುಷ್ಕಿ	2.24	1.79
9	ಅನಂತ ಕೃಷ್ಣ ಭಟ್ಟ, ಬಿನ್ ಗೋಪಾಲ ಕೃಷ್ಣ ಭಟ್ಟ	72-2	ಖುಷಿ	3.20	2.56

10	ಹ್ಯೂಬರ್ಟ್‌ಡಿ 'ಕೋಸ್ತ ಲೈಲಾಡಿ' ಕೋಸ್ತ, ಬಬಿತಾಡಿ 'ಕೋಸ್ತ, ರಶ್ಮಿತಡಿ' ಕೋಸ್ತ, ಲುವಿಜಡಿ 'ಕೋಸ್ತ, ಕ್ರಿಸ್ಮಿತಾಡಿ 'ಕೋಸ್ತ, ಪಾವುಲ್ ಡಿ ಕೋಸ್ತ, ರೋಬರ್ಟ್‌ಡಿ ಕೋಸ್ತ, ಲಿನೆಟ್ ಪಿಂಟೂ, ಜಾನೆಟ್ ಸಿಕ್ವೇರ, ಜ್ಯೂಲಿಯೆಟ್ ಟೇಕ್ನಾಥ್ ಎಡ್ವರ್ಡ್ ಡಿ ಕೋಸ್ತ	73	ಖುಷಿ	1.86	1.49
11	ಫೆಲಿಕ್ಸ್ ಮಸರೇಂಇನ್, ಅಪೋಲಿಯನಾ ಡಿ ಕೋಸ್ತ, ಆರ್.ಜೆ.ಆರ್, ನಜರತ್	114–1(ಅಂಶ)	ಖುಷ್ಕಿ	14.30	8.58
12	ಸುಪ್ರಿತಾ ಶೆಟ್ಟಿ, ಕ್ಲೋಡಿಯಸ್ ಮರ್ವಿನ್ ಫೆರ್ನಾಂಡಿಸ್, ಇಗ್ನೇಶಿಯಸ್ ಮತಾಯಸ್, ಗ್ರೇಶನ್ ವಿಲ್ಪ್ರೇಡ್ ಮತಾಯಸ್, ಡೋಲ್ಫಿ ರೋಶನ್ ಮತಾಯಸ್ ಆರ್.ಜೆ.ಆರ್.ಜನರತ್	129–1ಇ(ಅಂಶ)	ಖುಷ್ಕಿ	2.25	1.35
13	ಸೆಲಿನ್ ಡಿ ಸೋಜ ಪಾವುಲ್ ಪಿಂಟೊ	129–1ಬಿ(ಅಂಶ)	ಖುಷ್ಕಿ	1.95	1.17
14	ಆರ್.ಜೆ.ಆರ್.ನಜರತ್	129–1ಸಿ(ಅಂಶ)	ಖುಷ್ಕಿ	8.31	4.99
15	ಸೆಲಿನ್ ಡಿ ಸೋಜ, ಪಾವುಲ್ ಪಿಂಟೊ, ಕೆ.ಅಜಿತ್ ಕುಮಾರ್ ರೈ, ಕ್ಲೋಡಿಯಸ್ ಮೌರ್ನಿನ್ ಫೆರ್ನಾಂಡೀಸ್, ಹಿತಾಸಕ್ತಿ ದಾರರು ಬಜೆ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್	151–2ಬಿ(ಅಂಶ)	ಖುಷ್ಕಿ	1.35	0.81

16	ಆರ್.ಜೆ.ಆರ್..ನಜರತ್, ಹಿತಾಸಕ್ತಿದಾರರು: ದುಲ್ಸಿನ್ ಮತಾಯಸ್, ಲೋರೆನ್ಸ್ ಮತಾಯಸ್, ಸಿಸಿಲ್ ಮತಾಯಸ್	151–2(ಅಂಶ)	ಖುಷ್ಕಿ	0.15	0.09
17	ರೋಬರ್ಟ್ ಡಿ ಕೋಸ್ತ, ವೆಂಕಟ ಕೃಷ್ಣ ಭಟ್ಟ	152–1(ಅಂಶ)	ಖುಷ್ಕಿ	0.06	0.04
18	ಹ್ಯೂಬರ್ಟ್ ಡಿ ಕೋಸ್ತ ಲೈಲಾಡಿ ಕೋಸ್ತ, ಬಬಿತಾಡಿ ಕೋಸ್ತ, ರಶ್ಮಿತ ಡಿ ಕೋಸ್ತ, ಲುವಿಜ ಡಿ ಕೋಸ್ತ ಕ್ರಿಸ್ಮಿತಾಡಿ ಕೋಸ್ತ, ಪಾವುಲ್ ಡಿ ಕೋಸ್ತ, ರೋಬರ್ಟ್ ಡಿ ಕೋಸ್ತ, ಲೆಷೆಟ್ ಪಿಂಟೊ, ಜಾನೆಟ್ ಸಿಕ್ವೇರ, ಜ್ಯೂಲಿಯೆಟ್ ಟೇಕ್ಸಥ್ ಎಡ್ವರ್ಡ್ ಡಿ ,ಕೋಸ್ತ	152–2(ಅಂಶ)	ಖುಷ್ಕಿ	0.68	0.41
19	ಲಿಲ್ಲಿ ಡಿ ಕೋಸ್ತ, ಕ್ಲರೆನ್ಸ್ ಪಿರೇರಾ, ಓಸ್ವಾಲ್ಡ್ ಎಲ್ ಪಿರೇರಾತೋಮಸ್ ಡಿ ಕೋಸ್ತ, ಫಿಲೋಮಿನಾಡಿ ಸೋಜ, ಜುಲಿಯಾನ ಸಲ್ಡಾನ್ಹ	152–3ಎ(ಅಂಶ)	ಖುಷ್ಕಿ	1.27	0.76
20	ಅನಂತ ಕೃಷ್ಣ ಭಟ್ಟ, ಕಮಲಾಕ್ಷಿ ಭಟ್ಟ, ರಮೇಶ ಭಟ್ಟ, ಶೈಲೇಶ್ ಭಟ್ಟ	152–3 ಬಿ	ಖುಷ್ಕಿ	3.74	2.25
	ಜುಮ್ಲಾ			54.21	36.30

246 ಶ್ರೀ ಖಾದರ್ ಯು.ಟಿ.(ಮಂಗಳೂರು)

ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೀನುಗಾರಿಕಾ ಕುಟುಂಬಗಳ ಸಂಖ್ಯೆ ಎಷ್ಟು; ಇವರುಗಳಲ್ಲಿ ವಸತಿರಹಿತ ಮತ್ತು ನಿವೇಶನರಹಿತ ಕುಟುಂಬಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಮೀನುಗಾರಿಕೆ ಕುಟುಂಬಗಳಿಗೆ ಸಂಬಂಧಿಸಿದಂತೆ ಜನಗಣತಿಯನ್ನು ಮೀನುಗಾರಿಕೆ ಇಲಾಖೆಯಿಂದ ಕೈಗೊಂಡಿರುವುದಿಲ್ಲ. ಕಡಲ ಮೀನುಗಾರಿಕೆಗೆ ಸಂಬಂಧಿಸಿದಂತೆ ಕೇಂದ್ರೀಯ ಸಾಗರ ಸಂಶೋಧನಾ ಸಂಸ್ಥೆ (C.M.F.R.I) ಇವರು 2005 ರಲ್ಲಿ ಕಡಲ ಮೀನುಗಾರಿಕೆ ಜನಗಣತಿಯನ್ನು ಕೈಗೊಂಡಿದ್ದು ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೀನುಗಾರಿಕಾ ಕುಟುಂಬಗಳ ಸಂಖ್ಯೆ, ವಸತಿ ರಹಿತ ಕುಟುಂಬಗಳ ಸಂಖ್ಯೆ ಇವುಗಳನ್ನು ಅಂದಾಜಿಸಿ ತಾಲ್ಲೂಕುವಾರು ವಿವರಗಳನ್ನು, ಈ ಕೆಳಗೆ ನೀಡಲಾಗಿದೆ. ಜಿಲ್ಲೆಯ ಒಳನಾಡು ತಾಲ್ಲೂಕುಗಳಾದ ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ಪೂರ್ಣಾವಧಿ ವೃತ್ತಿನಿರತ ಮೀನುಗಾರರು ಇರುವುದಿಲ್ಲ. ಆದರೆ, ಮೀನು ಮಾರಾಟ ಹಾಗೂ ನದಿ ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳಿದ್ದು ಅವರು ತಾಲ್ಲೂಕಿನಾದ್ಯಂತ ಅಲ್ಲಲ್ಲಿ ಹರಡಿಕೊಂಡು ವಾಸಿಸುತ್ತಿದ್ದಾರೆ. ತಾಲ್ಲೂಕುವಾರು ಕುಟುಂಬಗಳ ಮಾಹಿತಿ ಕೆಳಕಂಡಂತಿದೆ.

ಕ್ರ ಸಂ	ತಾಲ್ಲೂಕು	ಮೀನುಗಾರಿಕಾ ಕುಟುಂಬಗಳು	ವಸತಿ ರಹಿತ ಕುಟುಬಂಗಳು	ನಿವೇಶನ ರಹಿತ ಕುಟುಂಬಗಳು
1)	ಮಂಗಳೂರು	3883	106	90
2)	ಬಂಟ್ವಾಳ	52	25	18
3)	ಬೆಳ್ತಂಗಡಿ	48	26	10
4)	ಪುತ್ತೂರು	65	28	15
5)	ಸುಳ್ಯ	43	18	12
ಒಟ್ಟು		4041	203	145

ಆ) ಈ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಮನೆಗಳನ್ನು ನಿರ್ಮಿಸಿಕೊಡಲು ಹಣವನ್ನು ಮೀಸಲಿರಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಹಣವನ್ನು ಮೀಸಲಿರಿಸಿಲ್ಲ. ಆದರೆ ಮತ್ಸ್ಯಾಶ್ರಯ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1992 ರಿಂದ ಈವರೆವಿಗೆ 691 ಮನೆಗಳನ್ನು ಹೆಂಚಿಕೆ ಮಾಡಲಾಗಿದೆ. ಅವುಗಳಲ್ಲಿ 326 ಮನೆಗಳಿಗೆ ತಲಾ ರೂ. 30,000–00ದಂತೆ ಹಾಗೂ 356 ಮನೆಗಳಿಗೆ ತಲಾ ರೂ.40,000–00 ಹಣ ಮಂಜೂರಾಗಿದ್ದು 2006–07ನೇ ಸಾಲಿನವರೆಗಿನ ಒಟ್ಟು 516 ಮನೆಗಳಿಗೆ ಒಟ್ಟು ರೂ.173.80 ಲಕ್ಷ ಹಣವನ್ನು ವಿತರಿಸಲಾಗಿದೆ. 2007–08ನೇ ಸಾಲಿನಲ್ಲಿ 175 ಮನೆಗಳಿಗೆ ಪ್ರಥಮ ಕಂತು ರೂ.17.50 ಲಕ್ಷ ಹಣ ಬಿಡುಗಡೆ ಮಾಡಲಾಗಿದ್ದು, ಉಳಿದ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

248 ಶ್ರೀ ಖಾದರ್ ಯು.ಟಿ.

ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಶಾಸಕರಿಂದಪ್ರಸ್ತಾವನೆಗಳನ್ನು ಪಡೆದಿದ್ದು, ಇದುವರೆವಿಗೂ ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸ್ಥಳೀಯ ಅಗತ್ಯತೆಗಳನ್ನು ಗಮನದಲ್ಲಿಟ್ಟು ಕೊಂಡು ಕ್ಷೇತ್ರದ ಶಾಸಕರು ಹಾಗೂ ಸಂಬಂಧ ಪಟ್ಟ ಕಾರ್ಯಪಾಲಕ ಇಂಜಿನಿಯರ್ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಗಣಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಆ) ಬಂದಿದ್ದಲ್ಲಿ, ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಿಗದಿತ ಸಮಯದಲ್ಲಿ ಹಣವನ್ನು ಬಿಡುಗಡೆಗೊಳಿಸಿ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದೇ?

ಆಯವ್ಯಯದಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ರಸ್ತೆಗಳ ಅಭಿವೃದ್ಧಿಗೆ ಒದಗಿಸಲಾಗಿರುವ ಅನುದಾನವನ್ನು ನಿಗದಿತ ಸಮಯದಲ್ಲಿ ಸಮರ್ಪಕವಾಗಿ ಬಳಸಲು ಕ್ರಮ ಜರುಗಿಸಲಾಗುತ್ತಿದೆ.

ಯಾತ್ರಿನಿವಾಸ ನಿರ್ಮಾಣ

250 ಶ್ರೀ ಗೋಪಾಲ ಭಂಡಾರಿ.ಹೆಚ್ (ಕಾರ್ಕಳ)

ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಕರಾವಳಿಯ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿನ ಪ್ರವಾಸೀ ತಾಣಗಳು ಯಾವುವು; ಅಲ್ಲಿರುವ ಸೌಲಭ್ಯಗಳೇನು;

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು:- ಸೂರತ್ಕಲ್, ಪಣಂಬೂರ್, ಉಲ್ಲಾಳ ಸೋಮೇಶ್ವರ, ಕಟೀಲು ಧರ್ಮಸ್ಥಳ, ವೇಣೂರು ಸುಬ್ರಹ್ಮಣ್ಯ, ಬೇಂದ್ರತೀರ್ಥ ಶಿರಾಡಿ, ಉಪ್ಪಿನಂಗಡಿ,

ಪಣಂಬೂರು, ಸೋಮೇಶ್ವರ, ಉಲ್ಲಾಳ, ಕಟೀಲು, ಸುಬ್ರಹ್ಮಣ್ಯಗಳ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು:- ಉಡುಪಿ, ಮಲ್ಪೆ, ಸೆಂಟ್ ಮೇರಿ ದ್ವೀಪ, ಕಾಪು, ಕಾರ್ಕಳ, ಮೂಡುಬಿದ್ರೆ, ಕುಂದಾಪುರ, ಮರವಂತೆ, ಕೊಲ್ಲೂರು.

ಉಡುಪಿಯಲ್ಲಿ ಯಾತ್ರಿನಿವಾಸ ನಿರ್ಮಿಸಲಾಗಿದೆ. ಕಾರ್ಕಳ, ಮೂಡುಬಿದರಿ, ಕೊಲ್ಲೂರು ಕಾಪುಗಳ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ.

ಮಲ್ಪೆ ಮತ್ತು ಮರವಂತೆ ಕಡಲ ತೀರಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲಾಗಿದ್ದು, ಸಧ್ಯದಲ್ಲಿ ಅವು ದುರಸ್ಥಿಯಲ್ಲಿವೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳು:- ಕಾರವಾರ, ಕೋರ್ಮಗಡ, ಅಂಜದೀವ್ ದ್ವೀಪ, ದೇವಗಡ, ಉಳವಿ, ರಾಮನಗರ, ಕ್ಯಾಸಲ್ ರಾಕ್, ಮಾಗೋಡು ಜಲಪಾತ, ಲಾಲಗುಲಿ ಜಲಪಾತ, ಹಳಿಯಾಳ, ದಾಂಡೇಲಿ, ಸಿದ್ದಾಪುರ, ಉಂಚಳ್ಳಿ ಜಲಪಾತ, ಸಿರಸಿ, ಸೋಂದಾ, ಬನವಾಸಿ, ಗೋಕರ್ಣ, ಯಾಣ, ಧಾರೇಶ್ವರ, ಅಂಕೋಲ, ಮುರುಡೇಶ್ವರ, ಬಸವರಾದುರ್ಗ, ಇಡಗುಂಜಿ,

ಕಾರವಾರದ ಟ್ಯಾಗೋರ್ ಬೀಚನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗಿದೆ. ಸಿರಿಸಿ, ಸೋಂದಾ, ಬನವಾಸಿ, ಗೋಕರ್ಣ, ಓಂ ಬೀಚ್‌ಗಳ ಬಳಿ ಬಸತಿ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.

ಅನ್ಮೋಡ್ ಮತ್ತು ರಾಮನಗರಗಳ ಬಳಿ ಹೆದ್ದಾರಿ ಸೌಲಭ್ಯಗಳನ್ನು ನಿರ್ಮಿಸಲಾಗಿದೆ. ಇತರೆ 20 ಪ್ರವಾಸಿ ತಾಣಗಳಲ್ಲಿ ಸೂಕ್ತ ಪ್ರವಾಸಿ ಸೌಲಭ್ಯ ಕಲ್ಪಿಸಲು ಅನುದಾನವನ್ನು ಜಿಲ್ಲಾಧಿಕಾರಿಗಳು, ಉತ್ತರಕನ್ನಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿದೆ.

ಆ) ಕಾರ್ಕಳ ಜೈನ ಧರ್ಮದ ಅನೇಕ ಪ್ರವಾಸಿ, ತಾಣಗಳ ಕೇಂದ್ರವಾಗಿದ್ದು ಇಲ್ಲಿ ಬಾಹುಬಲಿ ಮೂರ್ತಿಯನ್ನು ನೋಡಲು ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದು, ಒಂದು ಯಾತ್ರಿನಿವಾಸದ ಪ್ರಸ್ತಾವನೆ ಇದ್ದು, ಅದು ಯಾವ ಹಂತದಲ್ಲಿದೆ/

ಕಾರ್ಕಳದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲು ಕ್ರಮಕೈಗೊಂಡಿದೆ. ಜಿಲ್ಲಾಡಳಿತವು ಈ ಯೋಜನೆಯನ್ನು ಹೌಸಿಂಗ್ ಬೋರ್ಡಿಗೆ ವಹಿಸಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿಯನ್ನು ಆರಂಭಿಸಲಾಗಿದೆ. **construction of**

ಇ) ಈ ಯಾತ್ರಿ ನಿವಾಸವನ್ನು ನಿರ್ಮಿಸಲು ಬೇಕಾಗುವ ಮೊತ್ತವೆಷ್ಟು ಮತ್ತು ಯಾವಾಗ ನಿರ್ಮಿಸಲಾಗುವುದು?

ಕಾರ್ಕಳದಲ್ಲಿ ರೂ.93.00 ಲಕ್ಷಗಳ ವೆಚ್ಚದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲಾಗುತ್ತಿದೆ. ಕಾಮಗಾಗಿ ಪ್ರಗತಿಯಲ್ಲಿದೆ.

252 ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ)
ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು.

ಅ ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವ ರೀತಿಯಲ್ಲಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು?

– ಬಂದಿದೆ –

ವ್ಯವಸ್ಥಿತವಾಗಿಕಾರ್ಯನಿರ್ವಹಿಸಲು ಒಳಚರಂಡಿ ಯೋಜನೆಯನ್ನು ಪುನರ್ ನಿರ್ಮಾಣ ಮಾಡಲು ಸರ್ವೆ ಕಾರ್ಯಗಳನ್ನು ಸ್ಥಳೀಯ ಸಂಸ್ಥೆಯು ಕೈಗೆತ್ತಿಕೊಂಡಿದೆ.

ಆ ಈ ಒಳಚರಂಡಿ ಯೋಜನೆಯಿಂದ ಎಷ್ಟು ಬಾವಿಗಳು ಕೆಟ್ಟು ಹೋಗಿವೆ; ಹೊಸ ವಿನ್ಯಾಸದೊಂದಿಗೆ ಒಳಚರಂಡಿಯನ್ನು ಮತ್ತು ಟ್ರೀಟ್‌ಮೆಂಟ್ ಪ್ಲಾಂಟನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಇದಕ್ಕೆ ತಗಲುವ ಹಣವೆಷ್ಟು?

ಒಳಚರಂಡಿ ಯೋಜನೆಯ ತೊಂದರೆಯಿಂದಾಗಿ ಪುರಸಭಾ ವ್ಯಾಪ್ತಿಯಲ್ಲಿ ಎರಡು ಬಾವಿಗಳು ಕೆಟ್ಟು ಹೋಗಿವೆ.

ಕಾರ್ಕಳ ಎರಡನೇ ಹಂತದ ಒಳಚರಂಡಿ ಯೋಜನೆಗೆ ಸರ್ವೆ ಕಾರ್ಯಕೈಗೊಂಡು ಅಂದಾಜು ಪಟ್ಟಿ ತಯಾರಿಸಲಾಗುವುದು. ಈ ಯೋಜನೆಗೆ ರೇಖಾ ಅಂದಾಜಿನಂತೆ ಸುಮಾರು ರೂ. 20.00 ಕೋಟಿಗಳ ಹಣ ಅಗತ್ಯವಿದೆಯೆಂದು ಅಂದಾಜಿಸಲಾಗಿದೆ.

ಇ ಕಾರ್ಕಳ ನಗರ ನೀರು ಸರಬರಾಜು ಯೋಜನೆಯ ನೀರಿನ ಟ್ಯಾಂಕ್ ಬಿದ್ದುಹೋಗಿದ್ದು, ಅದನ್ನು ಹೊಸದಾಗಿ ನಿರ್ಮಿಸುವ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗುವುದೇ?

10 ಲಕ್ಷ ಲೀಟರ್ ಸಾಮರ್ಥ್ಯದ ಒಂದು ಹೊಸ ಮೇಲ್ಮಟ್ಟದ ಜಲ ಸಂಗ್ರಹಾಗಾರವನ್ನು ಕಾರ್ಕಳ ಪುರಸಭಾ ಠೇವಣಿ ಕೊಡಿಗೆ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಸದರಿ ಕಾಮಗಾರಿಗೆ ರೂ.113.50 ಲಕ್ಷಗಳನ್ನು ಪುರಸಭೆಯು ಮಂಡಳಿಗೆ ಸಂದಾಯ ಮಾಡಿರುತ್ತದೆ.

254 ಶ್ರೀ ಅಪ್ಪಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ.
ಮಾನ್ಯ ಲೋಕೋಪಯೋಗಿ ಸಚಿವರು.

ಅ. ರಾಷ್ಟ್ರೀಯ ಹೆದ್ದಾರಿ–13ರಲ್ಲಿ ಚಿತ್ರದುರ್ಗದಿಂದ ಸೊಲ್ಲಾಪುರದವರೆಗೆ ಪ್ರತಿನಿತ್ಯ ಸಾವಿರಾರು ಅಂತರ ರಾಜ್ಯ ಬಸ್ಸುಗಳು ಹಾಗೂ ಭಾರೀ ಸರಕು ಸಾಗಾಣಿಕೆ ವಾಹನಗಳು ಸಂಚರಿಸುತ್ತಿದ್ದು, ಸುಗಮ ಸಂಚಾರಕ್ಕೆ ವ್ಯತ್ಯಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ರಾಷ್ಟ್ರೀಯ ಹೆದ್ದಾರಿ–13 ಚಿತ್ರದುರ್ಗದಿಂದ ಮಹಾರಾಷ್ಟ್ರ ಕರ್ನಾಟಕ ಗಡಿಯವರೆಗೆ ಈ ವಲಯದ ವ್ಯಾಪ್ತಿಯಾಗಿದ್ದು, ಸದರಿ ಭಾಗದ ರಸ್ತೆಯು ದ್ವಿಪಥ ರಸ್ತೆಯಾಗಿದ್ದು ಪ್ರತಿನಿತ್ಯ ಸಾವಿರಾರು ಅಂತರರಾಜ್ಯ ಬಸ್‌ಗಳು ಹಾಗೂ ಭಾರಿ ಸರಕು ಸಾಗಾಣಿಕೆ ವಾಹನಗಳು ಸಂಚರಿಸುತ್ತಿದ್ದು, ರಸ್ತೆ ಅಗಲ ಕಿರಿದಾಗಿರುವುದರಿಂದ ಸುಗಮ ಸಂಚಾರಕ್ಕೆ ವ್ಯತ್ಯಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಹಾಗಿದ್ದಲ್ಲಿ, ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಚತುಷ್ಪಥ ರಸ್ತೆ ನಿರ್ಮಿಸುವ ಯೋಜನೆ ಸರ್ಕಾರಕ್ಕಿದೆಯೇ:

–ಹೌದು–

ಕೇಂದ್ರ ಭೂಸಾರಿಗೆ ಮಂತ್ರಾಲಯ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಚಿತ್ರದುರ್ಗದಿಂದ ಮಹಾರಾಷ್ಟ್ರ–ಕರ್ನಾಟಕ ಗಡಿಯವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡುವ ಯೋಜನೆಯನ್ನು ಹಾಕಿಕೊಂಡಿದೆ.

ಇ ಈ ಯೋಜನೆಯ ಯಾವ ಮಾದರಿಯಲ್ಲಿರುತ್ತದೆ; ಯೋಜನಾ ವರದಿ ತಯಾರಿಸಲಾಗಿದೆಯೇ; ಯೋಜನಾ ವರದಿ ಯಾವ ಹಂತದಲ್ಲಿದೆ;

ಕೇಂದ್ರ ಭೂಸಾರಿಗೆ ಮಂತ್ರಾಲಯ ಮತ್ತು **NHAI** ವ್ಯಾಪ್ತಿಗೆ ಬರುತ್ತದೆ. ಭೂಸಾರಿಗೆ ಮಂತ್ರಾಲಯದವರು ಈ ರಸ್ತೆ ನಿರ್ಮಾಣ ಕಾರ್ಯವನ್ನು **DBFO** ಮಾದರಿಯಲ್ಲಿ ತೆಗದುಕೊಳ್ಳುವ ನಿಟ್ಟಿನಲ್ಲಿ ಸಮಾಲೋಚಿಸುತ್ತಿದ್ದಾರೆ.

ಈ ಈ ಯೋಜನೆ ಅಂದಾಜು ವೆಚ್ಚ ಎಷ್ಟು?

ಯೋಜನಾ ಹಂತದಲ್ಲಿದ್ದು ಮಾಹಿತಿಗಳು ಇನ್ನೂ ಲಭ್ಯವಿರುವುದಿಲ್ಲ.

ಉ. ಈ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಯೋಜನಾ ಹಂತದಲ್ಲಿದ್ದು ಮಾಹಿತಿಗಳು ಇನ್ನೂ ಲಭ್ಯವಿರುವುದಿಲ್ಲ.

255 ಶ್ರೀ ಅಪ್ಪಾ ಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ. (ಬಿಜಾಪುರ ನಗರ)
ಮಾನ್ಯ ಮುಖ್ಯಮಂತ್ರಿಗಳು.

ಅ) ಐತಿಹಾಸಿಕ ಸ್ಮಾರಕಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ (UNESCO) ಸೇರಿಸಲು ಯಾವ ಯಾವ ಅರ್ಹತೆಗಳನ್ನು ಹೊಂದಿರಬೇಕು.

ಒಂದು ಪ್ರದೇಶದ ಸಾಂಸ್ಕೃತಿಕ ಸಂಪತ್ತಿನ ಪುರಾತನ ಅವಶೇಷಗಳ ವಾಸ್ತುಶಿಲ್ಪ, ಶಿಲ್ಪ, ವರ್ಣಚಿತ್ರಗಳ/ಭಿತ್ತಿ ಚಿತ್ರಗಳು ಕೋಟೆ ಕಮದಕಗಳು, ನಗರ ಯೋಜನೆ ರಕ್ಷಣಾವ್ಯೂಹ. ಧಾರ್ಮಿಕ ಕಟ್ಟಡಗಳು, ದಂಡು ಮತ್ತಿತರ ಅವಶೇಷಗಳು ಬಹು ವಿಸ್ತಾರವಾಗಿಯೂ ಅಭೂತಪೂರ್ವಕವಾಗಿಯೂ ಇದ್ದು. ವಿಶ್ವದ ಇತಿಹಾಸದಲ್ಲಿ ಇದಕ್ಕೆ ಒಂದು ಮಹತ್ವದ ಹಾಗೂ ಶಾಶ್ವತ ಸ್ಥಾನವಿರಬೇಕು. ಇಂತಹ ಸ್ಮಾರಕಗಳು/ ಪ್ರದೇಶಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನ ಪಡೆಯಲು ಅರ್ಹತೆ ಪಡೆದಿರುತ್ತವೆ.

ಆ) ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳು (UNESCO) ಪಟ್ಟಿಯಲ್ಲಿ ಸೇರಿಸಲು ಅರ್ಹತೆಯನ್ನು ಹೊಂದಿವೆ.

ಕರ್ನಾಟಕ ರಾಜ್ಯದ ಈ ಕೆಳಕಂಡ ಪ್ರದೇಶಗಳಲ್ಲಿನ ಸ್ಮಾರಕಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಹೊಂದಲು ಅರ್ಹತೆ ಪಡೆದಿವೆ.

1. ಬೇಲೂರು ಹಳೇಬೀಡು ಸೋಮನಾಥಪುರ, ಶ್ರವಣ ಬೆಳಗೋಳ ಅರ್ಹತೆ ಪಡೆದಿವೆ.
2. ಬೃಹತ್ ಶಿಲಾ ಸಮಾಧಿ ರಚನೆಗಳ ಸಂಕೀರ್ಣ (ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಹಿರೇಬೆಣಕಲ್‌ನಲ್ಲಿರುವ ಒಂದು ಇತಿಹಾಸಪೂರ್ವ ನಿವೇಶನ)
3. ಲಕ್ಕುಂಡಿ ಮತ್ತು ಡಂಬಳದಲ್ಲಿರುವ (ಗದಗ್ ಜಿಲ್ಲೆ) ತರುವಾಯ ಚಾಲುಕ್ಯ ವಾಸ್ತು ಶಿಲ್ಪ
4. ಗುಲ್ಬರ್ಗಾ ಇಂಡೋ-ಇಸ್ಲಾಮಿಕ್ ವಾಸ್ತು ಶಿಲ್ಪ
5. ಬೀದರ್‌ನಲ್ಲಿನ ಇಂಡೋ-ಇಸ್ಲಾಮಿಕ್ ಸ್ಪಷ್ಟ ವಾಸ್ತು ಶಿಲ್ಪ
6. ಬಿಜಾಪುರದಲ್ಲಿನ ಇಂಡೋ-ಇಸ್ಲಾಮಿಕ್ ಸ್ಪಷ್ಟ ವಾಸ್ತು ಶಿಲ್ಪ

ಇ) ಬಿಜಾಪುರದಲ್ಲಿರುವ ವಿಶ್ವವಿಖ್ಯಾತ ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಸಕಾರ ಕ್ರಮ ಕೈಗೊಂಡಿದೆಯೇ?

ಹೌದು ಕ್ರಮ ಕೈಗೊಂಡಿದೆ.

ಈ) ಹಾಗಾದರೆ ಕೈಗೊಂಡ ಕ್ರಮಗಳೇನು;

ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿ ಮಹಾನಿರ್ದೇಶಕರು. ಭಾರತೀಯ ಪುರಾತತ್ವ ಸರ್ವೇಕ್ಷಣ. ನವದೆಹಲಿ ಇವರಿಗೆ ದಿನಾಂಕ 16.02.02008ರಂದು ಪತ್ರ ಬರೆಯಲಾಗಿದೆ.

ಉ) ಗೋಲಗುಮ್ಮಟ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಬಿಜಾಪುರ ನಗರದಲ್ಲಿರುವ ಗೋಲಗುಂಬಜವನ್ನು ನೋಡಲು ಬರುವ ಸಂದರ್ಶಕರಿಗಾಗಿ ಕೆಲವು ಸಾರ್ವಜನಿಕೆ ಸೌಕರ್ಯಗಳನ್ನು ಒದಗಿಸಿದೆ. ಉದಾಹರಣೆಗೆ ಕುಡಿಯುವ ನೀರು, ಶೌಚಾಲಯ ವಿಭಾಗ, ಕ್ಯಾಂಟೀನ್ ವಾಹನಗಳ ಪಾರ್ಕಿಂಗ್, ಸ್ಮಾರಕಕ್ಕೆ ಸೇರಿದ ಸೌಂದರ್ಯಯುತವಾದ ಉದ್ಯಾನವನದಲ್ಲಿ ಸಂದರ್ಶಕರಿಗಾಗಿ ಬೆಂಚುಗಳು, ಅಂಗವಿಕಲರಿಗೆ ವೀಲ್‌ಚೇರ್ ಪ್ರಕಟಣೆಗಳ ಮಾರಾಟ ಕೌಂಟರ್, ಗೈಟ್ ಸೌಕರ್ಯ, ನಿರ್ದೇಶನ ಮತ್ತು ಹೆಸರು ಫಲಕಗಳು, ಉತ್ತಮ ಮಟ್ಟದ ಆಕರ್ಷಣೀಯ ಹುಲ್ಲುಹಾಸು ಮುಂತಾದವುಗಳು,

256 ಶ್ರೀ ಅಪ್ಪಾ ಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ. (ಬಿಜಾಪುರ ನಗರ)
ಮಾನ್ಯ ಮುಖ್ಯಮಂತ್ರಿಗಳು.

ಅ) ಬಿಜಾಪುರದಲ್ಲಿರುವ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳನ್ನು ಅತಿಕ್ರಮಕಾರರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗಮನಕ್ಕೆ ಬಂದಿದೆ.

ಆ) ಎಷ್ಟು ಪ್ರದೇಶವನ್ನು: ಎಷ್ಟು ವರ್ಷಗಳಿಂದ ಅತಿಕ್ರಮಿಸಿದ್ದಾರೆ; ಅತಿಕ್ರಮಣಕಾರರು ಯಾರು ಯಾರು;

ಭಾರತೀಯ ಪುರಾತತ್ವ ಸರ್ವೇಕ್ಷಣ ಧಾರವಾಡ ವಲಯದ ರಕ್ಷಣಾ ವ್ಯಾಪ್ತಿಯಲ್ಲಿನ ಬಿಜಾಪುರದಲ್ಲಿನ 63 ರಾಷ್ಟ್ರೀಯ ಸಂರಕ್ಷಿತ ಸ್ಮಾರಕಗಳ ಪ್ರದೇಶಗಳು ವಿವಿಧ ಬಗೆಯ ಅತಿಕ್ರಮಣಕ್ಕೆ ಬಹಳ ವರ್ಷಗಳಿಂದ ಒಳಗಾಗಿವೆ. ಅತಿಕ್ರಮಣಕಾರರ ಪಟ್ಟಿಯನ್ನು ಲಗತ್ತಿಸಿದೆ.

ಇ) ಯಾವ ಯಾವ ಪ್ರದೇಶದಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗಿದೆ: ಉಳಿದ ಪ್ರದೇಶಗಳಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸದಿರಲು ಕಾರಣವೇನು;

ಅತಿಕ್ರಮಣಕ್ಕೆ ಒಳಗಾಗಿರುವ ಸ್ಮಾರಕಗಳ ಎಲ್ಲಾ ಪ್ರದೇಶಗಳಿಂದಲೂ ಅತಿಕ್ರಮಣಕಾರರನ್ನು ತೆವುಗೊಳಿಸಲು ನಿಯಮದಡಿ ಭಾರತೀಯ ಪುರಾತತ್ವ ಸರ್ವೇಕ್ಷಣವು ಕ್ರಮ ಕೈಗೊಂಡಿರುತ್ತದೆ.

ಈ) ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ; ಎಷ್ಟು ಪ್ರಕರಣಗಳು ಬಗೆಹರಿದಿವೆ; ಬಾಕಿ ಇರುವ ಪ್ರಕರಣಗಳೆಷ್ಟು;

30 ಪ್ರಕರಣಗಳಲ್ಲಿ ನ್ಯಾಯಾಲಯಗಳಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ದಾವೆ ಹೂಡಿರುತ್ತದೆ. ಈ ಎಲ್ಲಾ ದಾವೆಗಳು, ವಿಚಾರಣೆಯ ವಿವಿಧ ಹಂತಗಳಲ್ಲಿದ್ದು, ಇನ್ನೂ ಬಾಕಿ ಇರುತ್ತವೆ.

ಉ) ಯಾವ ಕಾಲಮಿತಿಯೊಳಗೆ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗುವುದು

ಅತಿಕ್ರಮಣವನ್ನು ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಜಿಲ್ಲಾಡಳಿತ ಕಚೇರಿಯಾಧಿಕಾರಿಗಳು, ಪೋಲಿಸ್ ವರಿಷ್ಠಾಧಿಕಾರಿಗಳು ಇವರೊಡನೆ ನಿರಂತರ ಪ್ರಚಾರದಲ್ಲಿರುತ್ತದೆ ಸಮನ್ವಯ ಸಮಿತಿ ಸಭೆಗಳಲ್ಲಿ ಭಾಗವಹಿಸುತ್ತದೆ ಇದು ಕಾನೂನು ಮತ್ತು ಸುವ್ಯವಸ್ಥೆಗೊಳ ಪಡುವ ವಿಷಯವಾಗಿರುವುದರಿಂದ ಅತಿಕ್ರಮಣಕಾರರನ್ನು ತೆರವುಗೊಳಿಸಲು ಹೆಚ್ಚಿನ ಕಾಲಾವಕಾಶದ ಅಗತ್ಯವಿದ್ದು ಕಾಲಮಿತಿ ನಿಗದಿಗೊಳಿಸುವುದು ಕಷ್ಟಸಾಧ್ಯವಾಗಿರುತ್ತದೆ.

ಊ) ಐತಿಹಾಸಿಕ ಸ್ಮಾರಕಗಳನ್ನು ಅತಿಕ್ರಮಿಸದಂತೆ ಹಾಗೂ ಸ್ಮಾರಕಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಕರ್ನಾಟಕ ರಾಜ್ಯದ ಭಾರತೀಯ ಪುರಾತತ್ವ ಸರ್ವೇಕ್ಷಣದ ಸ್ಮಾರಕಗಳ ಸುತ್ತಲ್ಲೂ ಅತಿಕ್ರಮಣವನ್ನು ತಡೆಗಟ್ಟಲು ಹಾಗೂ ತೆರವುಗೊಳಿಸಲು ಸಮಿತಿಯೊಂದನ್ನು ಆವೇಶ ಸಂಖ್ಯೆ: ಕಸಂವಾಪ್ರ 163 ಕೆಎಮಯು 2008 ದಿನಾಂಕ 13.11.2008 ರಲ್ಲಿ ರಚಿಸಲಾಗಿದೆ.

264 ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್
ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ಗುಲ್ಬರ್ಗಾ ವಿಮಾನ ನಿಲ್ದಾಣದ ಕಾಮಗಾರಿಯನ್ನು ಮೇಟಾಸ್ ಕಂಪನಿಯವರಿಗೆ ವಹಿಸಿಕೊಟ್ಟಿರುವುದು ನಿಜವೇ;

ನಿಜ.

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು?

ಮೆ.ಮೈಥಾಸ್ ಸಂಸ್ಥೆಯೊಂದಿಗೆ ಮಾಡಿಕೊಂಡ ಯೋಜನಾ ಅಭಿವೃದ್ಧಿ ಒಪ್ಪಂಧದಂತೆ ಡಿಸೆಂಬರ್ 2008 ರೊಳಗಾಗಿ ಆರ್ಥಿಕ ಮುಕ್ತಾಯದ ಬಗ್ಗೆ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ನೀಡಬೇಕಾಗಿರುತ್ತದೆ. ಎರಡನೆಯದಾಗಿ ಗುಲ್ಬರ್ಗಾ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಅಗತ್ಯವಾದ ಎಲ್ಲಾ ಅನುಮೋದನೆ ತೀರುವಳಿಗಳನ್ನು ಸದರಿ ಸಂಸ್ಥೆಯು ಯೋಜನಾ ಅಭಿವೃದ್ಧಿ ಒಪ್ಪಂಧ ಮಾಡಿಕೊಂಡು 6 ತಿಂಗಳೊಳಗಾಗಿ ಪಡೆಯುವುದು ಕಡ್ಡಾಯವಾಗಿದ್ದಿತು. ಈ ಬಗ್ಗೆ ಸಂಸ್ಥೆಯಿಂದ ಇಲ್ಲಿಯವರೆಗೆ ಎಲ್ಲಾ ಕ್ರಮ ಕೈಗೊಳ್ಳದ ಹಿನ್ನಲೆಯಲ್ಲಿ ಮೈಥಾಸ್ ಸಂಸ್ಥೆಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ಮೈಥಾಸ್ ಸಂಸ್ಥೆಯಿಂದ ಈ ಕುರಿತಂತೆ ಬಂದಿರುವ ಉತ್ತರದಲ್ಲಿ ಯಾವುದೇ ನಿರ್ದಿಷ್ಟ ಅಂಶಗಳಿರುವುದಿಲ್ಲ.

ಈ ಮಧ್ಯೆ ಸತ್ಯಂ ಕಂಪ್ಯೂಟರ್ಸ್ ಸಂಸ್ಥೆಯು ವಿವಾದದ ಸುಳಿಯಲ್ಲಿ ಸಿಲುಕಿದ್ದು, ಮೆ.ಮೈಥಾಸ್ ಸಂಸ್ಥೆಯು ಇದರ ಸಹವರ್ತಿ ಸಂಸ್ಥೆಯಾಗಿರವುದರಿಂದ ಈ ಸಂಸ್ಥೆಯ ನೈತಿಕ ನೆಲೆಗಳು ಪ್ರಶ್ನಾರ್ಹವಾಗಿದ್ದು, ಈ ಸಂಸ್ಥೆಯನ್ನು ಕೈಬಿಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

267 ಶ್ರೀ ಮಾಡಾಳ್ ವಿರೂಪಾಕ್ಷಪ್ಪ.ಕೆ (ಚನ್ನಗಿರಿ)
ಮಾನ್ಯ ಮುಖ್ಯಮಂತ್ರಿಗಳು

ಅ) ಸ್ವ ಹಿಡುವಳಿಯಲ್ಲಿ ಬೆಳೆದ ಮರಗಿಡಗಳನ್ನು ರೈತರೇ ಸ್ವಂತ ಕಟಾವು ಮಾಡಲು ಜಾರಿಯಲ್ಲಿರುವ **"The Karnataka Tree Preservation Act (Amendment) Bill- 2005"** ಇದುವರೆವಿಗೂ ಜಾರಿಗೆ ತರದೇ ಇರಲು ಕಾರಣಗಳೇನು?

1976 ರ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆಯ ಕೆಲವು ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರವು ತಾತ್ವಿಕವಾಗಿ ನಿರ್ಧರಿಸಿರುತ್ತದೆ. ಈ ತಿದ್ದುಪಡಿಗೆ ಸಂಬಂಧಿಸಿದಂತೆ, ಕೆಲವು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾಗಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಸ್ಪಷ್ಟೀಕರಣ ಪಡೆಯಲಾಗುತ್ತಿದೆ. ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿಯನ್ನು ತರುತ್ತಿರುವುದರಿಂದ, ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತರಲು ಕ್ರಮವಹಿಸಲಾಗುವುದು.

335 ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ)
ಮಾನ್ಯ ಮುಖ್ಯಮಂತ್ರಿಗಳು

ಅ) ಹೈದ್ರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದಿರುವ ಭಾಗವನ್ನು ನಿಯಮ 321ರ ಅಡಿಯಲ್ಲಿ ಸರ್ಕಾರದ ಮೇಲೆ ಒತ್ತಡ ತರಲು ಯಾವ ಕ್ರಮ ಕೈಗೊಳ್ಳಲಾಗಿದೆ?

ರಾಜ್ಯ ಸರ್ಕಾರವು, ಹೈದರಾಬಾದ್-ಕರ್ನಾಟಕ ಪ್ರದೇಶದ ಸಾಮಾಜಿಕ ಅಸಮತೋಲನವನ್ನು ನಿವಾರಿಸುವ ಸಲುವಾಗಿ ಆ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ ಅನುಚ್ಛೇದ 371ಕ್ಕೆ ಸೂಕ್ತ ತಿದ್ದುಪಡಿತರಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ನಿರಂತರ ಒತ್ತಾಯ ತರಲಾಗುತ್ತಿದೆ. ಈವರೆಗೂ ಆರು ಬಾರಿ ಮನವಿಗಳನ್ನು ಸಲ್ಲಿಸಲಾಗಿದ್ದು ಸುಮಾರು 17 ಬಾರಿ ಪತ್ರ ವ್ಯವಹಾರ ನಡೆಸಲಾಗಿದೆ. ಇತ್ತೀಚೆಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ, ಮಹಾರಾಷ್ಟ್ರದಲ್ಲಿ ರಚಿಸಿರುವಂತೆ ಅಭಿವೃದ್ಧಿ ಮಂಡಳಿಗಳನ್ನು ರಚಿಸುವ ಬಗ್ಗೆ ಮರು ಪರಿಶೀಲಿಸಬೇಕೆಂದು ಸೂಚಿಸಿದ್ದರು. ಇದಕ್ಕೆ ಉತ್ತರವಾಗಿ ರಾಜ್ಯ ಸರ್ಕಾರವು ದಿನಾಂಕ 31-1-2009ರ ತನ್ನ ಪತ್ರದಲ್ಲಿ ಸಂವಿಧಾನದ ಅನುಚ್ಛೇದ 371ನ್ನು ತಿದ್ದುಪಡಿಮಾಡಿ ಈ ಪ್ರದೇಶಕ್ಕೆ ವಿಶೇಷ ಸ್ಥಾನಮಾನ

ನೀಡಿದರೆ ಮಾತ್ರ ಈ ಸಮಸ್ಯೆ ಪರಿಹಾರವಾಗುವುದರಿಂದ ಅದರಂತೆ ಕ್ರಮವಹಿಸಿ ಈ ಪ್ರದೇಶದ ಜನರ ದೀರ್ಘಕಾಲದ ಬೇಡಿಕೆಯನ್ನು ಪೂರೈಸಬೇಕೆಂದು ಕೋರಿದೆ.

233 ಶ್ರೀ. ಕುಮಾರಸ್ವಾಮಿ ಹೆಚ್.ಕೆ
ಮಾನ್ಯ ಲೋಕೋಪಯೋಗಿ ಸಚಿವರು.

ಅ. ಹಾಸನ ಜಿಲ್ಲೆ, ಸಕಲೇಶಪುರ ಪಟ್ಟಣ ವ್ಯಾಪ್ತಿಯಲ್ಲಿ ಬೈಪಾಸ್ ರಸ್ತೆಯಲ್ಲಿ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡಿರವುದು ನಿಜವೇ.

ಹೌದು. ರಾಷ್ಟ್ರೀಯ ಹೆದ್ದಾರಿ-48ರ ಕಿಮೀ.222.00 ರಿಂದ 225.54 ರವರೆಗೆ ಸಕಲೇಶಪುರ ಪಟ್ಟಣಕ್ಕೆ ಬೈಪಾಸ್ ರಸ್ತೆ, ನಿರ್ಮಾಣ ಮಾಡಲು 1987ರಲ್ಲಿ ಭೂಸ್ವಾಧೀನತೆಗೆ ಅಂದಾಜುಪಟ್ಟಿ ಮಂಜೂರಾಗಿ 2002-03ರಲ್ಲಿ 52.5 ಎಕರೆ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ. ಹಾಗಿದ್ದಲ್ಲಿ, ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣವೇನು?

ರಾಷ್ಟ್ರೀಯ ಹೆದ್ದಾರಿ-48ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಉದ್ದೇಶ ಇದ್ದುದರಿಂದ ಸಕಲೇಶಪುರ ಬೈಪಾಸ್ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ವಿಳಂಬವಾಗಿರುತ್ತದೆ. 2009-10ರ ವಾರ್ಷಿಕ ಯೋಜನೆಯಲ್ಲಿ ಸಕಲೇಶಪುರ ಬೈಪಾಸ್ ರಸ್ತೆ ನಿರ್ಮಾಣ ಮಾಡಲು ರೂ.12.00 ಕೋಟಿ ಅನುದಾನಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ವಾರ್ಷಿಕ ಯೋಜನೆಯು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆಗೊಂಡ ನಂತರ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಸಾರಿಗೆ ಮಂತ್ರಾಲಯದಿಂದ ಮಂಜೂರಾತಿ ಪಡೆದು ಕಾಮಗಾರಿಯನ್ನು ಕೈಗೊಳ್ಳಬಹುದಾಗಿದೆ.

ಇ. ರಾಷ್ಟ್ರೀಯ ಹೆದ್ದಾರಿ-48ರಲ್ಲಿ ಸಕಲೇಶಪುರದಿಂದ ಗುಂಡ್ಯಾವರೆಗಿನ ರಸ್ತೆಯು ಕಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ಥಿಗೊಳಿಸಲು ಸರ್ಕಾರ ಕ್ರಮಕೈಗೊಳ್ಳಲಾಗುವುದೇ;

ರಾಷ್ಟ್ರೀಯ ಹೆದ್ದಾರಿ-48ರ ಕಿಮೀ.222.00 ರಿಂದ ಕಿಮೀ. 263.00ರವರೆಗೆ ರಸ್ತೆಯು ಸಕಲೇಶಪುರದಿಂದ ಗುಂಡ್ಯದ ಮಧ್ಯೆ ಹಾದು ಹೋಗಿರುತ್ತದೆ. ಈ ಹೆದ್ದಾರಿಯು ಶಿರಾಡಿಘಾಟ್ ಭಾಗದಲ್ಲಿ ಹಾದುಹೋಗಿರುತ್ತದೆ. ಈ ಭಾಗದಲ್ಲಿ ಮೂರು ಕಾಮಗಾರಿಗಳು 36.71 ಕೋಟಿ ರೂ.ಗಳಿಗೆ ಮಂಜೂರಾಗಿದ್ದು ಕಾಮಗಾರಿಯನ್ನು 2008-09ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ. ಸದ್ರಿ ರಸ್ತೆಯು ಕಾಂಕ್ರೀಟ್ ರಸ್ತೆಯನ್ನು ಹೊರತುಪಡಿಸಿ ಹಲವು ಭಾಗಗಳಲ್ಲಿ ಹಾನಿಗೊಳಗಾಗಿರುತ್ತದೆ. ದಿನಾಂಕ 20.10.2008ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ತನಿಖೆ ನಿಮಿತ್ತ ಈ ಭಾಗದಲ್ಲಿ ದುರಸ್ತಿ ನಿರ್ವಹಣ ಕಾಮಗಾರಿಯನ್ನು ದಿನಾಂಕ 6.1.2009ರವರೆಗೆ ಸ್ಥಗಿತಗೊಳಿಸಲಾಗಿತ್ತು. ಈಗ ಕಿಮೀ. 222.00ರಿಂದ 237.00ರವರೆಗೆ ರಸ್ತೆಯು ಸುಸ್ಥಿತಿಯಲ್ಲಿದೆ. ಕಿಮೀ. 237.00ರಿಂದ 263.00ರವರೆಗೆ

ಒಟ್ಟು ಎರಡು ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಗಿತ್ತು. ಈ ಪೈಕಿ ಒಬ್ಬರು ಗುತ್ತಿಗೆದಾರರು ನಿರ್ವಹಣೆ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನೊಬ್ಬ ಗುತ್ತಿಗೆದಾರರು ಟೆಂಡರು ಕಾಮಗಾರಿಯನ್ನು ಅರ್ಧಕ್ಕೆ ಬಿಟ್ಟಿರುವುದರಿಂದ ಹಾಗೂ ಅಧಿಕ ಭಾರದ ಅದಿರು ಲಾರಿಗಳು: ಅನಿಲ ಟ್ಯಾಂಕರ್ ಇತ್ಯಾದಿಗಳ ಓಡಾಟದಿಂದ ಈ ಭಾಗದ ಹೆದ್ದಾರಿಯು ಅಲ್ಲಲ್ಲಿ ಹಾನಿಗೊಂಡಿರುತ್ತದೆ. ಪ್ರವಾಹ ಹಾನಿ ದುರಸ್ತಿಯಡಿಯಲ್ಲಿ ತುರ್ತು ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

ಈ. ರಾಷ್ಟ್ರೀಯ ಹೆದ್ದಾರಿ-48ರ ಬೆಂಗಳೂರು- ಮಂಗಳೂರುವರೆಗಿನ ಚತುಷ್ಪಥ ರಸ್ತೆ ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ, ಬೆಳ್ಳೂರಿನಿಂದ ಮುಂದಕ್ಕೆ ಕಾಮಗಾರಿ ಪ್ರಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ರಾಷ್ಟ್ರೀಯ ಹೆದ್ದಾರಿ-48ರ ಕಿಮೀ. 28.00 ರಿಂದ ಕಿಮೀ. 328.00ರವರೆಗೆ ಅಂದರೆ ನೆಲಮಂಗಲದಿಂದ-ಮಂಗಳೂರುವರೆಗೆ ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆ ಇದ್ದು, ಮೊದಲ ಹಂತವಾಗಿ ಕಿಮೀ.28.00ರಿಂದ 110.00 ರವರೆಗೆ ಅಂದರೆ ನೆಲಮಂಗಲದಿಂದ ದೇವಿಹಳ್ಳಿವರೆಗೆ ಚತುಷ್ಪಥ ರಸ್ತೆ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ನವದೆಹಲಿ ಇವರು ಕೈಗೊಂಡಿರುತ್ತಾರೆ. ಕಿಮೀ.110.00 ರಿಂದ 190.00ರವರೆಗೆ ಅಂದರೆ ದೇವಿಹಳ್ಳಿಯಿಂದ ಹಾಸನದವರೆಗೆ ಚತುಷ್ಪಥ ರಸ್ತೆ ನಿರ್ಮಾಣದ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈಗಾಗಲೇ ಎರಡು ಬಾರಿ ಟೆಂಡರ್ ಕರೆದರೂ ಯಾರು ಭಾಗವಹಿಸದೇ ಇದ್ದುದರಿಂದ, ಅಂದಾಜನ್ನು ಮಾರ್ಪಡಿಸಿ ಟೆಂಡರ್ ಕರೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿರುವುದಾಗಿ ತಿಳಿದುಬಂದಿದೆ. ಕಿ.ಮೀ.190.00ರಿಂದ 328.00ರವರೆಗೆ ಅಂದರೆ ಹಾಸನದಿಂದ ಬಿ.ಸಿ.ರೋಡ್‌ವರೆಗಿನ ಚತುಷ್ಪಥ ರಸ್ತೆ ಕೆಲಸವನ್ನು ಡಿ.ಬಿ.ಎಫ್.ಓ. ಆಧಾರದಲ್ಲಿ ನಿರ್ವಹಿಸಲು ಫೀಸಿಬಿಲಿಟಿ ಸ್ಟಡಿ ಮಾಡುವ ಬಗ್ಗೆ ಮೆ:ಫೀಡ್‌ಬ್ಯಾಕ್ ವೆಂಚರ್ಸ್ ಕನ್‌ಸಲ್ಟೆಂಟ್, ಬೆಂಗಳೂರು ಇವರಿಗೆ ಟೆಂಡರ್ ಮುಖಾಂತರ ವಹಿಸಿಕೊಡಲಾಗಿದೆ. ಹಾಗೂ ಸದರಿಯವರು ನೀಡಿದ ವರದಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ ಹಾಗೂ ವರದಿಗೆ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ-48ರ ಕಿಮೀ.328.00 ರಿಂದ ಕಿಮೀ.345.00ರವರೆಗೆ ಅಂದರೆ ಬಿ.ಸಿ.ರೋಡಿನಿಂದ-ಮಂಗಳೂರುವರೆಗೆ ಚತುಷ್ಪಥ ರಸ್ತೆ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೈಗೊಂಡು ಕೆಲಸ ಪ್ರಗತಿಯಲ್ಲಿದೆ.

218 ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು)
ಮಾನ್ಯ ಲೋಕೋಪಯೋಗಿ ಸಚಿವರು.

ಅ) ಕಾಪುವಿನಲ್ಲಿ ಹಳೆಯ ಇಲಾಖಾ ಪ್ರವಾಸಿ ಮಂದಿರವಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ?

ಈ ಪ್ರವಾಸಿ ಮಂದಿರವು ಲೋಕೋಪಯೋಗಿ ಇಲಾಖಾ ವ್ಯಾಪ್ತಿಗೆ ಬರವುದಿಲ್ಲ. ಇದು ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಬರುತ್ತದೆ.

ಆ) ಇದು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದು, ಮೇಲ್ದರ್ಜೆಗೇರಿಸುವ ಅಗತ್ಯತೆಯ ಬಗ್ಗೆ ಪ್ರಸ್ತಾವನೆ ಇದೆಯೇ?

ಉದ್ಭವಿಸುವುದಿಲ್ಲ

ಇ) ಇದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲು ಆದೇಶಸುವುದೆ?

ಉದ್ಭವಿಸುವುದಿಲ್ಲ

ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿಪಡಿಸುವುದು.

217 ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು)
ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಕಾಪು ದೀಪಸ್ತಂಭವನ್ನು ಪ್ರವಾಸೋದ್ಯಮ ಹಾಗೂ ಕಡಲತೀರಗಳನ್ನೊಳಗೊಂಡಂತೆ ಅಭಿವೃದ್ಧಿಗೆ ಯಾವ ರೀತಿಯ ನಕ್ಷೆಯನ್ನು ಕೈಗತ್ತಿಕೊಂಡಿದೆ;

ಉಡುಪಿ ಕಾಪು ದೀಪಸ್ಥಂಬದ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳಾದ ಲಿಂಕ್ ರಸ್ತೆ, ರೈಲಿಂಗ್ಸ್ ಅಳವಡಿಕೆ, ಲೈಟ್ ಹೌಸ್ ಎದುರಿನ ಗುಡ್ಡದಲ್ಲಿ ಆಸನ ವ್ಯವಸ್ಥೆ, ಹಾಗೂ ತೂಗುಸೇತುವೆ ಅಳವಡಿಕೆ, ಶೌಚಾಲಯ ನಿರ್ಮಾಣ, ಪಾರ್ಕಿಂಗ್ ವ್ಯವಸ್ಥೆ, ದೀಪದ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಲಾಗುತ್ತಿದೆ.

ಆ) ಈ ನಕ್ಷೆಯಿಂತೆ ಕಾರ್ಯಗತ ಮಾಡಲು ತೆಗೆದಿರಿಸಿರುವ ಅನುದಾನವೆಷ್ಟು

ಉಡುಪಿ ಜಿಲ್ಲೆಯ ಕಾಪು ಬೀಚ್ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು 2007-08ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರಿಗೆ ರೂ.55.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಸಾಲಿನಲ್ಲಿ ಕಾಮಗಾರಿ ನಡೆಸಲು ಬಿಡುಗಡೆಯಾದ ಅನುದಾನವೆಷ್ಟು?

ಪ್ರಸ್ತುತ 2008-09ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

153 ಶ್ರೀ. ಎಂ.ಟಿ.ಕೃಷ್ಣಪ್ಪ (ತುರುವೇಕೆರೆ)
ಮಾನ್ಯ ಲೋಕೋಪಯೋಗಿ ಸಚಿವರು

ಅ ತುರುವೇಕೆರೆ ವಿಧಾನಸಭಾ ಕ್ಷೇತ್ರಕ್ಕೆ 2007–08ನೇ ಸಾಲಿನಲ್ಲಿ ನಬಾರ್ಡ್ ಅನುದಾನದಲ್ಲಿ ಬಿಡುಗಡೆಗೊಳಿಸಿರುವ ಹಣವೆಷ್ಟು?

2007–08ನೇ ಸಾಲಿನಲ್ಲಿ ತುರುವೇಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಪ್ರಗತಿಯಲ್ಲಿ ಆರ್.ಐ.ಡಿ.ಎಫ್–10 ರಿಂದ 12ರವರೆಗಿನ ಕಾಮಗಾರಿಗಳಿಗೆ 87.10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

154 ಶ್ರೀ. ಎಂ.ಟಿ.ಕೃಷ್ಣಪ್ಪ (ತುರುವೇಕೆರೆ)
ಮಾನ್ಯ ಲೋಕೋಪಯೋಗಿ ಸಚಿವರು

ಅ ತುರುವೇಕೆರೆ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿನ ಮುಕ್ತಾಯವಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಡುಗಡೆಯಾಗಬೇಕಾದ LOC ಬಾಕಿ ಎಷ್ಟು?

ದಿನಾಂಕ: 31–01–2009ರ ಅಂತ್ಯಕ್ಕೆ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ರೂ.359.00 ಲಕ್ಷಗಳು ಬಾಕಿ ಇದ್ದು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ ಯಾವಾಗ LOC ಬಿಡುಗಡೆಗೊಳಿಸಲಾಗುವುದು?

ಪ್ರತಿ ತಿಂಗಳೂ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಉತ್ತರ ಮತ್ತು ದಕ್ಷಿಣವಲಯಗಳ ಬಾಕಿ ಬಿಲ್ಲುಗಳನ್ನಾದರಿಸಿ ಬೇಡಿಕೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗುವ ಮೊತ್ತಕ್ಕೆ ಅನುಗುಣವಾಗಿ LOC ಯನ್ನು ಬಿಡುಗಡೆಗೊಳಿಸಲಾಗುವುದು.

ಇ ವಿಶೇಷ LOC ಯನ್ನು ಯಾವ ಯಾವ ಕ್ಷೇತ್ರಗಳಿಗೆ ಎಷ್ಟೆಷ್ಟು ನೀಡಲಾಗಿದೆ(ವಿವರ ತಿಳಿಸುವುದು)?

ವಿಶೇಷ LOC ಯಾವುದೂ ಬಿಡುಗಡೆಯಾಗಿರವುದಿಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 154
ತುಮವೇಕೆರೆ ಉಪ ವಿಭಾಗದಲ್ಲಿ ವಿವಿಧ ಲೆಕ್ಕ ಶೀಷಿಕೆಗಳಡಿಯಲ್ಲಿ 31–01–2009ರ ಅಂತ್ಯಕ್ಕೆ ಬಾರಿ ಇರುವ ಬಿಲ್ಲುಗಳ ವಿವರಣಾ ಪಟ್ಟಿ.
ಅನುಬಂಧ.

ಕ್ರಸಂ	ಲೆಕ್ಕ ಶೀರ್ಷಿಕೆ	ಬಾಕಿ ಬಿಲ್ಲಿನ ಮೊತ್ತ (ರೂ.ಲಕ್ಷಗಳಲ್ಲಿ)	ಷರಾ

1	5054 – ನಬಾರ್ಡ್	4.00	
2	4202 – ಕಾಲೇಜು ಶಿಕ್ಷಣ	3.56	
3	3054 – ಮುಮಂಗ್ರಾರಅ ನಿಧಿ ಯೋಜನೆ	344.65	
4	2059 – ಯೋಜನೇತರ	6.13	
5	2216 – ವಸತಿ: ಯೋಜನೇತರ	0.66	
	ಒಟ್ಟು	359.00	

155 ಶ್ರೀ ಎಂ.ಟಿ. ಕೃಷ್ಣಪ್ಪ
ಮಾನ್ಯ ಗೃಹ ಸಚಿವರು

ಅ) ತುರುವೇಕೆರೆ ಕ್ಷೇತ್ರ ಹಾಗೂ ತುರುವೇಕೆರೆ ಪಟ್ಟಣದಲ್ಲಿ ಪೊಲೀಸ್ ವಸತಿ ಗೃಹಗಳು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

1. ತುರುವೇಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಾಲಿ 22 ಪೊಲೀಸ್ ವಸತಿಗೃಹಗಳಿದ್ದು, ಇವುಗಳು ಸುಮಾರು 50 ವರ್ಷಗಳ ಹಿಂದಿನವು.

2. ದಂಡಿನಶಿವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಾಲಿ 13 ಪೊಲೀಸ್ ವಸತಿಗೃಹಗಳಿದ್ದು, ಇವುಗಳು ಸುಮಾರು 50 ವರ್ಷಗಳ ಹಿಂದಿನವಾಗಿರುತ್ತವೆ.

3. ಮಾಯಸಂದ್ರ ಪೊಲೀಸ್ ಉಪಠಾಣಾ ವ್ಯಾಪ್ತಿಯಲ್ಲಿ 05 ವಸತಿಗೃಹಗಳಿದ್ದು, ಇವುಗಳು ಸುಮಾರು 25 ವರ್ಷಗಳ ಹಿಂದಿನವಾಗಿರುತ್ತವೆ.

ಆ) ಹಾಗಿದ್ದಲ್ಲಿ, ಹೊಸದಾಗಿ ವಸತಿ ಗೃಹ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ತ್ವರಿತ ವಸತಿ ಯೋಜನೆ-3 ಯೋಜನೆಯಡಿಯಲ್ಲಿ ವಸತಿಗೃಹಗಳ ನಿರ್ಮಾಣಕ್ಕಾಗಿ ಸರ್ಕಾರದ ಅನುಮೋದನೆ ನೀಡಿದ್ದು, ತುರುವೇಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 1-ಪಿಎಸ್ಐ, 9-ಪಿಸಿ ವಸತಿಗೃಹಗಳನ್ನು ನಿರ್ಮಿಸಲಾಗುವುದು.

156 ಶ್ರೀ ಎಂ.ಟಿ. ಕೃಷ್ಣಪ್ಪ
ಮಾನ್ಯ ಗೃಹ ಸಚಿವರು

ಅ) ತುರುವೇಕೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಮಂಜೂರಾಗಿ ಕಾಮಗಾರಿ ಪ್ರಗತಿಯಲ್ಲಿದ್ದು ಯಾವಾಗ ಪೂರ್ಣಗೊಳಿಸಲಾಗುವುದು;

ತುರುವೇಕೆರೆ ಪಟ್ಟಣಕ್ಕೆ ಒಳಚರಂಡಿ ಕಾಮಗಾರಿಯು ಪ್ರಗತಿಯಲ್ಲಿದ್ದು ಕಾಮಗಾರಿಗಳನ್ನು ಮೇ 2009ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.

ಆ) ನಗರದಲ್ಲಿ ಆಸ್ಫಾಟಿಂಗ್ ಮತ್ತು ಬಾಕ್ಸ್ ಚರಂಡಿ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

1. ಡಾಂಬರೀಕರಣ ರಸ್ತೆ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ.

2. ಬಾಕ್ಸ್ ಟೈಪ್ ಚರಂಡಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ನಂತರ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

66 ಶ್ರೀ. ಮಹದೇವ ಪ್ರಸಾದ್.ಹೆಚ್.ಎಸ್.

ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು.

ಅ) ಗುಂಡ್ಲುಪೇಟೆ ಪಟ್ಟಣದ ಅಭಿವೃದ್ಧಿಗೆ ಐ.ಡಿ.ಎಸ್.ಎಂ.ಟಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ:

ಈಗಾಗಲೇ ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಗುಂಡ್ಲುಪೇಟೆ ಪಟ್ಟಣಗಳನ್ನು 1999-2000ನೇ ಸಾಲಿನಲ್ಲಿ ಆಯ್ಕೆ ಮಾಡಲಾಗಿದ್ದು, ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ.

1. ವಾಣಿಜ್ಯ ಸಂಕೀರ್ಣ
2. ತರಕಾರಿ ಮಾರುಕಟ್ಟೆ
3. ರಸ್ತೆ ಅಭಿವೃದ್ಧಿ
4. ಬೀದಿ ದೀಪಗಳು
5. ಚರಂಡಿಗಳು
6. ಸಮುದಾಯ ಭವನ

ಹಾಗೂ ಐ.ಡಿ.ಎಸ್.ಎಂ.ಟಿ ಯೋಜನೆಯು 2005-06ನೇ ಸಾಲಿನಲ್ಲಿ ಮುಕ್ತಾಯಗೊಂಡಿರುತ್ತದೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಮೇನು?

- ಉದ್ಭವಿಸುವುದಿಲ್ಲ-

150 ಶ್ರೀ. ಕರಡಿ ಸಂಗಣ್ಣ ಅಮರಪ್ಪ
ಮಾನ್ಯ ಗೃಹ ಸಚಿವರು

1. ಕೊಪ್ಪಳ ನಗರವು ಜಿಲ್ಲಾ ಕೇಂದ್ರವಾಗಿದ್ದು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದೆಯೇ.

ಹೌದು, ಕೊಪ್ಪಳ ನಗರವು ಜಿಲ್ಲಾ ಕೇಂದ್ರವಾಗಿದ್ದು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2. ಹಾಗಿದ್ದಲ್ಲಿ ಈವರೆಗೂ ಸಂಚಾರಿ ಠಾಣೆಯನ್ನು ಪ್ರಾರಂಭಿಸದಿರಲು ಕಾರಣಗಳೇನು;

ಈಗಿನ ಭಯೋತ್ಪಾದಿತರ ಹಾಗೂ ಇತರ ಅಪರಾಧದ ತೀವ್ರತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆ, ಹೊರಠಾಣೆ ಮತ್ತು ಹೊರಠಾಣೆ ಮೇಲ್ದರ್ಜೇಗೇರಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಲು ನಿವೃತ್ತ ಡಿ.ಜಿ.ಪಿ. ಶ್ರೀ.ಎಸ್.ಮರಿಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಲು ಪತ್ರ ಸಂಖ್ಯೆ: ಹೆಚ್‌ಡಿ/207/ಪಿಓಪಿ/2008 ದಿನಾಂಕ: 31-12-08ರಲ್ಲಿ ಸರ್ಕಾರದ ಅನುಮತಿ ನೀಡಿದೆ. ಈ ಸಮಿತಿಯು ನೀಡುವ ವರದಿಯ ಆಧಾರದ ಮೇಲೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಿ. ಅದರನ್ವಯ ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

3. ಕೊಪ್ಪಳ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

4. ಹಾಗಿದ್ದಲ್ಲಿ, ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಪ್ರಶ್ನೆ [2]ಕ್ಕೆ ನೀಡಿದ ಉತ್ತರದಂತೆ

84 ಶ್ರೀ. ಟಿ.ಬಿ.ಜಯಚಂದ್ರ
ಗೃಹ ಸಚಿವರು

ಅ ಶ್ರೀ. ಎ.ಆರ್.ರಾಜೇಂದ್ರಕುಮಾರ್, ನಂ.1523, ಲಕ್ಷ್ಮೀನಿವಾಸ್, ವಿಶ್ವಭವನ್, 5ನೇ ಸ್ಟೇಜ್, 1ನೇ ಫೇಸ್, 1ನೇ ಕ್ರಾಸ್, ಬೆಮೆಲ್ ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು ಇವರು ಅನೇಕ ಉತ್ಪನ್ನಗಳನ್ನು ಕಂಡುಹಿಡಿದ ವಿಜ್ಞಾನಿಯಾಗಿದ್ದು, ಇವರಿಗೆ ಉಗ್ರಗ್ರಾಮಿಗಳಿಂದ ಅಕ್ರಮಣದ ಭೀತಿಯಿದ್ದು, ಅನೇಕ ಬಾರಿ ರಕ್ಷಣೆಯನ್ನು ಕೋರಿ ಮನವಿ ಮಾಡಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ.

ಶ್ರೀ. ಎ.ಆರ್.ರಾಜೇಂದ್ರಕುಮಾರ್ ರವರು ರಕ್ಷಣೆ ಕೋರಿ ಮನವಿ ನೀಡಿರುವುದು ಗಮನಕ್ಕೆ ಬಂದಿದೆ.

ಆ ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇವರ ನಿವಾಸಕ್ಕೆ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಿಂದ ಪಾಯಿಂಟ್ ಪುಸ್ತಕಗಳನ್ನು ಇಟ್ಟು, ಗಸ್ತು ಸಿಬ್ಬಂದಿಗಳು ಹಾಗೂ ಚೀತಾ ಹೊಯ್ಸಳ ವಾಹನಗಳು ಮತ್ತು ಗಸ್ತಿನ ಅಧಿಕಾರಿಗಳು ಹಗಲು ಮತ್ತು ರಾತ್ರಿಯ ವೇಳೆಯಲ್ಲಿ ಆಗಿಂದಾಗ್ಗೆ ಭೇಟಿ ನೀಡಿ ಚೆಕ್‌ಮಾಡಿ ರಕ್ಷಣೆ ನೀಡುತ್ತಿರುತ್ತಾರೆ ಹಾಗೂ ಇವರು ವಾಸ ಮಾಡುವ ನಿವಾಸದ ಬಳಿ ನಿಗಾ ಇಡಲಾಗಿದೆ.

ಇ ಇತ್ತೀಚೆಗೆ ಬೆಂಗಳೂರಿನಲ್ಲಿ ಉಗ್ರಗಾಮಿಗಳು ವಿಜ್ಞಾನಿಗಳ ಮೇಲೆ ಆಕ್ರಮಣ ಮಾಡಿರುವ ಪ್ರಕರಣ ನಡೆದಿರುವ ಹಿನ್ನೆಲೆಯಲ್ಲಿ ಇವರಿಗೆ ರಕ್ಷಣೆ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಮೇಲಿನಂತೆ ಕೈಗೊಂಡ ಕ್ರಮಗಳನ್ನು ಮುಂದುವರೆಸಲಾಗುವುದು.

158 ಶ್ರೀ. ಬಿ.ಝಡ್.ಜಮೀರ್ ಅಹಮದ್ ಖಾನ್
ಮಾನ್ಯ ಮುಖ್ಯಮಂತ್ರಿಯವರು

ಅ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಆ ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ಥಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು;

ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಒಟ್ಟು 9 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿ 5 ಕಾಮಗಾರಿಗಳು ಮುಕ್ತಾಯಗೊಂಡಿದೆ. 2 ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿರುತ್ತದೆ ಮತ್ತು 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಇ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆಗಳ ದುರಸ್ಥಿಗಾಗಿ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಹೌದು.

ಈ ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಿದೆ; (ವಿವರಗಳನ್ನು ನೀಡುವುದು)?

ರೂ.311.57 ಲಕ್ಷಗಳನ್ನು ಬಿಡುಗಡೆ ಮಾಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕ್ರ ಸಂ.	ವಾರ್ಡ್ ಸಂಖ್ಯೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ
1	46	ಚಾಮರಾಜಪೇಟೆ 2ನೇ ಮುಖ್ಯ ರಸ್ತೆ 3ನೇ ಅಡ್ಡರಸ್ತೆಯಿಂದ ಪಂಪಮಹಾಕವಿ ರಸ್ತೆವರೆಗೆ ಡಾಂಬರೀಕರಣ ಒದಗಿಸುವಕಾಮಗಾರಿ	49.20	ಪ್ರಾರಂಭ ಹಂತ
2	46	ಚಾಮರಾಜಪೇಟೆ 4ನೇ ಮುಖ್ಯ ರಸ್ತೇ 7ನೇ ಅಡ್ಡರಸ್ತೆಯಿಂದ 3ನೇ ಅಡ್ಡರಸ್ತೆವರೆಗೆ ಡಾಂಬರೀಕರಣ ಒದಗಿಸುವ ಕಾಮಗಾರಿ	48.40	ಪ್ರಾರಂಭ ಹಂತ
3	46	ಚಾಮರಾಜಪೇಟೆ 3ನೇ ಮುಖ್ಯ ರಸ್ತೆ 7ನೇ ಅಡ್ಡರಸ್ತೆಯಿಂದ 3ನೇ ಅಡ್ಡರಸ್ತೆವರೆಗೆ ಡಾಂಬರೀಕರಣ ಒದಗಿಸುವ ಕಾಮಗಾರಿ	49.10	ಕಾಮಗಾರಿ ಪ್ರಗತಿಯಲ್ಲಿದೆ
4	46	ಚಾಮರಾಜಪೇಟೆ 8ನೇ ಅಡ್ಡರಸ್ತೆ 1ನೇ ಮತ್ತು 5ನೇ ಮುಖ್ಯರಸ್ತೆ ಮಧ್ಯೆ ಡಾಂಬರೀಕರಣ ಒದಗಿಸುವ ಕಾಮಗಾರಿ	15.83	ಮುಕ್ತಾಯ ಗೊಂಡಿದೆ
5	46	ಚಾಮರಾಜಪೇಟೆ 4ನೇ ಮುಖ್ಯ ರಸ್ತೆ ಪಂಪ ಮಹಾಕವಿ ರಸ್ತೆ ಮಧ್ಯೆ 9ನೇ ಅಡ್ಡರಸ್ತೆವರೆಗೆ ಡಾಂಬರೀಕರಣ ಒದಗಿಸುವ ಕಾಮಗಾರಿ	30.00	ಮುಕ್ತಾಯ ಗೊಂಡಿದೆ
6	46	ಚಾಮರಾಜಪೇಟೆ 1ನೇ, 2ನೇ ಮತ್ತು 4ನೇ ಅಡ್ಡರಸ್ತೆ 1ನೇ ಮುಖ್ಯ ಮತ್ತು 5ನೇ ಮುಖ್ಯ ರಸ್ತೆ ಮಧ್ಯೆ ಡಾಂಬರೀಕರಣ ಒದಗಿಸುವ ಕಾಮಗಾಗಿ	20.12	ಮುಕ್ತಾಯ ಗೊಂಡಿದೆ
7	46	ಚಾಮರಾಜಪೇಟೆ 2ನೇ ಮುಖ್ಯರಸ್ತೆ,	30.00	ಮುಕ್ತಾಯಗೆ

		2ನೇ ಅಡ್ಡರಸ್ತೆ ಮತ್ತು 9ನೇ ಅಡ್ಡರಸ್ತೆ ಮಧ್ಯೆ ಭಾಗಕ್ಕೆ ಡಾಂಬರೀಕರಣ ಒದಗಿಸುವ ಕಾಮಗಾರಿ		ಗೊಂಡಿದೆ
8	30	ಜಟಕಾ ಬಂಡಿ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಕ್ಕೆ ಡಾಂಬರೀಕರಣ ಒದಗಿಸುವ ಕಾಮಗಾರಿ	49.00	ಕಾಮಗಾರಿ ಪ್ರಗತಿಯಲ್ಲಿದೆ
9	30	ಮೈಸೂರು ರಸ್ತೆಯಿಂದ ಪೋಲಿಸ್ ವಸತಿ ಗೃಹ ಪಕ್ಕದ ಭಾಗಕ್ಕೆ ಡಾಂಬರೀಕರಣ ಒದಗಿಸುವ ಕಾಮಗಾರಿ	19.92	ಮುಕ್ತಾಯ ಗೊಂಡಿದೆ

198 ಶ್ರೀ. ಸುರೇಶ್ ಬಾಬು ಸಿ.ಬಿ.
ಮಾನ್ಯ ಪೌರಾಡಳಿತ ಸಚಿವರು

1. ಚಿಕ್ಕನಾಯಕನಹಳ್ಳಿ ಪುರಸಭೆಯಲ್ಲಿ ವಿವಿಧ ಹುದ್ದೆಗಳು ಬಹಳ ದಿನಗಳಿಂದ ಖಾಲಿ ಇದ್ದು, ಪಟ್ಟಣದ ನೈರ್ಮಲ್ಯದ ಕೆಲಸ ನಿರ್ವಹಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು

2. ಹಾಗಿದ್ದಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ಇದೆ. ಸ್ಥಳೀಯ ಸಂಸ್ಥೆಗಳ ಖಾಲಿ ಇರುವ ಸ್ಥಾನಗಳನ್ನು ಈಗಿರುವ ಸಿಬ್ಬಂದಿಗಳಿಂದ ಕೆಲಸ ನಿರ್ವಹಿಸಲು ಕ್ರಮ ವಹಿಸಲಾಗಿದೆ.

3. **ಇದುವರೆಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?**

ಸರ್ಕಾರದ ಆದೇಶ ಸಂಖ್ಯೆ: ನಅಇ 102 ಟಿಎಂಇ 2008 ದಿನಾಂಕ:29-11-2008ರನ್ವಯ ನಗರ ಸ್ಥಳೀಯ ಸಂಸ್ಥೆಗಳ ವಿವಿಧ ವೃಂದಗಳ ಒಟ್ಟು 849 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

68 ಶ್ರೀ. ಹೆಚ್.ಎಸ್.ಮಹದೇವ ಪ್ರಸಾದ

ಮಾನ್ಯ ಪೌರಾಡಳಿತ ಸಚಿವರು

ಅ ಬೆಂಗಳೂರು ನಗರದ ಉಲ್ಲಾಳ ಮುಖ್ಯ ರಸ್ತೆ. ಮಲ್ಲತಹಳ್ಳಿ, ಜ್ಞಾನಜ್ಯೋತಿನಗರ ಬಡಾವಣೆ 1ನೇ ಕ್ರಾಸ್ ಬಳಿ ರಸ್ತೆಗೆ ಅಡ್ಡಲಾಗಿ ಕಾಂಪೌಂಡ್‌ನ್ನು ಅಕ್ರಮವಾಗಿ ನಿರ್ಮಿಸಿ, ಸಾರ್ವಜನಿಕರಿಗೆತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ಜ್ಞಾನಜ್ಯೋತಿನಗರ ಬಡಾವಣೆ 1ನೇ ಕ್ರಾಸ್ ಬಳಿ ರಸ್ತೆಗೆ ಅಡ್ಡಲಾಗಿ ಕಾಂಪೌಡ್‌ನ್ನು ಅಕ್ರಮವಾಗಿ ನಿರ್ಮಿಸಿರುವುದಿಲ್ಲ. ಸದರಿ ಜಾಗವು ಶ್ರೀ ಎಂ.ನಟರಾಜ್‌ರವರ ಖಾಸಗಿ ಸ್ವತ್ತಾಗಿರುತ್ತದೆ.

ಆ ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಂಪೌಡ್ ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ನಟರಾಜ್ ರವರ ನಿವೇಶನದ ದಕ್ಷಿಣ ಹಾಗೂ ಪಶ್ಚಿಮದ ಕಡೆ ಇರುವ ಬಡಾವಣೆಗೆ ಸಂಪರ್ಕ ಕಲ್ಪಿಸಲು/ ಕೇವಲ 10-0 ಅಡಿ ರಸ್ತೆ ಇದ್ದು. ಅದನ್ನು ಅಗಲೀಕರಣ ಮಾಡುವಂತೆ ಸಾರ್ವಜನಿಕರು ಮನವಿ ಸಲ್ಲಿಸಿದ್ದಾರೆ ಸದರಿ ಮನವಿ ಆಧಾರದ ಮೇಲೆ ರಸ್ತೆಯ ವಿಸ್ತಾರಕ್ಕಾಗಿ 286.87 ಚದರ ಅಡಿ ವಿಸ್ತೀರ್ಣದ ಜಾಗವನ್ನು ಭೂಸ್ವಾಧೀನ ಮಾಡಿಕೊಳ್ಳಲು ಪಾಲಿಕೆಯು ಕ್ರಮ ತೆಗೆದುಕೊಳ್ಳುತ್ತಿದೆ.

266 ಶ್ರೀ. ವೆಂಕಟಶಿವಾರೆಡ್ಡಿ ಜಿ.ಕೆ

ಮಾನ್ಯ ಗೃಹ ಸಚಿವರು

ಅ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರದ ಕಸಬಾ ಪೊಲೀಸ್ ಠಾಣೆಯನ್ನು ವಿಂಗಡಿಸಿ ಹೋಳೂರು ಅಥವಾ ಸುಗಟೂರು ಹೋಬಳಿಯಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರದ ಮುಂದಿಯೇ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ ಕ್ಷೇತ್ರಕ್ಕೆ ಕೋಲಾರ ತಾಲ್ಲೂಕಿನ ಹೋಳೂರು ಮತ್ತು ಸುಗಟೂರು ಹೋಬಳಿ ಸೇರಿರುತ್ತದೆ. ಕೋಲಾರ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಈಗಾಗಲೇ ಸುಗುಟೂರು ಪೊಲೀಸ್ ಹೊರ ಠಾಣೆಯು ಕಾರ್ಯ ನಿರ್ವಹಿಸುತ್ತಿದ್ದು, ಸದರೊ ಸಗಟೂರು ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಆ ಕಸಬಾ ಪೊಲೀಸ್ ಠಾಣೆಗೆ 7 ಹೋಬಳಿ ಸೇರುತ್ತಿರುವುದು ಹೆಚ್ಚು ಅಪರಾದ ಕೇಸುಗಳು ಮೇಲಿಂದ ಮೇಲೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

ಇ ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದ ನಿಲುವೇನು?

ಸುಗಟೂರು ಪೊಲೀಸ್ ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಿದಲ್ಲಿ, ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಬಹುದಾಗಿದೆ. ಆದ್ದರಿಂದ ಸುಗಟೂರು ಹೊರಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

161 ಶ್ರೀ. ಅಮರೇಶ್

ಮಾನ್ಯ ಗೃಹ ಸಚಿವರು

ಅ. ತಾಲ್ಲಕು ಮಟ್ಟದಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಠಾಣೆ ಮಂಜೂರು ಮಾಡಲು ಇರುವ ಮಾನದಂಡವೇನು (ವಿವರ ನೀಡುವುದು).

ನ್ಯಾಷನಲ್ ಪೊಲೀಸ್ ಕಮಿಷನ್ (ಧರ್ಮವೀರ ಆಯೋಗ) ವರದಿಯಲ್ಲಿ ಪೊಲೀಸ್ ಠಾಣೆಯನ್ನು ಹೊಸದಾಗಿ ಸೃಜಿಸಲು ಈ ಕೆಳಕಂಡ ಮಾದಂಡಗಳನ್ನು ನಿಗದಿಪಡಿಸಿ, ಶಿಫಾರಸನ್ನು ಮಾಡಿರುತ್ತದೆ.

1. ವಿಸ್ತೀರ್ಣ–75 ಮೈಲಿ / 150 ಚ.ಕ.ಮಿಗಳ ಪ್ರದೇಶ ವ್ಯಾಪ್ತಿ.
2. ಜನಸಂಖ್ಯೆ – 50,000 ರಿಂದ 60,000
3. ಅಪರಾದ ಪ್ರಕರಣಗಳು–300 ಪ್ರಕರಣಗಳು (ವಾರ್ಷಿಕ)

ಆ ಮುಳಬಾಗಿಲು ತಾಲ್ಲೂಕಿಲ್ಲಿ ಜನಸಂಖ್ಯೆ ಹೆಚ್ಚಿದ್ದು, ಈಗಿರುವ ಒಂದು ಪೊಲೀಸ್ ಠಾಣೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಪ್ರಸ್ತುತ ಮುಳಬಾಗಿಲು ತಾಲ್ಲೂಕಿನಲ್ಲಿ ಮುಳಬಾಗಿಲು ಮತ್ತು ನಂಗಲಿ ಪೊಲೀಸ್ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ. ಮುಳಬಾಗಿಲು ಪೊಲೀಸ್ ಠಾಣೆ ವ್ಯಾಪ್ತಿಯು 473 ಚ.ಕಿ.ಮಿ.ಗಳ ಪ್ರದೇಶ ವ್ಯಾಪ್ತಿಯನ್ನು ಹೊಂದಿದ್ದು, ಜನಸಂಖ್ಯೆ–1,60,000 ಮೀರಿರುತ್ತದೆ.

ಮುಳಬಾಗಿಲು ಪಟ್ಟಣವು ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಆಗಾಗ್ಗೆ ಮತೀಯ ಗಲಭೆಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ ಹಾಗಿದ್ದಲ್ಲಿ ಹೆಚ್ಚುವರಿಯಾಗಿ ಪೊಲೀಸ್ ಠಾಣೆ ಮಂಜೂರು ಮಾಡಲು ಸರ್ಕಾರ ಕೈಕೊಂಡಿರುವ ಕ್ರಮವೇನು?

ಈಗಿನ ಭಯೋತ್ಪಾದಿತರ ಹಾಗೂ ಇತರ ಅಪರಾಧದ ತೀವ್ರತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆ, ಹೊರಠಾಣೆ ಮತ್ತು ಹೊರಠಾಣೆ ಮೇಲ್ದಜೇಗೇರಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ಅನುಸರಿಸಬೇಕಾದ

ಮಾರ್ಗಸೂಚಿಗಳನ್ನು ರೂಪಿಸಲು ನಿವೃತ್ತ ಡಿ.ಜಿ.ಪಿ. ಶ್ರೀ.ಎಸ್.ಮರಿಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಲು ಪತ್ರ ಸಂಖ್ಯೆ. ಹೆಚ್.ಡಿ/207/ಪಿಒಪಿ/2003 ದಿನಾಂಕ:31-12-08ರಲ್ಲಿ ಸರ್ಕಾರದ ಅನುಮತಿ ಮೇಲೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಿ. ಅದರನ್ವಯ ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

199 ಶ್ರೀ. ಸುರೇಶ್ ಬಾಬು ಸಿ.ಬಿ

ಮಾನ್ಯ ಲೋಕೋಪಯೋಗಿ ಸಚಿವರು

ಅ) ಚಿಕ್ಕ ನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ಲೋಕೋಪಯೋಗಿ ರಸ್ತೆಗಳು ತೀವ್ರವಾಗಿ, ಮಳೆಯಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿಗಳಲ್ಲಿನ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಿ ರಸ್ತೆಗಳನ್ನು ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ.

ಪ್ರಸಕ್ತ 2008-09ನೇ ಸಾಲಿನಲ್ಲಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ 5054 ಇತರೆ ರಸ್ತೆ ನಿರ್ಮಾಣ, ಸಿಆರ್‌ಎಫ್ ಅಡಿಯಲ್ಲಿ ಹಾಗೂ ಕೆಆರ್‌ಡಿಸಿಎಲ್ ವತಿಯಿಂದ ಒಟ್ಟು ರೂ.558.00 ಲಕ್ಷ ಅಂದಾಜಿನಲ್ಲಿ 7 ರಸ್ತೆ/ಸೇತುವೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಆರ್‌ಡಿಸಿಎಲ್ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ಮಂಡ್ಯ ಹಡಗಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ನಿಗದಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು.

ಆ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಇದುವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಇ) ಹಾಳಾಗಿರುವ ರಸ್ತೆಗಳ ಅಭಿವೃದ್ಧಿಗೆ ಇನ್ನೆಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು

216 ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು)

ಮಾನ್ಯ ಮುಖ್ಯ ಮಂತ್ರಿಗಳು

ಅ) ಕರಾವಳಿ ಜಿಲ್ಲೆಗಳಲ್ಲಿ ಹಿಂದೆ ಊರಿನ ಅಗತ್ಯಕ್ಕಾಗಿ ಕೇವಲ 1\2 ಎಕರೆ ಅಥವಾ ಒಂದು ಎಕರೆ ಪ್ರದೇಶ ಬಿಟ್ಟಿದ್ದು ಆರ್.ಟಿ.ಸಿ.ಗಳಲ್ಲಿ ಊರು ಕಾಡು ಅಥವಾ ಅರಣ್ಯ ಎಂದು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಈ ಪ್ರದೇಶಗಳನ್ನು ಅರಣ್ಯ ಕಾಡು ಅಥವಾ ಸಂರಕ್ಷಿಸಲ್ಪಟ್ಟ ಅರಣ್ಯ ಎಂಬ ಅರ್ಥ ಬರುವುದು ನಿಜವೇ;

ಹೌದು.

ಇ) ಈ ಪ್ರದೇಶ (ಸ್ಥಳಗಳಲ್ಲಿ) ಗಳಲ್ಲಿ ಜನರು ಅಕ್ರಮವಾಗಿ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿರುವ ಈ ಜನರಿಗೆ ಸ್ಥಳದ ಹಕ್ಕು ಪತ್ರ ನೀಡಲು ಆರ್.ಟಿ.ಸಿ.ಯಲ್ಲಿನ ಕಾಡು ಅಥವಾ ಅರಣ್ಯ ಪದ ಕಾನೂನಿನ ತೊಡಕಾಗುವುದರಿಂದ, ಕಾಯಿಧೆಗೆ ತಿದ್ದುಪಡಿ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಅರಣ್ಯ ಸಂರಕ್ಷಣೆ ಕಾಯ್ದೆಯು ಕೇಂದ್ರ ಸರ್ಕಾರದ ಕಾಯ್ದೆಯಾಗಿದ್ದು, ಇದಕ್ಕೆ ರಾಜ್ಯ ಸರ್ಕಾರವು ತಿದ್ದುಪಡಿ ತರಲು ಅವಕಾಶವಿಲ್ಲ.

238 ಶ್ರೀ. ಗೋಪಾಲಕೃಷ್ಣ ಬೇಳೂರು(ಸಾಗರ)
ಮಾನ್ಯ ಗೃಹ ಸಚಿವರು

ಅ ನಕ್ಸಲೈಟ್ ಹಾವಳಿ ಹೆಚ್ಚಾಗಿರುವ ಮತಕ್ಷೇತ್ರದ ಶಾಸಕರುಗಳಿಗೆ ಕೇವಲ ಒಬ್ಬ ಸಾಮಾನ್ಯ ಭದ್ರತಾ ಸಿಬ್ಬಂದಿ ನಿಯೋಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ನಕ್ಸಲೈಟ್ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮಾನ್ಯ ಶಾಸಕರುಗಳನ್ನೊಳಗೊಂಡಂತೆ ಗಣ್ಯ ವ್ಯಕ್ತಿಗಳಿಗೆ ಅವರಿಗಿರುವ ಬೆದರಿಕೆಯ ಸ್ವರೂಪ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ರಾಜ್ಯ ಭದ್ರತಾ ವರ್ಗೀಕರಣ ಮನರ್ ಪರಿಶೀಲನಾ ಸಮಿತಿಗಳು ವರ್ಗೀಕೃತ ಭದ್ರತೆ ಅಥವಾ ಅಂಗರಕ್ಷಕ ಭದ್ರತೆಯನ್ನು ಒದಗಿಸುವ ಬಗ್ಗೆ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುತ್ತವೆ. ಈ ನಿರ್ಣಯದಂತೆ ಸಂಬಂಧಪಟ್ಟ ಜಿಲ್ಲೆಯಿಂದ ಸದರಿ ವ್ಯಕ್ತಿಗಳಿಗೆ ಬೆದರಿಕೆ ಸ್ವರೂಪದ ಆಧಾರದ ಮೇಲೆ ಭದ್ರತೆಯನ್ನು ಒದಗಿಸಲಾಗುತ್ತಿದೆ.

ಅಗತ್ಯಕ್ಕೆ ಅನುಸಾರವಾಗಿ ನಕ್ಸಲ್ ಚಟುವಟಿಕೆ ಹೆಚ್ಚಿರುವ ಪ್ರದೇಶಗಳಲ್ಲಿ ಇನ್ನು ಹೆಚ್ಚಿನ ಭದ್ರತೆಯನ್ನು ಮಾನ್ಯ ಶಾಸಕರಿಗೆ ಒದಗಿಸಲು ಕ್ರಮಕೈಗೊಳ್ಳುವಂತೆ ಸಂಬಂಧಿಸಿದವರಿಗೆ ಸೂಚಿಸಲಾಗಿದೆ.

ಭದ್ರತಾ ಸಿಬ್ಬಂದಿಯನ್ನು ಸಾಮಾನ್ಯವಾಗಿ ಸಂಬಂಧಪಟ್ಟ ಜಿಲ್ಲಾ ಡಿ.ಎ.ಆರ್. ಘಟಕದಿಂದ ನಿಯೋಜಿಸಲಾಗಿದ್ದು, ಈ ಸಿಬ್ಬಂದಿ ಡಿ.ಎ.ಆರ್.ನಲ್ಲಿ ಶಸ್ತ್ರಾಭ್ಯಾಸ/ಗುರಿ ತರಬೇತಿಯನ್ನು ಹೊಂದಿರುತ್ತಾರೆ, ನಕ್ಸಲ್ ಚಟುವಟಿಕೆ ಇರುವ ಜಿಲ್ಲೆಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗಿದೆ.

ಆ ಬಂದಿದ್ದಲ್ಲಿ, ಇತ್ತೀಚಿನ ದಿನಗಳಲ್ಲಿ ನಕ್ಸಲೈಟ್ಸ್ ಹಾವಳಿ ಹೆಚ್ಚಾಗಿರುವುದರಿಂದ ವಿಶೇಷ ತರಬೇತಿ ಹೊಂದಿರುವ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲು ಸರ್ಕಾರ ಯೋಚಿಸಿದೆಯೇ?

ನಕ್ಸಲ್ ಪೀಡಿತ ಪ್ರದೇಶಗಳನ್ನೊಳಗೊಡಂತೆ ಭದ್ರತಾ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ವಿಶೇಷ ಮನರ್‌ಮನನ ತರಬೇತಿಯನ್ನು ನೀಡಲು ಪೊಲೀಸ್ ಇಲಾಖೆಯು ಕ್ರಮಕೈಗೊಳ್ಳುತ್ತದೆ. ಮನಶ್ಚೇತನ ಪಠ್ಯಕ್ರಮಗಳನ್ನು (Refresher Courses) ನಕ್ಸಲ್ ನಿಗ್ರಹ ಬಲದ ಸಿಬ್ಬಂದಿರವರಿಗೆ ನೀಡಲಾಗುತ್ತಿದೆ. ಬೆಂಗಳೂರಿನ

ಕೋರಮಂಗಲದಲ್ಲಿರುವ ಕರ್ನಾಟಕ ರಾಜ್ಯ ಮೀಸಲು ಪೊಲೀಸ್‌ನ 4ನೇ ಪಡೆಯಲ್ಲಿ ನಕ್ಸಲ್ ನಿಗ್ರಹ ಬಲದ ಮೂಲ ತರಬೇತಿಯನ್ನು ನೀಡಲಾಗುತ್ತಿದೆ. ಆಯುಧ ತರಬೇತಿ ತಂತ್ರಗಳನ್ನು, Map Reading, Night Navigation ನಂತಹ ವಿಷಯಗಳಲ್ಲಿ ಅತ್ಯುತ್ತಮ ತರಬೇತಿ ನೀಡಲಾಗುತ್ತಿದೆ.

63 ಶ್ರೀ. ಪಾಟೀಲ್ ಎ.ಎಸ್.

ಮಾನ್ಯ ಗೃಹ ಸಚಿವರು

1. ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪೊಲೀಸ್ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ.

ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ 5 ಪೊಲೀಸ್ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ.

1. ದೇವರಹಿಪ್ಪರಗಿ ಪೊಲೀಸ್ ಠಾಣೆ,
2. ಕಲಕೇರಿ ಪೊಲೀಸ್ ಠಾಣೆ,
3. ತಾಳಿಕೋಟೆ ಪೊಲೀಸ್ ಠಾಣೆ,
4. ಬಸವನಬಾಗೇವಾಡಿ ಪೊಲೀಸ್ ಠಾಣೆ,
5. ಕೋಲ್ಹಾರ ಪೊಲೀಸ್ ಠಾಣೆ

2. ಯಾವ ಯಾವ ಗ್ರಾಮಗಳು ಯಾವ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುತ್ತವೆ.

ಅನುಬಂಧದಲ್ಲಿ ನೀಡಿದೆ.

ಸರ್ಕಾರದ ಪರಿಶೀಲನೆಯಲ್ಲಿದೆ.

3. ಸದರಿ ಕ್ಷೇತ್ರದಲ್ಲಿ ಹೂವಿನ ಹಿಪ್ಪರಗಿಗೆ ಹೊಸದಾಗಿ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

4. ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಅನುಬಂಧ

1.<u>ದೇವರಹಿಪ್ಪರಗಿ ಪೊಲೀಸ್ ಠಾಣೆ:-</u>	14. ಬನ್ನಿಹಟ್ಟಿ ಪಿ.ಟಿ.	**6.** ಅರಸ್ವಾಳ್
1. ದೇವರಹಿಪ್ಪರಗಿ	15. ಬೇಕಿನಾಳ್	**7.** ಬೈಕೋಡ್
2.ದೇವರಹಿಪ್ಪರಗಿ ಎಲ್.ಟಿ	16. ನವಕಿಹಾಳ್	**8.** ನಡ್ಯಾಳ್ ಪಿ.ಹಚ್.
3. ಪದಗನೂರು	17. ಅಲಗೂರ್	**9.** ಸಿಂದಗೇರಿ
4. ಬಮ್ಮನಜೋಗಿ	18. ತುರ್ಕನಗೇರಿ	**10.** ಸೋಮನಾಳ್
5. ಶಾಂತಿನಗರ	19. ಹುನಶ್ಯಾಳ್	**11.** ಚಬನೂರ್

6. ಇಂಗಳಗಿ	20. ಅಸಂತ್‌ಪುರ	12. ಸಾಸನೂರ್
7. ದೇವೂರು	21. ಸಲದಹಳ್ಳಿ	13. ನಗರಾಳ್ ಹುಳಿ
8. ಚಿಕ್ಕರುಗಿ	22. ಬೂಧಿಹಾಳ್ ಪಿ.ಟಿ	14. ವಡವಡಗಿ
9. ಚಿಕ್ಕರುಗೀ	23. ಹಲಗುಂಡಕ್ನಾಳ್	15. ಹುಲಬೆಂಚಿ
10. ಗಂಗನಹಳ್ಳಿ	24. ಅನಿಮಡು	16. ನರಸಲಗಿ
11. ಚಂದನಗರ	25. ವಂದಾಳ್	17. ನರಸಲಗಿ ತಾಂಡಾ
12. ಹಿತ್ತಿನಹಳ್ಳಿ	26. ಯಲ್ಗೋಡ್	18. ಕನ್ನಾಳ್
13. ಕೆಡ್ಲೇವಾಡ ಪಿ.ಸಿ. ಹೆಚ್	**3. ತಾಳಿಕೋಟೆ ಪೊಲೀಸ್ ಠಾಣೆ:-**	19. ಅಂಬಳನೂರ್
14. ಮುಲ್ಸವಲ್ಲಿ	1. ತುಂಬಗಿ	20. ಅಂಬಳನೂರ್ ತಾಂಡಾ
15. ಹರ್ನಾಳ್	2. ಹೊಸಳ್ಳಿ	21. ಕನಕಾಳ್
16. ನಿವಾಳಖೇಡ್	3. ಗೊಟಗುನಕಿ	22. ಜಯವಡಗಿ
17. ಜಲಾವಡ್	4. ಭಂತ್ನೂರ್	23. ಸೊಲವಡಗಿ
18. ಇಬ್ರಾಹಿಮಪುರ	5. ಪಿರಾಪುರ್	24. ಯಲ್ವಾರ
19. ಕೊರ್ವಾರ	6. ಗಡಿಸೋಮನಾಳ್	25. ಕಡ್ಕೋಳ್
20. ಇಂದಿರಾನಗರ	7. ಬೊಮ್ಮನಹಳ್ಳಿ	26. ನರ್ಗ ರಲ್ ದೊನ
21. ವಾರ್ಕನಹಲ್ಲಿ	8. ಪಟ್ಟೆಪುರ್ ಪಿ.ಟಿ	27. ಕಾಮನಕೇರಿ
22. ಕೊಂಡಗುಳಿ	9. ಗುಟ್ಟಿಹಾಳ್	28. ಬೂಧಿಹಾಳ್
23. ಹಂಚ್ಚಿ	10. ಶಲ್ಲಗಿ	29. ಕುದರಿ ಸಿವಡಗಿ
24. ಬುದಿಹಾಲ್ದನ	11. ಕರಗನೂರ್	30. ಗುಲಬಲ್
2. ಕಲಕೇರಿ ಪೊಲೀಸ್ ಠಾಣೆ:-	12. ಕೊಡಗನೂರ್	31. ಮಾರ್ಕಬ್ಬಿನಹಲ್ಲಿ
1. ಕಲಕೇರಿ	13. ಲಕ್ಕುಂಡಿ	32. ಸತಿಹಾಳ್
2. ರಾಂಪುರ ಪಿ.ಟಿ	14. ನವದಗಿ	33. ಭೈರವಡಗಿ
3. ಕುದರಗೊಂಡ	15. ಗುಮಡಕನಲ್	34. ರೇಬಿನಾಳ್
4. ಕರುಟ್ಗಿ	16. ಮೈಲೇಶ್ವರ	35. ಉತ್ನಾಳ್
5. ತಿರುಪತಿ ನಗರ್	17. ಮಸ್ಕಲಾಳ್	36. ದಿಂದವಾರ್
6. ತಿಳಗೊಳ	18. ಬಿಲೇಭಾವಿ	37. ಹಳಿಯಾಳ್
7. ಬಿ.ಬಿ.ಇಂಡಳಗಿ	19. ಬಿ.ಸಲವಡಗಿ	38. ಕೊಡಗನೂರ್
8. ಅಂಬಲನೂರ್	**4. ಬಸವನ ಬಾಗೇವಾಡಿ ಪೊಲೀಸ್ ಠಾಣೆ:**	39. ಬೈಲಿಹಾಳ್

9. ಕೆಸರ್ತಿ	1. ರಾಮನಹಟ್ಟಿ	40. ಬಿದ್ನಾಳ್
10. ಬಿಂಜಲಭಾವಿ	2. ಕುಬಂಟನಹಾಳ್	5. ಕೊಲ್ಹಾರ ಪೋಲೀಸ್ ಠಾಣೆ:
11. ಅಸ್ಕಿ	3. ಹೆಚ್.ಹಿಪ್ಪರಗಿ	1. ಅರೆಶಂಕರ್ ಇಟಗಿ
12. ನಿರಲಗಿ	4. ಹುಣಶ್ಯಾಳ್	
13. ಜಲಪುರ	5. ಸಂಕನಾಳ್	

249 ಶ್ರೀ. ಖಾದರ್ ಯು.ಟಿ. (ಮಂಗಳೂರು)
ಮಾನ್ಯ ಗೃಹ ಸಚಿವರು

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕೋಮುಗಲಭೆಗಳಲ್ಲಿ ಎಲ್ಲಾ ಸಮುದಾಯದ ನಿರಪರಾಧಿ ಅಮಾಯಕ ಜನರನ್ನು ಪೊಲೀಸರು ಬಂಧಿಸಿ, ಮೊಕದ್ದಮೆ ಹೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪೈಕಿ ಕೆಲವು ವಿದ್ಯಾರ್ಥಿಗಳು ಸೇರಿರುವುದು ನಿಜವೆ?

ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ಕೋಮು ಗಲಭೆಗಳಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಮಾತ್ರ ದಸ್ತಗಿರಿ ಮಾಡಲಾಗಿದೆ

ಮಂಗಳೂರು ಉತ್ತರ ಠಾಣೆಯ ಮೊಕದ್ದಮೆ ಸಂಖ್ಯೆ 215/2008 ಕಲಂ 143,147,148,188,427,353,332,333 ಜೊತೆಗೆ 149 ಐಪಿಸಿ ಮತ್ತು ಕಲಂ2 (ಎ)(ಬಿ) ಕೆ.ಪಿ.ಡಿ.ಪಿ.ಎಲ್.ಪಿ. ಆಕ್ಟ್ ಪ್ರಕರಣದಲ್ಲಿ 4 ಜನ ವಿದ್ಯಾರ್ಥಿಗಳು ಮತ್ತು ಮಂಗಳೂರು ಪೂರ್ವ ಠಾಣೆ ಮೊಕದ್ದಮೆ ಸಂಖ್ಯೆ 179/2008 ಕಲಂ 143,144,147,148,188,186,353,332 ಜೊತೆಗೆ 149 ಐಪಿಸಿ ಮತ್ತು ಕಲಂ 2 (ಎ)(ಬಿ) ಕೆ.ಪಿ.ಡಿ.ಎಲ್.ಪಿ. ಆಕ್ಟ್ (Karnataka Prohibition of Destruction of Loss of Property Act 1981) ಪ್ರಕರಣದಲ್ಲಿ ಒಬ್ಬ ವಿದ್ಯಾರ್ಥಿಯನ್ನು ದಸ್ತಗಿರಿ ಮಾಡಿದ್ದು, ಇವರುಗಳನ್ನು ದೋಷಾರೋಪಣೆಯಿಂದ ಕೈಬಿಡಲಾಗಿದೆ.

ಆ) ಈ ರೀತಿಯ ಮೊಕದ್ದಮೆಗಳಿಂದ ಇವರುಗಳ ಭವಿಷ್ಯಕ್ಕೆ ಹಾಗೂ ಉದ್ಯೋಗಾವಕಾಶಕ್ಕೆ ತೊಂದರೆಯಾಗುತ್ತಿರುವುದು ನಿಜವೇ?

ವಿದ್ಯಾರ್ಥಿಗಳ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸದೇ ಇರುವುದರಿಂದ ಅವರುಗಳ ಭವಿಷಕ್ಕೆ ತೊಂದರೆಯಾಗುವ ಪ್ರಮೇಯ ಇಲ್ಲ.

ಇ) ಇಂತಹ ಪ್ರಕರಣಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂದಕ್ಕೆ ಪಡೆಯುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ?

ಈ ವಿದ್ಯಾರ್ಥಿಗಳ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸದೇ ಇರುವುದರಿಂದ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

247 ಶ್ರೀ. ಖಾದರ್ ಯು.ಟಿ. (ಮಂಗಳೂರು)
ಮಾನ್ಯ ಗೃಹ ಸಚಿವರು

ಅ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿಗೆ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ;

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿಗೆ ಕಾನೂನು ಸುವ್ಯವಸ್ಥೆ ಕುಸಿದಿರುವುದಿಲ್ಲ.

ಆ ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಅನ್ವಯಿಸುವುದಿಲ್ಲ.

ಇ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಲು ವಿಶೇಷ ಪೋಲೀಸ್ ಪಡೆಯನ್ನು ರಚಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲೆಯ ನುರಿತ ಅಧಿಕಾರಿ ಸಿಬ್ಬಂದಿಗಳನ್ನೊಳಗೊಂಡ ಕ್ಯೂ.ಆರ್.ಟಿ(ಕ್ವಿಕ್ ರಿಆಕ್ಷನ್ ಟೀಮ್)ಯನ್ನು ರಚಿಸಲಾಗಿದೆ. ವಧ್ವಂಸಕ ಕೃತ್ಯೆಗಳಲ್ಲಿ ತೊಡಗವವರನ್ನು ನಿಗ್ರಹಿಸಲು ಜಿಲ್ಲೆಯಲ್ಲಿನ ನುರಿತ ಶಾರ್ಪ್ ಶೂಟರ್‌ಗಳನ್ನು ಗುರುತಿಸಿ ತರಬೇತಿಗೊಳಿಸಲಾಗಿದೆ. ಅಲ್ಲದೇ ಜಿಲ್ಲಾ ರೌಡಿ ನಿಗ್ರಹದಳ ಮತ್ತು ಜಿಲ್ಲಾ ಅಪರಾಧ ಪತ್ತೆದಳಕ್ಕೆ ನುರಿತ ಸಿಬ್ಬಂದಿಗಳನ್ನು ನಿಯೋಜಿಸಿ ಕಾರ್ಯಗತಗೊಳಿಸಲಾಗಿದೆ.

259 ಶ್ರೀ. ವಿಶ್ವನಾಥ ಎಸ್.ಆರ್. (ಯಲಹಂಕ)
ಮಾನ್ಯ ಮುಖ್ಯಮಂತ್ರಿಯವರು

ಅ. ಬೆಂಗಳೂರು ಸುತ್ತ ಮುತ್ತ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದು ಹಾಗೂ ಅಕ್ರಮವಾಗಿ ಮರಳನ್ನು ಫಿಲ್ಟರ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಬಂದಿದ್ದಲ್ಲಿ, ಅದರ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ತೀವ್ರ ನಿಗಾವಹಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆಯಲ್ಲದೇ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೋಲಿಸ್, ಆಯಾ ಜಿಲ್ಲೆಯ ಉಪನಿರ್ದೇಶಕರು/ಹಿರಿಯ ಭೂವಿಜ್ಞಾನಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಯನ್ನೊಳಗೊಂಡ ಜಿಲ್ಲಾಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಸಿಐ 194 ಎಂಎಂಎಂ 2005, ದಿನಾಂಕ:16-11-2005 ರಲ್ಲಿ ರಚಿಸಲಾಗಿದೆ.

ಮರಳು ಪ್ರದೇಶದ ವಿಲೇವಾರಿ ಮಾಡಲು ಸಂಖ್ಯೆ:ಸಿಐ 05 ಎಂಎಂಎನ್ 2005 ದಿನಾಂಕ: 06-08-2005 ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಮಾನಿಟರಿಂಗ್ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಮರಳು ಪ್ರದೇಶಗಳನ್ನು ಗುರ್ತಿಸಿ, ಹರಾಜಿನ ಮೂಲಕ ವಿಲೇ ಮಾಡುತ್ತದೆ. ಹರಾಜು ಪ್ರಕ್ರಿಯೆಗೆ ಬಹುತೇಕ ಸ್ಥಳೀಯರಿಂದ ವಿರೋಧ ಹಾಗೂ ನ್ಯಾಯಾಲಯಗಳ ತಡೆಯಾಜ್ಞೆಗಳು ಬಂದಿದ್ದರಿಂದ ಅಂತಹ ಪ್ರದೇಶಗಳ ಹರಾಜು ಪ್ರಕ್ರಿಯೆ ಸಾಧ್ಯವಾಗಿರುವುದಿಲ್ಲ. ಬೃಹತ್ ಬೆಂಗಳೂರು ಅಭಿವೃದ್ಧಿಗೆ ಬೇಕಾಗುವ ಮರಳನ್ನು ಪೂರೈಸಲು ದಿ: 26-09-08 ರ ಸರ್ಕಾರದ ಆದೇಶ ಸಂಖ್ಯೆ: ಸಿ.ಐ/142 ಎಂಎಂಎನ್ 2008 ರಲ್ಲಿ ತಾತ್ಕಾಲಿಕ ಪರವಾನಗಿ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

ಫಿಲ್ಟರ್ ಮರಳಿನ ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ಸಕ್ರಿಯವಾಗಿ ತಡೆಗಟ್ಟಲು ಚಾಲಿತ ತನಿಖಾ ದಳವನ್ನು (mobile squad) ರಚಿಸಲಾಗಿದೆ. ವಿವಿಧ ನ್ಯಾಯಾಲಯಗಳಲ್ಲಿ ಒಟ್ಟು 76 ಮೊಕದ್ದಮೆಗಳನ್ನು ದಾಖಲಿಸಿದ್ದು, 66 ಆಯಿಲ್ ಇಂಜಿನ್‌ಗಳನ್ನು ವಶಪಡಿಸಿ ಕೊಳ್ಳಲಾಗಿದೆ. ಅಲ್ಲದೇ, 405 ಫಿಲ್ಟರ್ ಮರಳು ತಯಾರಿಸಲು ಘಟಕಗಳನ್ನು ನಾಶಪಡಿಸಲಾಗಿದೆ. ಒಟ್ಟು ರೂ. 3.57 ಲಕ್ಷ ದಂಡ ವಸೂಲಿ ಮಾಡಲಾಗಿದೆ ಫಿಲ್ಟರ್ ಗಣಿಗಾರಿಕೆ ಮತ್ತು ಸಾಗಾಣಿಕೆಯ ವಿರುದ್ಧ ತೀವ್ರ ನಿಗಾ ವಹಿಸಲಾಗುತ್ತಿದೆ.

204 ಶ್ರೀ. ಧ್ರುವನಾರಾಯಣ್.ಆರ್(ಕೊಳ್ಳೇಗಾಲ)
ಮಾನ್ಯ ಗೃಹ ಸಚಿವರು

ಅ ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ದಾಳಿಗೊಳಗಾದ ಚರ್ಚುಗಳ ಸಂಖ್ಯೆ ಎಷ್ಟು

ಒಟ್ಟು 33 ಚರ್ಚ್‌ಗಳ ಮೇಲೆ ದಾಳಿ ನಡೆದಿದೆ.

ಆ ದಾಳಿಗಳಿಂದ ಚರ್ಚುಗಳಿಗಾದ ನಷ್ಟ ಎಷ್ಟು;

ರೂ.11.69 ಲಕ್ಷಗಳ ನಷ್ಟ ಸಂಭವಿಸಿದೆ

ಇ ದಾಳಿ ಮಾಡಿದ ಎಷ್ಟು ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ

76 ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ

ಈ ಚರ್ಚುಗಳಿಗಾದ ಹಾನಿಯನ್ನು ಸರ್ಕಾರದ ಖರ್ಚಿನಲ್ಲಿ ದುರಸ್ತಿ ಮಾಡಿಸಿದ್ದಲ್ಲಿ, ಅದಕ್ಕಾಗಿ ವ್ಯಯಿಸಲಾದ ಹಣ ಎಷ್ಟು ಅಥವಾ ನೀಡಲಾದ ಪರಿಹಾರ ಎಷ್ಟು?

ಮಂಗಳೂರಿನಲ್ಲಿ ಇದೇ ಉದ್ದೇಶಕ್ಕಾಗಿ ರೂ. 5.00 ಲಕ್ಷ ಬಿಡುಗಡೆ ಮಾಡಲಾಗಿದೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾನಿಯ ಬಗ್ಗೆ ವಿವರ ಒದಗಿಸಲು ಕೋರಿದೆ. ವಿವರಗಳು ಬಂದ ನಂತರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

201 ಶ್ರೀ. ಸುರೇಶ್ ಬಾಬು ಸಿ.ಬಿ.
ಮಾನ್ಯ ಮುಖ್ಯ ಮಂತ್ರಿಗಳು

ಅ) ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ ಆಚಾರ್ಯ ತೀ.ನಂ.ಶ್ರೀ ಶತಮಾನೋತ್ಸವ ಭವನ ಕಾಮಗಾರಿ ಇದುವರೆಗೆ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಈ ಕಾಮಗಾರಿಗೆ ಸರ್ಕಾರವು 150.00 ರೂ. ಲಕ್ಷ ಅನುದಾನ ನಿಗಧಿ ಮಾಡಿದ್ದು, ಇದರಲ್ಲಿ 100.00 ರೂ. ಲಕ್ಷ ಮಾತ್ರ ಬಿಡುಗಡೆ ಮಾಡಲಾಗಿದ್ದು, ಉಳಿದ 50.00 ಲಕ್ಷ ಬಿಡುಗಡೆಯಾಗಿಲ್ಲದಿರುವುದು ನಿಜವಲ್ಲವೇ;

ಹೌದು.

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಉಳಿದ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ತೀ.ನಂ.ಶ್ರೀ ಶತಮಾನೋತ್ಸವ ಭವನವನ್ನು ತೀರ್ಥಪುರ ಗ್ರಾಮದಿಂದ ಚಿಕ್ಕನಾಯಕನಹಳ್ಳಿ ಕೇಂದ್ರ ಸ್ಥಳದ ಕೇದಿಗೆ ಹಳ್ಳಿ, ಸರ್ವೇ ನಂ.14 ರಲ್ಲಿನ ಖಾಲಿ ಜಾಗಕ್ಕೆ ನಿಗಧಿ ಪಡಿಸಲಾಗಿತ್ತು. ಶಾಸಕರು ಹಾಗೂ ಇನ್ನಿತರ ಜನ ಪ್ರತಿನಿಧಿಗಳು ಸಾರ್ವಜನಿಕ ಒತ್ತಾಯದ ಮೇರೆಗೆ ನಿರ್ಮಾಣ ಸ್ಥಳವನ್ನು ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಮೈದಾನದ ಬಿ.ಎಸ್.ಎನ್.ಎಲ್. ಪಕ್ಕ ಇರುವ ಪುರಸಭೆಯ ಜಮೀನು ಇರುವ ಸ್ಥಳಕ್ಕೆ ಬದಲಾಯಿಸಲಾಗಿರುತ್ತದೆ. ಈ ರೀತಿ ಎರಡು ಬಾರಿ ಸ್ಥಳ ಬದಲಾವಣೆ ಮಾಡಿರುವುದರಿಂದ ನಿರ್ಮಾಣ ಕಾರ್ಯ ಆರಂಭವಾಗುವುದು ತಡವಾಯಿತು. ರೂ. 100.00 ಲಕ್ಷಗಳ ಮೊತ್ತಕ್ಕೆ ಕಾಮಗಾರಿ ಪ್ರಾರಂಭಿಸಲು ಟೆಂಡರ್ ಕರೆಯಲಾಗುವುದು. ಪ್ರಗತಿ ನೋಡಿ ಉಳಿದ ಅನುದಾನ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುವುದು.

143 ಶ್ರೀ. ಬಾಲಕೃಷ್ಣ. ಹೆಚ್.ಸಿ
ಮಾನ್ಯ ಮುಖ್ಯ ಮಂತ್ರಿಗಳು

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಯಾವ ದಿನಾಂಕದಿಂದ ಜಾರಿಗೆ ಬರುವಂತೆ 58 ವರ್ಷದಿಂದ 60 ವರ್ಷಕ್ಕೆ ಏರಿಸಲಾಗಿದೆ. ಈ ಆದೇಶದ ರೂಪುರೇಶೆಗಳೇನು;

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 44 ಸೇನಿಸಿ 2008 ದಿನಾಂಕ 28–7–2008 ರಲ್ಲಿ ದಿನಾಂಕ 17,7,2008 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58 ವರ್ಷಗಳಿಂದ 60 ವರ್ಷಗಳಿಗೆ ಹೆಚ್ಚಿಸಲಾಗಿದೆ. ಈ ಆದೇಶವು ನ್ಯಾಯಾಂಗ ಅಧಿಕಾರಿಗಳು ಹಾಗೂ ಸ್ಥಳೀಯ (local bodies) ಸಂಸ್ಥೆಗಳ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಅನ್ವಯವಾಗುತ್ತದೆ.

ಆ) ಈ ಏರಿಕೆಯಿಂದಾಗಿರುವ ಪ್ರಸ್ತುತ ಎರಡು ವರ್ಷದಲ್ಲಿ ನಿವೃತ್ತಯಾಗಬೇಕಾಗಿದ್ದ ಸಿಬ್ಬಂದಿ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ದರ್ಜೆದಾರು ವಿವರ ನೀಡುವುದು);

ವಾರ್ಷಿಕವಾಗಿ ಸರಾಸರಿ ವಿವಿಧ ದರ್ಜೆಯ 15,000 ನೌಕರರು ನಿವೃತ್ತರಾಗುತ್ತಾರೆ, ಈ ಆದೇಶದಿಂದಾಗಿ ಸುಮಾರು 30,000 ನೌಕರರ ನಿವೃತ್ತಿಯು ಎರಡು ವರ್ಷಗಳು ಮುಂದಕ್ಕೆ ಹೋಗುತ್ತದೆ,

ಇ) ಈ ಅವಧಿಯಲ್ಲಿ (ಎರಡು ವರ್ಷದಲ್ಲಿ) ಹೊಸದಾಗಿ ನೇಮಕಗೊಳ್ಳಬೇಕಾದ ಸಿಬ್ಬಂದಿಗಿಂತ ನಿವೃತ್ತಿ ಹೊಂದಬೇಕಾಗಿದ್ದ ಸಿಬ್ಬಂದಿಗೆ ಎಷ್ಟು ಹೆಚ್ಚಿನ ವೇತನ ನೀಡಬೇಕಾಗಿದೆ (ಇಲಾಖಾವಾರು ವಿವರ ನೀಡುವುದು);

ಹೊಸದಾಗಿ ನೇಮಕವಾಗುವ ಸಿಬ್ಬಂದಿಗೆ ನೀಡುವ ವೇತನದ ಎರಡು ಪಟ್ಟು ವೇತನವನ್ನು ನಿವೃತ್ತರಾಗುವ, ಸಿಬ್ಬಂದಿಯು ಪಡೆಯುತ್ತಿರುತ್ತಾರೆ, ಆದರೆ ನಿವೃತ್ತರಾಗುವ ಸಿಬ್ಬಂದಿಗೆ ಅವರ ಮೂಲ ವೇತನದ ಅರ್ಧದಷ್ಟನ್ನು ವಿಶ್ರಾಂತಿ ವೇತನವಾಗಿ ನೀಡಲಾಗುತ್ತದೆ. ಅಲ್ಲದೆ ಒಂದು ಬಾರಿಯು ಪಾವತಿಯಾಗಿ ನಿವೃತ್ತಿ ಉಪದಾನವನ್ನು ನೀಡಲಾಗುತ್ತದೆ.

ಈ) ನಿವೃತ್ತಿ ವಯಸ್ಸಿನ ಏರಿಕೆಯಿಂದ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುವುದಿಲ್ಲವೇ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಾಗಿದೆ?

ಜುಲೈ 2008 ರಲ್ಲಿ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಪರಿಶೀಲಿಸಿದಾಗ ರಾಜ್ಯದ ವಿವಿಧ ಇಲಾಖೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳಿದ್ದವು, ನಿರುದ್ಯೋಗಿ ಯುವಕರು ಅವಕಾಶ ವಂಚಿತರಾಗುವುದನ್ನು ತಪ್ಪಿಸಲು ಸರ್ಕಾರಿ ಸೇವೆಗೆ ಸೇರಲು ನಿಗದಿಪಡಿಸಿದ್ದ ಗರಿಷ್ಠ ವಯೋಮಿತಿಯನ್ನು 2 ವರ್ಷಗಳಷ್ಟು ಹೆಚ್ಚಿಸಿ ದಿನಾಂಕ 18-12-08 ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ. ಈ ಎಲ್ಲಾ ಕಾರಣಗಳಿಂದ ನಿರುದ್ಯೋಗ ಸಮಸ್ಯೆಯು ಹೆಚ್ಚಾಗುವ ಅವಕಾಶವಿರುವುದಿಲ್ಲ.

- - - - - -

(B) 25229

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.